Brown Book

University of Mysore

Oriental Library Publications

KANNADA SERIES No.

ಗೋವಿಂದವೈದ್ಯ ಕವಿ ವಿರಚಿತ

ಕಂಠೀರವನರಸರಾಜ ವಿಜಯಂ

KANTIRAVANARASARAJA VIJAYAM

BY

GOVINDA VAIDYA

EDITED

[illegible]ASASTHRA-V[illegible] [illegible] KARA

Dr. R. SHAMA S[illegible] B[illegible] B.A.S.L.

[illegible]rator Government Oriental Researches in M[illegible] [illegible]

Classes of [illegible] S[illegible]

[illegible]E

PRINTED AT THE [illegible]SSMENT BR[illegible]S

1926

(ALL R[illegible] [illegible])

Price Rs. 2-8-0.

UNIVERSAL
LIBRARY
OU_200581
UNIVERSAL
LIBRARY

University of Mysore

Oriental Library Publications

KANNADA SERIES No. 15

ಗೋವಿಂದವೈದ್ಯ ಕವಿ ವಿರಚಿತವಾದ

ಕಂಠೀರವನರಸರಾಜ ವಿಜಯಂ,

KANTIRAVANARASARAJA VIJAYAM

BY

GOVINDA VAIDYA

EDITED BY

ARTHASASTHRA-VISARADA, VIDYALANKARA

DR. R. SHAMA SASTRY, B.A., PH.D., M.R.A.S.,

Curator, Government Oriental Library, Mysore; Director of Archæological Researches in Mysore; Periodical Lecturer to the Post-Graduates' Classes of the Calcutta University, and B.B.R.A.S. Campbell Memorial Medalist

MYSORE

PRINTED AT THE GOVERNMENT BRANCH PRESS

1926

ALL RIGHTS RESERVED)

ಪೀಠಿಕೆ.

ಕಂಠೀರವ ನರಸ ರಾಜ ವಿಜಯವೆಂಬ ಕಾವ್ಯವು ಗೋವಿಂದ ವೈದ್ಯನೆಂಬ ಕವಿಯಿಂದ ರಚಿಸಲ್ಪಟ್ಟಿರುವುದು. ಈ ಕವಿಯ ತಂದೆ ಶ್ರೀನಿವಾಸ ಪಂಡಿತರು. ಕವಿಯು ತನ್ನ ಸ್ಥಲವನ್ನು ಹೇಳಿಲ್ಲ; ಆದರೂ ಗ್ರಂಥಾರಂಭದಲ್ಲಿಯೂ ಗ್ರಂಥಾಂತ್ಯದಲ್ಲಿಯೂ ಶ್ರೀರಂಗ ಪತ್ತನದ ರಂಗನಾಥನನ್ನು ಸ್ತುತಿಸಿರುವುದರಿಂದಲೂ, ತಾನು ರಾಜಾಸ್ಥಾನ ಕವಿಯಾಗಿ ಆ ರಾಜಧಾನಿಯಲ್ಲಿಯೇ ಇದ್ದವನಾದುದರಿಂದಲೇ ತನ್ನ ಸ್ಥಲವನ್ನು ಬೇರೆ ಹೇಳದೆ ಬಿಟ್ಟಿರುವನೆಂದೂಹಿಸಬಹುದಾಗಿರುವುದರಿಂದಲೂ, ಶ್ರೀರಂಗ ಪತ್ತನವೇ ಈತನ ಸ್ಥಲವಾಗಿರಬಹುದೆಂದು ತೋರುತ್ತದೆ. ಈತನು ಶಿವ ವಿಷ್ಣ್ವಾದಿ ಸಮಸ್ತ ದೇವತೆಗಳನ್ನೂ ಸಮವಾಗಿ ವರ್ಣಿಸಿರುವುದರಿಂದ ಸ್ಮಾರ್ತ ಬ್ರಾಹ್ಮಣನೆಂದು ತೋರುತ್ತದೆ. ಕವಿಯು ತಾನು ಚೆನ್ನಾಗಿ ವೇದಾಧ್ಯಯನವನ್ನು ಮಾಡಿ ಮಂತ್ರ ಶಾಸ್ತ್ರವನ್ನು ಪರಿಶೀಲಿಸಿದ್ದಂತೆ (ಪೀಠಿಕಾ ಸಂಧಿಯ ೧೧ನೆಯ ಪದ್ಯದಲ್ಲಿ) ಸೂಚಿಸಿರುತ್ತಾನೆ. ಈತನು ಕಾವ್ಯ ನಾಟಕಾಲಂಕಾರ ಗ್ರಂಥಗಳನ್ನು ಸಾಮಾನ್ಯವಾಗಿ ಅಭ್ಯಸಿಸಿ ವಿಷಯ ವರ್ಣನಾ ಕ್ರಮವನ್ನು ಚೆನ್ನಾಗಿ ತಿಳಿದಿದ್ದನೆಂಬುದು ಈ ಕಾವ್ಯದಲ್ಲಿರುವ ವರ್ಣನೆಗಳಿಂದಲೇ ತಿಳಿಯುತ್ತದೆ. ಈತನಿಗೆ ಸಂಸ್ಕೃತ, ಕರ್ನಾಟ ಭಾಷೆಗಳೆರಡರಲ್ಲಿಯೂ ಸಮವಾದ ತಿಳಿವಳಿಕೆಯಿತ್ತೆಂದು ತೋರುತ್ತದೆ. ಈತನು ಇನ್ನಾವ ಗ್ರಂಥಗಳನ್ನು ರಚಿಸಿರುವನೋ ಗೊತ್ತಿಲ್ಲ. ಈ ಕಂಠೀರವ ನರಸ ರಾಜ ವಿಜಯ ಕಾವ್ಯವನ್ನು ಮಾತ್ರ ಕಂಠೀರವ ನರಸ ರಾಜೊಡೆಯರ ದಳವಾಯಿ ನಂಜರಾಜೇಂದ್ರರ ಪ್ರೇರಣೆಯಿಂದ ರಚಿಸಿದಂತೆ (ಪೀಠಿಕಾ ಸಂಧಿಯ ೨೮ನೆಯ ಪದ್ಯದಲ್ಲಿ) ಹೇಳಿರುತ್ತಾನೆ. ಇದು ಶಾಲಿವಾಹನ ಶಕ ೧೫೭೦ಕ್ಕೆ ಸಂದ ಸರ್ವಧಾರಿ ಸಂವತ್ಸರದಲ್ಲಿ ಎಂದರೆ ಕ್ರಿಸ್ತ ಶಕ ೧೬೪೮ರಲ್ಲಿ ರಚಿಸಲ್ಪಟ್ಟಿತೆಂದು

ಗ್ರಂಥದ ಕೊನೆಯಲ್ಲಿರುವ ವಾಕ್ಯದಿಂದ ತಿಳಿಯುತ್ತದೆ. ಆದೇ ವಾಕ್ಯ ದಿಂದಲೇ ಕವಿಯು ಕಂಠೀರವ ನರಸ ರಾಜ ವಿಜಯವೆಂಬೀ ಗ್ರಂಥವನ್ನು ತಾನು ರಚಿಸಿ ಭಾರತಿ ನಂಜನೆಂಬವನಿಂದ ರಾಜಾಸ್ಥಾನದಲ್ಲಿ ಓದಿಸಿದನೆಂ ಬುದೂ ತಿಳಿಯುತ್ತದೆ. ಈ ವಿಷಯವನ್ನು ಪೀಠಿಕಾ ಸಂಧಿಯಲ್ಲಿಯೂ * ಸೂಚಿಸಿರುತ್ತಾನೆ. ಕವಿಯು ಪೀಠಿಕಾ ಸಂಧಿಯ ೧೪ನೆಯ ಪದ್ಯದಲ್ಲಿ ವ್ಯಾಜ ಸ್ತುತಿಯಿಂದ ದುರ್ಜನರನ್ನು ನಿಂದಿಸಿದ್ದರೂ ಕನ್ನಡದ ಕವಿ ಗಳಲ್ಲಿ ವಿಶೇಷವಾಗಿ ಕಂಡು ಬರುವ ಆತ್ಮ ಸ್ತುತಿ, ಪರ ನಿಂದೆಗಳು ಈತನಲ್ಲಿ ಕಂಡು ಬರುವುದಿಲ್ಲ. ಈತನು ಅಹಂಕಾರಿಯಲ್ಲದೆ ಬಹು ವಿನೀತನಾಗಿದ್ದನೆಂಬ ವಿಷಯವು ಪೀಠಿಕಾ ಸಂಧಿಯ ೧೪ನೆಯ ಪದ್ಯದಿಂದಲೂ ಗ್ರಂಥಾಂತ್ಯದಲ್ಲಿರುವ ಪದ್ಯದಿಂದಲೂ ಚೆನ್ನಾಗಿ ತಿಳಿಯುತ್ತದೆ.

ಕವಿಯು ಈ ಕಾವ್ಯವನ್ನು ಮೊದಲಿಂದ ಕೊನೆಯವರೆಗೂ ಓದು ವುದಕ್ಕೆ ಸುಲಭವಾಗಿಯೂ, ಕೇಳುವುದಕ್ಕೆ ಇಂಪಾಗಿಯೂ, ಇರುವ ಹಾ ತ್ರ ವೃತ್ತಗಳಲ್ಲೊಂದಾದ ಸಾಂಗತ್ಯ ವೃತ್ತದಿಂದ ರಚಿಸಿರುತ್ತಾನೆ. ಪೀಠಿಕಾ ಸಂಧಿಯ ೧೩ನೆಯ ಪದ್ಯದಲ್ಲಿ ಹೇಳಿರುವಂತೆ ವೃತ್ತ ಗಳು ಲಕ್ಷಣ ಬದ್ಧಗಳಾಗಿವೆ. ಇದರಲ್ಲಿ ಉಪಯೋಗಿಸಿರುವ ಭಾಷೆಯು ಶುದ್ಧವಾಗಿಯೂ, ಲಲಿತವಾಗಿಯೂ, ಇರುವ ಹೊಸಗನ್ನಡವು. ಇದು ಹೊಸಗನ್ನಡದ ವ್ಯಾಕರಣಕ್ಕೆ ಸರಿಯಾಗಿದ್ದರೂ ವ್ಯಾಕರಣ ಸೂತ್ರದಲ್ಲಿ ಹೇಳಿರುವ 'ಬಹುಳವಾಗಿ ಬರುವುದು' ಎಂಬ ಮಾತಿನ ಬಲದಿಂದ ಚೆಲು ವಾಂತುವೊಪ್ಪುವ (೭ ಸಂ ೧೦ ಪ), ಪರನಂತೆಯಾರಾಮ (ಸಂ. ೭, ಪ ೪೨) ಮುಂತಾದ ಕೆಲವು ಕಡೆಗಳಲ್ಲಿ ಉಚಿತವಾದ ಲೋಪ ಸಂಧಿಯನ್ನು ಬಿಟ್ಟು ಆಗಮಸಂಧಿಯನ್ನೂ ಕಾದಗಲಿಸಿ (ಸಂ. ೩ ಪ ೪೧), ಗುಣಾ ವಲಂಬನನವಧಾನ (ಸಂ. ೪ ಪ ೭೯) ಮುಂತಾದ ಕೆಲವು ಕಡೆಗಳಲ್ಲಿ

---

* ಪೀಠಿಕಾ ಸಂಧಿಯ ೧೦,೧೧,೧೭,೨೩,೨೪ನೆಯ ಪದ್ಯಗಳಲ್ಲಿ ಹೇಳಿರುವ ಕ್ರಿಯಾಪದಗಳ ಉತ್ತಮ ಪುರುಷ ಪ್ರಯೋಗವೂ ೨೫ನೆಯ ಪದ್ಯದಲ್ಲಿ ಹೇಳಿರುವ ಕ್ರಿಯಾಪದದ ಪ್ರಥಮ ಪುರುಷ ಪ್ರಯೋಗವೂ ಕೃತಿ ಕರ್ತೃವಿನ ಭಾವಗಳೂ ಸೂಚಿಸುತ್ತವೆ.

ಉಚಿತವಾದ ಆಗಮ ಸಂಧಿಯನ್ನು ಬಿಟ್ಟು ಲೋಪ ಸಂಧಿಯನ್ನೂ ಉಪಯೋಗಿಸಿರುವುದು ಕವಿಮಾರ್ಗಕ್ಕೂ 'ಮಾರ್ಗದೊಳುಳ್ಳ ಸಂಧಿಯುಂ ಕಿಡಿಪುದುಮೊಗದು ತಾಂ ಯಥೇಷ್ಟಮೆಂದಱಿವ್ವಳ್ಗರ್' ಎಂಬ ನೃಪತಿಗೂ ವಿರುದ್ಧವಾಗಿರುತ್ತದೆ ಇದರಲ್ಲಿ ವ್ಯವಹಾರದಲ್ಲಿರುವ ಸುಲಭವಾದ ಸಂಸ್ಕೃತ ಪದಗಳು ಬಹುವಾಗಿ ಸೇರಿವೆ. ಇದರ ಶೈಲಿಯು ಷಟ್ಪದಿ ಗ್ರಂಥಗಳ ಶೈಲಿಯನ್ನು ಅನುಸರಿಸುತ್ತದೆ ಇದರಲ್ಲಿ ೭೬ ಸಂಧಿಗಳಿವೆ. ವೀರರಸವು ಪ್ರಧಾನ ರಸವಾಗಿದೆ. ಇತರ ರಸಗಳಲ್ಲವೂ ಅಲ್ಲಲ್ಲಿ ಪ್ರಕರಣಾನುಸಾರವಾಗಿ ಹೇಳಲ್ಪಟ್ಟಿವೆ. ಶೃಂಗಾರ ರಸವು ಪ್ರಧಾನ ರಸವೆಂಬ ಸಂದೇಹವುಂಟಾಗುವಂತೆ ವಿಸ್ತಾರವಾಗಿ ವರ್ಣಿತವಾಗಿದೆ. ನಾನಾ ವಿಧವಾದ ಅಲಂಕಾರಗಳೂ ಚಮತ್ಕಾರವಾಗಿ ವರ್ಣಿಸಲ್ಪಟ್ಟಿವೆ. ಈ ಕಾವ್ಯವು ದ್ರಾಕ್ಷಾ ಪಾಕದಿಂದ ಕೂಡಿದ ಸಾಮಾನ್ಯವಾದೊಂದು ಮಹಾ ಕಾವ್ಯವೆಂದೇ ಹೇಳಬಹುದು ಮಹಾ ಕಾವ್ಯ ಲಕ್ಷಣವೆನ್ನು ಅನುಸರಿಸುವುದಕ್ಕಾಗಿ ಈ ಕವಿಯು ವಿಸ್ತರಿಸಿರುವ ಕೆಲವು ಭಾಗವನ್ನು ಅನುಚಿತವೆಂದು ಈಗಿನವರು ಒಪ್ಪುವುದಿಲ್ಲ. ಪ್ರಧಾನಗಳಾದ ವರ್ಣ್ಯ ವಿಷಯಗಳನ್ನು ಹೇಳುವ ಪ್ರತಿಯೊಂದು ಸಂಧಿಯ ಆದಿ ಭಾಗದಲ್ಲೂ ಕೃಷ್ಣ ವಿಷಯಕವಾದ ಅಥವಾ ರಾಮ ವಿಷಯಕವಾದ ಒಂದೊಂದು ಪ್ರಹೇಳಿಕೆಯನ್ನು ಹೇಳಿರುತ್ತಾನೆ ಈ ಕಾವ್ಯದಲ್ಲಿ ಈ ಮೈಸೂರಿನ ನಮ್ಮ ಶ್ರೀಮನ್ಮಹಾರಾಜರವರ ವಂಶದಲ್ಲಿ ರಣ ಧೀರರೆಂದು ಸುಪ್ರಸಿದ್ಧರಾದ ಶ್ರೀಮತ್ಕಂಠೀರವ ನರಸ ಮಹಾರಾಜರವರ ಚರಿತ್ರೆಯು ಪ್ರಧಾನವಾಗಿ ವರ್ಣಿಸಲ್ಪಟ್ಟಿದೆ. (ಕವಿಯು ಪ್ರತಿ ಸಂಧಿಯು ಅಂತ್ಯದಲ್ಲೂ —

"ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನು ಬಂಧಿ ॥"

ಎಂಬ ಪದ್ಯವನ್ನು ಹೇಳಿರುವನು) ಆದುದರಿಂದಲೇ ಈ ಗ್ರಂಥಕ್ಕೆ ಕಂಠೀರವ ನರಸ ರಾಜ ವಿಜಯವೆಂದು ಹೆಸರಿಟ್ಟಿರುತ್ತಾನೆ. ಕವಿಯು

ಆ ಮಹಾ ರಾಜರವರು ನಡಿಸಿದುದನ್ನು ಸಾಕ್ಷಾತ್ತಾಗಿ ನೋಡಿಯೂ, ನೋಡಿದವರಿಂದ ಕೇಳಿಯೂ, ವಿಷಯಗಳನ್ನು ವರ್ಣಿಸಿರುವುದರಿಂದ ಕಾವ್ಯ ಲಕ್ಷಣಕ್ಕಾಗಿ ಮಾಡಿರುವ ವರ್ಣನೆಗಳನ್ನು ಬಿಟ್ಟರೆ ಉಳಿದ ಚರಿತ್ರೆ ಯೆಲ್ಲಾ ನಿಜವಾದುದೆಂದು ಖಂಡಿತವಾಗಿ ಹೇಳಬಹುದು.

ಶ್ರೀಮತ್ಕಂಠೀರವ ನರಸ ರಾಜೊಡೆಯರ ವಂಶ ಕ್ರಮವನ್ನು ಕವಿಯು "ಆದಿ ಪುರುಷನಿಂದ ಬ್ರಹ್ಮನೂ, ಅವನಿಂದ ಅತ್ರಿಯೂ, ಅವನಿಂದ ಚಂದ್ರನೂ, ಅವನಿಂದ ಬುಧನೂ, ಅವನಿಂದ ಪುರೂರವನೂ, ಅವನಿಂದ ನಹುಷನೂ, ಅವನಿಂದ ಯಯಾತಿಯೂ, ಅವನಿಂದ ಯದುವೂ, ಹುಟ್ಟಿದನೆಂದು ಹೇಳಿ, ಬಳಿಕ ಈ ಯದು ವಂಶದಲ್ಲಿ ಹುಟ್ಟಿದ ಮಹಾ ರಾಜರು ಕ್ರಮವಾಗಿ ದ್ವಾರಾವತಿಯಲ್ಲಿ ಆಳುತ್ತಿದ್ದರೆಂದೂ ಅವರ ಪರಂಪರೆಯವರಲ್ಲಿ ಕಲಿಯುಗದಲ್ಲಿ ದ್ವಾರಾವತಿಯಿಂದ ಮಯಿಸೂರಿಗೆ ಬಂದು ರಾಜ್ಯವನ್ನಾಳುತ್ತಿದ್ದ ರಾಜರ ವಂಶದಲ್ಲಿ ಹುಟ್ಟಿದ ಆತ್ರೇಯ ಗೋತ್ರದ ಬೆಟ್ಟದ ರಾಜರೆಂಬ ಮಹಾ ರಾಜರು ಪ್ರಸಿದ್ಧಿವಡೆದರು. ಇವರ ಮಕ್ಕಳು ಚಾಮ ರಾಜರು, ಇವರಿಗೆ ರಾಜ ನೃಪರೆಂದೂ ಬೆಟ್ಟದ ಚಾಮ ರಾಜರೆಂದೂ ಇಬ್ಬರು ಮಕ್ಕಳು. ಇವರಲ್ಲಿ ರಾಜ ನೃಪರಿಗೆ ಬೊಮ್ಮನ ಹಳ್ಳಿಯ ಚೆನ್ನ ರಾಜರ ತಂಗಿಯರಾದ ವೀರಾಂಬೆಯವರನ್ನೂ, ಬೆಟ್ಟದ ಚಾಮ ರಾಜರಿಗೆ ಹುರ ಪುರದ ತಿಮ್ಮ ರಾಜರ ಪ್ರತ್ರಿಯರಾದ ಗುರುವಂಬೆಯವರನ್ನೂ, ತಂದು ಪಾಣಿಗ್ರಹಣ ಮಾಡಿಸಿದ್ದರು. ಈ ಬೆಟ್ಟದ ಚಾಮ ರಾಜರಿಂದ ಗುರುವಂಬೆಯವರ ಗರ್ಭದಲ್ಲಿ ಶ್ರೀಮತ್ಕಂಠೀರವ ನರಸ ರಾಜ ಮಹಾ ರಾಜರವರು ಅವತರಿಸಿದರು' ಎಂದು ಹೇಳಿರುತ್ತಾನೆ. ಶ್ರೀಮತ್ಕಂಠೀರವ ನರಸ ರಾಜೊಡೆಯರು ದೃಢ ಕಾಯರಾಗಿ ಬಳೆದಿದ್ದುದಲ್ಲದೆ ತಾವು ಹುಟ್ಟಿದ ಹನ್ನೆರಡನೆಯ ವರುಷದಿಂದಲೇ ಕುದುರೆ ಸವಾರಿ, ಆನೆ ಸವಾರಿಗಳನ್ನೂ, ಕತ್ತಿ, ಭಲ್ಲೆಯ, ಬಾಕು, ಕಠಾರಿ, ಚಕ್ರಾಯುಧ ಮುಂತಾದುವುಗಳ ಸಾಧನೆಗಳನ್ನೂ ನಾನಾ ವಿಧಗಳಾದ ಗರುಡಿಯ ಸಾಧನೆಗಳನ್ನೂ, ಧನುರ್ವೇದವನ್ನೂ ಚೆನ್ನಾಗಿ ಕಲಿತು ಕೊಂಡರು. ಇವರು ರಾಜ್ಯದಲ್ಲಿ ಪಟ್ಟಾಭಿಷಿಕ್ತ

ರಾದ ಕೂಡಲೆ ತಮ್ಮ ಜೊತೆಯಲ್ಲಿಯೇ ಬಳದು ತಮ್ಮ ಜೊತೆಯಲ್ಲಿಯೇ ಸಕಲ ವಿದ್ಯೋಗಳನ್ನೂ ಕಲಿತು ಕೊಂಡಿದ್ದ, ತಮ್ಮ ಸೋದರ ಮಾವಂದಿ ರಾದ ಹುರ ಪುರದ ಕೆಂಪ ರಾಜರ ಮೆಕ್ಕಳು ನಂಜ ರಾಜೊಡೆಯರಿಗೆ ತಮ್ಮ ಮಂತ್ರಿಗಳ ಇಷ್ಟಾನುಸಾರವಾಗಿ ದಳವಾಯಿ ತನವನ್ನು ಕೊಟ್ಟು ಶ್ರೀ ರಂಗ ಪಟ್ಟಣದಲ್ಲಿ ರಾಜ್ಯ ಮಾಡುತ್ತಾ ಸಕಲ ಸಾಮಂತರನ್ನೂ ಸ್ವಾಧೀನ ಪಡಿಸಿಕೊಂಡಿದ್ದರು. ಆ ಕಾಲದಲ್ಲಿ ಸುಲ್ತಾನ್ ಮಹಮೂದ್ ಪಾದುಷಾಹನೆಂಬ ಬಿಜಾಪುರದ ತುರುಷ್ಕ ರಾಜನು ಕರ್ನಾಟ ದೇಶವೆಲ್ಲ ವನ್ನೂ ತನ್ನ ಸ್ವಾಧೀನ ಪಡಿಸಿಕೊಳ್ಳಬೇಕೆಂದು ರಣದುಲ್ಲಾಖಾನನೆಂಬ ಸೇನಾ ಪತಿಯನ್ನು ಬಹು ಸೈನ್ಯದೊಡನೆ ಕಳುಹಲು ಅವನು ಹಲವು ಪಾಳಯಗಾರರನ್ನು ಗೆದ್ದು ಪ್ರಧಾನ ರಾಜರಾದ ಶ್ರೀರಂಗ ಪಟ್ಟಣದ ರಾಜರನ್ನು ಜಯಿಸಿ, ಆ ಪಟ್ಟಣವನ್ನು ಸ್ವಾಧೀನ ಪಡಿಸಿ ಕೊಂಡರೆ ಮಿಕ್ಕುವೆಲ್ಲವೂ ಸುಲಭವಾಗಿ ತಮ್ಮ ವಶವಾಗುವುವೆಂದು ಯೋಚಿಸಿ ಶ್ರೀ ರಂಗ ಪಟ್ಟಣಕ್ಕೆ ಸಕಲ ಸನ್ನಾಹದೊಡನೆ ಮುತ್ತಿಗೆ ಹಾಕಲು, ನಮ್ಮ ರಣ ಧೀರ ಕಂಠೀರವ ನರಸ ಮಹಾ ರಾಜರು ತಮ್ಮ ಸಾಹಸದಿಂದ ತುರು ಕರನ್ನು ಸುಲಭವಾಗಿ ಜಯಿಸಿದುದಲ್ಲದೆ ಬಹು ಜನಗಳಿಗೆ ಮೂಗು ಗಳನ್ನು ಕತ್ತರಿಸಿ ಅಪಮಾನ ಪಡಿಸಿ ಓಡಿಸಿದರು. ಬಹು ಕಡೆಗಳಲ್ಲಿ ಜಯವನ್ನು ಹೊಂದಿ ಪ್ರಖ್ಯಾತನಾಗಿದ್ದ ರಣದುಲ್ಲಾಖಾನನು ಇಲ್ಲಿ ಭಂಗಿತನಾಗಿ ಹೋದುದರಿಂದ ತುರುಕರ ಅಹಂಕಾರವು ತಗ್ಗಿ ಹೋಯಿತು. ಇದರಿಂದ ಕರ್ನಾಟ ದೇಶವು ಸು ರಕ್ಷಿತವಾದುದು.

ಬಳಿಕ ಶ್ರೀಮತ್ಕಂಠೀರವ ನರಸ ರಾಜೊಡೆಯರು ದಿಗ್ವಿಜಯಕ್ಕಾಗಿ ಹೊರಟು, ಪ್ರತಿಭಟಿಸಿದ ಸಾಮಂತರನ್ನು ಶಿಕ್ಷಿಸಿ, ಸ್ವಾಧೀನ ಪಡಿಸಿ ಕೊಂಡುದಲ್ಲದೆ ಹೊಸದಾಗಿ ರಾಮಗಿರಿ, ತುರುಗೆರೆ, ಬಾಗೂರು, ಕಲಿ ಯೂರು, ಕಡಬ, ಮಾಯಿಸಮುದ್ರ, ಗಾಮ್ರ, ಪಿರಿಯಪಟ್ಟಣ, ಪಾಲು ಪರೆ, ಸಾಂಬಳ್ಳಿ, ಮಾರಟಿಹಳ್ಳಿ, ನಲ್ಲೂರು, ಬಂಟುಹಳ್ಳಿ, ಚಂಗಪಾ ಡಿಯ, ತೋಳೆಯ, ಆಲಂಬಾಡಿ, ಮೊದಲಾದುವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಮತ್ತು ಮಧುರೆ, ಚೆಂಜಿ, ತಂಜಾವೂರು, ಸತ್ಯಮಂ

ಗಲ, ನರಸಿಂಹಪುರ, ಬೇಲೂರು, ಬಸವಪಟ್ಟಣ, ತೆಂಜೆ, ಇಕ್ಕೇರಿ, ವಿಜಯನಗರ, ಕೊಡಗು, ಕೊಂಕಣ, ಮಲೆಯಾಳ, ಕೊಂಗು, ಮೊಗಡಿ, ಕುಣಿಗಲು, ರಾಜರುಗಳನ್ನು ಜಯಿಸಿ ಅವರಿಂದ ಕಪ್ಪವನ್ನು ತೆಗೆದು ಕೊಳ್ಳುವುದಕ್ಕಾರಂಭಿಸಿದರು. ಇವರು ಸಾಂಬಳ್ಳಿಯನ್ನು ಸ್ವಾಧೀನ ಪಡಿಸಿ ಕೊಂಡು ತಿರುಣಾಮಲೆ, ತಿರುಚಂಗೂಡು ಮೊದಲುಗೊಂಡು ತಿರುಚನಪುರಿಯ ವರೆಗೂ ಹೋಗಿ ದಾಳಿ ಮಾಡಿ ಕೊಂಡು ಬಂದರೆಂದೂ ಈ ದಿಗ್ವಿಜಯ ಕಾಲದಲ್ಲಿ ದಳವಾಯಿ ನಂಜರಾಜರು ಬಹು ಸಾಹಸವನ್ನು ತೋರಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ಇವರ ಕಾಲದಲ್ಲಿ ಶ್ರೀರಂಗ ಪಟ್ಟಣದರಾಜರ ಶಾಸನವು ಪೂರ್ವದಿಕ್ಕಿನಲ್ಲಿ ಮುಳಬಳ್ಳಿ, ಕಾನಕಾನ ಹಳ್ಳಿ, ಡೆಂಕಣಿ ಕೋಟೆ, ತಿರುವಣ್ಣಾಮಲೆ, ಜಿಂಜಿಯ ವರೆಗೂ ಆಗ್ನೇಯಕ್ಕೆ ರಂಗಸಮುದ್ರ, ಸೋಸಲೆ, ತಲಕಾಡು, ಸತ್ತ್ಯಗಾಲಂ, ಆಲಂಬಾಡಿ, ಕಲಿಯೂರು, ನಿಲುಸೋಗೆ, ಉಮ್ಮತ್ತೂರು, ಎಳಂದೂರು, ಹರದನ ಹಳ್ಳಿ, ಸತ್ಯಮಂಗಲ, ಮಾರಟಹಳ್ಳಿ, ನಲ್ಲೂರು, ಬಂಟುಹಳ್ಳಿ, ಚಂಗಪಾಣಿಯ, ತೋಳಿಯ, ಸಾಂಬಳ್ಳಿ, ತಿರುಚಂಗೂಡು, ತಿರುಚನಪಳ್ಳಿ, ತಂಜಾವೂರು, ಮಧುರೆಗಳ ವರೆಗೂ; ದಕ್ಷಿಣಕ್ಕೆ ಮೈಸೂರು, ಹುಲ್ಲಹಳ್ಳಿ, ಹೆಮ್ಮಿರಗಾಲ, ತೆರಕಣಾಂಬಿಗಳ ವರೆಗೂ; ನೈರುತ್ಯಕ್ಕೆ ಬಿಳಿಕೆರೆ, ಮಳಲವಾಡಿ, ಮಲೆಯಾಳಗಳ ವರೆಗೂ; ಪಶ್ಚಿಮಕ್ಕೆ ಕನ್ನಂಬಾಡಿ, ತಿಪ್ಪೂರು, ಹಂಪಾಪುರ, ಪಿರಿಯಪಟ್ಟಣ, ಬಟ್ಟದಪುರ, ಪಾಲುಪರೆ, ಕೊಡಗು, ವೀರರಾಜಪೇಟೆ (ನಂಜರಾಯಪಟ್ಟಣ)ಗಳ ವರೆಗೂ; ವಾಯವ್ಯಕ್ಕೆ ಬೂಕನ ಕೆರೆ, ಹೊಸಹೊಳಲು, ಕಿಕ್ಕೇರಿ, ಹೊಳೆನರಸೀಪುರ, ಚೆನ್ನರಾಯಪಟ್ಟಣ, ಗ್ರಾಮ, ಬೇಲೂರು, ಬಾಗೂರು, ಬಸವಪಟ್ಟಣ, ಇಕ್ಕೇರಿ, ತುಳುವ, ಕೊಂಕಣಗಳ ವರೆಗೂ; ಉತ್ತರಕ್ಕೆ ಮೇಲುಕೋಟೆ, ನಾಗಮಂಗಲ, ಬೆಳ್ಳೂರು, ಮಾಯಿಸಮುದ್ರ, ತುರುವೇಕೆರೆ, ಕಡಬ, ರಾಮಗಿರಿಗಳ ವರೆಗೂ; ಈಶಾನ್ಯಕ್ಕೆ ಮದ್ದೂರು, ಚೆನ್ನಪಟ್ಟಣ, ಮೊಗಡಿ, ಕುಣಿಗಲು, ಕೋಟೆಗೆರೆಗಳ ವರೆಗೂ; ಹೀಗೆ ಯೆಂಟು ದಿಕ್ಕುಗಳಲ್ಲಿಯೂ ನಿರರ್ಗಳವಾಗಿ ನಡೆಯು

ತ್ತಿತ್ತೆಂದು ಈ ಗ್ರಂಥದಿಂದ ಸ್ಫುಟವಾಗಿ ತೋರುತ್ತದೆ. ಹೀಗೆ ಸರ್ವ ತೋಮುಖವಾಗಿ ಜಯವನ್ನು ಹೊಂದಿದ್ದುದರಿಂದಲೆ ಶ್ರೀಮತ್ಕಂಠೀರವ ನರಸರಾಜೊಡಯರಿಗೆ ರಣಧೀರ, ವಿಕ್ರಾಂಗ ವೀರ, ಕರ್ಣಾಟಕ ಚಕ್ರೇಶ, ಪರಬಲ ಮೇಘಾನಿಲ, ಕೋಟೆ ಕೋಲಾಹಲ, ಆಂಧ್ರ ಬಲ ಸಂಘ ಕರಿ ಕುಲ ಕಂಠೀರವೇಂದ್ರ, ಪಾಂಡ್ಯ ಭೂಭೃದ್ಗಿರಿವಜ್ರದಂಡ, ಕೊಂಕಣ ಮಲೆಯಾಳ ಕೊಡಗು ಭೂಪಾಲರ ಬಿಂಕವ ಮರ್ದಿಪ ಶೂರ ಎಂಬ ಬಿರುದುಗಳು ಹೇಳಲ್ಪಟ್ಟಿವೆ. ಮತ್ತು ಪೂರ್ವದಲ್ಲಿಯೇ ಇವರ ವಂಶ ಸ್ಥರಿಂದ ಸಂಪಾದಿತವಾಗಿದ್ದ ಬಿರುದಂತೆಂಬರ ಗಂಡ ಮೊದಲಾದ ಬಿರುದುಗಳೂ ಹೇಳಲ್ಪಟ್ಟಿವೆ. ಈ ಮಹಾರಾಜರ ಪ್ರಸಾದವನ್ನು ಸಂಪಾದಿಸುವ ಅಪೇಕ್ಷೆಯಿಂದ ಕೆಲವರು ಪಾಳಯಗಾರರೇ ಅವರ ಊಳಿಗದಲ್ಲಿ ಸೇರಿದ್ದಂತೆ "ಶ್ರೀಮತ್ಕಂಠೀರವ ನರಸ ರಾಜೊಡೆಯರ ಹಡಪದವನು ನಾಗ ಮಂಗಲದ ಪ್ರಭುವಾದ ಮುದ್ದಯ್ಯನು : ಸಂಚೆಯವನು ಮಳವಳ್ಳಿಯ ಪ್ರಭು ನಂಜಣ್ಣನು ; ಕಾಳಾಂಜೆಯವನು ತರಕಣಾಂಬಿಯ ನಾಳ್ವ ರಾಜಯ್ಯನು ; ಚಂಬಿನವನು ಕನ್ನಂಬಾಡಿಯ ಪ್ರಭು ಗುರುವಣ್ಣನು ; ಪಾಪಡೆಯವನು ಕಿಕ್ಕೇರಿಯ ಪ್ರಭು ಕೊಟ್ಟೂರಯ್ಯನು ; ಎಂಬ ಹೇಳಿಕೆಗಳಿಂದ ತಿಳಿಯುತ್ತದೆ. ಈ ಮಹಾರಾಜರ ಕರಿವಾರದಲ್ಲಿ ದಳವಾಯಿ ನಂಜರಾಜೇಂದ್ರರ ತಮ್ಮಂದಿರು ಲಿಂಗರಾಜರು ದಳಪತಿಗಳಾಗಿಯೂ, ಲಿಂಗೆಯಗೌಡನು ಪಟ್ಟಣದಧಿಕಾರಿಯಾಗಿಯೂ, ಲಪ್ಪವರಸ, ತಿಮ್ಮರಸರು ಮುಖ್ಯ ಮಂತ್ರಿಗಳಾಗಿಯೂ, ಬಸವಯ್ಯನು ಕೋಶಾಧ್ಯಕ್ಷನಾಗಿಯೂ, ನರಸಿಂಹೋಪಾಧ್ಯಾಯನು ರಾಯಸದವನಾಗಿಯೂ, ವೀರಣ್ಣನು ಅವಸರದವನಾಗಿಯೂ, ಬಸವಯ್ಯನು ಅಸಿ ಧಾರಕನಾಗಿಯೂ, ವೆಂಕಟ ಪತಿ ಜಟ್ಟಿಯು ಚರಣ ಸೇವಕನಾಗಿಯೂ, ಧನ್ವೋಜಿಯ್ಯನು ಆಭರಣವನ್ನು ತಂದು ಕೊಡುವವನಾಗಿಯೂ, ಕೃಷ್ಣಯ್ಯನು ವೀಣೆಯವನಾಗಿಯೂ, ಸಂಗಯ್ಯನು ಹಾಸ್ಯಗಾರನಾಗಿಯೂ ಸೇರಿದ್ದರೆಂದು ಹೇಳಿದೆ.

ಈ ಮಹಾರಾಜರು ದೇಶ ವಿಸ್ತಾರ, ಕೋಶ ವಿಸ್ತಾರಗಳನ್ನು

ಮಾಡುವುದರಲ್ಲಿ ಮಾತ್ರವೇ ಆಸಕ್ತರಾಗದೆ, ಆರ್ಜಿತವಾದುವುಗಳಿಗೆ ಸದುಪಯೋಗವುಂಟಾಗುವಂತೆ ಬಹು ವಿಧವಾದ ಧರ್ಮಕಾರ್ಯವನ್ನು ಮಾಡುತ್ತಾ, ದೇವತಾರಾಧನೆಯಲ್ಲಿಯೂ, ಪ್ರಜಾರಾಧನೆಯಲ್ಲಿಯೂ ತತ್ಪರರಾಗಿದ್ದರು. ಶ್ರೀರಂಗಪಟ್ಟನದಲ್ಲಿ ಗಜೇಂದ್ರ ಮೋಕ್ಷ ಮಹೋತ್ಸವಕ್ಕಾಗಿ ವಿಚಿತ್ರವಾದೊಂದು ಮಂಟಪವನ್ನೂ ಮನೋಹರವಾದೊಂದು ಸರೋವರವನ್ನೂ ಕಟ್ಟಿಸಿದುದಲ್ಲದೆ ಅದರ ಸುತ್ತಲೂ ಸೊಗಸಾದ ಉದ್ಯಾನವನ್ನೂ ಮಾಡಿಸಿ ತಮ್ಮ ದೇಶದಲ್ಲಿ ಹಲವೆಡೆಗಳಲ್ಲಿ ದೇವಸ್ಥಾನ, ಅಗ್ರಹಾರ, ಉದ್ಯಾನ, ತಟಾಕಗಳನ್ನು ಕಲ್ಪಿಸಿದ್ದರು. ಕಾಶೀಕ್ಷೇತ್ರದಲ್ಲಿಯೂ, ಶ್ರೀರಂಗ ಕ್ಷೇತ್ರದಲ್ಲಿಯೂ, ಶ್ರೀರಂಗಪಟ್ಟಣದಲ್ಲಿಯೂ ಪ್ರಸಿದ್ಧಗಳಾದ ಅನ್ನ ಸತ್ರಗಳನ್ನೂ ತಾವಾಳುವ ರಾಜ್ಯದ ಪುಣ್ಯಸ್ಥಳಗಳಲ್ಲೆಲ್ಲಾ ಸಾಮಾನ್ಯವಾಗಿ ಅನ್ನ ಸತ್ರಗಳನ್ನೂ ಏರ್ಪಡಿಸಿದ್ದರು. ಕಾಶಿಯಲ್ಲಿ ಬಿಂದು ಮಾಧವ ವಿಶ್ವೇಶ್ವರರಿಗೆ ಬಹುವಿಧವಾಗಿ ಪೂಜೆಯು ನಡೆಯುವಂತೆ ಏರ್ಪಡಿಸಿದ್ದರು. ಅಲ್ಲದೆ ತಮ್ಮ ಪ್ರಜೆಗಳೆಲ್ಲರೂ ತಮ್ಮ ಆಚರಣೆಯನ್ನು ನೋಡುವುದರಿಂದಲೆ ವ್ರತ ಧರ್ಮ ಪರರಾಗುವಂತೆ ವಿಕಾದಶೀ ವ್ರತವೇ ಮೊದಲಾದ ಅನೇಕ ವ್ರತಗಳನ್ನು ತಾವೂ ಆಚರಿಸುತ್ತಾ ವ್ರತ, ಧರ್ಮ ತತ್ಪರರಾಗಿದ್ದರು. ಎಂಬ ವಿಷಯಗಳು ಈ ಗ್ರಂಥದಲ್ಲಿ ವಿಸ್ತೃತವಾಗಿ ವರ್ಣಿಸಲ್ಪಟ್ಟಿವೆ. ಈ ಮಹಾ ರಾಜರು ಮಹಾ ಪರಾಕ್ರಮ ಶಾಲಿಗಳಾಗಿಯೂ ಮಹಾ ಧರ್ಮ ಪರರಾಗಿಯೂ, ಕೀರ್ತಿಸಂಪನ್ನರಾಗಿಯೂ ಇದ್ದುದರಿಂದಲೇ ಈಗಲೂ ಅನೇಕ ಪ್ರಸ್ತಾವಗಳಲ್ಲಿ 'ಇವರೇನು ವೀರ ಕಂಠೀರವ ನರಸ ರಾಜೊಡೆಯರೊ ?' ಎಂದು ಆಬಾಲ ವೃದ್ಧರೂ ಆಡುವುದನ್ನು ಕೇಳುತ್ತಿದ್ದೇವೆ.

ಇಂತಹ ಮಹಾ ರಾಜರ ಚರಿತ್ರವನ್ನು ಸರಸವಾಗಿಯೂ, ನಿಜವಾಗಿಯೂ, ತಿಳಿಸುವ ಈ ಗ್ರಂಥವನ್ನು ಮುದ್ರಿಸಿ ಪ್ರಚುರಪಡಿಸುವುದು ಅತ್ಯಾವಶ್ಯಕವಾಯಿತೆಂದು ಯೋಚಿಸಿ, ಮೈಸೂರು ಪ್ರಾಚ್ಯ ಕೋಶಾಗಾರಾಧಿಕಾರಿಗಳು ಮಾಡಿದ ಆಜ್ಞೆಯಿಂದ ಈ ಗ್ರಂಥವು ಯಥೋಚಿತವಾಗಿ ಶೋಧಿಸಿ ಮುದ್ರಿಸಲ್ಪಟ್ಟಿದೆ.

ಇದನ್ನು ಮುದ್ರಿಸುವಾಗ ಈ ಕೋಶಾಗಾರದಲ್ಲಿದ್ದ ಕೈ ಬರಹದ ಒಂದು ಪುಸ್ತಕ ಮಾತ್ರವೇ ಆದರ್ಶವಾಗಿ ಉಪಯೋಗಿಸಲ್ಪಟ್ಟಿತು. ಆ ಪುಸ್ತಕದಲ್ಲಿ ಹಲವು ಕಡೆಗಳಲ್ಲಿ ಮಾತ್ರಾ ಚ್ಯುತಿ, ವರ್ಣ ಚ್ಯುತಿ, ಪದ ಚ್ಯುತಿ, ಪಾದ ಚ್ಯುತಿ ತದ್ವಿಪರ್ಯಯಾದಿ ದೋಷಗಳು ಇರುವುದರಿಂದಲೂ, ಶುದ್ಧವಾದ ಮತ್ತೊಂದು ಪುಸ್ತಕವು ದೊರೆಯದೇ ಹೋದುದರಿಂದಲೂ, ಶುದ್ಧವಾಗಿ ಮುದ್ರಣಗೊಳಿಸುವುದು ಸ್ವಲ್ಪ ಕಷ್ಟವಾಯಿತು. ಆದರೂ ಯಥೋಚಿತವಾಗಿಯೂ, ಯಥಾ ಮತಿಯಾಗಿಯೂ ವಿಪರ್ಯಯಗಳನ್ನು ಸರಿಪಡಿಸಿ ಚ್ಯುತವಾದುವನ್ನು, ಸೇರಿಸಿ ಸೇರಿಸಿದುವುಗಳನ್ನು [ ] ಇಂತಹ ಕುಂಡಲಿಕೆಗಳಲ್ಲಿ ಗರ್ಭೀಕರಿಸಿ ವಿಪರ್ಯಯ ಪಡಿಸುವಾಗಲೂ, ಸಂದೇಹಾಸ್ಪದಗಳಾದ ಕಡೆಗಳಲ್ಲಿ ಉಚಿತವಾಗಿ ತೋರಿದ ಪಾಠವನ್ನು ಮೇಲೆ ಬರೆದು ಆದರ್ಶ ಪುಸ್ತಕದಲ್ಲಿರುವುದನ್ನು ಆಯಾ ಪುಟದ ಕೆಳಗಡೆಯಲ್ಲಿ *, †, ಇತ್ಯಾದಿ ತತ್ಸೂಚಕ ಚಿಹ್ನಗಳೂಡನೆ ತೋರಿಸಿ ಅಚ್ಚು ಹಾಕಿಸಲ್ಪಟ್ಟಿದೆ. ಪ್ರಮಾದದಿಂದುಂಟಾಗಿರುವ ತಪ್ಪುಗಳನ್ನು ಸರಿ ಪಡಿಸಿ ಕೊಳ್ಳುವುದಕ್ಕಾಗಿ ಶುದ್ಧಿ ಪತ್ರಿಕೆಯೂ ಸಂಧಿ ವಿಷಯಗಳನ್ನು ಸೂಚಿಸುವುದಕ್ಕಾಗಿ ಸೂಚೀ ಪತ್ರವೂ ಮೊದಲಲ್ಲಿ ಸೇರಿಸಲ್ಪಟ್ಟಿವೆ. ಸಂಧಿಗಳ ಆದಿ ಭಾಗಗಳಲ್ಲಿ ಹೇಳಿರುವ ಪ್ರಹೇಳಿಕೆಗಳ ಅರ್ಥವನ್ನು ತಿಳಿಸುವುದಕ್ಕಾಗಿ ಪ್ರಹೇಳಿಕಾರ್ಥ ದೀಪಿಕೆ ಯೆಂಬುದು ಕೊನೆಯಲ್ಲಿ ಸೇರಿಸಲ್ಪಟ್ಟಿದೆ.

ಟಿ. ಎಸ್. ಸುಬ್ಬರಾಯ ಶಾಸ್ತ್ರಿ,

ರೆಸಿಡೆಂಟ್ ಪಂಡಿತ.

ಸಂಧಿ ವಿಷಯ ಸೂಚಿ

ಸಂಧಿ	ವಿಷಯಗಳು	ಪುಟದಿಂದ	ಪುಟದವರೆಗೆ
1	ಟೀಕೆ	1	5
2	ಭೂ ಭಾಗ ವರ್ಣನೆ	6	24
3	ವಂಶ ವಿಸ್ತಾರ ವರ್ಣನೆ	25	42
4	ಕಂಠೀರವ ನರಸ ರಾಜ ಜನನ ವರ್ಣನೆ	43	61
5	ಶ್ರೀ ರಂಗೇಶ ಪೂಹಾತ್ಮ್ಯೆ ವರ್ಣನೆ	62	80
6	ಶ್ರೀ ರಂಗ ಪತ್ತನ ವರ್ಣನೆ	81	114
7	ಅರಮನೆ ಮೊದಲಾದುವುಗಳ ವರ್ಣನೆ....	115	134
8	ನಿತ್ಯೋತ್ಸವದೋಲಗದ ವರ್ಣನೆ	135	151
9	ಮದನ ಮೋಹಿನಿಯ ಕಥೆ	152	187
10	ಮದನ ಮೋಹಿನಿಯ ವಿಲಾಸ	188	197
11	ಕರ್ಣಾಟಕಕ್ಕೆ ಖಾನನು ಬಂದುದು	198	223
12	ಶ್ರೀ ರಂಗ ಪಟ್ಟಣದ ಮುತ್ತಿಗೆ	224	240
13	ಪಟ್ಟಣದ ಲಗ್ಗೆಯ ಸನ್ನಾಹ	241	254
14	ಶ್ರೀ ರಂಗ ಪಟ್ಟಣದ ಲಗ್ಗೆಗೆ ಬಿಟ್ಟುದು....	255	271
15	ವಿಷಮ ಯುದ್ಧ	272	293
16	ರಾಮ ಗಿರಿ ಪಟ್ಟಣವನ್ನು ತೆಗೆದುದು....	294	310
17	ಸಾಂಬಳ್ಳಿಯಂ ಕಟ್ಟಿಕೊಂಡುದು	311	325
18	ಪಿರಿಯ ಪಟ್ಟಣದ ಲಗ್ಗೆ	326	357
19	ನಂಜರಾಜಯ್ಯನ ಜಗಳ	358	375
20	ಮಹಾ ನವಮಿಯ ಪುರ ಶೃಂಗಾರ	376	388
21	ಮಹಾ ನವಮಿಯೊಡ್ಡೋಲಗದುತ್ಸವ	389	411
22	ವಿಜಯ ದಶಮಿಯ ಜಂಬಿ ಸವಾರಿ	412	430
23	ಗಜೇಂದ್ರನ ತಿರುನಾಳುತ್ಸವದ ಮಂಟಪವನ್ನು ಕಟ್ಟಿಸಿದುದು	431	449
24	ಅರಸಿನವರ ಶೃಂಗಾರ	450	464
25	ರಂಗ ನಾಥ ರಥೋತ್ಸವಕ್ಕೆ ರಾಜರು ಬಂದುದು	465	488
26	ದೊರೆ ರಾಯ ನರಸೇಂದ್ರನ ವ್ರತ ಧರ್ಮ	489	497

ಶೋಧನ ಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
1	4	ತ್ರಿಜಗವ	ತ್ರೈಜಗವ
4	17	ಗಂಡಭೀಮಪರಾಕ್ರಮಿ	ಗಂಡಪರಾಕ್ರಮಿ
7	3	ದಿವ್ಯಸಳದೊಳು	ದಿವ್ಯಸ್ಥಲದೊಳು
8	3	ದಾವೋಹದ	ದಾಸೋಹದ
,,	6	ಧೇನುಗಳೆ	ಧೇನುಗಳೇ
9	13	ಎಸೆವಾಕಾವೇರಿಯ	ಎಸೆವಕಾವೇರಿಯ
10	5	ಆ ಪಟ್ಟಣದಾ	ಆ ಪಟ್ಟಣದ
11	10	ಪಲಸ	ಪಲಸು
12	3	ಮುಹಾಖಲ	ಮುಹಖುಲ (ಮುಖಮಲ)
16	5	ನಂದನನಾ	ನಂದನ
,,	9	ಅಷ್ಟದಿಕ್ಪಾಳರು	ಅಷ್ಟದಿಗ್ಪಳರು
,,	14	ಕೂಂಬೆವೆಂದೆನುತ	ಕೂಳ್ವೆವೆಂದೆನುತ
23	19	ಸಂತಸವನು ಪುಟ್ಟಿಸಿ ಹಣವನುಹೇರಾಳೂ	ಸಂತಸಬುಟ್ಟಿಸಿ ಹಣವ ಹೇರಾಳೂ
25	15	ಪರಂಪರೆಯಲಿ	ಪಾರಂಪರಿಯಲಿ
26	16	ಯೀಳಿಯಲಿ	ಯೀಳ್ಗಿಯಲಿ
27	1	ಶುಕ್ಲಪಕ್ಷ	ಶುಕ್ಲಪಕ್ಷದ
,,	7	ಹರುಷದಲ್ಲಿ	ಹರ್ಷದಲ್ಲಿ
32	6	ದುಂಪದೂಳೀ	ದುಂಪಾದೂಳಿ
33	5	ಗರುಡನರವಟ್ಟಿಗೆ	ಗರುಡನಿಹರವಟ್ಟಿಗೆ
,,	6	ಫಣಿಗಳೊಂದಿರವಂತೆ	ಫಣಿಯಿರವಂತೆ
,,	13	ಮೇಲತಿಖತಿ	ಮೇಲತಿಖತಿಯನು
34	2	ಮನದಲ್ಲಿ	ಮನದಳಿ
,,	11	ಮುತ್ತಿದರಿತಂತ್ರವ	ಮುತ್ತಿದರಿತಳತಂತ್ರವ
37	13	ತೂಳಿಸಿ	ತುಳಿಸಿ
40	13	ಕೋಳಾಲದಿಳಿ	ಕೊಳಾಲಗಳಿಳಿ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
40	24	ನರೆ	ನೆರೆ
42	5	ಎಂದು	ಖಂದು
,,	6	ತ್ರಿಕಾಲ	ತ್ರೈಕಾಲ
,,	20	ಸನಿ	ಸನ್ನಿ
43	6	ತ್ರಿಜಗವ	ತ್ರೈಜಗವ
44	2	ಸ್ವಾಮಿ	ಸ್ವಾಮಿಯ
45	22	ಬೋಧಗಳೆ	ಬೋಧೆಗಳೀ
46	8	ಧರನೆ	ಧರನೇ
47	13	ಕಿಂಪುರುಷ	ಕಿಂಪುರುಷರು
,,	14	ಸುರಸಿದ	ಸುರಸಿದ್ಧ
49	22	ಬಾಧಿಪರೆ	ಬಾಧಿಪರೇ
53	7	ನರಸಿಂಹನ	ನೃಸಿಂಹನ
,,	23	ಕರಸಿ	ಕರಿಸಿ
54	20	ಕರಣವನು	ಕರಣವ
55	3	ಕೋಭನನೆ	ಶೋಭಾನದೆ
57	13	ಕಾಠಾರಿ	ಕಾಶಾರಿ
,,	14	ಮಂಗಳಕರ	ಮಂಗಳ
63	9	ಹೃಕ್ಕಮುಲದ	ಹೃತ್ಕಮಲ
,,	16	ಕರಿಘೆಟ್ಟವೆಂದು	ಕರಿಘಟ್ಟವೆನೆ
64	11	ಧಾನ್ಯದಂಡೆ	ಧಾನ್ಯದದಂಡಿ
66	5	ಬೋಧಾಯನಾರ್ಷಿಪ	ಬೋಧಾಯನಾರಿಷ್ಟ
,,	6	ಸಾರಾಶರ	ಪರಾಶರ
69	1	ಸರ್ಪತೀರ್ಥ	ಸರ್ಪಸುತೀರ್ಥ
73	22	ಬೈರಾವಳಿಯು	ದಾವಳಿಯ
74	12	ತೂಗುವವೋ	ತೂಗುವವೊ
78	21	ಬಕುಳ	ಖಕುಳದ
83	17	ನುಸಿಗ್ರ್ಚಿ	ನುಸಿಗರ್ಚಿ
84	12	ಪಟದ	ಪಾಟದ
96	2	ಬಳುಕುತಿರಲಾಗ	ಖಳುಕ್ಕುತ್ತಿರಾಗ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
100	17	ತಪಪೊಡೆ	ತವಿಪೊಡೆ
103	22	ಕುರಳ	ಕ್ರುರುಳ
106	8	ಪ್ರರಷನ	ಪುರುಷನ
,,	9	ಒದ್ದ	ಒದ್ದ
107	1	ಪ್ರಾಯುದಲಿ ಹಣವ	ಪ್ರಾಯುದಲಿನಾ ಹಣವ
125	7	ಪರಖುದಿ	ವರಖುದ್ಧಿ
137	20	ನಗತೈತಂದ	ನಗುತೈತಂದ
157	15	ರದನಚದ	ರದನಚ್ಛದ
158	6	ಕದಪು	ಪದಪು
226	21	ಪುರದೆ	ಮೇರುವೆ
242	14	ಮೇಲಕ್ಕೀಳೆ	ಮೇಲಕೀಳೆ
245	17	ತ್ರುರುಗಗಳುರವಣೆ	ತುರಗಗಳುರವಣೆ
277	4	ನಿಂದು	ನಿಂದನು
294	3	ಮುಚಿ	ವ್ಚಿ
314	23	ಕೊಂಡ	ಕೊಂಡು
337	10	ಬಿರುದೆಂತೆಂಬರ	ಬಿರುದಂತೆಂಬುರ
350	6	ಕೈತಿಗಳನೆನಿಸುತ	ಕೃತಿಗಳನೆಣಿಸುತ
379	1	ಪಾರರ	ಪೌರರ
382	11	ಕಟೌಟಣಿ	ಕಟ್ಟಾಣಿ
396	9	ಕೈವಾರಿಕ	ಕೈವಾರಿಪ
491	3	ವ್ರತನಿಷೆಯುಲಿ	ವ್ರತನಿಷೆಯುಲಿ
492	5	ಪಚಕೆಯು	ಪಚ್ಚೆಯು
494	12	ಪರಸಿದ	ಪರಸಿದ

ಪರಾ—2, 3, 4, 5 ನೆಯು ಸಂಧಿಗಳ ಅಂತ್ಯದಲ್ಲಿಯೂ

ಇದು ಸೋಮವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನುಬಂಧಿ ॥

ಎಂಬ ಪದ್ಯವನ್ನು ಸೇರಿಸಿಕೊಳ್ಳಬೇಕು.

ಪ್ರಹೇಳಿಕಾರ್ಥದೀಪಿಕೆ.

ಸಂಧಿ ೨ ಪದ್ಯ ೨— ಸ್ವರ್ಗಕ್ಕೆ ಅಧಿಪತಿಯಾದ ಇಂದ್ರನ, ಮಗನಾದ ವಾಲಿಯ, ತಮ್ಮನಾದ ಸುಗ್ರೀವನ, ತಂದೆಯಾದ ಸೂರ್ಯನ ಕಾಂತಿಗೆ ಅರಳುವ ಕಮಲನನ್ನು, ಒಲಿದು ಬಾಣವನ್ನಾಗಿ ಮಾಡಿದ ಮನ್ಮಥನ, ತಂದೆಯಾದ ಶ್ರೀಕೃಷ್ಣನೇ ಸತ್ಪುರುಷರನ್ನು ಕಾಪಾಡು.

ಸಂಧಿ ೪ ಪದ್ಯ ೧— ಗಿಳಿದೇರನಾದ ಮನ್ಮಥನ, ತಾಯಿಯಾದ ಲಕ್ಷ್ಮಿಯ, ತಮ್ಮನಾದ ಚಂದ್ರನಿಗೆ, ಶತ್ರುವಾದ ಹಾವನ್ನು (ರಾಹು), ನುಂಗಿದ ಗರುಡನ, ಅಣ್ಣನಾದ ಅರುಣನಿಂದ, ಮಾರ್ಗವನ್ನು ಪಡೆದ ಸೂರ್ಯನ, ಮಗನಾದ ಸುಗ್ರೀವನಿಗೆ, ರಾಜನಾದ ಶ್ರೀರಾಮನೇ, ಮೂರುಲೋಕವನ್ನೂ ಕಾಪಾಡು.

ಸಂಧಿ ೫ ಪದ್ಯ ೧— ಮೃಗಧರನಾದ ಚಂದ್ರನನ್ನು, ಕಂಡು ಅತಿ ಸಂಭ್ರಮದಿಂದು ಬ್ಬಿದ ಸಮುದ್ರನ, ದೌಹಿತ್ರನಾದ ಮನ್ಮಥನನ್ನು, ರತಿಗೆಡಿಸಿದ ಶಿವನಿಗೆ, ಭಕ್ತನಾದ ಬಾಣಾಸುರನನ್ನು, ಯುದ್ಧದಲ್ಲಿ ಜಯಿಸಿದ ಲಕ್ಷ್ಮೀಪತಿಯಾದ ಶ್ರೀಕೃಷ್ಣನೇ, ಪ್ರಸನ್ನನಾಗಿ ಕಾಪಾಡು.

ಸಂಧಿ ೬ ಪದ್ಯ ೧— ವಾಯುವಿಗೆ, ಪುತ್ರನಾದ ಹನುಮಂತನನ್ನು, ಯುದ್ಧದಲ್ಲಿ ಬ್ರಹ್ಮಾಸ್ತ್ರದಿಂದ ಕಟ್ಟಿದ ಇಂದ್ರಜಿತುವಿಗೆ, ತಂದೆಯಾದ ರಾವಣನ, ತಮ್ಮನಾದ ವಿಭೀಷಣನಿಗೆ, ಲಂಕಾ ರಾಜ್ಯವನ್ನು ಕೊಟ್ಟ ಶ್ರೀರಾಮನ, ಶ್ರೀ ಪಾದಯುಗ್ಮನನ್ನು ಸಂತೋಷದಿಂದ ಸೇವಿಸುವೆನು.

ಸಂಧಿ ೮ ಪದ್ಯ ೧— ಮಹಾಪುರುಷನ ಮನಸ್ಸಿನಿಂದ ಹುಟ್ಟಿದವನಾದ ಚಂದ್ರನ, ಅಳಿಯನಾದ (ಭಾಗಿನೇಯ) ಮನ್ಮಥನ, ತಾಯಿಯಾದ ರುಕ್ಮಿಣಿಯ, ಭಾವನಾದ (ದೇವರ) ಬಲರಾಮನ, ಸಹೋದರಿಯಾದ ಸುಭದ್ರೆಯ, ಪ್ರಿಯನಾದ ಅರ್ಜುನನನ್ನು, ಅತಿ ಹರ್ಷದಿಂದ ಕಾಪಾಡಿದ ಸ್ವಾಮಿಯಾದ ಶ್ರೀಕೃಷ್ಣನ, ಪಾದ ಕಮಲಗಳಿಗೆ ವಂದಿಸುವೆನು.

ಸಂಧಿ ೧೦ ಪದ್ಯ ೧— ಕಮಲದ, ಪುತ್ರನಾದ ಬ್ರಹ್ಮನಿಗೆ, ತಾಯಿಯಾದ ಲಕ್ಷ್ಮೀದೇವಿಗೆ, ತಮ್ಮನಾದ ಚಂದ್ರನನ್ನು, ತಲೆಯಲ್ಲಿಟ್ಟುಕೊಂಡಿ

ರುವ ಈಶ್ವರನ, ಹೆಂಡತಿಯಾದ ಪಾರ್ವತಿಗೆ, ತವ್ಮನಾದ ವೈನಾತಕನ, ಸಂಭಾವನೆಯನ್ನುಂಗೀಕರಿಸಿದ ಆಂಜನೇಯನಿಗೆ, ಒಡೆಯನಾದ ಶ್ರೀರಾಮನೇ, ಪ್ರಸನ್ನನಾಗಿ ಕಾಪಾಡು.

ಸಂಧಿ ೧೬ ಪದ್ಯ ೧— ಗಿಳಿಯನ್ನು ವಾಹನವಾಡಿಕೊಂಡಿರುವ ಮನ್ಮಥನಿಗೆ, ಮಗನಾದ ಅನಿರುದ್ಧನಿಗೆ, ಮಾವನಾದ ಬಾಣಾಸುರನಿಗೆ, ವೆಚ್ಚಿರುವ ಈಶ್ವರನೊಡನೆ, ಯುದ್ಧಾಂಗಣದಲ್ಲಿ ಹೋರಾಡಿದ ಅರ್ಜುನನಿಗೆ, ತಂಗಿಯಾದ ಸುಭದ್ರೆಯನ್ನು ಕೊಟ್ಟು ವಿವಾಹವನ್ನು ಮಾಡಿಸಿದ, ಸಂಸಾರಚ್ಛೇದಕನಾದ ಶ್ರೀಕೃಷ್ಣನೇ ದಯೆಯಿಂದ ಬುದ್ಧಿಯನ್ನುಂಟುಮಾಡು.

ಸಂಧಿ ೧೭ ಪದ್ಯ ೧— ಜಿಂಕೆಯನ್ನು ಧರಿಸಿರುವ ಚಂದ್ರನಿಗೆ, ವೈರಿಯಾದ ರಾಹುವಿಗೆ ಎಂದರೆ ಹಾವಿಗೆ, ಆಹಾರವಾದ ವಾಯುವಿನ, ಗಮನಕ್ಕೆ ಓಡಿ ಹೋಗುವ ವೇಗಕ್ಕೆ, ಒಡೆಯನಾದ ಇಂದ್ರನ, ಮಗನಾದ ವಾಲಿಯನ್ನು, ಕೊಂದಂಥಾ ಶ್ರೀರಾಮನೇ, ಪ್ರಸನ್ನನಾಗಿ ಕಾಪಾಡು.

ಸಂಧಿ ೧೯ ಪದ್ಯ ೧— ಇಂದ್ರನ, ಮಗನಾದ ವಾಲಿಯ, ತವ್ಮನಾದ ಸುಗ್ರೀವನ, ತಂದೆಯಾದ ಸೂರ್ಯನ, ಮಗನಾದ ಯಮನನ್ನು, ಕೋಪದಿಂದ ಕೊಂದು ಹಾಕಿದ ಈಶ್ವರನ, ಧನುಸ್ಸನ್ನು (ದ್ರೌಪದಿಯ ಸ್ವಯಂವರಕಾಲದಲ್ಲಿ) ತಿರಸ್ಕರಿಸಿದ ಅರ್ಜುನನ, ಪತ್ನಿಯಾದ ದ್ರೌಪದಿಯನ್ನು, ಕಾಪಾಡಿದ ಲಕ್ಷ್ಮೀಶನಾದ ಕೃಷ್ಣನೆ, ಸಜ್ಜನರನ್ನು ಕಾಪಾಡು.

ಅಥವಾ— ಇಂದ್ರನ, ಮಗನಾದ ವಾಲಿಯ, ತವ್ಮನಾದ ಸುಗ್ರೀವನ, ತಂದೆಯಾದ ಸೂರ್ಯನ, ಮಗನಾದ ಕರ್ಣನನ್ನು, ಕೋಪದಿಂದ ಕೊಂದ ಅರ್ಜುನನ, ಧನುಸ್ಸನ್ನು ತಿರಸ್ಕರಿಸಿದ ಯುಧಿಷ್ಠಿರನ, ರಾಣಿಯಾದ ದ್ರೌಪದಿಯನ್ನು, ಕಾಪಾಡಿದ ಲಕ್ಷ್ಮೀಶನಾದ ಕೃಷ್ಣನೇ, ಸಜ್ಜನರನ್ನು ಕಾಪಾಡು.

ಸಂಧಿ ೨೦ ಪದ್ಯ ೧— ಕಮಲಗಳಿಗೆ ಸ್ನೇಹಿತನಾದ ಸೂರ್ಯನ, ವೈರಿಯಾದ ಕತ್ತಲೆಯ, ಹೆಸರುಳ್ಳ ತಮಾಸುರನನ್ನು, ಜಲ ಚರವಾದ ಮತ್ಸ್ಯದ, ರೂಪವನ್ನು ಹೊಂದಿ ಜಲದಲ್ಲಿ ಪ್ರವೇಶಿಸಿ ಕೊಂದು ಹಾಕಿದ ಸ್ವಾಮಿಯಾದ ನಾರಾಯಣನ, ಪಾದಕಮಲಗಳಿಗೆ ವಂದಿಸುವೆನು.

ಕಂಠೀರವ ನರಸ ರಾಜೇಂದ್ರ ವಿಜಯ

ಪೀಠಿಕಾ ಸಂಧಿ

ಶ್ರೀಮದಮರ ಗಣ ಮಕುಟ ರಂಜಿತ ದಿವ್ಯ
ರಾಮಣೀಯಕ ಶುಭ ಚರಣ ।
ಕಾಮ ಜನಕ ಕಾರುಣ್ಯ ಮೂರುತಿ ರಂಗ
ಧಾಮ ರಕ್ಷಿಸು ತ್ರಿಜಗವ ॥ ೧

ತ್ರಿ ಭುವನದೊಳಗಿಹ ಬಕುತರಿಗನುದಿನ
ಶುಭಗಳನಿತ್ತು ರಕ್ಷಿಸುತ ।
ಉಭಯ ಕಾವೇರಿಯ ಮಧ್ಯದೆ ನೆಲಸಿಹ
ವಿಭು ಕೊಡು ಮತಿಗೆ ಮಂಗಳವ ॥ ೨

ಶರಣಾಗತ ರಕ್ಷಾ ಮಣಿ ಯೆನಿಸಿ ಕೊಂ
ಡುರಗ ತಲ್ಪದೊಳೊಪ್ಪಿ ಮೆರೆವ ।
ಪರಮ ಮಂಗಳ ಮೂರ್ತಿ ಪಶ್ಚಿಮ ರಂಗೇಶ
ಕರುಣಿಸು ಸಕಲ ಸಜ್ಜನರ ॥ ೩

ಸರಸಿಜ ದಳ ನೇತ್ರ ಸಮ್ಮೋಹನ ಗಾತ್ರ
ಸುರ ಮುನಿ ಸನ್ನುತಿ ಪಾತ್ರ ।
ಕರುಣಾಕರ ಕಮಲಜ ಪಿತ ಲಕ್ಷ್ಮೀ
ನರಸಿಂಹ ಪಾಲಿಸು ವರವ ॥ ೪

ಕಂತು ಜನಕ ಕಮಲಜ ಮುಖ್ಯ ಸುರ ನುತ
ಸಂತತಾನಂದ ಸ್ವರೂಪ ।
ಶಾಂತ ಮೂರುತಿ ಸರ್ವೇಶ್ವರ ಲಕ್ಷ್ಮೀ
ಕಾಂತ ಕೊಡೆನಗೆ ಸನ್ಮತಿಯ ॥ ೩

ಫಣಿ ಭೂಷಣ ಪಾವನ ರೂಪ ಸುಮನೋ
ಗಣ ಪೂಜಿತ ಧವಳಾಂಗ ।
ಗುಣ ಮಣಿ ಗುಹ ಗಣಪತಿ ಪಿತ ಮೈಸೂರ
ತ್ರಿಣಯನನೆ ಸಲಹು ಸಜ್ಜನರ ॥ ೪

ಕಡು ಹರುಷದೆ ಜಡೆ ಯೆಡೆಯೊಳು ಗಂಗೆಯ
ಮುಡಿದಂಡೆಯಾಗಿ ಧರಿಸಿದ ।
ಬಿಡದೆ ಭಕ್ತರ ಸಲಹುವ ಚಿನ್ನ ನಂಜುಂಡ
ನತಿ ದಾವರೆಗೆರಗುವೆನು ॥ ೫

ಆಖು ವಾಹನನಜ ಮುನಿ ಗಣ ಸೇವಿತ
ಪಾಕ ಶಾಸನ ಪೂಜಿತಾಂಗ ।
ಶ್ರೀ ಕಂಠನ ವರ ಸುತ ವಿಘ್ನೇಶ್ವರ
ಸಾಕಾರವಾಗೀಕೃತಿಗೆ ॥ ೮

ಕಮಲ ಸಂಭವನ ಪಟ್ಟದ ರಾಣಿ ಕಲ್ಯಾಣಿ
ಕಮನೀಯ ವೀಣಾ ಪಾಣಿ ।
ಅಮರ ವಂದಿತೆ ಯೆನ್ನ ಜಿಹ್ವಾಗ್ರ ರಂಗದೆ
ಕ್ರಮದಿಂದ ನಟಿಸು ಲೀಲೆಯಲಿ ॥ ೯

ರಾಮಣೀಯಕ ಶುಭ ಗಾತ್ರೆ ಕಮಲ ನೇತ್ರೆ
ಸಾಮಜ ಗಮನೆ ಶರ್ವಾಣಿ ।
ಪ್ರೇಮದೆ ಭಜಿಪರಿಷ್ಟವನೀವ ಚಿಟ್ಟದ
ಚಾಮುಂಡಿ ಸಲಹು ತ್ರಿಜಗವ ॥ ೧೦

ಅಧ್ಯಯನಾದಿ ಸಕಲ ಮಂತ್ರ ಶಾಸ್ತ್ರವ
ವೇದ್ಯವೆನಿಸಿ ಯೆನ್ನ ಮನಕೆ ।
ಸದ್ಯದಿಂದಲಿ ಕರುಣದೆ ರಾಜಿಸುತಿಹ
ವಿದ್ಯಾಗುರುವಿಗೆರಗುವೆನು ॥ ೧೧

ಆದಿ ಕವೀಂದ್ರ ವಾಲ್ಮೀಕಿ ವ್ಯಾಸರು ಮೊದ
ಲಾದ ಸಕಲ ಸೂರಿಗಳ ।
ಪಾದಾರವಿಂದವ ನೆನೆದೀಕೃತಿಯನು
ಮೇದಿನಿ ನಲಿಯೆ ಪೇಳುವೆನು ॥ ೧೨

ಛಂದಸ್ಸು ಗಣ ಲಕ್ಷ್ಯ ಲಕ್ಷಣಗಳ ಮುದ
ದಿಂದ ತಿಳಿದು ಶುಭದೊಳಗೆ ।
ಇಂದು ಧರನ ಕೃಪೆಯಲಿ ಪೇಳ್ವ ಕೃತಿಯಿದ
ಚೆಂದದೆ ಬುಧರು ಲಾಲಿಪುದು ॥ ೧೩

ಉರಗಗಳುಕಿ ಪೂಜಿಸುವರಲ್ಲದೆ ಮತ್ತೆ
ಗರುಡನಿಗಂಜುವರುಂಟೆ ।
ಸರಸ ಸಜ್ಜನರಂತಿರಲಿ ದುರ್ಜನರಿಗಾ
ನೆರಗುವೆನತಿ ಭೀತಿಯಿಂದ ॥ ೧೪

ಹಸಿವು ವೆಸನ ತೃಷೆ ಯಾಲಸ್ಯ ಮೋಹವೆಂ
ಬೆಸಕವುಳ್ಳುದು ನರ ದೇಹ ।
ಉಸಿರಿದ ಕೃತಿಯೊಳು ಮೆರೆದೆಡಹಿರೆ ತಿದ್ದಿ
ಜಸವ ಮೆರೆವುದು ಕೋವಿದರು ॥ ೧೫

ಸೊಕ್ಕು ಜವ್ವನೆಯ ತಕ್ಕೈಯ ಸವಿಯಂದದೆ
ಸಕ್ಕರೆ ಚಿಲು ಪುಲಿನಂತೆ ।
ಅಕ್ಕರಿಂದಲಿ ಕೇಳುವರಿಗತಿ ಹರುಷವ
ವಿಕ್ಕೈಸಗುವುದೀಕಾವ್ಯ ॥ ೧೬

ದೇವತಾ ಸ್ತುತಿ ಯಲ್ಲ ಕೇಳ್ವೂಡೆ ನರ ಸ್ತುತಿ
ಯಾವ ವೆಗ್ಗಳವೆನಬೇಡ ।
ನಾವಿಷ್ಣು ಃ ಪೃಥಿವೀ ಪತಿ ಯೆಂದು ವೇ
ದಾವಳಿಗಳು ಸಾರುತಿವೆ ಕೊ ॥ ೧೬

ಇನಿತಲ್ಲದಂದಿನ ನರ ಸಿಂಹ ಕಲಿ ಯುಗ
ದನುಜರ ಸಂಹರಿಸುವೊಡೆ ।
ಮನುಜಾವತಾರದೆ ಬಂದರಸನ ಕಥೆ
ವಿನುತ ವಿಜಯ ಕೇಳ್ದ ರಿಗೆ ॥ ೧೭

ಇದಕೆ ತಾರ್ಕಣೆ ಯಾವುದೆನೆ ನರ ಹರಿ ಯಂ
ದುದುಭವಿಸಿದ ಮಾಸ ತಿಥಿಯು ।
ಪುದಿದತಿ ಶುಭ ವಾರ ಸಂಜೆಯೊಳುದಿಸಿದ
ಪದುಮಾಹ್ವನೀತ ತಾನೈಸೆ ॥ ೧೯

ಈ ಮಹಿಮೆನ ಸು ಚರಿತ್ರ ಶೌರ್ಯಗಳ ಸು
ತ್ರಾಮ ಭೋಗವೆ ಧರ್ಮದಿರವ ॥
ನೇಮದೆ ಮಾಂಗಲ್ಯ ಕೃತಿ ಯಾಗೆ ಪೇಳ್ವನು
ಪ್ರೇಮದೆ ಕೇಳ್ವುದುತ್ತಮರು ॥ ೨೦

ಬಿರುದಂತೆಂಬರ ಗಂಡ ಭೀಮ ಪರಾಕ್ರಮಿ
ಧುರ ಧೀರನೇಕಾಂಗ ವೀರ ।
ನೆರೆ ಕರ್ನಾಟಕ ಚಕ್ರೇಶ ನರಸ ಭೂ
ವರನ ಚರಿತೆಯ ಪೇಳುವೆನು ॥ ೨೧

ಪರ ಬಲ ಮೇಘಾನಿಲನಾಂಧ್ರ ಬಲ ಸಂಘ
ಕರಿ ಕುಲ ಕಂಠೀರವೇಂದ್ರ ।
ಅರಿ ಪಾಂಡ್ಯ ಭೂಭೃದ್ಗಿರಿ ವಜ್ರ ದಂಡನ
ಚರಿತೆಯನುಸಿರುವೆನೊಲಿದು ॥ ೨೨

ಕೊಂಕಣ ಮಲೆಯಾಳ ಕೊಡಗು ಭೂ ಪಾಲರ
ಬಿಂಕವ ಮರ್ದಿಪ ಶೂರ ।
ಪಂಕಜ ನೇತ್ರ ಸದೃಶ ಕಂಠೀರವ
ನಂಕಿತ ಕೃತಿಯ ಪೇಳುವೆನು ॥ —೨

ದೇವ ಭೂ ದೇವ ಪಾಲನ ಧರ್ಮ ಶೀಲನ
ಪಾವನ ಚರಿತೋನ್ನತನ ।
ಭೂ ವರ ಕಂಠೀರವನೆನಿಸಿದ ನರ
ದೇವನ ಕೃತಿಯ ಪೇಳುವೆನು ॥ —೪

ತರುಣೀ ಜನ ನೇತ್ರೋತ್ಪಲ ಚಂದ್ರನ
ಸರಸ ವಿದ್ಯಾ ವಿಶಾರದನ ।
ದೊರೆ ರಾಯ ನರಸ ರಾಜೇಂದ್ರನ ಚರಿತೆಯ
ನೊರೆದ ಭಾರತಿನಂಜನೊಲಿದು ॥ —೫

ಕೋಟಿ ಕೋಳಾಹಳ ಸಂಗರ ವಿಜಯ ವ
ಧೂಟೀಶ ಕಂಠೀರವನ ।
ಮಿಟೆನಿಸುವ ಚರಿತೆಯಲಿ ರಾಜಿಸುತಿಹ
ಪೀಠಿಕಾ ಸಂಧಿ ಸಂಬಂಧಿ ॥ —೬

ಅರಿ ನೃಪ ಗಜ ಕಂಠೀರವ ಮೈಸೂರ
ನರಸ ರಾಜೇಂದ್ರ ಚಂದ್ರಮನ ।
ಚರಿತೆಯ ಲಾಲಿಸಿದರಿಗೆ ಶ್ರೀರಂಗೇಶ
ಕರುಣಿಸುತಿಹ ವರಗಳನು ॥ —೭

ಪೊಡವಿಪ ದಳವಾಯಿ ನಂಜ ರಾಜೇಂದ್ರ ತ
ನ್ನೊಡೆಯನ ಕಾರ್ಯದೇಳಿಗೆಯ ।
ಗಡಣವ ಚರಿತೆಯಾಗೊಲಿದು ಪೇಳಿಸಿದನು
ಕಡು ಗಲಿಗಳು ಲಾಲಿಪುದು ॥ —೮

ಪೀಠಿಕಾ ಸಂಧಿ ಸಮಾಪ್ತಂ.

ಎರಡನೆಯ ಸಂಧಿ

ಭೂ ಭಾಗ ವರ್ಣನೆ

ಸೂಚನೆ ॥ ವನಧಿ ಕನಕ ಗಿರಿ ಭೂ ಭಾಗ ಮೊದಲಾದ
ಘನ ವರ್ಣನೆಯ ಪೇಳುವೆನು ॥ ೧

ಗೋಪತಿ ಸುತನ ತಮ್ಮನ ತಂದೆಯು ದಿವ್ಯ
ರೂಪಿಗೆ ನಲಿದುದನೊಲಿದು ।
ಚಾಪಕೆ ಶರವ ಮಾಡಿದನಯ್ಯ ಶ್ರೀಲ
ಕ್ಷ್ಮೀಪತಿ ಸಲಹು ಸಜ್ಜನರ ॥ ೨

ಧಾರಿಣಿಯೆಂದೆಂಬ ವನಿತೆಯ ಮಧ್ಯದೆ
ಸೇರಿದ ರತ್ನ ಮೇಖಲೆಯ ।
ಚಾರು ಶೃಂಗಾರದಂದದಲಿ ಪರಿಧಿಗೊಂಡು
ಪಾರಾವಾರ ರಂಜಿಸಿತು ॥ ೩

ಇಂತೊಪ್ಪುತಿಹ ವಾರಿಧಿಯ ಮಧ್ಯದ ಭೂ
ಕಾಂತೆಗಾಧಾರ ತಾನಾಗಿ ।
ಸಂತತ ಕನಕಾದ್ರಿ ಸಕಲವಸ್ತುವ ದೇವ
ಸಂತತಿಗೀಯುತೊಪ್ಪಿದುದು ॥ ೪

ಪಶು ಪತಿಗಾಯುಧವಾದೆನಂಬುಜ ಭವ
ನೆಸೆವ ಸಿರಿಗೆ ಸಂತಸದ ।
ವಸತಿ ತಾನಾದೆನೆಂದಾ ಕನಕಾದ್ರಿ ರಾ
ಜಿಸುವುದುನ್ನತ ಗರ್ವದಿಂದ ॥ ೫

ಖಚರ ಕಿನ್ನರ ಕಿಂಪುರುಷ ಗಂಧರ್ವರ
ನಿಚಯವೈತಂದಾಗಿರಿಯು ।
ಶುಚಿಯೂದ ದಿವ್ಯೌಷಧದೊಳು ಕ್ರೀಡಿಸು
ತಚಲ ಸಂಪದದೊಳಿಪ್ಪುದು ॥ ೬

ಆ ಕನಕಾದ್ರಿಯ ತೆಂಕಣ ದೆಸೆಯೊಳು
ಶ್ರೀಕರವಾಗಿ ರಂಜಿಸುತ ।
ಪ್ರಾಕಟ ಚಪ್ಪನ್ನ ದೇಶ ಸಂತತ ಪುಣ್ಯ
ದಾಕರವೆನಿಸಿತು ॥ ೭

ಕಾಶಿ ಕೇದಾರ ಪ್ರಯಾಗೆ ಗಯಾ ಕ್ಷೇತ್ರ
ಶ್ರೀಶೈಲ ಗೋವರ್ಧನಾದ್ರಿ ।
ಭಾಸುರವೆನಿಪ ಪುಣ್ಯಸ್ಥಳ ಚಪ್ಪನ್ನ
ದೇಶದೊಳಗೆ ರಾಜಿಪುದು ॥ ೮

ಗಂಗೆ ಯಮುನೆ ಕೃಷ್ಣ ವೇಣಿ ಗೋದಾವರಿ
ತುಂಗಭದ್ರೆಯು ಮೊದಲಾದ ।
ಮಂಗಳ ಮಯ ಪುಣ್ಯನದಿಗಳು ದೇಶ ದೇ
ಶಂಗಳೊಳಗೆ ಮೆರೆದಿಹುವು ॥ ೯

ಚಪ್ಪನ್ನ ದೇಶ ರಾಜಿತಮಾಸ್ತ್ರೀ ಮುಖ
ದರ್ಪಣದಂತೆ ಮೋಹನದೆ ।
ಇಪ್ಪುದು ಕರ್ನಾಟಕ ರಾಜ್ಯ ಚಲುವಾಂತು
ವೊಪ್ಪುವ ಸಕಲ ಸಂಭ್ರಮೆದೆ ॥ ೧೦

ತೊರೆ ಗೂಡಿದ ನದಿ ನದಿಯ ಕಾಲುವೆಗಳು
ಪರಿದು ಕೂಡಿದ ಕೆರೆಯಿಂದ ।
ಕೆರೆ ತೊರೆ ನದಿಯಾರಾಮ ರಂಜಿಸುತಿಹ
ಪುರವಿಹುವಾ ದೇಶದೊಳಗೆ ॥ ೧೧

ಶಾಲಿಯು ಗದ್ದೆ ಕರ್ವು ದೋಟ ನಾನಾ ಪುಷ್ಪ
ಜಾಲದ ಕನದನ್ನ ಸತ್ರ ।
ದಾಲಯದಾ ಮೋಹದ ಗೃಹವಸೆವುವು
ಮೇಲಾಗಿ ಯಾ ದೇಶದೊಳಗೆ ॥ ೧೦

ಆ ನಾಡೊಳಗೊಪ್ಪುವ ತರು ಸುರ ತರು
ಧೇನುಗಳ ಕಾಮ ಧೇನು ।
ಮಾನವರೆಲ್ಲರು ಸುಮನಸರೆನಿಸಿ ಸು
ಜ್ಞಾನಿಗಳಾಗಿಹರಲ್ಲಿ ॥ ೧೩

ಪೊಡೆಯೆಂಬ ನುಡಿ ಶಾಲಿಯು ಬೆಳೆಯೊಳು ಕೊಂಕು
ಬಡಕೆಂಬ ನುಡಿ ಯಾ ನಾಡ ।
ಮಡದಿಯರವಯವಗಳೊಳಲ್ಲದೆ ಬಿರು
ನುಡಿ ಯಿಲ್ಲವೇನ ಬಣ್ಣಿಸುವೆ ॥ ೧೪

ಕಟ್ಟೆಂಬ ನುಡಿ ಮೊಲೆಗಾರ್ತಿಯರೊಳು ನೆರೆ
ಪೆಟ್ಟೆಂಬ ನುಡಿ ಟಂಕದೊಳಗೆ ।
ಕುಟ್ಟೆಂಬ ನುಡಿ ವ್ರೀಹಿಯೊಳಲ್ಲದೆ ಬೇರೆ
ದಿಟ್ಟಸಲಾ ನಾಡೊಳಿಲ್ಲ ॥ ೧೫

ಜಾತಿ ಸಂಕರವಿಲ್ಲ ಜಡದೇಹಿಗಳಿಲ್ಲ
ನೀತಿ ಹೀನರು ಚೋರರಿಲ್ಲ ।
ಘಾತುಕರಿಲ್ಲ ದುರ್ಜನರಿಲ್ಲ ಕರ್ಣಾಟ
ರೀತಿಯನೆಂತು ಬಣ್ಣಿಪೆನು ॥ ೧೬

ಆ ಕರ್ಣಾಟ ದೇಶದಲಿ ಪ್ರವಹಿಸಿ
ಲೋಕ ಪಾವನೆ ಯೆಂದೆನಿಸಿ ।
ಸೋಕಿದವರ ದುರಿತವ ಪರಿ ಹರಿಸುತ
ಶ್ರೀ ಕಾವೇರಿ ಯೊಪ್ಪಿಹಳು ॥ ೧೭

ಬಿಂದು ಮಾತ್ರವು ಮೇಲೆ ಬೀಳಲು ಬಹು ಪಾಪ
ದಂದುಗಗಳ ಪರಿ ಹರಿಸಿ ।
ಮುಂದೆ ಸಾಲೋಕ್ಯ ಪದವನೀವ ಕಾವೇರಿ
ಬಂಧುವಾಗಿಹಳು ಭಕ್ತರಿಗೆ ॥ ೧೪

ಒಡನೆ ಕಪ್ಪಿನಿ ಕೌಂಡಿನಿ ಹೇಮಾವತಿ
ವಿಡಿದು ಸಮಸ್ತ ನದಿಗಳ ।
ಸಡಗರದೊಳಗೊಳಕೊಂಡು ಮುಕ್ತಿ ಸ್ಥಾನ
ಕೆಡೆಯಾಗಿಹಳು ಕಾವೇರಿ ॥ ೧೫

ಊರೂರುಗಳಿಗೆ ಕಾಲುವೆ ಕಟ್ಟೆಗಳನಿತ್ತು
ಚಾರುತರದ ಧಾನ್ಯಗಳನು ।
ಪೂರಿತ ಫಲವೀಯುತೆ ಸರ್ವ ಜನಕುಪ
ಕಾರಿಯಾಗಿಹಳು ಕಾವೇರಿ ॥ ೧೦

ಎಸೆವಾ ಕಾವೇರಿಯ ತಟದೊಳು ಬಹು ಪುಣ್ಯ
ದೆಸಕದ ದಿವ್ಯ ಸ್ಥಳಗಳು ।
ಜಸ ವಡೆದಿಹುವಾ ಮಹಿಮೆಯ ಪೊಗಳ್ವೊಡೆ
ಬಿಸಜ ಸಂಭವಗಳವಲ್ಲ ॥ ೧೧

ಕಂಗೊಳಿಸುವ ಕಣ್ವ ಕ್ಷೇತ್ರ ಗೌತಮ ವಾಸ
ಮಂಗಳಮಯ ತ್ರಿಮಕೂಟ ।
ಪುಂಗವ ವಾಹನ ವೈದ್ಯೇಶ ವರ ಋಷ್ಯ
ಶೃಂಗರಾಶ್ರಮಗಳೊಪ್ಪುವುವು ॥ ೧೨

ದಕ್ಷಿಣ ಗಯೆ ಶಿವನಂಬುಧಿ ನೆರೆ ನಿಟ
ಲಾಹ್ವ ಮಲ್ಲೇಶ ಭೂ ಧರವು ।
ಅಕ್ಷಯ ಮೂರುತಿ ಭೀಮೇಶನ ವರ
ಸು ಕ್ಷೇತ್ರವೆಸೆವುವೇನೆಂಬೆ ॥ ೧೩

ಭೂ ರಮೆಣಿಯ ಪೆರೆ ನೊಸಲ ರತ್ನದ ದಿವ್ಯೆ
ಚಾರುತರದ ಬಟ್ಟನಂತೆ ।
ಶ್ರೀರಂಗ ಪಟ್ಟಣವೆಸೆದಿಹುದುಭಯ ಕಾ
ವೇರಿಯ ಮಧ್ಯದೊಳಾಗ ॥ ೦೪

ಆ ಪಟ್ಟಣದಾ ದಕ್ಷಿಣ ದೆಸೆಯೊಳಗೆ ಶ
ಚೀ ಪತಿ ಪುರದ ಚಿಲ್ವಿಕೆಯ ।
ಏ ಪೊತ್ತು ನಗುವೆಂತೆ ಮೈಸೂರು ಕೀರ್ತಿ ಪ್ರ
ತಾಪದೆ ಮೆರೆವುದೊಲ್ಮೈಯಲಿ ॥ ೦೫

ಧರೆಯ ಮೀಲಣ ವೈರಿ ನೃಪರ ದಂಡಿಸಿ ತಂದ
ವರ ವೆಸ್ತು ಚಯವೆಸೆದಿರಲು ।
ಮೆರೆವುದು ಮೈಸೂರೆಂದೆಂಬ ನಾಮದೊಂ
ದುರುತರ ಧ್ವನ್ಯರ್ಥಮಾಗಿ ॥ ೦೬

ಆ ಮಹಾ ಪುರದ ದಕ್ಷಿಣ ಬಹಿರ್ಭಾಗದ
ಸೀಮೆಯೊಳಗೆ ಸಂತಸದೆ ।
ಶ್ರೀಮನ್ಮಹಾಬಲಾಚಲವೊಪ್ಪುತಿಹುದು
ವ್ಯೋಮ ಮಂಡಲವ ಚುಂಬಿಸುತ ॥ ೦೭

ಕನಕಾದ್ರಿ ಬಾಗಿತು ಮಂದರ ಪರ್ವತ
ವನಧಿಗೆ ಕಡೆ ಗೋಲಾಯ್ತು ।
ತನಗಿನ್ನು ಸರಿ ಯಹ ಗಿರಿಗಳಿನ್ನಾರೆಂದು
ಘನ ಹರ್ಷದೊಳೂಪ್ಪುತಿಹುದು ॥ ೦೮

ಆವ ದಿಕ್ಕಿನಲಿ ನೋಡಿದೊಡೈದು ಮುಖವಾಗಿ
ತೀವಿ ಕೊಂಡಾಕಾಶವೆನು ।
ಭಾವಿಸೆ ಪರ ಶಿವನಾಕಾರದಿಂದಲಾ
ದೇವತಾ ಶೈಲವೊಪ್ಪುವುದು ॥ ೦೯

ಉರಗ ನಾರಿಯರಂಬರ ಚರಿಯರ ಚೆಲ್ವ
ಜರೆದು ನಗುವೊಡ್ಯೆದಲಿಟ್ಟ ।
ಪಿರಿದೇಣಿ ವೆಟ್ಟಿನೆ ಕೈಲಾಗ್ರ ಪರಿಯನ್ತ
ವೆರೆವುದಾ ಗಿರಿಯ ಸೋಪಾನ ॥ ೫೦

ಗಿರಿಯ ಶೃಂಗಾಗ್ರದೆ ಚಳಿ ಮಳೆ ಬಿಸಿಲೆನ್ನ
ದುರುತರ ಯೋಗ ಮಾರ್ಗದಲಿ ।
ಪರಮಾತ್ಮನ ಧ್ಯಾನದಿಂದ ಯೋಗೀಶ್ವರ
ರಿರುತಿಹರೇನ ಬಣ್ಣಿಸುವೆ ॥ ೫೧

ಕಪ್ಪುರ ವಾಳ ಕ್ರಮುಕ ಜಂಬೀರಗ
ಳೊಪ್ಪುವ ಫಲಸ ರಸಾಲ ।
ಹಿಪ್ಪೆ ಯಿಂಗುಳ ಮೊದಲಾದ ನಾನಾ ತರು
ತಪ್ಪಲೊಳಸೆವುವಾ ಗಿರಿಯ ॥ ೫೨

ಕಡವೆ ಕಾಡೆಮ್ಮೆ ಶರಭ ಶಾರ್ದೂಲಗ
ಳೊಡನೊಪ್ಪುತಿಹ ಹರಿಣಗಳು ।
ಖಡುಗ ಮೃಗದ ಗೊಂದಣ ಹರಿ ಹುಲ್ಲೆಗ
ಳ್ಬಿಡದೊಪ್ಪಿದುವು ಗಿರಿಯೊಳಗೆ ॥ ೫೩

ಸ್ವಾದೂದಕದ ಸರಸಿ ದಿವ್ಯ ಪರಿಮಳ
ವೈದಿದ ಪೊಂದಾವರೆಯು ।
ಭೂಧರದಗ್ರದೊಳಸದು ಜನರಿಗಾ
ಹ್ಲಾದವೆ ಪುಟ್ಟಿಸುತಿಹುದು ॥ ೫೪

ಕಾನೀನನಾಗಿ ಪಾಂಡವನಾಗಿ ತಪ ಪಿಡಿ
ದಾನಂದದ ಯೋಗಿಯಾಗಿ ।
ಏನೆಂಬೆ ಸುರ ಕುಲವಾಗಿ ಯಾ ಭೂ ಧರ
ನಾನಾ ರೂಪಿನೆಸೊಳಿಹುದು ॥ ೫೫

ಇಂತೊಪ್ಪುತಿಹ ಗಿರಿ ತುದಿಯೊಳುಮಾ ಕಾಂತ
ಕಂತು ಮರ್ದನ ಸರ್ವೇಶ।
ಚಿಂತಿತ ದಾಯಕ ಮಹಾ ಬಲ ಭಕ್ತರ
ಸಂತತದಲಿ ಸಲಹುವನು ॥ ೩೬

ಪುಂಡರೀಕಾಕ್ಷಿ ಪೂರ್ಣೇಂದು ವದನೆ ವರ
ಖಂಡಪರಶುವಿನರ್ಧಾಂಗಿ ।
ಮಂಡಿಸಿ ಪದ್ಮಾಸನದೆ ಸಕಲಗುಣ
ಮಂಡನೆ ಚಾಮುಂಡಿ ಯಿಹಳು ॥ ೩೭

ಕೊಟ್ಟ ವರವ ಪ್ರತ್ಯಕ್ಷವ ತೋರುತ
ಸೃಷ್ಟಿಯೊಳಗೆ ಮೈಸೂರ ।
ಪಟ್ಟದ ನೃಪ ಕುಲ ದೇವತೆ ಯೆನಿಸುವ
ಬೆಟ್ಟದ ಚಾಮುಂಡಿ ಯಿಹಳು ॥ ೩೮

ಆ ಮೈಸೂರನು ಬಳಸಿದುದ್ಯಾನವು
ಸೋಮ ಸೂರ್ಯರ ಕಿರಣಗಳ ।
ತಾ ಮರೆಸುತ ಪತ್ರ ಚ್ಛಾಯೆಗಳಿಂದ
ರಾಮಣೀಯಕವಾಗಿಹುದು ॥ ೩೯

ಪುರ ಲಕ್ಷ್ಮಿ ತನ್ನೊಳಗಿರುವರಿಗಿಷ್ಟಾರ್ಥ
ಪರಕೆ ಕೈಗೂಡಿ ಸಂತಸದೆ ।
ಪಿರಿದುಟ್ಟ ಪಸುರುಡಿಗೆಯೊ ಯೆಂದೆನಲಾ
ವರ ವನ ಬಳಸಿ ಕೊಂಡಿಹುದು ॥ ೪೦

ಆಗಸದೊಳು ಚರಿಸುವ ಸುರ ಸತಿಯರ
ಸೋಗೆ ಮುಡಿಗೆ ಪೂಜ್ಯವಾಗಿ ।
ಆಗರಳಿದ ಕಸ್ತೂರಿ ಹೊಂಬಾಳೆಯ
ಪೂಗ ವೃಕ್ಷಗಳೊಪ್ಪುತಿಹುವು ॥ ೪೧

ಗಂಗೆಯು ಧರಿಸಿ ಭಸಿತವಿಟ್ಟು ಫಲದೊಳು
ಹಿಂಗದೆ ಮುಕ್ಕಂಣನಾಂತು ।
ಅಂಗಜ ಹರನಂತೆ ಯಾರಾಮದೊಳಗಾ
ತೆಂಗಿನ ಮರಗಳೊಪ್ಪಿದುವು ॥ ೪೦

ಶಶಿ ಬಿಂಬ ಹಲವು ರೂಪಾದಂತೆ ಫಲದೊಳ
ಗೆಸೆವೆ ಚಂದಿರ ವರ್ಣವಾಂತು ।
ರಸ ಪೂರಿತಮಾದ ಕೆತ್ತಳ ವನನು
ಮುಸುಕಿ ಕೊಂಡಿಹುವೇನೆಂಬೆ ॥ ೪೧

ಅಂಬರ ಚರಿಯರ ತನು ಗಂಪಿಗೆರಗುವೆ
ತುಂಬಿಯು ಬಳಗದಂದದಲಿ ।
ಮುಂಬರಿದೆಸೆವ ಕಪ್ಪಿಡಿದ ಫಲಾಳಿಯಿಂ
ಜಂಬು ನೇರಿಲೆಗಳೊಪ್ಪಿದುವು ॥ ೪೨

ತಮ್ಮೊಳಿರ್ದಮೃತದ ಸವಿಯು ದೇವರ್ಕಳಿ
ಗೊಮ್ಮೆ ತೋರುವ ತೆರದಂತೆ ।
ಹೊಮ್ಮಿಯಾಗಸಕಡರ್ದಿನಿ ಮಾವು ಫಲ ಸಹ
ಸುಮ್ಮಾನದಿಂದೊಪ್ಪಿಹುವು ॥ ೪೩

ಕಂಟಕಿಯೆಂದು ನುಡಿವರೆಮ್ಮನೆಮ್ಮೊಳ
ಗುಂಟಾದ ಸವಿ ಯನಿಮಿಷರು ।
ಈಂಟುವೆ ಸುಧೆಯೊಳಿಲ್ಲೆಂದು ತೋರ್ಪೊಲು ಫಲ
ವೆಂಟಿದ ಪಲಸುಗಳಿಹುವು ॥ ೪೪

ಬದರಿ ತಮಾಲ ಗುಗ್ಗುಳ ಬಿಲ್ವ ಸವಿ ರಸ
ಪುದಿದ ಕದಳಿ ಕರ್ಜೂರ ।
ಒದವಿದ ಫಲ ದಾಡಿಮದ ತಿಂತಿಣಿಗಳು
ಮುದದಿಂದ ಬನದೊಳೊಪ್ಪಿಹುವು ॥ ೪೫

ಕತ್ತುರಿ ಮೆರುಗ ಸೇವಂತಿಗೆ ಪರಿಮಳ
ವೆತ್ತ ಸಂಪಿಗೆ ಕೆಂಜಾಜಿ ।
ಉತ್ತಮವಾಗಿಹ ಮುಡಿವಾಳ ಲಾಮೆಂಚ
ಸುತ್ತಲೊಪ್ಪಿಹುವಾವನದೊಳು ॥ ೪೮

ಚೆಂಗಣಿಗಿಲು ನೈದಿಲು ಹೊಂದಾವರೆ
ಪೊಂಗಿದ ಸರಸಿಗಳಿಂದ ।
ಮಂಗಳಮಯವೆನಿಪುದ್ಯಾನ ಕಣ್ಗೆ ಬೆ
ಡಂಗಾಗಿ ರಾಜಿಸುತಿಹುದು ॥ ೪೯

ಅರಸಂಚೆ ಕೋಗಿಲೆ ನವಿಲು ರಥಾಂಗಗ
ಳುರುತರ ಕೀರ ಪಾರಿವೆವು ।
ಪರಿ ಶೋಭಿಸಿರುವಾ ಉದ್ಯಾನದ ಸಿಂ
ಗರವವೆದೇನ ಬಣ್ಣಿಪೆನು ॥ ೫೦

ಶಶಿರವಿಗಳ ನೆರೆ ಧರಿಸಿ ಸಂತೋಷದೆ
ಪಶು ಪತಿಯಂತೆ ರಾಜಿಸುತ ।
ಮುಸುಕಿಪ ಕರವೀರಕಾಶ್ರಯವಾಗಿ ರಂ
ಜಿಸಿದುದಾ ಬನ ದೊರೆಯಂತೆ ॥ ೫೧

ಕಿತ್ತಿಳ ಹಣ್ಣಿನ ಸವಿ ರಸದಂತಿರು
ವುತ್ತಮ ಜಲ ಪೂರ್ಣವಾಗಿ ।
ಮತ್ತಾ ಪುರದ ಬಹಿರ್ಭಾಗದೊಳಗಾ
ಕಿತ್ತಿಳಗೆರೆ ರಾಜಿಸಿತು ॥ ೫೨

ಕಳವೆಯು ಪಾಲ್ದೆನೆಗಳ ಸವಿಗೆರಗುವೊ
ಡುಲಿದ್ಬೈತಪ ಗಿಳಿ ವಿಂಡ ।
ಎಳ ವೆಣ್ಣೂಗಳು ನಸು ನಗುತಾಗ ಕೈ ಚ
ಪ್ಪಳ ಯಿಕ್ಕಿ ಪಾರಿಸುತಿಹರು ॥ ೫೩

ದಾರಿ ದಾರಿಯೊಳಾರವಟ್ಟಿಗೆಗಳೂಳಗೆ
ನೀರೆರೆವೆಬಲಾ ಜನದಾ ।
ತೋರ ವೆಂಬಾಲೆಗಳಿಗೆರಗಿದ ಪಾಂಥರ ದಿಟ್ಟಿ
ತೋರಿದುವೆನಿವಿಷತೆಯನು ॥ ೪೪

ತೊಳಪ ಬೆಳ್ಮುಗಿಲ ಮೊಗ್ಗರದಂತೆ ಸಾಲುಗೊಂ
ಡಳವೆಟ್ಟು ಪುರದಿಂದಲೈದಿ ।
ಸಲಿಲವೆನೀಂಟಿ ಮುರಳಿ ಪೋಪ ತೇಜಿಯ
ಬಳವೊಪ್ಪಿದುವೇನನೆಂಬೆ ॥ ೪೫

ಮುಂಗಾರ ಮುಗಿಲೊಡ್ಡಿನಂತೆ ಮದಂಗಳಿ
ಗಂಗೈಸುವ ತುಂಬಿ ವಿಂಡ ।
ಹಿಂಗದೆ ಕರ್ಣತಾಳದಲಿ ಸೋಪ್ಪುತ ಮಾ
ತಂಗ ನೀರ್ಗೈದುವುವಲ್ಲಿ ॥ ೪೬

ಹೊಳವ ದಿವ್ಯಾಂಬರವ್ರುಟ್ಟು ಭೂಷಣಗಳ
ನಲುಗಿಸುತಬುಜಾಕ್ಷಿಯರು ।
ಕಳಧೌತಘಟದೊಳು ನೀರಾಂತು ಪೋವರು
ಪೊಳಲಧಿದೇವಿಯರಂತೆ ॥ ೪೭

ಘ್ರುವನಿಗಂಬುಜದಳ ನೇತ್ರನಂದೊಲಿದಿತ್ತ
ಸುವಿಲಾಸದ ಪುರದಂತೆ ।
ಅವನಿಯೊಳಧಿಕವೆಂದೆನಿಸಿ ಮೈಸೂರು
ತ್ಸವವ ಬೀರಿತು ಚೆಲ್ವಿನಿಂದ ॥ ೪೮

ವೈರಿ ವಿಡಿದು ವೃತ್ತಾಕಾರದಿಂದಾಗ
ಸೂರ ಮಂಡಲವ ತುಡುಕುತ ।
ಚಾರು ತರವ ದಿವ್ಯ ನವರತ್ನದ ಕೋಟಿ
ತೋರಿತು ಕಣ್ಗೆ ಕೌತುಕವ ॥ ೪೯

ಪಾತಾಳದ ಫಣಿಪತಿ ಸಗ್ಗವ ನೋಡ
ಲಾತುರದಿಂ ಮೇಲಕೇಳ ।
ಖ್ಯಾತಿಯ ಪೆಡೆಗಳ ಸಾಲೆನೆ ಕೋಟೆಯ
ನೂತನ ತೆನೆಗಳೊಪ್ಪಿದುವು ॥ ೬೦

ಬಲವೈರಿ ಸುತನ ನಂದನನಾ ಫಣಿಲೋಕಕೆ
ತಳತಂತ್ರ ಸಹಿತ್ಕೈದಿ ಬಂದ ।
ಬಿಲ ಮಾರ್ಗವೆಂದೆನಲಾ ಪುರದಗಳು ಕ
ಣ್ಗೊಳಿಸಿದುದಚ್ಚರಿಯೆನಿಸಿ ॥ ೬೧

ಅಷ್ಟದಿಕ್ಪಾಳರು ತಮ್ಮಯ ಪಟ್ಟಣಗಳ
ಗಟ್ಟಳಿಯಾಗೆ ರಕ್ಕಸರ ।
ನೆಟ್ಟನೆ ನಿಲುವ ತಾಣಗಳನೆ ಕೊತ್ತಳ
ಕಟ್ಟಿಸಕದೊಳೊಪ್ಪಿದುವು ॥ ೬೨

ಸಗ್ಗದ ಸುರರೆಡೆಯಾಡಿದ ಶ್ರಮಗಳ
ತಗ್ಗಿಸಿ ಕೊಂಬೆವೆಂದೆನುತ ।
ಹಿಗ್ಗಿ ಮಾಡಿದ ಪದವೆನೆ ಮುಗಿಲಟ್ಟಣೆ
ಯುಗ್ಗಡಿಸುವುವಂಬರವೆ ॥ ೬೩

ಮೆಲೆತೀ ಪುರಕೈತಹ ರಿಪುನೃಪ ಪಶು
ಕುಲ ಸಮೂಹವನೆಗಿದುಗುಳ ।
ಸಲೆ ಶಾರ್ದೂಲ ವದನವೆನೆ ಹುಲಿ ಮುಖ
ಬಲು ಭಯಾಂಕುರವ ಬೀರುವುವು ॥ ೬೪

ನೆರೆ ನಮ್ಮಿ ಪುರದರಸಿನಗ್ಗಳಕೆಗೆ
ಸರಿಯಿಲ್ಲ ಜಗದೊಳಗೆಂದು ।
ಪುರಲಕ್ಷ್ಮಿ ಕೈಗಳತ್ತಿದವೋಲು ಡೆಂಕಣಿ
ಮೆರೆದುವೆಣ್ಪೆಸೆಯೊಳೀನೆಂಬೆ ॥ ೬೫

ಶಾಲಾವೀಧಿಯ ಬಳಸಿ ರಂಜಿಸಿ ಮೆರೆ
ವಾಳುವೇರಿಗಳಂಬು ಗಂಡಿ ।
ಮೇಲೊಪ್ಪುತಿಹ ಸಂದಿದಲೆದಸಿ ಶೂಲಗ
ಳ್ಮೂಲೋಕಕತಿಶಯವಮ್ಮಾಯ್ತು ॥ ೬೬

ಅಂತರಾಂತರದ ಬಾಗಿಲ ಚಾವಡಿಯೊಳು
ತಿಂತಿಣಿಸುವೆ ಪಟು ಭಟರು ।
ಕುಂತ ಕತಾರಿ ಭಲ್ಲೆ ಪ ಖಡುಗವನಾಂತು
ಸಂತಸದಲಿ ಕಾದಿಹರು ॥ ೬೭

ಆನೆಯ ಶಾಲೆ ಹಯಾವಳಿಗಳ ಲಾಯ
ಜೀನ ಶಾಲೆಗಳಲ್ಲಲ್ಲಿ ।
ಏನೆಂಬೆ ನೂತನವಡೆದಿಹುವುರೆ ನೋಳ್ಪ
ಮಾನಿಸರುಗಳ ಕಣ್ಮನಕೆ ॥ ೬೮

ಶತ ರವಿ ವೀಧಿಗಳೊಳು ಸಾಲ್ಗೊಂಡು ಸಂ
ತಸದೊಳೊಪ್ಪುವ ಸರ್ವ ಜನರ ।
ವಸತಿಗಳೆಸೆವುನ್ನು ನವರತ್ನ ಹೇಮ
ಪ್ರಸರದುಪ್ಪರಿಕೆಗಳಿಂದ ॥ ೬೯

ಕ್ಷೀರಾಂಬು ನಿಧಿ ತನ್ನ ಮಗಳೀ ಪುರದೊಳು
ಸೇರಿಹಳ್ನೋಡ ಬೇಕೆಂದು ।
ಕಾರುಣ್ಯದಿಂ ಬಂದಂತಿರೆ ಧವಳಿಮೆ
ಚಾರು ಮಂದಿರಗಳೊಪ್ಪುವುವು ॥ ೭೦

ಮನೆ ಮನೆಗಳ ಬಾಗಿಲು ಬಾಗಿಲ ಮುಂದೆ
ಕನಕ ದೋರಣದ ಸಾಲಿಂದ ।
ಘನತರವಹ ನವಿಲುಯ್ಯಾಲೆಗಳಿಂದ
ಲನಿಮಿಷ ಪುರವೆ ಪೊಳ್ತಿಹುದು ॥ ೭೧

ವೇದ ವಿದರ ಬಹು ಶಾಸ್ತ್ರ ಸಂಪನ್ನರ
ವಾದಿಸುತಿಹ ತಾರ್ಕಿಕರ ।
ನಾದ ವಿದರ ಲಕ್ಷಣ ಕವಿ ನಿಕರ ವಿ
ನೋದದ ಕೇರಿ ಯೊಪ್ಪುವುವು ॥ ೭೦

ವಿಟ ವಿ ದೂಷಕ ನಾಗರಿಕ ಪೀಠ ಮರ್ದನ
ನಟುವಿಗ ತಾಳ ಧಾರಿಗಳಾ ।
ಪಟುವಾಂತ ವೈಣಿಕ ಮಲ್ಲ ಗಾಯಕರ ವಿ
ಸ್ಫುಟ ವೀಧಿಗಳೊಪ್ಪುವುವು ॥ ೭೧

ಸುಲಲಿತವಪ ನಾನಾ ವರ್ಣಜ ರ
ಪಲ ವಿಧವಾಂತ ಕೇರಿಗಳು ।
ನಲವಿಂದ ಮೆರೆದಿಹುವಾ ಪಟ್ಟಣದತಿ
ಚೆಲುವನದೇನ ಬಣ್ಣಿ ಸುವೆ ॥ ೭೨

ದೊರೆ ದೊರೆಗಳ ಮಂದಿರದೊಳು ರಾಜಿಪ
ಕರುವಾಂಡದ ಕಳಸಗಳು ।
ತರಣಿಯು ಕಿರಣದಂದದಲಿ ಕಂಗೊಳಿಪುದ
ನೊರೆಯಲೇನದನಚ್ಚರಿಯನು ॥ ೭೩

ತಗರ ಕಾದಿಸುವ ಮಲ್ಲರ ಹೋರಿಸುತ್ತಿಹ
ಪಗಡೆ ನೆತ್ತಗಳಾಡಿ ನಲಿವೆ ।
ಮಿಗೆ ತುರಗವ ಕುಣಿಸುವ ರಾಜ ಪುತ್ರರು
ಸೊಗಸಿದರಾ ಬೀದಿಯೊಳಗೆ ॥ ೭೪

ಸಿಪಿಲಿ ಗಚ್ಚಿ ಸುವೆರು ಚರಣಾಯುಧಗಳ
ಕುಪಿತ ಮುಖದೆ ಕಾದಿಸುವೆರು ।
ಚಪಲತ್ವದೆ ಜೂಜನಾಡಿ ಗೆಲುವ ಬಲು
ನಿಪುಣರೊಪ್ಪಿದರು ಬೀದಿಯಲಿ ॥ ೭೫

ಅವರೆಡೆಯೊಳಗಾ ಪುರಕಧಿಪತಿ ಯಾದ
ಭುವನೇಶನ ದಿವ್ಯ ಭವನ ।
ನವೆ ರತ್ನ ಮಾದ ಪರ್ವತಗಳ ಮಧ್ಯೆದ
ದಿವಿಜಾದ್ರಿಯಂತೆ ರಾಜಿಸಿತು ॥ ೭೪

ಹಿರಿಯ ಹಜಾರ ಚಿತ್ರದ ಚಾವಡಿ ಮಿಗೆ
ಸುರುಚಿರದೋಲಗ ಶಾಲೆ ।
ವರ ಲಕ್ಷ್ಮೀ ವಿಲಾಸದ ಚೆಲ್ವಿಕೆಯಿಂದ
ಲರಮನೆ ಮೆರೆವುದರ್ತಿಯಲಿ ॥ ೭೫

ಭೋಜನ ಶಾಲೆ ಮಂತಣ ಗೃಹ ಚೆಲ್ವಿಂದ
ರಾಜಿಪ ಸಜ್ಜೆಯ ಸದನ ।
ರಾಜೀವ ಮುಖಿಯರಾಡುವ ನಾಟಕ ಶಾಲೆ
ಸೋಜಿಗದಿಂದಲೊಪ್ಪಿಹುವು ॥ ೭೬

ನೆಲ ವಾಡದ ಚಂದ್ರ ಶಾಲೆಯ ಮೇಲೆ ಕಂ
ಗೊಳಿಸುವ ಮೋಹನಾಂಗಿಯರ ।
ಬೆಳಕಿಗೆ ಕಣ್ಮೀನ್ಗಳು ಚರಿಸುವ ಜನ
ಜಲಧಿಯೊಳಡೆಯಾಡುತಿಹುವು ॥ ೭೭

ಸುತ್ತಣ ಬೀದಿಯೊಳಗೆ ರಾಜಿಸುತಿಹ
ವೊತ್ತದಂಗಡಿ ಗೇರಿಯೊಳಗೆ ।
ಮುತ್ತು ಮಾಣಿಕ ನಾನಾವಸ್ತು ಮೆರೆವ ಸಂ
ಪತ್ತನದೇನ ಬಣ್ಣಿಪೆನು ॥ ೭೮

ಪರಿಮಳ ವೆರೆದಿಂಪಿನ ದಿವ್ಯ ಪುಷ್ಪವ
ಪರಿಕೊಂಡತಿಹರುಷದಲಿ ।
ಸರಗಟ್ಟಿ ಬೆಲೆಗೆ ಮಾರುವ ಮಾಲೆ ಗಾತಿಯ
ರಿರವ ನಾನೇನ ಬಣ್ಣಿಪೆನು ॥ ೭೯

ಮತ್ತೊರ್ವಳು ವಿಟನಿಗೆ ಸನ್ನೆಯ ಮಾಡು
ವರ್ತಿಯೊಳ್ಮಲ್ಲಿಗೆಯರಳ ।
ಕತ್ತುರಿಯೊಳಗದ್ದಿ ಕೈತುಂಬಿ ಕೊಡಲದ
ಮತ್ತವೆ ನಗುತ್ತೈದಿದನು ॥ ೪

ಬಂದೆಡೆಯೊಳಗೊರ್ವ ಗಟ್ಟಿವಳಿತಿ ಸಿರಿ
ಗಂದವೆ ವಿಟನುರದೆಡೆಗೆ ।
ಪ್ರೊಂದಿಸಿ ತನ್ನಿಂದಹ ವಿರಹಾಗ್ನಿಯ
ನಂದಿಸುವವೊಲೊಪ್ಪಿದಳು ॥ ೫

ಬಿಡದೆ ವೃತ್ತಾಕಾರವಿಡಿದ ಸಾಣೆಯೊಳೂರ್ವೆ
ಮಡದಿ ಗಂಧವ ತೀವೆ ಭರಕೆ ।
ಒಡನೆಲುಗುವ ಮೊಲೆಗಳು ಚಂದ್ರಮನ ಕಂಡು
ನಡುಗುವ ಕೋಕದಂತಿಹುವು ॥ ೬

ಹದಿರುಚದುರಿನಾಗರ ತೌಳಿಯ ಪೇಟ
ಯೊದವಿದ ಮೋಹನ ಶಾಲೆ ।
ಮದನನ ಬೆಳ್ಳಾರವಲೆಯಂತೆ ರಾಜಿಸಿ
ಸದನಗಳಿಹುವು ಸೂಳೆಯರ ॥ ೭

ಮಿಗೆ ಚರಿಸುವ ವಿಟರುಗಳ ಕರಣವೆಂಬ
ಮಿಗ ವಿಂಡನುರೆ ಬಂಧಿಸುವ ॥
ಮುಗುಳಂಬ ಬೇಡನ ಜಾಲದೊಲ್ ಸೂಳೆಯ
ರಗಣಿತ ಗೃಹಗಳೊಪ್ಪಿಹುವು ॥ ೮

ಸಾಲು ಗೊಂಡೆಸೆವ ಬಾಗಿಲ ಪಟ್ಟಿ ಸಾಲೆಯ ·
ನೀಲ ಕುಟ್ಟಿಮದೊತ್ತಿನೊಳಗೆ ।
ಮೇಲೆ ಸಿಂಗರ ಗೈದೊಲೊತ್ತೆಗೆ ನಿಂದಿಹ
ಬಾಲೆಯರುಗಳೊಪ್ಪಿಹರು ॥ ೯

ಜಡೆಗಳೊಳಗೆ ಮಲ್ಲಿಗೆಯು ಪೂವಿನ ಸರ
ಬಿಡದುಟ್ಟ ಸಾಲಿಯು ಸೀರೆ ।
ಕಡು ಪರಿಮಳವಾಂತ ದಿವ್ಯಾಂಗದ ಚೆಲ್ವು
ಮೆಡದಿರನ್ನೆಯರೊಪ್ಪಿದರು ॥ ೮೦

ಹರಳೋಲೆ ಪಸ್ತ ಕಟಕ ಮುತ್ತಿನ ಪತ್ತ
ಸರ ಬೆರಳುಂಗುರದಿಂದ ।
ಸಿರಿ ಯುಡಿ ದಾರ ನೇವ್ರರದ ಸೊಬಗಿನಿಂದ
ಸರಸಿಜಾಕ್ಷಿಯರೊಪ್ಪಿದರು ॥ ೮೧

ಪಟ ಸಾಲೆಯ ಮೇಲೆ ಕುಟಿಲ ಕುಂತಳ ನೆರೆ
ಪುಟ ಚಂಡನಾಡುವ ಭರಕೆ ।
ನಟಿಸಲು ನೆಲೆ ಮೊಲೆಗಳು ನೋಡಿ ನಗುತಾಗ
ವಿಟರು ಕೈ ತಾಳ ವೊತ್ತುವರು ॥ ೮೨

ಬಾನೆಡೆಯೊಳಗಿಹ ಚಂದ್ರನೆನ್ನೆಯ ಮೊಗ
ಕಾನಲಾಪನೆ ಯೆಂದು ಜರೆದು ।
ತಾನೊದೆವವೊಲು ನವಿಲುಯ್ಯಾನಾಡುವ
ಮೊನಿನಿ ಯೊರ್ವಳೊಪ್ಪಿದಳು ॥ ೮೩

ಹೊರೆಯ ಕೆಳದಿಯ ಕಂದದ ಮೇಲೆ ಕರಗಳ
ನಿರಿಸುತ ಸನ್ನೆ ನೋಟಗಳ ।
ತಿರುಹು ಮುರುಹಿನಿಂದ ವಿಟನೆದೆ ಗರಗಿಪ
ತರುಣಿ ಯೊರ್ವಳು ರಾಜಿಪಳು ॥ ೮೪

ಕಾಲಂದುಗೆ ಕಟಿ ಸೂತ್ರ ಕಂಕಣ ಸಣ್ಣ
ಸಾಲಿಯು ಸೀರೆಯು ನೆರಿಯೂ ।
ಬಾಲಕಿ ಯೊರ್ವಳು ಬಹು ಸಿಂಗಾರದ
ಜಾಲವ ಬೀಸಿದಳ್ವಿಟಗೆ ॥ ೮೫

ಪಗಡೆಯಾಡುವ ನೆವದಿಂದೊರ್ವ ವಿಟನನು
ನಗುತ ಕರವ ಪಿಡಿದೈದಿ ।
ಸೊಗಸುವ ಮೋಹರಸವ ಬೀರಿ ಪೊನ್ಗಳ
ತೆಗೆವಳದೇನ ಬಣ್ಣಿಪೆನು ॥ ೯೬

ಚದುರಂಗವಾಡುವ ಬಾರೆಂದೊರ್ವನ
ಪದುಮಾಕ್ಷಿ ಪಿಡಿದೆಳೆದೊಯ್ದು ।
ಮದನಾಗಮದೊಳು ಮಗ್ಗಿಸಿ ಹಣಗಳ
ನುದಿರ ದೆಗೆದಳವನಿಂದ ॥ ೯೭

ಹಾರ ಪದಕ ಚಾಕುಳಿಯನಿಟ್ಟವ ತಮ್ಮ
ಕೇರಿಯೊಳಗೆ ಸುಳಿದಾಡೆ ।
ಸೇರಿಸಿಕೊಂಡವನೊಡವೆಯು ನಗುತ ಪ
ಕೀರನ ಮಾಡಿ ಬಿಡುವರು ॥ ೯೮

ತಾಲಿ ಹೊನ್ನುಂಗುರದವನಿಗೆ ಮೋಹದ
ಬೇಳುವೆಯನು ತಳಿದಾಗ ।
ಮೇಲೊಡವೆಯ ಸೆಳೆ ಕೊಂಡಾ ವಿಟನನು
ಜಾಳಿಸಿ ಬಿಡುವರೇನೆಂಬೆ ॥ ೯೯

ಗಳ ರವವೆಂಬ ಮಂತ್ರದೆ ಮಂತ್ರಿಸಿ ಜಡೆ
ಸೆಳೆ ಬೆತ್ತದಲಿ ಮಿಗೆ ಬಡಿದು ।
ಒಳವಿರ್ದ ವಿಟರ ಸೋಕಿದ ಕಾಮಗ್ರಹವನು
ತೊಲಗಿಸುತಿಹರಂಗನೆಯರು ॥ ೧೦೦

ಉಂಗುಟ ವಿಡಿದು ಮಸ್ತಕ ಪರಿಯಂತ ಮೆ
ನಂಗೊಳಿಸುವ ಭೂಷಣಗಳ ।
ಹಿಂಗದಿತ್ತವನ ವಂಚಿಸಿ ಕಾಣಿಯಿತ್ತಗೆ
ಸಂಗ ಸುಖವ ಕೊಡುತಿಹರು ॥ ೧೦೧

ಬಂದೆಡೆಯೊಳಗೊರ್ವ ಮುದಿ ವಿಟನಬಲೆಯ
ಸಂದಿಸಿ ಯೊತ್ತಿ ಗೊಳ್ಳಲು ।
ತಂದೆ ನೀನೆನಗೆನೆ ನಿನಗೀಗ ಹಣಗಳ
ತಂದೆ ಯೆಂದುರೆ ನಗಿಸಿದನು ॥ ೧೦೦

ಬಳಿಕಲೊಂದೆಡೆಯಲಿ ಹಣವ ಕೊಡದೆ ವಿಟ
ತೊಲಗಿದ ಭಾವವೆ ಕಂಡು ।
ನಳನಾಕ್ಷಿ ಯವನಿದ್ದೆಡೆಗೆ ಪ್ರೋಗಿ ಮಾಡಿದ
ಬಲು ಕೃತಕವನೇನನೆಂಬೆ ॥ ೧೦೧

ನಿನ್ನೆ ವೊದಲು ನಿನ್ನಾಣೆ ನಿನ್ನನು ಕಾಣ
ದನ್ನ ಪಾನಂಗಳಿಳಿಯದೆ ।
ಬನ್ನ ದೊಳಾಳಿದೆ ನಾನೆಂದು ಕಣ್ಣೀರ
ನುನ್ನತವಾಗಿ ಸೂಸಿದಳು ॥ ೧೦೨

ಚಿಕ್ಕಂದು ವೊದಲಾಗೆ ನೀನಲ್ಲದೊರ್ವರ
ಲೆಕ್ಕಿಸಿದವಳು ತಾನಲ್ಲ ।
ರೊಕ್ಕದಾಸೆಗಳಿಲ್ಲ ವೋಹಕ್ಕೆ ನಾ ಸಿಕ್ಕ
ದಕ್ಕಿದೆ ನಿನಗೆಂದಳಾಗ ॥ ೧೦೩

ಇಂತೆಂದು ಬಲು ದೈನ್ಯದಿಂದಲೊಳಗು ಮಾಡಿ
ಕಂತು ಕೇಳಿಯ ನೊಲಿದಿತ್ತು ।
ಸಂತಸವನು ಪುಟ್ಟಿಸಿ ಹಣವನು ಹೇರಾಳೂ
ರಂತೆ ತೆಗೆದಳವನಿಂದ ॥ ೧೦೪

ಇಂತೊಪ್ಪುತಿಹ ಮೈಸೂರ ವೇಶ್ಯಾ ವಾಟ
ಕಂತು ನೃಪನ ಬೀಡಿನಂತೆ ।
ಸಂತತ ಸಕಲ ವೈಭವದೆ ರಾಜಿಸುತ
ತ್ಯಂತ ವೋಹವ ಬೀರುತಿಹುದು ॥ ೧೦೫

ಶಶಿ ರವಿ ಹುತವಹ ನೇತ್ರ ಧವಳ ಗಾತ್ರ
ಪಶು ಪತಿ ಪಾವನ ರೂಪ ।
ವಿಷಕಂಠ ಸುರ ಗಣ ನಮಿತ ತ್ರಿಣೇಶ್ವರ
ನೆಸೆದಿಹನಾ ಪುರದೊಳಗೆ ॥ ೧೦೪

ಆ ಪುರದರಸುಗಳಿಗೆ ಜಯ ಸಿರಿಯ ಕೈ
ಪಾಪರಿಪೂರ್ಣದೇಳಿಗೆಗೆ ।
ಕಾಪಾಲಿ ತ್ರಿಣಯನ ತೀರ್ಥ ಗೊಳದೆ ಪಂಚ
ರೂಪಿನಾವಲುಗಳೂಪ್ಪುವುವು ॥ ೧೦೯

ಪಕ್ಷಿ ವಾಹನ ಪಾವನ ಮೂರ್ತಿ ಸುಮನೋ
ರಕ್ಷ ರಾಜೀವ ದಳಾಕ್ಷ ।
ಅಕ್ಷಯಾತ್ಮಕನಾ ಪುರ ವರದಲಿ ಶ್ರೀ
ಲಕ್ಷ್ಮೀ ಕಾಂತನೊಪ್ಪುವನು ॥ ೧೧೦

ಬಾಗಿಲ ಹನುಮೆ ಭಕ್ತರ ಪಾಲಿಪ ಬಲ
ವಾಗಿ ತಟಾಕದೇರಿಯಲಿ ।
ಭೋಗಿ ಭೂಷಣ ಕಾಲ ಭೈರವರಿರ್ವರು
ರಾಗದೆ ಪುರವ ಕಾದಿಹರು ॥ ೧೧೧

ಪೊಗಳಲಳವೆ ಭೂಮಂಡಲದೊಳಗಿಹ
ನಗರ ಗಿಗರ ದುರ್ಗ ಗಿರ್ಗ ।
ಅಗಣಿತಮಹ ಪುರ ಗಿರ ವೈಸೂರಿಗೆ
ಮಿಗೆ ಸರಿಯೆಂದೆನ ಬಹುದೇ ॥ ೧೧೨

ಲೋಲಾಕ್ಷಿ ಚಾಮುಂಡಿ ದೇವಿಯ ಕೃಪೆಯ ವಿ
ಶಾಲದೊಳಾ ಪುರ ವರದ ।
ಬಾಲರೆ ಚಟುರಾಗಿಹರೆಂಬಲ್ಲಿಗೆ
ಮೇಲಾಯ್ತು ಸಂಧಿ ಸಂಬಂಧಿ ॥ ೧೧೩

ಮೂರನೆಯ ಸಂಧಿ.

ವಂಶ ವಿಸ್ತಾರ ವರ್ಣನೆ.

ಸೂಚನೆ ॥ ಧರೆಯೊಳು ಮೈಸೂರ ದೊರೆಗಳ ವಂಶ ವಿ
ಸ್ತರದೊಳಿಗೆಯ ವರ್ಣಿಪೆನು ॥

ಇಂತೊಪ್ಪುತಿಹ ಮೈಸೂರ ಭೂಪಾಲರ
ಸಂತತಿಗಳ ಕ್ರಮಗಳನು ।
ಸಂತೋಷದೊಳುಸಿರುವೆ ಕೇಳ್ವ ಜನರ
ತ್ಯಂತ ಸೌಖ್ಯದೆ ಲಾಲಿಪುದು ॥ ೧

ಆದಿ ಪುರುಷನಿಂದಜನಾತನಿಂದತ್ರಿ
ಯಾದನಾತನ ನೇತ್ರದಿಂದ ।
ಮೇದಿನಿಯೊಳು ಚಂದ್ರ ಚಂದ್ರನಿಂ ಬುಧ ಪುಟ್ಟಿ
ಲಾದುದೆ ನೆರೆ ಶಶಿವಂಶ ॥ ೨

ಆ ವಂಶದಲಿ ಪುರೂರವನವನಿಂದ
ಪಾವನನಹುಷ ಹುಟ್ಟಿದನು ।
ಆ ವೀರನಿಂದ ಯಯಾತಿ ಯಯಾತಿಗೆ
ಭಾವಿಸೆ ಯದು ಜನಿಸಿದನು ॥ ೩

ಆ ರಾಯರುಗಳ ಪರಂಪರೆಯಲಿ
ಧಾರಿಣಿಯನು ಧರ್ಮದಿಂದ ।
ಚಾರುತರದೊಳಾಳಿದ ಭೂಪಾಲರ
ನಾರು ಲೆಕ್ಕಿಸಲಳವೆಲ್ಲ ॥ ೪

ಯುಗ ಯುಗದೊಳು ಧರ್ಮ ಕೀರ್ತಿ ಪ್ರತಾಪವ
ಜಗದೊಳು ನೆರೆ ಪಸರಿಸುತ ।
ಮಿಗೆ ಕಲಿ ಯುಗ ವಿಡಿದಾಳ್ದ ಭೂಮೀಶ್ವರ
ರಗಣಿತವೇನ ಬಣ್ಣಿಸುವೆ ॥ ೫

ದ್ವಾರಾವತಿಯಿಂದಲೈತಂದು ವೈಸೂರ
ಧಾರಿಣಿಯನು ನೆರೆ ಯಾಳ್ದ ।
ಆ ರೂಢಿಯ ಭೂಮೀಶರ ಮಹಿಮೆಯ
ನಾರು ಬಣ್ಣಿಸಲಳವಲ್ಲ ॥ ೬

ಆತ್ರೇಯ ಗೋತ್ರ ಸಂಭೂತ ಧಾರಿಣಿಗೆ ಪ
ವಿತ್ರ ಸು ಧರ್ಮ ಚರಿತ್ರ ।
ಶತ್ರು ಸಂಹಾರ ಬೆಟ್ಟೇಂದ್ರ ವೈಸೂರ ಧ
ರಿತ್ರಿಯ ಪಾಲಿಸಿ ಮೆರೆದ ॥ ೭

ಅವನ ಗರ್ಭಾಬ್ಧಿಯೊಳಗೆ ಪೂರ್ಣ ಚಂದ್ರನಂ
ತವತರಿಸಿಯೆ ವೈಸೂರ ।
ತವೆ ಹರುಷದೊಳಾಳಿದ ಚಾಮರಾಜ ಭೂ
ಧವ ಧರ್ಮ ಕೀರ್ತಿಯೇಳ್ ಯಲಿ ॥ ೮

ಆ ಮಹಿಮನ ಗರ್ಭದಲಿ ರಾಜೇಂದ್ರ ಸ
ನಾಮ ಸು ಕೀರ್ತಿಲಲಾಮ ।
ಭೂಮಿಪ ಬೆಟ್ಟದ ಚಾಮರಸೇಂದ್ರ ನಿ
ಸ್ಸೀಮರಿರ್ವರು ಜನಿಸಿದರು ॥ ೯

ಹೆಚ್ಚಿತು ಧರ್ಮ ಧರೆಯೊಳು ದುರ್ಮಾರ್ಗದ
ಕಿಚ್ಚಿನೇಳಿಗೆ ನಂದಿತಾಗ ।
ಅಚ್ಚರಿಯಿಂದಲಾ ಜಯ ಲಕ್ಷ್ಮಿ ಭೂಪರ
ಮೆಚ್ಚಿದಳೇನ ಬಣ್ಣಿಸುವೆ ॥ ೧೦

ಬಾಲಾರ್ಕ ಕುಕ್ಷಿಪಹ್ನ ಚಂದ್ರರಂದದೆ
ಮೇಲೆ ವರ್ಧಿಸಿ ಸುತರಿರಲು ।
ಭೂಲೋಲ ಚಾಮರಸೇಂದ್ರ ವಿವಾಹವ
ಲೀಲೆಯೊಳಗೆ ಮಾಡಿಸಿದ ॥ ೧೧

ವಿನುತ ಬೊಮ್ಮನ ಹಳ್ಳಿಯ ಚೆನ್ನ ರಾಜೇಂದ್ರ
ನನುಜಾತೆ ವೀರಾಂಬೆಯನು ।
ಘನ ಹರುಷದಲ್ಲಿ ವೈವಾಹವಾಗೊಪ್ಪಿದ
ಜನಪತಿ ರಾಜ ಭೂಪಾಲ ... ... ॥ ೧೦

ಹುರ ಪುರದಧಿಪತಿ ತಿಮ್ಮ ರಾಜೇಂದ್ರನ
ವರ ಸುತೆ ಗುರುವೆಂಬೆಯನು ।
ಪರಿಣಯವಾಗಿ ಬೆಟ್ಟದ ಚಾಮ ಭೂವರ
ಸಿರಿ ಧರನೊಲು ರಂಜಿಸಿದ ॥ ೧೩

ಬೆಟ್ಟದ ಚಾಮುಂಡಿ ತನ್ನ ಸಾಹಸವೆನು
ಕೊಟ್ಟಾನೃಪರ ಕೈಯಿಂದ ।
ಪೆಟ್ಟನಿಕ್ಕಿಸಿದಳಧರ್ಮದೆ ಹೆಚ್ಚಿದ
ದುಷ್ಟ ಭೂಮಿಪರಿಗೇನೆಂಬೆ ॥ ೧೪

ಬಳಿಕಿರ್ವರು ಪೆರ್ಚಿದಗ್ಗಳಿಕೆಯೊಳಂ
ದಿಳೆಯ ಸುಧರ್ಮ ಮಾರ್ಗದಲಿ ।
ನಲವಿಂದ ಪಾಲಿಸುತಿರ್ದರು ಹರಿ ಭಕ್ತಿ
ಬಳವಿಗೆಯೊಳು ನಲಿದಾಗ ॥ ೧೫

ಇರುತಿರೆ ಕಾರುಗಹಳ್ಳಿಯ ನೃಪರಾ
ಗರುವೆ ಚಾಮುಂಡಿಯ ಗಿರಿಯ ।
ಪಿರಿದೆಲ್ಲಿಗಟ್ಟಗೋಸ್ಕರ ನೆರೆ ವೈರವ
ಬೆರಸಿದರೀ ಭೂಪರೊಡನೆ ॥ ೧೬

ತರಣಿಯ ಕಿರಣದ ಧಾಳಿಗೆ ಕತ್ತಲೆ
ಯುರವಣೆ ಮೆರೆವುದೆ ಬಳಿಕಾ ।
ಅರಿನೃಪರನು ಕೊಂದು ಪುರವ ಪಾಳ್ಮಾಡಾಗ
ಹರಳ ಬಿತ್ತಿಸಿದರೇನೆಂಬೆ ॥ ೧೩

ಬಳಸಿಹ ರಿಪುನೃಪ ಮನ್ನೆಯರಿವರ
ಗ್ಗಳಿಕೆಗೆ ಕಂಗೆಟ್ಟಾಗ ।
ಇಳೆಯಾಣ್ಮ ತಿರುಮಲ ರಾಜನ ಮರೆ ಹೊಕ್ಕು
ಮುಳಿಸ ಬಲಿದವಾತನಿಗೆ ॥ ೧೪

ಬಡನೆ ಮೈಸೂರ ಭೂಪಾಲರು ತನಗೀಗ
ಕಡುಹಿತರೆಂಬುದ ಮೆರೆದು ।
ಬಿಡದೆ ಕೊಂಡೆಗರಿಂದ ಕೋಸವ ತಾಳಿದ
ಪೊಡವಿಪ ತಿರುಮಲ ರಾಜ ॥ ೧೫

ಅರಿಪುರದೆಡಬಲ ಗಡಿದುರ್ಗಗಳಿಸೀಗ
ಭರದೆ ಮುತ್ತಿಗೆಯಿಕ್ಕಿ ಸೆಳೆಯೆ ।
ನೆರೆ ಕೀಳ ತಪುದು ಕಟ್ಟೈಯ ಗ್ರಾಮ ವೆಂದಾ
ಗಿರದಾಳೋಚನೆಗೈದು ॥ ೧೦

ಬಳಿಕ ಮೈಸೂರಿಗೆ ಗಡಿಯ ತಾಣೆಯುವಾಗಿ
ನೆಲೆಗೊಂಡಿಪ ಕೆಸರೆಯನು ।
ತಳುವದೆ ಸೆಳೆಯ ಬೇಕೆಂದು ತಿರುಮಲೇಂದ್ರ
ಬಲವ ಕೂಡಿದನೇನೆಂಬೆ ॥ ೧೧

ಬಿಡದಾಗ ಸಕಲ ರಾಜ್ಯದ ಪ್ರಭು ಮನ್ನೆಯ
ಪೊಡವಿ ಪಾಲರಿಗೋಲೆಗಳನು ।
ಕಡು ತವಕದೊಳಟ್ಟಿ ಸಕಲಬಲವ ತ
ನ್ನೆಡೆಗೆ ಬರಿಸಿಕೊಂಡಾಗ ॥ ೧೦

ಹತ್ತು ಸಾವಿರ ಕಾಲಾಳು ಗಜಗಳೈ
ವತ್ತು ತುರಗ ಸಾವಿರದ ।
ಮೊತ್ತದೆ ಪದಿನಾಡ ರಾಮೆ ರಾಜೇಂದ್ರ ಸಂ
ಪತ್ತಿನೊಳ್ಮತಂದನಾಗ ॥ ೨೩

ಬಳಿಕಲಿಪ್ಪತ್ತು ಸಾವಿರ ಪಾಯ್ದಳ ಮೆದ
ವೆಳಸಿದ ಕರಿಗಳೈವತ್ತು ।
ಸಲೆ ಕುದುರೆಗಳ ಮೇಳದೆ ರುದ್ರಗಣ ಭೂಪ
ತಳುವದೆ ಬಂದನೇನೆಂಬೆ ॥ ೨೪

ಕುದುರೆಗಳೊಂದು ಸಾಸಿರ ಮೆತ್ತ ದಂತಿಗ
ಳೂದಗೆ ಮೂವತ್ತರೊಗ್ಗಿನಲಿ ।
ಪದಿನಾರು ಸಾವಿರ ಸುಭಟರಿಂ ತಳಕಾಡ
ಚದುರನಂಜೇಂದ್ರನೈತಂದ ॥ ೨೫

ತುರಗವೈನೂರು ಕರಿಗಳಿಪ್ಪತ್ತು ಸಂ
ಗರ ಧೀರರೆನಿಪ ಕಾಲಾಳು ।
ಇರದೆಂಟು ಸಾವಿರ ಸಹಿತೈದಿದನಾಗ
ಕೆರೆಯೂರ ತಿಮ್ಮ ನಾಯಕನು ॥ ೨೬

ಕಾಲಾಳು ಹತ್ತು ಸಾವಿರ ಗಜವಿಪ್ಪತ್ತು
ಮೇಲಾದ ತುರಗವೈನೂರು ।
ಮೇಳದೆ ತಿರುಮಳೀಶ್ವರನ ಕೂಟಕೆ ಬಂದ
ಸಾಲನಾಯಕನ ಬೈರೇಂದ್ರ ॥ ೨೭

ನರಸಿಂಹಪುರ ಬೇಲೂರ ದೊರೆಗಳಾಗ
ಹರುಷದೆ ತಳತಂತ್ರ ಗೂಡಿ ।
ತಿರುಮಲರಾಜಚಕ್ರೇಶನ ಕೂಟಕ್ಕೆ
ಭರದಲಿ ಬಂದರೇನೆಂಬೆ ॥ ೨೮

ನುಗ್ಗ ಹಳ್ಳಿಯ ದಾಸ ನಾಯಕ ಕೆಂಗೇಂದ್ರ
ರೊಗಾ ಗಿ ಬಹು ಬಲ ಗೂಡಿ ।
ಹಿಗ್ಗುತೆ ತಿರುಮಲ ರಾಜನ ಕೂಟಕೆ
ಯಗ್ಗಳಿಕೆಯೊಳ್ಕಿದರು ॥ ೮

ಕೋಳಾಲ ಬಳಲಾಪುರ ಬೆಂಗಳೂರ ಭೂ
ಪಾಲರು ಮಾರ್ಬಲ ಸಹಿತ ।
ಮೇಳದೆ ತಿರುಮಲೇಶ್ವರನ ಕೂಟಕೆ ಬಂ
ದಾಳಾಪವನೇನನೆಂಬೆ ॥ ೯

ಸುತ್ತಣ ಪ್ರಭುಗಳು ಸಕಲ ಬಲವ ಕೂಡಿ
ಮೊತ್ತ ಮೊತ್ತದಲೈತಂದು ।
ಮತ್ತಾಗ ತಿರುಮಲೇಶ್ವರನ ಕಾಣಿಸಿ ಕೊಂ
ಡರ್ತಿಯನೇನ ಬಣ್ಣಿಸುವೆ ॥ ೧೦

ತಿಮ್ಮಪ್ಪ ರಾಜ ಪ್ರಧಾನಪ್ಪಿ ಶಟ್ಟಗ
ಳಮ್ಮಡಿ ಜಕ್ಕ ಮನ್ನೆಯನು ।
ಪುಮ್ಮಾನಿ ಪಾಮಿ ನಾಯಕ ಗುಂಡಿ ನಾಯಕರ್
ಹವ್ಮಿನಿಂದೈತಂದರಾಗ ॥ ೧೦

ತೇಜಿಯ ಸಾಲೋ ಶಂಧಿಯ ತೆರೆಗಳ
ರಾಜಿಯೊ ಮದದಂತಿಗಳ ।
ಪೂಜೊ ಕಾಳ್ಮೇಘದೊಬ್ಬುಳಿ ಯೆನೆ ತಿರುಮಲ
ರಾಜನೈತಂದನುಬ್ಬಿನಲಿ ॥ ೧೧

ನೆರೆದಿಹ ದೊರೆಗಳ ನೆರವಿ ನೋಡುತ ತಾನು
ವುರುತರ ಸಂತೋಷದಿಂದ ।
ಪರಿ ಪರಿ ಮೆರಿಯೂದೆಯಿಂದ ಮನ್ನಣೆ ಗೈಯೆ
ಸರಿ ಮಂಡಲಿಕರಿಗೆಲ್ಲ ॥ ೧೨

ಕುದುರೆಗಳೇಳಂಟು ಸಾವಿರ ಹೆಚ್ಚಿನ
ವೆಂದ ಸಾಮಜಗಳಿನ್ನೂರು ।
ಒದವಿದ ಬಲ ಲಕ್ಷ ಸಹ ತಿರುಮಲ ರಾಜ
ಕದನಕ್ಕೈದಿದನೇನೆಂಬೆ । ೫೫

ನೆಗಹಿದ ಸಾಲ ಸಬಳ ಝಳಪಿಪ ಖಡ್ಗ
ಮಿಗೆ ನಾನಾಯುಧ ಪಿಡಿದ ।
ಅಗಣಿತಬಲ ಸಹ ತಿರುಮಲ ರಾಜೇಂದ್ರ
ನಗುತ ದಂಡೆತ್ತಿ ನಡೆದನು ॥ ೫೬

ಬಿರುದಿನ ಡಾಳು ಡವೊಮಿ ಮಕರ ಟಿಕ್ಕೆ
ಯುರುತರ ರಾಜ ಚಿಹ್ನಗಳ ।
ಪರಿಯು ತೋರುತ ತಿರುಮಲ ರಾಜೇಂದ್ರನಂ
ದಿರದೆ ದಂಡೆತ್ತಿ ನಡೆದನು ॥ ೫೭

ಕೊಂಬು ಕಹಳೆ ರಾಯ ಭೇರಿ ತಂಬಟೆ ಪರೆ
ಚಂಬಕ ಮುವುರಿ ತುತ್ತೂರಿ ।
ಮುಂಬರಿದೆಸೆವ ನಾನಾ ವಾದ್ಯಗಳಾ
ಡಂಬರದೊಳಗೈತಂದ ॥ ೫೮

ಬಿರುದಿನ ಕಂಡೆಯ ರಾಯ ಗಜಾಂಕುಶ
ವುರುತರ ಗಂಗನ ಗೋಲು ।
ಮೆರೆವ ಮುತ್ತಿನ ಚಂಡು ವೆರಪಚ್ಚೆ ಯಲಸು
ಕರಿಯೆಂಬ ಗಜಗಳ್ಕೈದಿದುವು ॥ ೫೯

ವಿಾಸರ ಗಂಡ ಬೊಯಲ ಪ್ರೋತರಾಜ ಕ
ಟ್ಟಾಸುರ ಮದನ ಗೋಪಾಲ ।
ಕೇಸುರಿ ಗಣ್ಣಿಳ ನರಸಿಂಹನೆನಿಸುವ
ಭಾಸುರ ಗಜಗಳ್ಕೈದಿದುವು ॥ ೬೦

ತಿರುಮಲರಾಯ ತೇಜಿಯ ಬೊಕ್ಕಣಿಗನು
ವುರುತರ ಹನುಮೆ ಹಾವೇರಿ ।
ನೆರೆ ಝಣ ಕರ ಜಗ ಜಟ್ಟಿಯೆಂದೆನಿಸುವ
ಕರಿಗಳ್ಳಿದುವೊಗ್ಗಿನಲಿ ॥ ೪೧

ತಿರು ವೇಂಕಟ ನಾಥ ವೊರಸರ ಗಂಡನು
ಪರಬಲ ದುಂಪ ದೂಳೀ ।
ಕರಿಗಳರಸ ಕಸ್ತುರಿರಂಗ ವೊದಲಾದ
ಬಿರುದಿನಾನೆಗಳ್ಳಿದುವು ॥ ೪೨

ಕಟ್ಟಿದ ಕೊಂಬುಗತ್ತಿಯ ಸುಂಡಿಲೊಳಗಳ
ವಟ್ಟಿಹ ಬೀಸುಗಂಡೆಯದ ।
ಕಟ್ಟೆರಕದ ಚಿತ್ರ ಪಟಗಳಿಂ ರಾಯನ
ಪಟ್ಟದಾನೆಗಳ್ಳಿದುವು ॥ ೪೩

ಹರಿಗಳ ವೊತ್ತ ನಾಗಂಗಳ ಸಂದಣಿ
ಬಿರುದಿನ ಪುಂಡರೀಕಗಳ ।
ನೆರವಿಯೊಡನೆ ಬಳಿ ಕಾಂತಾರ ಕೆಸರೆಯ
ಪುರವೆ ಮುತ್ತಿದರೀನೆಂಜೆ ॥ ೪೪

ಸುರಗಿರಿಯನು ಮುತ್ತಿದ ಮಿಂಚು ಬುಳುವಿನ
ಸಿರಿಯೊಲು ಬಳಸಿಕೊಂಡೊಡನೆ ।
ಪಿರಿದಾದ ಮುಳುವೇಲಿ ತಳಿ ವೋದುವೆಯಿಂದ
ಪುರವ ಬಾಧಿಸಿದರುಬ್ಬಿನಲಿ ॥ ೪೫

ಮೆತ್ತಾಗಲುಮ್ಮೆತೂರ ಮೊಗೂರ ಭೂ
ಪೋತ್ತಮರೆನಿಪ ಮನ್ನೆಯರು ।
ವೊತ್ತದ ಬಲ ಸಹ ಕೆರೆಹಟ್ಟಿಯ ನೆರೆ
ಮುತ್ತಿ ಮುಸುಕಿದರಾ ಕ್ಷಣದೆ ॥ ೪೬

ಕರಿ ವಿಂಡುಗಳು ಸಿಂಹವ ಸೂಲದಲಿ ಬಂದು
ನೆರೆ ನೋವ ಕೊಂಡು ಜೀವಿಪ್ಪವೆ।
ಧರೆಯೊಳು ಮೈಸೂರವರ ಕೂಡೆ ವೈರವ
ಬೆರಸಿದವರು ಪುರುಳಹರೆ ॥ ೪೬

ಗರುಡನರವಟ್ಟಿಗೆಯೊಳು ತೃಷೆಯಿಂದ
ಲೆರಗಿದ ಫಣಿಗಳುಂದಿರವೆಂತೆ।
ಧುರಧೀರ ಮೈಸೂರ ರಾಜೇಂದ್ರ ದೊರೆಯೊಳು
ಮೆರೆವುದೆ ಇವರ ಪ್ರತಾಪ ॥ ೪೭

ಬಿಡದಾಗ ಗಡಿಯ ದುರ್ಗಗಳ ಮುತ್ತಿದ ಪಗೆ
ನಡೆಯು ಸನ್ನಿಪವ ಕೇಳಿ।
ಕಡುಗಲಿ ಬೆಟ್ಟದ ಚಾಮೇಂದ್ರ ಕೋಪದೆ
ನುಡಿದನಗ್ರಜನೊಳಿಂತೆಂದು ॥ ೪೮

ಹಿತವರೆಂಬುದನರಿಯದೆ ನಮ್ಮ ಮೇ
ಲತಿಖತಿ ಹಿಡಿದು ಕೊಂಡೆಗರ।
ವಿತಥ ವಾಕ್ಯವೆ ಕೇಳಿ ತಿರುಮಲರಾಜ ದು
ರ್ಮತಿಯಾದನೆಂದನಾ ಭೂಪ ॥ ೪೯

ತನಗೆ ಮಲೆತ ನರಸಿಂಹಪುರ ಬೇಲೂರ
ಜನಪತಿಗಳ ಮುರಿದವರಿಂ।
ವಿನಮಿತನನು ಮಾಡಿಕೊಟ್ಟುದ ಮೆರೆದೀತ
ಮುನಿದನೆ ನಮ್ಮ ಮೇಲೀಗ ॥ ೫೦

ಸುತ್ತಣ ಪ್ರಭುಗಳ ಬಲವ ಮುರಿದು ತನ
ಗೆತ್ತಿಸಿ ಕೊಟ್ಟು ಕಪ್ಪಗಳ।
ಮತ್ತವರನು ಪಾದಾಕ್ರಾಂತರ ಮಾಡಿ
ದುತ್ತಮ ಹಿತವ ಮರೆದನೆ ॥ ೫೧

ಇನ್ನು ನಮ್ಮಲ್ಲಿ ತಪ್ಪಿಲ್ಲವೆನುತ ಕೋ
ಪೋನ್ನತನಾಗಿ ಮನದಲ್ಲಿ ।
ಮುನ್ನೆಯ ಬೆಟ್ಟದ ಚಾಮೇಂದ್ರ ಬಲ ಗೂಡಿ
ಸನ್ನದ್ಧನಾದನಾಹವಕೆ ॥ ೫೩

ಬಳಿಕಗ್ರಜನ ಪುರ ರಕ್ಷೆಗಿಂಬಿಟ್ಟಾಗ
ತಳತಂತ್ರವ ಕೂಡಿಕೊಂಡು ।
ಫಳಿಲನೆ ಕೋಟೆಯ ನೃಪನ ಸಂಧಿಸಿ ನೇಮ
ದಳದು ಶೀಘ್ರದೆ ತಿರುಗಿದನು ॥ ೫೪

ಗರಳ ಪುರದ ನದಿಯನು ದಾಂಟಿ ಬಲಸಹ
ನೆರೆ ಯರ್ಧರಾತ್ರೆಯೊಳಾಗ ।
ಕೆರೆ ಹಟ್ಟಿಯ ಮುತ್ತಿದರಿ ತಂತ್ರವ
ತರಿದೊಟ್ಟಿದನೇನನೆಂಬೆ ॥ ೫೫

ಅಲ್ಲಿ ಸಾವಿರ ಕೋಳ ಹಿಡಿದು ವೈರಿಗಳನು
ಚೆಲ್ಲ ಬಡಿದು ದೆಸೆಗಟ್ಟ ।
ನಿಲ್ಲದೈತಂದು ಸತ್ಯಾಗಾಲದ ಪಾಳ್ಯ
ವೆಲ್ಲವ ಸೂರೆ ಯಾಡಿದನು ॥ ೫೬

ಸೆರೆ ತುರು ಸಹಿತ ಸೋಸಲೆಯ ಕಡುವೆ ದಾಟಿ
ಪಿರಿದು ಮಾರ್ಬಲ ಗೂಡಿ ಬಂದು ।
ಕಿರವೆಂಗೂರು ಪಾಳಯವೆನಿರಿದು ಬೇಗ
ವೊರೆ ಯಿಡಿಸಿದ ವೈರಿ ಭಟರ ॥ ೫೭

ಒಡನೆ ವೈಸೂರಿಗೈತಂದಾಗಲಗ್ರಜ
ನಡಿಗೆರಗಲು ಸಂತಸದೆ ।
ಬಿಡದಾಗಲನುಜನ ಬಿಗಿ ಯಪ್ಪಿ ಸಂತಸ
ಗಡಲೊಳಗೋಲಾಡಿದನು ॥ ೫೮

ಮೂರು ದಿವಸದೊಳಗಿನಿತು ಕಾರ್ಯವ ಮಾಡಿ
ವೀರನಾದನು ಜಯಾಂಗನೆಗೆ ।
ನೀರಾಗ್ರಗಣ್ಯ ತನ್ನನುಜನೆಂದವನಿಪ
ಮಿಾರಿದ ಹರುಷದೊಳಿಸೆದ ॥ ೫೯

ಬಳಿಕಲೀವಾರ್ತೆ ರಾಯಗೆ ಮುಟ್ಟಿ ಕೋಪವ
ತಳದಾಗ ಕೆಸರೆಯ ಪುರವ ।
ಘಳಿಲನೆ ಲಗ್ಗೆಗೆ ಬಿಡಲಾ ಪುರದವ
ರಿಳಿಯು ಕೆಡಹಿದರೀನೆಂಬಿ ॥ ೬೦

ಲಗ್ಗೆಯೊಳಗೆ ನೊಂದು ರಿಪು ಭೂಪರ ಸೇನೆ
ಯೊಗ್ಗೊಡೆದೋಡಿ ಹಿಂನೆಲೆಗೆ ।
ಹಿಗ್ಗು ದೆಗೆದು ದೂರ ಚೌದಿಕ್ಕಿನೊಳಾಗ
ಬೊಗ್ಗನೆ ಪಾಳ್ಯವಿಳಿದರು ॥ ೬೧

ಬಂದು ದಿನದೆ ಜಕ್ಕ ಮನ್ನೆಯ ಬಲ ಗೂಡಿ
ಬಂದಾಗ ಹಂಚೆಯದೊಳಗೆ ।
ನಿಂದಾಗ ಸೂರೆ ಗೈಸುತಲಿರೆ ಬಲ ಬೀಹು
ಸಂದುದು ನೃಪನಿಗಾ ಕ್ಷಣದೆ ॥ ೬೨

ಬಳಿಕ ರಾಜೇಂದ್ರನಿಗೊಂದು ಬಲವ ಮಾಡಿ
ಕಳುಹಿ ವೈರಿಗಳ ಪಾಳ್ಯಕೆ ।
ತಳುವದೆ ಬೆಟ್ಟದ ಚಾಮೇಂದ್ರ ಬಲ ಸಹ
ದಳ ದುಳಿಸಿದನು ಹಂಚೆಯುಕೆ ॥ ೬೩

ಸೂರೆಗೆ ತಳತಂತ್ರ ಗೂಡಿ ಯಲ್ಲಿಗೆ ಬಂದು
ಮಿಾರಿದ ಜಕ್ಕ ಮನ್ನೆಯನ ।
ಮೇರೆ ಯಿಲ್ಲದ ಬಲ ವಾರಿಧಿಯನು ಮೋದಿ
ದಾರುಭಟೆಯನೇ ವೇಳ್ವ ॥ ೬೪

ಇಡುವ ಪೆಟ್ಟಲು ಕೂಡಬ್ಬರಿಸುವ ಬಾಣ
ಜಡಿವ ಖಂಡೆಯ ಹರಿಗೆಗಳ ।
ಕಡು ಗಲಿ ಭಟರು ಭೋ ಯೆಂದಾರ್ದು ರಿಪುಗಳ
ತುಡುಕಿದರೇನ ಬಣ್ಣಿಸುವೆ ॥ ೩೫

ಕಡಿಯಿರಿ ಮೈಸೂರ ಕಳ್ಳೀರುಗಾರರ
ಪಡೆಯನೆನುತ ಬೊಬ್ಬಿರಿದು ।
ಹೊಡವಿಪ ಜಕ್ಕ ಮನ್ನೆಯನು ಮಾರ್ಬಲ ಗೂಡಿ
ಯೊಡನೆ ಬಂದಿದಿರಾಗಲಾಗ ॥ ೩೬

ಸೃಷ್ಟಿಗೆ ಮೈಸೂರ ಪಟ್ಟದ ಚಾಮನ
ಪಟ್ಟದಾನೆಗಳ ಕೈ ಗುಣಿಪ ।
ನಿಟ್ಟಿಸಿ ನೀವೆಂದು ಮೆಟ್ಟಿ ಮುಂದಲೆಗಳ
ಕುಟ್ಟಿದರಲ ಶಿರಗಳನು ॥ ೩೭

ಇರಿದರು ತರಿದರು ಕೊರೆದರು ಮೂಗನು
ಜರಿ ಟೋಪಿ ಜೋಡು ದಗಲೆಯ ।
ಪರಿ ಪಟ್ಟ ಮಾಡಿ ರಾವುತರ ಮೆಯ್ಯಲಿ ಬಲು
ಸುರಗಿಗಳನು ಸೆಕ್ಕಿದರು ॥ ೩೮

ನೇಜೆಯದಿರಿತಕೆ ಚಿಗಿದು ಕುದುರೆಯೆಂದ
ಮಾಜದೆ ಬೀಳ್ವ ರಾವುತರ ।
ವಾಜಿಯ ಪಿಡಿದು ಮೂಗರಿದವರನು ಯಮ
ರಾಜನಾಲಯಕಟ್ಟಿದರು ॥ ೩೯

ಬೆಟ್ಟದ ಚಾಮುಡಿಗೆ ಗಡಿಯ ಭೈರವನಿಗೆ
ಕೊಟ್ಟೆವು ನರ ಬಲಿಯೆನುತ ।
ಕುಟ್ಟಿ ಕೆಡಹಿ ಕಾಲಾಳ್ಗಳನುರೆ ಬೆ
ನ್ನಟ್ಟಿ ತಿವಿದರುರವಣಿಸಿ ॥ ೪೦

ತುಡುಕುತ ಜಕ್ಕ ನುನ್ನೆಯುರ ನೆಂದಲೆಯನು
ಪಿಡಿದು ಕೆಡಹಿ ಸಿರ ವರಿದು ।
ಬಿಡದೆ ಸಾವಿರ ಕೋಳ ಪಿಡಿದಾ ಬಲವ ನು
ತ್ತೊಡನೆ ಕೂಡಿದರು ಪಾಳಯವ ॥ ೭೦

ಪುಲ್ಲ ಹೇರುವೊಡೆ ಬಂದಿರುವ ಕನಾಡದ
ರುಲ್ಲಿಯ ಕೊಂಬಿನೆತ್ತುಗಳ ।
ನಿಲ್ಲದೆ ತಿರುಹಿ ಕೊಂಡವರ ಮಾಬ್ಬಲವನು
ಚಲ್ಲ ಒಡಿದರೇ ವೇಳ್ವ ॥ ೭೦

ಬೊಬ್ಬೆ ಯಾರ್ಭಟಿ ಬಾಣ ಬಿಡುವ ಕೋವಿಯೊ
ಳುಬ್ಬಿ ತೀವಿದ ಬಲು ಧೂಮ ।
ಉಬ್ಬಲಾಗಸಕಾಗ ಕೆಸರೆಯ ನುತ್ತಿದ
ಹೆಬ್ಬಲವನು ತುಡುಕಿವರು ॥ ೭೩

ಬಾಣದ ಹೊಗೆಯಲಿ ರಿಪುಗಳ ತೂಳಿಸಿ ಕೊಂ
ಡೇಕಾಂಕ ವಂಶ ಸಂಭವನು ।
ಕ್ಷೋಣೀಪ ಬೆಟ್ಟಿನ ಚಾವೆಯೆಂದ್ರನೊಳ ಹೊಕ್ಕು
ಮಾಣದಿರಿದ ರಿಪು ಬಲವ ॥ ೭೪

ದಳವನೆರಡು ಪೌಜು ಮಾಡಿ ಮಗ್ಗಜ ಗೂಡಿ
ತುಳಿಲಾಳುಗಳ ಬೊಬ್ಬೆಯಲಿ ।
ಚಲದಂಕ ಬೆಟ್ಟಿದ ಚಾವೆಯೆಂದ್ರ ನುತ್ತಿದ
ಬಲ ಜಲಧಿಯ ಕಲಕಿದನು ॥ ೭೫

ಎಡೆ ವಿಡದಿಡುವ ತುಪಾಕಿಯ ಗುಂಡಿನ
ಕಡುಹಿಂದ ನಡುವೆ ಬಾಣಗಳ ।
ಗಡಣದಬ್ಬರದಿಂದ ಕೂಡಿದ ರಿಪು ಬಲ
ಕಡಿ ಖಂಡ ವಡೆದುದೇ ವೇಳ್ವ ॥ ೭೬

ಇರಿವ ಬಲ್ಲಿಹದಿಂದ ತರಿವ ಖಂಡೆಯ ಮೂಗ
ಕೊರೆವ ಕರದ ಚೂರಿಯಿಂದ ।
ತಿರು ಮಲ ರಾಜೇಂದ್ರನ ಬಲ ನೊಂದಾಗ
ಮುರಿದೋಡಲುಜ್ಜುಗಿಸಿದುದು ॥ ೫೫

ಕುದುರೆಗಳರಿದು ರಾವುತರ ಮುಂ ದಲೆಗಳ
ನೊದಗಿ ಪಿಡಿದು ಬೀಳ ಗೆಡಹಿ ।
ಮದ ದಂತಿಗಳ ಸೊಂಡಿಲ ಹೊಯ್ದು ಸು ಭಟರ
ಸದೆದರೇ ವೇಳ್ವನದ್ಭುತವ ॥ ೫೪

ತಳುವದೆ ಬೆಟ್ಟದ ಚಾವೆಂದ್ರ ಸಾಕಿದ
ಪಳಯ ಪೈಕದ ನಾಯಕರು ।
ಬಳ ಹೊಕ್ಕು ವೈರಿ ಮಾರ್ಬಲವನು ಸದೆದಾಗ
ಕಳ ಕೂಳವನು ಮಾಡಿದರು ॥ ೫೯

ಕರದ ಖಂಡೆಯದಿಂದ ರಿಪುಗಳ ಶಿರವನು
ತರಿದು ನೇಜಯದಿಂದಲಿಟ್ಟು ।
ತುರಗಗಳನು ಬೀಳ ಗೆಡಹಿ ಬೆಟ್ಟದ ಚಾವು
ದುರ ಗಲಿ ಮೆರೆದ ಸಾಹಸವ ॥ ೪೦

ಆನೆಯನರೆಯಟ್ಟಿ ದೊರೆ ದೊರೆಗಳ ಪೌಜಿ
ನಾನಿಕೆಯನು ಕಾವಗಲಿಸಿ ।
ಭೂ ನಾಥ ಬೆಟ್ಟದ ಚಾವೆಂದ್ರ ಬಹು ದು
ವ್ಯಾನವಿತ್ತನು ರಿಪುಗಳಿಗೆ ॥ ೪೧

ಕಾಲಾಳು ಪವುಜು ಮುರಿಮು ವಾರುವೆಗಳ
ಸಾಲೊಳು ಮರೆ ಗೊಂಡುವಾಗ ।
ಮೇಲೆ ತುರಂಗ ಪದಾತಿ ಭೀತಿಯೊಳು ಕಂ
ಡಾಲ ನೋಹರವ ಸೇರಿದುವು ॥ ೪೨

ದುರಗಲಿ ಬೆಟ್ಟದ ಚಾವೇಂದ್ರನುರುಬಿಗೆ
ಕರಿ ವಿಂಡು ತುರಗ ಕಾಲಾಳು ।
ಮುರಿದೋಡಿದುದು ದೆಸೆ ದೆಸೆಗಾ ಬಲಕ್ಕೆ ಬಂ
ದುರು ಭಂಗವನೇ ವೇಳ್ವ ॥ ೪೩

ಸಿಡಿದುವು ತಲೆ ಕೊರಳ್ಗಂಡಿಸಿ ಯುರದೆಲು
ಪುಡಿಯಾಗಿ ತೊಡೆಗಳು ಮುರಿದು ।
ಬಿಡದೆ ಕೈ ಕಾಲು ಮುಂಡಿಸಿ ರಿಪು ಬಲ ನೆರೆ
ಮಡಿದುದು ರಣ ಭೂಮಿಯೊಳಗೆ ॥ ೪೪

ಬಿರುದನೀಡಾಡಿದವರು ಬಾಯೊಳಗಂದು
ಬೆರಳಿಟ್ಟು ಸಲಹೆಂದೆನುತ ।
ಕರವ ಮುಗಿದು ವಲ್ಮೀಕವೇರಿದ ರಿಪು
ಸರಿವಾರವೆಸೆದುದಾ ಕ್ಷಣಕೆ ॥ ೪೫

ಸಲೆ ಬ್ರಹ್ಮ ಪುರ ಪರಿಯಂತ ಕೂಡಿದ ರಿಪು
ತಳತಂತ್ರವೆ ಮುರಿದಿರಿದು ।
ತಲೆಗಳ ಹೊಯ್ದು ನಾಲ್ಕೆಂಟು ಸಾವಿರವನು
ಹೊಳೆಯ ಕೂಡಿದನುಳಿದವರ ॥ ೪೬

ಪಟ್ಟದ ಮದ ಕರಿ ವಾರುವಗಳ ಪಿಡಿ
ದಟ್ಟಿ ವೈರಿಗಳ ಮಾರ್ಬಲವ ।
ತೊಟ್ಟನೆ ಧರ್ಮ ಗಾಳಿಯ ಪಿಡಿಸಿದನಾ
ಬೆಟ್ಟದ ಚಾಮ ಭೂಪಾಲ ॥ ೪೭

ದೊರೆ ರಾಯ ಬೆಟ್ಟದ ಚಾವೇಂದ್ರನ ಕೂಡೆ
ದುರವನೆಸಗಲಮ್ಮೆನೆನುತ ।
ಪಿರಿಯ ಪಟ್ಟಣದೀಶ ರುದ್ರ ಗಣಾಖ್ಯನು
ಸರಿದನು ರಣ ಭೀತಿಯಲಿ ॥ ೪೮

ಮೇಲನರಿಯದೆ ಬೆಟ್ಟದ ಚಾವಮೇಂದ್ರ ಭೂ
ಪಾಲನ ಕೆಣಕಿ ದುಷ್ಕೀರ್ತಿ ।
ಬಾಲೆಗೆ ಪತಿ ಯಾದೆನೆಂದಾಗ ಪದಿನಾಡ
ಭೂ ಲೋಲ ಸರಿದ ಚಿಂತೆಯಲಿ ॥ ೪೯

ಎಂದೆಂದಿಗೀ ಕಡೆಯಲಿ ಸುಳಿದರೆ ತಮ್ಮ
ತಂದೆಯ ಪದದಾಣೆ ಎನುತ ।
ಮುಂದು ಗೆಟ್ಟೊಶನಾಗ ತಳಕಾಡ ನಂಜೇಂದ್ರ
ಬಂದು ಹೊಕ್ಕನು ತನ್ನ ಪುರವ ॥ ೫೦

ಕೆರೆಯೂರ ತಿಮ್ಮನಾಯಕ ನುಗ್ಗೆ ಹಳ್ಳಿಯ
ಹರಿದಾಸ ನರಸಿಂಪ ಪುರದ ।
ದೊರೆ ಬೇಲೂರ ಮನ್ನೆಯರಾಗ ಮನ ನೊಂದು
ಸರಿದರು ನಿಜ ಪುರಿಗಳಿಗೆ ॥ ೫೧

ಬಳಲಾಪುರ ಬೆಂಗಳೂರು ಕೋಳಾಲ
ದಿಳ ಯಾಣ್ಮಾರುರೆ ಕಂಗೆಟ್ಟು ।
ತಳತಂತ್ರವ ನೀಗಿ ತಮ್ಮಯ ಪುರಗಳ್ಗೆ
ತಳುವದೆ ಸರಿದರೇ ವೇಳ್ಕೆ ॥ ೫೨

ಸುತ್ತಣ ಪ್ರಭು ಮನ್ನೆಯರೆಲ್ಲರು ನಿಜ
ಪತ್ತಿಗಳನು ನೀಗಿ ನೊಂದು ।
ಮತ್ತಾಗ ನಿಂದಲ್ಲಿ ನಿಲ್ಲದೆ ಸರಿದ ಏ
ಪತ್ತ ನಾನೇನ ಬಣ್ಣಿಪೆನು ॥ ೫೩

ಹರಿ ಭಕ್ತನ ಕೂಡೆ ಬರಿದೆ ವೈರವ ತಾಳ
ತಿರುಮಲ ರಾಜನ ಬಿಟ್ಟು ।
ಸಿರಿ ಮಧು ಜಯ ಲಕ್ಷ್ಮಿಕ್ಕ ಬೆಟ್ಟದ ಚಾವುನ
ನರ ಹಂಪದಲಿ ಸೇರಿದಳು ॥ ೫೪

ಧರೆಯನಾಳುವೊಡೆ ಪರಾಕ್ರಮ ಸಾಲದೆ
ತಿರುಮಲ ರಾಜ ಚಕ್ರೇಶ ।
ಸರಿದನು ಪದಿನಾಡ ಹೊಳಯ ಮಾಲಿಂಗಿಗೆ
ನರ ಪುತ್ರ ಮಿತ್ರರು ಸಹಿತ ॥ ೫೫

ಮೊರಿದು ಸುತ್ತಣ ಪ್ರಭುಗಳ ರಾಜ್ಯವನಾಗ
ಬರೆ ಸೆಳದಗ್ರಜಾತನಿಗೆ ।
ಹರುಷದೆ ಪಟ್ಟಣ ಸಹಿತಿತ್ತು ಬೆಟ್ಟದ
ಧುರ ಧೀರ ಚಾಮೇಂದ್ರ ಮೆರೆವ ॥ ೫೬

ಭೀಮನ ಬಲದಿಂದ ಧರ್ಮ ನಂದನನುರಿ
ಭೂಮಿಗಟ್ಟಿರೆಯನಾದಂತೆ ।
ಆ ಮಹಾ ಬೆಟ್ಟದ ಚಾಮೇಂದ್ರನಿಂದ ನಿ
ಸ್ಸೀಮನಾದನು ರಾಜ ಸೃಪತಿ ॥ ೫೭

ಬೆಟ್ಟದ ಚಾಮೇಂದ್ರನೆಂಬ ಭೂಪರ
ಪಟ್ಟದಂಗನೆಯರ ಗರ್ಭ ।
ತೊಟ್ಟಿಳುಕಿಗೆ ಬಂದು ಕರಗುವಾತನ
ದಿಟ್ಟ ತನವನೇ ವೇಳ್ವ ॥ ೫೮

ಹುಟ್ಟಿದ ದಿನದಿಂದಾ ಜೆನ್ನ ಮೆಚ್ಚವ
ಕೊಟ್ಟುದಿಲ್ಲಾರ್ಗೆಯು ಭೂಪ ।
ಬೆಟ್ಟದ ಚಾಮನ ವೀರ ರಸದ ಬಲು
ಗಟ್ಟಿಯನೇನ ಬಣ್ಣಿಸುವ ॥ ೫೯

ನಲಿದಳು ಭೂ ದೇವಿ ಯಜನ ಯಾಜನಗಳು
ಸಲೆ ಪೆಚ್ಚಿಯವನಿಂದ ।
ಮಳ ಬೆಳಯಲಿ ಸಂತುಷ್ಟ ವಡೆದು ಜನ
ತಳಗಿದುದತಿ ಹರುಷದಲಿ ॥ ೬೦೦

ಎಲ್ಲಿ ನೋಡಲು ಕೆರೆ ಕಟ್ಟಿ ಯಾರಾಮಗ
ಳುಲ್ಲಾಸಗಳನ್ನು ಸಕ್ರ ।
ಬಲ್ಲಿದ ಬೆಟ್ಟದ ಚಾಮೇಂದ್ರನಿಂದುರೆ
ಪಲ್ಲೈಸಿದುದ ನೇವೇಳ್ವ ॥ ೧೦೧

ಎಂದು ಚಾಮುಂಡಿಯ ಪಾದ ಪದ್ಮಗಳನ್ನು
ವಂದಿಸಿ ತ್ರಿ ಕಾಲದೊಳಗೆ ।
ಸುಂದರ ನಾಮದ ಷ್ಟೋತ್ತರ ಶತ ಪೂಜೆ
ಚೆಂದವೆನಲು ಮಾಡುವನು ॥ ೧೦೨

ಕೂಳ ಕಾಣದ ದೇವತಾ ಜಾಲವಾ ಮಹಿ
ಪಾಲ ಬೆಟ್ಟದ ಚಾಮನಿಂದ ।
ಮೇಲೆ ಮೃಷ್ಟಾನ್ನ ನೈವೇದ್ಯಗಳಿಂ ಮಿಗೆ
ತಾಳಿದುವತಿ ಹರುಷವನು ॥ ೧೦೩

ಪುರ ದುರ್ಗ ವೆಗ್ರ ಹಾರಗಳು ರಾಜಿಸುವ ಭೂ
ಸುರ ವರ್ಗ ಬಂಧು ವರ್ಗಗಳು ।
ಸಿರಿಯೊಳೂಲಾಡಿ ಬೆಟ್ಟದ ಚಾಮೇಂದ್ರನ
ಪರಸಿದುವತಿ ಮುದದಿಂದ ॥ ೧೦೪

ಇಂತಪ್ಪ ಬಹು ಧರ್ಮ ಶೌರ್ಯದೇಳ್ಗ ಯಲಿ ಭೂ
ಕಾಂತ ಬೆಟ್ಟದ ಚಾಮೇಂದ್ರ ।
ಸಂತತ ಜಯದಿಂದ ಪೃಥ್ವಿಯನಾಳ್ದನೆಂ
ಬಂತಾಗ ಸನಿ ಸಂ ಬಂಧಿ ॥ ೧೦೫

೩ ನೆಯ ಸಂಧಿ ಸಮಾಪ್ತಂ.

೪ ನೆಯ ಸಂಧಿ.

ಕೇಶೀರವ ನರಸಿಂಹರಾಜ ಜನನ ವರ್ಣನೆ.

ಸೂಚನೆ ॥ ನರರಕ್ಕಸರ ಸಂಹರಿಸಲು ನರಸಿಂಹ
ನರನಾಥನಾಗಿ ಪುಟ್ಟಿದನು ॥

ಹರಿವಾಹನನ ತಾಯನುಜನ ವೈರಿಯು
ನಿರದೆ ತುತ್ತಾಗಿ ನುಂಗಿದನ ।
ಹಿರಿಯಣ್ಣನಿಂದ ಪಥವ ಪಡೆದನ ಸುತ
ನರಸ ಸಲಹು ತ್ರಿಜಗವೆ ॥ ೧

ಬಳಿಕ ಬೆಟ್ಟದ ಚಾವುೇಂದ್ರ ಸಮಸ್ತ ಭೂ
ತಳವನಗ್ರಜ ಸಹ ನಲಿದು ।
ವಿಲಸಿತ ಧರ್ಮ ಮಾರ್ಗದಲಿ ಪಾಲಿಸುತಾಗ
ಬಲು ಹರುಷದೊಳಾಪ್ತಿದನು ॥ ೨

ಬಹು ರಾಜ್ಯವ ತನ್ನ ವಶ ಮಾಡಿ ಭಕ್ತಿ ಸ
ನ್ನಿಹಿತನಾಗಿಯೆ ರಾಜಿಸುವ ।
ಸಹ ಜಾತನ ಬಿಗಿಯಪ್ಪಿ ಮನ್ನಿಸಿ ನೆರೆ
ಮಹಿಪ ರಾಜೇಂದ್ರನೊಪ್ಪಿದನು ॥ ೩

ಹರಿ ಭಕ್ತಿಯಲಿ ಪ್ರಹ್ಲಾದನೆನಿಸಿ ನೆರೆ
ಹರಿ ಧ್ಯಾನದಲಿ ಬಲಿಯೆನಿಸಿ ।
ಹರಿ ಪೂಜೆಯಲಿ ರುಕ್ಮಾಂಗದನೆನಿಸಿ ಭೂ
ವರ ಬೆಟ್ಟದ ಚಾಮಸಿರುವ ॥ ೪

ರಾಮ ಕನಕಚ ಕೃಷ್ಣ ಸ್ತವ ನರಸಿಂಹ
ಸ್ವಾಮಿ ದಿವ್ಯ ನಾಮಗಳ ।
ನೇಮದೊಳಗೆ ಜಪಿಸುವನಾ ಬೆಟ್ಟದ
ಚಾಮೇಂದ್ರನೊಲಿದು ಭಕ್ತಿಯಲಿ ॥ ೫

ದಿನ ಚರಿ ಮೂರು ಸಹಸ್ರ ನಾಮದ ಮಂತ್ರ
ದನುನಲಿ ಶ್ರೀ ನರ ಹರಿಯ ।
ಮನ ನಲಿದರ್ಚಿಸಿದಲ್ಲದನ್ನವ ಕೊಳ್ಳ
ಜನಪ ಬೆಟ್ಟದ ಚಾಮೇಂದ್ರ ॥ ೬

ಅದರಿಂದ ಶ್ರೀನರ ಹರಿ ಯಾ ಭೂ ಪನ
ಹೃದಯಾಬ್ಜ ಪೀಠದೆ ನೆಲಸಿ ।
ಕದನದೊಳಗೆ ಜಯವೀವೆ ಬೆಟ್ಟದ ಚಾಮ
ಗಿದಿರಹ ರಿಪ್ರ ನೃಪರುಂಟೆ ॥ ೭

ಹರಿ ದಿನದಲಿ ಹರಿ ಮಂತ್ರದೆ ಹರಿ ಪೂಜೆ
ಹರಿ ನಾಮ ಕೀರ್ತನೆಯಿಂದ ।
ಹರುಷದೆ ಜಾಗರವಿದ್ದ ರುಕ್ಮಾಂಗದ
ಧರಣೀಶನಂತೆ ರಾಜಿಪನು ॥ ೮

ಅಂಬರೀಷನವೊಲು ದ್ವಾದಶಿ ದ್ವಿಜ ನಿಕು
ರುಂಬಕ್ಕೆ ಯನ್ನ ದಾನಗಳ ।
ಸಂಭ್ರಮದಲಿ ಮಾಡಿ ಪಾರಣೆ ಗೆಯ್ವನಾ
ಕುಂಭಿನೀ ಪತಿ ಭಕ್ತಿಯಲಿ ॥ ೯

ಇಂತೊಪ್ಪುತ ಬೆಟ್ಟದ ಚಾಮ ಧರಣೀ
ಕಾಂತನು ಹರಿ ಭಕ್ತಿಯಲ್ಲಿ ।
ಸಂತತ ವೈಭ್ವೀ ಸಾಮ್ರಾಜ್ಯವನೋ
ರಂತೆ ಪಾಲಿಸುತಿರುತಿರಲು ॥ ೧೦

ಕಲಿ ಯುಗ ಮಹಿಮೆಯೊಳಗೆ ನರ ರಕ್ಕಸ
ರುಲಿದು ದರ್ಮಾರ್ಗವ ಬಲಿದು ।
ಸುಲಲಿತ ದೇವ ಭೂದೇವರ ಭಾಧಿಸಿ
ನೆಲಸಿದರವನಿಯೊಳಾಗ ॥ ೧೧

ಯಜನ ಯಾಜನಗಳನಳಿದು ಭೂಮಿಯೊಳಿಹ
ಸುಜನರುಗಳ ಹಿಂಡಿ ಪಿಳಿದು ।
ಗಜಬಜವೆನು ಮಾಡಿ ಬಳಿಕಲಧರ್ಮವ
ನಿಜವಾಗಿ ಬಲಿದರೇನೆಂಬೆ ॥ ೧೨

ಗೋವ್ರುಗಳನು ಸದೆ ಬಡಿದು ಧರೆಯೊಳಿಹ
ದೇವತಾಶಿಲೆಗಳನೊಡೆದು ।
ಶಾವನ ಸಾಧ್ವಿಯರನು ಭಂಗಕೆ ತಂದು
ಹಾವಳಿಯನು ಮಾಡಿದರು ॥ ೧೩

ಒಡೆದು ತಟಾಕವ ಧರ್ಮಾಶ್ರಯಗಳನು
ಕಡಿದಾಗ ಕಲ್ಪವೆಲ್ಲಿಗಳ ।
ಜಡಿದಿಟ್ಟು ಮುನಿಗಳ ತಪವನಳಿಯು ಕ
ಣ್ಣಿಡಿಸಿದರೇ ವೇಳ್ವನದನು ॥ ೧೪

ಕೆಟ್ಟುದು ದೇವರ್ಕಳ ಮಹತ್ತು ಮುಳಿ ಬೆಳ
ನಪ್ಪುವಾಗಲು ಧರ್ಮಗಳು ।
ಬಿಟ್ಟೋಡಲು ಮ್ಲೇಚ್ಛರು ಹೆಚ್ಚಿದ ಬಲು
ಕಷ್ಟವನೇನ ಬಣ್ಣಿಸುವೆ ॥ ೧೫

ವೇದ ಶಾಸ್ತ್ರಾಗಮವಳಿದಾಗ ಬಹುಳ ದು
ರ್ಭೋಧೆಗಳ ವರ್ತಿಸಲು ॥
ಭೂದೇವಿ ಖಳರ ಭಾರವ ತಾಳಲಾರದೆ
ಆದಿಯೊಳುರೆ ಚಿಂತಿಸಿದಳು ॥ ೧೬

ಆರಿಗುಸಿರುವೆನೀ ಯಾಯಾಸದ ಪರಿ
ಹಾರವ ಮೊಳ್ಪರಾರೆಂದು ।
ಧಾರಿಣಿದೇವಿ ಚಿಂತಿಸಿ ಮನದಲಿ ಕಂಡ
ಳೋರಂತೆಸೆವ ಕಾರ್ಯದಿರವ ॥ ೧೫

ಹರಗುಸಿರುವೆನೆ ತವೋಗುಣವಾತನ
ವರಿಸಿಹುದಜಗೆ ಪೇಳುವೆನೆ ।
ಪರಿಹರಿಪ್ರೊಡೆ ಶಕ್ತನಲ್ಲವಿದಕೆ ಸಿರಿ
ಧರನೆ ಗತಿ ಯೆಂದಳಾಗ ॥ ೧೬

ಎಂದಾಳೋಚಿಸಿ ಭೂದೇವಿ ಸುಮನೋ
ವೃಂದ ಸಹಿತ ನಡೆತಂದು ।
ಮಂದರ ಧರಗಾವಾಸ ಕ್ಷೀರಾಬ್ಧಿಯ
ನಂದಾಗ ಕಂಡಳೀವೇಳ್ಯ ॥ ೧೯

ಪಾಕ ಶಾಸನಗೆ ಭಾಗ್ಯವನಿತ್ತೆನವನದೊಂ
ದಾಕಾರವ ನೋಳ್ಪನೆಂದು ।
ಬೇಕಾಗಿ ಶರಧಿ ತೆರೆಗಳಿಂ ಮೈ ವೆಚ್ಚಿ
ನಾಕವ ತುಡುಕುತೊಪ್ಪಿದುದು ॥ ೨೦

ಪುತ್ರಾಗಮಕುಬ್ಬಿದ ಸತ್ಪುರುಷನ
ಗಾತ್ರದಂದದೆ ಶಶಿಯುದಿಸೆ ॥
ಚಿತ್ರದೆ ಮೈ ವೆಚ್ಚು ತಾಗ ಕ್ಷೀರಾಂಬುಧಿ
ಪತ್ರಿ ಪಥವನಡರಿದುದು ॥ ೨೧

ಸವಳಗಳಿಂ ರಾಗಿಸಿ ಮೌಕ್ತಿಕವೆಂಬ
ನವ ಪುಳಕಾಂಬು ವೆತ್ತಾಗ ।
ಸು ವಿಲಾಸದೆ ವಿಷ್ಣು ಪದ ಸೇವೆಗೆಯ್ಯುತ
ತವೆ ಪಾಲ್ಗಡಲೊಪ್ಪಿದುದು ॥ ೨೨

ಸುಳಿತೆರೆ ನೊರೆ ಬುದ್ಬುದ ಜಲ ಚರಗಳ
ಟ್ಟಳಿಗೆ ತುಳುಕಿ ಮೇಲಕೇಳ್ವ ।
ಬಲುಸೀಪರ್ನಿಗಳ ವೊತ್ತದಿಂದಂಬುಧಿ
ಯಳವಟ್ಟು ವೆರೆದುದಳ್ಳಿಯಲಿ ॥ ೦೩

ಇಂತೊಪ್ಪುತಿಹ ಕ್ಷೀರಾಬ್ಧಿಯ ನಡುವೆಯ
ನಂತನ ತಲ್ಪದೊಳಾಗ ।
ಸಂತತ ಬಿಡದೋಲೈಪ ದೇವರ್ಕಳ
ತಿಂತಿಣಿಯಲಿ ಹರಿಯೆಸೆದ ॥ ೦೪

ದ್ವಾದಶಾದಿತ್ಯರೇಕಾದಶ ರುದ್ರರು
ವಾದಿಪ ಸನ್ಮುನಿ ನಿಕರ ।
ಮಾದವನಿದಿರಲಿ ಜಯ ಜಯ ಯೆಂಬ ನಿ
ನಾದದೆ ವೆರೆದುವೊಗ್ಗಿನಲಿ ॥ ೦೫

ಗರುಡ ಗಂಧರ್ವ ಕಿನ್ನರ ಕಿಂಪುರುಷ
ಸುರ ಸಿದ ಚಾರಣರೊಲಿದು ।
ಸಿರಿ ಯರಸನ ಚರಣಕೆ ನೊಸಲನು ಚಾಚಿ
ಹರುಷದೆ ನುತಿಸುತೊಪ್ಪಿದರು ॥ ೦೬

ರಂಭಾ ನಾಟ್ಯ ತುಂಬುರು ಗಾನ ಧ್ವನಿ
ಯಂಬುಜಾಸನನ ಕೊಂಡಾಟ ।
ಶಂಬರ ವೈರಿಯ ಪಿತನಾಸ್ಥಾನದೆ
ತುಂಬಿ ರಾಜಿಸಿದುದರ್ತಿಯಲಿ ॥ ೦೭

ಆ ಸಮಯದೆ ಭೂದೇವಿ ಯೈತಂದು ಸ
ರ್ವೇಶನ ಚರಣಾಬ್ಜಗಳಿಗೆ ।
ಭಾಸುರವೆಹ ಸಿರಿ ನೊಸಲ ಚಾಚುತ ಬಿ
ನ್ನೈಸಿದಳೊಲಿದು ನುತಿಸುತ ॥ ೦೮

ದೇವ ದೇವಾಸುರಾರ್ಚಿತ ದಿವ್ಯಪದಯುಗ
ಭಾವಜಪಿತ ಭವದೂರ ।
ಪಾವನಮೂರ್ತಿ ಪಂಕಜನೇತ್ರ ಸರ್ವಗು
ಣಾವಲಂಬನನವಧಾನ ॥ ೮

ಜಯ ಜಯ ಜನನವಿದೂರ ಜನಾರ್ದನ
ಜಯ ಜಯ ರವಿಕೋಟಿತೇಜ ।
ಜಯ ಭಕ್ತವತ್ಸಲ ಭವರೋಗಭೇಷಜ
ಜಯ ದುರಿತಾಬ್ಜ ಪಶಾಂಕ ॥ ೯

ಶರಣಾಗತರ ಮೊರೆಯ ಕೇಳಿಯವರಿಗೆ
ವರವಿತ್ತು ಸಲಹುವ ಬಿರುದು ।
ನೆರೆ ನಿನಗಲ್ಲದಿನ್ನಾವ ದೇವರಿಗುಂಟು
ಸಿರಿಯರಸನೆ ಚಿತ್ತೈಸು । ೧೦

ಶ್ರುತಿಯ ಕದ್ದೊಯ್ದ ಸುರನ ಕೊಂದು ಭೂಸುರ
ತತಿಯ ರಕ್ಷಿಸಿದೆ ಮಂದರವ ।
ಅತಿಶಯದಿಂ ತಾಳ್ದನ್ನ ನೀನುಳುಹಿದೆ
ಶತಪತ್ರನೇತ್ರ ಚಿತ್ತೈಸು ॥ ೧೧

ತರಳಗೆ ಮುನಿದನ ಕರುಳನುಗಿದು ನಿನ್ನ
ಕೊರಳೊಳು ವನಮಾಲೆಯಿಟ್ಟೆ ।
ಭರದೆ ಬಲಿಯ ಪುಟ್ಟಿ ದುರುಳ ರಾಜರ ತಲೆ
ಯುರುಳ ಕಡಿದೆ ಕೊಡಲಿಯಲಿ ॥ ೧೨

ಹತ್ತು ಮೊಗದ ಬಳನುತ್ತಮಾಂಗಗಳನು
ಕತ್ತರಿಸಿದೆ ಬಾಣದಲಿ ।
ಮತ್ತಾಗ ಯದು ಭೂಪೋತ್ತಮನಾಗಿ ದು
ರ್ಮತ್ತರ ಸಂಹಾರಗೈದೆ ॥ ೧೩

ತ್ರಿಪುರದ ಸತಿಯರ ಕಪಟ ರೂಪಲಿ ಬಲು
ತಪಗಳನಳಿದ ಮಹಾತ್ಮ ।
ವಿಪರೀತರಾವುತನುಪಮೆಯ ಕೈಕೊಂಡ
ನಿಪುಣ ಕೇಳನ್ನ ಬಿನ್ನಪ ॥ ೩೫

ಅಂದಿನ ಖಳರೀಗ ಬಂದು ತುರುಕರಾಗಿ
ಮುಂದುಗೆಡಿಸಿ ಗೋದ್ವಿಜರ ।
ಕೊಂದು ಕೂಗುತ ಧರ್ಮದಂದನಳಿದರು
ಕಂದರ್ಪಪಿತನೆ ಚಿತ್ತೈಸು । ೩೬

ಅಳಿದರು ಹನ್ಯೆಕ್ಯಾನ ವೇದಶಾಸ್ತ್ರಾನ
ಪಳಿದು ಪತಿವ್ರತೆಯರನು ।
ಸೆಳೆದು ಸರೆಯಸಿಕ್ಕಿ ತಾಪಸನಿಕರವ
ಮುಳಿದಟ್ಟಿ ದೆಸೆಗೋಡಿಸಿದರು ॥ ೩೭

ದುಷ್ಟರ ಹೊರಲಾರೆ ನಿನ್ನಯ ಕರುಣಾ
ದೃಷ್ಟಿಯೊಳನ್ನನುದ್ಧರಿಸಿ ।
ತಟ್ಟನೆ ಸಲಹೆಂದು ಹರಿ ಚರಣಕೆ ನೊಸ
ಲಿಟ್ಟಳು ಮತ್ತೆ ಭೂದೇವಿ ॥ ೩೮

ಮದ ಮುಖ ದೈತ್ಯರ ಸದೆಯಲೋಸುಗ ನಿನ್ನ
ಪದಕೆ ಬಿನ್ನಹ ಮಾಡಿದೆನು ।
ಹದನಿದೀಗೆಂದ ಭೂಸುದತಿಯ ಮನ್ನಿಸಿ
ಪದುಮಾಕ್ಷ ನಗುತಲಿಂತೆಂದ ॥ ೩೯

ಹೋದ ರಕ್ಕಸರು ತುರುಕರಾಗಿ ಬಂದೀಗ
ಬಾಧಿಪರೆ ನಿನ್ನನು ।
ಭೂದೇವಿ ಕೇಳು ಮೈಸೂರ ರಾಜೇಂದ್ರನ
ಸೋದರನಿಹನೆನ್ನ ಭಜಕ ॥ ೪೦

ರುಕ್ಮಮಾಂಗದನಂಬರೀಷನವೊಲು ಸ್ತೋತ್ರ
ಮುಖದಿಂದಲೆಮ್ಮ ಪೂಜಿಸುವ ।
ಅಕಳಂಕ ಚರಿತ ಬೆಟ್ಟದ ಚಾಮೇಂದ್ರನ
ಒಕುತಿಗೆ ಮನವೊಲಿದಿಹೆನು ॥ ೪೧

ಬೆಟ್ಟದ ಚಾಮಭೂಪಾಲನ ಮೋಹದ
ಪಟ್ಟಗಂಗನೆ ಗುರುವೆಂಬೆ ।
ಮುಟ್ಟಿ ಭಜಿಪಳನ್ನ ತಾಯ ಗರ್ಭದೆ
ಪುಟ್ಟ ಬಳರ ಕೊಲ್ವೆನೆನಲು ॥ ೪೨

ದೇವ ನಿನ್ನುದ್ಭವವಾಗುವ ದಿನವನು
ನಾವೆಂತರಿಯಬೇಕೆಂದು ।
ಭೂವಧು ಬಿನ್ನೈಸೆ ನಗುತಾಗ ಬಳಿಕ ಕ್ಷ
ಪಾವಲಂಬನನಿಂತೆಂದ ॥ ೪೩

ಹಿಂದೆ ಕಂಬದೊಳಾನು ಜನಿಸಿದ ಶುಭಮಾಸ
ದಂದಿನ ದಿವಸದಗ್ರದಲಿ ।
ಬಂದಾಕೆಯುದರದೆ ನರರಕ್ಕಸರನು
ಕೊಂದಪೆನಂಜಬೇಡೆಂದ ॥ ೪೪

ಎಂದು ಭೂದೇವಿ ಮುಂತಾದ ಸಕಲ ಸುರ
ವೃಂದವ ಮುದದೆ ಬೀಳ್ಕೊಟ್ಟು ।
ಮುಂದರಧರನಸು ನಗುತ ಮುಂದಣ ಕಾರ್ಯ
ದಂದವ ನೆನೆಯುತೊಪ್ಪಿರಲು ॥ ೪೫

ಬಳಿಕಿತ್ತಲೊಂದು ದಿವಸ ಭೂಪನಂಗನೆ
ಕೆಳದಿಯರುಗಳೊಂದು ಗೂಡಿ ।
ತಳುವದೆ ರಾಜಕೇಳೀ ವನಕ್ಕೈತಂದು
ಗಿಳಿ ವರಿಗಳ ಕಂಡಳಾಗ ॥ ೪೬

ಕುದುರೆಗಳೇಳಂಟು ಸಾವಿರ ಹೆಚ್ಚಿನ
ವೆಂದ ಸಾಮಜಗಳನ್ನೂರು ।
ಬದವಿದ ಬಲ ಲಹ್ಷ ಸಪ ತಿರುಮಲರಾಜ
ಕದನಕ್ಕೈದಿದನೇನೆಂಬೆ । ೫೫

ನೆಗಹಿದ ಸಾಲ ಸಬಳ ಝಳಪಿಸ ಖಡ್ಗ
ಮಿಗೆ ನಾನಾಯುಧ ಪಿಡಿದ ।
ಅಗಣಿತಬಲ ಸಹ ತಿರುಮಲರಾಜೇಂದ್ರ
ನಗುತ ದಂಡೆತ್ತಿ ನಡೆದನು ॥ ೫೬

ಬಿರುದಿನ ಡಾಳು ಡವಾಮಿ ಮಕರಟಿಕ್ಕೆ
ಯುರುತರ ರಾಜ ಚಿಹ್ನಗಳ ।
ಪರಿಯು ತೋರುತ ತಿರುಮಲರಾಜೇಂದ್ರನಂ
ಬರದೆ ದಂಡೆತ್ತಿ ನಡೆದನು ॥ ೫೭

ಕೊಂಬು ಕಹಳೆ ರಾಯ ಭೇರಿ ತಂಬಟೆ ಪರೆ
ಚಂಬಕ ಮುವ್ವುರಿ ತುತ್ತೂರಿ ।
ಮುಂಬರಿದೆಸವೆ ನಾನಾ ವಾದ್ಯಗಳಾ
ಡಂಬರದೊಳಗೈತಂದ ॥ ೫೮

ಬಿರುದಿನ ಕಂಡೆಯ ರಾಯ ಗಜಾಂಕುಶ
ವುರುತರ ಗಂಗನ ಗೋಲು ।
ಮೆರೆವ ಮುತ್ತಿನ ಚಂಡು ವರ ಪಚ್ಚೆಯಲಸು
ಕರಿಯೆಂಬ ಗಜಗಳ್ಳಿದುವು ॥ ೫೯

ವಿಾಸರ ಗಂಡ ಬೊಯಲ ಪೋತರಾಜ ಕ
ಟ್ಟಾಸುರ ಮದನ ಗೋಪಾಲ ।
ಕೇಸುರಿ ಗಣ್ಣಾಳ ನರಸಿಂಹನೆನಿಸುವ
ಭಾಸುರ ಗಜಗಳ್ಳಿದುವು ॥ ೬೦

ಪರಮ ಸಂತೋಷದೆ ಮುಖ ಮಜ್ಜನವೆ ಮಾಡಿ
ಪೆರೆ ಸೊಸಲಿನಲಿ ಕತ್ತುರಿಯ ।
ಸು ರುಚಿರ ತಿಲಕವ ರಚಿಸಿ ಸು ಮಾಂಗಲ್ಯ
ತರುಣಿ ಯೊರ್ವಳ ಕರಿಸಿದಳು ॥ ೫೩

ಇರುಳಿನಗ್ರದಲಿ ತಾ ಕಂಡ ಕನಸ ಪೇಳಿ
ವರ ಸುಫಲವ ಬಿಸ ಗೊಳಲು ।
ಪಿರಿದೆನಿಸುವ ಕೋಭನ ವಾಕ್ಯವ ಸತಿ
ಗೊರೆದಳಾ ಸಾಧ್ವಿ ಸಂತಸದೆ ॥ ೫೪

ಎಲೆ ತಾಯೆ ನಿನ್ನುದರದೆ ಶೌರ್ಯ ಬಲ ಧರ್ಮ
ವಿಲಸಿತ ಕೀರ್ತಿಯ ಧರಿಸಿ ।
ಜಲಜಾಹ್ಷ ನರ ಸಿಂಹ ಪುತ್ರನಾಗುದಿಸುವ
ಫಲವಿದೆಂದುಸಿರಿದಳೂಲಿದು ॥ ೫೫

ಸಕಲ ಭೂಮಿಪಾಲಕನಾಗಿ ಒಹು ಶತ್ರು
ನಿಕರವ ಜಯಿಸಿ ಸಂತಸದೆ ।
ಅಕಳಂಕರಹ ಪುತ್ರ ಪೌತ್ರ ರುತ್ಸವದಲಿ
ಸುಕ ಬಾಳುವನೆಂದಳವಳು ॥ ೫೬

ಎನಲಾ ಶುಭ ವಾಕ್ಯವ ಕೇಳಿ ಸಾಧ್ವಿಗೆ
ಕನಕ ಭೂಷಣಗಳನಿತ್ತು ।
ವನಿತೆಯು ಬೀಳ್ಕೊಟ್ಟು ನರ ಸಿಂಹ ಮೂರ್ತಿಯ
ಜನಪನಂಗನೆ ಧ್ಯಾನಿಸಲು ॥ ೫೭

ಆ ತಾಯ ಪರಮ ಭಕ್ತಿಗೆ ಕೃಪೆಯಿಂದಲಾ
ಪ್ರೀತಿಯೊಳ್ನರ ಹರಿ ನಲಿದು ।
ಭೂ ತಳಕಚ್ಚರಿ ಯೆನೆ ಗರ್ಭದಲಿ ನಿಂತ
ರೀತಿಯನೇನ ಬಣ್ಣಿ ಸುವೆ ॥ ೫೮

ಅಸಿ ನಡು ಬಳಿದುದು ಕಮಲ ಕುಟ್ಮಲದೊಳು
ಬೆಸುಗೆ ಯಾಂತುವು ತುಂಬಿಗಳು ।
ಮಿಸುಗಿ ದರ್ಪಣ ಧವಳಿಸಿದುದು ಭೂಸನ
ಶಶಿ ಮುಖಿ ಗರ್ಭವ ಧರಿಸೆ ॥ ೪೯

ಬಳಿಕ ಬಯಕೆ ಪೆರ್ಚಿದುದು ರಾಜಿಸುತಿಹ
ವಳಿಗಳು ಮರಸಿದುವಾಗ ।
ನಳಿನದಳಾಕ್ಷ ನರಸಿಂಹನ ಮೂರುತಿ
ಬಳೆಯಲಂಗನೆಯು ಗರ್ಭದಲಿ ॥ ೫೦

ಪಟ್ಟದ ರಾಣಿ ಗರ್ಭಿಣಿ ಯಾದುದರಿತಾಗ
ನೆಟ್ಟನೆ ಹರುಷವ ತಾಳಿ ।
ಕೊಟ್ಟನು ದಾನಗಳನು ದ್ವಿಜ ನಿಕರಕೆ
ಬೆಟ್ಟದ ಚಾಮು ಭೂ ಪಾಲ ॥ ೫೧

ತುಂಬಲು ನವ ಮಾಸ ಶುಭವಾದ ನರ ಸಿಂಹ
ಗಿಂಬಾದ ವರ ಜಯಂತಿಯಲಿ ।
ಕುಂಭಿನಿಗಧಿಕ ಶೂರನ ಕುವರನ ಗುರು
ಎಂಬೆ ಪಡೆದಳುತ್ಸವದೆ ॥ ೫೨

ಮೊರೆದುವು ಮಂಗಳ ವಾದ್ಯ ಮುತ್ತಿನ ಸೇಸೆ
ಗರೆದರಂಗನೆಯರರ್ತಿಯಲಿ ।
ಧರೆ ನಲಿದುದು ಭೂ ಸುರರು ದಕ್ಷಿಣೆಗಳಿಂ
ಸಿರಿವಂತರಾದರು ಹ್ಲಾದೆ ॥ ೫೩

ಪನ್ನೆರಡನೆಯ ದಿವಸ ನಾಮ ಕರಣವ
ಚೆನ್ನಾಗಿ ರಚಿಸಲು ದ್ವಿಜರ ।
ಸನ್ನುತ ಬೆಟ್ಟದ ಚಾಮೇಂದ್ರ ಕರಸಿಯು
ತ್ಯನ್ನತ ಹರುಷದೊಳಾಗ ॥ ೫೪

ಕುವೆರಗೆ ಶುಭ ನಾಮ ಕರಣವ ರಚಿಸುವ
ವಿವರವೇನೆಂದು ಭೂ ಪಾಲ ।
ತವೆ ಹರುಷದೆ ಬೆಸ ಗೊಳಲು ಭೂ ಸುರರು
ತ್ಸವ ಮಿಗಲುಸಿರಿದರೊಲಿದು ॥ ೩೫

ಕರುಣಾ ಕರ ನರ ಸಿಂಹನ ನೀವತಿ
ಪರಮ ಭಕ್ತಿಯಲಿ ಪೂಜಿಸಲು ।
ಹರಿ ನಿನುಗೊಲಿನು ನಿನ್ಮುದವದೆ ಜನಿಸಿದ
ಪರಿ ಯಲ್ಲದಿನೆ ನರ ಶಿಶುವೇ ॥ ೩೬

ಪರಿಕಿಸೆ ಮಧು ಮಾಸದ ಶುಕ್ಲ ಪಕ್ಷದ
ವರ ಚತುರ್ದಶಿಯ ಸಂಜೆಯಲಿ ।
ನರ ಸಿಂಹನ ಜಯಂತಿಯಲಿ ಜನಿಸಿದೀ
ತರಳನು ನರ ಸಿಂಹನೈಸೆ ॥ ೩೭

ಇಸಗೆ ಕಂತೀರವ ನರಸೇಂದ್ರನೆಂದು
ತ್ಸವದಲಿ ನಾಮ ಕರಣವ ।
ವಿವರದೆ ರಚಿಸ ಬೇಕೆಂದು ಭೂ ಸುರರೆನ
ಲವನೀಶ್ವರನೊಪ್ಪಿ ಗೊಂಡ ॥ ೩೮

ಪರಮ ಮಂಗಳ ಪುಣ್ಯಾಚರ್ನೆ ಶುಭ ಹೋಮ
ಸುರುಚಿರ ಸಕಲ ದಾನಗಳ ।
ವಿರಚಿಸಿ ಕುಂತೀರವ ನರಸೇಂದ್ರನೆಂ
ದೊರೆದರು ನಾಮ ಕರಣವನು ॥ ೩೯

ಸುಲಲಿತ ಮಂಗಳ ವಾದ್ಯ ಘೋಷದೆ ದೂರ್ವೆ
ಸಲೆ ದದಿ ಲಾಜೆಗಳ್ವರಸಿ ।
ಹೊಳೆವ ಮುತ್ತಿನ ಸೇಸೆ ದಳಿದು ಕುಮಾರನ
ಲಲನೆಯರ್ ದರಸಿನರೊಲಿದು ॥ ೪೦

ಮುತ್ತಿನಾರತಿ ರನ್ನದಾರತಿಗಳ ತಂದು
ಮುತ್ತೈದೆಯರೆತ್ತಿ ನಲಿದು ।
ಉತ್ತಮ ಶುಭ ಶೋಭನದೆ ತರಳನ
ನರ್ತಿಯಿಂದಲಿ ಪಾಡಿದರು ॥ ೨೧

ಪಿರಿದು ನೈಷ್ಟಾನ್ನ ಭೋಜನ ದಾನಗಳಿಂದ
ಧರಣೀ ಸುರರಂಗ ನಲಿದು ।
ವರ ಮಂತ್ರಾಹ್ವತೆ ಗರೆದು ಭೂ ಪನ ಸು
ಸ್ಥಿರ ಕುಮಾರನ ಪರಸಿದರು ॥ ೨೦

ಎಸೆವ ಶೋಭನ ತಿಥಿ ವಾರ ಸು ಲಗ್ನದೆ
ಮಿಸುನಿ ದೊಟ್ಟಿಲನಳವಡಿಸಿ ।
ವಸುಧೇಶನ ಸು ಕುಮಾರನನಿಂಬಿಟ್ಟು
ಶಶಿಮುಖಿಯರು ಪಾಡಿದರು ॥ ೨೨

ಕಂದ ಜೊ ಸೋಮ ವಂಶಾಬುಧಿ ಪರಿ ಪೂ
ರ್ಣೇಂದು ಜೊ ತರುಣೀ ಮಣಿಯರ ।
ಬಂಧುರ ನೇತ್ರಾಬ್ಜಗಳಿಗೆ ರಾಜಿಸುವೆಬ್ಜ
ಬಂಧು ಜೊ ಯೆಂದು ಪಾಡಿದರು ॥ ೨೪

ಬಳಿಕ ಪುರಂಧ್ರಿಯರೀ ಪರಿಯಲಿ ಪಾಡಿ
ನಲಿದು ಪರಸಿ ಸೇಸೆ ದಳಿದು ।
ಬಲವಿಂದ ಸು ಕುಮಾರನ ಮುದ್ದಿಸಿ ತವ್ಮ
ನಿಳಯಕೆ ಗಮಿಸಿದರಂದು ॥ ೨೫

ಇತ್ತಲಾ ಪುರ ಪುರಂದರಿಸತಿ ಕೆಂಪ ಭೂ
ಪೋತ್ತಮನುದರ ವಾರ್ಧಿಯಲಿ ।
ಉತ್ತಮ ಶುಭ ತಿಥಿ ವಾರ ಲಗ್ನದೆ ಸುತ
ರುತ್ತರೋತ್ತರದೆ ಪುಟ್ಟಿದರು ॥ ೨೬

ರವಿ ಶಶಿಗಳು ನರ ರೂಪಿನೊಳವನಿಯೊ
ಳವತರಿಸಿವ ತೆರದಿಂದ ।
ಭುವನೇಶ ಕೆಂಪ ರಾಜೇಂದ್ರನ ಗರ್ಭದೆ
ಕುವರರುದ್ಭವಿಸಿದರಾಗ ॥ ೫೫

ಧರಣೀ ಸುರ ಮಂತ್ರ ಮುಖದಲಿ ವೆರ ನಾಮ
ಕರಣವ ರಚಿಸಿ ಭೂ ಪಾಲ ।
ಸ್ಮರ ರೂಪ ನಂಜ ರಾಜೇಂದ್ರ ಲಿಂಗೇಂದ್ರನೆಲ
ದುರೆ ಪೆಸರಿಟ್ಟನರ್ತಿಯಲಿ ॥ ೫೪

ಹರುಷದೊಳಗ್ರಜನಾತ್ಮಜನನು ತನ್ನ
ಪೊರೆಗೆ ಬರಿಸಿ ಕೊಂಡು ನಲಿದು ।
ಗುರುವಂಬಿಕೆ ತನ್ನ ಪುತ್ರ ವಾತ್ಸಲ್ಯದೊಳಾ
ತರುಣರ ಸಲಹಿದಳೊಲಿದು ॥ ೫೯

ಸುಳಿ ಗುರುಳರಳಲೆ ಕರ್ಣ ಕುಂಡಲ ಕಟಿ
ಗಳವಟ್ಟ ಹೊನ್ನುಡಿ ದಾರ ।
ಹೊಳೆವ ರನ್ನದ ಗೆಜ್ಜೆ ಸು ಕುಮಾರ ತರ ಪಾದ
ಕಳವೆಟ್ಟು ಮೆರೆದರರ್ತಿಯಲಿ ॥ ೫೦

ತೊದಲು ನುಡಿಗಳಂಬೆಗಾಲು ದಟ್ಟಿಡಿ ಮುದ
ವೊದವಿದ ಧೂಳಾಟದಿಂದ ।
ಪದುಳದೆ ಬಾಲ ಲೀಲೆಯು ತೋರಿ ಸಕಲರ್ಗೆ
ಚದುರ ಕುಮಾರರೊಪ್ಪಿದರು ॥ ೫೧

ಹರಿ ಯೊಡ ಗೂಡಿ ಭೀಮಾರ್ಜುನರುಗಳಾಗ
ಪರಿವಾದ ಬಾಲ ಲೀಲೆಯಲಿ ।
ಪರಿ ಶೋಭಿಸುತೆ ನಂಜೇಂದ್ರ ಲಿಂಗೇಂದ್ರರು
ನರಸೇಂದ್ರನೊಡನೊಪ್ಪಿದರು ॥ ೫೨

ರಘು ಪತಿಯೊಡನೆ ಲಕ್ಷ್ಮಣ ಶತ್ರುಘ್ನರು
ವೊಗುವಿಗೆ ಭಯ ಭಕ್ತಿಯಲಿ ।
ಮಿಗೆ ರಂಜಿಪೊಲು ಕಂಠೀರವೇಂಬ್ಯನ ಕೂಡೆ
ಸು ಗುಣ ಶೇಖರರೊಪ್ಪಿದರು ॥ ೪೩

ದ್ವಾದಶಾಬ್ದದೊಳಾಗ ಕ್ಷತ್ರಿಯ ಧರ್ಮದೊ
ಳಾದುದಂದವೆರಿಗುತ್ಸಾಹ ।
ಮೇದಿನೀ ಸುರಿಂದ ಸಕಲ ವಿದ್ಯಾಭ್ಯಾಸ
ವಾದುದಾ ಸು ಕುಮಾರರಿಗೆ ॥ ೪೪

ತುರಗದೇರಾಟ ಗಜಾರೋಹಣ ಮುಖ್ಯ
ವೆರ ಧನುರ್ವೇದ ಮುಂತಾದ ।
ಪರಿ ಪರಿಯಾಯುಧ ಸಾಧನೆಗಳನಾಗ
ಪರಿ ಪೂರ್ಣದಲಿ ಸಾಧಿಸಿದರು ॥ ೪೫

ಸಾಂಗ ಭಲ್ಲೆಯ ಬಾಕು ಹಿಂಗದೆ ಕಠಾರಿ
ಮಂಗಳ ಕರ ಚಕ್ರಾಯುಧದ ।
ಅಂಗವಣೆಯ ಕಲಿತರು ಬೇಗದಲಿ ಶ್ರೀ
ರಂಗ ಭಕ್ತರು ಮುದದಿಂದ ॥ ೪೬

ಸಿತ ಪಕ್ಷದ ಚಂದ್ರನಂತೆಯು ದಿನ ದಿನ
ಕತಿಶಯ ಕಳೆ ಪೆರ್ಚುತಿರಲು ।
ನುತ ಕೀರ್ತಿ ಕೌಮುದಿಯಿಂದಲೊಪ್ಪಿದನಾ
ಕ್ಷಿತಿ ಪತಿ ಕಂಠೀರವೇಂದ್ರ ॥ ೪೭

ಸು ಲಲಿತವಹ ಧರ್ಮ ಕೀರ್ತಿ ಪ್ರತಾಪಗ
ಳಳವಟ್ಟು ಪುರುಷ ರೂಪಾಗೆ ।
ಇಳೆಯೊಳು ಪರಿ ಶೋಭಿಸನಾ ಧರಣೀಶ
ಕುಲ ರತ್ನ ಕಂಠೀರವೇಂದ್ರ । ೪೮

ರೂಢಿಯ ಜೌವನದೊಡನೆ ಪರಾಕ್ರಮ
ಮೂಡಿರಲಾತ್ಮ ಜಾತನಿಗೆ ।
ನೋಡಿ ಸಂತಸದಿಂದ ಪಟ್ಟಾಭಿಷೇಕವ
ಮಾಡಲುಜ್ಜುಗಿಸಿದ ನೃಪತಿ ॥ ೮೯

ಶುಭ ತಿಥಿ ವಾರ ನಕ್ಷತ್ರದೆ ಭೂಮಿಯ
ವಿಭುಗಳಲ್ಲರ ಕೂಡಿ ಕೊಂಡು ।
ತ್ರಿ ಭುವನ ನಲಿಯೆ ಕಂಠೀರವ ಭೂಪಗೆ
ವಿಭವದೆ ಪಟ್ಟ ಗಟ್ಟಿದರು ॥ ೯೦

ಪಟ್ಟಾಭಿಷೇಕದ ಶುಭ ಮುಹೂರ್ತದೊಳಾಗ
ನೆಟ್ಟನೆ ಭೂಪರೈತಂದು ।
ಕೊಟ್ಟು ಕಾಣಿಕೆ ಕಪ್ಪಗಳ ನಲವಿಂ ಮನ
ಮುಟ್ಟಿ ಯೊಲೈಸಿದರಾಗ ॥ ೯೧

ಮಣಿ ಕನಕಾದಿ ಸಮಸ್ತ ದಾನಗಳಿಂದ
ದಣಿದು ಭೂ ಸುರರು ಯಾಚಕರು ।
ಗುಣ ಮಣಿ ನರಸ ರಾಜೇಂದ್ರ ಚಂದ್ರನೆನ
ಪ್ರಣುತಿಯು ಮಾಡಿದರೊಲಿದು ॥ ೯೨

ಪೊಡವೀಶ ನುನ್ನೆಯ ಪರಿವಾರ ಮಂತ್ರಿಗ
ಳುಡು ಗೊರೆ ಯುತ್ಸವಗಳಲಿ ।
ಬಡನೆ ಸನ್ಮಾನವ ತಾಳಿ ಸಂತೋಷವ
ಪಡೆದರೇ ವೇಳ್ವನಚ್ಚರಿಯ ॥ ೯೩

ಚಂದ್ರನ ಶಾಂತಿ ದಿನೇಂದ್ರನ ತೇಜ ಬ
ಲೀಂದ್ರನ ಸಿರಿ ರಂಜಿಸುವ ।
ಇಂದ್ರನ ಭೋಗ ಕಂಠೀರವ ನರಸ ರಾ
ಜೇಂದ್ರನಿಗಳವಟ್ಟುವಾಗ ॥ ೯೪

ಮುಖ ಪದ್ಮದಲಿ ಸಿರಿ ದೇವಿ ಭುಜದೆ ವರ
ಪ್ರಕಟಿತ ಜಯ ಲಕ್ಷ್ಮಿ ದೇವಿ ।
ಅಕಳಂಕನ ನಾಲಿಗೆಯೊಳು ವಾಗ್ದೇವಿ
ಸುಖದಿಂದ ನೆಲಸಿಹರೊಲಿದು ॥ ೯೫

ಆ ಮಹೀಶನ ಕುಲ ದೇವತೆ ಚಾಮುಂಡಿ
ಸ್ವಾಮಿ ತ್ರಿಣೇತ್ರ ಸರ್ವೇಶ ।
ಕಾಮ ಜನಕ ಲಕ್ಷ್ಮೀ ಕಾಂತನಿವರು ಸು
ಪ್ರೇಮದೆ ಮೈಗಾದಿಹರು ॥ ೯೬

ಸಿರಿರಂಗೇಶನ ಕೃಪೆ ಭೂಪನಂಗಕೆ
ಪಿರಿದು ವಜ್ರಾಂಗಿ ತಾನಾಗಿ ।
ಮೆರೆದಿರೆ ಕಂಠೀರವ ನರಸೇಂದ್ರನ
ಪರಮ ಶೌರ್ಯವನೇ ವೇಳ್ವ ॥ ೯೭

ಚಲದಂಕ ಕಂಠೀರವ ನರಸೇಂದ್ರನ
ಬಲು ಶೌರ್ಯವೆಂದೆಂಬ ಚಕ್ರ ।
ಮೆಲೆವರಿ ನೃಪರ ಖಂಡಿಸುತಂದು ದೆಸೆಯೊಳು
ಸಲೆ ತಿರುಗುತ್ತಿಹುದಾಗ ॥ ೯೮

ಅದರಿಂದ ಪೂರ್ವದ ಚಕ್ರವರ್ತಿಗಳ ಸಂ
ಪದವೇಳಿಗೆಯೊಳಗೊಲಿದು ।
ಮುದದೆ ಕರ್ಣಾಟಕ ಚಕ್ರೇಶ್ವರನೆಂ
ಬುದಿತ ಪ್ರತಾಪದೆ ಮೆರೆದ ॥ ೯೯

ದೇವ ಬ್ರಾಹ್ಮಣ ಪಾಲನೆನಿಸಿ ಕೊಂ
ಡಾವಾವ ಧರ್ಮದೊಳ್ ಯುಳಿ ।
ಭೂ ವರ ಕಂಠೀರವ ನರಸೇಂದ್ರನು
ಠೀವಿಯಲಿರುತೊಂದು ದಿವಸ ॥ ೧೦೦

ಕರೆದು ತನ್ನಾಪ್ತ ಮಂತ್ರಿಗಳನೇಕಾನ್ತದೆ
ಹರುಷದೆ ನುಡಿದನಿಂತೆಂದು ।
ನೆರೆ ನಮ್ಮ ದಂಡಿಗೆ ದಳ ಪತಿ ಯೊಬ್ಬನ
ವಿರಚಿಸ ಬೇಕು ನಾವೆನಲು ॥ ೧೦೧

ಕಂಜ ವೈರಿಯ ಶಾಂತಿ ಕಾಮನ ಬಲು ರೀತಿ
ಯಂಜನೆ ಯಣುಗನ ಶೌರ್ಯ ।
ರಂಜಿಪ ದಿನ ನಾಥನ ತೇಜವೀ ವರ
ನಂಜೇಂದ್ರಗೀ ಯೆಂದರವರು ॥ ೧೦೨

ಎಂದೆಂಬ ಮಂತ್ರಿಗಳುಚಿತ ವಚನಕಾ
ನಂದದೆ ನರಸ ರಾಜೇಂದ್ರ ।
ಚೆಂದದೆ ದಳವಾಯಿ ಪಟ್ಟವ ನಂಜೇಂದ್ರ
ಗಂದು ಕಟ್ಟಿದನರ್ತಿ ಯಲಿ ॥ ೧೦೩

ರಾಮ ಚಂದ್ರನ ಸೇವೆಗೆ ಕಲಿ ಹನುಮಂತ
ನೇಮದೆ ತಗುಲಾದಂತೆ ॥
ಭೂಮಿಪ ಕಂಠೀರವೇಂದ್ರಗೆ ನಂಜೇಂದ್ರ
ತಾ ಮನೋಹರದೊಳೂಪ್ಪಿದನು ॥ ೧೦೪

ಬಿಡದೆ ತಾ ಮಾಡುವ ದಾನ ಧರ್ಮಗಳು ತ
ನ್ನೊಡೆಯ ಕಂಠೀರವೇಂದ್ರನಿಗೆ ।
ಕಡು ಪುಣ್ಯವೆಂದು ಮಾಷುತ ನಂಜ ರಾಜೇಂದ್ರ
ಸಡಗರದೊಳಗೊಪ್ಪಿದನು ॥ ೧೦೫

ಇಂತೊಪ್ಪುತಿಪ ದಳ ಪತಿ ಸಹ ನರಸ ಭೂ
ಕಾಂತ ಶ್ರೀರಂಗ ಪಟ್ಟಣದೆ ॥
ಸಂತತ ಸಕಲ ರಾಜ್ಯವ ಪಾಲಿಸುತ
ತ್ಯಂತ ಸಂಭ್ರಮದೊಳೂಪ್ಪಿದನು ॥ ೧೦೬

ಬಳಿಕ ಸು ಧರ್ಮ ದೇವತೆ ಭೂ ವನಾಳು
ವಿಳಯೊಳು ಪರಿ ಪೂರ್ಣವಾಗಿ ।
ಬಲು ಹರುಷದಲಿ ರಾಜಿಸುವೆಳಂಬಲ್ಲಿಗೆ
ಸುಲಲಿತ ಸಂಧಿ ಸಂಬಂಧಿ ॥ ೧೦೬

ನಾಲ್ಕನೆಯ ಸಂಧಿ ಸಮಾಪ್ತಂ.

ಈನೆಯ ಸಂಧಿ.

ಶ್ರೀ ರಂಗೇಶ ಮಾಹಾತ್ಮ್ಯ ವರ್ಣನಂ

ಸೂಚನೆ ॥ ಜಲಜಾಕ್ಷ ರಂಗ ಧಾಮನ ಕಾವೇರಿಯ ।
ಲಲಿತ ಮಹಿಮೆಯ ಬಣ್ಣಿಸುವೆ ॥

ಕಮಲ ಧರನ ಕಂಡು ನಿಮಿಷದೊಳತಿ ಸಂ
ಭ್ರಮದೊಳುಬ್ಬಿದನ ಮೊಮ್ಮಗನ ।
ಕ್ರಮ ಗೆಡಿಸಿದನ ಭಕ್ತನ ಕಾಳಗದೆ ಗೆದ್ದ
ರಮೆಯ ವಲ್ಲಭ ಪಾಲಿಸೊಲಿದು ॥ ೧

ಎಸೆವ ಕರ್ಣಾಟಕವೆಂಬ ನಾರಿಯ ಮುಖ
ಬಿಸರುಹದಂತೆ ರಾಜಿಸುತ ।
ಜಸ ಪಡೆದುದು ಶ್ರೀ ರಂಗ ಪಟ್ಟಣ ಭಾಗ್ಯ
ದೆಸಕದೊಳತಿ ರಮ್ಯವಾಗಿ ॥ ೨

ಇಳೆಯ ರಾಜರ ಭಾಗ್ಯ ವಧುಗಳೀ ಭೂಪನ
ಬಲು ಶೌರ್ಯ ಚಲುವಿಕೆಗೊಲಿದು ।
ನೆಲಸೆ ಶ್ರೀ ರಂಗ ಪಟ್ಟಣವೆಂಬ ಪೆಸರು ಬಂ
ದಳವಟ್ಟುದೀ ಪುರ ವರಕೆ ॥ ೩

ಶಶಿ ರವಿ ತಾ ಸಲೀ ಪುರವ ಸಗ್ಗವನೊಲ್ದು
ಬಿಸರುಹಾಸನ ತೂಗುತಿರಲು ।
ವೊಸೆದದು ಲಘುವಾಗಲೀ ಪುರ ಗುರು ವಾಗೆ
ವಸುಧೆಗಚ್ಚರಿ ಯೆನಿಸುವುದು ॥ ೪

ಸಚ್ಚಿದಾನಂದ ಸರ್ವೇಶ್ವರ ಧರೆಯೊಳು
ಮೆಚ್ಚಿರಿಪಸುರ ಸಂಹಾರಿ ।
ಅಚ್ಯುತನಾದಿಕೇಶವನಪ್ರಮೇಯ ಶ್ರೀ
ಪಶ್ಚಿಮ ರಂಗೇಶನಿಹನು ॥ ೫

ಭಾವಜಪಿತ ಭಕ್ತವತ್ಸಲ ಭವದೂರ
ರಾವಣಾಂತಕ ರವಿಯರಸ ।
ಪಾವನ ಮೂರ್ತಿ ಪಶ್ಚಿಮ ರಂಗೇಶ ಕೃ
ಪಾವಲಂಬನನೊಪ್ಪುತಿಹನು ॥ ೬

ತನ್ನ ನೆನೆವ ವರ ಭಕ್ತರ ಹೃತ್ಕಮಲದ
ಕರ್ಣಿಕೆಯೊಳು ತಾ ನೆಲಸಿ ।
ಸನ್ನುತಸಕಲ ವರಗಳೀವ್ರತಾಗ ಪ್ರ
ಸನ್ನ ಮೂರುತಿ ಯೊಪ್ಪುತಿಹನು ॥ ೭

ಸ್ಮರ ಪಿತ ನೀಲ ಮೇಘ ಶ್ಯಾಮನಾ ಪುರ
ವರದೀಶಾನ್ಯದ ಗಿರಿಯ ।
ಶಿರದೊಳೊಪ್ಪಿರಲಾತನ ತನು ಕಾಂತಿಯಿಂ
ಕರಿಘಟ್ಟವೆಂದು ಪೆಸರಾಯ್ತು ॥ ೮

ಸಕಲ ಜನರಿಗಿಷ್ಟಾರ್ಥ ವನೀಯುತ
ಭಕ್ತವತ್ಸಲನು ತಾನಾಗಿ ।
ಅಕಳಂಕ ಮೂರ್ತಿ ಬೇಟೆಯ ರಾಯನಾ ಗಿರಿ
ಶಿಖರದೊಳಗೆ ನೆಲಸಿಹನು ॥ ೯

ದೇಶಕಧಿಕ ಪುಣ್ಯ ಕ್ಷೇತ್ರವೆಂದೈದಿ
ಕಾಶಿಯ ವಿಶ್ವೇಶ್ವರನು ।
ಭಾಸುರ ಮಣಿಕರ್ಣಿಕೆ ಸಹಿತಿರುವ ವಿ
ಲಾಸವನೇನ ಬಣ್ಣಿಸುವೆ ॥ ೧೦

ಸಿರಿ ಧರ ಪಶಿ ಮ ರಂಗನೀ ಪುರದಲ್ಲಿ
ಸ್ಥಿರವಾಗಿ ನೆಲಸಿದ ಬಗೆಯ ।
ಹರುಷದೊಳೂರೆನು ಧರೆಯ ಜನರು ನೆರೆ
ಪರಮ ಭಕ್ತಿಯುಲಿ ಲಾಲಿಸ್ಪುದು ॥ ೧೧

ಪಿರಿದು ಗೋದಾವರಿ ತೀರದೆ ಗೌತಮ
ವರ ಮುನೀಶ್ವರನಿರುತಿರಲು ।
ಬರಲು ದುರ್ಭಿಕ್ಷ ಭೂ ಸುರರೈದಿ ಯಾತನೊ
ಪ್ಪಿರುವ ಮಂದಿರವ ಸಾರಿದರು ॥ ೧೨

ಕಂಡಾಗ ದ್ವಿಜರ ಮೇಲಣ ಕರುಣದೆ ಮುನಿ
ಪುಂಡರೀಕಾಕ್ಷನ ಭಜಿಸಿ ।
ಕೊಂಡಾ ಯವೆಯ ಬೀಜವ ಬಿತ್ತಿ ಧಾನ್ಯ
ದಂಡೆಯೊಳವರ ರಕ್ಷಿಸಿದ ॥ ೧೩

ಮುನಿ ಮಾಡಿದುಪಕಾರಕೆ ಯುಪಕಾರವ
ನೆನೆದಾಗ ಭೂಸುರ ನಿಕರ ।
ಘನ ಮಹಿಮನನಲ್ಲಿಂದಲೇಳಿಸಲೊಂ
ದನುಪ ನೆಗಳ್ದರೇ ವೇಳ್ವ ॥ ೧೪

ಸಂತುಷ್ಟಿ ರಾಜ್ಯಕ್ಕೆ ಬಂತು ಪೋಗುವೆವೆನೆ
ಯಂತರಂಗದೆ ಕೋಪಿಸುವನು ।
ಎಂತು ನಾವಿಲ್ಲಿಂದ ಹೊರಡುವ ಯತ್ನ ವೆಂ
ದಂತದ ಯೋಚನೆ ಗೈದು ॥ ೧೫

ನಾವೀ ಮುನಿಗೆ ಸುಮ್ಮನೆ ಪೋಪೆವೆನೆ ಶಾಪ
ವೀವನೀತನಿಗೆ ನಿಂದೆಯನು ।
ತೀವ ಬೇಕೆಂದಾಗ ವಿಪ್ರರು ಕಪಟದ
ಗೋವ ನಿರ್ಮಿಸಿದರು ಕ್ಷಣದೆ ॥ ೧೬

ಬಂದಾಗ ಪಶು ಯವೆ ಜೆಳೆಯು ಭಕ್ಷಿಸುತಿರ
ಲಂದಾ ಮುನಿಪನ್ಯೆತಂದು ।
ಮುಂದಿರ್ದ ಗೋವ ಕೈಯಿಂ ತಡಪಲು ಬೀಳು
ತಂದು ಜೀವವೆ ಜಾಡಿಸಿದುದು ॥ ೧೩

ಕುಟಿಲವೆಂದರಿಯದೆ ಗೌತಮ ಮುನಿ ಯಾಗ
ಚಟುಲ ಗತಿಯೊಳು ದುಃಖಿಸುತ ।
ಘಟಿಸಿತು ಗೋವಧೆ ಯಿನ್ನೇ ಗೈವೆನು
ವಟ ಪತ್ರ ಶಾಯಿ ಪೊರೆ ಯೆಂದು ॥ ೧೪

ಬಳಿಕ ಗೋ ಹತಿ ಬಂದಿತೆಂದಾಗ ಯತಿ ಪತಿ
ಫಳಿಲನೆ ವಿಪ್ರರ ಕೇಳ ।
ತಳುವದೆ ಭೂ ಪ್ರದಕ್ಷಿಣಕೆ ಪೋಗೆಂದಾಗ
ತಿಳುಹಲು ಜ್ಞಾನ ದೃಷ್ಟಿಯಲಿ ॥ ೧೫

ವರ ಮುನಿ ಕಪಟವೆಂದರಿದು ವಿಪ್ರರನಾಗ
ನರೆದ ಮರುಳರು ದಾರಿದ್ರ್ಯ ।
ಪರಿಪೂರ್ಣರಾಗೆಂದು ಶಪಿಸಿಕೋಪದೊಳಂದು
ತೆರಳಿದ ಭೂ ಪ್ರದಕ್ಷಿಣಕೆ ॥ ೧೬

ಕಾಶಿ ಪ್ರಯಾಗೆ ಗಯಾ ಕ್ಷೇತ್ರವೊಡ್ಡಿಯ
ಭಾಸುರ ತ್ರಿ ಜಗತ್ಪತಿಯ ।
ಸೂಸುವ ಪರುಷದೆ ಸೇವಿಸಿ ಶ್ರೀ ರಂ
ಗೇಶನ ಪುರಕ್ಕೈತಂದ ॥ ೧೭

ಶ್ರೀ ರಂಗ ಪತಿಯ ಭಜಿಸಿ ದಿವ್ಯ ವರನಾ
ಪಾರಿಕಾಂಕ್ಷಿಪನಾಗ ಬೇಡೆ ।
ಕಾರುಣ್ಯದಿಂದೆ ನೀ ನೆನೆದಲ್ಲಿಗೆ ಬಂದು
ಸೇರಿಪೆ ವರವೆ ಪೋಗೆಂದ ॥ ೧೮

ಎನಲು ಹಸಾದವೆನುತ ಕಾವೇರಿಯ
ಘನ ತಟ ಪುಣ್ಯ ಕ್ಷೇತ್ರಗಳ ।
ಮನದ ಹರುಷದೆ ನೋಡುತ ಬರೆ ಕಂಡನು
ಮುನಿ ಪತಿಗಳ ಮೊತ್ತವನು ॥ ೨೩

ನರ ಶಂಭು ಬೂಧಾಯನಾರ್ಷ್ಟಿ ಷೇಣನು
ಗುರು ಪಾರಾಶರ ಭೃಗು ಶುಕರು ।
ಗಿರಿಜೆ ಚಂದ್ರಮ ಬಿಲ್ವರಿರೆ ತಪಸಿನೊಳಾಗ
ಪರಮ ಗೌತಮ ಮುನಿ ಕಂಡ ॥ ೨೪

ಕಂಡಾಗ ನಗುತಲಾ ಮುನಿ ವರೇಣ್ಯರ ಪಾದ
ಪುಂಡರೀಕಗಳಿಗೆ ನಮಿಸಿ ।
ಕೊಂಡಾಡಿ ಬಹು ಭಕ್ತಿಯಲಿ ಗೌತಮ ಬೆಸ
ಗೊಂಡನೇನೆಂಬೆನಚ್ಚರಿಯ ॥ ೨೫

ಎಲೆ ಮುನಿಗಳಿರ ನೀವೇನು ಕಾರಣನಿಲ್ಲಿ
ಬಲು ತಪಗಳನು ಮಾಡುವಿರಿ ।
ಸ್ಥಳಮಾಹಾತ್ಮ್ಯೆಯನೆನಗರುಪಿನೆ ಮುನಿ
ಕುಳ ನುಡಿದುದು ಪ್ರೀತಿಯಿಂದ ॥ ೨೬

ಬಾರೆಲೆ ಗೌತಮ ಬಹು ಜನ್ಮ ವಿರಚಿತ
ಘೋರ ಪಾಪಗಳನು ನೀಗಿ ।
ಸೇರಿಪುದುತ್ತಮ ಗತಿಗೀ ಸು ಕ್ಷೇತ್ರವು
ದಾರದಿಂ ತನ್ನ ಸೇರಿದರ ॥ ೨೭

ಆವಾವ ಪುಣ್ಯ ಸ್ಥಳಕಿಂತಲೀ ಕ್ಷೇತ್ರ
ಪಾವನವೆಂದು ರಂಜಿಸಲು ।
ನಾವಿಹೆವೆನೆ ಮುನಿ ಪತಿ ಕೇಳಿ ಬಳಿಕ ಕೃ
ಪಾವಲಂಬನನ ಧ್ಯಾನಿಸಿದ ॥ ೨೮

ಸು ಲಲಿತ ಮುನಿಗಾದಪವಾದ ಗೋ ಹತಿ
ತೊಲಗಲಾ ಸ್ಥಳ ಮಹಿಮೆಯಲಿ ।
ನಲಿದು ನಿರ್ಮಲ ಚಿತ್ತನಾಗಿ ಯಾಗುತ್ತಮೆ
ಜಲಜಾಕ್ಷನನು ನುತಿಸಿದನು ॥ ೮೯

ಪರಮ ಗೌತಮನ ಸ್ಥಿತಿಗೆ ಮೆಚ್ಚಿ ಮುನ್ನಿತ್ತ
ವರವ ಸಲಿಪೆನೆಂದು ನಗುತ ।
ಸಿರಿಧರ ರಂಗೇಶ ಕಾವೇರಿ ಮಧ್ಯದೆ
ಪಿರಿದು ವಲ್ಮೀಕದೊಳಸೆದ ॥ ೯೦

ಮುನಿ ಪತಿ ಜ್ಞಾನ ದೃಷ್ಟಿಯಲರಿದಾ ಹ್ಷಣ
ಘನ ಕಾಮ ಧೇನುವ ಬರಿಸಿ ।
ವಿನುತ ಪಯ ಗರೆದು ವಲ್ಮೀಕವ ಕರಗಿಸಿ
ಚಿನುಮಯ ಮೂರ್ತಿಯ ಕಂಡ ॥ ೯೧

ಸಿರಿ ದೇವಿ ಪಾದ ಪದ್ಮವನೊತ್ತೆ ಭೋಗೀ
ಶ್ವರ ಭೋಗ ತಲ್ಪದೊಳಸೆವ ।
ಹರಿಯ ಕಂಡಾ ಹ್ಷಣ ಗೌತಮ ಮುನಿ ಪತಿ
ನೆರೆ ಸ್ತುತಿಗೈದನಂದಾಗ ॥ ೯೨

ಜಯ ಜಯ ಸನಕಾದಿ ಯೋಗಿ ವಂದಿತ ಪಾದ
ಜಯ ಜಯ ಲೀಲಾ ವಿನೋದ ।
ಜಯ ಜಯ ಜನನ ವಿದೂರ ಜನಾರ್ದನ
ಜಯತೆಂದು ಪೊಗಳಿದನಾಗ ॥ ೯೩

ಶರಣಾಗತರನು ಪಾಲಿಸುವೆನೆಂದೆಂಬ
ಬಿರುದು ನಿನ್ನದು ಸರ್ವೇಶ ।
ಪರಮ ಮಂಗಳ ಮೂರ್ತಿ ಯಿಂ ದಿವ್ಯ ಸ್ಥಳದಲಿ
ಸ್ಥಿರವಾಗಿ ನೆಲಸಬೇಕೆಂದ ॥ ೯೪

ಎಂದೆಂಬ ಗೌತಮ ಮುನಿ ಸಹ ತಾಪಸ
ವೃಂದಕ್ಕೆ ಮುಕ್ತಿಯಸಿತ್ತ ।
ಆಂದಿಂದ ರಂಗೇಶ ಭೂ ವೈಕುಂಠವಿ
ದೆಂದು ನೆಲಸಿದನರ್ತಿಯಲಿ ॥ ೫೫

ಒಡನಂದಿನ ಋಷಿಗಳು ತಮ್ಮ ಪೆಸರಲಿ
ಬಿಡದೆ ತೀರ್ಥವ ಕಲ್ಪಿಸಲು ।
ಪ್ರೊಡವಿಯ ಜನರು ಸ್ನಾನವ ಮಾಡಿ ಮುಕ್ತಿಯ
ಪಡೆವರೇ ವೇಳ್ವಿನಚರಿಯ ॥ ೫೬

ಪರಿವ ಕಾವೇರಿಯುತ್ತರ ತಟದಲಿ ಶ್ರೀ
ನರಸಿಂಹ ನೆಲಸಿ ಭಕ್ತರನು ।
ಹೊರೆವನಾ ದಿವ್ಯ ಮಹಿಮೆಯ ಬಣ್ಣಿಸುವೊಡೆ
ಸುರ ನರ ನಿಕರಕಸಾಧ್ಯ ॥ ೫೭

ರಾಮ ಚಂದ್ರನು ರಾಮೇಶ್ವರ ಪಶ್ಚಿಮ
ಭೂಮಿಯು ನದಿಯು ತೀರದಲಿ ।
ತಾ ಮೆನೋಹರವಾಗಿ ನರ ಹರಿ ಜನರ ಸು
ಪ್ರೀಸುದೆ ಸಲಹುವೆನೊಲಿದು ॥ ೫೮

ಇಳಿದಗಸ್ತ್ಯನವರ ಕರ ಕಮಂಡಲದಿಂದ
ಜಳ ಪೂರ್ಣವಾದ ಕಾವೇರಿ ।
ಬಳಿ ಬ್ರಹ್ಮ ಗಿರಿಯಿಂದಲಿಳಿದುತಾ ಪುಟ್ಟುವ
ಬಲು ಸಂಭ್ರಮವೇನನೆಂಬೆ ॥ ೫೯

ಕನಕೆ ಯೆಂಬಾ ನದಿ ಯಿದಿರಾಗಿಯೆ ಬಂದು
ವಿನಯದೆ ಭಾಗಮಂಡಲದೆ ।
ಘನ ಸಂತೋಷದೆ ಸಂಗತೆ ಯಾಗೆ ಕಾ
ನನದೆ ಬಂದಳು ಬಲಮುರಿಗೆ ॥ ೬೦

ಹಲಿ ಚಂದ್ರ ತೀರ್ಥ ಸರ್ವ ತೀರ್ಥವೆಂತೆಂಬ
ಹಲವು ತೀರ್ಥಂಗಳ ಬೆರೆದು ।
ಸಲೆ ಪರಿದೈತರುತಾಗಳಿಬ್ಬಗ ಯಾಗಿ
ಬಳಸಿ ಕೊಂಡಿಹಳು ಪಟ್ಟಣವ ॥ ೪೧

ಸುರ ನದಿ ಕಾಳಿಂದಿ ಗೂಡಿತು ಕ್ಷೀರಾಬ್ಧಿ
ಹರಿಯು ಧರಿಸಿ ಕೊಂಡಿಹುದು ।
ನೆರೆ ತನ್ನ ಶುಭ್ರಕ್ಕ ಸರಿ ಗಾಣೆನೆಂದಾಗ
ಪರಿದಾಡುತಿಹಳು ಕಾವೇರಿ ॥ ೪೨

ಅಸಮ ವರುಣೆಗಳಾ ಕಾಸಿಯು ಪುರವನು
ನುಸುಳಿ ಕಾದಿರುವೆಂಬದಲಿ ।
ಒಸೆದು ಪಟ್ಟಣವನು ವಾಹಿನಿ ಯಿರಡಾಗಿ
ಪಸರಿಸಿ ರಕ್ಷಿಸುತಿಹಳು ॥ ೪೩

ದೇವ ಗಂಗಾ ನದಿ ಗಗನ ಗಾಮಿನಿ ಯಾದ
ಭಾವವ ನೋಡ ಬೇಕೆನುತ ।
ಭಾವಿಸಿ ತೆರೆ ಗೂಡಿ ಕಾವೇರಿ ನೆರೆ ಗಗ
ನಾವಲಂಬಿತೆ ಯಾಗಿಹಳು ॥ ೪೪

ತಪ್ಪದೆ ಜಲ ಚರ ನಿಕರ ಬಿದಿರೆ ಮೇಲೆ
ಕುಪ್ಪರಿಸುವ ಜಲ ಬಿಂದು ।
ಚಿಪ್ಪಿಂದಲೊಡೆದು ಸಿಡಿವ ಮುತ್ತುಗಳನ
ಲೊಪ್ಪಿದುದತಿ ರಮ್ಯವಾಗಿ ॥ ೪೫

ಭಂಗ ಸಂಯುತೆ ಯಾಗಿ ಮುಳುಗಿದ ಜನರನ
ಭಂಗರ ಮಾಳ್ಪನೆಂದೆನುತ ।
ತುಂಗ ತರಂಗದೋಳಿಗೆಯಿಂದ ಕಾವೇರಿ
ಮಂಗಳ ಗಾತ್ರಿ ಯಾಗಿಹಳು ॥ ೪೬

ತಾವರೆ ಮೊಗ ಮಿಾನ್ ಕಣ್ಣು ನೀರಾನೆಗ
ಳ್ತೀವಿದ ನಡೆ ಸುಳಿ ನಾಭಿ ।
ಓವಿದ ಸೆಳ ನಡು ಕುಚ ಕೋಕಗಳ್ನೆ
ಭಾವಕಿ ಮೆರೆದಳರ್ತಿಯಲಿ ॥ ೪೬

ಅಲಗ ಝಳಿಪಿಪಂತೆ ಸೂರ್ಯನ ಕಿರಣವು
ಸಲೆ ಕಿರು ತೆರೆಯ ಮಧ್ಯದಲಿ ।
ಹೊಳೆದಾಡುತಿಹುದಾ ಕಾವೇರಿಯ ಬಲು
ಚೆಲುವನದೇನ ಬಣ್ಣಿಸುವೆ ॥ ೪೭

ಸಸಿ ಯುದಯಿಸೆ ಚಂದ್ರ ಕಾಂತ ಸೋಪಾನಗ
ಳೊಸರಲಾ ಜಲ ದಂಪ್ರ ಗೂಡಿ ।
ಎಸೆವಳು ಕಾವೇರಿ ಶ್ರಮದವರು ಮುಳುಗೆ ಸಂ
ತಸದಲಿ ಶೈತ್ಯವ ಕೊಡುತ ॥ ೪೮

ಸ್ನಾನ ಸಂಧ್ಯಾ ವಂದನೆ ಜಪ ತಪಗಳ
ಮೌನದೆ ಮಾಡಿ ರಾಜಿಸುವ ।
ಜಾತಿ ನಾಧಿಕರಿಂದ ಲುಭಯನದೀ ತಟ
ತಾನೆಸೆದಿಹುದರ್ತಿಯಲಿ ॥ ೪೯

ಚಾರು ವಸನ ಪೊಂ ಬಟ್ಟೆ ಬಿಳಿಯ ವಸ್ತ್ರ
ಸಾರ ಪೊಸ್ಪಳಿ ಮೊದಲಾದ ।
ನೀರೆ ಸಹಿತ ಸ್ನಾನವ ಮಾಳ್ಪ ವಿಪ್ರರ
ನಾರಿಯರೆಸೆದರಿತ್ತಟದೆ ॥ ೫೦

ಕುಂಕುಮಗಳ ಪಣೆಗಿಡುವ ಪರಿದ್ರದ
ಪಂಕವ ಮೈಗೆ ಲೇಪಿಸುವ ।
ಪಂಕಜ ಮುಖಿಯರಿತ್ತಡಿಯ ಸೋಪಾನದೆ
ಮುಂ ಕೊಂಡು ಮೆರೆದರರ್ತಿಯಲಿ ॥ ೫೧

ಕಳಸಗಳನ್ನಿಕ್ಕಿ ಯರಿಸಿನ ಕುಂಕುಮ
ಗಳ ಗಂಧಾಹ್ವತೆ ಯಿಟ್ಟು ।
ಫಲ ಪುಷ್ಪ ತಾಂಬೂಲದಿಂದ ಕಾವೇರಿಯ
ನೊಲಿದು ಪೂಜಿಸುತಿರ್ಪರಲ್ಲಿ ॥ ೫೩

ಕಚಗಳ ಸಿಕ್ಕ ಬಿಡಿಸುತೆಣೆ ಗಂಟಿಕ್ಕಿ
ಕುಚ ಮಧ್ಯದಲಿ ಹಾರವಿಡುತ ।
ವಿಚಲಿತ ನೇತ್ರಗಳಿಗೆ ಕಜ್ಜಲವನ್ನು
ರಚಿಸುತಂಗನೆಯರೊಪ್ಪಿದರು ॥ ೫೪

ಹೊನ್ನ ತಂಬಿಗೆ ಗಿಂಡಿ ಪನ್ನೀರ ಚಂಬಿನಲಿ
ಪೂರ್ಣ ಜಲವ ಕೊಂಡಾಗ ।
ಸನ್ನಿಹದಲಿ ಮನೆಗೈದುವ ವಿಪ್ರರ
ಕನ್ನಿಕೆಯರು ರಾಜಿಸುವರು ॥ ೫೫

ಲಿಂಗಕ್ಕೆ ಮಜ್ಜನವೆರೆದು ವಿಭೂತಿಯ
ನಂಗಕ್ಕೆ ಲೇಪಿಸಿ ಕೊಂಬ ।
ಹಿಂಗದ ಶಿವ ಭಕ್ತರ ವೇಳೆಯಿಂ ನೆರೆ
ಕಂಗೊಳಿಪುದು ನದಿ ತಟವು ॥ ೫೬

ಹರಿ ದಾಸರುಗಳ್ಳಿದಿ ಹರಿವ ಜಲದೊಳಾಗ
ಹರಿದು ಮಜ್ಜನವನು ಮಾಡಿ ।
ತಿರು ನಾಮ ತಿರು ಚೂರ್ಣಗಳ ಫಣಿಯೊಳಗಿಟ್ಟು
ತಿರಿಗಿ ಹರಿಯ ಧ್ಯಾನಿಪರು ॥ ೫೭

ಬಡನೆ ಕಾವೇರಿಯ ನಡು ಕಡೆ ತಡಿಯೊಳು
ಬಿಡದೊಪ್ಪುವ ಮಂಟಪಗಳು ।
ಕುಡು ಪಿಲ್ಲನ ಪಿತನುತ್ಸವಕೆಡೆಯಾಗಿ
ಕಡು ಪರುಷವೆ ಬೀರಿದುವು ॥ ೫೮

ಪುರವ ಬಳಸಿ ಭೋರ್ಗರೆವೆ ಕಾವೇರಿಯ
ಪರಿ ಪೂರ್ಣ ಜಲದೊಳಗಾಗ ।
ವರ ನಾವೆಯಲಿ ಜನ ದಾಟಿಪ ಜಲ ಗಾರ
ರಿರವ ನಾನೇನ ಬಣ್ಣಿಸುವೆ ॥ ೪೯

ಮಿಗೆ ಹರುಷದೊಳಾಪ್ಪುವ ಬಹು ಧರ್ಮದ
ಸೊಗಸು ವಡೆದ ಮಾರ್ಗವೆನಲು ।
ಝಗ ಝಗಿಸಿದುದಾ ಉಭಯ ಕಾವೇರಿಯ
ಬಿಗಿದೊಪ್ಪುತಿಹ ದಿವ್ಯ ಸೇತು ॥ ೫೦

ಕಾರುಣ್ಯ ನಿಧಿ ಕಾವೇರಿಯ ವೆಹ್ಹದ
ಚಾರು ಮೌಕ್ತಿಕ ಹಾರವೆನಲು ।
ಊರ ಬಳಸಿ ನೆರೆ ಸರಿವೆ ಕಾಲುವೆಯ ಶೃಂ
ಗಾರವನೇನ ಬಣ್ಣಿಸುವೆ ॥ ೫೧

ಮುಗುಳು ಹೊಡೆಗಳರೆ ಹೊಡೆ ನೆರೆ ಮೇಲಕ್ಕೆ
ನಿಗುರುವ ಹೊಡೆ ಪಸುವೊಡೆಯ ।
ಒಗುವಿಗೆಯುಲಿ ಹಾಲುದುಂಬುದೆನೆಯ ಶಾಲಿ
ಸೊಗಸನಿತ್ತುವು ನೋಳ್ಪರಿಗೆ ॥ ೫೨

ಪುರವೆಂಬ ನಾರಿಯಾ ಪಸುರ ಪಟ್ಟೆಯನುಟ್ಟ
ತೆರದಿಂದ ಶಾಲಿಯು ಗದ್ದೆ ।
ಪಿರಿದು ಶ್ರೀ ರಂಗ ಪಟ್ಟಣವ ಬಳಸಿ ಕೊಂ
ಡಿರುವ ಸಂಭ್ರಮವನೇನೆಂಬೆ ॥ ೫೩

ಹಾಲು ಬತ್ತಕೆ ಕವಿವರ ಗಿಳಿಗಳ ಹಿಂಡ
ಮೇಲಕೆಬ್ಬಿಸುವೆ ನಾರಿಯರ ।
ಹೇಳಲಳವೆ ನೆಲೆ ಮೊಲೆಗಳ ಕಮಲವೆಂ
ದೋಲ್ಬೈಸುವ್ರವು ತುಂಬಿಗಳು ॥ ೫೪

ಕುರುಳ ಕಾಳಿಕೆ ಮೈ ಕಾಂತಿ ಕೈ ತಳಿರ್ಗಂಪು
ಪಿರಿದಾದ ಬಾಯೆದ್ದರೆ ಜಗ್ಗಪ್ಪ ।
ಇರದಾಗಸಕೆ ಪಾರುವೆರ ಗಿಳಿಗಳ ಮುತ್ತ
ನೆರೆ ಪಂಚ ವರ್ಣವೈದಿಪುವು ॥ ೬೫

ಕುಂಭಿನೀ ದೇವಿ ಮಂಗಳ ಸುಜ್ಜನ ಮಾತಿ
ತುಂಬಿ ತನುವಿಗೆ ಲೇಪಿಸಿದ ।
ಇಂಬಿನಲಿ ಮೆರೆವರಿಸಿನವೆನೆ ಶಾಲಿಯು
ಪೊಂ ಬಣ್ಣದಾಗದ್ದೆ ಯಿಹುವು ॥ ೬೬

ಕಣಿವೆಯ ಸಣ್ಣ ಸತ್ಯಾಗಾಲದ ಸಣ್ಣ
ವೆಣಿಯಾದ ಗೋವೆಯ ಸಣ್ಣ ।
ಪುಣಗು ವಾಸನೆಯನಾಂತಿಹ ಸಣ್ಣ ಶಾಲಿಯ
ತೆನೆಗಳೂಪ್ಪಿದುವು ಚಿಲ್ವಿಂದ ॥ ೬೭

ಪಿರಿಯ ರಾಜಾನ್ನ ಜೀರಿಗೆ ರಾಜಾನ್ನವು
ವುರುತರ ಸೊಗಸು ರಾಜಾನ್ನ ।
ಪರಿ ಶೋಭಿಸುವ ಕಸ್ತೂರಿ ರಾಜಾನ್ನದ
ವರ ಶಾಲಿಯು ಗದ್ದೆ ಯಿಹುವು ॥ ೬೮

ಸೋಮ ಶಾಲಿಯು ಬಿಳು ಮಲ್ಲಿಗೆ ಕಂಬೂತಿ
ಹೇಮ ವರ್ಣದ ಕೊನೆವಾಳ ।
ರಾಮಣೀಯಕವಾದ ಪುಷ್ಪ ಮಂಜರಿಯ ಸ
ನಾಮದ ತೆನೆಗಳೂಪ್ಪಿಹುವು ॥ ೬೯

ಕೊಡಗು ಮಳಲ ಕಾಂತಿ ಹರಹಿನ ಡುಂಣಗ
ಳೂಡನೊಪ್ಪುತಿಹ ಬೈರಾವಳಿಯು ।
ಕಡು ಸೊಬಗಾಂತಿಹ ಚಂದ್ರೋದಯ ಶಾಲಿ
ಯೆಡೆ ವಿಡದೆಸೆದುವತಿಶಯಲಿ ॥ ೭೦

ಹೊಳೆಯುವ ಕೆಂದಳಗ ಕಸ್ತೂರೀ ವರ್ಣ
ದೊಳು ಪರಿಮಳವಾಂತು ಮೆರೆವ ।
ಕಳಮೆಯು ತೆನೆಗಳು ಪರಿಶೋಭಿಸುತಾಗ
ಹೊಳಲ ಬಳಸಿ ರಾಜಿಪುವು ॥ ೩೧

ಅಳಿವಿಂಡುಗಳ ಗಾನಕೆ ತಂಬೆಲರಿಗೆ
ನಳನದಳದ ವಾಸನೆಗೆ ।
ತಲೆದೂಗುವೆಂದದೆ ಕಳಮೆಯು ತೆನೆಗಳಂ
ದೊಲೆದಾಡುತಿರ್ದುವರ್ತಿಯಲಿ ॥ ೩೨

ಹರುಷದೆ ಪಾಲ್ಬೆನೆಗೆರಗುವ ಗಿಳಿವಿಂಡ
ಹೊರಡಿಸುವಂಬುಜಾಕ್ಷಿಯರ ।
ಗುರು ಕುಚ ತನು ಕಾಂತಿ ವೊಗಪ ಚೆಲ್ವಿಕೆಗಾಗ
ಸಿರವೆ ತೂಗುವವೋಲೊಪ್ಪಿದುವು ॥ ೩೩

ಅಲರು ವಿಲ್ಲಪ್ಪ ಬಾಣಗಳತಿ ಮೃದು ವದ
ಕಳುಕರು ಜನರೆಂದು ಚಂದ್ರ ।
ಅಳಿಯನ ಬಿಲ್ಲಿ ಬೆಳಸಿದಂತೆ ಧವಳೇಕ್ಷು
ಗಳ ಗದ್ದ ರಾಜಿಸುತಿಹುವು ॥ ೩೪

ಗಗನದೆ ಚರಿಸುವ ಗಿಳಿಯು ದೇಹ ಚ್ಛವಿ
ಮಿಗೆ ನಮ್ಮ ಪಸುರ್ಗಣೆ ಯಹುವೆ ।
ನಗವೈರಿ ನೋಡೆಂದು ತೋರ್ಪೊಲಿಹ್ಮುವ ಸೋಗೆ
ಸೊಗಸಲುನ್ನತವಾಗಿಹುವು ॥ ೩೫

ಪುರ ಲಕ್ಷ್ಮಿಯ ವೊಗ ದಾವರೆಯನು ನೆರೆ
ಪರಿ ವೇಷ್ಟಿಸಿ ಕೊಂಡಿರ್ಪ ।
ಪಿರಿದು ಪಚ್ಚೆಯ ಪತ್ರ ವೆನಲು ನಂದನ ವನ
ವೆರೆದುವು ನಾಲ್ದೆಸೆಗಳಲಿ ॥ ೩೬

ನರರಿಗಾ ಫಲವಿತ್ತು ಗಗನ ಮಾರ್ಗದೆ ನೆರೆ
ಚರಿಸುವೆಚ್ಚರ ವೆಣ್ಣುಗಳಿಗೆ ।
ಸಿರಿ ಮುಡಿಗಲರೀವೊಲಂಬರಕಡರಿದ
ಮರಗಳೂಪ್ಪಿದುವೆಡಕೆಗಳ ॥ ೬೩

ಬನ ದೇವಿ ಪೊಂಗಳಸದೊಳಮೃತವ ತುಂಬಿ
ಮನ ನಲಿದಾಗ ಕ್ಕೈ ನೀಡಿ ॥
ಅನಿಮಿಷಗೀರ್ವಂತೆ ಕೆಂದೆಂಗಿನ ಮರ
ಘನ ಫಲ ಸಹಿತವೊಪ್ಪಿಹುವು ॥ ೬೪

ಗಿಳಿ ಕರ್ದುಂಕಲು ಸೋರ್ವಿನಿರಸವನು ಸವಿ
ವೆಳ ವೆಂಗಳೂಲಿದು ಚಪ್ಪರಿದು ।
ತಲೆದೂಗಿ ಕೊಂಡಾಡೆ ಪಕ್ವ ಫಲಾವಳಿ
ವೆಳದೊಪ್ಪಿಮೆರೆದುವಿಮ್ಮಾವ್ರ ॥ ೬೫

ಲಲನೆಯರಧರಾಮೃತಕಿಂತ ಸವಿ ನಮ್ಮ
ಫಲದೊಳಗಿನೆ ನೋಡೆನುತ ।
ಸಲೆ ವಿಟ ಜನಕರುಪ್ಪುವೊಲು ನೇರಿಲ ಮರ
ಕಳಿ ವೆಣ್ಣು ಸಹಿತಲೊಪ್ಪಿಹುವು ॥ ೬೬

ಅಂಬುಜಾಕ್ಷಿಯರ ದನ್ತ ಚ್ಛವಿ ನಮ್ಮೆಯ
ನುಣ್ಬಿತ್ತಿನೊಳಗಿದೆ ಯೆನುತ ।
ಇಂಬಿಲ್ಲ ಪಲ್ಗಿರಿದುಸಿರುವವೋಲ್ಪಲಿಸಿ ದಾ
ಳಿಂಬದ ಮರಗಳೂಪ್ಪಿಹುವು ॥ ೬೭

ನಾರಂಗವೆ ನಾವು ನವಿಲ್ಮಿಂದಲನ್ಯಕೆ
ಸಾರ ಸಂಪಾದಿಪುದೆನುತ ।
ಪೂರೈಸಿದ ಫಲ ಸಪ ಹೇರಿಳಯ ಮರ
ವಾರಾಮದೊಳೂಪ್ಪಿದುವು ॥ ೬೮

ಸುರ ಲೋಕದಿಂದಮೃತವ ಕೊಂಡು ಗರುಡನು
ಮರುತನ ಪಥದೊಳ್ಪತರಲು ।
ಸುರಿವ ಬಿಂದುಗಳಂತ ಕರಣಿಗೆಯೆನೆ ಫಲ
ವೆರಸಿಹ ಕಿತ್ತೀಳ ಯಿಹುವು ॥ ೪೩

ಮಿಸುನಿಯ ವರ್ಣಕೆ ನಾನಾ ಬಗೆವಟ
ಕಸುಭೈಷಜ್ಯಕೆ ನರರ ।
ರಸನೆಯ ಸವಿಗೆ ನಾವೆಂದಾಗ ಫಲ ಸಹಿ
ತೆಸೆವ ಜಂಬೀರಗಳಿಹುವು ॥ ೪೪

ಕೆಡಹಿ ಲವಿತ್ರದೊಳ್ಕೂರೆದು ಸೀಳಿದರೀಗ
ಬಿಡೆವು ಸದ್ಗುಣವೆಂದೆನುತ ।
ಪೊಡವಿಗೆ ತೋಪ್ಪೊಲು ಸವಿ ರಸ ಪುಮಿಗಿದ
ಕಡು ಫಲ ಸಹ ಸಲಸಿಹುವು ॥ ೪೫

ಸುರ ಪತಿ ರಂಭಾ ಫಲದೊಳಗಮೃತವ
ಸಿರಿಸಿ ಭೂ ಲೋಕಕೆ ಕಳುಹೆ ।
ನರರ ಮನ್ನಿಸಿ ನೆಲ ಗಳಕ್ಕೈದವೊಲ್ಬಾಳ
ಯುರು ಗೊನೆ ಸಹಿತಲೊಪ್ಪಿಹುವು ॥ ೪೬

ರಸ ವಾಳ ಪುಟ ವಾಳ ರಾಜ ವಾಳ ಸಕ್ಕರೆ
ಯೆಸೆವಾ ದೇವಾಳ ಕಬ್ಬಾಳ ।
ಪಸರುಗುಂದದ ಪಚ್ಚೆ ನಾಡವು ಮೆಧುರಂಗ
ಪಸರಿಸಿ ಮೆರೆದು ವರ್ತಿಯಲಿ ॥ ೪೭

ಹೆಂಗಳ ನೆಲೆ ಪೊಲೆಗಳ ವೈತ್ತ ನಮ್ಮ ಪ
ಲಂಗಳೊಳ್ತೀವಿದೆ ಯೆನುತ ।
ಕಂಗೊಳಿಪ್ಪೊಲು ಪರಿಮಳವ ಪರ್ಣಳನಾಂತು
ತುಂಗದ ಬೇಲಗಳಿಹುವು ॥ ೪೮

ಅಂಬುಟಿ ಯರೆ ನೆಲ್ಲಿ ಚಳ್ಳ ಬಿಲ್ವದ ಮರ
ಮುಂಬರಿದೆಸೆವ ತಿಂತಿಣಿಯು ।
ಇಂಬಾದ ದ್ರಾಕ್ಷಿ ಖರ್ಜೂರ ತಮಾಲಗ
ಳ್ತುಂಬಿಹುವಾರಾಮದೊಳಗೆ ॥ ೪೯

ಸುರರ ನಂದನ ಚೈತ್ರರಥದೊಳಗಿಹ ಕಲ್ಪ
ತರುಗಳ್ಕೆತಂದು ಪಟ್ಟಣದ ।
ಹೊರ ವನದೊಳಗೊಪ್ಪಿಹುವೆನೆ ಫಲ ಸಹ
ವೆರೆದುವು ಭೂಜ ರಾಜಿಗಳು ॥ ೫೦

ಮದನನ ಮೊದಲಸ್ತ್ರವೆನಿಸಿ ಜಿತೇಂದ್ರಿಯ
ರೆದೆಯ ತಟ್ಟುಗಿವೆವೆಂದೆನುತ ।
ಮುದದೆ ಸರಸಿಯೊಳ್ಪರಿಮಳವಂತಿಹ
ಪದುಮೆದರಳುಗಳೊಪ್ಪಿದುವು ॥ ೫೧

ತರುಣಿ ರನ್ನೆಯರ ಬೆಳ್ನಗೆ ನಮ್ಮ ಶುಭ್ರಕೆ
ಸರಿ ಯಿಲ್ಲವೆಂದದ ಜರೆದು ।
ಪರಿಮಳಗಳ ಬೀರುತ ದೆಸೆ ದೆಸೆಗಾಗ
ಲರಳು ಮಲ್ಲಿಗೆಗಳೊಪ್ಪಿದುವು ॥ ೫೨

ಅಳಿ ನಿಕರಕೆ ಪಗೆ ಸರ್ವ ಜನಕೆ ಸುಖಿ
ಗಳನೀವೆವು ಸೌರಭದಲಿ ।
ಇಳೆಯೊಳಮ್ಮಂತುಪಕಾರಿಗಳಾರೆಂ
ದಲರೊಪ್ಪಿದುವು ಸಂಪಗೆಗಳ ॥ ೫೩

ವಿರಹಿಗಳದೆಯ ಕೆನ್ನೀರ್ಗುಡಿದತನುವ
ಕರಕೆ ಕಠಾರಿಗಳಾಗಿ ।
ಮೆರೆದೆವು ಬಿರುದನೆಂದೆನುತ ಸೌರಭ್ಯದ
ಸುರಗಿಯ ಪೂಗಳೊಪ್ಪಿದುವು ॥ ೫೪

ನವ್ಮಲಂತೆರಡು ವೆಸರನು ತಾಳಿ ರಾಜಿಸ
ಸುಮ್ಮಾನದರಳಿಲ್ಲವೆನುತ ॥
ಹೊಮ್ಮಿದ ನಂದನದಲಿ ಸುರ ಹೊನ್ನೆಯ
ಕವ್ಮಲರುಗಳೊಪ್ಪಿದುವು ॥ ೯೫

ಪುಲ್ಲಲೋಚನೆಯರ ವನ್ತ ಪಬ್ತೆ ಚ್ಛವಿ
ಯಿಲ್ಲಿವೆ ನೋಡಿ ಯೆಂದೆನುತ ॥
ಉಲ್ಲಾಸದೊಳು ತೋಪ್ಪೊಲು ಪರಿಮಳವಾಂತ
ಮಲ್ಲೆಯ ಮುಗಳ್ಗಳೊಪ್ಪಿದುವು ॥ ೯೬

ಪೊಡವಿಯೊಳಾವಿರೆ ಪರಿಮಳವನು ವಾಗು
ಬಿಡದೆ ಕೊಂಡೊಯ್ವನೆಂದಂಜಿ ।
ಒಡನೆ ಪಾತಾಳವ ಮರೆ ಗೊಂಡು ಲಾಮಂಚ
ಮುಡಿವಾಳ ಬೇರ್ಗಳೊಪ್ಪಿದುವು ॥ ೯೭

ನೆರೆ ಮುಳ್ಳು ತುಂಟ * ವೆಸರ ಬಂಡುಗರೆಮ್ಮೆ
ಹೊರೆಯೊಳಗಿರ ಬಾಡವೆಂದು ।
ವರ ವನ ಪುಷ್ಪಗಳ್ಪೂರಡಿಸೆ ಬೆಳ್ದಾಳ
ಯರಲೊಪ್ಪಿದುವು ವನ ತಟದೆ ॥ ೯೮

ಮೆರುಗ ಕತ್ತುರಿ ಮೆರುಗವು ಜಾಜಿ ಕೆಂಜಾಜಿ
ಪರಿಮಳಿಸುವ ಸೇವಂತಿ ।
ವರ ಪಾರಿಜಾತ ನಂದ್ಯಾವರ್ತ ಮೊದಲಾ
ದರಲೊಪ್ಪಿದುವು ಬನದೊಳಗೆ ॥ ೯೯

ಜಾಲದ ಪುಷ್ಪ ಪಾದರಿ ಬಕುಳ ಪುಷ್ಪ
ಮೇಲಾದ ಸುಕರಾಜ ಪುಷ್ಪ ।
ಲೀಲೆಯಿಂ ದೇವತಾ ಕುಸುಮಂಗಳಲ್ಲಾ
ಕಾಲದೆ ರಾಜಿಸುತಿಹುವು ॥ ೧೦೦

---

* ಮುಳ್ಳುತೋಂಟ ಎಂದಿರಬಹುದೆ ?

ಇಂದು ಕಾಂತದ ದಿವ್ಯ ಸೋಪಾನ ಜಲ ಮಾರ್ಗ
ನಿಂದ ನೀರ್ಗಳ ಚಿಲ್ವಿಂದ ।
ಮಂದ ವಾಯುವಿನಲೆಗೇಳುವ ಕೆರು ದೆರೆ
ಯಿಂದೊಪ್ಪಿದುವು ಸರಸಿಗಳು ॥ ೧೦೧

ಚೆಂ ಗಣಿಗಿಲ ದಿವ್ಯ ಪರಿಮಳಕೆರಗುವ
ಭೃಂಗ ವಿಂಡುಗಳ ಝೇಂಕಾರ ।
ಅಂಗಜ ವನ ದುರ್ಗಕಿಟ್ಟ ಮೇಲ್ವಾರಿಯ
ಪೊಂಗಿದಾಳ್ದನಿಗಳಂತಿಹುವು ॥ ೧೦೨

ಗಿಣಿಗಳುಗ್ಗಡಣೆ ಕೋಕಿಲ ಪಾಠಕಾಳಿಯ
ಘನ ರವ ನವಿಲ ನರ್ತನದೆ ।
ವನ ಲಕ್ಷ್ಮಿಯೋಲಗ ಶಾಲೆಯಂದದಲಿ ಸಂ
ದನ ವನ ಕಡು ರಮ್ಯವಾಯ್ತು ॥ ೧೦೩

ಪೊಡೆ ಬಿರಿದೆಸೆವ ಕಸ್ತೂರಿ ಪೊಂಬಾಳೆಯ
ಕಡು ಪರಿಮಳ ತಂಗೊಳದ ।
ಬಿಡುತರ್ಪ ಪುಷ್ಪ ವಾಸನೆಯಿಂದ ಪಥ ಶ್ರಮ
ವಡಗಿಪ್ಪುವೇನ ಬಣ್ಣಿಸುವೆ ॥ ೧೦೪

ಪುರ ವನಿತೆಯರು ತಮ್ಮಿನಿಯರ ಕರವಿಡಿ
ದಿರದೈತಂದು ನಂದನದೆ ।
ಪರಿಮಳ ಪುಷ್ಪಾಪಚಯ ಗೈದಾಸರ
ಪರಿಹರಿಸುತ ಪೊರೆದಿಹರು ॥ ೧೦೫

ತರುಣಿಯೊರ್ವಳ ತುಟಿಯ ತೊಂಡೆಯ ಪಣ್ಣೆಂ
ದರಗಿಣಿ ಯೆರಗಲಾ ನೀರೆ ।
ಕರ ಶಾಖೆಯಾ ಪುಷ್ಪರಾಗದೂರ್ಮಿಕೆ ದೋರೆ
ಪರಿದೋಡಿತಾ ಕೀರನಾಗ ॥ ೧೦೬

ಬಾಲಕಿಯೊರ್ವಳ ಮೊಗವ ತಾವರೆ ಯೆಂದು
ರೋಲಂಬವೈತಂದೆರಗಿ ।
ಮೇಲೆ ನಾಸಾಚಂಪಕ ಗಂಡು ಭೀತಿಗೊಂ
ಡಾಲೋಕಿಸದೋಡಿದುದು ॥ ೧೦೩

ನಳಿನಾಕ್ಷಿಯ ನೆಲೆ ಮೊಲೆಗಳ ತನ್ನಯ
ಬಳಗವೆನುತ ಚಕ್ರವಾಕ ।
ತಳುವದಲ್ಲಿಗೆ ಬಂದು ನಖರೇಖೆಯ ಕಂ
ಡೆಳಸಿ ಯೆಂದಂಜಿದುದು ॥ ೧೦೪

ಇಂತೊಪ್ಪುತಿಹ ನಾರಿಯರು ನಂದನದಲ್ಲಿ
ಕಂತುವ ಕೂರಾಳ್ಗಳಂತೆ ।
ಸಂತೋಷದಲಿ ದೋಹಳಗೈದು ವರಪ್ರಾಣ
ಕಾಂತರ ಬಳಿಗೈದಿದರು ॥ ೧೦೫

ತಳಿರ್ವನೆ ಪುಷ್ಪ ಮೆಂಟಪ ದಿವ್ಯ ಪುಳಿನ
ಸ್ಥಳಗಳಿಗಿನಿಯರನೊಯ್ದು ।
ನಳಿನಾಸ್ತ್ರನಾಹವಗೈದು ಸಂತಸದಲಿ
ತಳರ್ದರು ಪುರ ಗೃಹಗಳಿಗೆ ॥ ೧೦೬

ಈಪರಿ ಕೇಳೀನಂದನ ನವ ಪುಷ್ಪ
ಚಾಪನ ಬಂಡಾರದಂತೆ ।
ರೂಪುವಡೆದು ಮೆರೆದುದು ಬಹುವಸ್ತು ಕ
ಲಾಪವನೀಯುತ ಜನಕೆ ॥ ೧೦೭

ಮಂಗಳ ಭೂವೈಕುಂಠವಾಗೊಪ್ಪುವ
ರಂಗಪಟ್ಟಣದ ವರ್ಣನೆಯು ।
ಹಿಂಗದೆ ವಿಸ್ತರಿಸಲ್ಲಿಗೈದನೆ ಸಂಧಿ
ಕಂಗೊಳಿಸುವ ಸಂಬಂಧಿ ॥ ೧೦೮

ಐನೆಯ ಸಂಧಿ ಸಮಾಪ್ತಂ.

೬ ನೆಯ ಸಂಧಿ.

ಶ್ರೀರಂಗ ಪತ್ತನ ವರ್ಣನಂ.

ಸೂಚನೆ—ಪೊಡವಿಗಧಿಕ ಶ್ರೀ ರಂಗ ಪಟ್ಟಣದೊಂದು
ಕಡು ಚಲುವಿಕೆಯ ಬಣ್ಣಿಸುವೆ ॥

ಮೃಗ ವಾಹನನ ನಂದನನ ರಣದೆ ನೆರೆ
ಬಿಗಿದನ ಪಿತನನುಜನಿಗೆ ।
ತೆಗೆಯದುಂಬಳಿ ಯಿತ್ತ ದೇವನ ಸಿರಿ ಪದ
ಯುಗವ ಭಜಿಪೆ ಮುನದಿಂದ ॥ ೧

ಬಾಲ ಸೂರ್ಯನ ಕಿರಣವೆ ಜರೆದತುಲ ವಿ
ಶಾಲದೊಳಾ ಪುರ ವರದ ।
ಶಾಲಾ ವೀಥಿಗಳಸೆದುವು ನವ ರತ್ನ
ಜಾಲದ ದೀಧಿತಿಯಿಂದ ॥ ೨

ವರ ತ್ರಿ ದಶರಿಗಾಸ್ಪದವಮರಾವತಿ
ಹರ ಸಹಿತ ಪುರ ಗುಹ್ಯಕರ ।
ಧರಿಸಿಹುದೆಂದವ ಜರೆದು ಭೂ ತಳದೆ ಸುಂ
ದರವಾಗಿಸೆವ್ವದು ನಗರ ॥ ೩

ಅಗಲಕೆ ಭೂ ಮಂಡಲ ಕಿರಿದುಬ್ಬಲು
ಮಿಗೆ ತಾಳವಷ್ಟ್ಯದಿಕ್ಕೆಂದು ।
ನಗುತಾಗ ಮೇಲಕ್ಕೆ ಬಳದೋಲು ಹೊಂಗೋಂಟೆ
ಗಗನ ಮಂಡಲವ ಮುಟ್ಟಿಹುದು ॥ ೪

ದೆಸೆಯಾಣ್ಮರ ಪುರವಿದಕೆಣೆ ಯಿಲ್ಲೆಂದು
ನಸು ನಗೆ ಪುರ ಲಕ್ಷ್ಮಿ ಯವಳ ।
ದಶನ ಪಙ್ಕ್ತಿಗಳ ಚಿಲ್ವಿನೆ ಕೋಟೆಯಾ ತೆನೆ
ಯೆಸೆದುವು ಕಣ್ಗೆ ರಾಜಿಸುತ ॥ ೫

ಪುರದರಸಿನ ಜಯಾಂಗನೆ ತನ್ನ ಸುಂಗಳಾ
ಭರಣವನಿರಿಸಲು ಸಪೆದ ।
ಪಿರಿದು ವಜ್ರದ ಕರಂಡಗಳನೆ ಕೊತ್ತಲ
ಮೆರೆದುವು ಚೌದೆಸೆಯೊಳಗೆ ॥ ೬

ಪುರವೆಂಬ ಸರಸಿಯೊಳಗೊದ ತಾವರೆಗಳು
ತರಣಿ ಮಂಡಲವ ನೋಡುವೊಡೆ ।
ನೆರೆ ವಾಯು ಪಥವೆಡರ್ಗೊಲು ಮುಗಿಲಟ್ಟಣೆ
ಮೆರೆದುವಾಗಸವ ತುಡುಕುತ ॥ ೭

ಅಂಬರ ಚರಿಯರಸೀ ಪಟ್ಟಣದೊಂದು
ಸಂಭ್ರಮವನು ನೋಡಿ ಯೆನುತ ।
ಕುಂಭಿನಿ ಕೈ ನೀಡಿ ಕರೆವೋಲು ಡೆಂಕಣಿ
ಮುಂ ಬರಿದೆಸೆದುನ್ನತಿಯಲಿ ॥ ೮

ಗಗನ ಗಂಗೆಯ ಕಾಲುವ ಬಲು ಮಾರ್ಗದೆ
ಸೊಗಸುತೈತಂದೊಪ್ಪಿದಂತೆ ।
ಮುಗಿಲ ಮುಟ್ಟುವ ಕೋಟೆ ದೆನೆ ಯೆಡೆ ಪಟಗಳು
ಝಗಝಗಿಸಿದುವು ಶುಭ್ರದಲಿ ॥ ೯

ಹರಿಗೆ ಹಾಸಿಗೆ ಯಾಗ ಬೇಕೆಂದು ಶಾತಾಳ
ಪುರದಿಂದಲುರಗೇಂದ್ರ ಬಂದ ।
ವರ ಮಾರ್ಗ ದ್ವಾರವಿದೆನೆ ಬಲು ಶಾತದೆ
ಮೆರೆದುದಗಳದೇನೆಂಬೆ ॥ ೧೦

ಶಾಲಾ ವೀಥಿಯು ಬಂಸಿ ಕೊಂಡತುಲ ವಿ
ಶಾಲದೊಳಾ ಪಟ್ಟಣದ ।
ಓಳುವೇರಿಗಳಸೆದುವು ನೋಳ್ಪ ಜನರ ಕ
ಣ್ಣಾಲೋಕನಕೆಸಿದಾಗಿ ॥ ೧೦

ನೆಲೆ ನಮೆಗಳುಕಿ ಚಂದ್ರನ ಮೆರೆ ಹೊಗೆ ತಮ್ಮ
ಭರದೆ ನುಂಗದೆ ಬಿಡೆನೆನುತ ।
ಪಿರಿದು ಬಾಯ್ದೆರೆದಾಗ ಶತಯೆರಳಗೆ ಪಾರು
ತ್ತಿರುವೊಲು ಹುಲಿ ಮುಖ ಏಹುವು ॥ ೧೮

ಆ ಪುರದತುಳ ಭಾಗ್ಯ ಕೀರ್ತಿಯು ನಗುತಾಗ
ಗೋ ಪತಿಗರಹುವಂದದೆ ।
ತಾ ಪಿರಿದಾಗಿ ಬಾಗಿಲ ಸೆಜ್ಜೆ ಯಭ್ರವೆ
ವ್ಯಾಪಿಸಿದುವು ಶುಭ್ರ ನಿಡಿದು ॥ ೧೩

ಪಿರಿದು ಗೋಪುರ ನಗೆ ಮೊಗ ಹರ್ಮ್ಯ ನಲಿ ಮೊಲೆ
ಮೆರೆವೆ ಕೊತ್ತಳ ಪೊರವಾರು ।
ಸುರುಚಿರ ಪೊಂಗೋಂಟೆ ಮೇಖಳೆ ಪುರವೆಂಬ
ತರುಣಿ ಯೊಪ್ಪಿದಳು ಭಾಗ್ಯವಲಿ ॥ ೧೪

ಪುರಕೈದಿ ಬಹ ರಿಪು ಜಲಧಿಯನುಸಿರ್ಗ್ಗಿಚ್ಚಿ
ನುರುಹೆಂದು ಪಲವು ಬಾಡಬರ ।
ಪರಮೇಷ್ಠಿ ನಿರ್ಮಿಸಿ ಕಳುಹಿದ ತೆರದಂತೆ
ಮೆರೆದುವು ಬಲು ಶತಘ್ನಿಗಳು ॥ ೧೫

ರಣ ವೀತಿಹೋತ್ರನುಗಿಗಳೂ ಭರ್ಗನ ನೆರೆ
ಸಣೆ ಗಣ್ಣಿನುರಿವು ಸಂಗಿಗಳೂ ।
ಸೆಣಸುವಭಟರ ನುಂಗಿಗಳನ್ನಲೆಸೆವುವು
ಗಣನೆ ಯಿಲ್ಲದ ಪಿರಂಗಿಗಳು ॥ ೧೬

ನರ ಸುಧನ್ವನ ಶಿರಕೆಚ್ಚ ಮೂರ್ತಿ ತ್ರಯ
ವೆರೆದ ಶಕ್ತಿಯ ತೆರದಂತೆ ।
ಪುರದ ಕೋಟೆಯು ಸುತ್ತಣ ಕೊತ್ತಳಗಳೊಳು
ಮೆರೆದುವು ಬಲು ಪಿರಂಗಿಗಳು ॥ ೧೩

ರಾಮ ಬಾಣವು ಭೂತ ನಾಥ ಲಂಕೆಯ ನಿ
ರ್ಧೂಮ ಧಾಮೆನು ಹನುಮಂತ ।
ಚಾಮುಂಡಿ ಸಿಡಿಲ ಜಂಗುಳಿ ಮೇಘನಾದ ನಿ
ಸ್ಸೀಮ ಪಿರಂಗಿಗಳಿಹುವು ॥ ೧೪

ಕೋಟಿ ಕೋಲಾಹಲ ಕಲಿ ವೀರ ಭದ್ರನು
ಲೂಟಿಯ ರಣ ಭೈರವನು ।
ಘಾಟಿನ ರಂಗ ನಾಥನು ವೈರಿ ಭಟ ಕುರು
ಹಟದ ಬಲು ಗೋವಿ ಯಿಹುವು ॥ ೧೫

ಒಡ್ಡಿದ ಶೂಲ ವರಾಹನ ತಲೆ ನೂಕು
ವಡ್ಡ ವೆಲಗೆ ಕವಣೆಗಳು ।
ಅಡ್ಡಾಯುಧ ಗರಗಸ ವೊನೆ ಗಲ್ಲು ಕ
ಣ್ಗೊಡ್ಡವಾಗಿಯೆ ರಾಜಿಸಿಹುವು ॥ ೧೦

ಚೀಳು ಬಾಣಗಳ ರಾಟಿಳ ವುರಿ ಪ್ರೊಟ್ಟಣ
ವೇಳುವೆ ಜಂತ್ರದ ದಗಳು ।
ತೂಳುವೆ ಗುಂಡು ಗಲ್ಲಳ ರಾಸಿ ಪಟ್ಟಣ
ದಾಳುವೇರಿಯ ತುಂಬಿಹುವು ॥ ೧೧

ವಿಷದ ಚೀಗೊರ್ಗಳವೆ ಮಳಲ ರಾಸಿ ಯುಕ್ಕಿನ
ಮುಸೆದಲಗಿನ ಸಾಲ ಸಬಳ ।
ಎಸೆವ ಕೀಲಾಯುಧ ಬಲಿದಡ್ಡಣದೊಲೆ ಕ
ಣ್ಗೆಸದುವು ತೆನೆಯ ಸಂದಿನಲಿ ॥ ೧೨

ಪುರದ ಸಂವರಣೆಯ ನೋಡಲಮ್ಮದೆ ಯುಂಜೆ
ಸುರ ನಾಥ ಸ್ವರ್ಗಕ್ಕೈದಿದನು ।
ಉರಗೇಂದ್ರ ಪಾತಾಳದೆ ಪರಸಿದ ಮಿಕ್ಕ
ಕಿರು ಮೊನಿಸರ ಪಾಡೇನು ॥ ೬೩

ಇಂತಪ್ಪ ಪುರದ ಚೌದೆಸೆಯು ಬಾಗಿಲುಗಳ
ಮುಂತಿಹ ಚಾವಡಿಗಳಲಿ ।
ಪಂತದೊಳಗೆ ದಿವ್ಯಾಯುಧಗಳನಾಂತು
ಹೊಂತ ಕಾರಿಗಳು ಕಾದಿಹರು ॥ ೬೪

ಧುರದೊಳು ವೈರಿ ಭೂಪಾಲರ ಖಂಡಿಸಿ
ಹರುಷದಿಂದಲಿ ಸೆಳೆ ತಂದ ।
ಬಿರುದಿನ ತುರಗಗಳನು ಕಟ್ಟಿಹ ಲಾಯ
ಪರಿ ಶೋಭಿಸಿದುವು ಪಟ್ಟಣದೆ ॥ ೬೫

ಸಂಗರದೊಳು ಮಧುರೆಯ ನೃಪ ಬಲವನು
ಭಂಗಿಸಿ ಮುರಿ ಯಿರಿದಾಗ ।
ಹಿಂಗದೆ ಸೆಳೆ ತಂದ ದಿವ್ಯಾಶ್ವಗಳ ಲಾಯ
ಕಂಗೊಳಿಸಿದುವು ಪಟ್ಟಣದೆ ॥ ೬೬

ಬೇಲೂರು ನರಸಿಂಹಪುರ ಮುಂತಾದ ಭೂ
ಪಾಲರು ಶರಣು ಹೊಕ್ಕಾಗ ।
ವೇಲೆ ಕಾಣಿಕೆ ಯಿತ್ತ ಬಲು ತೇಜಿಗಳಿಪ
ಸಾಲು ಲಾಯಗಳೊಪ್ಪಿಹುವು ॥ ೬೭

ನರ ರಕ್ಕಸರನಿರದೋಡಿಸಿ ಪಿಡಿತಂದ
ಸರ ಮದ ಗಜದ ಶಾಲೆಗಳು ।
ಮೆರೆದುವು ಪೂರ್ವ ದಿಕ್ಕಿನ ಬಾಗಿಲ ಬಳಿ
ಯುರುತರೋನ್ನತದಿಂದಲಾಗ ॥ ೬೮

ಧುರದೊಳು ಮಧುರೆಯ ತಿರುಮಲ ನಾಯಕ
ನುರುವಾಹಿನಿಯ ಮುರಿದಿವು ।
ಹರುಷದೆ ಪಿಡಿದಾನೆಗಳ ಶಾಲೆ ಮೆರೆದುವು
ಪುರದೊಳೀನೆಂಬೆನಚ್ಚರಿಯ ॥ ೮

ತುಂಗ ಚಂಗಳ್ವಾಧಿಪನು ಕದನದೆ ಸೋತು
ಕಂಗೆಟ್ಟು ಕಾಣಿಕೆ ಯಿತ್ತ ।
ಮಂಗಲ ಗಜ ಶಾಲೆ ವೈಸೂರ ಬಾಗಿಲ
ಮುಂ ಗಡೆಯೊಳಗೊಪ್ಪಿದುದು ॥ ೯

ಭುಜ ಬಲಾನ್ವಿತರಾದ ತೆಲುಗು ಭೂಪಾಲರ
ತ್ರಿ ಜಗ ಮೆಚ್ಚಲು ಗೆದು ತಂದ ।
ಗಜ ಘಟೆಗಳ ಶಾಲೆಗಳೊಪ್ಪಿದುವಾಗ
ವಿಜಯಾ ಪುರದ ಬಾಗಿಲೆಡೆಯ ॥ ೧೦

ಕೊಡಗು ಕೊಂಕಣ ಕೊಂಗ ಮಲೆಯಾಳ ರಾಜ್ಯದ
ಬಡಿ ಹೋರಿಗಳು ಮನ ನಡುಗಿ ।
ಒಡನೆ ಕಾಣಿಕೆಯನಿತ್ತಾನೆಯ ಸಜ್ಜಾರ
ನಡು ಕೇರಿಯೊಳಗೊಪ್ಪುತಿಹುದು ॥ ೧೧

ಜಲ ಪಾನಕ್ಕೈದುವ ಕಾದುರೆಯ ಪಾಲುಗಳ್
ಬಲು ತೆರೆ ಬೆಳುಗೊಡೆ ನೊರೆಯು ।
ಕೊಳಿಸ ಚಾಮರ ಶಫರಿಗಳಾಗಲಾ ಪುರ
ಜಲ ರಾಶಿಯಂತೆ ರಾಜಿಸಿತು ॥ ೧೨

ವಸು ಗೇಹವಸ್ಪರವಾಸ ಸೌರಭ್ಯದ
ರಸದೇಳಿಗೆ ಹರಿ ಲೀಲೆ ।
ಪಸರಿಸಿ ಮೆರೆಯಲಾ ಪುರವಮರಾವತಿ
ಯೆಸಕದಿಂ ಮಿಗೆ ರಂಜಿಸಿತು ॥ ೧೩

ಸುರನದಿ ಕಾಳಿಂದಿ ಶೋಣಭದ್ರೆಯರೊಡ
ನಿರದೈದಿ ಪುರವ ನೋಳ್ಪಂತೆ ।
ವರ ಮೌಕ್ತಿಕ ಹರಿ ನೀಲ ಪವಳಗಳ
ಸು ರುಚಿರ ವೀಥಿ ಯೊಪ್ಪಿದುವು ॥ ೩೫

ಪ್ರೌಢವಿಪ ಪುರ ಲಕ್ಷ್ಮಿಗೆ ಮಂಗಳೋತ್ಸವ
ಕೊಡನೆತ್ತಿದಾ ಬೆಳ್ಗೊಡೆಗಳ ;
ಸಡಗರದಂತೆ ಶುಭ್ರದ ಸಾಲು ಸೆಜ್ಜೆಗ
ಳ್ಕಡು ಚಲುವಿಕೆಯ ಬೀರಿದುವು ॥ ೩೬

ಬಾಲಾರ್ಕ ಬಿಂಬದೇಳಿಗೆಯಿಂದ ಪೂರ್ವ ದ
ಶೈಲವು ಬಹು ರೂಪ ತಾಳಿ ।
ಮೇಲೊಪ್ಪುವಂತೆ ಚಿನ್ನದ ಕಲಶಗಳಿಂದ
ಸಾಲುಪ್ಪರಿಗೆಗಳೊಪ್ಪಿದುವು ॥ ೩೭

ಪರಿಮಳೋತ್ಸವಕ್ಕೈದುವನಿಲರಾಜನಿಗಾಗ
ನೆರೆ ಶುಭ್ರ ಮೇಘ ದಂತಿಯನು ।
ಹರುಷದೆ ಸಿಂಗರ ಗೈದೊಲು ಟಿಕ್ಕೆಯ
ಮೆರೆದುವು ಹರ್ಮ್ಯಾಗ್ರದೊಳಗೆ ॥ ೩೮

ಕನಕ ಶೈಲದೆ ಮೂಡಿ ಶುಭ್ರ ಮೇಘವ ಪೊ
ಕ್ಕಸಿವಿಷ ಪತಿ ಚಾಪದಂತೆ ।
ಮನೆ ಮನೆಗಳೊಳು ಮಂಗಳ ರತ್ನ ಮಯವಾದ
ವಿನುತ ತೋರಣಗಳೊಪ್ಪಿದುವು ॥ ೩೯

ಶಶಿ ತನ್ನಗ್ರಜೆ ಯಿಂ ಪುರದೊಳು ಮೆರೆ
ದೆಸೆವೆಳು ನೋಡು ಹೋಗೆಂದು ।
ಪ್ರೊಸ ಕೌಮುದಿಯನಟ್ಟಿದೊಲು ಶುಭ್ರನವಸುಧಾ
ರಸ ಲಿಪ್ತ ಮೌಳಿಗೆಗಳಿಹುವು ॥ ೪೦

ಆರು ಶಾಸ್ತ್ರವು ನಾಲ್ಕು ವೇದ ಪುರಾಣದ
ಸಾರಾರ್ಥವ ನಿರ್ಣೈಸಿ ।
ತೋರಿ ವಾಚಿಸುವ ಬ್ರಾಹ್ಮಣ ವೀಥಿ ಬಹು ಶ್ಯಂ
ಗಾರದೆ ಪೊರೆದುವರ್ತಿಯಲಿ ॥ ೪೦

ಲಕ್ಷ್ಯ ಲಕ್ಷಣ ಪದ ಕ್ರಮದಿಂದ ಕ್ಷಣದಲ್ಲಿ
ಯಿಕ್ಷಿಸಿ ಕಾವ್ಯ ನಾಟಕವ ।
ಅಣಿಯುರಿತುಸಿರುವ ಕವಿಗಳ ವೀಥಿ ಸಂ
ದಣಿಸಿಹುವಾ ಪುರದೊಳಗೆ ॥ ೪೦

ಮೇರು ಹಿಮಾದ್ರಿಗಳರಡನು ಸೇರಿಸಿ
ಪಾರೀಣ ಮಂತ್ರ ಬುದ್ಧಿಯಲಿ ।
ಓರಂತೊಂದು ಗೂಡಿಪ ಮಂತ್ರಿಗಳ ಶ್ಯಂ
ಗಾರ ಗೃಹಗಳೊಪ್ಪಿದುವು ॥ ೪೩

ಸಲೆ ಚಿತ್ರ ಗುಪ್ತರ ಲೆಕ್ಕವ ಟಿಕ್ಕರಿ
ಗಳದು ಲೆಕ್ಕದೆ ಶೂರರೆನಿಪ ।
ಲುಳಿಯಲಿ ವಾಚಿಸುತಿಪ ಕರಣಿಕ ಕುಲ
ತಿಲಕರ ಗೃಹವಿರುತಿಹುವು ॥ ೪೪

ದೊರೆಗಳ ಮನವಲಿ ನೆನೆದ ಜಾತ್ಯುತ್ತರ
ದಿರವ ತಿಳಿದು ನಿಮಿಷದಲಿ ।
ಬರೆದೋದುತಿಹ ನೆರೆ ವಿದ್ವಾಂಸರುಗಳ
ಸು ರುಚಿರ ಗೃಹಗಳೊಪ್ಪಿದುವು ॥ ೪೫

ಭುವನದ ಬಡವರ ಬಿನ್ನಹವನು ತಂ
ದವನೀಶ್ವರರಿಗೆ ಪೇಳಿ ।
ತವಕದೆ ಕಾಣಿಸಿ ಯಿಷ್ಟಾರ್ಥಗೊಡಿಸುತಿ
ರ್ಪವರ ಕೇರಿಗಳೊಪ್ಪುತಿಹುವು ॥ ೪೬

ಸಕಲ ರುಜೆಯ ಕೆಡಿಪೌಷಧಿಗಳನಿತ್ತು
ಸುಖವೆ ಪುಟ್ಟಿಸಿ ಸರ್ವ ಜನಕೆ ।
ಅಕಳಂಕರೆನಿಸಿ ಮೆರೆವ ಘನ ವೈದ್ಯರ
ನಿಕರದ ಕೇರಿ ಯೊಪ್ಪಿದುವು ॥ ೪೬

ಗಾಯಕ ನಟ ನಾಯಕ ಪರಿ ಹಾಸಕ
ಧೀ ಯುಕ್ತರಹ ವಿನೋದಿಗಳ ।
ಆಯತವೆಡೆದ ಕೇರಿಗಳೊಪ್ಪಿ ಮೆರೆವ ಸು
ದಾಯವನೇನ ಬಣ್ಣಿಪೆನು ॥ ೪೪

ಸಲೆ ಬೀದಿ ಬೀದಿ ಯೊಳಗೆ ಮಂಗಳೋತ್ಸವ
ಕುಲ ಶುಭ ಶೋಭನಗಳೊಳು ।
ಒಲಿದು ಪಾಡುತ ಚರಿಸುವ ಪುರಂಧ್ರಿಯರಿಂದ
ಪೊಳಲೊಪ್ಪಿತತಿ ಸೊಬಗಿನಲಿ । ೪೯

ನರೆ ಯಗ್ನಿ ಹೋತ್ರದಾಜ್ಯಾಹುತಿಗಳ ಕಂಪು
ಪರಿ ಪರಿ ಕಜ್ಜಾ ಯಗಳ ।
ಪರಿಮಳದಿಂಪು ಬೀದಿಯೊಳಡೆಯಾಡುತಿ
ಪ್ಪರ ಮುಖಾಬ್ಜಕೆ ತೀಡುತಿಹುದು ॥ ೪೦

ಮೆರೆವ ನಾನಾ ಬಗೆವಸ್ತುಗಳನು ದಯೆ
ವೆರೆಸುತೆ ಧರ್ಮ ಮಾರ್ಗದಲಿ ।
ಕರೆ ಕರೆದಾಹ್ವಣ ಕ್ರಯಕೀವ ಹರದರ
ಸು ರುಚಿರ ಗೃಹಗಳೊಪ್ಪಿದುವು ॥ ೪೧

ಅಕ್ಕರೊಳಗೆ ಬಹು ಬಗೆಯ ಧಾನ್ಯಗಳನು
ಚೊಕ್ಕಟವಾಗಿಯೆ ಬೆಳದು ।
ಎಕ್ಕತುಳದೆ ಧರ್ಮ ಮಾರ್ಗದೆ ರಾಜಿಸು
ವೊಕ್ಕಲಿಗರ ಕೇರಿ ಯಿಹುವು ॥ ೪೨

ತವೆ ಹ್ಲುದ್ಬಾಧೆಯೊಳ್ಳತಹ ಚರ ಲಿಂಗ
ನಿವಹವ ಕರೆ ಕರೆದೊಯ್ದು ।
ತವಕದೆ ಮೃಷ್ಟಾನ್ನವಿಕ್ಕಿ ರಾಜಿಸುತಿಹ
ಶಿವ ಭಕ್ತರ ಕೇರಿ ಯಿಹುವು ॥ ೫೩

ಗಂದಿಗ ಬೋಗಾರ ತಿಲಗಾತಕ ನಾ
ಯಿಂದರ ತಾಮ್ರ ಮೆರ್ದಕರ ।
ಮುಂದೊಪ್ಪುತಿಹ ಮಲ್ಲ ಜಾಲಗಾರರ ಗೃಹ
ಚೆಂದದಿಂದೊಪ್ಪಿದುವಾಗ ॥ ೫೪

ಮೆರೆವ ಚಿತ್ರಿಗ ನಾನಾ ಬಗೆದುಗುಲವ
ವಿರಚಿಸುತಿಹ ಸೇಲಿಗರ ।
ಸಿರತಾಳಿ ಜೋಡು ಪೈತಣಿಗಳ ಹೊಲಿಗೆಯ
ಗರುವೆ ಚಿಪ್ಪಿಗಗೇರಿ ಯಿಹುವು । ೫೫

ತಾಳ ಧಾರಿಗ ಮದ್ದಳಿಗ ನಾಗಸರ ಮವುರಿ
ಯೂಳಾಪಿಗ ನಟುವಿಗರ ।
ಹೇಳಲಳವೆ ಜೋಗಿಗ ಮುಚ್ಚಿಗರ ಗೃಹ
ಸಾಲು ವಿಡಿದು ರಾಜಿಪುವು ॥ ೫೬

ದೀವಟಿಗರು ಕೊಟ್ಟಿಗೆಯುರು ವರ ತುರ
ಗಾವಳಿಗಳ ನೆರೆ ಪಿಡಿವೆ ।
ಕೋವಿದ ನಿವಹ ಗಜಾರೋಹಕರ ಗೃಹ
ತೀವಿಹುವಾ ಪಟ್ಟಣದೆ ॥ ೫೭

ಹರಿ ಹಯನಶ್ವದಂದದ ತೇಜಿಗಳನೇರಿ
ನೆರೆ ತೊಲಗುಭಯ ವೀಧಿಗಳ ।
ಪರಿಸುವ ಬಿರುದಿನ ರಾಯ ರಾವ್ತರ ಸಂ
ಗರವಾಂತ ಕೇರಿ ಯೊಪ್ಪಿಹುವು ॥ ೫೮

ಕಡು ಗಲಿ ಕಾಲ ರುದ್ರನ ಪಣೆ ಗಣ್ಣಿನ
ಕಿಡಿಗಳ ಗಡಣವಂದದಲಿ ।
ಜಡಿವ ಬತ್ತೀಸಾಯುಧಗಳ ಸು ಭಟರ
ಬಿಡಗಿನ ನಿಕರ ವೊಪ್ಪಿಹುವು ॥ ೩೯

ಅಂಟಿದ ಜಗಳದೊಳಗೆ ಮಾರ್ಬಲವನು
ಪಂಟಿಸಿ ಮುರಿಯಿರಿದಾಗ ।
ಬಂಟಂಗದಲಿ ಮೆರೆದರ ಕೇರಿ ಯೆಸೆದುವು
ವೊಂಟೇರಿಗಾರ ನಾಯಕರ ॥ ೪೦

ಕಟ್ಟಾಣಿ ಮುತ್ತಿನ ಚೌಕುಳಿ ಕೊರಳೊಳು
ಗಿಟ್ಟ ಪದಕ ಚಂದ್ರ ಹಾರ ।
ತೊಟ್ಟ ದುಗುಲದ ಸೈರಣೆ ಯೊಳಗದವರ
ಕಟ್ಟಿಸಕದ ಕೇರಿ ಯಿಹುವು ॥ ೪೧

ಶೂರರ ನೀತಿ ವಿಹಾರ ಸದ್ಗುಣ ಗಣ
ಸಾರರ ಸಲೆ ಕಲಾವಿದರ ।
ವೀರ ವೈಷ್ಣವರ ಸರ್ವ ಜ್ಞರ ಬಹು ಶೃಂ
ಗಾರದ ಕೇರಿ ಯೊಪ್ಪಿಹುವು ॥ ೪೨

ಇಂತೊಪ್ಪುತಿಪ್ಪ ರವಿ ಶಶಿ ವೀಥಿಗಳೊಳ
ತ್ಯಂತ ಸೌಖ್ಯವನೀಯುತಾಗ ।
ಸಂತತ ಸೌಭಾಗ್ಯ ನಿಧಿಯೊಲಂಗಡಿ ಗೇರಿ
ಮುಂತೆಸೆದುದು ಚೆಲ್ವಿನಿಂದ ॥ ೪೩

ಉರ್ವೀ ಜನರಿಗಿಷ್ಟಾರ್ಥದಾಗರ ಸಿರಿ
ಪರ್ವಿ ಕೊಂಡಿಪ ಸುಖ ಶಾಲೆ ।
ಉರ್ವಿಗೆ ಸೊಬಗಾಂತತುಳ ವೈಭವದೆ ಸು
ಪರ್ವಾಣ ಪುರವ ನಗುವುದು ॥ ೪೪

ಹರ ಸಖ ನವ ನಿಧಿಗಳನೀ ಪುರದೊಳ
ಗಿರಿಸಿದನೆಂಬಂದದಲಿ ।
ಪಿರಿದೆನಿಸುವ ಹೊನ್ನ ರಾಸಿಗಳಿಂ ಚಿನ್ನ
ವೆರದರ ಮಳಿಗೆ ಯೊಪ್ಪಿದುವು ॥ ೬೫

ಬಿಳಿ ಮುತ್ತು ಕೆನ್ನೀರ ಮುತ್ತು ಕಟ್ಟಾಣಿ ಮು
ತ್ತಳವಟ್ಟ ಮೂಕುತಿ ಮುತ್ತು ।
ತೊಳಗುವ ಕಂಠ ಮಾಲೆಯ ತೋರ ಮುತ್ತಿನ
ಮಳಿಗೆಗಳಸೆದುವರ್ತಿಯಲಿ ॥ ೬೬

ಸಣ್ಣ ಪವಳ ಕೈ ಕಟ್ಟಿನ ಪವಳಗ
ಳ್ಬಣ್ಣ ಸರದ ಜಾತಿ ಪವಳ ।
ತಿಣ್ಣ ವಡೆದ ಪವಳದ ಪಸರಗಳಾಗ
ಕಣ್ಣ ಕೊಕ್ಕರಿಸುತೊಪ್ಪಿದುವು ॥ ೬೭

ನೀಲದ ಸರ ಮಾಣಿಕದ ಕುಚ್ಚು ವಜ್ರದ
ಮೇಲು ಗೊಂಚಲು ವೈಡೂರ್ಯ ।
ಡಾಳಿಸುತಿಹ ಬಲು ಪಸರವಂಗಡಿಗಳು
ಸಾಲು ಗೊಂಡೆಸೆದುವೇ ವೇಳ್ವ ॥ ೬೮

ಮಿಂಚುವ ಪರಿವಾಣ ಚಂಬು ಗಿಂಡಿಗಳು ಸಾ
ಲಂಚಿನ ಮುಜ್ಜನ ಸಾಲೆ ।
ಪಂಚಾರತಿ ಗಂಟೆಗಳಿಂದ ಮೆರೆವುವು
ಕಂಚು ಗಾರರ ಪಸರಗಳು ॥ ೬೯

ಪಟ್ಟೆಯ ಸುರುಳು ಸೂರಿಯ ಪುಟ ಹೊಸ ಹೊನ್ನ
ದಟ್ಟ ಬಿಳಿಯ ದುಕೂಲಗಳ ।
ಪೆಟ್ಟಿಗೆಗಳ ಚಲುವಾಂತ ಮಳಿಗೆಗಳು
ದಿಟ್ಟಿಗಚ್ಚರಿಯ ಬೀರಿದುವು ॥ ೭೦

ಹಳದಿ ಪೊಸ್ಪಳಿ ಚಂದ್ರಗಾವಿ ಬೊಂಬೆಯ ಬಣ್ಣ
ಸುಲಿ ಪಲ್ಲ ಹೊನ್ನ ತಗಡಿನ ।
ಬಿಳುವಟ್ಟೆ ನಾನಾ ವರ್ಣದ ಜವಳಿಯ
ಮಳಿಗೆಗಳಸೆದುವರ್ತಿಯಲಿ ॥ ೭೧

ನರಸಿಂಹನವತಾರದ ದಿವ್ಯ ಪುರುಷನೀ
ಗರಸಾಗಲೀ ಪಟ್ಟಣಕೆ ।
ಧರಣಿ ನಾನಾ ವಿಧ ಧಾನ್ಯವನ್ನೊದಗಿಪು
ದರಿದಲ್ಲವೀನ ಬಣ್ಣಿಸುವೆ ॥ ೭೦

ಕರೆದರಾ ಯೆನುತಾಗ ಸಿರಿ ದೇವಿ ಯಾಪುರ
ದರಸಿನ ಮಂದಿರದೊಳಗೆ ।
ಸ್ಥಿರವಾಗಿ ನೆಲಸಿಹಳಂಗಡಿ ಗೇರಿಯು
ಪಿರಿದು ಭಾಗ್ಯವನೇನನೆಂಬೆ ॥ ೭೯

ಪೊಗಳಲಳವೆ ನಾನಾ ಬಗೆ ವಸ್ತುಗ
ಳಗಣಿತವಾದಂಗಡಿಗಳು ।
ಮಿಗೆ ರಾಜಿಸುತ್ತಿರ್ದುವಾ ಪಟ್ಟಣದೊಂದು
ಸೊಗಸನದೇನ ಬಣ್ಣಿಪೆನು ॥ ೭೪

ಮೇಲೆ ರಾಜಿಸುತಿಹ ಶಶಿ ರವಿ ವೀಥಿಯ
ಸಾಲ ಸೆಜ್ಜೆಗಳ ಬಾಗಿಲಲಿ ।
ನೀಲ ಕುಟ್ಟಿಮದರವಟ್ಟಿಗೆಯೊಳುನೀರ
ಬಾಲೆಯರರೆಯುತೊಪ್ಪಿದರು ॥ ೭೫

ಶಶಿ ಕಾಂತ ಕಲಶದೆ ಚಂದ್ರ ಮುಖಿಯರಾಗ
ಪೊಸ ನೀರ ಪಥಿಕರಿಗೆರೆಯೆ ।
ಒಸರಲಾ ತಂಗಲ್ಲು ಕರಗಾದ ಜಲ ತಂ
ಣಿಸದೋರಿ ಶ್ರಮವಡಗಿಪುದು ॥ ೭೬

ಕಟ್ಟಾಣಿ ವೆಂಗಳು ಜಲ ಸೂಸೆ ಪಥಿಕರು
ದಿಟ್ಟಿ ಬಲ್ಕೊಲೆಗಳ ಮೇಲೆ ।
ನೆಟ್ಟರೆ ನೀಮ್ಮಾಗಿಯಲು ಬಯಲಿಗೆ ಬಾಯು
ಬಿಟ್ಟರ್ದರೀನ ಬಣ್ಣಿಸುವೆ ॥ ೩೩

ಚದುರೆ ನೀನೆರೆವೆ ನೀರಿಂದೆನ್ನ ಹೃದಯದ
ಮದನನ ತಾಪವಳಿವುದೆ ।
ಅಧರಾಮೃತವನಿತ್ತು ವಿರಹದ ಶ್ರಮವನು
ಕದಲಿಸೆನುತ ಕೈಯ ಮುಗಿದು ॥ ೩೪

ಮೊಲೆ ಮೊಗಗಳ ಮೇಲೆ ನಟ್ಟರ್ದ ದಿಟ್ಟಿಯ
ನಲುಗಿ ಕೀಳುವ ತೆರದಂತೆ ।
ಜಲ ಧಾರೆಗೆ ಮನ ದಣಿದಾಗ ಪಥಿಕರು
ತಲೆಯನಲ್ಲಾಡಿಸುತಿಹರು ॥ ೩೫

ನಲಿದು ತಮ್ಮನಯನಗಳಲಿ ಚರಿಸಿ ನೆರೆ
ಬಳ್ದ ಪಥಿಕರಕ್ಷಿಗಳಿಗೆ ।
ಕಲಶ ಕುಚದ ಲಾವಣ್ಯಾಂಬು ವೆರೆಯುತ
ಜಲಜ ಲೋಚನೆಯರೊಪ್ಪಿದರು ॥ ೩೬

ಸವಿಯಲು ಸಂತೋಷ ಮದನನಾಗಮಿಕಿವು
ಸುವಿಲಾಸವೆಂದು ಬೆಳ್ಳಲೆಯ ।
ತವಕದೆ ಮೂರುವೆ ನೀಲಾಳಕಿಯರ
ನಿವಹವೊಪ್ಪಿದುದು ಬೀದಿಯುಲಿ ॥ ೩೭

ಕತ್ತುರಿ ಸೇವಂತಿಗೆ ದುಂಡುಮಲ್ಲಿಗೆ
ವೊತ್ತದ ಜಾಜಿ ಸಂಪಗೆಯ ।
ಇತ್ತರದಲಿ ಮೂಲೆ ಗಟ್ಟಿ ಮೂರುವ ಹೆಂಗ
ಳರ್ತಿಯನೇನ ಬಣ್ಣಿಸುವೆ ॥ ೩೮

ಮೆಯನನ ಮೊವಲಂಬು ನಮಗೆ ಸೋಲದರೆದೆ
ಗವವನುಗಿದು ಧೈರ್ಯ ಗಿರಿಯು ।
ನುಮುರು ಗುಟ್ಟುವುದೆಂದು ನಗುತೊರ್ವೆ ವಿಟನಿಗೆ
ಪದುಮೆದರಳಸಿತ್ತಳಾಗ ॥ ೪೩

ಸಲ್ಲಲಿತಾಂಗಿ ಯೊರ್ವಳು ತನ್ನಯ ಸುಲಿ
ಪಲ್ಲ ಸಾಲ್ಗಳ ತ್ರೋರಿ ನಗುತ ।
ವಲ್ಲಿಯ ಸರವಿದೆ ಕೊಳ್ಳೆಂದು ಬೆಲೆಗೊಂಡು
ನಿಲ್ಲದನನ ನಾಚಿಸಿದಳು ॥ ೪೪

ತರುಣಿ ಯೊರ್ವಳು ವಿಟನಿಗೆ ಸೋತು ಮಂದರ
ದರಳ ಮಾಲೆಯ ಪಿಡಿದಾಗ ।
ಈದೊಳಿಂಬಿಡದೆ ಕಂತದೊಳಿಕ್ಕೆ ಸನ್ನೆಯ
ನರಿದನದೇನು ಪ್ರವೃಥನೊ ॥ ೪೫

ಲಲನೆಯೊರ್ವನ ಶಿರದೆಯೊಳು ಪುಷ್ಪ ಮಾಲೆಯ
ಸಲೆ ಧರಿಸುವ ನೆವದಿಂದ ।
ಮೊಲೆದುದಿಯೊಳಗಿರಿದವನೆದೆ ಧೈರ್ಯವ
ತೊಲಗಿಸುತಿರ್ದಳೇನೆಂಬೆ ॥ ೪೬

ಪರಿಮಳ ಪುಷ್ಪವ ಕೊಳ ಬಂದ ವಿಟನಿಗೆ
ಸರಸಿಜ ಮುಖಿ ಮನ ಸೋತು ।
ಸ್ಮರ ಬಾಧೆಯ ತವಿಸುವೊಡೆ ಕೆಂದಾವರೆ
ಯರಳೆಸಳ್ಗಣೆಗಿಟ್ಟಳವನ ॥ ೪೭

ಪುಣಗು ಕಸ್ತೂರಿ ಕುಂಕುಮ ಸಿರಿ ಗಂಧವ
ಮಣಿ ವಟ್ಟಲೊಳು ಪದ ಮಾಡಿ ।
ಕ್ಷಣದೊಳು ಕ್ರಯಕೀವ ಗಟ್ಟಿವಳ್ತಿಯರ ಸಂ
ದಣಿ ಮೆರೆದುದು ಬೀದಿಯೊಳಗೆ ॥ ೪೮

ಕುಮಳಿಲೆಯಲು ಕುಂಭ ಕುಚಗಳು ಕುಣಿಯಲು
ಹರಿ ಮೆಧ್ಯ ಬಳುಕುತಿರಲಾಗ ।
ಕರದ ಕಂಕಣ ಝಣರೆನಲು ಗಂಧವ ತೇವೆ
ತರುಣಿ ರನ್ನೆಯರೊಪ್ಪಿದರು ॥ ೮೯

ಪರಿಮಳವನು ಕೊಳ್ವುಡೆಳ ಹರೆಯದ ವಿಟ
ಬರಲಾತಗೆ ಮನ ಸೋತು ।
ಸ್ಮರ ಬಾಧೆಯು ಪರಿಹರಿಪೊಡೆ ಚೆಲುವನ
ಕೊರಳಿಗಿಟ್ಟೆಳು ಕತ್ತುರಿಯ ॥ ೯೦

ಅಂಗಜ ಹೆಂಗಳ ಸಿಂಗರ ವನದೊಳು
ತೊಂಗಿಸಿ ಮುನಿ ಮೈಗಾವಳಿಯು ।
ಜಂಗುಳಿಗೊಡ್ಡಿದ ಬೆಳ್ಳಿರ ನಲೆ ಯೆನೆ
ಕಂಗೊಳಿಸಿತು ಸೂಳಗೇರಿ ॥ ೯೧

ಚರಿಸುವ ವಿಟರ ಕರಣವೆಂಬ ಖಗ ವಿಂಡಿ
ಗಿರದೊಡ್ಡಿದ ದೀಪವೆನಲು ।
ಮೆರೆದುದು ಸೂಳಗೇರಿಯ ಸಾಲು ಸಜ್ಜೆಯ
ಸುರುಚಿರ ಭವನವತಿಯಲಿ ॥ ೯೨

ಗಿಳಿಯ ಪಂಜರ ಪಾರಿವೆಗಳ ಪ್ರೊಂಗೂಡು
ಕಳಕಂಠಕೇಕೆಯ ದೀಪ ।
ತೊಳಗುವ ಸೂಳಗೇರಿಯ ಸಾಲ ಭವನದ
ಮೆಳಿಗೆಗಳೊಳಗೆ ರಾಜಿಪುವು ॥ ೯೩

ಮುದದಿಂದ ರಾಜಿಸುತಿಹ ವೋಹ ವೆಂಗಳ
ಸದನ ಪಚ್ಚ್ಯೆಯ ಲೋವೆಯೊಳಗೆ ।
ಮದನ ವಿಲಾಸವ ತೋರ್ಪ ಪುತ್ತಳಿಗಳೂ
ಪ್ಪಿದುವತಿ ಚೆಲುವಿಕೆಯಿಂದ ॥ ೯೪

ಕುಸುಮೋಸ್ತ್ರ ತನ್ನಯ ವೊನೆಯೊಳ್ಗಳಿದಿರಲಿ
ವಿಸುಗುವೆರಿಲ್ಲೆಂದು ನಗುತ ।
ಜಸ ವೆಣ್ಣಿನಿಂದ ಕೈ ನೀಡಿ ಕೊಂಡಾಡಿಪೊ
ಲ್ಪೊಸನೆಲೆ ವಾಡವೊಪ್ಪಿದುವು ॥ ೯೫

ಎಡೆಯಾಡುನಂಗನೆಯರ ಪದದಳಿಗೆಗಂಪು
ಕೊಡಹಿದ ನಿಡು ಮುಡಿಯಲರ ।
ನಿಡು ಗಂಪು ತನು ವೆಲ್ಲರಿಯ ತಂಪು ತೀವಿಕೊಂ
ಡಡಗಿಹುದಾ ಬೀದಿಯೊಳಗೆ ॥ ೯೬

ಗಿಳಿ ಸವಿನುಡಿ ಸ್ವರ ಗೋಗಿಲೆ ತನುವಲ್ಲಿ
ಯಲರು ಕಣ್ಗಡೆ ಮುಡಿ ಸೋಗೆ ।
ಕಲಹಂಸೆ ನಡೆ ನೆಲೆ ವೊಲೆ ಚಕ್ರ ಕಾವನ
ಬೆಳೆ ವನವೆನೆ ಹೆಂಗಳಿಪರು ॥ ೯೭

ಕುರುಳಿಂದ್ರನೀಲ ಕಣ್ಗಡೆ ಶುಭ್ರ ಮೌಕ್ತಿಕ
ಮಿರುಗುವ ರದನ ಕೆಂಬರಳು ।
ಸ್ಮರ ಮಣಿಗಾರ ಮೂರುವೆ ರನ್ನ ವೆಸರದಂ
ತುರೆ ಮೆರೆದಿಹರಂಗನೆಯರು ॥ ೯೮

ನಗೆ ಮಲ್ಲಿಗೆ ವೊಗ ದಾವರೆ ಕಣ್ಗಾಡಿ
ಸೊಗಸುವ ಕನ್ನೆ ಳದಿಲಾಗೆ ।
ಮುಗುಳಂಬನ ಮುಡಿಗವೆರಿದ ಪರಿಮಳ
ವೊಗುವ ಪೂದೊಂಬೆಯಂತಿಹರು ॥ ೯೯

ಪಡು ಗೆಂಪು ಚಂದ್ರಗಾವಿಯು ನೀರೆ ಕೆಂಬಲ್ಲ
ಗಡಣ ಕೆಂದಾರೆಗಳಾಗೆ ।
ಮೆಡದಿಯೊರ್ವಳು ಬಾಗಿಲಲಿ ಸಂಜೆ ವೆಣ್ಣಿನ
ಕಡು ಚೆಲುವಿಕೆಯ ಬೀರಿವಳು ॥ ೧೦೦

ಪದ ಕಚ ಪರಿಯನ್ತ ಕಟ್ಟ್ಯಾಣಿ ಮುತ್ತುಗಳ್
ಪುದುಗಿದಾಭರಣಗಳಿಟ್ಟು ।
ವಿಧು ಮುಖಿ ಯೊರ್ವಳೊಪ್ಪುದಳಾಗ ಬೆಳುಂಗಂ
ಳಧಿದೇವತೆ ಯಂದದಲಿ ॥ ೧೦೧

ಬೆರಳ ಮುದ್ರಿಕೆ ಹರಳೋಲೆ ಮುತ್ತಿನ ಹತ್ತ
ಸರ ಕಂಠ ಮಾಲೆ ಮೂಗುತಿಯ ।
ಸರಸಿಜಾಕ್ಷಿಯೆರು ಹೂವಿನ ಹೊತ್ತಿನೊಳಗಾಗ
ಚರಿಸುವರಾ ಬೀದಿಯೊಳಗೆ ॥ ೧೦೨

ಕಾಲಂದುಗೆ ಕಾಂಚಿ ಯದದು ನಿಚ್ಚಳ
ದೋಲೆ ಪುಸ್ತಿಯು ಚಿಂತಾಕು ।
ಬಾಳದೊಳಸೆವ ಮುತ್ತಿನ ಬೊಟ್ಟ ತಳದಿಹ
ನೀಲಾಳಕಿಯರೊಪ್ಪಿದರು ॥ ೧೦೩

ಮುಡಿಯ ಮುತ್ತಿನ ಬಲೆ ಮುಂಗುರುಳೊಳು ಬಿಗಿ
ವಡೆದಿಹ ಮಣಿಯ ಕುಚ್ಚು ಗಳ ।
ನಿಡುದೋಳ ಬಳೆ ತಾತಿ ಕಡಗ ಕಂಕಣವಾಂತ
ಕಡು ಚೆಲುವೆಯರೆಸೆದಿಹರು ॥ ೧೦೪

ಮುಗಿಲಟ್ಟಳೆ ಮುಡಿ ಕೊತ್ತಳ ನೆಲೆ ಮೊಲೆ
ಸೊಗಸು ಮೇಖಲೆ ಪೊಂಗೋಂಟೆ ।
ಮಿಗೆ ಪೊಕ್ಕಳಂಬುಗಂಡಿಯ ಹೆಂಗಳೆಸೆದರು
ಮುಗುಳಂಬನ ದುರ್ಗದಂತೆ ॥ ೧೦೫

ಮೊಲೆ ತಲೆ ಗೊಡ ತೋಳ್ಬಾಂಡಿಲು ಜಾವನ
ಬಲು ಮದ ಕಾಮ ರಾಯನಿಗೆ ।
ಸಲೆ ಸಂದ ಪಟ್ಟದಾನೆಗಳೆನೆ ಗಣಿಕಾ
ಲಲನೆಯರೆಸೆದರರ್ತಿಯಲಿ ॥ ೧೦೬

ವೊಳೆ ವೊಲೆ ಸೆಳ ನಡು ಸುಳಿ ನಾಭಿ ಯಲರು ಕ
ಣ್ಣೊಳವೆಳ್ಳಿ ದಿವ್ಯಾಂಗವಾಗೆ ।
ತೊಳಗುವ ವಿಟಪೀ * ವರಾಶ್ರಯದುಬ್ಬಿನಿಂ
ಕಳ ಹಂಸ ಗಮನೆಯರಿಹರು ॥ ೧೦೬

ಸೋಕಲು ಮನವೆ ಮಾತಾಡಿದೊಡವನ ಧ
ನಾಕರ್ಷಣವೆನು ಮೊಳ್ಪ ।
ಜೋಕಿನ ನಾಯಕಿಯರಿರ್ದರಾ ಕೇರಿಯೊಳ್
ಸೋಕಿದವರ ಹದನೇನು ॥ ೧೦೮

ಚರಣ ಶೋಭೆಯಲಂದುಗೆ ಕಾಂಚೀ ದಾಮ
ಹರಿ ಮಧ್ಯದ ಚೆಲುವಿಂದ ।
ಗುರು ಕುಚಗಳ ಕಾಂತಿಯಿಂ ಕಂಠ ಮೊಲೆಯ
ಸರಗಳೊಪ್ಪಿದುವೆಬಲೆಯರ ॥ ೧೦೯

ವೊಳ ವೊಲೆ ಪರಳು ವೊಲೆಗಳು ತಾವರೆ ವೊಗ್ಗ
ಗಳ ವೊಲೆ ಬೆಳಗಾಯಿ ವೊಲೆಯ ।
ಹೊಳವ ಪೊಂಗಳಸ ವೊಲೆಯರಲ್ಲದೆ ಬೀಳು
ವೊಲೆಗಳ ಹೆಣ್ಣಿಲ್ಲವೆಲ್ಲಿ ॥ ೧೧೦

ಬಡನಡು ಬಳುಕುವ ನಡು ಮೃಣಾಳದ ಮೊಲೆ
ಗೆಡೆಯಾದ ನಡು ದಿಟ್ಟಿಗಳಿಗೆ ।
ಕಡು ಸೂಹ್ಮವಾಗಿಹ ನಡುಗಳ ಹೆಂಗಳ
ಗಡಣವೆಸೆದುದರ್ತಿಯಲಿ ॥ ೧೧೧

ತಾವರೆಗಣ್ಣೆ ರಳಯಕಣ್ಣು ಮೆರಿ ಮಿಾನ
ಭಾವದ ಕಣ್ಣೆಸಳ್ಗಣ್ಣು ।
ತೀವಿದ ಸೋಗೆ ಗಣ್ಣುಗಳ ಹೆಂಗಳ ಸಾಲು
ಟೀವಿಯ ತೋರುತೊಪ್ಪಿದುದು ॥ ೧೧೨

* ಕವಿಯು ವಿಟಪಿಶಬ್ದವು ಈಕಾರಾಂತವಾಗಿರುವುದೆಂದು ಭ್ರಮಿಸಿರುತ್ತಾನೆ.

ತರಣಿಯುಗಲಲೆಮ್ಮನಿರದೆ ಬಾಧಿಸನೆಂ
ದರವಿಂದ ಚಂದ್ರನ ಪಿಡಿದು ।
ಧರೆಗೊತ್ತಿ ಬಡಿವೋಲು ಮುತ್ತಿನ ಪುಟ ಚಂಡ
ಸರಸಿಜ ಗಂಧಿಯಾಡಿದಳು ॥ ೧೧೩

ಸುರವೆಧುಗಳ ಚೆಲ್ವಿಕೆಯ ನೋಡಿ ಜರಿವೊಡೆ
ಮುರುತ ಮಾರ್ಗಕೆ ಪ್ರೋಪಂತೆ ।
ಗುರುಕುಚ ಯೊರ್ವಳು ನಲಿದುಯ್ಯಲಾಡುವ
ಭರವನದೇನ ಬಣ್ಣಿಸುವೆ ॥ ೧೧೪

ತಲವಾಗಿಲೊಳು ಘರ್ಮ ಜಲವಾರಿಪಸಿಯುಳ
ನೆಲೆ ಮೊಲೆಗಳ ನಖರೇಖೆ ।
ತೊಳಗಿತು ಸ್ಮರ ಜೋದ ಕರಿ ಶಿರಕೊತ್ತಿದ
ಬೆಳಗುವಂಕುಶ ಪತಿಯಂತೆ ॥ ೧೧೫

ಅಧರ ಬಿಂಬದ ದಂತ ಕ್ಷತ ನೈಲ್ಯ ಸಹಿತೊರ್ವ
ಸುದತಿ ರಾಜಿಸೆ ಬಾಗಿಲೊಳಗೆ ।
ಪದಪಲಿ ತಳರ್ದವ್ವಚಿದ ಮೆರಿದುಂಬಿಯ
ಪದನಂತೆ ಮೆರೆದುನರ್ತಿಯಲಿ ॥ ೧೧೬

ಬೇಸರ ತಪಿಪೊಡೆ ಪಗಡೆಗೆ ಬಂದ ವಿ
ಲಾಸದ ವಿಟನ ಕೈ ಪಿಡಿದು ।
ಸೂಸುವ ನಗೆಯಿಂದ ಮೆನೆಗೊಯ್ದು ಬಲು ವೋಹ
ಪಾಶದೆ ಬೀರಿದಳವನ ॥ ೧೧೭

ಹಳದಿ ಪಚ್ಚೆಯು ಕೆಂಪು ಕರಿಗಾಯಿ ನವ್ಮೆಂಗೆ
ಲಲಿತ ಹಾಸಂಗಿಯೊಳಿವೆ ಕೊ ।
ನಳನಾಸ್ತ್ರನ ಕಲೆ ಡಾಳದೊಳಾಡೆಂದು
ಲಲನೆ ಸೂಸಿದಳು ಜಾಣ್ಮಡಿಯ ॥ ೧೧೮

ಒಡನಾಗ ಚದುರಂಗಕೆಳಸಿ ಯೆಯ್ದಿದನ ತ
ವ್ಮೊಡತಿ ಯಿರುವ ಮನೆಗೊಯ್ದು ।
ಮಡದಿ ವೋಹದ ಬಲು ವಾತಲಿ ಚದುರಂಗ
ದಡಿಯು ವೇಲ್ದಾಯು ಪೇಳಿದಳು ॥ ೧೧೯

ಪಿಡಿ ಯಾನೆಗಳ ನಾಳೊತ್ತು ರಥಕೆ ಕೈ
ದುಡುಕು ಮಂತ್ರಿಯು ವೇಲಕೇರು ।
ಕಡು ಗುದುರೆಯ ಸೊಕ್ಕ ಮುರಿಯೆಂದು ಚದುರಂಗ
ದಡಿಯ ವೇಲ್ದಾಯ ಪೇಳಿದಳು ॥ ೧೨೦

ವಾರಿಜಗಳ ಮುಗುಳ್ದೆಗೊತ್ತಿ ಸಿರಿಸದ
ಚಾರು ಮೊಲೆಗಳೊಳು ಬಿಗಿದು ।
ಓರಂತೆ ವಿಟನೊಳು ಮೆಗ್ಗುಲ ರತಿ ಗೈವ
ವಾರಾಂಗನೆಯುರೊಪ್ಪಿದರು ॥ ೧೨೧

ಮೆಲ್ಲ ಸಾಧನೆಯಂತೆ ನಳಿ ತೋಳ್ಗಳಿಂದಪ್ಪಿ
ಯುಲ್ಲಾಸವನು ತೋರಿ ವಿಟಗೆ ।
ನಿಲ್ಲದೆ ತಳ ಮೇಲಾಗಿ ಕೂಡುವ ದಿವ್ಯ
ಸಲ್ಲಲಿತಾಂಗಿಯರಿಹರು ॥ ೧೨೨

ಹರಳೋಲೆ ಕುಣಿಯಲು ಜಡೆ ಬೆನ್ನ ನಲೆಯಲು
ಗುರು ಕುಚದೊಳು ನಲ್ಲನುರವ ।
ಇರಿದೊಡನುಪರಿ ರತದೆ ಕೂಡಿ ರಾಜಿಸು
ತರುಣಿಯೊಂದೆಡೆಯಲೊಪ್ಪಿದಳು ॥ ೧೨೩

ಸೊಕ್ಕು ಜವ್ವನೆಯು ಕಕ್ಕಸ ಕುಚಗಳಿಗೆ ಕೈ
ಯಿಕ್ಕುತ ಪುಟ ನೆಗೆದೊಡನೆ ।
ಮರ್ಕಟ ಬಂಧದೆ ಕೂಡುವ ವಿಟನದೊಂ
ದಕ್ಕರನೇನ ಬಣ್ಣಿಸುವೆ ॥ ೧೨೪

ಬಿಡದೆ ಜಂಘಾ ಕಾಂಡವ ನಿಡು ದೊಡೆಯೊಳ
ಗೊಡನೊಂದಿಸುತುಬ್ಬಿನಿಂದ ।
ಬಡನೆ ಮಂಡೂಕ ಬಂಧದೆ ಕೂಡಿ ರಾಜಿಪ
ಕಡು ಚೆಲ್ವ ವಿಟರೊಪ್ಪಿದರು ॥ ೧೮೫

ಭಾವಜ್ಞಿಯೊರ್ವಳ ಬೆನ್ನಟ್ಟಿ ಕಡು ಮೆದ
ನಾವಸ್ಥೆಯಿಂ ಮುಂದರಿಯದೆ ।
ನೀವಿಯನೆತ್ತಿ ಹಿಂಗೂಡಿ ನಗಿಪ ಹಾಸ್ಯ
ಭಾವದ ವಿಟನೊರ್ವನೆಸೆದ ॥ ೧೮೬

ಕಂಗಳೊಳಗೆ ನುಡಿ ಕರದಭಿನಯದ ಬೆ
ಡಂಗಿನೊಳಗೆ ಸನ್ನೆ ದೋರಿ ।
ಹಿಂಗದ ವಿಟರ ಬರಿಸಿ ಕೊಂಬ ಬಲು ಭಾವೆ
ದಂಗದ ಪ್ರೌಢೆಯರಿಹರು ॥ ೧೮೭

ನೋಟದೊಳೊಬ್ಬನ ನುಡಿಯೊಳೊಬ್ಬನ ನೆರೆ
ಚೇಟಿಯಿಂದೊಬ್ಬನ ಬರಿಸಿ ।
ನೀಟಿನ ಮನೆ ತಂಗಿಲ್ವಾಸೊಳು ವಂಚನೆ
ಕೂಟದ ಹೆಂಗಳೊಪ್ಪಿದರು ॥ ೧೮೮

ಸುರತಾಂತದ ಶ್ರಮವಳಿವೊಡೆ ಮೈದಿಲ
ಸೆರಗ ಜಾರಿಸಲಂಗನೆಯ ।
ಮಿರುಗುವ ಬಡ ಬಾಸೆ ಯೊಪ್ಪಿತು ಮುಖ ಚಂದ್ರ
ಗುರವೆಣಿಸುವ ರಾಹು ವೆನಲು ॥ ೧೮೯

ಸಖಿಯಿದಿರೊಳಗೊರ್ವನವರಾಧಿ ನಾಯಕ
ಮುಕುಳಿತಾಂಜಲಿ ಪುಟನಾಗೆ ।
ಮುಖ ಚಂದ್ರಮನ ಕಂಡು ಮುಗಿದಬ್ಜ ದೊಲು ಕರ
ವಿಕಸಿತವಿಲ್ಲದೊಪ್ಪಿದುವು ॥ ೧೯೦

ಬಂದೆಡೆಯೊಳಗೊರ್ವ ನೀರೆ ವಿಟನ ಮೇ
ಲ್ಪೊಂದಿದ ಮೋಹವ ಬಿಡದೆ ।
ಕಂದರ್ಪ ಕೇಳಿಯೊಳ್ಮೀಲಾಡುತಿರೆ ಸಖಿ
ಬಂದು ನೋಡಿದಳಾಕೆಯಿರವ ॥ ೧೩೧

ಅವಗತಿ ಹಿತವೆಂಬೊಲಾಕೆಗೆ ಬಹು ಬುದ್ಧಿ
ಯವತರಿಸುವ ಜಾಣ್ಮುಡಿಯ ।
ಯುವತಿಗೆ ಸತಿ ಹರುಷದೆ ಪೇಳ್ದ ಭಾವದು
ತ್ಸವವ ನಾನೇನ ಬಣ್ಣಿಸುವೆ ॥ ೧೩೨

ನುಡಿಯೆರಡಿಲ್ಲ ಕೊಡಲು ದಾತನಲ್ಲಸಿ
ನ್ನೊಡನಿದಿರಿಕ್ಕಬೇಡೆಂದು ।
ಒಡತಿಗೆ ಬುದ್ಧಿಯ ಪೇಳಿದಳಾ ನುಡಿ
ಕಡು ಹಿತವಾಯಿತವನಿಗೆ ॥ ೧೩೩

ಬಂದೆಡೆಯೊಳಗೊರ್ವ ಪೌಢೆ ಬಾಲೆಯ ಮುದ
ದಿಂದ ಕುಳ್ಳಿರಿಸಿಕೊಂಡಾಗ ।
ಕಂದರ್ಪನಾಗಮದಿರವ ಪೇಳುವ ಭಾವ
ದಂದವನೇನ ಬಣ್ಣಿಸುವೆ ॥ ೧೩೪

ಕಡು ಮತಿಯುಳಿ ಬಹ ನಲ್ಲನಿಗಿದಿರಾಗಿ
ನಡೆದು ತವಕದೆ ಕೈ ವಿಡಿದು ।
ಒಡನೆ ಮಂಚದಲಿ ಕುಳ್ಳಿರಿಸಿ ಮೈದಿಲೊಳಗೆ
ತೊಡೆವುದು ಪದ ರಜಗಳನು ॥ ೧೩೫

ಪರಿಮಳ ವಾಸದೊಳಗೆ ಮುಖ ಮೈ ಬಡಿ
ದೊರಸಿ ಕುರಳ ನೀವರಿಸಿ ।
ಕರದಲಾಪಟದೊಳು ಬೀಸಿ ಸುಖವ ಸೂಸಿ
ಪರಿಹರಿಪುದು ಪಥ ಶ್ರಮವ ॥ ೧೩೬

ಪಾನ ಪನ್ನೀರನಿತ್ತವ ಕೊಂಡು ಮಿಕ್ಕುದ
ನಾನಂದದಲಿ ಸವಿದಾಗ ।
ಮಾನಿತ ಮೆಲಯಜಗಳನಾತನಂಗಕೆ
ಸಾನುರಾಗದಲಿ ಲೇಪಿಪುದು ॥ ೧೫೬

ಅವನ ಕರಾಬ್ಜದೆ ಪರಿಮಳವನು ನಿನ್ನ
ಜವಳಿ ಮೊಲೆಗಳ ಮಧ್ಯದಲಿ ।
ತವೆ ತಿಗುರಿಸಿಕೊಂಡು ಮುಡಿಗೆ ಪೂ ಸರವ ಬ
ಲ್ತವಕದೆ ಬಿಗಿದು ಸುತ್ತುವುದು ॥ ೧೫೭

ಆತನ ಕೈಯ ಪೂ ಮೊಲೆಯ ನಿನ್ನಯ
ನೂತನ ವೇಣಿ ವಲ್ಲರಿಗೆ ।
ಪ್ರೀತಿಯಿಂ ಸುತ್ತಿಸುವುದು ಮದನಾಗಮ
ರೀತಿಯ ತಿರುಳು ನಿನ್ನಾಣೆ ॥ ೧೫೮

ಒಡೆದುದ್ದಿದ ಕ್ರಮುಕಗಳನವನೆ ಬಾಯಿ
ಗೊಡನೊಡಿ ಲಲ್ಲೆ ಮಾತಾಡಿ ।
ಬಿಡದೆ ಕುಟುಕು ಗೊಂಡಾತನ ಗಲ್ಲವ
ಪಿಡಿದು ಮುದ್ದಿಪುದು ನೀನಬಲೆ ॥ ೧೫೯

ನೆರೆ ತವಕದೆ ಬಿಳಿ ಯೆಲೆಯ ಮೊಲೆಗಳ ಮೇ
ಲಿರುವ ಮೈದಿಲೊಳು ಬೇಗೊರಸಿ ।
ಪಿರಿದು ಕೆಂಬಲ್ಲಿಂದ ಬಾಗಿಸಿ ಯಾತಗೆ
ಪರಮ ಪ್ರೀತಿಯಲೂಡುವುದು ॥ ೧೬೦

ಶಶಿ ಕಮೆಲಕೆ ಸ್ನೇಹವ ಮಾಡಿ ಚೆಂದುಟ
ರಸವ ಸವಿದು ಚಪ್ಪರಿದು ।
ವಸನವನೀಡಾಡಿ ಯಾಲಿಂಗಿಸಿ ಮೋಹ
ಪಸರಿಪುದವಗೆ ಕೇಳಬಲೆ ॥ ೧೬೧

ತಳಿರ್ಬೆಳಪನ್ನ ತಾವರೆ ಕೆಂಪಡರ್ವನ್ನ
ಸಲೆ ಚಕ್ರವಾಕದ ಬಿಣ್ಪು ।
ತೊಲಗುವನ್ನಬರ ಮನ್ಮಥನಾಹವದೊಳ
ಗಲಿಸಬೇಡಬಲೆ ನಿನ್ನಾಣೆ ॥ ೧೪೩

ಚದುರೆ ಕೇಳೀವಿಧದಲಿ ನೀನು ನಡೆದೊಡೆ
ಮದ ದಂತಿ ಮುಂ ಬಾಗಿಲೊಳಗೆ ।
ಪದಹಿನೊಳಗೆ ಕಟ್ಟದಿರದು ನಿನ್ನಿಪ್ಪಾರ್ಥ
ಮುದದೆ ಕೈ ಸಾರುವುದೊಲಿದು ॥ ೧೪೪

ಎಂದು ಪ್ರವುಡೆ ಬಲು ಬುದ್ಧಿ ಪೇಳಲು ಬಾಲೆ
ಯಂದಾರು ಭುಜವಾಗೆ ಹಿಗ್ಗಿ ।
ಮುಂದಾ ರೀತಿಯೆ ಸರಿ ಸಿರಿವಂತೆ ಯಾ
ಗಂದೊಪ್ಪಿದಳು ಲೀಲೆಯಲಿ ॥ ೧೪೫

ಮತ್ತೊಂದೆಡೆಯಲಿ ಮುದಿ ಪಾರಿ ಮಗಳ ತ
ನ್ನೊತ್ತಿಗೆ ಕರೆದುಕೊಂಡಾಗ ।
ಬಿತ್ತರಿಸಿದಳ್ಕಾಂತದೆ ಬಹು ಧನ
ವೆತ್ತಿ ಬರುವ ಮಾರ್ಗಗಳ ॥ ೧೪೬

ಕೊಡದೆ ಬೂಟಕ ವಾತಿನಲಿ ಮನ್ಮಥ ಕೇಳಿ
ಗೊಡನೈದುವ ಬೋಸರಿಗನ ।
ನಡೆ ನಾಳೆ ಕರೆವೆನೆಂದೆಬ್ಬಿಸಿ ಪೊನ್ನೀವ
ಕಡು ದಾತನ ಕರೆ ಮಗಳ ॥ ೧೪೭

ಮನೆಯಲ್ಲಿ ಮಂದಿ ಬಹಳ ಹೊನ್ನಿನ ವೆಚ್ಚ
ಘನವೆಂದವನೊಡನಾಡಿ ।
ಕನಸಿನಲಿ ನಿನ್ನನಗಲಿ ತಪ್ಪಿದೊಡೆ ನಮ್ಮ
ಜನನಿಯ ಮೇಲಾಣೆ ಯೆನ್ನು ॥ ೧೪೮

ವೀಳೆಯಕಿವು ಚಿಲುಮಾಲಿಗೆ ಕ್ರಯಕಿದು
ಸಾಲಿಯು ಸೀರೆಗಿದೆಂದು ।
ಹೇಳಿ ನೀ ಮುದ್ದು ಮಾತಿಂ ಪೊನ್ನ ಸೆಳಕೊಂಡು
ಜಾಳಿಗೆಯನು ಕಟ್ಟು ಮೆಗಳೆ ॥ ೧೪೯

ಘನವಾದೊಡವೆ ಕೈ ಸೇರುವ ಪರಿಯಂತ
ಮನೆ ದೇವರೆಂದುಪ ಚರಿಸು ।
ಅನುಗೆಡಲಾತನ ಹೊರಡಿಸಿ ಮತೊ್ತಬ್ಬ
ಧನವುಳ್ಳ ಪುರಷನ ಕರೆಕೊ ॥ ೧೫೦

ಒದ್ದ ನೋಡವನ ಕಲೆಯ ಕ್ರಮೆಗಳ ಬೆನ್ನ
ಗುದ್ದಿ ನೋಡವನ ಹರುಷವೆ ।
ಮುದ್ದು ಮಾತಿನಲಿ ವೋಹವೆ ಬೀರಿ ಯವನೊಳ
ಗಿದ್ದ ಹಣವ ತೆಗೆ ಮೆಗಳೆ ॥ ೧೫೧

ಹೆಳವನಾಗಲಿ ಯಂಧನಾಗಲಿ ಬಹು ಪ್ರಾಯ
ಗಳಿದನಾಗಲಿ ನಮಗೇನು ।
ಸಲೆ ದ್ರವ್ಯ ಕೊಡುವನುತ್ತಮ ಕೊಡದಿಹ ಲೋಭಿ
ಚಿಲುವನಾದೊಡೆ ಫಲವೇನು ॥ ೧೫೨

ಆವಾವ ಜಾತಿ ಯಾದೊಡೆ ನಮಗೇನು ಪೊ
ನ್ನಿವವನುತ್ತಮ ಜಾತಿ ।
ಭಾವಜ ಸುಖವಿತ್ತು ಹಣವ ತೆಗೆವಳೀಗ
ಕೊವಿದ ಸೂಳೆ ಕೇಳ್ಬಲೆ ॥ ೧೫೩

ಪ್ರಾಯದೆ ಹಣ ತೆಗೆಯದ ಸೂಳೆ ಕೃಷಿಯನಿ
ದರ್ಪಾಯವರಿಯದ ಪಾದಜರು ।
ಕಾಯ ವಿಡಿದ ಮೃತ ಜೀವಿ ಯಂದದೆ ಬಹು
ಳಾಯಸ ಗೊಳ್ವರು ಮೆಗಳೆ ॥ ೧೫೪

ನಿನ್ನ ಪ್ರಾಯದಲಿ ಹಣವ ಗಳಿಪೆನೆಂದು
ಮುನ್ನೂರು ಮಂಚವ ಮುರಿದೆ ।
ಎನ್ನಂತೆ ನೀನಿದ್ದೊಡೆ ಬಹು ಭಾಗ್ಯ ಸಂ
ಪನ್ನೆ ಯಾಗಿಹೆ ಧರೆಯೊಳಗೆ ॥ ೧೫೫

ತಾಳಿ ಹೊನ್ನುಂಗುರದವೆ ಬರೆ ವೋಹದ
ಬೇಳುವೆಯನು ನೀ ತಳಿದು ।
ಮೇಲಾದೊಡವೆಯ ಸೆಳಕೊಂಡಾತನ
ಚಾಳಿಸಿ ಬಿಡು ನೀ ಮಗಳ ॥ ೧೫೬

ಅನವರತವು ಹಗಲಿರುಳನ್ನದೆ ಬಂದ
ಧನ ಹೀನನಹ ಮಗ್ನ ವಿಟನ ।
ಮನೆ ಗೆಲಸದ ಭಂಟನೆನಿಸಿ ಸಿಂಬಿಯ ಕೊಟ್ಟು
ಘನವಾಗೆ ನೀರ ನೀ ಹೊರಿಸು ॥ ೧೫೭

ಕೊಡಲೊಡವೆಯ ಕಾಣದೆ ವೋಹಕೆ ಸಿಕ್ಕಿ
ಯೆಡೆ ಯೆಡೆಗೈದಿ ಬಂದವನ ।
ತೊಡೆ ಕೈ ಕಾಲನೊತ್ತಿಸಿಕೊಂಡು ನಿನ್ನಯ
ಪಡಿದಂಡಿಯ ಮಾಡು ಮಗಳ ॥ ೧೫೮

ಎನುತೆ ಬುದ್ಧಿಯ ಮಗಳಿಗೆ ಪೇಳಿ ಮುದಿ ಪಾರಿ
ಧನವುಳ್ಳ ವಿಟರನು ತಂದು ।
ತನು ಜಾತೆಗೆ ಕೂಡಿ ಹಣವನು ತೆಗೆದದೊಂ
ದನುವೆ ನಾನೇನ ಬಣ್ಣಿಸುವೆ ॥ ೧೫೯

ಬಳಿಕೊರ್ವ ಮುಗ್ಧಾಂಗನೆ ರತಿ ಕಲೆಗಳ
ತಳದು ಬರಲು ಸಖಿ ಕಂಡು ।
ಮೊಳ ನಗೆ ಮಿನುಗೆ ಹಾಸ್ಯವ ನುಡಿದಾಕೆಯ
ತಲೆ ಗುತ್ತಿಸಿದಳ್ ನನೆಂಬೆ ॥ ೧೬೦

ಎಲರಲೆ ಯಿಲ್ಲದೇಕೆಳವಳ್ಳ ನಡುಗಿತು
ಬಿಳಿಯ ಮೌಕ್ತಿಕದ ಮೆಣಿಗಳು ।
ಪೊಳೆತಿವೆ ಚಂದ್ರ ಮಂಡಲದಲ್ಲಿ ತಳರೊಳ
ಗಳವಟ್ಟಿಹ ತುಂಬಿ ಯೇನು ॥ ೧೬೧

ಪದುಮ ಕುಟ್ಮಲದೊಳಗೊಂದರ ಲೆಕ್ಕವ
ಹುದುಗಿಸಿ ಬರೆದವನಾರೊ ।
ಚದುರೆ ನೀ ಪೇಳನೆ ತಲೆವಾಗಿ ನಾಚಿದ
ಸುದತಿಯನಪ್ಪಿದಳಾಗ ॥ ೧೬೨

ಪಾಣೇಶನನಗಲಿದ ನೀರೆ ಧರ ರುದ್ರ
ವೀಣೆಯ ಕರದಲ್ಲಿ ಪಿಡಿದು ।
ಮಾಣದೆ ನುಡಿಸುತಿರಲು ಭೀತಿಯಿಂ ಪಂಚ
ಬಾಣನಲ್ಲಿಂ ತೆರಳಿದನು ॥ ೧೬೩

ವಿರಹಿಣಿ ಬಾಲ ಚಂದ್ರೋದಯದೊಳಗೆ ತ
ನ್ನೆರೆಯ ಬರಲು ಕಂಡಾಗ ।
ಪಿರಿದು ಕೋಪಿಸಿ ಜರೆದಾತನನಲ್ಲಿಂದ
ತೆರಳಿಸಿ ಬಿಟ್ಟಳೇ ವೇಳ್ವ್ಯ ॥ ೧೬೪

ಒಡನೊಬ್ಬ ಧೂರ್ತ ನಾಯಕ ಮುನಿದೊಡವೆಯ
ಕೊಡದೆ ಜಗಳವ ಗಂಟಿಕ್ಕಿ ।
ಕಡೆಗೈದುತಿರೆ ಕಂಡಾ ಹೆಣ್ಣು ನಡಿಸಿದ
ಕಡು ಚದುರತೆಯನೇ ವೇಳ್ವ್ಯ ॥ ೧೬೫

ಮುಂಗುರುಳಗರ ಕಣ್ಣಿನೊಳೂತ್ತಿ ಜಲವನು
ಹಿಂಗದೆ ತಂದುಕೊಂಡಾಗ ।
ಅಂಗನೆ ಪುಸಿಗೆ ದುಃಖಿಸುತ್ತೈದಿ ಯಾತನ
ಮುಂಗಡೆ ಯಡ್ಡ ಗಟ್ಟಿದಳು ॥ ೧೬೬

ಕರವ ಪಿಡಿಯೆ ಸಾರ್ ಸಾರೆಂದು ಜರೆದೊಡೆ
ಚರಣ ವಿಡಿದು ದುಃಖಿಸುತ ।
ಬರಿದೆ ನೀ ಮುನಿದಗಲಲು ನಿನ್ನ ಮನೆಯಿಂದ
ಹೊರಡಲೀಸುವ ಹೆಣ್ಣೆ ನಾನು ॥ ೧೬೫

ಜಾಣ ಸೇಕರ ನಿನ್ನೆಡೆಯೊಳಗೆಳ್ಳಿನಿ
ತೂಣೆಯ ವಿಡಿದ ಕಾರ್ಯಗಳ ।
ಕಾಣಿಸಿ ಕೊಂಡೆನಾದೊಡೆ ಕೇಳು ಮುಡಿ ಮೊಲೆ
ದಾಣವೆ ನಿನಗಿತ್ತಳಲ್ಲ ॥ ೧೬೬

ಹಣವೇನು ಬಾತೆ ನಿನ್ನಯ ಗುಣವೆಂಬುದು
ಮಣಿ ದಾರವಾಗೆನ್ನ ಮನವ ।
ಹ್ಷಣದಲಿ ಬೀರು ಗೊಂಪುದು ಮತ್ತೊಬ್ಬರ
ನೆಣಿಕೆ ಗೊಂಡೊಡೆ ಕಾವನಾಣೆ । ೧೬೭

ಎನುತಾಗ ನಳಿ ತೋಳ್ ಪಾಶದೊಳಗೆ ತ
ನ್ನಿನಿಯನ ಬಿಗಿದು ಬಂಧಿಸುತ ।
ಮನೆಗೆಳದೊಯ್ದು ಮಂಚದೊಳಿಂಬಿಟ್ಟುಕೊಂ
ಡನುವಾದಳಂಗಜಾಹವಕೆ ॥ ೧೬೮

ಅಧರ ರದನದೊಳಗಿಟ್ಟು ತಾ ಪದವಾಗಿ
ಯೊದಗಿ ವಹ್ನಿಸ್ಥಳಕಾಗ ।
ಎದೆಗಳ ಹೂಡಿ ನಿನ್ನಯ ಮುನಿಸನು ಕಳ
ವುದಕೆನ್ನಳವೆ ಯೆಂದಳಾಗ ॥ ೧೬೯

ಗುರು ಕುಚಗಳ ಕಳಶ ಸ್ಥಾಪನೆ ಮಾಡಿ
ವರ ಪುಳಕಾಂಬು ಸೇಚನದೆ ।
ಕೊರಳುಲಿ ಮಂತ್ರದೆ ಸುರತ ಸಾಮ್ರಾಜ್ಯದ
ಪಿರಿದು ಪಟ್ಟವ ಕಟ್ಟಿದಳು ॥ ೧೭೦

ನಗೆ ನುಡಿ ಸರಸ ಸಲ್ಲಾಪ ಮೋಹದೊಳಾಗ
ಮಿಗೆ ಮೆಗ್ನನ ಮಾಡಿಕೊಂಡು ।
ಬಗೆ ಬಗೆ ಬಂಧಕೆಳಸಿ ಬಹು ಹಣಗಳ
ತೆಗೆದಳ್ಳನೆಂಬೆನಚ್ಚರಿಯು ॥ ೧೭೩

ಒಪ್ಪುವ ಪಲಿತ ಕಾಯದ ವಿಟ ರೂಪ ಕಂ
ದರ್ಪನೊರ್ವಳಿಗೊತ್ತೆ ಗೊಡಲು ।
ಅಪ್ಪ ನೀನೆನಗೆನಲಹುದು ನಿನ್ನನು ಬಿಗಿ
ಯುಪ್ಪಲೈತಂದವನೆಂದ ॥ ೧೭೪

ಸೆರಗು ವಿಡಿಯೆ ಸಾಸರ್ಪಾರೆಂಬ ಕರವನು
ಭರದೆ ತುಡುಕಲೊಡೆಮುರಿವ ।
ಪರಳು ಮೊಲೆಗಳ ಪಿಡಿಯುಬು ನಿಟ್ಟಿಸಿ ನೋಳ್ಪ
ತರಳ ವೆಣ್ಣ್ಗಳೊಪ್ಪಿದರು ॥ ೧೭೫

ಬಳಿಕೊಂದೆಡೆಯಲಿ ತಾಳ ಮೆದ್ದಳ ಗೀತ
ಗಳ ವೇಳದರ್ತಿಯೊಳಾಗ ।
ಎಳ ವೆಂಗಳಿಗೆ ನಾಟ್ಯ ಕಲಿಸುವ ಭರತ ಜ್ಞಾ
ರುಲುಹೊಪ್ಪಿತಾ ಬೀದಿಯೊಳಗೆ ॥ ೧೭೬

ಶಕುನಿ ಮೆಂಚದ ರವ ಪಾರಿವೆಗಳ ರವ
ಚಕಿತ ಚಪಲ ನೇತ್ರೆಯರ ।
ವಿಕಸಿತ ಸಂಗೀತ ರವ ಚರಿಪರ ಶ್ರುತಿ
ಸುಖಕರವೇನ ಬಣ್ಣಿಸುವೆ ॥ ೧೭೭

ಬಂದೆಡೆಯೊಳಗೊರ್ವ ನಾರಿಯೊಡನೆ ವಿಟ
ಚಂದಿರ ಮುನಿದಲ್ಲಿಂದ ।
ಬಂದಾಗ ಮತ್ತೊಬ್ಬ ಗಣಿಕೆಗೊತ್ತೆಯನಿತ್ತು
ಕಂದರ್ಪ ಕೇಳಿಯೊಳರಲು ॥ ೧೭೮

ತವೆ ಕೆಳದಿಯರಿಂದದನರಿತವಳಿರ್ದ
ಭವನಕೆ ಬಂದಾನಾರಿ ।
ಅವಿರಳ ಕೋಪವ ತಾಳಿ ಮರ್ಮವ ಪೇಳಿ
ಬವರವನೆಸಗಿದಳಾಗ ॥ ೧೭೯

ಎಲೆ ಹೆಣ್ಣೆ ನನ್ನಿನಿಯನ ನಿನ್ನ ಮನೆಗೊ
ಯ್ದಲರಂಬ ಕೇಳಿಯನಿತ್ತು ।
ನಲಿವೆ ಕೇಳ್ ನಿನ್ನ ಮುಂದಲೆ ಮೊದಲೊರ್ವಗೆ
ಸಲೆ ಕೊಳು ಹೋದುದನರಿಯಾ ॥ ೧೮೦

ನಾಯಕಿಯಾದೊಡೆ ಯದರ ಮಾರ್ಗವು ಬೇರೆ
ಯಾಯತವರಿಯದೆ ಹೀಗೆ ।
ನ್ಯಾಯವ ತಿಳಿಯದೆ ಮಾಯವ ಮಾಡಿದೆ
ದಾಯವು ತಿಳಿಯಿತು ನನಗೆ ॥ ೧೮೧

ಕೊಳುಹೋದವಳಿಗೊತ್ತೈಯನಿತ್ತು ಮನಸಿಜ
ಕೇಳಿಯನೆಸಗಿದಧಮನ ।
ಲಾಲಿಸಿ ಬಳಿಕಿನ್ನು ನಾ ನೆರೆದೊಡೆ ನನ್ನ
ಸೂಳೆ ತನಕೆ ಕುಂದು ಬಹುದು ॥ ೧೮೨

ಕುಂದು ಕೊರತೆಯ ಹೊರುವ ಹೆಣ್ಣೆ ನೀನು ನಿ
ನ್ನಂದವು ನಾನರಿಯದುದೆ ।
ಹಿಂದೊರ್ವಗೆ ಮೊಲೆದುದಿಯು ಕೊಯ್ದಿತ್ತ ನಿ
ನ್ನಂದಿನ ಹೀನ ವೇನಾಯ್ತು ॥ ೧೮೩

ಮೊಲೆದುದಿ ಮೈದಿಲ ಮರೆಯೊಳಿರುವುದೆಂದು
ಸಲೆ ನಾಚಿಕೆಯನು ತೊರೆದು ।
ಬಲ ಗೈಬೆರಳನೊರ್ವನಿಗಿತ್ತೆ ಮೊಣ್ಣೆಯಿಂ
ದುಲಿದು ಭಂಗಿಸರೆ ಕಂಡವರು ॥ ೧೮೪

ಹುರಿಭಂಗಿಯ ಸೊಕ್ಕೇರಿ ನೀನೊತ್ತೆಯ
ನಿರದಿತ್ತ ವಿಭನನು ಮರೆತು ।
ಮರಳಿ ಯೊರ್ವನ ಕರೆದಿರ್ವರ್ಗೆ ಹದನವೆ
ಬರಿದೆ ಗಂಟಕ್ಕಿದ ಭಂಡೆ ॥ ೧೪೫

ಇದು ಭಂಡತನವೆ ಮಗ್ಗುಲೊಳಿದ್ದವನ ಕೂಟ
ಕೊದಗಲಾರದೆ ನಿದ್ದೆಗರೆದು ।
ವದನಕ್ಕೆ ಮೆಸಿ ಸುಣ್ಣ ವ ಬರೆಯಿಸಿ ಕೊಂಡ
ಚದುರೆ ವೆಣ್ಣಲ್ಲವೆ ನೀನು ॥ ೧೪೬

ಇಂತಿರ್ವರು ಮರ್ಮ ಗದನದೊಳಿರುತಿರೆ
ಯಿಂತೊರ್ವ ಮುದಿ ಹಾರಿ ಬಂದು ।
ಕಂತು ಶಾಸ್ತ್ರಾಲಾಪದೊಳಗವರ ನೆರೆ
ಸಂತರ ಮಾಡಿದಳಾಗ ॥ ೧೪೭

ಒಡನೊಂದೆಡೆಯಲಿ ಪಂಜರದರ ಗಿಳಿ
ಮಡದಿರನ್ನೆಯ ಕೂಡಾಗ ।
ಸಡಗರದಲಿ ಕೋಪದುತ್ತರಗಳನೀವ
ಬೆಡಗನದೇನ ಬಣ್ಣಿ ಸುವೆ ॥ ೧೪೮

ಗಗನವ ತಬ್ಬಿ ತಾರೆಗಳ ಪೊಯ್ದೆಬ್ಬಿಸಿ
ನಗಕುಲಗಳನಲ್ಲಾಡಿ ।
ಮಿಗೆ ಕತ್ತಲೆಗೆ ಕೈಯಿಟ್ಟರು ಕಾವನ
ಜಗಳದಾಳಂದುದು ನಗುತ ॥ ೧೪೯

ಬತ್ತಿದ ಗಲ್ಲ ಹತ್ತಿದ ವೊಲೆ ನೆಲದೊಳ
ಗೊತ್ತಿ ಹೂಡಿದ ಕೈಗೋಲು ।
ಹೊತ್ತ ಬೆಳ್ನರೆ ಕೂದಲಾ ಮುದಿ ಸೂಳೆಯರ
ವೊತ್ತವೊಪ್ಪಿದುದಾಗಲ್ಲಿ. ॥ ೧೫೦

ಮಾಸಿದ ಸೀರೆ ಮೆಸಿಯು ತಿಲಕದ ಹೊರ
ಸೂಸುವ ಬಾಯು ಜೊಲ್ಲಿಂದ ।
ಕೇಕ ತುಂಬಿದ ಬೆಳ್ನಗೆಯು ಹಾಸ್ಯದ ಮುದಿ
ವೇಶಿಯರೆಡೆ ಯಾಡುತಿಹರು ॥ ೧೯೧

ಕಣ್ಣಿವೆ ಬಿಳುಪೇರೆ ಕಪ್ಪ ಹತ್ತಿಸಿ ಮುಖ
ಕೆಣ್ಣೆಯು ಮಿಂಚುಗಳಿಕ್ಕ ।
ಹುಣ್ಣು ಗಲೆಯು ಸೀರೆಯಲಿ ಮರಸಿಹ ಮುದಿ
ಪಣ್ಣಾಂಗನೆಯರೊಪ್ಪಿದರು ॥ ೧೯೨

ಬಿದ್ದ ವೊಲೆಯು ರವಿಕೆಯೊಳೀರಿಸಿ ಕಟ್ಟಿ
ಯೊದ್ದು ಸುಮ್ಮಾನದಲಿ ನೆಲನ ।
ಶುದ್ಧಾಂಗದ ಪಾತ್ರವೆಣ್ಣು ಗಳ್ತಾವೆಂದು
ಹೊದ್ದಿ ವಿಟರ ನಗಿಸುವರು ॥ ೧೯೩

ಹರಯುಗಳಿದ ಪೆಣ್ಣಿನ ಸಂಗ ಸುಖ ವೆಳ
ಹರಯದ ಹೆಣ್ಣಿನೊಳುಂಟೆ ।
ನೆರೆ ಪಕ್ವವಾದ ಫಲದ ಸವಿ ಕಸಿ ಗಾಯೊ
ಳಿರುವುದೆ ಹೇಳನುತಿಹರು ॥ ೧೯೪

ಮೆಟ್ಟಿದ ಚಮ್ಮಾರುಲಿಯು ಪೆರೆನೊಸಲೊಳ
ಗಿಟ್ಟ ಕಸ್ತೂರಿಯು ತಿಲಕದ ।
ಮುಟ್ಟಿ ಪಿಡಿದ ಕೈ ಸಾಣೆಯ ಕೊನಬುಗ
ಳಿಟ್ಟಣಿಸಿಹರು ಬೀದಿಯಲಿ ॥ ೧೯೫

ಸೂಳೆ ಬಾಟಿಕೆಯು ಜಗಳ ಕಾಗ ರತಿ ಶಾಸ್ತ್ರ
ವಾಳಾಪದ ನ್ಯಾಯುಗಳ ।
ಹೇಳಿ ಬಿಡಿಸಿ ಕಲಹವ ನಿಲಿಸುವರ ಸ
ಮ್ಮೇಳದೆ ಬೀದಿಯೊಪ್ಪಿದುದು ॥ ೧೯೬

ತಗರು ಸಿಪಲೆ ಕೊೋಳಿ ಕಾಳಗಗಳು ನೆರೆ
ಪಗಡೆ ಜೂಜುಗಳ ನೆವದಲಿ ।
ಬಗೆ ಬಗೆಯಲಿ ಸಿಂಗರಿಸಿ ಯಾ ಬೀದಿಯೊಳ್
ಸೊಗಸು ಗಾರರು ಚರಿಸುವರು ॥ ೧೯೩

ಈ ಪರಿಯಲಿ ವೇಶ್ಯಾ ವಾಟ ನವ ಪುಷ್ಪ
ಚಾಪನ ಬಂಡಾರದಂತೆ ।
ರೂಪು ವಡೆವ ಶ್ರೀರಂಗ ಪಟ್ಟಣದಲ್ಲಿ
ತಾ ಪಿರಿದಾಗಿ ರಂಜಿಸಿತು ॥ ೧೯೪

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದೆ ಸುಧರ್ಮಾನುಬಂಧಿ ॥ ೧೯೫

ಒನೆಯ ಸಂಧಿ ಸಮಾಪ್ತಂ

ಏಳನೆಯ ಸಂಧಿ.

(ಅರಮನೆಯ ವರ್ಣನೆ)

ಸೂಚನೆ ॥ ಅರಮನೆ ರಂಗೇಶನ ಗುಡಿ ನರಸಿಂಹ
ನಿರುವ ಮಂದಿರವ ವರ್ಣಿಸುವೆ ॥

ಮತ್ತೆ ಮೆರೆವ ಶಶಿ ರವಿ ವೀಥಿಗಳೊಳ
ಗಿತ್ತರದಲಿ ಸಾಲು ಗೊಂಡು ।
ಸುತ್ತಣ ದೊರೆ ಮನ್ನೆಯರುಪ್ಪರಿಗೆಗ
ಳಿತ್ತುವು ಕಣ್ಗೆ ಕೌತುಕವ ॥ ೧

ಸೊಗಸುವ ಸಾಲ ಹರ್ಮ್ಯಾಗ್ರದ ಕಳಸದೆ
ಝಗ ಝಗಿಸುವ ಹೊನ್ನ ಕಾಂತಿ ।
ಗಗನ ಮಂಡಲದ ಸೂರ್ಯನ ದಿವ್ಯ ಕಿರಣವ
ಮಿಗುವುದದೇನ ಬಣ್ಣಿಪೆನು ॥ ೨

ನೆಲ ವಾಡದಗ್ರದೊಳೊಪ್ಪುವ ಮುತ್ತಿನ
ಪಳುಕಿನ ಧವಳ ವರ್ಣಗಳ ।
ಬೆಳುದಿಂಗಳಂದಾಗ ಜೊನ್ನ ವಕ್ಕಿಗಳ್ಳೆದಿ
ನೆಲಸಿದುವತಿ ಮುದದಿಂದ ॥ ೩

ಮಿರುಗುವ ಸಾಲ ಸೆಜ್ಜೆಯಲಿ ತೆತ್ತಿಸಿದ ಕೆಂ
ಬರಲ್ಗಳ ದೀಧಿತಿ ಯೆಸೆಯೆ ।
ಅರುಣಾಬ್ಜವೆಂದು ಮೋಹಿಸಿ ತುಂಬಿ ವಿಂಡುಗ
ಳರಗುವುವತಿ ಸಂಭ್ರಮದಲಿ ॥ ೪

ಮಿಸುಪ ಬೆಳ್ಳಂಪ್ಪರಿಗೆಗಳೊಳು ಪಚ್ಚೆ ಯ
ಪೊಸತಾದ ಪಟಗಳೊಪ್ಪಿರಲು ।
ಉಸಿರಲಚ್ಚರಿ ತಮ್ಮ ಕುಲವೆಂದು ಗಿಳಿವಿಂಡು
ಮುಸುಕಿಹುವತಿ ಪ್ರೀತಿಯಿಂದ ॥ ೫

ನೆಲ ವಾಡ ಬೆಳ್ಮುಗಿಲ್ ನವೆ ರತ್ನ ತೋರಣ
ಹೊಳವಿಂದ್ರ ಚಾಪಗಳಂದು ।
ಲಲನೆಯು ಕಣ್ಣಾಡಿ ಮಿಂಚೆಂದು ಚಾತಕ
ನಲಿವುವು ಮಳೆ ಗಾಲವೆಂದು ॥ ೬

ನೆಲೆಯುಪ್ಪರಿಗೆಗಳ ನಿರ್ಮಾಲ ಸ್ಥಳದೊಳು
ಸುಳಿವಂಗನೆಯರ ಸೋರ್ಮುಡಿಯ ।
ವಿಲಸಿತ ಕಾಗಾರ್ಲದ ಮುಗಿಲೆಂದಾಗ
ಸಲೆ ನಟಿಸುವುವು ಸೋಗೆಗಳು ॥ ೭

ಇತ್ತೆರದೊಳಗೊಪ್ಪುವ ರಾಜ ಗೇಹದ
ಮುತ್ತಿನ ಬಾಗಿಲಿದಿರೊಳು ।
ಬಿತ್ತರವಹ ಮಿಸುನಿಯ ನವಿಲುಯ್ಯಾಲೆ
ಯಿತ್ತುವು ಕಣ್ಗೆ ಕೌತುಕವ ॥ ೮

ಬಾಗಿಲ ಮುಂದಣ ನವಿಲುಯ್ಯಾಲನೇರಿ
ತೂಗುತಿರ್ಪಳ ವೆಣ್ಣಗಳ ।
ಸೋಗೆ ಗಣ್ಮರಿ ಮಿಾನು ಸುಳಿದಾಡುವ ಜನ
ಸಾಗರದೊಳಗೊಪ್ಪುತಿಹುವು ॥ ೯

ತೇಜಿಗಳನು ಕುಣಿಸುವರು ಕಲಭವನು
ಮಾಜದೆ ಬೀದಿ ವರಿಸುವ ।
ರಾಜ ಕುಮಾರರ ಸೌಭಾಗ್ಯ ನೆರೆ ವಿ
ಭ್ರಾಜಿಸಿತಾ ಕೇರಿ ಯೊಳಗೆ ॥ ೧೦

ತಗರ ತಲೆಗೆ ಜಂಬೀರದ ಪುಳಿ ಯಿಟ್ಟು
ಮಿಗೆ ನಸೆ ಯೇರಿಸಿ ನಗುತ ।
ಜಗಳವ ಕಾದಿಸುತಿಪ ರಾಜ ಪುತ್ರ್ರರು
ಸೊಗಸಿದರಾ ಬೀದಿಯೊಳಗೆ ॥ ೧೧

ಕುಕ್ಕುಟಗಳ ಕಾಲ್ಗೆ ಚೀಲಾಯುಧವಿಕ್ಕಿ
ಸೊಕ್ಕು ಮದ್ದಿನ ಗುಟುಕಿತ್ತು ।
ಉಕ್ಕಂದದೆ ಕಾದಿಸಲು ಮುಕ್ಕಳ ನೊತ್ತ
ಕಿಕ್ಕಿರಿದೆಸೆದುದರ್ತಿಯೊಳು ॥ ೧೦

ನವ ರತ್ನ ಗೇಹದ ಬಾಗಿಲ ವೇದಿಯೊ
ಳವನೀಶ್ವರರ ನಂದನರು ।
ತವಕದೆ ನಿಸಲೆ ವಕ್ಕಿಗಳ ಕಾದಿಸುತಿಹ
ಸು ವಿಲಾಸವನೇ ವೇಳ್ವ ॥ ೧೩

ಗೌಜಲ ವಕ್ಕಿಯ ಕಾಳಗವನು ಬಾ
ನೋಜಿನಿಂದಲಿ ಮಾಡಿಸುವರು ।
ಈ ಜಗದಲ್ಲಿ ಯಿದಕೆ ಸಮನಿಲ್ಲೆಂದು
ಸೋಜಿಗಪಡುತಿರ್ಪರವರು ॥ ೧೪

ಜಾತಿಯ ಕುಕ್ಕುಟಗಳ ಕಾಲ್ಗೆ ಗಗ್ಗರ
ಪ್ರೀತಿಯಿಂದಲೆ ತಾವು ಹಾಕಿ ।
ರೀತಿಯನರಿತು ಕಾಳಗವನು ಬಿಡುತಿಹ
ರೀತೆರನೇನ ಬಣ್ಣಿಪೆನು ॥ ೧೫

ಗೊಳಿ ಕಾಳಗಗಳ ಧೂಳಿಯ ನೋದೊಳು
ಕೇಳಿಯ ಚೌಕವ ಮಾಡಿ ।
ಕಾಳಗವನು ಮಾಡಿಸುವ ರಾಜ ಪುತ್ರ್ರರ
ಸಾಲುಗಳಿರುತಿರ್ಪುವಲ್ಲಿ ॥ ೧೬

ಗರಡಿಯೊಳಗೆ ಸಾಧನ ಗೈದು ನೇಹದೊ
ಳಿರುವ ಜಲವ ಮೇಲೆ ಧರಿಸಿ ।
ಮಿರುಪ ಕುಂಕುಮ ವಸನದ ಕೈ ಸಾಣೆಯ
ದೊರೆಗಳ ಕುವರರೈದಿಹರು ॥ ೧೭

ಪೀತು ಸಾಧನೆಗಳ ಜೋಕಿನ ಪಟವನ್ನು
ರೀತಿ ತಿಳಿದು ವರಸೆಗಳ ।
ನೂತನ ಕತ್ತಿ ಕಠಾರಿ ದೊಣ್ಣೆಯ ಸಾಧ
ಕೋತ್ತಮ ರಾಜ ಕುವರರು ॥ ೧೮

ಮುತ್ತಿನ ದಡ್ಡಿಯ ಪಲ್ಲಕ್ಕಿ ಯೇರಿ ತ
ಮ್ಮೊತ್ತಿನೊಳ್ಪಹ ಕೆಳದಿಯರ ।
ಮೊತ್ತದೆ ದೊರೆ ಕುವಾರಿತಿಯರಾ ಬೀದಿಯೊ
ಳರ್ತಿಯೊಳಡೆಯಾಡುತಿಹರು ॥ ೧೯

ದೊರೆಗೆ ಕಾಣಿಕೆ ಯೀವ ವಸ್ತು ವಾಹನಗಳ
ಪಿರಿದು ಸಂದಣಿಯ ಸಾಲಿನಲಿ !
ಅರಮನೆಗೈದುವ ಮನ್ನೆಯರುಗಳಾಗ
ಮೆರೆದರು ತಂಡ ತಂಡದಲಿ ॥ ೨೦

ಪರಿ ಪೂರ್ಣ ಚಂದ್ರನ ಪ್ರಭೆಯ ಸೋಲಿಸುತಾಗ
ನೆರೆ ದಿವ್ಯ ಧವಳ ವರ್ಣದಲಿ ।
ನರಸ ಭೂ ವರನರಮನೆಯು ವಜ್ರದ ಕೋಟೆ
ಪರಿ ಶೋಭಿಸುವ್ರದುನ್ನ ತದೆ ॥ ೨೧

ನರಸ ರಾಜೇಂದ್ರನ ಭಾಗ್ಯ ಲಕ್ಷ್ಮಿಯ ಮುಖ
ಸರಸಿಜದೆಸಳುಗಳಂತೆ ।
ಅರಮನೆಯತುಳ ಶಾಲಾಗ್ರದೆ ಮೆರೆವೆ ಪೊಂ
ಗರುವಿನ ತೆನೆಗಳೊಪ್ಪಿದುವು ॥ ೨೨

---

* ಈ ಪದ್ಯದ ಅರ್ಥವು ಅನನ್ವಿತವಾಗಿದೆ.

ರಜತಾದ್ರಿ ಪಲವು ರೂಪನು ತಾಳಿ ಭೂಪನ
ನಿಜ ಗೇಹ ಪ್ರಾಕಾರದೊಳಗೆ ।
ವಿಜಯ ಲಕ್ಷ್ಮಿಗೆ ಬೀಡಾರವಾದೊಲು ಪರ್ವೋ
ತ್ರಿ ಜಗಕಚ್ಚರಿಯ ಬೀರಿದುವು ॥ ೩೩

ಸಲಿ ನರಸೇಂದ್ರನ ಕುಲ ಛಲ ವಿತರಣ
ಬಲ ಧೈರ್ಯಗಳನ್ನತಿಯ ।
ಗೆಲವಿಂದ ದಿಗ್ದೇಶಕರುಪುವಂತಾಗಲಾ
ನೆಲೆಯುಪ್ಪರಿಕೆಗಳೊಪ್ಪಿದುವು ॥ ೩೪

ನೆರೆ ಜಯ ಸಿರಿ ಭಾಗ್ಯ ಸಿರಿ ಶಾರದ ಲಕ್ಷ್ಮಿ
ಪಿರಿದಪ್ಪ ಧೈರ್ಯ ಲಕ್ಷ್ಮಿಯರು ।
ನರಸೇಂದ್ರಗೊಲಿದಿರಲವರ ಮುಖಾಬ್ಜದೊ
ಲ್ಮೆರೆದುವುಪ್ಪರಿಗೆ ಚೌದೆಸೆಯ ॥ ೩೫

ಇಂತೊಪ್ಪುತಿಹ ದಿವ್ಯ ಧವಳದುಪ್ಪರಿಗೆಗ
ಳಂತರಾಂತರದ ಭಿತ್ತಿಯಲಿ ।
ಸಂತೋಷದೆ ಮೋಹ ರಸವ ಸೂಸುತ ಚೆ
ಲ್ವಂತ ಪುತ್ತಳಿಗಳೊಪ್ಪಿದುವು ॥ ೩೬

ಭಾರತ ರಾಮಾಯಣ ಭಾಗವತದ ಶೃಂ
ಗಾರದ ಕಾವ್ಯ ನಾಟಕದ ।
ಚಾತುರದ ಪೊನ್ನ ಪುತ್ತಳಿಗಳ ಶೃಂ
ಗಾರವನೇನ ಬಣ್ಣಿಸುವ ॥ ೩೭

ಅರಸಂಚೆ ಸೋಗೆ ನವಿಲು ಬಣ್ಣ ಗೋಗಿಲೆ
ಹರಿ ರಥಾಂಗದ ಪ್ರತಿಮೆಗಳು ।
ವೆರೆದುವು ಚೌದೆಸೆಯುಪ್ಪರಿಗೆಗಳೊಳು
ಸ್ಮರ ಧೀರನ ಬಲದಂತೆ ॥ ೩೮

ಆನೆ ವರಾಹ ಕಾಳ್ಕೀಣ ಪೆರ್ಬುಲಿ ಸಿಂಹ
ವೇನೆಂಬೆ ಹರಿಣ ಭೇರುಂಡ ।
ನಾನಾ ಬಗೆಯ ಮೃಗಾಂಕಿತವೆಸೆದಿಹು
ವೇನ ಬಣ್ಣಿಪೆ ಹರ್ಮ್ಯಗಳಲಿ ॥ ೮

ಮಿರುಗುವ ಹೊಸ ಪೊನ್ನ ಕಂಬ ಪಟ್ಟೋಳಿಯು
ಸರ ಗೊಂಡೆಯದ ಲೋವೆಯಿಂದ ।
ವೆರ ರತ್ನದ ಪ್ರತಿಮೆಗಳಿಂದ ಭೂಪನ
ಹಿರಿಯು ಹಜಾರವೊಪ್ಪಿದುದು ॥ ೯

ಸುರಪನಾಶ್ಚನ ಮಂಟಪದ ಶೃಂಗಾರದ
ಪರಿವಿಡಿಯನು ಸೋಲಿಸುತ ।
ಮಿರುಗುವ ಬಾಲಾರ್ಕ ತೇಜವ ಸೂಸುತ
ವೆರ ಚಿತ್ರ ಶಾಲೆ ಯೊಪ್ಪಿದುದು ॥ ೧೦

ಪಕ್ಷಿ ವಾಹನಗೆ ಪದ್ಮಜನೈದಿ ಕೌಶಲಾ
ಪೇಕ್ಷೆಯೊಳಗೆ ನಿರ್ಮಿಸಿದ ।
ರಕ್ಷಾ ಮಂಟಪವೆನೆ ದಿವ್ಯ ಕಾಂತಿಯಿಂ
ಲಕ್ಷ್ಮೀ ವಿಲಾಸವೊಪ್ಪಿದುದು ॥ ೧೧

ಭರ್ಗ ಸಖನ ಭಂಡಾರದ ನವ ರತ್ನ
ವರ್ಗದ ಬಿತ್ತಿಗಳಿಂದ ।
ದೀರ್ಘವೆಡೆದು ದಿವ್ಯ ಕಾಂತಿಯು ಬೀರುತ
ದುರ್ಗಾ ಮಂಟಪವಿಹುದು ॥ ೧೨

ಧಾರಿಣಿಗತಿ ಸೊಬಗಲಿ ಗಿರಿ ಸುತೆಯ ಶೃಂ
ಗಾರದ ಕಲ್ಯಾಣಗಳ ।
ಚಾರು ತರದ ಚೆಲ್ವ ಚಿತ್ತರದಿಂದಲಾ
ಶಾರದಾ ಮಂಟಪ ವಿಹುದು ॥ ೧೩

ನವರತ್ನಗಳ ಕಂಭ ಮಿಸುನಿಯ ಬೋದಿಗೆ
ತವೆ ಯಿಂದ್ರಗೋಪದ ಲೋವೆ ।
ಪವಳ ಮಣಿಯ ಮೇಲ್ಕಟ್ಟಿನ ಸೊಬಗಿಂದ
ಭುವನೇಶ್ವರಿ ಯೊಪ್ಪಿದುದು ॥ ೫೫

ಅರ ಗಿಳಿ ನವಿಲು ಕೋಗಿಲೆ ಕೊಂಚೆ ಕೊಳರ್ವಕ್ಕಿ
ಸುರನಾರಿಯರ ವಿಲಾಸಗಳ ।
ಹರುಷದೆ ಬೀರುತ ಹೊಳೆವ ಪುತ್ತಳಿಗಳಿಂ
ವರ ನಾಟಕ ಶಾಲೆ ಯಿಹುದು ॥ ೫೬

ಕಂದರ್ಪ ರತಿಯ ವಿವಾಹೋತ್ಸವಕಬ್ಜ
ನಂದನ ಮಿಗೆ ವಿರಚಿಸಿದ ।
ಬಂಧುರ ವಡೆದ ಮೋಹನ ಶಾಲೆ ಯುದದೆ
ಯಿಂದಿರಾ ಮಂದಿರ ವಿಹುದು ॥ ೫೭

ಶೃಂಗಾರದಾಗರ ಸುಖ ಮಯ ಸಾಗರ
ಮಂಗಲಾರ್ಥಕೆ ನಲಿ ವೀಡು ।
ಕಂಗೊಳಿಸುವ ದಿವ್ಯ ಕಾಂತಿಯ ತೀಡುತ
ಬಂಗಾರ ಚೌಕಿ ಯೊಪ್ಪಿದುದು ॥ ೫೮

ಮುದವಡೆದೆಸವ ಚೌರಾಸೀತಿ ಬಂಧದ
ವಿಧದ ರತಿಯ ತೋರಿ ಮೆರೆವ ।
ಪ್ರದುಗಿದ ನವರತ್ನದ ಪ್ರತಿಮೆಗಳಿಂದ
ಮದನ ವಿಲಾಸ ರಂಜಿಸಿತು ॥ ೫೯

ಬಳಸಿಕೊಂಡಿಹ ರತ್ನ ಜಾಳಾಂದ್ರ ಭಿತ್ತಿಯೊ
ಳಳವಟ್ಟು ಮೋಹವ ಬೀರ್ವ ।
ವಿಲಸಿತ ಪ್ರತಿಮೆಗಳಿಂದಾಗ ಸೌಂದರ್ಯ
ನಿಳಯ ರಾಜಿಸಿದುದರ್ತಿಯಲಿ ॥ ೬೦

ಸುಜನ ರಕ್ಷಾಮಣಿ ಕಂಠೀರವೇಂದ್ರನ
ಭುಜಲಕ್ಷ್ಮಿ ನಲಿದು ರಾಜಿಸುವ ।
ನಿಜವಾದ ನವ ರತ್ನ ಕಾಂತಿಯು ಬೀರುವ
ವಿಜಯ ಭವನ ವೊಪ್ಪುತಿಹುದು ॥ ೪೦

ದಿಟ್ಟಿಗೆ ನೂತನವಾದವರಂಜಿಯ
ಕಟ್ಟೆರಕದ ಭಿತ್ತಿಯಿಂದ ।
ಸೃಷ್ಟೀಶನ ರಾಣಿಯರ ನವ ರತ್ನದ
ತೊಟ್ಟಿಗಳಿಹುವೆರ್ತಿಯಲಿ ॥ ೪೧

ಮಿಸುನಿ ಗಂಬದ ಪಟ್ಟಸಾಲೆ ನಾನಾ ಬಗೆ
ಯೆಸವ ಮೇಲ್ಕಟ್ಟುಗಳಿಂದ ।
ಹುಸವ ಬೀರಿದುವು ನಾಟಕ ಶಾಲೆ ಯಬಲೆಯ
ರೆಸೆದಿಹ ಮಣಿ ಮಯ ಭವನ ॥ ೪೨

ಜ್ಯೋತಿಷ ಕಾವ್ಯ ನಾಟಕ ಶಾಸ್ತ್ರ ಸಂಗೀತ
ರೀತಿ ಕೋವಿದೆಯರೊಪ್ಪಿರುವ ।
ನೂತನವಹ ಭವನಗಳಾಗ ನವ ರತ್ನ
ಜಾತ ಬೀರುತಲೊಪ್ಪಿಹುವು ॥ ೪೪

ರಾಜೇಂದ್ರ ಮುಖಿಯರಾಭರಣದ ಕಾಂತಿ ವಿ
ಭ್ರಾಜಿಸಿ ಮೆರೆಯಲಾಸ್ಥಳದೆ ।
ರಾಜಶೇಖರ ಕಂಠೀರವ ಭೂಷನ
ಭೋಜನ ಶಾಲೆ ಯೊಪ್ಪಿಹುದು ॥ ೪೫

ಬಳಬೊಕ್ಕಸ ಪೂರ್ಣ ಭಂಡಾರದ ಪೊನ್ನ
ನಿಳಯಗಳತಿ ಸೊಬಗಿನಲಿ ।
ತೊಳಗಿದುವರಸನ ಸೌಭಾಗ್ಯದ ಬಲು
ಬೆಳಸನದೇನ ಬಣ್ಣಿಸುವ ॥ ೪೬

ಬಿಡದೊಪ್ಪುವೊಳ ಉಗ್ರಾಣ ನಾನಾ ಬಗೆ
ಷಡುರಸಾನ್ನಗಳ ಪಾಕಗಳ ।
ಕಡು ಚೆಲ್ವ ಗೃಹಗಳಂದರ ಮನೆಯೊಳಾ ಬಲು
ಬೆಡಗ ಬೀರಿದುವರ್ತಿಯಲಿ ॥ ೪೬

ಇಳೆಯೊಳೊಪ್ಪುವ ವೈರಿ ನೃಪರ ದಂಡಿಸಿ ನೆರೆ
ಸೆಳೆದು ತಂದಾಯುಧದ ಶಾಲೆ ।
ತೊಳಗಿದುವವನೀಶ್ವರನರ ಮನೆಯೊಳ
ಗಳವಟ್ಟು ಬಲು ಸೊಗಸಿಂದ ॥ ೪೭

ಪಾತಾಳ ಗಂಗೆ ಕಂಠೀರವೇಂದ್ರನ ಶೌರ್ಯ
ದಾತ್ಮತ್ವಗಳ ನೋಡಲೆಂದು ।
ಪ್ರೀತಿಯಿಂದರ ಮನೆಯೊಳಗೈರಿದೊಲ್ಲನ
ನೂತನ ಗಾಲ್ವೆ ಯೊಪ್ಪಿದುದು ॥ ೪೮

ವರ ಪಾರಿಜಾತಾದಿ ಕುಸುಮದ ಪರಿಮಳ
ವೆರಸಿ ಮೆರೆವ ಚಿತ್ರ ರಥದ ।
ಪರಿವಿಡಿಯನು ತೋರುತೊಪ್ಪುವುದಂತಃ
ಪುರದಿರುವುದ್ಯಾನ ವನವ ॥ ೪೯

ತಾರೆಗಳತಿ ಶುಭ್ರವಿಡಿದಿರ್ದರೆಮ್ಮಂತೆ
ಸೌರಭ್ಯವಿಲ್ಲೆಂದು ಜರೆದು ।
ಸೇರದೆ ನಸು ನಗುವೊಲು ಬಿರಿ ಮುಗುಳ ಶ್ಯಾಂ
ಗಾರದ ಮಲ್ಲಿಗೆ ಯಿಹುವು ॥ ೫೦

ಹರಿ ನಿನ್ನ ಸಗ್ಗವೆಂಗಳ ತನು ಕಾಂತಿಗಳ್
ಪರಿನಾಸಿಕದ. ಸೊಬಗೆಮ್ಮ ।
ಅರಳೊಳಗಿದೆಯೆಂದು ತೋಪ್ಪೊ· ಲು ನಭಕುಬ್ಬಿ
ಮೆರೆದುವು ಸಂಪಗೆ ನಗುತ ॥ ೫೧

ಜೀವನದೊಳಗೆವ್ಮೆರಳನೊಂದಿಸಿ ನೆರೆ
ಸೇವಿಸಿದವರ ಶ್ರಮಗಳ ।
ಗಾವಳಿಯನು ಪರಿದಖಿವೆಂದು ನಲುಗಂಪು
ತೀವಿದ ಪಾಟಲಿ ಯಿಹುವು ॥ ೫೩

ಪ್ರೀತಿಯಿಂ ಮಾಧವ ಸಂಗಡಗೊಳಿರೆ ಕಂಬಿ
ಘಾತಿಪುವೆವ್ಮೆನೆಂದಂಜಿ ।
ಆತನ ವರ್ಜಿಸಿ ಮೂಗಿಯ ಕೆಳಗೊಂಡು
ಜಾತಿಯ ಪುಷ್ಪ ವೊಪ್ಪಿದುವು ॥ ೫೪

ಒಡನಾಗ ಸುರನರರಿಗೆ ಜಾಜಿ ಮಂದಾರ
ಕಡು ಪರಿಮಳವಿತ್ತುವೆಂದು ।
ಬಿಡದೆ ಪಾತಾಳಕೆ ಪೌರಭ್ಯವೀವಂತೆ
ಮುಡಿವಾಳ ಲಾಮಂಚವಿಹುವು ॥ ೫೫

ಉರಗೇಂದ್ರ ತನ್ನ ಲೋಕದ ಪರಿಮಳವೆನು
ನರರಿಗೆ ಕಳುಹಿದಂದದಲಿ ।
ಪರಿಪೂರ್ಣವಹ ದಿವ್ಯೆ ವಾಸನೆಯಿಂದಲಿ
ಮರುಗದ ವನಗಳೊಪ್ಪಿದುವು ॥ ೫೬

ಉಳಿದ ನಾನಾ ಪರಿಮಳ ಪುಷ್ಪ ಲತೆಫಲ
ವೆಳಸಿದ ಕಲ್ಪ ವೃಕ್ಷಗಳು ।
ತೊಳಗುವ ರಾಜಕೇಳೀ ವನದೊಳಗಾಗ
ಬಳಸಿಹುದೇನ ಬಣ್ಣಿಸುವ ॥ ೫೭

ಇಂತೊಪ್ಪುವ ಮನೆಯಂಲಿ ಭಾಗ್ಯಲಕ್ಷ್ಮೀ
ಕಾಂತನಾಗಿಯೆ ಹರುಷದಲಿ ।
ಕಂತು ಸನ್ನಿಭ ಕಂಠೀರವ ನಂಸೇಂದ್ರ
ಸಂತತ ಧರೆಯ ಪಾಲಿಸಿದ ॥ ೫೮

ಧರೆಯ ಸೈರಣೆ ಘನ ರಾಜನ ದಾತೃತ್ವ
ವರ ದಿನ ಮಣಿಯ ಪ್ರತಾಪ ।
ಸುರನಾಥನ ದಿವ್ಯಭೋಗ ಕಂಠೀರವ
ನರಸ ರಾಜೇಂದ್ರಗೊಪ್ಪಿಹುವು ॥ ೫೯

ನೆರೆ ರಜತಾದ್ರಿಗೆ ಬಿರಗಿತ್ತು ಗಂಗೆಯ
ನಿರದೋಡಿಸ್ಯೆರಾವತವ ।
ವರ ಬುದಿ ಹೀನನ ಮೊಡಿ ಭೂಪನ ಕೀರ್ತಿ
ಚರಿಸುತಿಹುದು ತ್ರಿಜಗದಲಿ ॥ ೬೦

ರವಿ ಕುಲದವನಿಪರುಗಳ ಪ್ರತಾಪವ
ತವೆ ರಾನು ಕಥೆಯಲಿ ಕೇಳಿ ।
ಭುವನೇಶ ಕಂಠೀರವನರಸೇಂದ್ರನು
ತ್ಸ್ಯದೊಳು ನಲಿವನೇ ೀಳ್ವ ॥ ೬೧

ಸೋಮವಂಶದ ರಾಯರುಗಳ ಸು ಧವೋರ್
ದ್ದಾಮನಸರ ವರ್ತನವ ।
ಪ್ರೇಮದೆ ಭಾರತದಲಿ ಕೇಳಿ ನಲಿನನಾ
ಭೂಮಿಪನತುಳ ಸಂತಸದೆ ॥ ೬೨

ಹರಿದು ಭಾಗವತ ಪುರಾಣ ಪ್ರಸಂಗವ
ಪರವೋತ್ಸವದಲಿ ಕೇಳಿ ।
ಹರಿ ಹರ ಭಕ್ತಿಯೊಳಿರುವನಾ ನೃಪನ ಸು
ಚರಿತವನೇನ ಬಣ್ಣಿಸುವೆ ॥ ೬೩

ರಾಮ ಸಮಾನ ಸು ಶೌರ್ಯನುದಾರನು
ಭೀಮಾನುಜ ಒಲ ಯುತನು ।
ಸೋಮಾನ್ವಯ ಸುರ ಭೂಜನೀ ರಾಜನು
ಪ್ರೇಮದೆ ರಾಜಿಸುತಿಹನು ॥ ೬೪

ಪುಸಿ ನುಸುಳನ್ಯಾಯ ಠೌಳಿ ವೆಂಬಕನೆಗಳು
ವಸುಧೇಶನಾಳ್ವ ರಾಜ್ಯದಲಿ ।
ಮಿಸುಕಲಮ್ಮವು ನರಸೇಂದ್ರನಾಜ್ಞೆಯದೊಂ
ದೆಸಕವೆ ಬಣ್ಣಿಪರಾರು ॥ ೬೫

ಆರಡಿ ವರ ಮೆಧು ಕರನೊಳು ಬಳಿಕ ಸ
ದಾರುಣತೆ ಪದ್ಧರಾಗದಲಿ ।
ತೋರಿಹುವಲ್ಲದೆ ನರಸೇಂದ್ರ ಪಾಲಿಪ
ಧಾರಿಣಿ ಜನದೊಳಗಿಲ್ಲ ॥ ೬೬

ನೀತಿ ವಿದ್ಯಾ ಪರಿಣತಿ ಬಹು ಧರ್ಮದ
ರೀತಿ ನಿತ್ಯೋತ್ಸವಗಳಲಿ ।
ಭೂತಳೇಶ್ವರನ ರಾಷ್ಟ್ರದ ಜನರಿರುವ ಸು
ಖಾತಿಶಯವನೇನೆಂಬೆ ॥ ೬೭

ಒಡನೆ ಭೂಮಿಯನಾಳುವ ಪ್ರಭು ಮನ್ನೆಯ
ಗಡಣ ಸಂತೋಷದೆ ಬಂದು ।
ಪೊಡವಿಪ ಕಂಠೀರವನರಸೇಂದ್ರನ
ಬಿಡದೋಲೈಪರತಿರ್ಯಲಿ ॥ ೬೮

ಸಿರಿ ಲಕ್ಷ್ಮಿ ಜಯ ಲಕ್ಷ್ಮಿ ಶಾರದಾ ಲಕ್ಷ್ಮಿಯಾ
ವರ ಕೀರ್ತಿ ಲಕ್ಷ್ಮಿಯರಂತೆ ।
ಪರಿ ಶೋಭಿಸುವ ರಾಜ ಪುತ್ರಿಯರನು ಭೂಪ
ಪರಿಣಯವಾಗಿ ರಂಜಿಸಿದ ॥ ೬೯

ಮಿಗೆ ಯೊಂದು ಶುಭ ದಿವಸದೆ ಗಿರಿ ರಾಜನ
ಮಗಳಂತೆ ಮಾಂಗಲ್ಯವೆರೆದ ।
ಸುಗುಣ ಸುಚರಿತ ಗಾತ್ರಿಯು ರಾಜ ಪುತ್ರಿಯ
ನಗುತ ವಿವಾಹವಾಗೆಸೆದ ॥ ೭೦

ಪತಿ ಭಕ್ತಿಗೆ ಪಾರ್ವತಿಯೆಂದು ಚಲುವಿನೊ
ಳತಿಶಯ ಸಿರಿ ದೇವಿಯೆಂದು ।
ವಿತತ ಜಾಣಿನೆಗೆ ಶಾರದೆಯೆಂದು ಭೂಪನ
ಸತಿಯ ಜಗವು ಪೊಗಳುವುದು ॥ ೩೧

ಇಳಗಚ್ಚರಿಯಾಗಿ ಪಂಚ ಕಲ್ಯಾಣವೆ
ತಳದು ಮಹಾ ವೈಭವದೆ ।
ಬೆಳಗುತ ಸಕಲ ಸಾಮ್ರಾಜ್ಯ ಲಕ್ಷ್ಮಿಯ ಕೆಳ
ಯೊಳಗೆ ರಂಜಿಸಿದ ಭೂಪಾಲ ॥ ೩೨

ಇಂತೊಪ್ಪುತಿಹ ಭೂವರನ ಭಕ್ತಿಗೆ ಮೆಚ್ಚಿ
ಸಂತೋಷವ ತಾಳಿ ನಗುತ ।
ಕಂತು ಜನಕ ಲಕ್ಷ್ಮೀ ನರ ಸಿಂಹ ಶು
ದ್ಧಾಂತದೊಳಗೆ ರಾಜಿಸಿದ ॥ ೩೩

ಸರಸಿಜ ಭವನ ನೇಮದೆ ಸುರವರ್ಧಕಿ
ಹರುಷದೊಳಗೆ ಕೈಗೈದ ।
ಪಿರಿದು ಸಿಂಗರ ಶಾಲೆ ಯೆನೆ ದಿವ್ಯ ಪ್ರಾಕಾರ
ಪರಿಶೋಭಿಸಿದುದರ್ತಿಯಲಿ ॥ ೩೪

ಮಿಸುನಿ ಗಂಬುಗಳ ಮೇಲೆಸೆದಿಹ ಚೌಕದ
ಪೊಸ ನವ ರತ್ನ ಜೋದಿಗೆಯ ।
ಪ್ರಸರದ ಕಾಂತಿ ಚೌದೆಸೆಯ ಮುಸುಕಿ ತಮ
ದೆಸಕವ ಪರಿಹರಿಸಿಹುದು ॥ ೩೫

ಆವ ದಿಕ್ಕಿನಲಿ ನಿಟ್ಟಿಸಿ ನೋಡಲು ಚೆಲ್ವ
ದೇವ ಗಿರಿಯ ಪಟ್ಟಿಗಳ ।
ತೀವಿದ ಮೇಲ್ಕಟ್ಟಿನಿಂದ ಶ್ರೀ ನರ ಸಿಂಹ
ದೇವನ ನಿಳಯ ರಾಜಿಸಿತು ॥ ೩೬

ಮಿರುಪ ಮಾಣಿಕ ನೀಲ ಮೌಕ್ತಿಕಗಳ ಕಾಂತಿ
ಮೆರೆಯಲಾ ದೇವನ ಭವನ ।
ಸರಸತಿ ಯಮುನೆ ಗಂಗೆಗಳ ಸಂಗಮದಂತೆ
ಪರಿಶೋಭಿಸಿದುದೇ ವೇಳ್ವ ॥ ೩೩

ಥಳಥಳಿಪುದಮಾಚಲಾಗ್ರದೊಳಗೆ ಮೂಡು
ವೆಳನೇಸರಂತೆ ರಾಜಿಪುತ ।
ನಳಿನ ದಳಾಕ್ಷನ ಗುಡಿಯ ಶಿಖರದ ಮೇ
ಲಳವಟ್ಟುದು ಹೊನ್ನ ಕಳಸ ॥ ೩೪

ಬೃಂದಾವನ ಪೊನ್ನ ದೀಪ ಮಾಲೆಯ ಕಂಭ
ಬಂಧುರವೆಹ ಮಂಟಪಗಳು ।
ಇಂದೀವರಾಕ್ಷ ಶ್ರೀ ನರ ಸಿಂಹನ ದಿವ್ಯ
ಮಂದಿರದಿದಿರೊಳೊಪ್ಪಿಹುವು ॥ ೩೫

ಸುಲಲಿತೋತ್ಸವ ಮಂಟಪಗಳು ವಾಹನ
ನೆಲಸಿಹ ಮಣಿ ಮಂಟಪಗಳು ।
ಅಳವಟ್ಟು ದೇವನ ಗುಡಿಯ ಪ್ರಾಕಾರದೆ
ಥಳಥಳಿಸುತಲೊಪ್ಪಿಹುವು ॥ ೩೬

ಮಿರುಗುವ ಮಣಿ ಮಯ ಗರ್ಭಾಗಾರದೆ
ನೆರೆ ಭೂಷಣಾನ್ವಿತನಾಗಿ ।
ನರಸ ಭೂಪಾಲನಿಗಿಷ್ಟಾರ್ಥವೀಯುತ
ನರಸಿಂಹನಿರುವ ಲೀಲೆಯಲಿ ॥ ೩೭

ಹಸ್ತಿ ವರದ ಶ್ರೀ ಹರಿ ರವಿ ಕೋಟಿಗ
ಭಸ್ತಿ ವಿಶ್ರುತ ದಿವ್ಯಾಂಗ ।
ಕಸ್ತೂರಿ ರಂಗನಾಥನ ಚೆಲ್ವ ಗುಡಿಯ ಸು
ವಿಸ್ತಾರವೆನು ಬಣ್ಣಿಸುವೆನು ॥ ೩೮

ಸರಸಿಜ ಭವನ ನೇಮದೆ ಸುರ ವರ್ಧಕಿ
ಹರುಷದೊಳಗೆ ಕೈಗೈದ ।
ಪಿರಿದು ಸಿಂಗರ ಶಾಲೆ ಯೆನೆ ದಿವ್ಯ ಪ್ರಾಕಾರ
ಪರಿ ಶೋಭಿಸಿದುದರ್ತಿಯಲಿ ॥ ೮೩

ಬಾಲಾರ್ಕ ಬಿಂಬದೊಡನೆ ತೊಳಗುವ ಪೂರ್ವ
ಶೈಲ ರಾಜಿಸುವೆಂದದಲಿ ।
ಮೇಲಿಪ್ಪ ಚಿನ್ನದ ಕಳಸದಿಂ ಗೋಪುರ
ಥಳಿಸಿ ತುಡುಕಿತಂಬರವ ॥ ೮೪

ಸುರ ಪತಿ ಹರಿ ಸೇವೆಗೈದಿ ತಾ ಪಿಡಿದಿರ್ದ
ವರ ವಜ್ರ ದಂಡಾಯುಧವ ।
ಹರುಷದೊಳಿಂಬಿಟ್ಟೊಲು ದೀಪ ನೊಲೆಯು
ಸು ರುಚಿರ ಕಂಭವೊಪ್ಪಿದುದು ॥ ೮೫

ಹರಿಯುದರದೊಳಿಪ ಹದಿನಾಲ್ಕು ಜಗಗಳ
ಪರಿ ಪರಿ ಯತುಳ ವಿಸ್ತಾರ ।
ಹೊರ ಹೊಮ್ಮಿ ತೋರ್ಪೊಲು ಬಹು ಬಗೆ ಪುತ್ಥಳಿ
ಮೆರೆದುವೊಳ ಪ್ರಾಕಾರದಲಿ ॥ ೮೬

ವಾಹನ ಮಂಟಪವುತ್ಸವ ಮಂಟಪ
ವೋಹನ ನಾಟ್ಯ ಮಂಟಪವು ।
ಊಹಿಸೆ ಕಡು ಚೆಲ್ವ ಚಿತ್ರ ಮಂಟಪ ಸ
ನ್ನಾಹದೆ ಮೆರೆದುವೇ ವೇಳ್ವ ॥ ೮೭

ಆವಾವ ದಿಕ್ಕಿನಲಿ ಪಟ್ಟೆಯು ಮೇಲ್ಕಟ್ಟು
ತೀವಿದ ಪೀತಾಂಬರದ ।
ಲೋವೆಗಳಿಂ ನವ ರತ್ನದ ಕುಚ್ಚಿಂದ
ದೇವಲ್ಯವೆಸೆದುದರ್ತಿಯಲಿ ॥ ೮೮

ಪರ ದಾರ ಗಮನನ ಧರಿಸಿದ ಪಾಪವ
ಹರಿ ಸೇವೆಯ ಮಾಡಿ ಪರಿಯೆ।
ಎರಡು ರೂಪಾಂತ್ಯೈರಾವತವೆಂದೆನೆ
ಮೆರೆದುವು ಬಾಗಿಲಾನೆಗಳು ॥ ೪೯

ಅಂತರಾಂತರದ ಬಾಗಿಲ ಮಿಸುನಿಯ ದಂಡ
ವಾಂತಿಹ ದ್ವಾರ ಪಾಲಕರು।
ಕಂತು ಪಿತನ ಸೇವಿಸುತ ಭಕ್ತ್ಯಿಯಲಿ ಬಲು
ಸಂತೋಷದೊಳಿರುತಿಹರು ॥ ೫೦

ನಳಿನಾಹ್ವ ರಂಗ ನಾಲಯದೊಳ ಪರಿಧಿಯ
ಪೊಳವ ಮಂದಿರಗಳೊಳಾಗ।
ಚೆಲುವ ವರದ ರಾಜ ಮನ್ನಾರು ನರಸಿಂಹ
ಕೊಳಲ ಗೋಪಾಲರೊಪ್ಪಿದರು ॥ ೫೧

ವಾಮ ಭಾಗದಲಿ ಕಸ್ತೂರಿ ರಂಗ ನಾಯಕಿ
ಭೂಮಿ ದೇವಿಯರು ರಾಜಿಸುವ।
ಹೇಮದ ಮಂದಿರವೆಸೆದುವು ನವರತ್ನ
ಧಾಮವ ಮಿಗೆ ಪಸರಿಸುತ ॥ ೫೨

ವಿಕಸಿತ ವಡೆದಂತರಾಳ ಗರ್ಭದ ಗೃಹ
ಶುಕನಾಸಿಯು ಮಂದಿರದೆ।
ಬಕುತ ವತ್ಸಲ ಶ್ರೀ ರಂಗೇಶ ಸಾಪಸ್ರ
ಮುಖನ ತಲ್ಪದೊಳಸೆದಿಹನು ॥ ೫೩

ಝಗಝಗಿಪ ಪಳಿ ಪೀತಾಂಬರ ಮುಡಿಯೊಳು
ಸೊಗಸಾದ ರತ್ನ ಕಿರೀಟ।
ಹೊಗರೊಗುವಾಭರಣದಲಿ ಸಶಿ ಮುರಂಗ
ಮಿಗೆ ಬೆಳಗಿದನು ದಿಕ್ತಟವ ॥ ೫೪

ಪೊಸ ಮುತ್ತಿನೊಡ್ಡೋಲಗದೆ ಯೋಗ ನಿದ್ರೆಯ
ಪಸರಿಸಿ ಲಕ್ಷ್ಮಿ ದೇವಿಯರು ।
ಕುಳಲದೆ ಪಾದ ಪದ್ಮವನೊತ್ತೆ ರಂಗೇಶ
ಜಸವೆ ಬೀರುತಲೊಪ್ಪಿದನು ॥ ೯೫

ಲೀಲೆಯಿಂ ಭಕ್ತರ ಪಾಲಿಪುದಕೆ ಶ್ರೀ
ಲೋಲನೈತಂದು ಪಟ್ಟಣವ ।
ಭೂಲೋಕವೈಕುಂಠವೆನಿಸುತೆ ಪ್ರೇಮದೆ
ಪಾಲಿಪ ಭಕ್ತವತ್ಸಲನು ॥ ೯೬

ಜಗವ ರಕ್ಷಿಸುದಕ್ಕೆ ಮಗಳ ವೇಶ್ಮದೆ ನಿದ್ರೆ
ಸೊಗಸಿಂದ ಗೆಯ್ಯುವೆನಂತೆ ।
ಮಿಗೆ ರಾಜಿಪ ಶ್ರೀ ರಂಗ ಪಟ್ಟಣದಲ್ಲಿ
ಯೊಗುಮಿಗೆಯಿಂದ ರಾಜಿಪನು ॥ ೯೭

ಪರಿವೆ ಕಾವೇರಿ ಮಧ್ಯೋರ್ವಿಯೊಳಗೆನಿಲ್ಲು
ತೆರಗಿದ ಭಕ್ತರೊಳಘವ ।
ತರಿದು ಮುಕ್ತಿಯನೀವ ಖಗ ವಾಹನ ರಂಗ
ಪುರಿಯೊಳ್ತಾ ನೆಲಸಿರುವ ॥ ೯೮

ಸನ್ನುತದೆಂಬೆರುಮಾನಾರು ಹರುಷದೆ
ಪನ್ನೆರಡಾಳ್ವಾರುಗಳು ।
ಪನ್ನಗ ಶಯನಿಗೆ ಕರ ಕಮಲವ ಮುಗಿ
ದುನ್ನತ ತಪ ಗೆಯ್ಯುತಿಹರು ॥ ೯೯

ಅರುಣೋದಯದೆ ನಾನಾ ವಾದ್ಯ ರವದೊಳು
ಕರಿ ಶಿರಗಳ ಮೇಲಾಗ ।
ನರಸಿಂಹಗೆ ರಂಗೇಶಗೆ ಮಜ್ಜನ
ಪರಿಪೂರ್ಣದೆ ಬರುತಿಹುದು ॥ ೧೦೦

ಬಳಿಕುಪ್ಪವಡ ಮುಖ ಮಜ್ಜನ ಮೈಗಮದ
ತಿಲಕ ಸುಚೇಲ ಭೂಷಣದ ।
ಲಲಿತ ಸಿಂಗರ ಚೆಲ್ವ ಮುಡಿಯ ಪೂ ಮಾಲೆಯಿಂ
ನಳಿನಾಕ್ಷ ರಂಗನೊಪ್ಪಿಹನು ॥ ೧೦೧

ದೀಪಾರತಿ ಪರಿಮಳಿಸುವ ಸಾಂಬ್ರಾಣಿ
ಧೂಪ ವಾಸನೆ ದಿಕ್ಕಟವ ।
ವ್ಯಾಪಿ ಸೆ ಬಹು ಬಗೆಯುಪಚಾರಗಳಿಂದ
ಶ್ರೀಪತಿ ರಂಗನೊಪ್ಪಿಹನು ॥ ೧೦೨

ಮಿರುಪ ಚಿತ್ರಾನ್ನ ನಾನಾ ಬಗೆ ಭಕ್ಷ್ಯಗ
ಳ್ಪರಿ ಪರಿ ಶಾಕ ಪಾಕಗಳ ।
ವರ ಪಕ್ವ ಫಲ ದಿವ್ಯ ಪಾನ ಪನ್ನೀರ್ಗಳ
ಸಿರಿಧರನಾರೋಗಿಸಿದನು ॥ ೧೦೩

ಕರ್ಪೂರ ವೀಳ್ಯವ ಕೈಗೊಂಡು ನಗುತ ಕಂ
ದರ್ಪನ ಪಿತನೊಪ್ಪುತಿರಲು ।
ತಪ್ಪದೆ ಮಂಗಳ ವಾದ್ಯವ ಬಲು ರ
ವುಪ್ಪರಿಸಿದುವೆಂಟು ದೆಸೆಗೆ ॥ ೧೦೪

ಪಾವುಡ ಕುಂಚ ಕಾಳಂಜಿ ಕನ್ನಡಿ ನೆರೆ
ಹೂವಿನ ಬೀಸಣಿಗೆಗಳ ।
ಭಾವಕಿಯರು ಪಿಡಿದಾಕ್ಷಣ ಶ್ರೀ ರಂಗ
ದೇವನನೋಲೈಸುತಿಹರು ॥ ೧೦೫

ಹೊಳೆ ಪೊಂದಟ್ಟೆ ಯಾರತಿಗಳ ಪಿಡಿದಾಗ
ಲಲಿತಾಂಗಿಯರು ಸಾಲ್ಗೊಂಡು ।
ಸು ಲಲಿತ ಗಾನದೆ ಶ್ರೀ ರಂಗ ನಾಥನಿ
ಗೊಲಿದೆತ್ತಿದರೇ ವೇಳ್ವ ॥ ೧೦೬

ಪರಿ ಪರಿ ಪಾತ್ರ ವೆಂಗಳು ಸಿಂಗರಿಸಿಯೆ
ಹರುಷದೊಳಗೆ ನಡೆತಂದು ।
ಕರದಭಿನಯ ಕಟ್ಟಳೆ ಕಳುಸಿಕೆಯಿಂದ
ಸಿರಿಯರಸನನೊಲಗಿಪರು ॥ ೧೦೬

ಪಲ್ಲಕ್ಕಿ ಸೇವೆ ಪಕ್ಷೋತ್ಸವ ಮಾಸದೊ
ಳುಲ್ಲಾಸದ ಮೆರೆವಣಿಗೆ ।
ಪ್ರಲ್ಲಾಸ್ತ್ರನಯ್ಯನಿಗೊಪ್ಪಿ ರಾಜಿಸಿದುವು
ಸಲ್ಲಲಿತದೊಳೇ ವೇಳ್ವ ॥ ೧೦೯

ಕರಿ ರಾಜ ತಿರು ನಾಳು ಬಾಸುರವಿಡಿದಿಹ
ಪಿರಿಯ ಸಂಕ್ರಮ ತಿರು ನಾಳು ।
ವರ ರಥ ಸಪ್ತಮಿಯುತ್ಸವ ತಿರು ನಾಳು
ಮೆರೆದುವು ರಂಗೇಶಗಾಗ ॥ ೧೧೯

ಬಿಡದೊಪ್ಪುವ ಕೋಡೆ ತಿರು ನಾಳು ಮಧು ಮಾಸ
ದೊಡೆಯನುತ್ಸವ ತಿರು ನಾಳು ।
ಸಡಗರದಲಿ ಸಿರಿ ಧರ ರಂಗ ಧಾಮನಿ
ಗೆಡೆ ವಿಡದೊಪ್ಪಿದುವಾಗ ॥ ೧೧೦

ಇಂತಪ್ಪ ಮಂಗಳೋತ್ಸವ ದಿವ್ಯ ಸೇವೆಯ
ಕಂತು ಪಿತಗೆ ಭಕ್ತಿಯಲಿ ।
ಸಂತತ ಕಂಠೀರವ ರಾಜ ನಡಿಸುತ
ತ್ಯಂತ ಸೌಖ್ಯದೊಳೊಪ್ಪುತಿಹನು ॥ ೧೧೧

ಅಗರದ ಕೇರಿಯ ತಿರು ವೇಂಗಳೇಶ್ವರ
ಸೊಗಸುತಕ್ಕಿಯ ಕೇರಿಯೊಳಗೆ ।
ನಗ ಧರ ತಿರುನುಲೇಶ್ವರ ಬೇಟೆ ರಾಯರು
ಮಿಗೆ ಕಾದಿಹರು ಪಟ್ಟಣವ ॥ ೧೧೨

ಹೊರ ಕೇರಿಯ ಗಂಗಾಧರ ವೀರೇಶ
ಮೊರಡಿಯ ತಿರುಮೆಲ ರಾಯ।
ನರಸಿಂಪ ಮೂರ್ತಿ ಬಾಗಿಲ ವೇಂಕಟೇಶ್ವರ
ರಿರುವರು ಬಹುಳ ಲೀಲೆಯಲಿ ॥ ೧೧೩

ದೊಡ ಪಂಪಯ್ಯನ ಮಠ ಮೂಲೆಯ ಮಠ
ಕಡು ವಿರಕ್ತರ ದಿವ್ಯ ಮಠವು।
ಎಡೆ ವಿಡದೊಪ್ಪುವ ದಾಸೋಹದ ಮಠ
ಸಡಗರದಿಂದಲೊಪ್ಪಿಹುವು ॥ ೧೧೪

ಹಲವು ಮಾತೇನೀ ಶ್ರೀರಂಗ ಪಟ್ಟಣ
ಕಳವಡದ ಪುರ ತ್ರಿಜಗದ।
ನೆಲದೊಳಗಿಲ್ಲೆಂದು ಗಡಿಯಾರ ಜಾಗಟೆ
ಯುಲಿವುದು ಗೋಪುರದೊಳಗೆ ॥ ೧೧೫

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ।
ಪುದಿದ ಪ್ರತಾಪಸಂಪದದೇಳಿಗೆಯ ಸಂಧಿ
ಮುದದೆ ಸು ಧರ್ಮಾನುಬಂಧಿ ॥ ೧೧೬

೭ನೆಯ ಸಂಧಿ ಸಮಾಪ್ತಂ.

ಎಂಟನೆಯ ಸಂಧಿ.

ನಿತ್ಯೋತ್ಸವ ದೋಲಗದ ವರ್ಣನೆ.

ಸೂ॥ ಭೂ ಲೋಲ ನರಸೇಂದ್ರನ ನಿತ್ಯೋತ್ಸವ
ದೋಲಗ ಸಿರಿಯ ಬಣ್ಣಿಸುವೆ ॥

ಮನಸಿಜನಳಿಯನವ್ವೆಯ ಭಾವನ ಕೂಡೆ
ಜನಿಸಿದವಳ ವಲ್ಲಭನ ।
ಫನ ಹರುಷದೆ ಸಲಹಿದ ದೇವನ ಪಾದ
ವನಜಗಳಿಗೆ ನಮಿಸುವೆನು ॥ ೧

ಬಳಿಕ ಶ್ರೀ ರಂಗ ಪಟ್ಟಣದೆ ಸಂತೋಷವೆ
ತಳೆದತಿ ಸರ್ವ ಸಂಭ್ರಮದೆ ।
ಚಲದಂಕ ಕಂಠೀರವ ನರಸೇಂದ್ರ ಭೂ
ತಳವ ಪಾಲಿಸುತಿರ್ದಿಯಲಿ ॥ ೨

ಸಲೆ ಯೊಂದು ದಿನಸದೊಳಗೆ ರವಿ ಪಶ್ಚಿಮ
ಲಲನೆಯ ರತಿ ಕೇಳಿಗೊಲಿದು ।
ನಲವಿಂದ ತೆರಳಲು ಸಂಜೆ ದಾರಕೆ ರಾಗ
ಗಳ ತಾಳಿ ಮೆರೆದುವೇವೇಳ್ವ ॥ ೩

ಪೊಡವಿಪ ನರಸ ರಾಜೇಂದ್ರನೋಲಗದ ಬ
ಲ್ಪಡಗರವನು ನೋಡಲೆಂದು ।
ಒಡನತಿ ಹರುಷದೆ ಪೂರ್ವ ಚಂದ್ರನು ಮೂಡ
ಗಡೆಯೊಳೊಪ್ಪಿದನರ್ತಿಯಿಂದ ॥ ೪

ಆ ವೇಳೆಯಲಿ ದೊರೆ ರಾಯ ಕಂಠೀರವ
ಭೂವರನೋಲಗ ಶಾಲೆ।
ತೀವಿ ಮೆರೆವ ನವ ರತ್ನದ ವರ ಸು ಪ್ರ
ಭಾವವ ಬೀರಿತು ಜಗಕೆ ॥ ೫

ಇದು ಸೌಭಾಗ್ಯ ಲಕ್ಷ್ಮೀಯ ದಿವ್ಯ ಸದನವೊ
ಇದು ಮಧು ನೃಪನ ನಿಳಯವೊ ।
ಇದು ಶಾರದೆ ನೆಲಸಿರುವ ಮಂಟಪವೆನೆ
ಮುದದಿಂದ ಮೆರೆದುದಾಸ್ಥಾನ ॥ ೬

ನವ ನಾರೀ ಕುಂಜರ ಪಂಚ ನಾರೀ
ಭವ ತುರಂಗದ ಹೊನ್ನ ಕಂಭ।
ಭುವನೇಶ್ವರನೋಲಗ ಶಾಲೆಯಲಿ ನೆರೆ
ಪವಡಿಸಿದುವರ್ತಿಯಲಿ ॥ ೭

ಹರಿಯು ನಾಟಕ ಮನಸಿಜನ ವಿಲಾಸದ
ಪರಿವಿಡಿಗಳ ಪುತ್ತಳಿಗಳು ।
ಮೆರೆಯುವೋಲಗ ಶಾಲೆಯ ಚ[illegible] ದೆಸೆಗಳ
ಸು ರುಚಿರ ಭಿತ್ತಿಯೊಳಿಹುವು ॥ ೮

ಆವ ದಿಕ್ಕಿನಲಿ ನೋಡಲು ಥಳ ಥಳಿಸುವ
ತೀವಿದ ಮಿಸುನಿ ಪಟ್ಟಿಗಳು ।
ದೇವಾಂಗ ವಸನ ಬಿಗಿದ ಮೇಲ್ಕಟ್ಟಿನ
ಭಾವವನೇನ ಬಣ್ಣಿಸುವೆ ॥ ೯

ಮುತ್ತು ರತ್ನಗಳ ಗೊಂಚಲು ಕಡು ಪರಿಮಳ
ವೆತ್ತಿಹ ಜಾಜಿ ಸಂಪಗೆಯ ।
ಮೊತ್ತದ ಪೂ ಮಾಲೆ ಯೋಲಗ ಶಾಲೆಯ
ಸುತ್ತಲೊಪ್ಪಿದುವತಿ ಯಲಿ ॥ ೧೦

---

* ತನೆ.

ಪನ್ನೀರ ಚಳಯ ಕತ್ತುರಿಯ ಸಾರಣಿ ಮುತ್ತಿ
ನುನ್ನತ ರಂಗ ವಲ್ಲಿಗಳ ।
ಚೆನ್ನಾದ ಕುಂಕುಮ ಗಾರಣೆಯಿಂದ ಸಂ
ಪನ್ನತೆ ವಿಡಿದುದಾಸ್ಥಾನ ॥ ೧೧

ಅಗರು ಚಂದನ ಯಹ್ಷ ಕರ್ದಮ ಮೃಗ ಮದ
ಸೊಗಸು ಕರ್ಪೂರ ತುಂಬಿ ವೆರೆವ ।
ಮಿಗೆ ಭರಣಿಯ ಮುಚ್ಚು ಳನುಗಿದಂದದೆ
ಮಗ ಮಗಿಸಿದುದಾಸ್ಥಾನ ॥ ೧೦

ಒಡನೊಪ್ಪುವ ಹಂಸ ತೂಳಿದ ತಲ್ಪವ
ಕಡು ಚೆಲ್ವ ಮಿಸುನಿ ಮಂಚದಲಿ ।
ಮೆಡಿಸಿ ಹಚ್ಚಡಿಸಿ ರತ್ನದ ಬಟ್ಟುವೊರಗ ಸಂ
ಗಡಿಸಿದರತಿ ಮುದದಿಂದ ॥ ೧೩

ತುಂಗ ವಿಕ್ರಮ ರಿಪು ನೃಪ ಗಜ ಹರ್ಯಹ್ಷ
ಮಂಗಳೋತ್ಸವದೊಳಗೊಲಿದು ।
ಸಿಂಗರಿಸಿಯೆ ಓಲಗಕ್ಕೈತರುವ ಬೆ
ಡಂಗನದೇನ ಬಣ್ಣಿಸುವೆ ॥ ೧೪

ಮುತ್ತಿನ ಪಲ್ಲಕ್ಕಿಯನೇರಿ ಶ್ರೀಪುರು
ಷೋತ್ತಮನೈದುವೆಂದದಲಿ ।
ಅತಿರ್ಯೊಳಗೆ ಕಂಠೀರವ ನರಸ ಭೂ
ಪೋತ್ತಮ ನಗ ತೈತಂದ ॥ ೧೫

ಬಳಸಿ ಯೈತಹ ಮಂತ್ರಿ ಮನ್ನೆಯ ಸುಭಟ ಸಂ
ಕುಳದ ಸಂದಣಿಯೊಳಗೊಲಿದು ।
ಇಳಯಾಣ್ಮ ಕಂಠೀರವ ರಾಜ ನೋಲಗ
ಕಳವಟ್ಟು ಒಂದನರ್ತಿಯಲಿ ॥ ೧೬

ನೆರೆ ತಮ್ಮ ದೊರೆ ಮನಸಿಜ ದಿವ್ಯ ದೇಹವ
ಧರಿಸಿ ಭೂ ತಳಕ್ಕೆ ತರಲು ।
ವರ ಮಂತ್ರಿ ಚಂದ್ರನೈತಂದೊಲು ಮುತ್ತಿನ
ಬಿರುದಿನ ಛತ್ರವೊಪ್ಪಿದುದು ॥ ೧೬

ಬಾಲಾರ್ಕನು ಬಹು ರೂಪಾದಂದದೊ
ಳಾಲವಟ್ಟವು ನೇಲಲೊಳಗೆ ।
ಭೂ ಲೋಲ ಕಂಠೀರವ ನರಸೇಂದ್ರ ನು
ತ್ತೋಲಗ ಶಾಲೆಗೈತಂದ ॥ ೧೪

ಕೊಂಬು ಕೊಳಲು ನಾಗಸರ ಭೇರಿ ತಂಬಟ
ಬೊಂಬುಳಿ ಬುರುಗು ಡಿಂಡಿಮದ ।
ಮುಂಬರಿದೆಸೆವ ರವಗಳಾಕಾಶವ
ತುಂಬಿದುವೇನ ಬಣ್ಣಿಸುವೆ ॥ ೧೫

ಅರಿ ರಾಜ ಗಿರಿ ವಜ್ರ ದಂಡ ಸ್ನೇಹಿತ ನೃಪ
ಸರಸಿಜ ವನ ಮಾರ್ತಂಡ ।
ನರಸ ರಾಜೇಂದ್ರ ಚಂದ್ರನು ಜಯ ಜಯತೆಂದು
ನೆರೆ ಪೊಗಳಿದರು ಪಾಠಕರು ॥ ೧೦

ಬಡಸೆ ವಾಚಿಪ ವರ ಮಂಗಳಾವ್ಯಕ್ತ ರವ
ಕಡು ವಿಜಯುವೆ ಸಾರುತಿರಲು ।
ಪೊಡವಿಪ ನರಸೇಂದ್ರ ಸಿಂಹ ಪೀಠದ ಮೇಲೆ
ಸಡಗರದೊಳಗೆ ರಂಜಿಸಿದ ॥ ೧೧

ಪೊ ಕರ್ಪೂರ ಮಲಯಜ ತೈಲ ವಾಸನೆ
ಮುಸುಕಿ ಮೋಹಿಸಲಂಬರವೆ ।
ದೆಸೆ ದೆಸೆಗಳ ಬೆಳಗುತ ದೀವಟಿಗೆಗ
ಳಸದುವಗಣಿತವರ್ತಿಯಲಿ ॥ ೧೨

ದೊರೆ ರಾಯನ ಸಮ್ಮುಖದೆ ಹೊಸ ಹರೆಯದ
ತರುಣಿಯರುಗಳ ಹಸ್ತದಲಿ ।
ಮಿರುಪ ಮಿಸುನಿಯ ಬೊಂಬಾಳ ದೀವಟಿಗೆಗ
ಳ್ಪುರುಚಿರ ಪ್ರಭೆಯ ಸೂಸಿದುವು ॥ ೩೩

ನೆಲೆ ಮೊಲೆ ಯಲುಗೆ ಕಣ್ಗಳ ಕಾಂತಿ ದೆಸೆಗಳ
ಜಳಗಲು ಬೆಡಗಳ ಮುದ್ರಿಕೆಯು ।
ಹೊಳಹು ದೋರುತ ಶುಭ್ರ ಚಮರವ ಡಾಳಿಸು
ತೆಳ ವೆಂಗಳಸೆದರರ್ತಿಯಲಿ ॥ ೩೪

ಒಡನೈತಂದ ರೋಲಗಕೆ ಸಮ್ಮೋಹನ
ಪಿಡಿದ ಗಾಯಕರು ಕವಿಗಳು ।
ಪೊಡವಿಪ ಕಂಠೀರವನಾಸ್ಥಾನದೆ
ಸಡಗರದೊಳಗೊಪ್ಪಿದರು ॥ ೩೫

ವೇದ ವಿದರು ಶಾಸ್ತ್ರಜ್ಞರು ಬಹು ಮಂ
ತ್ರೋದಯಾಢ್ಯರು ಭಾರತಿಗಳು ।
ವಾದಿಸುತಿಪ ತಾರ್ಕಿಕರು ವಾಚಕರು ವಿ
ನೋದಿಗಳಸೆದರರ್ತಿಯಲಿ ॥ ೩೬

ಕರಣಿಕರಾಪ್ತ ಮಂತ್ರಿಗಳು ರಾಯಸಗಳ
ಬರೆದೋದುತಿಪ ಬಲ್ಲವರು ।
ದೊರೆ ರಾಯ ನರಸ ರಾಜೇಂದ್ರನಾಸ್ಥಾನದೆ
ಪರಿ ಶೋಭಿಸಿದರುಬ್ಬಿನಲಿ ॥ ೩೭

ದಳ ಪತಿ ಮನ್ನೆಯ ಮಂಡಲಿಕರು ನೆರೆ
ತುಳಿಲಾಳು ರಾಯ ರಾವುತರು ।
ಇಳಯಾಣ್ಮ ಕಂಠೀರವೇಂದ್ರಗೆ ವರಕರ
ನಳಿನವ ಮುಗಿಯುತೊಪ್ಪಿದರು ॥ ೩೮

ಚಾಮರ ಕುಂಚ ಕಾಳಾಂಜೆ ಪಾನಡೆ ವರ
ಹೇಮ ದರ್ಪಣಗಳನಾಂತು ।
ಭೂಮಿಪ ನರಸೇಂದ್ರನಿದಿರೊಳೂಳಿಗದರ
ಸ್ತೋಮವೆಸೆದುದು ಸಾಲ್ವಿಡಿದು ॥ ೮

ತೆಲುಗ ಮನ್ನೆಯ ಸಾಲಿದೆ ತಿರು ಕೊಂಕಣ
ಸಲೆ ಕೊಂಗ ತಿಗುಳ ಕೊಡಗರು ।
ಗಲಭೆಯ ಮಾಣು ಮಾಣೆಂಬವಸಂದವ
ರುಲುಹೊಪ್ಪಿತಾಸ್ಥಾನದೊಳಗೆ ॥ ೯

ಕನಕ ಕಾಂತಿಯ ಪಸರಿಸುತಿಹ ನಿರಿ ಗಾಸೆ
ಮಿನುಗುವ ಮಣಿ ಭೂಷಣದ ।
ವನಿತೆಯರಧಿಕ ಸಂಭ್ರಮದೆ ಕೋಲಾಟವ
ಜನಪನೋಲಗದೊಳಾಡಿದರು ॥ ೧೦

ಬಿರುದಿನ ಪಾತ್ರದ ಸಾರಿಯು ಮೇಳದ
ತರುಣಿಯರತಿ ಹರುಷದಲಿ ।
ಪರಿ ಪರಿ ಕೋಪ್ರು ಕಳಾಸಿಕೆಗಳ ತೋರಿ
ಭರದಲಿ ನಟಿಸಿದರಾಗ ॥ ೧೧

ತುಂಬುರ ವಿಡಿದು ಗಾನಾಮೃತವೆನು ಕಿವಿ
ಗಿಂಬಾಗಿ ಸವಿ ದೋರಿಸುತ ।
ಮುಂಬರಿದೆಸೆವ ಗಾಯಕರು ಪಾಡುವ ಸಂ
ರಂಭವನೇನ ಬಣ್ಣಿಪೆನು ॥ ೧೨

ವರ ವೈಣಿಕ ಬಯಕಾರರು ಹರುಷದೆ
ಕೊರಳ ಬೆರಳನೊಂದು ಗೂಡಿ ।
ದೊರೆ ರಾಯ ಕಂಠೀರವನಂಕ ಮೊಲೆಯು
ಪಿರಿದಾಗಿ ಪಾಡುತೊಪ್ಪಿದರು ॥ ೧೩

ಭರತ ಪುರಾಣ ನಾಟಕ ನೀತಿ ಶಾಸ್ತ್ರ ಬಂ
ಧುರವೆಸ ತರ್ಕ ಶಬ್ದಗಳ ।
ನೆರೆದು ನಿರ್ಣೈಸಿ ತೋರಿಸುವ ವಿದ್ವಾಂಸರ
ಪರಿವಿಡಿ ಮೀರದುದೇನೆಂಬೆ ॥ ೩೫

ಭಾರತ ರಾಮಾಯಣ ಪುಣ್ಯ ಕಥೆಯ ವಿ
ಸ್ತಾರವ ಗಾನ ರಸದಲಿ ।
ಸಾರತರದೆ ನಲಿದೋದಿ ಮೆರೆವ ಚೆಲ್ವ
ಭಾರತಿಗಳು ರಾಜಿಸಿದರು ॥ ೩೬

ಕಟ್ಟಾಣಿ ಮುತ್ತ ಸೇರಿಪ್ಪೊಲು ದೇಸಿಯ ರಾಜ
ವಟ್ಟದ ಸವಿ ನುಡಿಗಳನು ।
ಸೃಷ್ಟೀಶ್ವರಗೆ ಬಿನ್ನೈಸುತ ಮಂತ್ರಿಗ
ಳಿಟ್ಟಣಿಸಿಹರೆಡ ಬಲದೆ ॥ ೩೭

ಸೆಳೆದರಿ ನೃಪರ ದುರ್ಗಗಳ ಠಾಣೆಯುನೆನು
ಬಲಿದು ಬಹುಳ ಧನಗಳನು ।
ತಳುವದೆ ತಂದೀವೆನು ಜೀಯ ಬೆಸಸೆಂಬ
ದಳ ಪತಿಯುಲಿ ಹೆಚ್ಚಿ ತಾಗ ॥ ೩೮

ಕಡಿದು ರಿಪುಗಳ ಶಿರವನಾನೆ ಕುದುರೆಯ
ಗಡಣಗಳನು ಬೇಗ ಪಿಡಿದು ।
ಪೊಡವೀಶ ನಿಮಗೊಪ್ಪಿಸುವೆವೆಂಬ ನುನ್ನಯ
ರೆಡೆವಿಡದೆಸೆದರೋಲಗದೆ ॥ ೩೯

ತೂಳಿಸಿ ಕುದುರೆಯ ವೈರಿ ಮೊರ್ಬಲಗಳ
ಧೂಳಿ ಪಟವ ನೆರೆ ಮಾಡಿ ।
ಕೊಳ ತಂದೊಪ್ಪಿಸುವೆವುವೆಂಬ ರಾವುತ
ರಾಲಾಪಗಳೊಪ್ಪಿದುವು ॥ ೪೦

ಬೀದಿವರಿಪ್ರತಾನೆಗಳ ರಿಪು ಬಲವನು
ಭೇದಿಸಿ ಕಾಲ್ಗಿಲೆಗಳಲಿ ।
ಸಾದಿಸಿ ಕೊಲುವೆವು ಜೇಯು ನೀ ಬೆಸಸೆಂಬ
ಜೋದರಬ್ಬರಗಳೊಪ್ಪಿದುವು ॥ ೪೧

ಪಂಠಿಸಿದರಿಗಳ ತಲೆಯನರಿದು ಕಾಳ
ಕಂಠಗೆ ವನ ಮಾಲೆ ಯಿತ್ತು ।
ಭಂಟರಾಗಿಹೆವೆಂಬರುಲುಹು ರಾಜೆಸಿದುದು
ವೊಂಟಿಗರಾದ ನಾಯಕರ ॥ ೪೨

ಧುರ ಮಂಡಲದೆ ದೇವರ ಪಾದ ಪದ್ಮವ
ಹರುಷದೆ ಕಾದು ಬೆಸಸಿದ ।
ಪಿರಿದು ಸೇವೆಯು ಮೊಳ್ಪವೆಂಬೂಳಿಗದರ
ಬಿರುದಿನ ನುಡಿಗಳೊಪ್ಪಿದುವು ॥ ೪೩

ಪರಿಮಳಿಸುವ ದಿವ್ಯ ಸಾಂಬ್ರಾಣಿಯ ಧೂಪ
ದುರುತರ ಸೌರಭ್ಯವಾಗ ।
ಪೊರೆವಾಸ್ಥಾನವ ಪೊರೆದೆಂಟು ದೆಸೆಯಲಿ
ಪರಿಶೋಭಿಸಿದುದೇ ವೇಳ್ವ ॥ ೪೪

ದಿಕ್ಕು ದಿಕ್ಕಿನ ದೊರೆಗಳ ರಾಯ ಭಾರಿಗ
ಳಕ್ಕರು ಮಿಗಿಲೈತಂದು ।
ಹೊಕ್ಕಾಸ್ಥಾನವ ನೋಡಿ ತಲೆಯು ತೂಗಿ
ಯುಕ್ಕಿದರತಿಹರುಷದಲಿ ॥ ೪೫

ಬಿರುದಂತೆಂಬರ ಗಂಡ ಸೆಣಸಿದ ನೈಪ
ಪರಿಪೂರ್ಣ ತಿಮಿರ ಮಾರ್ತಂಡ ।
ದುರ ಗಲಿ ಕಂಠೀರವ ನರಸೇಂದ್ರ ಭೂ
ವರನೊಪ್ಪಿದನು ಸೊಬಗಿಂದ ॥ ೪೬

ರಾಮನ ಶೌರ್ಯ ಭೀಮನ ಶಕ್ತಿ ದಿನ ಮಣಿ
ಯಾ ಮಹಾ ದಿವ್ಯ ಪ್ರಕಾಶ ।
ಭೂಮಿಪ ಕಂಠೀರವ ನರಸೇಂದ್ರನ
ಪ್ರೇಮದೆ ಕೆಳಗೊಂಡಿಹುವು ॥ ೪೫

ಇಂತೊಪ್ಪುವತುಳ ವೈಭವದೊಳಾಸ್ಥಾನದೆ
ಸಂತೋಷವ ತಾಳಿ ನಗುತ ।
ಕಂತು ಸನ್ನಿಭ ಕಂಠೀರವ ನರಸೇಂದ್ರ
ಸಂತತ ಸೌಖ್ಯದೊಳಸೆದ ॥ ೪೮

ಓಲಗ ಪರಿವ ಸಮಯದಲಿ ನಗುತಾಗ
ವೀಳಯವ್ವುಗೊರೆಗಳನು ।
ಮೇಲೆ ಸಭೆಗೆ ಸೂಸಿ ಬೀಳ್ಕೊಟ್ಟು ವೊಳರಾಣಿ
ಯೋಲಗ ಶಾಲೆಗೈತಂದ ॥ ೪೯

ಅಂತರಾಂತರದ ಪೊಂಬಾಗಿಲೊಳಗೆ ನೀಲ
ಕುಂತಳೆಯರು ನಸು ನಗುತ ।
ಸಂತೋಷದೆ ಮುತ್ತಿನಾರತಿಗಳ ಭೂ
ಕಾಂತನಿಗೊಲೆದೊಪ್ಪಿದರು ॥ ೫೦

ಕಾಳಾಂಜೆ ಕುಂಚ ಹಡಪ ಪಾವುಗೆ ರತ್ನ
ದಾಲವಟ್ಟವು ಬೊಂಬಾಳ ।
ಸಾಲ ದೀವಟಿಗೆ ವಣ್ಣಗಳು ಭೂಪನಿದಿರಿನೊಳ್
ಮೇಳದೊಳಸೆದರರ್ತಿಯಲಿ ॥ ೫೧

ಕರ ಕಂಜ ಮುಗಿದುವು ನಯನ ನೀಲೋತ್ಪಲ
ವರಳಿದುವಂಗನಾಜನದ ।
ದರ ಹಾಸ ಚಂದ್ರಿಕೆ ಮೆರೆದುವು ನರಸೇಂದ್ರ
ಪರಿಪೂರ್ಣ ರಾಜನೈತರಲು ॥ ೫೨

ಮೆರೆವ ತಾರೆಗಳ ಸಮೂಹದೊಡನೆ ಬಹು
ಮಿರುಪ ರಾಕಾ ಚಂದ್ರನಂತೆ ।
ತರುಣಿರನ್ನೆಯರ ವೊತ್ತದಲಿ ನಾಟಕ ಶಾಲೆ
ಗರಸನೈತಂದನರ್ತಿಯಲಿ ॥ ೫೩

ನವ ರತ್ನ ಖಚಿತ ತಲ್ಪದಲಿ ಸಂಭ್ರಮದೆ ಶ್ರೀ
ಧವನೊಪ್ಪುವಂದದೆ ನಗುತ ।
ಭೂವನೇಶ ಕಂಠೀರವ ನರಸೇಂದ್ರನು
ತ್ಸವದೊಳಗೊಲಿದು ರಂಜಿಸಿದ ॥ ೫೪

ಆಸಮಯದಲಿ ತೂರ್ಯ ತ್ರಯಮಂಗಳ
ಘೋಷವೆಸೆಯೆ ನಸು ನಗುತ ।
ಭಾಸುರ ಬಿರುದಿನ ನಾಟ್ಯ ವಧುಗಳು ಸಂ
ತೋಷದೆ ನಡೆತಂದರೊಲಿದು ॥ ೫೫

ತೊಳಗುವ ನವ ರತ್ನ ಗಾಸೆಯು ಸರ್ವಾಂಗ
ಕಳವಟ್ಟ ಮಣಿ ಭೂಷಣದ ।
ಥಳ ಥಳಿಸುವ ಮುದ್ದು ಮೊಗದ ನರ್ತಕಿಯರು
ಫಳಿಲನೆ ನಡೆತಂದರಾಗ ॥ ೫೬

ಉಡಿಯ ಸುತ್ತಿದ ವಲ್ಲಿ ಪಾಟಿನ ಕರದಲಿ
ಪಿಡಿದು ರಂಜಿಪ ರನ್ನ ಸಳಯ ।
ಕಡು ಜಾಣ ಭರತಾಚಾರ್ಯನು ರಾಜಿಪ
ಬಿಡಗನದೇನ ಬಣ್ಣಿಸುವೆ ॥ ೫೭

ತವೆ ಮಣಿಮಯ ಕಾಂಡಪಟದ ಮರೆಯೊಳಾಗ
ದಿವಿಜ ನಾರಿಯರ ಚೆಲ್ವಿಂದ ।
ಅವಿರಳ ಭರತ ಶಾಸ್ತ್ರಾಧಿದೇವಿಯರಂತೆ
ಯುವತಿ ರನ್ನೆಯರೊಪ್ಪಿದರು ॥ ೫೮

ತಾಳ ಮದ್ದಳೆ ಮುಖವೀಣೆ ಯಾವುಜ ಗೀತ
ದಾಳಾಪ ನಾಟ್ಯ ವಧುಗಳ ।
ಕಾಲ ಗೆಜ್ಜೆಯ ರವ ಗತಿ ಗೂಡಿ ಶ್ರುತಿಗೆ ವಿ
ಶಾಲದ ಸೊಗಸ ಬೀರಿದುವು ॥ ೫೯

ಸುರುಚಿರ ಸೂತ್ರ ಧಾರಕ ತತ್ಕಾರವ
ವಿರಚಿಸಿ ಜವನಿಕೆದೆಗೆಯೆ ।
ಭರತ ಶಾಸ್ತ್ರಾಗಮವಿಡಿದು ಸುಪ್ರೌಢೆಯು
ರುರು ಪುಷ್ಪಗಳ ಸೂಸಿದರು ॥ ೬೦

ನರಸಿಂಹ ಸ್ತುತಿ ಗೀತ ಪ್ರಬಂಧವ
ಪಿರಿದು ಸುಳಾದಿ ತಾಳದಲಿ ।
ಕರದಭಿನಯಗೂಡಿ ಕಡು ಕುಶಲದೆ ನಾಟ್ಯ
ದಿರವ ಮೆರೆದರಂಗನೆಯರು ॥ ೬೧

ವಿಲಸಿತ ಕರ ಭೇದ ದೃಷ್ಟಿ ಭೇದವು ನೆರೆ
ಯೊಲವು ದೋರುವ ಶಿರ ಭೇದ ।
ಸು ಲಲಿತ ಸ್ಥಾನಕ ಭೇದ ಚಾರಿಯಭೇದ
ದಲಿ ಭಾವಗಳ ತೋರಿದರು ॥ ೬೨

ಮೆರೆವಂಗ ಪ್ರತ್ಯಂಗೋಪಾಂಗ ಬಹು ಚಾಳಿ
ವೆರ ದೇಶಿ ಕೋಲ ಚಾರಿಗಳ ।
ಹಿರಿದಂಗಹಾರ ಮಂಡಲ ಕರ ಕ್ಷೇತ್ರದ
ಬಿರುದಿನ ನಾಟ್ಯವಾಡಿದರು ॥ ೬೩

ರಂಭಾ ನಾರಿಯ ಪಾತ್ರದ ಪರಿಣತಿ
ಯುಂಬುಜಾನನೆಯೂರ್ವಶಿಯ ।
ಮುಂಬರಿದೆಸೆವ ಕಟ್ಟಣಿಗಳ ಗತಿಯ ನಿ
ತಂಬಿನಿಯರುಗಳಾಡಿದರು ॥ ೬೪

ಕಡೆಗಣ್ಗಳ ಹೊಳಹಿನ ಬಳ್ಳಿಮಿಂಚಿನ
ತೊಡವುಲಿಗಳ ಘನ ರವದ ।
ಮುಡಿಯು ಮುಂಗಾರ ಮೇಘದೆ ಸೋಗೆ ನವಿಲಾಟ
ದಡವೆ ತೋರಿದರಂಗನೆಯರು ॥ ೬೫

ಪಿರಿದು ಪ್ರಬಂಧಜಕ್ಕಿಣಿ ರಾಜ ಕೀರನ
ಮೆರೆವ ಕಟ್ಟಳೆಯಾಟಗಳ ।
ದೊರೆ ರಾಯ ನರಸ ರಾಜೇಂದ್ರಗೆ ಸಂತಸ
ದೊರೆಯಲಾಡಿದರಂಗನೆಯರು ॥ ೬೬

ಗಿರಿ ಸುತೆ ಶಚಿ ಶಾರದೆಯರಂಗನೆಯರ
ಬಿರುದಿನ ಪಾತ್ರಕ್ಕೆ ಮೆಚ್ಚಿ ।
ಕರೆವ ಪೂಮಳೆ ಯೆನೆ ಸೂತ್ರಾಭ್ರಗಳಿಂದ
ಪರಿಮಳ ಪುಷ್ಪ ಸೂಸಿದುವು ॥ ೬೭

ಜನ ಪತಿ ತರುಣಿ ರನ್ನೆಯರ ನಾಟ್ಯಕೆ ಮೆಚ್ಚಿ
ಕನಕ ರತ್ನಾಭಿಷೇಕಗಳ ।
ಘನ ಹರುಷದೆ ಮಾಡಿಸಿ ಸಂತೋಷದ
ವನಧಿಯೊಳೋಲಾಡಿಸಿದ ॥ ೬೮

ಭರತಜ್ಞ ಮೇಳ ಗಾರರಿಗೆ ಭೂಷಣಗಳ
ಸುರುಚಿರ ವಸನ ಕರ್ಪುರದ ।
ಪರಿಮಳ ವೆರೆದ ವೀಳಯಗಳನಿತ್ತಾಗ
ನರಸ ರಾಜೆಂದ್ರ ಮನ್ನಿಸಿದ ॥ ೬೯

ಅಸಮಯದೊಳೂರ್ವ ನಾರಿ ಭಾಗವತ ವಿ
ಲಾಸದ ಪುಣ್ಯ ಕಥೆಗಳ ।
ಭಾಸುರ ಗಾನ ರಸದೊಳೋದಿ ಬಹು ಸಂ
ತೋಷವನಿತ್ತಳರಸಗೆ ॥ ೭೦

ಮತ್ತೊರ್ವಳು ಭಾರತದ ಕಥೆಯ ಬಲು
ಬಿತ್ತರದಲಿ ನಲವಿಂದ ।
ಬತ್ತೀಸ ರಾಗದೊಳೋದಿ ಭೂ ಪಾಲನ
ಚಿತ್ತಕ್ಕೆ ಬಂದಳೀ ವೇಳ್ವ ॥ ೫೧

ಕಾಮಿನಿ ಯೊರ್ವಳು ನಗುತಾಗ ಹರುಷದೆ
ರಾಮಾಯಣ ಪುಣ್ಯ ಕಥೆಯ ।
ಪ್ರೇಮದೊಳೋದಿ ಕಂಠೀರವ ನರಸೇಂದ್ರ,
ಭೂಮಿ ಪಾಲನ ಮೆಚ್ಚಿಸಿದಳು ॥ ೫೨

ನಗುತೊರ್ವ ನೀರೆ ಚಿಂತಾಮಣಿ ಮೊದಲಾದ
ಬಗೆ ಬಗೆ ತರ್ಕ ಶಾಸ್ತ್ರಗಳ ।
ಅಗಣಿತವಾಗಿ ಬಣ್ಣಿಸಿ ನರಸೇಂದ್ರಗೆ
ಮಿಗೆ ಹರುಷವ ಬರಿಸಿದಳು ॥ ೫೩

ಕರದೊಳು ಪಿಡಿದು ವೀಣೆಯ ವಾಣಿಯಂದದೆ
ಕೊರಳು ಬೆರಳನೊಂದುಗೂಡಿ ।
ಹರುಷದೆ ಪಾಡಿ ಗಾನಾಮೃತವನು ಕರ್ಣ
ಕಿರದೆ ಸೂಸಿದಳೂರ್ವ ನೀರೆ ॥ ೫೪

ಬಾಲ ಶಾರದೆಗಳನಲು ತುಂಬುರವೆನಾಂತು
ಲೋಲಾಕ್ಷಿಯರಿರ್ವರಾಗ ।
ತಾಳ ನಿರ್ಣಯದೆ ಕಂಠೀರವ ನೃಪನಂಕ
ಮಾಲೆಯ ಪಾಡಿದರೊಲಿದು ॥ ೫೫

ತುರುಕರಾಡ್ಪಲ ವಾರ್ಧಿ ಬಾಡಬ ದ್ರಾವಿಡ
ಧರಣೀಶ ತಿಮಿರ ಮಾರ್ತಂಡ ।
ನೆರೆ ಯಾಂಧ್ರ ಮನ್ನೆಯ ದಳವುಳ ಕಾರನೆಂ
ದಿರದೆ ಪಾಡಿದರಂಗನೆಯರು ॥ ೫೬

ಧಾಳಿಯೊಳಗೆ ವೈರಿ ನೃಪರ ದುರ್ಗಂಗಳ
ಧೂಳಿಗೊಟ್ಟಿಯು ಕೊಂಡ ಧೀರ ।
ಪೇಳಲಳವೆ ನಿನ್ನ ಶೌರ್ಯದಿರವೆನೆಂದು
ನೀಲಾಳಕಿಯರು ಪಾಡಿದರು ॥ ೭೩

ಹಗಲು ಲಗ್ಗೆಯೊಳರಿ ನೃಪರ ದುರ್ಗವ ಕೊಂಡ
ಜಗಕತಿ ಕೀರ್ತಿ ಪ್ರಚಂಡ ।
ಪಗೆ ರಾಯ ಗಿರಿ ವಜ್ರ ದಂಡ ಕಂಠೀರವ
ಮಿಗೆ ಜಯತೆಂದು ಪಾಡಿದರು ॥ ೭೪

ಅಂದಿನ ನರಸಿಂಹ ಮೂರ್ತಿಯೆಲ್ಲದೆ ನೀ
ನಿಂದಿನ ನರ ಭೂಮಿಪನೆ ।
ಕಂದರ್ಪ ಲಾವಣ್ಯ ಜಯತೆಂದು ನಾರೀ
ವೃಂದ ನಲಿದು ಪಾಡಿದ.ದು ॥ ೭೫

ನೋಡಿದಂಗನೆಯರ ನೇತ್ರ ಚಕೋರಕೆ
ಕೂಡೊಪ್ಪುತಿಹ ಪೂರ್ಣ ಚಂದ್ರ ।
ರೂಢಿಸ ದಾನ ಚಿಂತಾಮಣಿ ಜಯತೆಂದು
ಪಾಡಿದರತಿ ಚಪಳಯರು ॥ ೭೬

ನಗುತಾಗ ನಾನಾ ಬಗೆ ವಿದ್ಯದಬಲೆಯ
ರಿಗೆ ಬಹು ಭೂಷಣವಿತ್ತು ।
ಸುಗುಣ ಶೇಖರ ನರಸೇಂದ್ರ ಭೋಜನ ಶಾಲೆ
ಗೊಗುಮಿಗೆ ಹರುಷದೆ ಬಂದು ॥ ೭೭

ಚರಣ ಪಲ್ಲವೆಗಳ ತೊಳಮು ದುಕೂಲದ
ಸೆರಗಿನೊಳೂರಸಿ ನಾರಿಯರು ।
ಭರದೆ ಕೈಲಾಗೀಯೆ ನವ ರತ್ನ ಪೀಠದೊ
ಳರಸನೊಪ್ಪಿರ್ದನರ್ತಿಯಲಿ ॥ ೭೮

ಬವಳಿಬಿಸುವ ಸಾಲು ದಿವ್ಯ ಜ್ಯೋತಿಗಳಾ
ಭವನವ ತೀವಿಕೊಂಡಿರಲು ।
ತನೆ ಮಿಸುನಿಯ ಹರಿವಾಣ ಬಟ್ಟಲುಗಳ
ಯುವತಿಯರಳವಡಿಸಿದರು ॥ ೮೩

ಪರಿ ಪರಿಯುಪ್ಪಿನ ಕಾಯಿ ಹಪ್ಪಳ ಸವಿ
ವೆರಸಿದ ಶುಭ್ರ ಬಾಳಕವ ।
ಪಿರಿದೆನಿಸುವ ಭಯ ಭಕ್ತಿಯಿಂದರಸಗೆ
ತರುಣಿಯರೆಡೆ ಮಾಡಿದರು ॥ ೮೪

ತಾಳದ ಸೀಕರಣೆ ಕಸವಿ ಪಚ್ಚಡಿಗಳು
ಮೇಲಾದ ಷಡು ರಸಗಳನು ।
ಶಾಲಿಯ ದಿವ್ಯಾನ್ನ ಸದ್ಘೋಷ್ಪತಗಳ
ಲೋಲಾಕ್ಷಿಯರು ಬಡಿಸಿದರು ॥ ೮೫

ಮಿಸುನಿಯ ವರ್ಣದ ತೊಗರಿಯ ಬೇಳೆಯ
* ಕುಶಲದ ಸೂಪ ಶಾಕಗಳ ।
ಶಶಿಮುಖಿಯರು ಸಂತೋಷದೆ ಬಡಿಸಿದ
ರೊಸೆದು ಭೂಪಾಲನಿಗಾಗ ॥ ೮೬

ಸಣ್ಣ ಸೇವಗೆ ಹಾಲುಂಡೆ ಜೇನ್ನೊಡ ಶುಭ್ರ
ವರ್ಣದುದ್ದಿನ ಸವಿಗಡುಬು ।
ಬಣ್ಣಿಸೆ ಹೂರಣ ಗಡುಬು ಭೂಪಗೆ ಮುದ್ದು
ವೆಣ್ಣುಗಳಡೆ ಮಾಡಿದರು ॥ ೮೭

ಕೀಲಸಾಗರ ಸಂಜೀವನಿ ಮೊದಲಾದ
ಸಾಲ ಸವಿಯ ರೊಟ್ಟಿಗಳ ।
ನೀಲ ಕುಂತಳೆಯರು ನಗುತಾಗ ನರಸಭೂ
ಪಾಲನಿಗೆಡೆ ಮಾಡಿದರು ॥ ೮೮

---

* ಹಸರಿನ

ಉಂಡಲಿಗೆಯು ಕರಿಗಡುಬು ರಾಜಿಪ ಕಟ್ಟು
ಮಂಡಿಗೆ ಬಿಸಿಯ ದೋಸೆಗಳ ।
ಪುಂಡರೀಕಾಕ್ಷಿಯರೈದಿ ನೀಡಿದರಾಗ
ಚಂಡ ವಿಕ್ರಮನಿಗರ್ತಿಯಲಿ ॥ ೪೯

ಮೆರೆವ ಸಣ್ಣಕ್ಕಿಯ ಪಾಯಸ ಸೊಜ್ಜಿಗೆ
ವೆರೆದ ಸಕ್ಕರೆಯ ಪಾಯಸವೆ ।
ಪಿರಿದು ಗೌಲಿಯ ಪಾಯಸಗಳ ತಂದಾಗ
ಸರಸಿಜಾಕ್ಷಿಯರು ನೀಡಿದರು ॥ ೫೦

ಚಿಲುಪಾಲು ತಂಬಾಲು ಕೆನೆ ವೆರಸಿದ ಪಾಲು
ಸುಲಲಿತ ಬಟ್ಟ ವಾಲುಗಳ ।
ಸಲೆ ಕಟ್ಟು ಮೊಸರುಗಳಿ ಗಟ್ಟಿ ಮೆಜ್ಜಿಗೆಗಳ
ಲಲನೆಯರುಣಬಡಿಸಿದರು ॥ ೫೧

ದಳಪತಿ ಸಹ ಬಂಧುಗಳು ಕೂಡಿ ಪಂತಿಯೊ
ಳೂಲಿದು ಭೋಜನವೆನು ಮಾಡಿ ।
ಇಳಯಧಿಪತಿ ಕಂಠೀರವ ನರಸೇಂದ್ರ
ಬಲು ಹರುಷದೊಳೂಪ್ಪಿದನು ॥ ೫೨

ಭೋಜನಾಂತದೆ ಕೈ ತೊಳದು ಕರ್ಪೂರದ ಸ
ಮಾಜ ವೀಳ್ಯವನಿತ್ತು ನಗುತ ।
ತೇಜದಿಂದವರ ಬೀಳ್ಕೊಟ್ಟಾಗ ಸಜ್ಜೆಯ
ರಾಜ ಮಂದಿರಕ್ಕೆ ತಂದ ॥ ೫೩

ಸಿರಿಗೂಡಿ ನರಹರಿ ಶೇಷ ತಲ್ಪದೊಳಾಗ
ಹರುಷದೆ ರಾಜಿಸುವಂತೆ ।
ನರಸ ರಾಜೇಂದ್ರನು ಸಂತೋಷದೆ ತಾ
ಮೆರೆದನೇನೆಂಬೆನಚ್ಚರಿಯ ॥ ೫೪

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದೆ ಸುಧನರ್ಮಾನು ಬಂಧಿ ॥ ೯೫

ಎನೆಯ ಸಂಧಿ ಸಮಾಪ್ತಂ

ಒಂಭತ್ತನೆಯ ಸಂಧಿ

ಮದನ ಮೋಹಿನೀ ಕಥೆ

ಸೂಚನೆ ॥ ಮದನ ಮೋಹಿನಿ ಯೆಂಬ ವಾರಾಂಗನೆ ಯೊರ್ವ
ಚದುರ ವಿಟನ ಮೋಹಿಸಿದಳು ॥

ಇಂತಪ್ಪ ಸಕಲ ವೈಭವದಲಿ ಸೌಭಾಗ್ಯ
ಕಾಂತೆಗೆ ನಾಯಕನಾಗಿ ।
ಕಂತು ಸನ್ನಿಭ ಕಂಠೀರವ ನರಸೇಂದ್ರ
ಸಂತೋಷದೊಳಿಪ್ಪುತಿರ್ದ ॥ ೧

ರಾಜಾಧಿರಾಜನಾಶ್ರಿತ ಜನ ವರ ಕಲ್ಪ
ಭೂಜ ಸತ್ಕೀರ್ತಿ ಸಮೋಜ ।
ರಾಜ ವಂಶಾಬ್ಧಿ ಚಂದ್ರಮ ಕಂಠೀರವ
ರಾಜ ಶೇಖರನೊಪ್ಪುತಿರ್ದ ॥ ೨

ಸ್ಥಿರ ಧರ್ಮ ಮಾರ್ಗದೊಳಗೆ ಸರ್ವ ದೇಶಕ್ಕೆ
ಕರುಣೋದಯ ಚಿತ್ತನಾಗಿ ।
ಪುರುಷೋತ್ತಮನಂತೆ ದೊರೆ ರಾಯ ನರಸೇಂದ್ರ
ವೆಸರೆದನೇ ವೇಳ್ವನಚ್ಚರಿಯ ॥ ೩

ಆ ಸಮಯದೆ ಮಧು ನೃಪ ನೆನ ರಾಷ್ಟ್ರವಿ
ಲಾಸವ ನೋಡಲುಜ್ಜಿಗಿಪ ।
ಭಾಸುರ ಜಯ ಭೇರಿಯ ರವವೆನೆ ಪಿಕ
ಘೋಷಗಳಸೆದುವರ್ತಿಯಲಿ ॥ ೪

ಗಿಳಿಗಳುಗ್ಗಡಿಸೆ ಕೇಕಿಗಳು ಕೈವಾರಿಸೆ
ವಿಲಸಿತ ಭ್ರಮರ ಝೇಂಕರದ ।
ಬಲು ದಮೋನಗಳಬ್ಬರದಿಂದ ಮಧು ನೃಪ
ಸಲೆ ವನ ರಾಷ್ಟ್ರಕೈತಂದ ॥ ೫

ತಳರ ಸತ್ತಿಗೆ ಹೊಂಬಾಳೆಯ ಚಾಮರ
* ವೆಳಲತೆ ಮೆಟ್ಟುವ ಪೊದೆಯ ।
ಕುಳಿರೆಲರಾಲವಟ್ಟಲಿಗಳಿಂ ಮಧು ರಾಜ
ತಳರ್ದ ನಂದನ ರಾಜ್ಯಕಾಗ ॥ ೬

† ಅರಿಹಿಮ ಕೂಟನನಡಗಿಸಿ ಜಾಜಿಯ
ಬಿರುದನೀಡಾಡಿಸಿ ನಗುತ ।
ವರ ಕೌಮುದಿಯೆಂಬ ಧವಳ ದಂತಿಯನೇರಿ
ಭರದೆ ಬಂದನು ಮಧು ರಾಜ ॥ ೭

ಬಲು ನಾಳಕೇರ ಕಳಸ ಹೊಂದಾವರೆ
ಬೆಳಪ ಕನ್ನಡಿ ಮೊಂದಳಿರ ।
ಸಲೆ ತೋರಣದೆ ಮಾಧವನನು ವನ ಲಕ್ಷ್ಮಿ
ನಲಿದಿದಿರ್ಗೊಂಡಳರ್ತಿಯಲಿ ॥ ೮

ಕೇತಕಿಯರಳ ಧೂಳ್ಗಳ ಚೆಲ್ಲಿಕೊಳುತಳಿ
ವ್ರಾತಕಲರ ಮಧು ಮದವ ।
ಪ್ರೀತಿಯಿಂದೀಯುತನಿಲದಂತಿ ವನದೊಳ
ಗಾತುರದಲಿ ಚರಿಸಿದುದು ॥ ೯

ಇಂದು ನಾಳಿನೊಳು ಕಾಮನು ವನ ಕೇಳಿಗೆ
ಬಂದಪ ಕಾದಿರೆಂದಾಗ ।
ಮಂದಾನಿಲಗೆ ಚೈತ್ರ ತಳವಾರಿಕೆಯನಿ
ತ್ತಂದದೊಳಿಸದನೇ ವೇಳ್ವ ॥ ೧೦

---

* ಎಳಲತೆವೆಟ್ಟುಪವರೆಸು । ಕುಳಿರೆಲರಾಲವಟ್ಟಲಿಗಳಿಂ. † ಅರಿಹೇಮಂತನ.

ಉಲಿವ ಕೋಗಿಲೆ ಕೃತಕಾದ್ರಿಯೊಳಾಡುವ
ಕಲಕಂಠ ಕವಿಲಕೆರಗುವ ।
ಅಳಿ ವಿಂಡುಗಳರಸಂಚೆಗಳಸೆದುವ್ರು
ವಿಲಸಿತ ಚೈತ್ರ ಮಾಸದಲಿ ॥ ೧೧

ಬಿಸಿಲು ಗುದುರೆ ಯೇರಿ ಬೇಸಗೆ ರಾಜನಂ
ದೆಸಗಿ ದುವ್ವಾಳಿಸಲಾಗ ।
ಮಿಸುಗುವ ಖುರ ಧೂಳಿ ಯೆಂಬೊಲು ಸುಳಿಗಾಳಿ
ಪಸರಿಸಿತಾ ಕಾಲದೊಳಗೆ ॥ ೧೨

ಪೂಸುವ ಸಿರಿ ಗಂಪ ಪಾಸುವ ತಳಿರ್ಗಳ
ಸೂಸುವ ಪನಿ ಸಿರಿಯೆಳಪ ।
ಓಸರಿಸದೆ ನಳಲುಗಳ ಸಾರುವ ದೇಶ
ದೇಶದ ಜನಗಳೂಪ್ಪಿದರು ॥ ೧೩

ಈ ಪರಿಯೊಳಗಿಹ ಮಧು ಮಾಸದಲಿ ಪುಷ್ಪ
ಚಾಪನಧಿಕ ವಿರಹಿಗಳ ।
ಕೋಪದೆ ಕುಬುಬಿರಿದೆಸೆಯುತ ಮನಕತಿ
ತಾಪವನಿತ್ತನೇ ವೇಳ್ವ ॥ ೧೪

ಬಳಿಕಿಂತಿಹ ಮಧು ಮಾಸದೆ ಪಟ್ಟಣ
ದೊಳಗಿಹ ಪಣ್ಯಾಂಗನೆಯರ ।
ಕುಲಕತಿ ಕಟ್ಟಾಣಿ ಮದನ ವೋಹಿನಿ ಯೆಂಬ
ಲಲನೆ ಯೊಪ್ಪಿದಳರ್ತಿಯಲಿ ॥ ೧೫

ತಾನರೆ ಗಂಧ ತ್ರಿ ಜಗದೊಳು ರಾಜಿಪ
ಭಾನುಕಿಯರ ಚಲುವಿಕೆಯ ।
ತೀವಿ ತಂದಾಹ್ಲಣ ಕರುವಿಟ್ಟೈರೆದಿಹ
ಜೀವೆ ಪುತ್ತಳಿಯಂತಿಹಳು ॥ ೧೬

ರತಿಯೂರ್ವಶಿ ರಂಭೆ ಮೇನಕೆಯರ ನೆರೆ
ಪ್ರತಿದೋರಲಿವಳ ಚೆಲ್ವಿಕೆಗೆ ।
ಮತಿಗೆ ಮಾಂಗಲ್ಯಕೆ ಚದುರತೆಗೆಣೆ ಯಲ್ಲ
ಕ್ಷಿತಿಯೊಳು ಮತ್ತೊರ್ವರುಂಟೆ ॥ ೧೩

ಮದನ ವಿಯೋಗಿಗಳದೆಯ ಥಟ್ಟುಗಿದೆಚ್ಚ
ಪದುಮಾಸ್ತ್ರದಲಗಿನಗ್ರದಲಿ ।
ಪುದಿದ ಕೆಂನೀರೆನಲಲತಿಗೆಯುಗುರ್ಗಳಿಂ
ಪದ ವೆರಳಸೆದುವಂಗನೆಯ ॥ ೧೪

ಮದನ ಶಬರ ಸಂಯಮಿ ಮೃಗಗಳಿಗಾಗ
ಕದುಬಿ ಪೂಡಿದ ಪೂ ಸರಕೆ ।
ಪುದುಗಿದ ಮಿಂಟೆಗಳನೆ ಪರಡುಗಳತಿ
ಮುದವನಿತ್ತುವು ನೋಳ್ಪರಿಗೆ ॥ ೧೫

ಕಾವನ ಕೂರಂಬಿನ ಬತ್ತಳಿಕೆಯ
ಭಾವವೆ ಜರೆದು ಚೆಲ್ವಿಂದ ।
ಭಾವೆಯು ಚಾರು ಜಂಘೆಗಳತಿ ಕಾಂತಿಯು
ತೀವಿಕೊಂಡೆಸೆದುವರ್ತಿಯಲಿ ॥ ೧೦

ಶಂಬರ ವೈರಿ ಯೆಂದೆಂಬ ಕುಂಭಿಯು ಕಟ್ಟು
ವಿಂಬಿನ ಮಣಿ ಗಂಭದಂತೆ।
ಅಂಬುಜ ನೇತ್ರೆಯ ಪೊಂ ಬಾಳ ದೊಡೆಗಳು
ತುಂಬಿದುವು ಕಣ್ಗೆ ಕೌತುಕವ ॥ ೧೧

ಕೆಂದಾವರೆಯ ಬಂಡುಣಿಸಿಗೆಳಸಿ ಯೈ
ತಂದಿಹ ಮೆದ ಹಂಸೆಯಂತೆ ।
ಚೆಂದದ ಮುತ್ತಿನ ಪಾಯಿವಟ್ಟದ ಪದ
ದ್ವಂದ್ವವೆಸೆದುವೆಂದವಳ ॥ ೧೨

ಹೇಮಾಚಲ ರತ್ನ ಕಟದಿಂದ ಭೂಮಿಗೆ
ತಾ ಮನೋಹರವಾದಂತೆ ।
ಕಾಮಿನಿ ರನ್ನೆಯ ಪೊರವಾರು ಕಾಂಚೀ
ದಾಮ ವೆರಸಿ ರಾಜಿಸಿತು ॥ ೬೩

ಪಿರಿದು ನೋಳ್ಪರ ದಿಟ್ಟಗೆ ಕಾಮನ ರೂಪ
ಧರಿಸಿಕೊಂಡತಿ ಸೊಬಗಿಂದ ।
ತರುಣಿಯರುಗಳ ಸೀಮಂತ ಮಣಿಯ ಚೆಲ್ವ
ಹರಿ ಮಧ್ಯ ಮೆರೆದುದರ್ತಿಯಲಿ ॥ ೬೪

ಲಾವಣ್ಯ ರಸ ಪೂರಿತ ಕಾಸಾರದೊ
ಳಾವರ್ತೋರ್ಮಿಗಳಂತೆ ।
ಭಾವೆಯ ತೆಳ್ವಸಿರೊಳು ನಾಭಿ ತ್ರಿವಳಿಯು
ತೀವಿಕೊಂಡೆಸೆದುದೇ ವೇಳ್ವ ॥ ೬೫

ನೆಟ್ಟನಿವಳ ಮೊಲೆಗಳು ವಿಟರಕ್ಷಿಯ
ದಿಟ್ಟ ತಾಕಲು ಜಾರದಂತೆ ।
ತೊಟ್ಟನೆ ನೀಲದ ಸರಳಜನಾಧಾರ
ವಿಟ್ಟೊಲು ಬಾಸೆ ರಂಜಿಸಿತು ॥ ೬೬

ಚಿತ್ತಜ ಸುಕುಮಾರ ನಲಿದಿಟ್ಟಾಡುವ
ಮುತ್ತಿನ ಚಂಡುಗಳನಲು ।
ಅತ್ಯುನ್ನತದೊಳು ರಾಜಿಸಿ ತರುಣಿಯ
ವೃತ್ತಕುಚಗಳೊಪ್ಪಿದುವು ॥ ೬೭

ಸುಲಲಿತ ಲಾವಣ್ಯ ಸುಧೆಯ ಪೊಂಗಳಶಗ
ಳಲಿ ತುಂಬಿ ಮುಪ್ರೈಯ ಬಲಿದು ।
ಜಲಜ ಸಂಭವನವಳುರದೊಳಿಂಬಿಟ್ಟೊಲು
ನೆಲೆ ಮೊಲೆ ಮೆರೆದುವರ್ತಿಯಲಿ ॥ ೬೮

ಕಂದರ್ಪ ನಗುತ ಲಾಲಿಸುತ ಸಂತಸದೊಳು
ಚಂದದೆ ಪಿಡಿದು ರಾಜಿಸುವ ।
ಇಂದೀವರವಾಂತ ಲತೆ ಯೆನೆ ತತ್ಕರ
ದಿಂದೊಪ್ಪಿದುವು ನಳಿ ತೋಳು ॥ ೮೯

ಬಿಡದೆ ಜಿತೇಂದ್ರಿಯ ನಿಕರವ ಮಿಗೆ ಕಟ್ಟಿ
ಕೆಡಹುವ ಸ್ಮರ ಪಾಶದಂತೆ ।
ಮಡದಿರನ್ನೆಯ ಬಾಹು ವಲ್ಲರಿ ನೋಳ್ಪಗೆ
ಕಡು ಚೆಲ್ವಿಕೆಯ ಬೀರುತಿಹುವು ॥ ೯೦

ಲಲನೆಯ ಲಾವಣ್ಯಾಂಬುಧಿಯೊಳು ಪುಟ್ಟಿ
ಥಳಥಳಿಸುವೆ ಶಂಖದಂತೆ ।
ನಳಿನಾಕ್ಷಿಯ ನುಣ್ಗೊರಳು ನೋಳ್ಪರ ಕಣ್ಗೆ
ಸುಲಲಿತೋತ್ಸವವಿತ್ತುದಾಗ ॥ ೯೧

ಮುಖ ಚಂದ್ರನೊಳಗೆ ರಾಜಿಪ ವಟಫಲ ಮಿಗೆ
ಚಕಚಕಿಪಂದದೊಳಾಗ ।
ಅಕಳಂಕರೂಪೆಯ ರದನಚ್ಛದ ವಿಟ
ಶುಕಗಳ್ಗೆ ಸುಖ ಗೊಡುತಿಹುದು ॥ ೯೨

ಸರಸಿಜ ಗಂಧಿಯ ವದನ ನಂದನದಲಿ
ನೆರೆ ಪ್ರೂತು ಸಾಲುಗೊಂಡೆಸೆವ ।
ಪಿರಿದು ವೊಲ್ಲೆಯ ಮುಗುಳುಗಳನೆ ಮೆರೆದುವು
ಮಿರುಗುವ ದಂತ ಪಙ್ಕ್ತಿಗಳು ॥ ೯೩

ಲಲಿತ ಚಂಪಕವನಾಸ್ಯಾಬ್ಜ ದೊಳಿಂಬಿಡ
ಲಳಕಾಳಿಗೆ ಪಗೆ ಯೆಂದು ।
ಸುಲಲಿತ ತಿಲ ಕುಸುಮವೆನಜನಿಟ್ಟೊಲು
ಹೊಳವ ನಾಸಿಕ ರಂಜಿಸಿತು ॥ ೯೪

ಅಸಿಯಳ ದಿಟ್ಟಿಯುಂಗಜ ಪಡಿದಿಡುವಿಟ್ಟಿ
ಬಿಸಜಗಂಧಿಯ ನಿಡುಪುರ್ಬು ।
ಕುಸುಮಶರನ ಸಿಂಗಾಡಿಯುಬ್ಬೆನಲಾ
ಶಶಿಮುಖಿ ಯೆಸೆದಳೀ ವೇಳ್ವ ॥ ೫೫

ತರುಣಿಯ ಕದಪು ಕಂದರ್ಪ ರತಿಯ ಕೈಯ
ಮಿರುಪ ದರ್ಪಣಗಳ ಕದಪು ।
ಪೆರೆನೊಸಲಿನ ಸುಳಿಗುರುಳ ಸೊಂಪಿನ ಚೆಲು
ವರಳು ಗಣ್ಣ್ಬಲೆ ಯೊಪ್ಪಿದಳು ॥ ೫೬

ಕಾವ ರಾಯನ ಪಟ್ಟದಾನೆ ಯೆಂದೆನಲಾ
ಭೂವಕಿ ಯೌವನ ಮೆದವ ।
ತೀವಿದ ವಿಟದುಂಬಿಗೀಯುತ ಸನ್ಮೋಹ
ನಾವೆಳೆಯೊಳಗೊಪ್ಪಿದಳು ॥ ೫೭

ಇಂತಪ್ಪ ಮದನವೋಹಿನಿ ನಾರೀ ಜನ
ಚಿಂತಾಮಣಿ ಕೆಳದಿಯರ ।
ತಿಂತಿಣಿಸಹಿತ ಸಂಭ್ರಮದೊಳಗಿರಲೊರ್ವ
ಕಾಂತೆ ಯ್ಯೈತಂದಳು ನಗುತ ॥ ೫೮

ಬರಲಾತ್ಮ ಸಖಿಯ ಮುಖಾಬ್ಜವನೀಕ್ಷಿಸಿ
ಕರ ವಿಡಿದೊಡನೆ ಕುಳ್ಳಿರಿಸಿ ।
ಪಿರಿದು ಮನ್ನಿಸುತ ಕರ್ಪೂರ ವೀಳ್ಯವನಿತ್ತು
ಸರಸದೆ ನುಡಿದಳಿಂತೆಂದು ॥ ೫೯

ಬೂರೆಲೆ ವರ ಚಿತ್ರ ಲೇಖೆ ಯಿಂ ಭುವನದೆ
ಚಾರುತರದ ಚೆಲ್ವಿಕೆಯ ।
ನೀರರ ಸುಗುಣ ವಿಸ್ತಾರರ ಮೋಹನಾ
ಕಾರರ ಬಗೆಯ ಪೇಳನಗೆ ॥ ೬೦

ಎನ್ನಯ ರೂಪಿಗೆ ತಕ್ಕಂಥ ಪುರುಷನ
ನನ್ನಿಯಿಂದಲಿ ಪೇಳಲೀಗ ।
ಉನ್ನತವಾದಾಭರಣವ ಕೊಡುವೆನು
ನನ್ನಾಣೆ ಸುಳ್ಳ ನಾ ಪೇಳ ॥ ೪೧

ಕಾಮನ ಪೋಲುವ ಸೋಮ ವದನನನು
ಕೋಮಲಾಂಗಿಯೆ ಕರೆತರಲು ।
ಪ್ರೇಮದಿಂ ಮುತ್ತಿನ ಹಾರವನೀವೆನು
ತಾಮಸಗೆಯ್ಯದೆ ಪೋಗಿ ॥ ೪೨

ತರುಣೀ ಮಣಿಯೆ ಯೆನಗೆರಕವಾಗಿರುವನ
ಕರೆತಂದರೆ ನೀರೆ ನಿನಗೆ ।
ಪರಿ ಪರಿ ಸೀರೆ ರವಿಕೆ ಯಿತ್ತು ಪೊರೆವೆನು
ಗುರು ಕುಚದಬಲೆ ನೀ ಕೇಳ ॥ ೪೩

ಮೆರೆವ ಚಕ್ಷನ್ನ ದೇಶದ ರಾಜಪುತ್ರರ
ಪಿರಿದು ಚೆಲ್ವಿಕೆಯ ಪೌಢತೆಯ ।
ಸಿರಿಯು ಸಂಭ್ರಮವ ನೀನರಿದಿರಿನಗೆ ಮನೋ
ಹರುಷದೊಳುಸಿರಬ್ಜನೇತ್ರೆ ॥ ೪೪

ಚಿತ್ತೈಸು ಮದನ ಮೋಹಿನಿ ಚೆಲುವಿನ ಕರು
ವೆತ್ತಿಹ ಗಂಡು ಪುತ್ತಳಿಯ ।
ಬಿಕ್ಕರವೆಡೆದೀ ಪಟ್ಟಣದೊಳಗೊರ್ವ
ನುತ್ತಮ ನಾಯಕನಿಹನು ॥ ೪೫

ರೂಪ ಜಯಂತನನಿಪ ಪೆಸರವನಿಕ್ಷು
ಚಾಪ ಚಂದ್ರಮ ಸುಮನಸನು ।
ಚಾಪಲನೇತ್ರೆ ಕೇಳ್ ಲವಿಕೆಗಿಣೆ ಯಿಲ್ಲ
ನೀ ಪುಣ್ಯವತಿ ಚಿತ್ತೈಸು ॥ ೪೬

* * * *

ಇಂತಪ್ಪ ರಾಜನ ಕೂಡಿದ್ದರೆ ನೀನು
ಕಂತುವಿನರಸಿ ನೀನೆನಿಪೆ ।
ಸಂತಸವಾಗಿಹುದನು ವೆಂದು ಕಾಂಬೆನೊ
ದಂತಿ ಗಮನೆ ನೇತ್ರದಿಂದ ॥ ೪೭

ಧರೆಯ ಮೇಲಣ ಪುರುಷರ ರೂವು ನಾ ಪೇಳ್ವ
ಗರುವನ ಮೆರೆವ ಚೆಲ್ವಿಕೆಗೆ ।
ಸರಿಯಿಲ್ಲ ನೀ ನಿಟ್ಟಿಸೆ ನಿನ್ನ ಸ್ಮರ ವೀರ
ನುರವಣಿಸುತ ಬಾಧಿಸುವನು ॥ ೪೮

ನಿಟ್ಟಿಸಿ ನೋಡಿದ ಪೆಣ್ಗೆ ದಶಾವಸ್ಥೆ
ಹುಟ್ಟುವುದಬಲೆ ಚಿತ್ತೈಸು ।
ಸೃಷ್ಟಿಯೊಳಾವ ಸುಕೃತದೊಳವನ ತಾಯಿ
ಕಟ್ಟಿರಕದಲಿ ಪಡೆದಳೂ ॥ ೪೯

ಅವನಂಗ ಸಂಗ ಸೌಖ್ಯವ ಪಡೆದಿಪ ಪೆಣ್ಣು
ಭುವನದೊಳಾವ ಪುಣ್ಯವನು ।
ತವೆ ರಚಿಸಿಹಳೂ ನಾನೇನೆಂಬೆ ನೋಡಲು
ದ್ಭವಿಸಿತುತ್ಸವವೇನಬಲೆ ॥ ೫೦

---

* ನವ ಮನ್ಮಥಾಕಾರನ ಸಂಗಕ್ಕೊಸ್ಕರ
ಯಿಳೆಯೊಳಿರುವ ಸ್ತ್ರೀಯರೆಲ್ಲ ।
ಮುದದೊಳು ಇಷ್ಟದೇವರ ಪ್ರಾರ್ಥನೆಯನು
ಯಿರುಳು ಹಗಲು ಮಾಡುವರು ॥
ಚಾವುಂಡೇಶ್ವರಿ ಕರುಣದೆ ಯಿಂ ಮಹಾ
ರಾಜನ ಸುಖವ ಕರುಣಿಸೆ ।
ಮಾಜದೆ ನಿನಗೆ ಕುಂಕುಮಾರ್ಚನೆಯನು ಸು
ಪ್ರೀಮದೆ ಮಾಡಿಪೆವೆಂದು ॥

ಪ್ರಕ್ಷಿಪ್ತಗಳಂತೆತೋರುವ ತಪ್ಪಾಗಿರುವ ಈ ಎರಡುಪದ್ಯಗಳು ಮೂಲ ಪ್ರತಿಯಲ್ಲಿ ೪೬ನೆಯ ಪದ್ಯದಮುಂದೆ ದೊರೆಯುತ್ತವೆ.

ವೆಂಚನೆ ಯೇಕವನನು ಕಂಡ ನೀರೆಯ
ಪಂಚೇಂದ್ರಿಯ ಪಿಡಿದೆಳದು ।
ಮುಂಚುತಲಿವೆ ಕೂಟಕೆ ನಿನ್ನೊಳನಗ ಪ್ರ
ಪಂಚವಿನ್ನೇಕೆ ನಿನ್ನಾಣೆ ॥ ೫೧

ರೂಪಿಗೆ ದಿಟ್ಟ ತಕ್ಕೆಗೆ ತನು ಸರಸತಾ
ಲಾಪಕೆ ಕಿವಿ ಜಿಹ್ವೆಗಧರ ।
ಆ ಪುರುಷನ ಮೈ ಗಂಪಿಗೆಸೆವ ಮೂಗು
ತಾ ಪಿರಿದಾಗೆಳಸುತಿವೆ ॥ ೫೨

ಕಡೆಯ ಮಾತೇನು ನಿನ್ನಯ ರೂಪು ಜಾಣ್ಮೆಗೆ
ಪಡಿಯವನೆಂದೀಗ ಮನವ ।
ಹಿಡಿದೆನ್ನ ಮೋಹವನೀಡಾಡಿ ನಿನ್ನೊಳು
ನುಡಿದೆ ನಿಜವನಬ್ಜನೇತ್ರೆ ॥ ೫೩

ಎನಲಂದವಳ ನುಡಿಯ ಕೇಳಿ ಕಿವಿ ವೇಟ
ಕೊನರಿ ಕೋಮಲಿಸೆ ಬೇಗದಲಿ ।
ತನು ನವಿಗುಡಿಗಟ್ಟಿ ಮದನ ಮೋಹಿನಿಯಾಗ
ವಿನಯದಿಂದುಸಿರ್ದಳಾ ಸಖಿಗೆ ॥ ೫೪

ಲಲನೆ ನೀನುಸಿರಿದ ರೂಪ ಜಯಂತನ
ಚಲುವಿಕೆಯೆನ್ನಹ್ಗಳಿಗೆ ।
ಸಲೆ ಗೋಚರವೆಂದಿಗಾಗುವುದೆಂಬುದ
ನೊಲಿದು ಪೇಳನಗೆ ನಿಶ್ಚಯದೆ ॥ ೫೫

ಆದರೆ ಕೇಳಬುಜಾಕ್ಷಿ ನಾಳಿನ ಸೂ
ರ್ಯೋದಯಕವನೀ ಪುರದ ।
ಮಾಧವನುತ್ಸವವನು ನೋಡಲು ನಮ್ಮ
ಬೀದಿಯೊಳಗೆ ಬರುತಹನೆ ॥ ೫೬

ಆ ವೇಳೆಯಲಿ ಸಿಂಗರ ಗೈದು ನಿನ್ನಯ
ಭಾವದ ಬಗೆ ದೋರಿಯುವನ ।
ಕಾವನಂಬಿಗೆ ಮೆಯ್ಯೊಡ್ಡಿಸಿ ಸೆಳದು ಸಂ
ಭಾವಿಸು ಮೋಹ ರತಿಯೊಳು ॥ ೫೩

ಎಂದವಳಾಡಿದ ನುಡಿಗೆ ಮನದೊಳಾ
ನಂದ ವಡೆದು ಲಲಿತಾಂಗಿ ।
ಅಂದಿನ ದಿನವ ಕಳೆಯಲಾಗ ರವಿ ನಡೆ
ತಂದನು ಪೂರ್ವಾಚಲಕೆ ॥ ೫೪

ಬಳಿಕಾಗ ದಶಮಿಯ ದಿಂಡಿನುತ್ಸವದಲಿ
ನಳನಾಹ್ವ ಪಶ್ಚಿಮ ರಂಗ ।
ಥಳಿಲನೆ ಸರ್ವ ಸಂಭ್ರಮವ ಬೀರುತ್ತಲಾ
ಪೊಳಲೊಳು ಮೆರೆಯುತ್ತೈತಂದ ॥ ೫೫

ಬುರುಗಿನ ಪೆರ್ಗೊಂಬಿನ ಕಾಳ ಜಾಗಟೆ
ಬಿರುದಿನ ವಾದ್ಯ ಮೌರಿಗಳ ।
ಕರಿಗಳ ಮೇಲೊಪ್ಪುವ ದಮಾನಗಳ
ಬರವೆಸೆದುದು ಪುರದೊಳಗೆ ॥ ೫೬

ತಾಳ ಮದ್ದಳೆ ಶಂಖ ನಾದ ಭಾಗವತರ
ಮೇಳದ ಸಂಪ್ರದಾಯಗಳ ।
ಆಳಾಪಗಳಿಂದ ಶ್ರೀಹರಿ ಸಕಲ ಸಂ
ಮೇಳದೆ ಮೆರೆದನರ್ತಿಯಲಿ ॥ ೫೭

ಆಲವಟ್ಟವು ಸಾಲು ಸತ್ತಿಗೆ ಚಿಮ್ಮುನ
ವಾಲ ಚಿತ್ರದ ಪಟದಿಂದ ।
ಬಾಲೆಯರಾಡುವ ಬಹು ಬಗೆ ಪಾತ್ರದ
ಕೋಲಾಟವೆಸೆದುವರ್ತಿಯಲಿ ॥ ೫೮

ಸಿಂಗರವಡೆದಿಹ ಪುರಜನ ಬಹು ಬಗೆ
ಹೆಂಗಳು ವಿಪ್ರ ನಾರಿಯರು ।
ಜಂಗುಳಿ ಡವಳ ಕೋಭಾನವ ಪಾಡುತ
ರಂಗನುತ್ಸವದೊಳ್ಮೈದಿದರು ॥ ೬೩

ರಾಜಕುಮಾರರು ಮಂತ್ರಿ ಮನ್ನೆಯರ ಸ
ಮೂಜ ವಿಟರು ವಿದೂಷಕರು ।
ಶ್ರೀ ಜಗನ್ಮಯನನೋಲೈಸುತೈತಹ ಬಲು
ತೇಜವನೇನ ಬಣ್ಣಿಸುವೆ ॥ ೬೪

ಅವರೆಡೆಯೊಳಗೆ ತಾರಾ ಗಣ ಮಧ್ಯದೆ
ಖವಖವಿಸುವ ಚಂದ್ರನಂತೆ ।
ತವಕದೆ ರೂಪ ಜಯಂತ ಸಖರ ಕೂಡಿ
ಸು ವಿಲಾಸದೊಳ್ಮತಂದ ॥ ೬೫

ಕೇಳಿದಳಲ್ಲಿಯಬ್ಬರ ಚಿತ್ರರೇಖೆ ನೀ
ಹೇಳಂದು ಕೆಳದಿಯನವಳು ।
ಪೇಳಲಳವೆ ಪಶ್ಚಿಮರಂಗನುತ್ಸವ
ದೇಳಿಗೆಯೆಂದುಸಿರಿದಳು ॥ ೬೬

ತರುಣಿ ನಾನುಸಿರಿದ ಚಲುವೆರೆಯನೀಗ
ಬರುತಿಹನೇಳು ಸಿಂಗರಿಸು ।
ಕರಿಸು ಮೇಳದ ಸಖಿಯರ ಕೂಡಿ ಹರ್ಷಾನ
ನಿರದೇರಿ ನೋಡು ನೀನವನ ॥ ೬೭

ಎನಲಾ ಮಾತಿಗೆ ಹರುಷಾಶ್ರುವಿನಿಂದ
ಪೊನಲುವರಿಯೆ ಪುಳಕಾಂಬು ।
ವನಿತೆ ಮಂಗಳ ಮಜ್ಜನವ ಮಾಡಿ ಸಿಂಗರ
ಕನುವಾದಳೇನ ಬಣ್ಣಿಸುವೆ ॥ ೬೮

ಅಗಿಲು ಚಂದನ ಕಸ್ತೂರಿ ಕುಂಕುಮ ಮೈಗೆ
ತಿಗುರಲು ದೆಸೆ ದೆಸೆಗಳನು ।
ಮಿಳಿಮಿಳಿಸುತಲಾಗ ಮದನಮೋಹಿನಿ ಚೆಲ್ವಿ
ನೊಗುಮಿಗೆಯೊಳಗೊಪ್ಪಿದಳು ॥ ೮

ಮುತ್ತಿನ ಮಂಟಿಕೆ ಕಾಲ ಪೆಂಡೆಯು ಮುದ
ವೆತ್ತ ನೂಪುರ ಹೊನ್ನ ದಾರ ।
ಉತ್ತಮ ಮಿಸುನಿಯ ಗಂಟೆ ಸರಗಳಿಂದ
ಮತ್ತೀಭ ಯಾನೆ ಯೊಪ್ಪಿದಳು ॥ ೯

ಚಾರುತರದ ದಿವ್ಯೌಧವಳ ದುಕೂಲವ
ಸೇರಿದ ಕಾಂಚಿಯ ದಾಮ ।
ತೋರ ಮುತ್ತಿನ ಕಂಠ ಮಾಲೆ ಚೌಸರದಿಂದ
ವಾರಿಜ ಗಂಧಿ ಯೆಸೆದಳು ॥ ೧೦

ನವ ರತ್ನದ ಪುಸ್ತಿ ಕಟ್ಟಾಣಿ ಮುತ್ತಿನ
ಖನಿಖವಿಸುವ ಪಂಚ ಸರದ ।
ಅವಳಿ ಮೊಲೆಯ ಮಧ್ಯಕಮರಿದ ಪದಕದೆ
ಕುವಲಯ ನೇತ್ರೆ ಯೊಪ್ಪಿದಳು ॥ ೧೧

ಅಸಿಯ ಬೆರಳ್ಗಳುಂಗುರ ಥಳಥಳಿಸುವೆ
ಹೊಸ ಹೊನ್ನ ಗೆಜ್ಜೆ ಸರಗಳ ।
ಎಸೆವ ಮುತ್ತಿನ ಚೆಲ್ವ ಕಡಗ ಕಂಕಣದಿಂದ
ಶಶಿಮುಖಿ ಮೆರೆದಳರ್ತಿಯಲಿ ॥ ೧೨

ರನ್ನದ ಬಳೆ ತೋಳ ತಾತಿ ವೋಹನದ
ತ್ಯುನ್ನತ ಭುಜಕೀರ್ತಿಯಿಂದ ।
ಕನ್ಯಾ ಜನ ಚಿಂತಾಮಣಿ ರೂಪ ಸಂ
ಪನ್ನೆ ಮೆರೆದಳೂಲವಿನಲಿ ॥ ೧೩

ಹರಳೋಲೆ ಕಟ್ಟಾಣಿ ಮುತ್ತಿನ ವೆಂಟಿಯು
ಮಿರುಗುವ ಚೆನ್ನ ಸರಗಳು ।
ತುರುಗಿದ ದಿವ್ಯ ಕಾಂತಿಯು ಮೂಕುತಿಯಿಂದ
ಸರಸಿಜಗಂಧಿ ಯೊಪ್ಪಿದಳು ॥ ೩೪

ಪೆರೆನೊಸಲಿನ ರತ್ನದ ಬೊಟ್ಟು ತಿಲಕ ಬಂ
ಧುರದ ಮುತ್ತಿನ ಕುಚ್ಚಿನಿಂದ ।
ತರುಣಿ ಮೋಹನವರಗಿಣಿ ಸೌಂದರ್ಯದ
ಸರಣಿ ಯೊಪ್ಪಿದಳು ವೇಳ ॥ ೩೬

ಮಲ್ಲಿಗೆಯುತಳ ಮಾಲೆಗಳಿಂದ ವೇಣೀ
ವಲ್ಲರಿ ತುಡುಕೆ ಹಿಂಮಡಿಯು ।
ಸಲ್ಲಲಿತಾಂಗಿ ಸಾಮಜ ಯಾನೆ ಬಹು ಬಗೆ
ಯಲ್ಲಿ ಸಿಂಗರ ಗೈದಳಾಗ ॥ ೩೭

ಕರಗ ಕಾಳಾಂಜಿ ಕೈ ಪಿಡಿ ಬಾಸಣಿಗೆ ಬಂ
ಧುರದಾಲವಟ್ಟ ಚಾಮರದ ।
ಸುರುಚಿರ ರತ್ನದ ಹಡಪ ಗಿಂಡಿಗಳ ಸಿಂ
ಗರದ ನಾರಿಯರೈದಿದರು ॥ ೩೮

ಮುಡಿಯ ಕಟ್ಟುವರು ದಿವ್ಯಾಂಗಕಾಭರಣವ
ತೊಡಿಸುವ ಮೋಹಿ ವೆಣ್ಣುಗಳು ।
ಬಿಡದಾಗ ಪರಿಮಳವನು ತಿಗುರುವ ಹೆಂಗ
ಳೂಡನ್ಯೆತಂದರರ್ತಿಯಲಿ ॥ ೩೯

ಮೊಡುವ ವೊಲೆಯು ಮಿಸುನಿ ಮಿಂಟೆಯುಂದದೆ
ಕೂಡೊಪ್ಪುವ ಮುದ್ದು ವೊಲೆಯು ।
ದೂಡಿಪ ಬೆಳಗಾಯಿ ಬೊಗರು ವೊಲೆಯು ಚೆಲ್ವು
ಗಾಡಿ ಕಾತಿಯರೈದಿದರು ॥ ೪೦

ಕಂಗೊಳಿಸುತಿಹೊಪ್ಪಿಡಿನಡುವಿನ ಚೆಲ್ವಿ
ನುಂಗುರ ವಿಡಿಯ ನಡುವಿನ ।
ಸಿಂಗಾರದ ಸೆಳೆ ನಡುವಿನ ಬಲು ಮೋಹ
ನಾಂಗಿಯುರೈತಂದರಾಗ ॥ ೪೧

ಕನ್ನೈನಿಲುಗಳಸಳು ಗಣ್ಣ್ ಕಾಂತಿಯಿಂ
ದುನ್ನತವೆಹ ವಿಂಚು ಗಣ್ಣ್ ।
ಚೆನ್ನಾಗಿ ಮೆರೆದಿಹ ತಾವರೆ ಗಣ್ಣಿನ
ಹೆಣ್ಣುಗಳ್ಳದಿತೊಗ್ಗಿನಲಿ ॥ ೪೨

ನೋಡುವ ನಗುವ ಕೈ ವೊಯ್ದುರೆ ಚೆಲ್ವ ನಾ
ತಾಡುವ ವೊಹದೇಳ್ಗಯಲಿ ।
ಪಾಡುನ ಸಖಿಯರ ವೊತ್ತದೊಳಗೆ ನೆಲೆ
ವಾಡವನೇರಿದಳಾಗ ॥ ೪೩

ನೀಲ ಕುಂತಳಗಳ ತಿದ್ದುತ ವೊಲೆಗಳ
ಮೇಲುದು ಜಾರೆ ಸೇರಿಸುತ ।
ಬಾಲೆಯರುಗಳ ಕೈ ವಿಡಿದುಪ್ಪರಿಗೆಗೆ
ಲೋಲ ಲೋಚನೆ ಯ್ದಿದಳು ॥ ೪೪

ಕಡೆಗಂಗಳ ಹೊಳಹಿನ ಕಾರ ಮಿಂಚಿನ
ಮುಡಿ ವೇಳ್ಗೆ ವೈ ದೊಡವೊಳಪು ।
ಬಿಡದಿಂದ್ರ ಚಾಪದಂತಿರಲಾಗ ಕಾರ್ಗಾಲ
ದೊಡತಿಯೊಲವಳು ನಡೆದಳು ॥ ೪೫

ರಂಗನಾಥನ ಸೇವೆ ಮಾಡಿಯೂರ್ವಶಿ ದಿ
ವ್ಯಾಂಗನೆಯರುಗಳೊಪ್ಪಿನಲಿ ।
ಹಿಂಗದೆ ತನ್ನ ನಲಿಗೆ ಪೊಸಪೊಲು ಮೋಹ
ನಾಂಗಿಯೇರಿದಳುಪ್ಪರಿಗೆಯ ॥ ೪೬

ನೆಲೆ ವಾಡದ ನವ ರತ್ನದ ಭಿತ್ತಿಯೊ
ಳಳವಟ್ಟ ವೇದಿಕೆಯೊಳಗೆ ।
ಕೆಳದಿಯರೊಡಗೂಡಿ ಸುಳಿದಾಡುವ ಜನ
ಜಲಧಿಯನಿರದೀಕ್ಷಿಸಿದಳು ॥ ೪೩

ಬಿಳಿ ಮುಗಿಲಿಂದೈದಿದ ಬಳ್ಳಿ ವಿಂಬಿನ
ಹೊಳಹಿನ ನೆಲ ವಾಡವೇರ್ದ ।
ಕಳಸ ಕುಚಗಳ ಕಾಮಿನಿಯಕ್ಷಿಗಳ ಕಾಂತಿ
ಬಳಸಿ ಮುತ್ತಿತು ನೆರವಿಗರ ॥ ೪೪

ಏನಿದಚ್ಚರಿಯೆಂದು ನೆರವಿಗರ್ಬಳಿಕ ಸು
ಮ್ಮಾನದೆ ಮೇಗ ನಿಟ್ಟಿಸುತ ।
ಮಾನಿನಿಯಾಸ್ಯೇಂದು ಮಂಡಲವನು ಕಂ
ಡಾನಂದ ವಿಡಿದು ನುಡಿದರು ॥ ೪೫

ರತಿ ದೇವಿಯೊ ರಂಭೆಯೊ ಸುರ ನಾಥನ
ವಿತತ ಪಟ್ಟದ ವರ ಸತಿಯೊ ।
ಕ್ಷಿತಿಯೊಳುತ್ತಮ ನಾಯಕಿ ಯಿವಳಾರೆಂ
ದತಿಶಯದಿಂದ ನೋಡಿದರು ॥ ೪೬

ಸುರ ಲೋಕದ ನಾರಿಯರ ಲಾವಣ್ಯವ
ಸರಸಿಜ ಭವ ತಂದು ನಗುತ ।
ಹರುಷದೆ ಕರುವಿಟ್ಟ ಪುತ್ತಳಿ ಯಲ್ಲದೆ
ನರ ಲೋಕದ ಪೆಣ್ಣಲ್ಲ ॥ ೪೭

ಕೆಂದಾವರೆ ಯಿದೆ ಕೊಳನಿಲ್ಲ ಸೌರಭ್ಯ
ಬಂಧೂಕವಿದೆ ಬನವಿಲ್ಲ ।
ಕುಂದದೆ ಹೊಳೆದಾಡುತಿವೆ ಬಾಳ ಮಿನ್ನಳ
ಸಿಂಧುವಿಲ್ಲೆಂದು ನೋಡಿದರು ॥ ೪೮

ಚಕಚಕಿಸಿದುವು ತಾರಾಳಿ ಸರೋಜಗ
ಳ್ವಿಕಸಿತವಾದುವಿದೇನು ।
ಮಕರ ಕೇತುವಿನ ಮೋಹಿನಿಯು ವಿಲಾಸದ
ಮುಖ ಚಂದ್ರನುದಯಿಸಲಾಗ ॥ ೯೩

ಅಲುಗದೆವೆಗಳಲ್ಲಾಡದ ಮೈ ಮುಂದ
ಕೊಲೆಯದ ಕಾಲ್ಮದಪಿನಲಿ ।
ನೆಲಸಿದ ಕೈ ನೆಟ್ಟ ದಿಟ್ಟಿಯ ಕಾಮುಕ
ರಲಸದೀಕ್ಷಿಸಿದರಂದವಳ ॥ ೯೪

ಸರಸಿಜ ಗಂಧಿಯ ದಿವ್ಯಾಂಗ ಲಾವಣ್ಯ
ಪರಧಿಯೊಳ್ಸೆರವಿಗರಕ್ಷಿ ।
ವರ ವಿಮಾನಗಳು ನೆರೆ ಪೊರಳುತ ತೆರಳುತ
ಮರಳಿ ಮುಳುಗುತೊಪ್ಪಿದುವು ॥ ೯೫

ಈ ಪರಿಯೊಳಗೊಸ್ಪ್ರತಿಹ ಪೌರ ಜನರನಾ
ಟೋಪಲ ನೇತ್ರೆಯಾಕ್ಷಿಸುತ ।
ರೂಪ ಜಯಂತನ ನೋಳ್ಪ ಬಲ್ಮೋಹದಾ
ಳಾಪದೊಳಸೆದಳೀ ವೇಳ್ಪ್ ॥ ೯೬

ಅನಿತರೊಳಾತ್ಮ ಸಖರ ಮೇಳದೊಳಗಾಗ
ಮನಸಿಜ ನರ ರೂಪ ತಾಳಿ ।
ತನುವಿಡಿದೈತರುವಂದದೊಳಾ ಹ್ಲಣ
ಕೊನೆಬುದೋರುತಲೈತಂದ ॥ ೯೭

ಹಾರ ಕಡಗ ಕಂಠ ಮಾಲೆ ಕರ್ಣದೊಳಿಹ
ತೋರ ಮುತ್ತಿನ ಚೌಕುಳಿಯ ।
ಸೇರಿದ ಹೊಸ ಹೊನ್ನ ಕಟಿ ಸೂತ್ರದ ಶೃಂ
ಗಾರ ನಾಯಕನೈತಂದ ॥ ೯೮

ಮೆಟ್ಟಿದ ಪೊನ್ನ ಪಾವುಗೆ ಕರದೊಳಗಳ
ವಟ್ಟು ಸಂಪಗೆಯ ಪೂ ಚಂಡು ।
ತೊಟ್ಟು ಮುತ್ತಿನ ಪೈಠಣಿಯಿಂದ ಚಿಲುವಿನ
ಕಟ್ಟೆರಕದೆ ನಡೆತಂದ ॥ ೯೯

ಕಂಡಳವಳು ಕಡು ತವಕದೆ ಕುಸುಮ ಕೋ
ದಂಡನ ಪಳಿವ ಚೆಲ್ವಿಕೆಯ ।
ಗಂಡು ಗಾಡಿಯ ನೆರೆ ರೂಪ ಜಯಂತನ
ಪುಂಡರೀಕಾಕ್ಷಿಯಂದಾಗ ॥ ೧೦೦

ನಿಟ್ಟಿಸಲವಳ ಮೈ ರೋಮಾಳಿ ನೆರೆ ಗುಡಿ
ಗಟ್ಟಿ ಕಂಪನವೇರೆ ಯಾಗ ।
ಬಟ್ಟಿಡುವಾನಂದಾಬ್ಧಿವಿನೊಳಗಂದು
ತೊಟ್ಟನೆ ಸಖಿಯ ಕೇಳಿದಳು ॥ ೧೦೧

ಎಲೆ ಚಿತ್ರರೇಖೆ ನಿಟ್ಟಿಸು ನೀ ಪೇಳಿದ
ಚೆಲುವೆರೆರೆಯನಿವನಾರೆ ।
ಸಲೆ ಯೆನ್ನ ಮನವೀತಗೆ ಕೊಳ್ಳು ಹೋದುದು
ನೆಲೆಯನುಸಿರು ನೀರಜಾಕ್ಷಿ ॥ ೧೦೨

ನೋಡಲು ನರ ಜನ್ಮದೊಳಗಿಂತು ಸೊಬಗಿನ
ರೂಢಿ ವಿಡಿದ ನೀರಿಂಟೆ ।
ಕೂಡೆಯಿಂ ಪುರುಷನ ನಿರ್ಮಿಸಿಗಜನ ಕೈ
ಗಾಡದ ಬಗೆ ಯಿನ್ನೆಂತೊ ॥ ೧೦೩

ರತಿ ಪತಿ ಯೆಂಬೆನೆ ದಿವ್ಯಾಂಗವಿವಗು
ನ್ನತವಾಗಿ ರಾಜಿಸುತಿಹುದು ।
ಕ್ರತು ಭುಜರೊಡೆಯನೆಂಬೆನೆ ಮೈ ಗಣ್ಣಿಲ್ಲ
ಕ್ಷಿತಿಯೊಳಿಂತವನಾರುಸಿರು ॥ ೧೦೪

ಕಾವನ ಕೆಂದಳಿರಂಚಿನ ಭಾವದ
ಠೀವಿಯ ಜರೆದು ರಂಜಿಸುವೆ ।
ತೀವಿದ ಪಾದ ಪದ್ಮಗಳ ಚೆನ್ನಿಗನಿವ
ನಾವ ದೇಶದ ಸುಕುಮಾರ ॥ ೧೦೩

ಶೃಂಗಾರ ಶಾಲಿಯ ಕೋಮಲ ಗರ್ಭದ
ರಂಗು ವಿಡಿದ ವೊತ್ತದಂತೆ ।
ಜಂಘೆಗಳಿಂದ ರಾಜಿಸುವನಾರೀತನ
ಸಂಗಕೆಳಸಿತೆನ್ನ ಮನವು ॥ ೧೦೪

ಸ್ಮರ ಕರಿ ಕರದಂತೆ ರಂಜಿಸುತಿಹ ಬಂ
ಧುರ ವಿಡಿದೂರು ದ್ವಯದ ।
ಗರುವನಾರುಸಿರೀತನ ಕೂಡಬೇಕೆಂಬ
ಪಿರಿದಾಸೆ ಪುಟ್ಟಿದುದೆನಗೆ ॥ ೧೦೫

ಪುಷ್ಪ ಶರನ ಕಾಂತೆ ನಲಿದಾಡುವ ಜಾರು
ಗುಪ್ಪೆಯಂದದಲಿ ರಂಜಿಸುತ ।
ಒಪ್ಪುವ ಪೊರವಾರ ನೀರನ ಕರೆ ಬಿಗಿ
ಯಪ್ಪಿಕೊಂಬನು ಬೆಚ್ಚಂತೆ ॥ ೧೦೬

ಲಾವಣ್ಯ ಲಕ್ಷ್ಮಿ ನಲಿದು ಕ್ರೀಡಿಸುತಿಹ
ತಾವರೆ ಗೊಳದಂದದಲಿ ।
ಠೀವಿಯು ತೋರುವ ಪೊಕ್ಕುಳ ಕುವರನ
ಭಾವವನುಸಿರೆನಗಬಲೆ ॥ ೧೦೭

ನೆರೆ ಮೋಹಿ ವೆಣ್ಗಳ ದಿಟ್ಟಿಗಳ್ ನಟಿಸುವ
ಪಿರಿದು ರಂಗ ಸ್ಥಳದಂತೆ ।
ವರ ವಕ್ಷ ಸ್ಥಳದವನಾರೆಂಬುದ
ನರಿಪೆನಗಂಬುಜ ವದನೆ ॥ ೧೦೮

ನಳಿ ತೋಳು ಸೆಳ್ಳುಗುರ್ಕರ ಭುಜ ದಂಡದ
ತಳ ತಳಿಸುವ ನುಣ್ಗೊರಳ ।
ಚೆಲುವನ ಬಗೆ ಸೋಲಿಸಿತೆನ್ನ ಕರೆತಂ
ದುಳುಹು ಕಾವನ ಕಯ್ಯ ಗಿಣಿಯೆ ॥ ೧೧೧

ಮಿರುಪ ಚಂಪಕದ ನಾಸಿಕದ ಶೃಂಗಾರದ
ಸುರುಚಿರ ವಿಡಿದ ಕರ್ಣಗಳ ।
ಪಿರಿದು ಭೂಷಣ ಕಾಂತಿ ಗೂಡಿದ ಕದಪಿನ
ಗರುವನಾರೆನಗೆ ಪೇಳಾಳಿ ॥ ೧೧೨

ಕೆಂದಾವರೆಯೆಸಳ್ಗಣ್ಣ ಪವಳವಣಿ
ಯಂದದೆ ಮಿರುಪ ಕೆಂದುಟಿಯ ।
ಕುಂದ ರದನ ಪಙ್ಕ್ತಿಯ ಚೆನ್ನಿಗನಾ
ರಿಂದೀವರಾಕ್ಷಿ ಪೇಳೆನಗೆ ॥ ೧೧೩

ಹೊಗರು ಮೊಗಕೆ ಪೆಣ್ಗಳ ದಿಟ್ಟಿ ತಾಕದೊ
ಲ್ತೆಗೆದ ಕತ್ತುರಿ ರೇಖೆಯಂತೆ ।
ಸೊಗಸುವ ಬವರಿಯ ಸವಿಗಾರನಿವನಾರು
ನಗೆ ಬೇಡುಸಿರೆನಗಬಲೆ ॥ ೧೧೪

ಇಟ್ಟ ಕತ್ತುರಿಯ ತಿಲಕ ಮೊಳ ದೋರುತ
ಪುಟ್ಟುತಿಹೆಳ ಮಿಾಸೆಗಳ ।
ಕಟ್ಟಿರಕದ ಚೆಲುವನ ಕಂಡು ಮೈ ಜುಮ್ಮು
ದಟ್ಟಿತು ಕೆಳದಿ ನಿನ್ನಾಣೆ ॥ ೧೧೫

ಪಿರಿದು ನಿಟ್ಟಿಸಿದ ಮಾತ್ರದೊಳನಗತಿ ಮೋಹ
ವೆರಸಿ ಮೈ ಪುಳಕಿತವಾಯ್ತು ।
ಕರೆದು ಮನ್ನಿಸಿ ಕೂಡಿದೊಡೀ ಕುವರನ
ಸುರತದ ಸುಖವಿನ್ನೆಂತೊ ॥ ೧೧೬

ನಾರಿ ನಾನರಿಯದ ಚೆಲುವರು ಭುವನವಿ
ಸ್ತಾರದೊಳಿಲ್ಲ ಸಿನ್ನಾಣೆ ।
ಮಾರ ಮಾನಿಸ ರೂಪ ತಾಳ್ದನ್ನ ಮನವನು
ಸೂರೆಯ ಕೊಂಡನಬ್ಜಾಕ್ಷಿ ॥ ೧೦೬

ಅನವರತದೊಳೀತನ ತೆಕ್ಕೆಯೊಳಿಪ್ಪ
ವನಿತೆಯು ಸುಕೃತದೇಳಿಗೆಯ ।
ಮನವರಿಸುವೊಡಳವಲ್ಲವೆನ್ನಯ ಪುಣ್ಯ
ದನುವಿನ ಬೆಳಸಂತಿಹುದೊ ॥ ೧೦೭

ನೀರನ ಮೊಗದೊಳು ಮೊಗವಿಟ್ಟು ನುಂಡಾಡಿ
ಮಿಾರಿದ ಚೆಂದುಟಿ ರಸವ ।
ಹೀರಿ ಹಿಪ್ಪೆಯು ಮಾಡಿದಲ್ಲದೆನ್ನಯ ಜಿಹ್ವೆ
ಮೇರೆಗೆ ನಿಲದೆಲೆ ಕೆಳದಿ ॥ ೧೦೮

ಮುದದಿಂದ ಗಿಳಿ ತೊಂಡೆ ಹಣ್ಣಿನ ರಸವನು
ಕರ್ದುಕಿರಿದೊಡನೆ ಪೀರ್ವಂತೆ ।
ಚದುರನಧರಸುಧೆಯಿಾಂಟಿ ಚಪ್ಪರಿಪಾ
ವಿಧವೆನಗೆಂದಿಗಾಗುವುದೊ ॥ ೧೦೯

ಅವನ ಲಲ್ಲೆಯ ಮುದ್ದು ನುಡಿಯನಿನ್ನೆಂದಿಗೆ
ಕಿವಿ ಲಾಲಿಸಿ ಕೇಳಿ ನಲಿದು ।
ತವೆ ಹರುಷದ ಸಫಲತೆಯನು ಪಡೆವುದೊ
ಕುವಲಯ ನೇತ್ರೆ ಪೇಳನಗೆ ॥ ೧೧೦

ಆತನ ತನು ವಲ್ಲಿಯೊಳಿಹ ಪರಿಮಳ
ವ್ಯಾತವೆನ್ನಯ ನಾಸಿಕದ ।
ನೂತನದೆಲಗೊಡಗೂಡುವೆ ತೆರನನು
ಪ್ರೀತಿಯೊಳನಗುಸಿರಬಲೆ ॥ ೧೧೧

* ಸಖನ ಮೆಂಚದಲಿ ಕುಳ್ಳಿರಿಸಿ ತಕ್ಕೈಸಿಕೊಂಡು
ಮುಖ ಕೊರಳುರ ತೋಳ್ತೊಡೆಯ ।
ನಖದಗ್ರದಿಂದಿರಿದಿರಿದು ನಿಟ್ಟಿಸಿ ನೋಳ್ಪ
ಸುಖವೆನಗೆಂದಿಗಾಗುವುದೊ ॥ ೧೦೩

ನೆಲೆ ಮೊಲೆದುದಿಯೊಳಗಿರಿದು ಮೆಲ್ಲೆದೆಯನು
ತೊಳಪ ಕಂಕಣದ ಕೈಯಿಂದ ।
ಫಲಿರೆನಿಸುತ ಬಿನ್ನ ನಸು ತಾಡನ ಗೈವ
ಸಲೆ ಸೈಪೆಂತೊದಗುವುದೊ ॥ ೧೦೪

ಮಡಿಸಿದೆಲೆಯ ಗಳಿಗೆಯ ಕೆಂಬಲು ದಿ
ಗಡಸಿ ಬಾಯೊಳು ಬಾಯಿಗೂಡಿ ।
ತುಡುಕುತ್ತ ಸವಿ ಮುತ್ತನಿವಗೀವ ಪುಣ್ಯವ
ಪಡೆವುದೆಂದಿಗೆ ನಾನಬಲೆ ॥ ೧೦೫

ಮರೆಯ ಮಾತೇಕೀ ಕುವರನ ಸವಿ ಕೂಟ
ಕೆರಗಿದ ಮನದ ದೀಪನವ ।
ನೆರೆ ಯಿತನ ಸುರತದೆ ತೃಪ್ತಿವಡಿಸೆಂ
ದೆರಗಿದಳವಳಡಿಗಳಿಗೆ ॥ ೧೦೬

ಎತ್ತಿ ನೆಗಪಿ ಯಾ ಮದನಮೋಹಿನಿಯನು
ಮತ್ತಾಗ ತೊಡೆಯೊಳಿಂಬಿಟ್ಟು ।
ಉತ್ತಮ ನಾಯಕಿ ನೀನಿಂತು ಮದನಗೆ
ಚಿತ್ತವ ಮಾರುಗೊಡುವುದೆ ॥ ೧೦೭

ಪರ ಪುರುಷರ ನಾನಿದುವರೆಗಾದರು
ನೆರೆಯಲಿಲ್ಲದ ಕಾರಣದೆ ।
ದುರುಳ ಮಾರನುವೆನ್ನ ಯೆದೆಗೆ ಸರಳನೂಡಿ
ಪರಿಪಾಟ್ಲ ಮಾಡಿದನಬಲೆ ॥ ೧೦೮

* ಶಕುನಿ.

ನಾರಿ ಕೇಳೀ ಸುಕುಮಾರನ ವೃತ್ತಾಂತ
ಚಾರು ಚೆಲ್ವಿಕೆಯ ಸಂಭ್ರಮವ ।
ಓರಂತೆ ಮನವೊಲಿದುಸಿರುವೆನತಿವಿ
ಸ್ತಾರದೊಳಗೆ ಲಾಲಿಪುದು ॥ ೧೮

ಸ್ಮರನತಿ ಚೆಲುವನೆಂದೆಂಬ ಸಾದೃಶ್ಯವ
ಧರೆಗೆ ವಿಸ್ತರಿಸಿ ತೋರ್ಪಂತೆ ।
ನೆರೆ ಧಾತ ನಿರ್ಮಿಸಿದವನಿವ ನಾಡಾಡಿ
ನರನಲ್ಲ ನಾರಿ ಚಿತ್ತೈಸು ॥ ೧೯

ಅನಿಮಿಷ ಪತಿ ಸುತ ನರ ಲೋಕದ ಭೋಗ
ದನುವನೀಕ್ಷಿಸಬೇಕೆನುತ ।
ಜನಿಸಿದ ನರ ರೂಪಿನೊಳಗೆಂಬೊಲು ತನ್ನ
ಮನಕೆ ತೋರಿದೆ ಮೋಹನಾಂಗಿ ॥ ೨೦

ಉತ್ತರದರಸಿನ ಮಗ ಭೂ ಲೋಕದ
ಮುತ್ತ ಗಾಮಿನಿಯರ ಸೊಬಗ ।
ಒತ್ತಿ ನೋಡುವೊಡೈತಂದನೆಂಬೊಲು ತನ್ನ
ಚಿತ್ತಕೆಳಸಿದೆ ಲಲಿತಾಂಗಿ ॥ ೨೧

ಪರಿಪೂರ್ಣ ಶಶಿ ಕಳಂಕುಗಳ ಕಳೆದು ತನ್ನ
ವರ ಚೆಲ್ವಿಕೆಯ ತೋರಲೆಂದು ।
ಪುರುಷಾವತಾರದೆ ಧರೆಗಿಳಿದೆಸೆದಿಹ
ಪರಿಯೆಂಬೊಲಿದೆ ರೂಪಿನವಗೆ ॥ ೨೨

ಅಲ್ಲದೊಡೀ ರೂಪೀ ಜಾಣ್ಮೆ ಯಿಂ ನಡೆ
ಯುಲ್ಲಾಸವೀ ಕುವರನಲಿ ।
ಪಲ್ಲೈಸಲರಿಯದು ನೀ ಮೋಹಿಸಿದೆ ನಿ
ನ್ನಲ್ಲಿ ತಪ್ಪಿಲ್ಲ ಕೇಳಬಲೆ ॥ ೨೩

ನೋಡದ ಪೆಣ್ಗಳನರಿಯೆ ಹೆಣ್ಗಳ ಕಣ್ಣಿ
ನೀಡಿಗೆ ಗುರಿಯಾದೊಡಿವನ ।
ಕೂಡಾಗ ಮನದನುಭವ ರತಿಯೊಳಗೋ
ಲಾಡದ ನಾರಿಯರುಂಟೆ ॥ ೧೫೫

ಅನಿಮಿಷಾಂಗನೆಯರೀ ಕುವರನ ರೂಪಿಗೆ
ಮನಸೋತೆವೆಯಿಡೆ ಮರೆದು ।
ಘನ ಮೂರ್ಗದಲಿ ರಾಜಿಪರೀ ಮಾನುಷ
ವನಿತೆಯ ಮೋಹವಚ್ಚರಿಯೆ ॥ ೧೫೬

ಉರಗ ನಾರಿಯರೀತನ ಗಾಡಿಗೆ ನೆರೆ
ಮರುಳಾಗಿ ಯನ್ನವ ತೊರೆದು ।
ಮರುತಾಹಾರದೆ ಪಾತಾಳ ಲೋಕದೊ
ಳುರುತರ ತಪ ಗೆಯ್ಯುತಿಹರು ॥ ೧೫೭

ಎಂದವಳಾಡಿದ ಮಾತಿಗೆ ಪೈ ನವಿ
ರ್ದುಂದುವರಿದು ಗುಡಿಗಟ್ಟಿ ।
ಕುಂದದ ಗದ್ಗದದುಬ್ಬುಹಿಂದ ಸಖಿಯೊಡ
ನೆಂದಳು ಮಾರುತ್ತರವ ॥ ೧೫೮

ಏನುಜ್ಜಗದಿಂದಲೀತನ ನೆರೆ ಸಂ
ಥಾನವ ಮಾಡಿ ನನ್ನೆಡೆಗೆ ।
ನೀನೈದಿಸುವೆಯಾ ಬಗೆಯ ಪೇಳನಲಾ
ಮಾನಿನಿ ನುಡಿದಳಿಂತೆಂದು ॥ ೧೫೯

ಆತನ ಮನಸಿನ ಬಗೆಯರಿಯದೆ ನಾರಿ
ಸೋತಳು ನೀ ತಳರೆಂದು ।
ಕಾತರಿಸಿಯೆ ಕರೆದೊಡೆ ಪರಿ ಹಾಸ್ಯದ
ಮಾತಲ್ಲದೆ ಸೊಗಸಲ್ಲ ॥ ೧೬೦

ಅರಸಿಕೊಂಡವನಿದ್ದೆಡೆಗೆ ಪೋಗಿ ನಾರಿ ನಾ
ನೆರೆ ಮೋಹಿಸಿದೆ ನಿನಗೆಂದು ।
ಕರೆದೊಡೆ ಕಾತುರ ಪುಟ್ಟಲರಿಯದಿದು
ಗರುವಿಕೆ ಯುಲ್ಲ ಕೇಳಬಲೆ ॥ ೧೪೧

ಅಂದಮೆರಾವತಿಯೊಳಗರ್ಜುನನಿದ್ದ
ಮಂದಿರಕೂರ್ವಶಿಯೈದಿ ।
ಕಂದರ್ಪನ ಬಾಧೆಗೊಳಗಾದೆ ಕೂಡೆಂದು
ಮುಂದುಗೆಟ್ಟುದ ಕೇಳ್ದರಿಯ ॥ ೧೪೨

ಭಾರತದೊಳಗಂಬೆಯೆಂಬಳು ಗಂಗಾಕು
ಮಾರನಿದ್ದೆಡೆಗೈತಂದು ।
ಮಾರ ಕೇಳಿಗೆ ಕರೆಯಲು ವೊಲ್ಲದಿರಲು ವಿ
ಕಾರಿಯಾದುದ ಕೇಳ್ದರಿಯ ॥ ೧೪೩

ವ್ಯಾಸ ನಂದನನಿರ್ದ ಬಳಿಗೆ ರಂಭಾ ನಾರಿ
ಮೋಸವಡೆದು ನಡೆತಂದು ।
ಪೂಸರನಾಗಮಕವನ ಕರೆದು ಪರಿ
ಹಾಸಕಕೊಳಗಾದಳಿವಳು ॥ ೧೪೪

ಇಂತಳಿ ಜಸಕೊಳಗಾಗಬೇಡಬಲೆ ನಿ
ನ್ನಂತರಂಗವ ಬಲ್ವಿಡಿದು ।
ಚಿಂತೆಯನುಳಿದಿರು ನಾಲ್ಕೆಂಟು ದಿನದೊಳು
ಕಂತು ಸನ್ನಿಭನ ನಾ ತಹೆನು ॥ ೧೪೫

ಎಳಹುಲ್ಲ ಸವಿದು ನೀರ್ಗುಡಿವ ತಾಪಸನನಂ
ದಲರಂಬಿಗೆ ಗುರಿ ಮಾಡಿ ।
ಎಳತಂದರಬಲೆಯರವೆರ ಮಾಯದ ಬಲೆ
ಗೊಳಗಾಗದ ಧೀರರುಂಟೆ ॥ ೧೪೬

ವನದೊಳು ತಪಸಿರ್ದ ವಿಶ್ವಾಮಿತ್ರನ
ಘನ ಮೋಹ ಪಾಶದೆ ಬಿಗಿದು ।
ಮನಸಿಜನಲೆಗೈದಿಸಿದಳೂರ್ವಶಿ ನಮ
ಗನುಗೆಡದಿಹರಾರು ಜಗದೆ ॥ ೧೪೬

ಪರಮ ಋಷೀಶ್ವರ ಪಾರಾಶರ ವ್ರತಿ
ಸ್ಮರನ ಬಾಣಕೆ ಗುರಿಯಾಗಿ ।
ಹರುಗೋಲೊಳಗಂಬಿಗಿತ್ತಿಯ ನೆರೆದನೀ
ನರ ಮನುಷ್ಯರ ಪಾಡೇನು ॥ ೧೪೭

ಅದರಿಂದ ನಮ್ಮಯ ಬಲು ಮೋಹಕೊಳಗಾಗಿ
ಹದಗೆಡದಿಹ ನೀರರಿಲ್ಲ ।
ಮದನಮೋಹಿನಿ ಕೇಳು ನಿನ್ನರಿಕೆಯನಾ
ಮುದದೆ ಸಲಿಸುವೆನಂಜದಿರು ॥ ೧೪೮

ಎಂದಾತ್ಮ ಸಖಿ ಯಾಡಿದ ಸವಿ ನುಡಿಗಾ
ನಂದ ವಡೆದು ಮನದೊಳಗೆ ।
ಕುಂದದೆ ಮದನಮೋಹಿನಿ ನಸು ನಗುತಿಂ
ತೆಂದು ನುಡಿದಳುತ್ತರವ ॥ ೧೪೯

ಎಲೆ ನಾರಿ ನೀನಾತನ ತರುವನ್ನಕ
ಸಲೆ ಸೈರಿಸದೆನ್ನ ಮನಸು ।
ಅಲರಂಬನ ತಾಪವ ಪರಿಹರಿಪೊಂ
ದಳವ ಮಾಡೆಂದುಸಿರಿದಳು ॥ ೧೫೦

ನಾರಿ ಕೇಳಿನಿತು ಕಾಮನ ಖಂಡೆಯದ ಬಲು
ಧಾರೆಗಿತ್ತೊಡಲ ನೀನೀಗ ।
ಧೀರತ್ವವಳಿದು ಮೇರೆಯ ಮೀರಿ ಬಲು ಮೋಹ
ವಾರಿಧಿಯೊಳು ಮುಳುಗುವುದೆ ॥ ೧೫೧

ಕೃತಕವಲ್ಲ್ಲತನ ನೋಡಿದ ಮಾತ್ರದೊ
ಳತನುವಿಗೊಡಲನೊಪ್ಪಿಸಿದೆ ।
ರತಿ ಸುಖವಿತ್ತಗಲೊಡೆ ನಿನ್ನ ಭಾವದ
ಗತಿಯು ಘಾಡಿಕೆ ಯೆಂತಹುದೊ ॥ ೧೫೩

ನೀನರಿಯದ ರತಿ ಶಾಸ್ತ್ರ ಮೋಹನ ಮಂತ್ರ
ವಾನಂದ ಭೂಮಿಯೊಳಿರುವ ।
ಮಾನಿನಿಯರಿಗುಂಟೆ ಮತಿವಂತೆ ಮದನನ
ಬಾಣ ತಲ್ಪದೊಳೊರಗುವರೆ ॥ ೧೫೪

ಮನವೆಳಸಿದ ಮೋಹವ ತೋರದೆ ಕ
ಣ್ಗೊನೆಯೊಳಿಟ್ಟಸುತಿಚ್ಚೆ ಯರಿತು ।
ಇನಿವಾತಿನಿಂದ ಸೋಲಿಸಿ ಕೂಡಿ ಯವನಿಂದ
ಘನ ಸುಖವಡೆಯಬೇಕಬಲೆ ॥ ೧೫೫

ಮೇಲಿಕ್ಕಿದ ಹೆಣ್ಣು ಹಾಗವಡೆಯಳಂ
ಬಾಳಾಪದ ಗಾದೆಯರಿತು ।
ತೂಳಿಸಿ ಮೋಹವ ಕಾಣಿಸುವ್ರದು ಪ್ರೌಢ
ಲೋಲಾಕ್ಷಿಯರ ಮತವಲ್ಲ ॥ ೧೫೬

ಅದರಿಂದ ನಾರಿ ಕೇಳ್ನಿನ್ನಯ ಧೈರ್ಯವ
ಕದಲಿಸದಿರು ಕಾಮ ಶರಕೆ ।
ಎದೆಗೊಡದಿರು ದೇವರ ಕೃಪೆ ಯಿದ್ದೊಡೆ
ಚದುರನೀರಿರುಳಿಗೈತಹನು ॥ ೧೫೭

ಉಲಿದೂರರಿದುಬ್ಬಸವಟ್ಟು ರಚ್ಚೆ ಗೆ
ಸಲೆ ಸಂದಿಹ ಬೆಲೆ ವೆಣ್ಣ ।
ಬಲು ರಸಿಕರು ಭಾವಿಸರಾಕೆಗಳಿ ಜಸ
ನೆಲೆಗೊಂಬುದಲೆ ಚಿತ್ತೈಸು ॥ ೧೫೮

ನಾನಾ ವಿಧದಿನಾ ರಾಜಗೆ ಪ್ರೇಮವ
ದಾನಂದದೆ ಬರುವಂತೆ ।
ಸಾನುರಾಗದೆ ಕರೆತರುವೆನು ನಿನ್ನಾಣೆ
ಯೇನು ಸಂದೆಯ ಬೇಡ ಮನಕೆ ॥ ೧೫೯

ಎಂದೆಂಬಾಳಿಯನಿದಿರೆದ್ದು ಬಿಗಿಯಪ್ಪಿ
ಮುಂದುವರಿವ ತವಕದಲಿ ।
ಕುಂದದೆ ದೈನ್ಯ ವಚನದಿಂದ ಸಖಿಗಿಂ
ತೆಂದಳೀನೆಂಬಿನಚ್ಚರಿಯ ॥ ೧೬೦

ಹಸಗೆಟ್ಟೆನು ಧೃತಿ ಕುಂದಿತು ಕಾವನ
ಮೆಸೆಗೋಲು ನಾಂಟಿದುವೆದೆಯ ।
ಬಿಸಜ ಲೋಚನೆ ನೀನೊಲಿದಂತೆ ಮಾಡೆಂ
ದೊಸೆದೆರಗಿದಳವಳಡಿಗೆ ॥ ೧೬೧

ತಲೆ ವಿಡಿದೆತ್ತಿ ತಕ್ಕೈಸಿ ತನ್ನಯ ತೊಡೆ
ಯೊಳಗೆ ಕುಳ್ಳಿರಿಸಿಕೊಂಡಾಗ ।
ಲಲನೆ ಪೇಳ್ದಿರುಳಿಗವನ ತಾರದಿರೆ ಯಿವು
ವೊಲೆ ಯಲ್ಲ ಮುದಿ ಸೋರೆಗಾಯಿ ॥ ೧೬೨

ಬಿಡು ಮನದಾಂದೋಳವ ಪಂಪಾಂಬೆಯ
ಕಡು ಕೃಪೆಯಾಯಿತು ನಿನಗ ।
ನಡೆ ಮಜ್ಜನ ಭೋಜನಕೆ ಶೃಂಗಾರದ
ತೊಡವುಗಳಿಡು ನೀ ಬೇಗ ॥ ೧೬೩

ಎಂದಾಕೆಯ ಸಂತೈಸಿ ಯವಳುಗೂಡಿ
ಮಿಂದುಟ್ಟು ಮಡಿ ವರ್ಗವನು ।
ಚಂದದೆ ಬಳಿಕಿರುತಿರೆ ದಿನನಾಯಕ
ನಂದು ಸಾರಿದನಸ್ತ ಗಿರಿಯ ॥ ೧೬೪

ಮುಂದೇಹ ದನುಜರೊಡನೆ ಕಾದಲು ರಕ್ತ
ಬಿಂದು ವೈ ಸೋಂಕಿ ಕೆಂಪಾಗೆ ।
ಮುಂದದ ತೊಳವೊಲು ಪಶ್ಚಿಮಾಂಬುಧಿಗಿನ
ನಂದಿಳಿದನು ತೀವ್ರದಿಂದ ॥ ೧೬೫

ಪಶ್ಚಿಮಾಂಗನೆ ರತ್ನದಾಭರಣವ ತೊ
ಟ್ಟಚ್ಚರಿಯೊಳಗೆಸೆವಂತೆ ।
ಹೆಚ್ಚಿತು ಪಡುಗೆಂಪು ಸಂಜೆದಾರಕೆ ಮೂಡಿ
ಯುಚ್ಚಹವನು ಬೀರಿದುವು ॥ ೧೬೬

ಮೊಳಗಿದುವೆಲ್ಲಲ್ಲಿ ದೇಗುಲ ವರೆಗಳು
ನಿಳ ನಿಳಯದೊಳಾ ಕ್ಷಣದೆ ।
ಬೆಳಗಿದುವಖಿಳ ದೀಪಾಳಿ ಕಗ್ಗತ್ತಲೆ
ನಳಿನ ಭವಾಂಡಕಡರಿತು ॥ ೧೬೭

ಕುವಲಯ ಹಿತ ಕಾರಿ ಜಾರ ಚಕೋರರ ವೈರಿ
ತವೆ ಸುಧಾಕರನಂಬುಜಾರಿ ।
ಭುವನ ಪ್ರಕಾಶ ಕೌಮುದಿ ನಿಧಿಗಳ ಕೋಶ
ಶಿವ ಶಿರೋಭೂಷಣನೆಸೆದ ॥ ೧೬೮

ತೊಳಗುವ ಪ್ರಾಚೀ ನಿತಂಬಿನಿ ಪಣೆಯೊಳ
ಗೊಲಿದಿಟ್ಟ ಚಂದ್ರದ ಬಟ್ಟು ।
ಸಲೆ ಪದ್ಮಿನಿಯ ಕಣ್ಗಟ್ಟನೆ ಶಶಿ ಮೂಡಿ
ಒಳದನಾಗಸದೊಳೀ ವೇಳ್ವ ॥ ೧೬೯

ಒಸರಿತು ಶಶಿ ಕಾಂತ ಚಕ್ರವಾಕಗಳಿಗು
ಳ್ಬಸವಾದುದು ಚಕೋರಿಗಳು ।
ಬಿಸುಟುವಂತ್ರ ಶ್ರಮವನು ಸುಧಾ ಸೂತಿಯ
ಜಸದೇಳಿಗೆಯೊಳೀ ವೇಳ್ವ ॥ ೧೭೦

ಇಂತೊಪ್ಪುತಿರೆ ಶಶಿ ಮದನಮೋಹಿನಿಗಾಗ
ಚಿಂತೆ ಮೊಳತು ಬಲು ತವಕ ।
ಮುಂತೆಲೆ ದೋಲೆ ಕಾತುರ ಪರ್ಬಿ ವಿರಹಾಗ್ನಿ
ಸಂತತ ಫಲ ದೋರಿದುದು ॥ ೧೩೧

ನಿಡು ಸುಯ್ಲು ಧಾಳಿಯ ಜಳಕೆ ಚೆಂದುಟಿ ರಸ
ವೊಡನೆ ಬರೆತುದು ಕರ್ಪುರದ ।
ಬಿಡು ವೀಳೆಯ ದಂಬುಲ ವಿರಹಾಗ್ನಿಗೆ
ಪುಡಿ ವಟ್ಟುದೇನ ಬಣ್ಣಿಸುವೆ ॥ ೧೩೨

ಲಲನೆಯರುಪಚಾರದ ನುಡಿ ಕಿವಿಯೊಳು
ಬಲಿದ ಬಲ್ಲಿಹ ವಾಯಿತಾಗ ।
ತಲೆಗೆಲದೊಳು ಕೈಯಿತ್ತವಳ ೌಕ್ಕನವ
ತಳೆದಿರ್ದಳೀನ ಬಣ್ಣಿಸುವೆ ॥ ೧೩೩

ಧರೆಯೊಳು ನಟ್ಟ ದಿಟ್ಟಿಯಲರಿತಧರದೆ
ಪೊರಳುವೆ ತುದಿ ನಾಲಗೆಯ ।
ಬೆರಳಲುಕದೊಳಾಂದೋಳಿಪ ಮಸ್ತಕ
ದರಳು ಗಣ್ಣ ಒಲೆಯೊಪ್ಪಿದಳು ॥ ೧೩೪

ಇಂತೊಪ್ಪುತಿಹ ಮಾನಿನಿಗೆ ನಿದ್ರಾದೂತಿ
ಕಂತು ಸನ್ನಿಭನ ತಂದಾಗ ।
ಸಂತಸದೊಳು ಕಾಣಿಸುತ [ಮಾನಸದೊಳ]
ತ್ಯಂತ ಸೌಖ್ಯವ ಬೀರಿದಳು ॥ ೧೩೫

ಕಂಡು ಕನಸಿನೊಳು ರೂಪ ಜಯಂತನ
ಪುಂಡರೀಕಾಕ್ಷಿ ಪುಳಕದೆ ।
ಚಂಡಿಸಿ ಮೇಲ್ವಾಯ್ದವನೆಂದೇ ತಬ್ಬಿ
ಕೊಂಡಳು ಬಯಲನೇನೆಂಬೆ ॥ ೧೩೬

ಪೊಸ ಪರಿಮಳ ವಿಡಿದಿಹ ಕರ್ಪೂರದ ಸವಿ
ರಸದಂಬುಲದ ಕುಟುಕಿತ್ತು ।
ನೊಸಲೆಡೆಯನು ಚುಂಬಿಸಿ ತಕ್ಕಿಸುತ ಪರ
ವೆಶೆ ಯಾದಳ್‌ನ ಬಣ್ಣಿಸುವೆ ॥ ೧೫೬

ಬಟ್ಟ ವೊಲೆಗಳ ತುದಿಯೊಳಿರಿದುರೆ ನಸು
ದಿಟ್ಟಿಯಿಂದೀಕ್ಷಿಸುತಾಗ ।
ಕಟ್ಟಿರಕದೊಳಾತನ ಚರಣಕೆ ಪೊಡ
ಮಟ್ಟು ಕೂಡೆಂಬಳಂದೊಲಿದು ॥ ೧೫೯

ಮುನಿಸೆನ್ನೊಳ್‌ಕೆಲೆ ರೂಪ ಜಯಂತ ನಿ
ನ್ನಿನಿಯಳೊಡನೆ ನೀನಿಂದು ।
ಮನಸಿಜ ಕೇಳಿಯನೆಸಗದಿದ್ದರೆ ಜೀವ
ತನುವಿನೊಳಿರದು ನಿನ್ನಾಣೆ ॥ ೧೬೯

ಪ್ರಾಣ ನಾಯಕ ನಿನ್ನ ಸವಿ ನುಡಿ ಯಲ್ಲದೆ
ವೀಣಾದಿ ಗಾನ ರವಗಳು ।
ಸಾಣೆ ವಿಡಿದ ಶಲ್ಲಯದಂತೆ ಕಿವಿಯೊಳು
ಹೂಣೆ ಹೊಕ್ಕುವು ನಿನ್ನಾಣೆ ॥ ೧೮೦

ಚೆನ್ನಿಗ ನಿನ್ನಂಗವ ನೋಳ್ಪವೆಂದಕ್ಷಿ
ಯಿನ್ನೊಂದ ನಿಟ್ಟಿಸೆವೆಂದು ।
ಮುನ್ನವೆ ಮುಗಿದಿವೆ ಚೆಲುವಿಕೆಯನು ತೋರು
ತೆನ್ನ ನೇತ್ರಕೆ ಸುಖವೀಯೊ ॥ ೧೮೧

ನಾಸಿಕೇಂದ್ರಿಯ ನಿನ್ನ ತನು ಗಂಧಕೆಳಸಿ ಮೇ
ಲ್ಸಾಸಿದ ಪುಣಗು ಕಸ್ತುರಿಯ ।
ವಾಸನೆ ವಿಡಿಯದು ನೀನಗಲದೆ ಸಂ
ತೋಷವ ನೆರೆ ಹುಟ್ಟಿಸಿದಕೆ ॥ ೧೮೨

ರಸನೇಂದ್ರಿಯ ನಿನ್ನ ಧರ ಸುಧೆಯ ಸವಿ
ಯೆಸಕಕೆಳಸಿ ಯುರಿ ತಾನು ।
ಹಸ ಗೆಡುತಿದೆ ನೀನಿದರಭೀಷ್ಟವನಿ
ತ್ತೊಸಗೆಯ ಮಾಡೆನ್ನ ಮನಕೆ ॥ ೧೪೩

ಬಳಿಕೆನ್ನ ನಳಿ ತೋಳು ನಿನ್ನ ದಿವ್ಯಾಂಗವ
ಸೆಳದಪ್ಪಿಕೊಳಬೇಕೆನುತ ।
ಬಲು ತವಕದೊಳಿವೆ ಸವಿಗೂಟಕೆಳಸು ನೀ
ನಲರಂಬನ ಸಮ ರೂಪ ॥ ೧೪೪

ನೆಲೆ ಮೊಲೆಗಳ ಮೇಲೆ ಕೈಯಿಟ್ಟು ತನುವನಂ
ಡಲೆವ ತಾಪಾಗ್ನಿಯ ಝಳವ ।
ಪುಳಕಾಂಬುವಿನಿಂದ ತಂಪಿಸು ನಿನ್ನಯ
ನಳಿನಾಕ್ಷಿ ಯಲ್ಲವೆ ನಾನು ॥ ೧೪೫

ಮುಲ್ಲಿಗೆಯರಳುವಾಸಿನ ಮಂಚಕೆ ಕರ
ಪಲ್ಲವವನು ಪಿಡಿದೆಳದು ।
ನಿಲ್ಲದೆ ಕೆಡಹಿಕೊಂಡೊಡನೆ ಮೋಹಿಸುತೆನ್ನ
ಮೆಲ್ಲೆದೆಯೊಳು ನಾಟ್ಯವಾಡೊ ॥ ೧೪೬

ಮುಂಗುರುಳನು ಪಿಡಿದೊಯ್ದೆನ್ನ ನವ ರತ್ನ
ಪೊಂಗಿದ ಮಣಿ ಮಂಚದಲಿ ।
ಅಂಗಜ ಕೇಳಿಯನಿತ್ತೆನ್ನನುಳುಹೊ ನಿ
ನ್ನಂಗನೆ ಯಲ್ಲವೆ ನಾನು ॥ ೧೪೭

ಥಳಥಳಿಸುವ ಚಂದ್ರಗಾವಿಯ ಮೇಲ್ಕಟ್ಟಿ
ನೊಳುವರ್ಣದ ತುಂಬುದೆರೆಯ ।
ಕಳಹಂಸೆದುಪ್ಪಳು ವಾಸಿನ ಮಂಚದೆ
ಸೆಳದಪ್ಪೊ ಮೋಹನ ರೂಪ ॥ ೧೪೮

ಬೊಂಬೆಯ ಮೆಲ್ಲುರಾಡದ ಸೆಳ ಮುಂಚಕ್ಕೆ
ನಂಬಿಸುತೆನ್ನ ನೀನೊಯ್ದು ।
ಬಿಂಬಾಧರದ ಸವಿಯ ತೋರಿ ನೆರೆ ರಸ
ದಂಬುಲ ಗುಟುಕಿತ್ತು ಕೂಡೊ ॥ ೧೪೯

ಅಂತರಾಂತರದ ಸೋಪಾನವೆಸೆವ ಚಂದ್ರ
ಕಾಂತದ ನೆಲೆ ವಾಡದೊಳಗೆ ।
ಸಂತೋಷದೊಳು ಮೋಹಿಸುತೆನ್ನನೊಡಗೂಡೊ
ಕಂತು ಸನ್ನಿಭ ಮೋಹನಾಂಗ ॥ ೧೫೦

ಸಾಲ ಮುತ್ತಿನ ಕುಚ್ಚಿನ ಪೊಸ ರತ್ನದ
ಮೇಲುಪ್ಪರಿಗೆಗೆನ್ನನೊಯ್ದು ।
ಕಾಲೋಚಿತದ ಕಲೆಗಳಿಂದ ಸೋಲಿಸಿ
ಲಾಲಿಸುತೆನ್ನನೀ ಕೂಡೊ ॥ ೧೫೧

ಈಡಾಡುಟ್ಟನಿರಿಯ ತುರುಬಿಗೆ ಕೈಯ
ನೀಡಿ ಮೊಗದೆ ಮೊಗವಿಟ್ಟು ।
ಕೂಡೆ ಕದಪ್ರ ತುಟಿ ನಿಟಿಲವೆ ಚುಂಬಿಸಿ
ಮೂಡು ಮೋಹದ ಸವಿಗಲೆಯ ॥ ೧೫೨

ಕೇತಕಿಯೆಸಳ ಜರೆವ ಚೆಳ್ಳುಗುರಿಂದ
ಶಾತಕುಂಭದ ಬೊಗರಿಗಳ ।
ರೀತಿಯ ಬಲ್ಲೊಲೆಗಳ ಮೇಲೆ ನಿನ್ನಯ
ನೂತನ ನಖ ರೇಖೆ ದೋರೊ ॥ ೧೫೩

ಕಾಲು ಗಳಿಗೆ ರತಿ ಸುಖವನಿತ್ತೊಡೆ ಕಂಠ
ಮಾಲೆ ಚೌಕುಳಿ ಹೊನ್ನ ಸರವೆ ।
ಲೀಲೆಯೊಳೂಲಿದೀವೆ ಕೂಡೆನುತಾಗ ಬೆಂ
ಬೇಳುತಿಪ್ಪಳು ಕನಸಿನಲಿ ॥ ೧೫೪

ನಗುವಳು ಮೇಲಿಕ್ಕುವಳು ಮೈ ಮುರಿದೊಡೆ
ಮುಗಿದಕ್ಷಿಯಿಂದ ನೋಡುವಳು ।
ಮಿಗೆ ಕಾತುರದೆ ಹಂಬಲಿಪಳು ಕಂಬನಿ
ಯೊಗುವಳೀನೆಂಬೆನಚ್ಚರಿಯ ॥ ೧೯೫

ನಿಟ್ಟಿಸುವಳು ಚುಂಬಿಸುವಳು ಮೈ ಜುಮ್ಮು
ದಟ್ಟಿಸೆ ರೋಮಾಂಚನವೆಸಗಿ ।
ಉಟ್ಟುದು ಸರಿದು ಮದನ ಜಲ ನೆರೆ ಪೊರ
ಮಟ್ಟುದು ನಾಣೆಡೆಯಿಂದ ॥ ೧೯೬

ಪುಳಕಾಂಬುವಿನಿಂದ ತನು ಲತೆ ತಣ್ಣ ಸ
ದಳಯೆ ನಿದ್ರಾಂಗನೆ ಸರಿಯೆ ।
ಬಳಿಕ ಕಣ್ಗಳ ತೆರೆದವನ ಕಾಣದೆ ನೆರೆ
ಯಳವಳಿದಳು ಚಿಂತೆಯಿಂದ ॥ ೧೯೭

ಕನಸೆಂದರಿಯದೆ ಮೋಹದೇಳಿಗೆಯಿಂದ
ಮನ ಮರವೆಯೊಳ್ಕತಂದು ।
ವನದೆಡೆಯುಪ್ಪರಿಗೆಯ ತುದಿ ಚೌಕಿಯ
ಮನೆ ಮನೆಯೊಳಗರಸಿದಳು ॥ ೧೯೮

ಮಂಚದಡಿಯ ಮಾಳಿಗೆಯ ಮುಗಿಲ ಮೇಲೆ
ಮಿಂಚುವ ಸೆಜ್ಜೆಯಗ್ರದಲಿ ।
ಪಂಚ ಬಾಣನ ಚೆಲ್ವ ಪಳಿವ ಜಯಂತನ
ನಂಚೆ ಗಮನೆ ಯರಸಿದಳು ॥ ೧೯೯

ಮೆಲ್ಲಿಗೆ ವೊದರ ಬೆದಕಿ ನೋಡಿ ನವ ಚೂತ
ಪಲ್ಲವದೆಡೆಗೈತಂದು ।
ಸಲ್ಲಲಿತದ ರಾಜ ಕೀರನ ನುಡಿ ಗೇಳಿ
ವೆಲ್ಲಭ ಬಾರೆಂದಳವಳು ॥ ೨೦೦

ಪರಪುಟ್ಟಗಳಿರ ನನ್ನಿ ನಿಯನ ಕರೆತಂದು
ಭರದೊಳೆನಗೆ ತೋರಿಸಲು ।
ಪಿರಿದು ಮೊಂದಳಿರ ಗುಟುಕನಿತ್ತು ಮನಕತಿ
ಹರುಷವ ಮಾಡುವೆ ನಿಮಗೆ ॥ ೦೦೧

ಅಳಿ ಗಿಳಿಗಳಿರ ನನ್ನಯ ಪ್ರಾಣ ವಲ್ಲಭ
ನೆಲಸಿಹ ಬಳಿಯ ತೋರಿದರೆ ।
ನಳಿನ ಪರಾಗದ ಪಣ್ಗಳ ಗುಟುಕಿತ್ತು
ಬಲು ಸಂತಸವೀವೆ ನಿಮಗೆ ॥ ೦೦೨

ಮೆಲಯ ಮಾರುತನೆ ನನ್ನಯ ಪ್ರಿಯನಿರುತಿಹ
ಸ್ಥಳವ ನೀನೊಲಿದು ತೋರಿಸಲು ।
ನಲಿ ಮೊಲೆಗಳ ಮಧ್ಯದ ಚಂದನದಂಪ
ತಳುವದಿತ್ತೊಸಗೆಯ ಮೊಳ್ಪ ॥ ೦೦೩

ಅರಸಂಚೆಗಳಿರ ನೀವೈದಿ ನನ್ನಯ ಮೋಹ
ದೆರೆಯನ ಕರೆದು ಕಾಣಿಸಲು ।
ಸರಸಿಜದಲರಿನಿಂವೆಂಡಿತ್ತು ನಿಮಗತಿ
ಹರುಷವ ಪುಟ್ಟಿಸಿ ಕೊಡುವೆ ॥ ೦೦೪

ಎಂದಿಂತು ವಿರಹದೆ ಪಲುಬುವೆಳಳುವಳು
ಮುಂದು ಗೆಡುವಳು ಚಿಂತಿಪಳು ।
ಇಂದು ಮಂಡಲವ ಕಾಣದ ಚಕೋರಿವೊಲತಿ
ದಂದುಗಕೊಳಗಾದಳಾಗ ॥ ೦೦೫

ಕನಸಿನ ಕಣ್ಬೀಟವೊ ಎನ್ನ ಮನದನ್ನ
ವಿನಯದಿಂದೈತಂದು ಕೂಡಿ ।
ಚಿನುಮಯ ರೂಪಾದನೊ ಕಾಣೆನೆಂದವ
ಳನುಗೆಟ್ಟಳೀನ ಬಣ್ಣಿಸುವೆ ॥ ೦೦೬

ಈ ಪರಿಯೊಳಗಾಗ ಮದನಮೋಹಿನಿ ಪುಷ್ಪ
ಚಾಪನ ಶರಕೊಳಗಾಗಿ ।
ರೂಪಿಸಿ ಪೊರಳುತಿರಲು ಮುಂಗೋಳಿಗ
ಳಾ ಪುರದೊಳಗೆ ಕೂಗಿದುವು ॥ ೦೦೩

ಹರೆದುವು ತಾರೆಗಳ್ನೆರೆದುವು ಕೋಕಗ
ಳರಳಿದುವೆಂಬುಜಾಳಿಗಳು ।
ಅರಿಯುವೆನ್ನೆತಂದುದಯಾದ್ರಿಯ ಪಾ
ಸರೆಗಲ್ಲ ನೋಲೆ ಮಂಡಿಸಿದ ॥ ೦೦೪

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೋಳಿಗೆಯ ಸಂಧಿ
ಮುದದ ಸುಧರ್ಮಾನು ಬಂಧಿ ॥ ೦೦೫

ಗಿನೆಯ ಸಂಧಿ ಸಮಾಪ್ತಂ

ಹತ್ತನೆಯ ಸಂಧಿ

ವ.ದನ ಮೋಹಿನೀ ವಿಲಾಸ.

ಸೂಚನೆ ॥ ಮದನ ಮೋಹಿನಿ ಚೆಲ್ವರೂಪ ಜಯಂತನೊ
ಳ್ಮದನ ಕೇಳಿಯೊಳೊಪ್ಪಿದಳು ॥

ಆ ಸಮಯದೆ ಚಿತ್ರರೇಖೆ ಯ್ತಂದು ವಿ
ಲಾಸವಳಿದು ಮನಗುಂದಿ ।
ಪೂಸರನಲೆಗೊಳಗಾದ ತನ್ನೊಡತಿಯ
ನಾಸರ ಕಂಡು ನುಡಿದಳು ॥ ೧

ಇನಿತು ಕಾಮೋದ್ರೇಕದ ಚಿಂತೆಗೊಳಗಾಗಿ
ಮನಗುಂದುವರೆ ಬಲ್ಲವರು ।
ವನಿತೆ ನಿನ್ನಯ ಪ್ರಾಣ ಕಾಂತನಿಂದಿರುಳಿಗೆ
ಘನ ಹರುಷದೊಳ್ಮತಹನು ॥ ೨

ನನಗೊರ್ವದೇವತೆಯೊಲವುಂಟಾಕೆಯ
ಮನವೊಲಿದರ್ಚಿಸಿ ಬಳಿಕ ।
ವನಿತೆ ಕೇಳನಗೆ ಮೋಹವ ಪುಟ್ಟಿಸಿ ತಂದು
ವಿನಮಿತನನು ಮಾಳ್ಪ ನಿನಗೆ ॥ ೩

ತುಪ್ಪ ಸಕ್ಕರೆ ಪಾಲ ಸವಿವ ಮನುಜರ ತಂ
ದೊಪ್ಪಿಸುವುದು ದೊಡ್ಡಿತಲ್ಲ ।
ಲೆಪ್ಪದ ಪುತ್ತಳಿಗಳ ತಂದು ಕೂಡಿಸೆ
ದರ್ಪವುಂಟರಸಿ ನಿನ್ನಾಣೆ ॥ ೪

ಎಂದೆಂದು ರತಿ ಸುಖವೆರಿಯದೆ ವನದೊಳು
ಕಂದ ಮೂಲಗಳನೆ ಸವಿದು ।
ನಿಂದು ಪಂಚಾಗ್ನಿ ಮಧ್ಯದೆ ತಪ ಗೆಯ್ವರ
ತಂದು ನಿನ್ನ ಡಿಗೆರಗಿಸುವೆ ॥ ೫

ಎಲೆ ನಾರಿ ಧೃತಿಗುಂದ ಬೇಡ ನಿನ್ನಿನಿಯನ
ನಳಿ ತೋಳ ತೆಕ್ಕೆಯೊಳಾನು ।
ನೆಲೆ ಗೊಳಿಸುವೆನೆಂಜ ಬೇಡೆಂದಾಕೆಗೆ
ಬಲು ಭಾಷೆಯನಿತ್ತಳವಳು ॥ ೬

ಎಂದಾಕೆಯೆ ಸಂತೈಸಿ ನಗುತಲಾಗ
ನಂದನ ವನಕ್ಕೈತಂದು ।
ಇಂದು ಶೇಖರನರ್ಧಾಂಗಿಯ ಭಜಿಸಿಯಾ
ನಂದದೆ ವರವ ಪಡೆದಳು ॥ ೭

ಒಡನೆ ಪಂಪಾ ದೇವಿ ವೆರವಿತ್ತ ಬಗೆಯ ತ
ನ್ನೊಡತಿಗೆ ಹರುಷದೆ ಪೇಳಿ ।
ಮಡದಿಯೊಪ್ಪಿರೆ ದಿನ ನಾಯಕನಾ ಕ್ಷಣ
ಪಡುಗಡಲೆಡೆಯ ಸಾರಿದನು ॥ ೮

ಆ ಸಮಯದೆ ದೇವಿ ಯುವಗೆ ಮೋಹದ ರತಿ
ಯಾಸೆಯ ಪುಟ್ಟಿಸಲಾಗ ।
ಸೂಸುತ ರೂಪ ಜಯಂತ ಬಲ್ಲ ಗೆಯ ವಿ
ಲಾಸದೆ ಸಖರೊಳಿಂತೆಂದ ॥ ೯

ಈ ಪುರದೊಳಗಿಹ ಗಣಿಕೆಯರೊಳು ದಿವ್ಯ
ರೂಪಿನೊಳತಿಶಯವಾಗಿ ।
ತಾ ಪಿರಿದೆನಿಸಿ ವಿದ್ಯಾ ವಿಶಾರದೆ ಯಹ
ಚಾಪಲ ನಯನೆ ಯಾರೆಂದ ॥ ೧೦

ಕೇಳಲಿ ರೂಪ ಜಯಂತ ನಿನ್ನಯ ವೋಹ
ದೇಳಿಗೆಗುರಿ ಸವಿಗೊಡುವ ।
ಬಾಲಕಿ ಯೊರ್ವಳು ಮೆದನವೋಹಿನಿ ಯೆಂಬ
ನೀಲ ಕುಂತಳ ಯೊಪ್ಪುತಿಹಳು ॥ ೧೧

ರತಿ ದೇವಿ ದೇಹವಳಿದವನರಸಿ ಭಾ
ರತಿಯುಗುಳ್ನೀರುಬೊಮ್ಮನಿಗೆ ।
ನುತಿಸಲೂರ್ವಶಿ ರಂಭೆ ಗಿಂಭೆ ಯಿವಳ ರೂಪಿ
ನತಿಶಯುಕೆಣೆ ಯಿಲ್ಲವರಸ ॥ ೧೦

ಧರೆಯ ನಾರಿಯರ ಚೆಲ್ವಿಕೆಯ ತೆಗೆದು ನೆರೆ
ಸರಸಿಜ ಭವೆ ನಿರ್ಮಿಸಿದ ।
ತರಳಾಕ್ಷಿ ವೋಹಿನಿ ಯಿಾ ಬೆಲೆ ವೆಣ್ಣಿನ
ಚರಣದುಂಗುಟಕೆಣೆ ಯಹಳ ॥ ೧೩

ನಿಟ್ಟಿಸಿ ನೋಡಿದ ಪುರುಷಗೆ ವೈ ಜುಮ್ಮು
ದಟ್ಟ ರೋಮಾಂಚನವೆಸಗಿ ।
ಕಟ್ಟಿರಕದೆ ವೋಹ ರಸ ವುಬ್ಬಿ ನೆರೆ ಪೊರೆ
ಮಟ್ಟು ಸೂಸುವುದಂಗದಿಂದ ॥ ೧೪

ಕಂಡು ಬಲ್ಲೆವು ಕಾವನರಸಿಗೆ ಸರಿ ಬಪ್ಪ
ಪುಂಡರೀಕಾಕ್ಷಿಯರುಗಳ ।
ಮಂಡಲದೊಳಗೀ ನೀರೆಯಂದದ ಜಾಣ
ವೆಂಡಿರ ಕಾಣೆ ನಿನ್ನಾಣೆ ॥ ೧೫

ಮನವೆಳಸಿದೊಡೇಳು ನೋಳ್ಪವಾ ಹೆಣ್ಣಿನ
ತನು ಚೆಲುವಿಕೆಯು ಜಾಣ್ಮುಡಿಯು ।
ವಿನಯ ವಿದ್ಯಾ ವಿನೋದವನೆಂದು ನೂತನ
ಮನಸಿಜಗುಸಿರಿದರಾಗ ॥ ೧೬

ಎಂದು ನುಡಿದ ನಿಜ ಸಖರ ಮಾತಿಗೆ ಮನ
ಬಂದಾಗ ಮಜ್ಜನ ಗೈದು ।
ಕುಂದದೆ ರೂಪ ಜಯಂತ ಸಿಂಗರವಾ
ದಂದವನೇನ ಬಣ್ಣಿಸುವೆ ॥ ೧೩

ಮೃಗ ಮಿಗಿಸುವ ಪ್ರೊಸ ಮಲ್ಲಿಗೆ ಯರಳಿನ
ಸೊಗಸು ವೆತ್ತೆಸೆವ ಪೂ ಸರವ ।
ಮಿಗೆ ಶಿಖಿಗಮರಿಸಿ ದೂವೆಚ ರುಮ್ಮಾಲ
ಬಿಗಿದಳವಡಿಸಿದನಾಗ ॥ ೧೪

ಪೂಸಿದ ಪುಣಗು ಕಸ್ತೂರಿ ಕುಂಕುಮೆ ಗಂಧ
ವಾಸನೆ ದೆಸೆ ಕಂಪಿಡಲು ।
ಆ ಸು ಕುಮಾರ ಸಿಂಗರ ಗೈದು ನಡೆದ ವಿ
ಲಾಸವನೇನ ಬಣ್ಣಿಸುವೆ ॥ ೧೫

ಇಟ್ಟ ಕಸ್ತೂರಿಯ ತಿಲಕ ಕರ್ಣದೊಳಿಳ
ವೆಟ್ಟ ಚೌಕುಳಿ ಕೊರಳೊಳಗೆ ।
ಕಟ್ಟಾಣಿ ಮುತ್ತಿನ ಕಂಠ ಮಾಲೆಯನಾಂತು
ದಿಟ್ಟಗಚ್ಚರಿ ಯೆನೆ ನಡೆದ ॥ ೧೦

ಬಡನುಟ್ಟ ಪಟ್ಟೆಯ ಚಲ್ಲಣ ಮೋಹನ
ವಡೆದ ಪದಕ ಪೈಠಣಿಯ ।
ಕಡು ಸೊಬಗಿನ ಬಲ್ವೀಟದ ಸು ಕುಮಾರ
ನಡೆದನು ಸಖರ ಮೇಳದಲಿ ॥ ೧೧

ಅಂಗಡಿ ಗೇರಿ ಯಾನೆಯ ಶಾಲೆ ತುರಗದ
ಜಂಗುಳಿಗಳ ಲಾಯ ಜನರ ।
ಸಿಂಗರ ಗೇರಿಯ ನೋಡುತ ನೆರೆ ಗಣಿ
ಕಾಂಗನಾ ವೀಥಿಗೈತಂದ ॥ ೧೨

ಹೂವಿನ ಹೊತ್ತಿನೊಳ್ತಲೆ ವಾಗಿಲೊಳಿಹ
ಭಾವಕಿಯರ ನಿಟ್ಟಿಸುತ ।
ಕಾವ ಸನ್ನಿಭನಾ ಮದನಮೋಹಿನಿ ಯಿಹ
ಠೀವಿಯ ಗೃಹಕ್ಕೈತಂದ ॥ ೦೫

ಕಂಡರು ಬಾಗಿಲ ಕೆಳದಿಯರ್ಕುಸುಮೆ ಕೋ
ದಂಡನಂತಿರುವ ಕುವರನ ।
ಪುಂಡರೀಕಾಕ್ಷಿಯ ಚರಣಾರವಿಂದಕ್ಕೆ
ಮುಂಡಿಸಿ ನುಡಿದರಿಂತೆಂದು ॥ ೦೪

ಎಲೆ ಮೋಹನಾಂಗಿ ನೀನುಪ್ಪರಿಗೆಯನೇರಿ
ನಲವಿಂದ ನಿಟ್ಟಿಸಿ ಕಂಡ ।
ಚೆಲುವೆರೆಯ ನಮ್ಮೆಯ ತಲೆವಾಗಿಲೊಳ್
ನೆಲಸಿಹನೆಂದುಸಿರಿದರು ॥ ೦೫

ಎನಲಾ ಮಾತಿಗೆ ಮೈ ನವಿರ್ಗುಡಿಗಟ್ಟೆ
ವನಿತೆ ಬೇಗದೊಳ್ಳತಂದು ।
ಘನ ಮೋಹನ ನವ ರೂಪ ಜಯಂತನ
ಮೆನದುತ್ಸವದೆ ಕಂಡಳಾಗ ॥ ೦೬

ಕಾಣುತವನ ಕರ ವಿಡಿದಾಗ ಸೆಳದಪ್ಪಿ
ಯೇಣ ನಯನೆ ನಸು ನಗುತ ।
ಮಾಣದೆ ನಲಿದು ನಿಟ್ಟಿಸುತಂದು ಸಂತಸ
ಶ್ರೇಣಿಯೊಳ್ಮೂಲಾಡಿದಳು ॥ ೦೭

ಸರಿಬಂದವನ ಕಂಡೊಡೆ ಕೌಮುದಿಗಾಗ
ಕರಗುವ ಶಶಿ ಕಾಂತದಂತೆ ।
ನೆರೆ ಯಂತರಂಗ ವಿಡಿದು ಕೂಡಿದಲ್ಲದೆ
ಪಿರಿದು ಸೈರಿಸರೇ ವೇಳ್ಕ್ಯ ॥ ೦೮

ಬಿಡದಾತನ ಬಿಗಿದಪ್ಪಿದ ಮೊತ್ರಕೆ
ಸಡಿಲಿತು ನಿರಿಗೂಡಿ ಕಾಂಚಿ ।
ಕಡು ತವಕದೊಳಿರ್ವರೊಂದು ವಸನ ಗೂಡಿ
ನಡೆದರು ಶಯ್ಯಾ ಗೃಹಕೆ ॥ ೮

ಸೆಳೆ ಮಂಚದಂಚೆ ದುಪ್ಪುಳು ವಾಸಿನ ಮೇಲೆ
ನಳನಾಷ್ಟಿ ಯವನ ಕುಳ್ಳಿರಿಸಿ ।
ತೆಳು ಗದಪಮಳಾಧರವ ಚುಂಬಿಸಿ ಸುಖ
ದಳದಳೀನೆಂಬೆನಚ್ಚರಿಯ ॥ ೯

ನೋಡುವಳುರೆ ಕಾತರಿಸಳು ಮೈ ಸೋಂಕಿ
ಮೂಡಿ ಮುಳುಕಿ ಮೋಹ ರಸದೆ ।
ಕೂಡಾಗ ಬಿಗಿಯಪ್ಪಿ ಮೊಗ ಮೊಗ ವೆರಸಿ ಮುಂ
ಡಾಡಿದಳೀನ ಬಣ್ಣಿಸುವೆ ॥ ೧೦

ಈಸು ದಿವಸ ಪರಿಯಂತ ಮೈ ಗರೆದೆಲ್ಲಿ
ವಾಸವಾಗಿರ್ದೆ ಚೆನ್ನಿಗನೆ ।
ಸೂಸಿ ನಿನ್ನಯ ರತಿ ಸುಖದ ವಿಲಾಸವ
ಪೂಸರನುರುಬ ನೀ ಬಿಡಿಸೊ ॥ ೧೦

ಕಾಲು ಗಳಿಗೆ ಯುಗವಾಗೆ ಕಳೆದು ನಿನ್ನ
ಮೇಲಣಾಸೆಯಲಿ ತಾನಿಹೆನು ।
ಹೇಳುವುದೇನೆನ್ನ ಪುಣ್ಯದ ಫಲ ನಿನ್ನ
ತೋಳ ತಕ್ಕೈಗೆ ಸೇರಿಸಿತು ॥ ೧೧

ಒಡನೆನ್ನ ನಿಟ್ಟಿಸಿದರು ಮೋಹ ವಲೆಯೊಳು
ತೊಡಕದರಿಲ್ಲ ನಿನ್ನಾಣೆ ।
ಕಡುಚೆಲ್ವ ನಿನ್ನ ವಾರತೆ ಗೇಳಿದಾಕ್ಷಣ
ಕುಡುವಿಲ್ಲನಲೆಗೊಳಗಾದೆ ॥ ೧೪

ಹೊಳವಕ್ಷಿಗಳಿಂದ ನಿಟ್ಟಿಸು ಮನಸಿಜ
ಗಲೆಯ ತಾಣಕೆ ಕೈ ನೀಡೊ ।
ಸೆಳೆದಪ್ಪಿ ಬಟ್ಟ ಬಲ್ಮೊಲೆಯ ಕರದೆ ಪಿಡಿ
ದಲುಗು ಕಾಮನ ಸಮ ರೂಪ ॥ ೫೫

ಎಂದೆಂಬ ಮದನವೋಪಿನಿಯ ನುಡಿಗೆ ನಲಿ
ದಂದಾಗ ಬಿಗಿ ಬಿಗಿಯಪ್ಪಿ ।
ಇಂದೀವರಾಕ್ಷಿಯ ಕುರುಳ ನೇವರಿಸುತಾ
ನಂದದೆ ತೊಡೆಯೊಳಿಂಬಿಟ್ಟ ॥ ೫೬

ನಡುಗುವ ತನು ವಲ್ಲಿಯ ತುದಿಯಿಂ ಪೊಡೆ
ಗೊಡನುದಿರ್ವಲರಂದದಲಿ ।
ಮಡದಿ ರನ್ನೆಯ ಕಣ್ಗೊನೆಯಿಂದ ಹರ್ಷಾಶ್ರು
ಬಿಡದೊಕ್ಕುವೇನ ಬಣ್ಣಿಸುವೆ ॥ ೫೭

ಪೊಸ ನೀರ ಹೂರದೊಳಗೆ ಮುರಿ ಮಿಾನ್ಗಳು
ಮಸಗಿ ಮುಂ ಪೊಳದಾಡುವಂತೆ ।
ಮಿಸುಗುವ ವರ ಲಾವಣ್ಯಾಂಬುವಲಿ ಕ
ಣ್ಣೆಸೆದುವು ಪೊಳಪೇರೆ ನಗುತ ॥ ೫೮

ಪನ್ನೀರು ಕರ್ಪೂರ ವೀಳಯ ಮೋಹನ
ದನುಲೇಪನಾದಿ ವಸ್ತುಗಳ ।
ವನಿತೆಯ ಮುಡಿ ಮೊಲೆ ಯೆಡೆ ಬಾಯಿ ಕೊರಳಿಗಂ
ದನುಗೊಳಿಸಿದನೇ ವೇಳ್ವ ॥ ೫೯

ಪೊಸ ಗೆಂಪೇರಿದ ಬಿಂಬ ಫಲವ ಗಿಳಿ
ಮಸಗಿ ಸಂತಸದೆ ಪೀರ್ವಂತೆ ।
ಅಸಿಯಳ ಮೊಗದೊಳು ಮೊಗವಿಟ್ಟು ಚೆಂದುಟಿ
ರಸವ ಸವಿದು ಚಪ್ಪರಿದ ॥ ೬೦

ಪವಳದಂಬಿನ ಬಟ್ಟಲೊಳು ತೀವಿದವೈತವೆ
ತವಕದೆ ಗಂಧರ್ವ ನಾರಿ ।
ಸವಿವಂತವನ ಚೆಂದುಟಿಯ ಸುಧೆಯ ನಗು
ತವಳೀಂಟಿದಳು ಮೋಹದಿಂದ ॥ ೪೧

ತಾವರೆಗೈಗಳಿಂದಿಂದು * ಮಂಡಲ ಚೆಂಡ
ಭಾವಜ ಪಿಡಿದಾಡುವಂತೆ ।
ತೀವಿದವಳ ಬಟ್ಟ ನೆಲೆ ಮೊಲೆಗಳ ಪಿಡಿ
ದಾ ವೀರನಲುಗಿದನಾಗ ॥ ೪೨

ಪಾರಿವಗಳ ದನಿ ಕೊಳವರ್ಕ್ಕಿಯ ಲಲ್ಲೆ
ಕೀರವರಿಗಳ ಬೈದಾಟ ।
ನಾರಿ ಮದನಮೋಹಿನಿ ಜಯಂತರೊಳು ಸೊಂ
ಪೇರಿದುವೇನ ಬಣ್ಣಿಸುವೆ ॥ ೪೩

ಅಳಿಗಳಪ್ಪುಗೆ ಸಿಂಗ ವರಿಗಳ ಚೆಲ್ಲಾಟ
ಕಳ ಹಂಸಗಳ ಬಾಯ್ಗೂಟ ।
ತೊಳಗುವ ಹರಿಣ ಹುಲ್ಲೆಯ ನಸಿ ಯಿರ್ವರ
ನೆಲೆಗೊಂಡು ಮೆರೆದುವೇನೆಂಬೆ ॥ ೪೪

ಕಡಗ ಕಂಕಣ ಬಳೆ ಗೈ ಝಣರೆನೆ ನಾರಿ
ಬಿಡದಾಗ ಕಲೆಯ ತಾಣಗಳ ।
ತುಡುಕಿ ತಾಡನಗೈದು ಜುಮ್ಮು ದಟ್ಟಿಸಿ ಮೋಹ
ಗಡಲೊಳಾಳಿಸಿದಳಂದವನ ॥ ೪೫

ಯವೆ ಹಳಚಕದೆ ನಿಟ್ಟಿಪ ಕಣ್ಣ ಬಾಯಿಂದ
ತವೆ ತೆಗೆಯದ ಬಾಯ್ಗೂಟ ।
ಸವಿದಕ್ಕೈಯ ಸಡಿಲದ ನೇಹಗಳಿಂದ
ಲವರಿರ್ವರೊಪ್ಪಿದರಂದು ॥ ೪೬

---

* ಮೂಲೆಯ ಚೆಂಡ.

ಬೆಚ್ಚರೊ ಬೇರಿಲ್ಲದೆ ದೇಹವೇಡನೆಂ
ಬಚ್ಚರಿಯೊಳುದಕ್ಕೆಯಿಂದ ।
ಮೆಚ್ಚಿದ ಸವಿ ರತಿ ಸುಖದೇಳಿಗೆಯಿಂದ
ಲಚ್ಚರಿಯೊಳು ರಾಜಿಪರು ॥ ೪೬

ಸಲೆ ಬೆನ್ನಲೆವೆಣೆ ಗಂಟು ಮೆದ್ದಳ ಕಣ್ಣ
ಹೊಳಹು ಪುಷ್ಪಾಂಜಲಿಯಾಗೆ ।
ಕಲಶ ಕುಚಗಳ ತಾಳದೆ ನಲ್ಲನುರವೆಂಬ
ಲಲಿತ ರಂಗದೆ ನಟಿಸಿದಳು ॥ ೪೮

ಮೊಲೆಗಳ ಕಲಶ ಸ್ಥಾಪನೆ ನಖ ರೇಖೆ
ಗಳ ಸೂತ್ರ ಬಂಧಗಳಿಂದ ।
ಸಲೆ ಘರ್ಮ ಜಲ ಸೂಸಿ ಸುರತ ಸಾಮ್ರಾಜ್ಯದ
ವಿಲಸಿತ ಪಟ್ಟ ಗಟ್ಟಿದಳು ॥ ೪೯

ಮುತ್ತುವೊಲ್ ಬೀಳುತಿರ್ದಾ ಸ್ರಮೆದುದಕವ
ನೊತ್ತಿ ಬೇಗದೆ ಸೆರಗಿಂದ ।
ಉತ್ತಮ ರತಿ ಸಾಮ್ರಾಜ್ಯವೆ ಹರುಷದ
ಮೊತ್ತದೆ ರಂಜಿಸಿ ಬೇಗ ॥ ೫೦

ಅರೆ ಮುಗಿದಕ್ಷಿ ಬೆಮೆರುವಂಗ ಕಡು ಗೆಂಪು
ಪರಿದು ರಾಜಿಸುವಧರಗಳ ।
ಸುರತಾಂತ ಶ್ರಮದಿಂದವರಿರ್ವರು
ಮೆರೆದರೇನೆಂಬೆನಚ್ಚರಿಯ ॥ ೫೧

ಸಿರಿ ಗಂಧದಣ್ಪಿಗೆ ಬಿಜ್ಜಳದೆಲರಿಗೆ
ಪರಿಮಳಿಸುವೆ ಪನ್ನೀರ್ಗೆ ।
ಪರಿದು ಬಯಸುತವರಿರ್ವರಿಸೆದರಾಗ
ಸ್ಮರ ಮೋಹನದ ಸೊಕ್ಕೀರೆ ॥ ೫೨

ನವರತ್ನದ ಗಿಂಡಿಯ ಪನ್ನೀರಲಿ
ತವೆ ಕೈ ಕಾಲ್ಮೊಗ ದೊಳದು ।
ಅವರಿರ್ವರೆಸೆದರು ಕರ್ಪೂರ ವೀಳ್ಯದ
ಕವಳಗಳನು ಸವಿದಾಗ ॥ ೫೩

ನಗುಮೊರು ಕೈ ಹೊಯ್ವುರು ಮೈ ಮೈ ಸೋಂಕಿ
ಮಿಗೆ ಪುಳಕೋತ್ಸವದಿಂದ ।
ಜಗಕತಿಶಯವೆಹ ಮೋಹ ವಾರಿಧಿಯಲಿ
ಸೊಗಸಿನಲೋಲಾಡಿದರು ॥ ೫೪

ಇಂತವರಿರ್ವರೊಪ್ಪುಹ ಕಾಲೋಚಿತ
ಮಂ ತವೆ ಕಂಡು ಸಂತಸದೆ ।
ಕಂತು ಮೋಹಿನಿಯು ಕೆಳದಿ ಚಿತ್ರರೇಖೆಯು
ತ್ಯಂತ ಸಂಭ್ರಮದೊಳ್ಕದಿದಳು ॥ ೫೫

ನಾರಿ ಕೇಳ್ನಿನ್ನ ಮನೋರಥ ನೆರೆ ಕೈ
ಸಾರಿತು ಚೆಲುವರೆರೆಯನ ।
ಮೇರೆಯರಿತು ನಡಿಸೆಂದಾಗ ಸಖಿಯುಪ
ಚಾರವ ಪೇಳ್ದಳಂಗನೆಗೆ ॥ ೫೬

ಬಳಿಕಿಂತೆಂದವರಿರ್ವರಿಚ್ಛೆಗೆ ಬಂದು
ವಿಲಸಿತ ಮನ್ನಣೆ ವಡೆದು ।
ಲಲಿತಾಂಗಿ ವರ ಚಿತ್ರರೇಖೆ ತನ್ನಯ ಗೃಹ
ಕೊಲಿದೈದಿದಳರ್ತಿಯಲಿ ॥ ೫೭

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನುಬಂಧಿ ॥ ೫೮

ಎಂಬತ್ತನೆಯ ಸಂಧಿ ಸಮಾಪ್ತಂ

ಹನ್ನೊಂದನೆಯ ಸಂಧಿ

ಕರ್ಣಾಟಕಕ್ಕೆ ಖಾನನು ಬಂದುದು.

ಸೂಚನೆ ॥ ಒಡನಿಕ್ಕೀರಿಯ ಸೆಳೆದಾಗ ತುರುಕರ
ಪಡೆ ನಡೆದುದು ಕನ್ನಡಕೆ ॥

ಇಂತಿರುತಿರಲತ್ತಲಿಕ್ಕೀರಿಯ ಭೂ
ಕಾಂತಗೆ ಕೆಂಗಮನ್ನೆಯಗೆ ।
ಪಂಥದಲೆಲ್ಲಗಟ್ಟಿನ ಮಾತಿಗೆ ಛಲ
ವಾಂತು ಬಂದುದು ಮನ ಮುನಿಸು ॥ ೧

ಈತನಾತನ ಕೂಡೆ ಕಾದಲರಿಯದುರೆ
ಖಾತಿಯಿಂ ಕೆಂಗೇಂದ್ರನಾಗ ।
ದೂತನನಟ್ಟಿದ ವಿಜಯಾಪುರ ವರ
ಭೂತಳೇಶನ ಬಳಿಗಾಗ ॥ ೨

ಬಂದಾಗಲಾ ಮಂತ್ರಿ ಪಾತ್ಸಾಹ್ಯವನು ನೆರೆ
ಸಂದಿಸಿಕೊಂಡು ಬೇಗದಲಿ ।
ನಿಂದು ಕಾಣಿಕೆ ಯಿಕ್ಕಿ ರೊಕ್ಕದಾಸೆಯನಿತ್ತು
ತಂದನು ದಂಡನಾ ನೆಲಕೆ ॥ ೩

ದುರ ಗಲಿ ಹನುಮನ ಬಲ ಸಹ ಕರಿಸಿಕೊಂ
ಡಿರದಿಕ್ಕೀರಿಯ ದಳವ ।
ಮುರಿಯಲಿರಿದು ಬೆನ್ನಟ್ಟಿ ಬಂದಾ ಹ್ಷಣ
ಪುರವ ಮುತ್ತಿದನಾ ಖಾನ ॥ ೪

ಇಕ್ಕೇರಿಯ ಭೂಪ ತುರುಕರ ದಾಳಿಗೆ
ಬೆಕ್ಕಸ ಬೆರಗಾಗುತಾಗ ।
ಹೊಕ್ಕನು ಮೆಲೆಯ ನಾ ಹ್ಷಣ ದೂಳಿ ಗೋಟೆಯ
ಗಕ್ಕನೆ ಕೊಂಡರೇ ವೇಳ್ವ ॥ ೫

ಹಿಡಿದು ಹೆಣ್ಣುಗಳ ದೇವರ ಶಿಲೆಗಳ ತಲೆ
ಯೊಡೆದು ಪುರವ ಸೂರೆ ಮಾಡಿ ।
ಕೆಡಿಸಿ ಪತಿವ್ರತೆಯರ ಗೋವ್ರಗಳ ಸದೆ
ಬಡಿದರೇ ವೇಳ್ವನದ್ಭುತವ ॥ ೬

ಅರಮನೆಯೊಳಗಿಹ ಸಕಲ ವಸ್ತುವ ಕೊಂಡು
ಹರುಷದೆ ರಣಧೂಳಿ ಖಾನ ।
ಪುರಕೆ ತಾಣೆಯವಿಕ್ಕಿ ಪಾತಾಸ್ಯವಿನೆಡೆಗೈದಿ
ಭರದೆ ಕಾಣಿಕೆಯ ಮೊಡಿದನು ॥ ೭

ಪಿರಿದು ಸಂತೋಷದೆ ಪಾತಾಸ್ಯವು ಖಾನಗೆ
ಸರಿ ಲಸುಕರಿತನವಿತ್ತು ।
ತುರಗ ದಳವ ಕೂಡಿ ಕೊಟ್ಟು ಕರ್ನಾಟವ
ನಿರದೆ ಸಾಧಿಸು ಹೋಗೆಂದ ॥ ೮

ಅಂಕುಶ ಖಾನ ಮುಂತಾದ ಖಾನರುಗಳ
ಶಂಕೆ ಯಿಲ್ಲದೆ ಕೂಡಿ ಕೊಟ್ಟು ।
ಮುಂಕೊಂಡು ಪಾತಾಸ್ಯವು ರಣಧೂಳಿ ಖಾನನ
ಬಿಂಕದೆ ಬೀಳ್ಕೊಟ್ಟನಾಗ ॥ ೯

ಬಳಿಕ ಸಲಾಮೆಂದೊಡೆಯನೆ ಕೈಯಿಂದ
ಕಳುಹಿಸಿ ಕೊಂಡಾ ಖಾನ ।
ತಳುವದೆ ತಳತಂತ್ರ ಗೂಡಿ ಸನ್ನಾಹದೊ
ಳಳವಟ್ಟು ನಡೆದನುಬ್ಬಿನಲಿ ॥ ೧೦

ಮುಂತೊಪ್ಪುವ ವಾಜಿ ಯ್ವೈವತ್ತು ಸಾವಿರ
ದಂತಿ ಸಂಕುಳ ವೈನೂರು ।
ಪಂಥದ ಕಾಲಾಳು ನಾಲ್ಕು ಲಕ್ಷದ ಬಹು
ತಿಂಥಿಣಿಯಲಿ ಖಾನ ನಡೆದ ॥ ೧೧

ಬಸವ ಪಟ್ಟಣಕೈದಿ ಪೂವಲ ಹನುಮೆನ
ನೊಸೆದು ಸ್ನೇಹವ ಮಾಡಿ ಕೊಂಡು ।
ಎಸೆವ ಕರ್ಣಾಟದ ಬಲ ಗೂಡಿ ಖಳ ಬಹ
ಕುಶಲವನೇನ ಬಣ್ಣಿಸುವೆ ॥ ೧೨

ಹರುಪನ ಹಳ್ಳಿ ಕನಕ ಗಿರಿ ಸೊಂಡೂರು
ನೆರೆ ದಿವ್ಯ ಗುಡಿಯ ಕೋಟೆಗಳ ।
ಪಿರಿದಾದುಜ್ಜಿನಿ ಭೂಮಿ ಪಾಲರ ಬಲ
ನೆರೆಮದಪರಿಮಿತವಾಗ ॥ ೧೩

ರಾಯ ದುರ್ಗದವರು ಹಟ್ಟಿಯ ವೀರಪ್ಪ
ನಾಯಕ ದೊಡ್ಡೀರಿಯರಸ ।
ಆಯತವಡೆದ ಕುಂದುರುಪೆಯ ಬಲ ಸಮು
ದಾಯವೈತಂದುದೊಗ್ಗಿನಲಿ ॥ ೧೪

ಮುಂತೆ ರಾಜಿಸುವ ಬತ್ತೀಸಾಯುಧಗಳ
ಪಂಥದ ಮುತ್ತಿ ವಿಡಿದರು ।
ಸಂತತ ಹಿರಿಯೂರ ತಮ್ಮಣ ನಾಯಕ
ನೊಂತಾದ ಬಲವೈದಿದುದು ॥ ೧೫

ಚಿಕನಾಯಕನ ಹಳ್ಳಿಯ ಬೈರ ನಾಯಕ
ನಕಳಂಕ ತುರುಗೆರೆಯವರ ।
ಸಕಲ ಬಲವೆ ಕೂಡಿ ಹನುಮಪ್ಪ ನಾಯಕ
ಚಕಿತ ಪರಾಕ್ರಮಿ ನಡೆದ ॥ ೧೬

ಬೇಲೂರು ನರಸಿಂಹ ಪುರ ಪಾಲುಪರೆಯವೆ
ರಾಳು ಕುದುರೆಗಳು ಸಹಿತ ।
ಹೇಳಲಳವೆ ಹನುಮೆಪ್ಪ ನಾಯಕ ಬಹ
ಧಾಳಿಯನೇನ ಬಣ್ಣಿಸುವೆ ॥ ೧೭

ತನ್ನ ಸಮಾನದ ಬಿರುದಿನ ಖಾನರು
ಮುನ್ನೈವತ್ತರೊಗ್ಗಿನಲಿ ।
ಸನ್ನಾಹ ಭೇರಿಗಳ್ಮೊಳಗಲು ಖಾನ ಬ
ಪ್ಪನ್ನತಗಳನೇ ವೇಳ್ವ ॥ ೧೮

ಕುದುರೆಗಳೋ ಪ್ರಳಯಾಂಬುನಿಧಿಯೊಳೊಗೆ
ದೊದವಿದ ಸಾಲ ತೆರೆಗಳೊ ।
ಮದ ದಂತಿಗಳೊ ಕಾಲ್ಮೀಥದೊಡ್ಡುಗಳನ
ಲೆದೆ ಗೆಡಿಸಿದುದು ನೋಳ್ಪವರ ॥ ೧೯

ತುಡುಕಿ ಚಿಮ್ಮುವ ಖಂಡೆಯಗಳ ಕಿಡಿ ಮೇಲ
ಕಡರಿ ಖದ್ಯೋತ ಮಂಡಲವ ।
ಬಿಡದೆ ಮುಸುಕಿತಾ ಪಡೆಯ ಪರಾಕ್ರಮ
ದಡವ ನಾನೇನ ಬಣ್ಣಿಪೆನು ॥ ೨೦

ಕುಂತ ನೇಜೆಯ ಕೈಯಿಟ್ಟ ಯಾಯುಧಗಳ
ನಂತರಿಕ್ಷಗಳಿಗಿಟ್ಟಾಗ ।
ಪಂಥದಿಂದಾನುವ ಕಾಲಾಳ ರಾವುತರ
ತಿಂಥಿಣಿ ಯೊಪ್ಪಿತೇ ವೇಳ್ವ ॥ ೨೧

ನಡತೆಯಿಂ ಗಿರಿ ದುರ್ಗ ಕುಡಿತೆಯಿಂ ಜಲ ದುರ್ಗ
ಕಡುಗಲಿಗಳ ಕೋಪಗಳ ।
ಕಿಡಿಯೊಳು ವನ ದುರ್ಗವಡಗಿತು ಬತ್ತಿತು
ಬಿಡದಾಗ ಬೆಂದುದೇ ವೇಳ್ವ ।

ಸಿಡಿಲ ಕುಡುಹಿನಿಂದೆ ಬ್ರಹ್ಮಾಂಡ ಭೇರಿಯ
ಬಡಿವವೊಲಾನೆಯ ಮೇಲೆ ।
ಹೊಡೆವ ಡಮಾಮಿಗಳಬ್ಬರ ಗಗನವ
ತುಡುಕಿತೇ ವೇಳ್ವನದ್ಭುತವ ॥ ೨೩

ಚಂಬಕ ಪಟಹ ಮುವುರಿ ಕೊಂಬು ಕೊಳಲಿನಾ
ಡಂಬರ ಬುರುಗು ನಪಿರಿಯ ।
ಇಂಬಿನ ರವವೆಂಟು ದಿಕ್ಕಿನ ಹೊರಿಗೆಯ
ಮುಂಬರಿದೊಡನೆ ಪರಿದುದು ॥ ೨೪

ಪದದೊಳುದಿಸೆ ತನಗಾದಘವನು ಸುರ
ನದಿಯೊಳು ಮಿಂದುರೆ ಪರಿದು ।
ಮುದದಿಂದ ಸುರ ಲೋಕವೆ ಪ್ರೊಕ್ಕು ನಿರ್ಜರ
ವಧುಗಳಪ್ಪಿತು ಕೆಂದೂಳು ॥ ೨೫

ಎತ್ತಿದ ಸತ್ತಿಗೆ ಬಿರುದಿನ ಡಾಳಿನ
ವೊತ್ತ ಡಾಳಿಪ ಚಾಮರದ ।
ಬಿತ್ತರದಿನ ಮಂಡಲವ ಮುಸುಕೆ ನೆರೆ
ಕತ್ತಲೆ ಯಾಯಿತು ಧರೆಗೆ ॥ ೨೬

ತಳತಂತ್ರದಗಲವ ದಾಟಲಾರದೆ ಮೇಲೆ
ಚಲ ಪಕ್ಷಿಗಳಾಗ ಬಳಲಿ ।
ಇಳೆಯೊಳುದಿರಿದುವು ರಣಧೂಳಿ ಖಾನನ
ಬಲವೆನದೇನ ಬಣ್ಣಿಸುವೆ ॥ ೨೭

ಪ್ರಳಯ ರುದ್ರನ ಫಾಲಾಗ್ನಿಯ ಕಿಡಿಗಳ
ಸುಳಿವೊ ಸಂವರ್ತ ಮೃತ್ಯುವಿನ ।
ಬಳಗವೆಂದೆನಲಾಗ ರಣಧೂಳಿ ಖಾನನ
ದಳ ನಡೆದುದು ಜೊಬ್ಬಿಡುತ ॥ ೨೮

ಬಳಿಕಾಗ ಖಾನ ಖಾನರು ಫೌಜ ಬೇರೆ ಬೇ
ರಳವಡಿಸಿಯೆ ನಡೆತರಲು ।
ಸಿಲೆಯು ಸಂಜೋಗದ ರಾವ್ರುತರೊಗ್ಗಲಿ
ಬಳನೈತಂದನುಬ್ಬಿನಲಿ ॥ ೮೯

ದಾಳಿಯು ಕುದುರೆ ನಾಲ್ಕೆಂಟು ಸಾವಿರ ಮುಂದೆ
ತೂಳುವ ಬಲು ಬೊಬ್ಬೆಯಿಂದ ।
ಹೇಳುವುದೇನಾಕಾಶ ಮಂಡಲ ನೆರೆ
ಘೀಳಿಡಲೈದಿದರಾಗ ॥ ೯೦

ಆನೆಯ ಮೇಲೆ ತೊಟ್ಟಿಲ ಚಪ್ಪರದಲಿ ಸು
ಮ್ಮಾನದ ಬಿಬ್ಬಿಯರೊಡನೆ ।
ಆನಂದವಾಡುತ ಬರುವ ಖಾನರುಗಳ
ನೇನ ಬಣ್ಣಿಸುವೆನೆಚ್ಚರಿಯ ॥ ೯೧

ಪಲ್ಲಕ್ಕಿ ದಂಡಿಗೆಗಳ ಮೇಲೆ ತಮ್ಮಯ
ವಲ್ಲಭೆಯರು ಬರುತಿರಲು ।
ನಿಲ್ಲದೆ ಕುದುರೆಯ ಮೋಹರದೊಳಗಾಗ
ಬಲ್ಲಿದ ಖಾನರೈದಿದರು ॥ ೯೨

ಬಿಗಿದ ಡಮ್ಮಾಣದಲೊಂಟೆಗಳಗಣಿತ
ಝಗರ್ಝಗಿಸುವ ಕಾಂತಿಯಿಂದ ।
ಸೊಗಸುವ ಕೊಲ್ಲೂರ ಬಂಡಿಯ ಲೆಕ್ಕವ
ಬಗೆವೆನಾರಾ ದಂಡಿನೊಳಗೆ ॥ ೯೩

ಹೂಳ ಪಾಳಯದ ಸಂಗಡ ಕುದುರೆಯ ಮೇಲೆ
ಕಾಲ ಕುಪ್ಪಸ ಪಾಪ್ರೋಸು ।
ಜೋಲುವ ರವಿಕೆಯ ಮೊಲೆ ಕಟ್ಟುಗಳ ಚೆಲ್ವ
ಸೂಳೆಯರೈದಿದರಾಗ ॥ ೯೪

ಹೂಡಿದ ಬಂಡಿಗಳೊಳಗೆ ಪಿರಂಗಿಗ
ಳೀಡಿರಿದಗಣಿತವಾಗಿ ।
ಕೂಡೆ ಖಾನನ ದಂಡಿನೊಳಗೈದಿ ಬರುವೆ ನಿ
ರೂಢಿಯನೇನ ಬಣ್ಣಿಸುವೆ ॥ ೫೫

ಸರಳು ತುಂಬಿದ ತರಕಸ ಸಿಂಗಾಡಿಗ
ಳಿರದೆ ಸಾಸಿರ ಬಂಡಿಗಳಲಿ ।
ಪರಿಪೂರ್ಣದಲಿ ಬರುತಿರ್ದುವಾ ದಂಡಿನ
ಬರವನದೇನ ಬಣ್ಣಿಸುವೆ ॥ ೫೬

ಕರಿಯು ಮೆದ್ದಿನ ತಿತ್ತಿ ಬಾಣದ ಹೇರುಗ
ಳಿರದಪಿನಿಯ ಸಾಲ ಮೊಟ್ಟೆ ।
ಬರುತಿರ್ದುವು ಲಕ್ಕ ಸಂಖೆಯೊಳಾ ಬಲ
ದಿರವ ಬಣ್ಣಿಪೊಡಾರಳವು ॥ ೫೭

ಹೇಸರಗತ್ತೆಯ ಮೇಲೆ ಬಂಗಿಯ ಹೇರು
ಸಾಸಿರ ಗಂಗಸಾರಗಳ ।
ಸೂಸುವ ಸಾರಾಯದ ಪೀಪಗಳ ಲೆಕ್ಕ
ವೀಸೆಂದು ಪೇಳ್ವರಾರದನು ॥ ೫೮

ಎತ್ತಿನ ಮೇಲೆ ದಂಡಿನ ಸಂಜೋಗವ
ಮತ್ತಾಗಲುರೆ ಹೇರಿಕೊಂಡು ।
ಬಿತ್ತರದೊಳಗೈತಹ ವಾಣಿಜಿಕರ
ವೊತ್ತವೆ ಬಣ್ಣಿಪರಾರು ॥ ೫೯

ಕೊಡಲಿ ಕೈ ಮಚ್ಚು ಗುದ್ದಲಿ ಮೊನೆ ಹಾರೆಗಳ್
ಪಿಡಿದ ಕರದ ಕುಡುಗೋಲು ।
ತಡಿಕೆ ಮಕ್ಕರಿ ಸಹ ಬಹ ಕಾಮೊಟದ
ಬಿಡು ಮಂದಿಗೆ ಲೆಕ್ಕವಿಲ್ಲ ॥ ೬೦

ಕೊಟ್ಟಾಣಿಗರು ಕಮ್ಮಾರರು ಬಹು ಬಗೆ
ರೊಟ್ಟಿ ಸಕ್ಕರೆ ತುಪ್ಪಗಳ ।
ವೊಟ್ಟಿಗಳನು ಮಾರುವ ಬೇಹಾರಿಗ
ಳಿಟ್ಟಾಣಿಸುತಲ್ಲಿದಿದರು ॥ ೪೧

ಒಡನೀ ಪರಿಯ ಸಮಸ್ತ ಸಂಜೋಗದೆ
ಪಡೆ ಸಹ ರಣಧೂಳಿ ಖಾನ ।
ಬಿಡದೆ ಕರ್ನಾಟ ರಾಜ್ಯವ ಪ್ರೊಕ್ಕು ಧಾಳಿಯ
ನಿಡುವ ಸಂಭ್ರಮವನೇ ವೇಳ್ವ ॥ ೪೨

ಸೀರೆಯವನು ಸೂರೆ ಮಾಡಿಯೂ ಭೂಪನ
ಸೇರಿಸಿ ಯಮನ ಪಟ್ಟಣಕೆ ।
ವಾರುವ ದಳ ಸಹ ರಣಧೂಳಿ ಖಾನ ಮುಂ
ದೋರಂತೆ ನಡೆದನುಬ್ಬಿನಲಿ ॥ ೪೩

ಖಾನನ ಧಾಳಿಗೆ ಕಂಗೆಟ್ಟು ತುಮುಕೂರು
ಭೂನಾಥನೈತಂದು ಕಂಡು ।
ವಿನೆಂಬೆ ಸಕಲ ರಾಜ್ಯವ ಬಿಟ್ಟು ಗಿರಿದುರ್ಗ
ಕಾನಲಾರದೆ ತೆರಳಿದನು ॥ ೪೪

ಕೊಡದೆ ಕಾದಿದ ಪಳ್ಳಿ ಪಳ್ಳಿ ಪುರಗಳನು
ತುಡುಕಿ ಲಗ್ಗೆಗೆ ಬಿಟ್ಟಾಗ ।
ಕಡಿ ಖಂಡವ ಮಾಡಿ ಸಕಲ ಜನರ ಮುಂದ
ಕಡಿ ಯಿಟ್ಟ ಖಾನನೇ ವೇಳ್ವ ॥ ೪೫

ಒಡೆದಾ ಪುರ ಪಳ್ಳಿ ಯಗ್ರಹಾರದ ಜನ
ಕಡು ಭೀತಿಯ ತಳೆದಾಗ ।
ಹೆಡಗೆ ಹೇರೆನಲಕ್ಕಿ ಹುಡಿ ಹಿಟ್ಟುಗಳ ತುಂಬಿ
ಕೊಡಗು ಮೆಲೆಯ ಸಾರಿದರು ॥ ೪೬

ತಾಯೊಂದೆಸೆ ಮಕ್ಕಳೊಂದೆಸೆ ಕೊಟ್ಟಹ
ಬೀಯಗರೊಂದೆಸೆಯಾಗಿ ।
ಬಾಯ ಬಿಡುತ ಬಲು ಭೀತಿಯೊಳಗೆ ಹೊಕ್ಕ
ರಾಯಾಸಗೊಂಡು ಹೆಮ್ಮೆಲೆಯ ॥ ೪೭

ಹಗ ಪೆಟ್ಟೆ ಕಣಜದೊಳಿಹ ಬಹು ಧಾನ್ಯನ
ಬಗೆಯದೆ ಸೂರೆಯ ಕೊಟ್ಟ ।
ಮಿಗೆ ಬೆಳೆದಿಹ ಪೈರುಗಳ ಬಿಟ್ಟು ಜನವಂಜಿ
ಜಗುಳಿದರೇನ ಬಣ್ಣಿಸುವೆ ॥ ೪೮

ಎತ್ತು ಕರೆವ ಹಸು ವೆಮ್ಮೆಯ ಹಿಂಡುಗ
ಳತ್ತಲಾದರು ಹೋಗಲೆನುತ ।
ಮತ್ತಾಗ ತಲೆಯ ಕೆದರಿಕೊಂಡು ಜನ ಕಾಡ
ಹತ್ತಿದರೇನನುಸಿರುವೆ ॥ ೪೯

ಕಾಲೊಳು ಮೊಡಿದ ದಸಿ ಮುಳ್ಳುಗಳು ತಾಕಿ
ಸೀಳಿದ ಮೈ ಗಾಯದಿಂದ ।
ಜೋಲಿ ಸುರಿವ ಬಿಸು ರಕ್ತದಿಂದಾ ಜನ
ಜಾಲನೈದಿತು ದೆಸೆ ದೆಸೆಗೆ ॥ ೫೦

ಅದೊ ಬಂದುವು ಕುದುರೆಯ ಹಿಂಡು ನೋಡಿತ್ತ
ಲಿದೆ ಬಲು ಪೌಜೆಂದೆನುತ ।
ಬೆದರಿ ಓಡುವ ದನಗಳ ಕಂಡು ಜಗವೆಲ್ಲ
ಗದಗಾಪುಗೊಂಡುದೇ ವೇಳ್ವ ॥ ೫೧

ಹೆಂಡಿರುಗಳ ಬಿಟ್ಟೋಡಿದವರ ಶಿಶು
ತಂಡವನೀಡಾಡಿದವರ ।
ಗಂಡನ ಬಿಟ್ಟು ಬಾಯ್ಬಿಡುತೈದಿದ ಹೆಂಗ
ಳಂಡಲೆಗಳನೇ ವೇಳ್ವ ॥ ೫೨

ಗಿಡುವಿನೊಳಗೆ ಹೆತ್ತವರ ಗರ್ಭಿಣಿಯರ
ನೊಡನೆ ಸಾಗಿಸಲಾರದವರು ।
ಕಡುಗಲಿ ರಣ ಧೂಳಿ ಖಾನನಬ್ಬರಕಂಜಿ
ಯಡವಿಯು ಹೊಕ್ಕರೇನೆಂಬೆ ॥ ೫೩

ಕಣ್ಣಿನೊಳಗೆ ಖಾನ ಕನಸಿನೊಳಗೆ ಖಾನ
ಬಣಿಸೆ ಮನದೊಳು ಖಾನ ।
ತಿಣ್ಣನೆಡೆಗ ಖಾನನ ಸುದ್ದಿ ಜಸವಾಗಿ
ಬಣ್ಣಗೆಟ್ಟುದು ಲೋಕವೆಲ್ಲ ॥ ೫೪

ತಾರಕಾಸುರನುಪಟಳಕಂಜಿ ಜಗವೆಲ್ಲ
ಕಾರಗಲಿಸಿದಂದದಲಿ ।
ಊರೂರುಗಳ ಬಿಟ್ಟು ಸರ್ವ ಜನರು ಬಂದು
ಸೇರಿದರ್ಗಿರಿ ತರುಗಳನು ॥ ೫೫

ವೊರಸು ರಾಜ್ಯವ ಹೊಕ್ಕು ತುರುವೆನು ಸೆರೆ ವಿಡಿ
ದಿರದೆ ಜನರ ಕಂಗೆಡಿಸಿ ।
ಶರಣು ಹೊಕ್ಕರಿಗೆ ನಂಬುಗೆ ಗೊಟ್ಟು ಮುಂದಕ್ಕೆ
ತೆರಳಿದನಾ ಖಾನನಾಗ ॥ ೫೬

ಬೆಂಗಳೂರವನ ಪರಾಕ್ರಮವನು ಬೇಗ
ಭಂಗಿಸಿ ಬಿಡುವೆನೆಂದೆನುತ ।
ಹಿಂಗದೆ ತಳತಂತ್ರ ಸಹಿತೈದಿ ನೆರೆ ಶಿವ
ಗಂಗೆಯೊಳಗೆ ಬೀಡ ಬಿಟ್ಟ ॥ ೫೭

ಕೇಳಿದನಾಗ ಖಾನನ ಧಾಳಿಯಬ್ಬರ
ದೇಳಿಗೆಯನು ಬೆಂಗಳೂರ ।
ಭೂಲೋಲ ದಳವ ಮೇಳೈಸಿಕೊಂಡನು ನೆರೆ
ಕಾಳಗವನು ಮಾಳ್ಪನೆಂದು ॥ ೫೮

ಮರೆ ತೊರೆಯನು ಕಡಿದುರೆ ಬಟ್ಟಬಯಲೊಳ
ಗಿರಿಸಿಕೊಳ್ಳದೆ ದುರ್ಗವನು ।
ಪಿರಿದಗುರ್ವಿಸಿ ಪುರಿಯನು ಕಾದಿರೆ ಬಂದು
ತುರುಕಾಳು ಲಗ್ಗೆ ಮಾಡಿದರು ॥ ೫೯

ಸಿಂಗಾಡಿಯಂಬಿನ ಮಳೆಯುರುಬಿಗೆ ಬಲ
ಕಂಗೆಟ್ಟು ದೆಸೆ ದೆಸೆಗೋಡಿ ।
ಭಂಗವಡೆಯೆ ದುರ್ಗದ ಲಗ್ಗೆ ಮಾಡುವೊ
ಡಂಗವಿಸಿದನಾ ಖಾನ ॥ ೬೦

ಅನಿತರೊಳಗೆ ಕಂಗೆಟ್ಟು ಖಾನಗೆ ತನ್ನ
ತನುಜನ ಕೈ ಸೆರೆಗಟ್ಟಿ ।
ಘನ ನಂಬುಗೆಗೊಂಡು ದುರ್ಗವನಿತ್ತಾಗ
ಮನ ನೊಂದು ತೆರಳಿದ ಗೌಡ ॥ ೬೧

ರಾಮು ಗಿರಿಯು ದುರ್ಗ ಮೊದಲಾದ ಘನವಹ
ಸೀಮೆಯ ಖಳನಿಗೆ ಕೊಟ್ಟು ।
ನೇಮವಳಿದು ನೆರೆಯವನಿತ್ತ ಕುಣಿಗಿಲ
ಸೀಮೆಗೈದಿದನೇ ವೇಳ್ವ ॥ ೬೨

ಬಲ್ಲಾಳ ಪುರ ಕೋಳಾಲ ಬಿಜ್ಜಾವರ
ದಲ್ಲಿಯ ಪ್ರಭು ಮನ್ನೆಯರು ।
ತಲ್ಲಣಗೊಂಡು ಖಾನನಿಗೆ ಬೇಡಿದುದಿತ್ತು
ನಿಲ್ಲದೆ ಕೂಟಕ್ಕೈದಿದರು ॥ ೬೩

ಚಿಕ ಬಳಲಾಪುರ ನೆರೆ ಹೊಳವನ ಹಳ್ಳಿ
ಯಕಳಂಕ ಹೊಸ ಕೋಟೆಯವರು ।
ಮುಖ ಭಂಗಿತರಾಗಿ ಖಾನನ ಸಂಗಡ
ಸಕಲ ಬಲದೆ ತೆರಳಿದರು ॥ ೬೪

---

* ಪಿರಿದು ಗರ್ವಿಸಿ ಪೆರೆಯ ಕಾದಿರೆ ಖಂದು ಸುರುತಾಳ ಲಗ್ಗೆ.

ಬಾವಲೂರುರೆ ಹೊಸ ಊರು ಕಗ್ಗೊಂದಿಯ
ತೀವಿದ ಮಾಸ್ತಿಯ ನೃಪರು ।
ದೇವಂಡಪುರಿ ಸೂರೆಬಲೆ ಸಿಡಿಲ್‌ಗಟ್ಟಿದ
ಭೂವರರೊಡನೈದಿದರು ॥ ೬೫

ಬಳಿಕಿತ್ತ ಖಾತಾನ್ಯವುವಿನಪ್ಪಣೆಯಿಂದ
ತಳುವದೆಯಾ ಬೆಂಗಳೂರ ।
ಗಳಿಲನೆ ಸಹಜಿಗೆ ಕೊಟ್ಟಾಗ ಖಾನ ಮುಂ
ದೆಳಸಿದ ರಾಜ ಕಾರಿಯವ ॥ ೬೬

ಶ್ರೀರಂಗ ಪಟ್ಟಣ ಕರ್ಣಾಟಕವೆಂಬ
ನಾರಿಯ ನೊಸಲೊಳು ವೆಸರೆನೆ ।
ಚಾರು ರನ್ನದ ಬೊಟ್ಟಿನಂತಿಹುದದ ಕೊಳೆ
ನೇರವಹುದು ರಾಜಕಾರ್ಯ ॥ ೬೭

ದೊರೆ ಯಿದ್ದ ಪಟ್ಟಣವನು ಮುತ್ತಿಗೆ ಯಿಕ್ಕಿ
ಭರದಿಂದ ಸೆಳದೊಡೆ ಬಳಿಕ ।
ಅರಸ ಕಟ್ಟಿದಿರಾಟ ಮುಗಿದಂತೆ ಮಿಕ್ಕಿನ
ಪುರವೆಮ್ಮ ಕೈ ವಶವಹುದು ॥ ೬೮

ಎಂದಾಲೋಚಿಸಿ ಖಾನ ಖಾನರುಗಳಿ
ಗಂದಾಗಳುಡುಗೊರೆ ಯಿತ್ತು ।
ಮುಂದಣ ಪಯಣವ ನಿರ್ಧರಗೈದಾಗ
ಬಂದು ಬಿಟ್ಟನು ಹೊರಬೀಡ ॥ ೬೯

ಸನ್ನೆಯ ಭೇರಿ ಮೊಳಗಲು ಸಕಲ ಖಾನ
ರುನ್ನತ ಹರುಷದೊಳಾಗ ।
ಹೊನ್ನಂದಣ ಗಜ ಪಲ್ಲಕ್ಕಿ ತುರಗಾದಿ
ಸನ್ನಾಹದಿಂದೈದಿದರು ॥ ೭೦

ಭೂಮಿಯಗಲವೆಲ್ಲ ಕುದುರೆ ಕಾಲಾಳುಗಳ್
ವ್ಯೋಮ ಮಂಡಲ ಕೆಂದೂಳು ।
ತಾ ಮನೋಹರವಾಗಿರೆ ಬೀಡ ಬಿಟ್ಟನು
ರಾಮಗಿರಿಯ ದುರ್ಗದಲಿ ॥ ೨೧

ಕರೆದಾಗ ಖಾನ ಖಾನರುಗಳ ಮೈಸೂರ
ದೊರೆಯು ಪರಾಕ್ರಮದಿರವ ।
ಪಿರಿದಾತನ ದಳ ಪತಿ ಮನ್ನೆಯರುಗಳ
ದುರಗಲಿತನವ ಹೇಳಿದನು ॥ ೨೦

ರಾಮ ಚಂದ್ರನ ಸು ಚರಿತ್ರ ಶ್ರೀ ನರ ಸಿಂಹ
ಸ್ವಾಮಿಯ ಬಲ ಯದು ವರನ ।
ಆ ಮಹಾ ಬಲ ಶೌರ್ಯದೇಳಿಗೆ ಮೈಸೂರ
ಭೂಮಿ ಪಾಲರಿಗಿಹುದಂತೆ ॥ ೨೩

ನೆರೆ ಪುಣ್ಯ ಶಕ್ತಿ ಯೆಂದೆಂಬ ಸುದರ್ಶನ
ಧುರದೊಳಗಿದಿರಾದ ನೃಪರ ।
ತರಿದು ತೂರುವುದಂತೆ ಕಂಠೀರವ ರಾಜ
ನರ ನಾರಾಯಣನೆಂದು ॥ ೨೪

ಇನಿತಲ್ಲದೆ ಲೋಕ ಮೊತೆ ಯೆಂದೆನಿಸುವ
ವನಿತೆ ಚಾಮುಂಡಿ ಯೆಂಬವಳು ।
ಜನಪನ ಕುಲ ದೇವತೆ ರಣ ಜಯವಿತ್ತು
ಘನ ಕೃಪೆ ಪಡೆದಿಹಳಂತೆ ॥ ೨೫

ದ್ವಾಪರ ಯುಗದಲಿ ನರಗೆ ಸಾರಥಿ ಯಾಗಿ
ಶ್ರೀ ಪತಿ ರಾಜಿಸಿದಂತೆ ।
ಭೂ ಪಾಲ ಕಂಠೀರವಗೆ ಪಶ್ಚಿಮ ರಂಗ
ತಾ ಪಿರಿದಾಗೊಲಿದಿಹನು ॥ ೨೬

ಹನುಮಂತ ರಘುನಾಥನಿಗೆ ಸೇವಕನಾಗಿ
ಯನುವರದೊಳು ರಕ್ಕಸರ ।
ವೊನೆ ಮುರಿದೊಲು ರಿಪು ಬಲವ ಖಂಡಿಪನಂತೆ
ಜನ ನಾಥನ ದಳವಾಯಿ ॥ ೫೩

ಆತನ ಮನ್ನೆಯರೊಳು ಸಂಗರಕಿದಿ
ರಾತು ನಿಲುವೆ ರಿಪು ನೃಪರು ।
ಭೂ ತಳದೊಳಗಿಲ್ಲರದರಿಂದ ಬಲು ಬಲ
ವ್ರಾತದೆ ತೆರಳ ಬೀಕೆಂದ ॥ ೫೪

ಇಳೆಯರಸುಗಳ ಮೇಲ್ಬೈದುವೆಂದದಲಿ ನಾ
ವಳ ಬಲ ಸಹಿತೈದಿದೊಡೆ ।
ಕಳವೇರಿ ಕೈ ಮುರಿದಂತಹುದದರಿಂದ
ತಳತಂತ್ರವ ನೋಳ್ಪ ನೆಂದ ॥ ೫೫

ಕಡುಗಲಿ ಖಾನ ವಜೀರರು ನನ್ನಿಯ
ಪಡೆಯನೆಲ್ಲವ ಬೇರೆ ಬೇರೆ ।
ಬಿಡದೆ ಗಣಿತೆಯ ತೋರಿಸಿದೊಡೆ ನೋಡಿ ಕೊಂ
ಡಡಿ ಯಿಡುವೆವು ನಾವೆಂದ ॥ ೫೬

ಎನಲು ಹಸಾದವೆನುತ ಖಾನ ಖಾನರು
ಮನ ಹರುಷದೆ ತಮ್ಮ ಬಲವ ।
ಅನು ಮಾಡಿ ಬೇರೆ ಬೇರೈತಂದು ತೋರುವ
ಘನ ವಿವರವನೇ ವೇಳ್ವ ॥ ೫೭

ಸಿಲೆಯ ಸಂಜೋಗದ ಹಯವೆಂಟು ಸಾವಿರ
ಬಲು ಮದ ಕರಿ ಮೂವತ್ತು ।
ಸಲೆ ಹತ್ತು ಸಾವಿರ ಕಾಲಾಳು ಖಾನನ
ಬಲದಲ್ಲಿ ಮೆರೆದುವೇ ವೇಳ್ವ ॥ ೫೮

ತುರಗ ಸಾಸಿರ ನಾಲ್ಕು ಗಜ ಹತ್ತು ಕಾಲಾಳ
ನೆರವಿ ಹತ್ತೆಂಟು ಸಾವಿರದ ।
ವರ ಗಣನೆಯ ಮೋಹರವ ಖಾನನ ಪಿತ
ಗರುವ ಪರಾತ ತೋರಿದನು ॥ ೪೨

ಆರು ಸಾಸಿರ ಕಾಲಾಳು ಗಜಗಳಂಟು
ವಾರುವ ನಾಲ್ಕು ಸಾಸಿರದ ।
ಮೇರೆಯ ಬಲವ ಖಾನನಿಗೆ ತೋರಿಸಿದನು
ಕ್ಯೈರಿತಿಖಾನನೆಂಬವನು ॥ ೪೩

ಉತ್ತಮಾಶ್ವಗಳಂಟು ಸಾಸಿರ ಗಜವಿ
ಪ್ಪತ್ತು ಕಾಲಾಳಿನ ನೆರವಿ ।
ಹತ್ತು ಸಾವಿರ ವೆರೆದಿಹ ಪೌಜ ತೋರಿದ
ಮತ್ತಾಗ ಬಲವಂತ ಖಾನ ॥ ೪೪

ಬಿರುದಿನ ಡಾಲ ರಾವ್ರುತರೆಂಟು ಸಾವಿರ
ತುರಗವನೇರಿ ಯ್ಯೆತರಲು ।
ಕರಿ ಮೂವತ್ತರಿಂದಿಪ ಪೌಜ ತೋರಿದ
ಧುರ ಧೀರ ಮುಸ್ತಪ ಖಾನ ॥ ೪೫

ತುರಗ ಸಾಸಿರವಾರು ಮದ ಕರಿ ಯಿಪ್ಪತ್ತು
ವರ ಧೀರರೆಂಟು ಸಾಸಿರದ ।
ಪರಿವಿಡಿಯಹ ಪೌಜ ಖಾನಗೆ ತೋರಿದ
ನೆರೆ ಕಲಿ ಯಬುದುಲ್ಲ ಖಾನ ॥ ೪೬

ಪ್ರಕಟಿತಮಹ ತೇಜಿಗಳಾರು ಸಾವಿರ
ಸಕಲಾತಿಯ ರಂಜಿಕೆಯ ।
ನಿಕರದ ಕರಿ ಕಾಲಾಳು ಗೂಡಿದ ಪೌಜ
ಯಕಲಾಸ ಖಾನ ತೋರಿದನು ॥ ೪೭

ಹೊಳೆವ ತೇಜಿಗಳಾರು ಸಾವಿರ ಸುಭಟ ಸಂ
ಕುಳವೇಳಂಟು ಸಾವಿರವು ।
ಗುಳ ಬಿಗಿದಾನೆ ಹತ್ತೆಸೆದಿಪ ಪೌಜನಾ
ಬಲವಂತ ಸಹಜಿ ತೋರಿದನು ॥ ೪೯

ಒಡನೈದು ಸಾವಿರ ಹಯ ಕರಿ ಯಿಪ್ಪತ್ತು
ಬಿಡದೊಪ್ಪುತಿಹ ಕಾಲಾಳ ।
ಪಡೆಯೆಂಟು ಸಾವಿರ ಸಹ ಪೌಜ ತೋರಿದ
ಕಡುಗಲಿ ಯಂಬರ ಖಾನ ॥ ೫೦

ಮದ್ದಾನೆ ಹತ್ತು ಕುದುರೆ ಮೂರು ಸಾಸಿರ
ಹೊದ್ದಿದ ಕಾಲಾಳ ನೆರವಿ ।
ಉದ್ಧತವಾರು ಸಾವಿರವಿಹ ಬಲು ಪೌಜ
ಸಿದ್ಧರಹಿಮನು ತೋರಿದನು ॥ ೫೧

ಸೋಜಿಗವಹ ನವ ರತ್ನಾಭರಣದ
ವಾಜಿ ಕಾಲಾಳನೆ ಬೆರದು ।
ಪೌಜ ಖಾನಗೆ ತೋರಿ ಪುಚ್ಛಿಸಿ ಕೊಂಡನಾ
ಖಾಜಿ ಯೇಸಂಬಿನಚ್ಛರಿಯ ॥ ೫೨

ಕುಣಿವ ಕುದುರೆ ನಾಲ್ಕು ಸಾವಿರ ಮದವೆದ್ದ
ರಣಗಲಿ ಯಾನೆ ಯಿಪ್ಪತ್ತು ।
ಗಣನೆ ಯಿಲ್ಲದ ಕಾಲಾಳ ವೋಹರವನು
ಹ್ಹಣದೆ ವೇದೋಜಿ ತೋರಿದನು ॥ ೫೩

ಆಗಸಕಡರುವ ಕುದುರೆ ಸಾಸಿರ ಮೂರು
ಬೇಗದೆ ಮದಜಲ ಗರೆವೆ ।
ನಾಗವಿಪ್ಪತ್ತು ಕಾಲಾಳ ವೋಹರವನು
ರಾಘವೆ ಪಂಡಿತ ತೋರ್ದ ॥ ೫೪

ಮುಂಕೊಂಬು ತೇಜಿ ಸಾಸಿರ ನಾಲ್ಕು ಕಾಲಾಳು
ಶಂಕಿಸಲಾರು ಸಾಸಿರದೆ ।
ಬಿಂಕದ ಕರಿ ಹತ್ತು ಕೂಡಿದ ಬಲು ಪೌಜ
ನಂಕುಶ ಖಾನ ತೋರಿದನು ೯೫

ಸೊಲ್ಲಾಪುರದ ಸಿದ್ದಿ ಮಲ್ಲಿಗೆ ಖಾನನು
ಬಲ್ಲಿದನದ್ದಮ ಖಾನ ।
ಸಲ್ಲಲಿತದ ಜಿಲಹರ ಖಾನರು ಪೌಜ
ನಿಲ್ಲದೆ ತೋರಿದರಾಗ ॥ ೯೬

ಮೊಮ್ಮದ ಖಾನ ಗಲಿಯ ಖಾನ ಸಮೆರನಿ
ಸ್ಸೀಮ ಪತ್ತೆಯ ಖಾನರುಗಳ ।
ಆ ಮೆಹಾ ನನ್ನಿಯಮುಲುಕರು ಖಾನಗೆ
ಪ್ರೇಮದೆ ಪೌಜ ತೋರಿದರು ॥ ೯೭

ನೆರೆ ಗುಜ್ಜರಾತಿ ಕನ್ನೋಜಿ ಖುರೇಸಾನಿ
ಬಿರುದಿನ ವರ ಪಟಾಣಿಗಳು ।
ಹರುಷದೆ ಲೆಕ್ಕವಿಲ್ಲದ ಪೌಜ ಬೇರೆ ಬೇ
ರುರುವಣಿಯಲಿ ತೋರಿದರು ॥ ೯೮

ಕೆಂಗ ಮೆನ್ನೆಯ ಕರ್ನಾಟಕವಾಳುವೆ
ಜಂಗುಳಿ ನೃಪರ ಮಾರ್ಬಲವೆ ।
ಹಿಂಗದೆ ಖಾನನಿಗೊರೆದು ತೋರಿಸುವ ಬೆ
ಡಂಗನದೇನ ಬಣ್ಣಿಸುವೆ ॥ ೯೯

ಇದು ಹರುಪನ ಹಳ್ಳಿಯ ಬಲ ನೋಡಿಂ
ತಿದುವೆ ಸೊಂಡೂರ ಸು ಭಟರು ।
ಇದು ನೆರೆ ಗುಡಿಯ ಕೋಟೆಯ ಸೇನೆ ಯುಜ್ಜೈನಿ
ಯದಟರುಗಳ ಪೌಜ ನೋಡು ॥ ೧೦೦

ರಾಯ ದುರ್ಗದವರಿವರು ಹಟ್ಟಿ ಯೆಲ್ಲಪ್ಪ
ನಾಯಕರವರಿವರೀಗ ।
ಆಯುತ ವಡೆದ ಕುಂದುರುಪಿ ದೊಡ್ಡೀರಿಯ
ಜೇಯರ ಬಲವಿದೆ ನೋಡು ॥ ೧೦೧

ಹಿರಿಯೂರವರು ಮತ್ತಿಗಡದವರಿವರೀಗ
ವರ ಚಿಕ್ಕನಾಯಕ ಪುರದ ।
ಪರಿವಾರವಿದು ತುರುಗೆರೆಯ ಪಾಳ್ಯವಿದೆಂದು
ಹರುಷದೊಳಗೆ ತೋರಿಸಿದ ॥ ೧೦೨

ಇವರೀಗ ಬೀಲೂರವರು ಪಾಲುಪರೆಯವ
ರಿವರೀಗ ನರಸಿಂಹ ಪುರದ ।
ಅವನೀಶನ ಮಾರ್ಬಲವಿದೆ ನೋಡೆಂದು
ವಿವರದೊಳಗೆ ತೋರಿಸಿದ ॥ ೧೦೩

ಬಳಲಾಪುರ ಬಿಜ್ಜಾವರ ಕೋಳಾಲ
ಹೊಳವನಹಳ್ಳಿ ಮುಂತಾದ ।
ಇಳಯಾಣ್ಮರ ತಳತಂತ್ರವಿದಕೊ ನೋಡು
ಪ್ರಳಯದ ಶರಧಿಯಂದದಲಿ ॥ ೧೦೪

ಚಿಕಬಳಲಾಪುರ ಬಾವಲೂರವರಿವ
ರಕಳಂಕ ಹೊಸಕೋಟೆಯವರು ।
ವಿಕಸಿತವಹ ಕಂಗೊಂದಿ ಮಾಸ್ತಿಯ ಭಟ
ನಿಕರವ ನೋಡು ನೀನೆಂದ ॥ ೧೦೫

ಎಂದು ಬಲವ ತೋರಿದ ಕೆಂಗ ಭೂಪನ
ಚೆಂದದೆ ಮನ್ನಿಸುತಾಗ ।
ಕುಂದದೆ ರಣಧೂಳಿ ಖಾನ ಖಾನರುಗಳ
ಬಂಧುರದಿಂದ ಮನ್ನಿಸಿದ ॥ ೧೦೬

ಬಳಿಕೈವೆತ್ತು ಸಾವಿರ ವಾಜಿಗೂಡಿದ
ಬಳ ನಾಲ್ಕು ಲಹ್ಷ ಮೆದ್ದಾನೆ ।
ಫಳಿಲನೊಪ್ಪಿದುವೈನೂರು ಖಾನನ ಬಲು
ತಳತಂತ್ರನನೇ ವೇಳ್ವ ॥ ೧೦೬

ಸುತ್ತಣ ದೊರೆಗಳಂತಲ್ಲ ಮೈಸೂರವ
ರೆತ್ತಿದ ಬಿರುದಿನ ಭಟರು ।
ಕತ್ತಲೆ ಹಗಲಂತಿರುವುದವರಿಗೆ ನೀವು
ಜತ್ತಾಯತದೆ ತೆರಳ್ಂದ ॥ ೧೦೭

ಬಟ್ಟೆಯೊಳಗೆ ಮೈ ಮಿಂದೈದುವರ ಕೈ
ಸಟ್ಟುಗ ಚೂರಿ ಬಾಕಿನಲಿ ।
ಮೆಟ್ಟಿ ಮೂಗರಿದಡಗುವರಂತೆ ನೀವತಿ
ಕಟ್ಟೆಚ್ಚರದೊಳ್ಯದಿರೆಂದ ॥ ೧೦೮

ಎಂದಾಗ ಖಾನ ಖಾನರಿಗೆಚ್ಚರ ಪೇಳಿ
ಮುಂದಣ ಕೂಳ ಪಾಳ್ಯಕೆ ।
ಸಂದಿಸಿ ಕುದುರೆಯ ಕಾವಲ ಖಾನನ
ಲ್ಲಿಂದ ತೆರಳಲನುಗ್ಯೆದ ॥ ೧೦೯

ಒಡನಾಗ ಬೇಹಿನವರು ಖಾನ ಬರುವುದ
ಗಡಿಯ ಮನ್ನೆಯರಿಗರುಹಲು ।
ಪ್ರೌಢವಿಪ ನರಸ ರಾಜೇಂದ್ರನ ದಳವಾಯಿ
ಯೆಡೆಗಟ್ಟಿದರು ಬೇಗ ಚರರ ॥ ೧೧೦

ಬಂದು ಚರರು ದಳವಾಯಿನಂಜೇಂದ್ರನ
ಸಂದಿಸಿ ಕೊಂಡು ಬೇಗದಲಿ ।
ನಿಂದಾಗ ಕರ ಪುಟಾಂಜಲಿಯಿಂದ ಬಿನ್ನೈಸು
ವಂದವನೇನ ಬಣ್ಣಿಸುವೆ ॥ ೧೧೦

ಜೀಯ ಚಿತ್ತೈಸು ಬಹುಳ ಬಲ ಸನ್ನಾಹ
ದಾಯತದಲಿ ನಮ್ಮ ಮೇಲೆ ।
ಓಯಾರವೆರಿಯದೆ ಖಾನ ದಂಡೆತ್ತಿ ನಿ
ರ್ದಾಯದಿಂದೈತಂದನೀಗ ॥ ೧೧೩

ಬಂದೀಗ ರಾಮೆ ಗಿರಿಯ ದುರ್ಗದೊತ್ತಿನ
ಮುಂದಣ ತೊರೆಯ ದಂಡೆಯಲಿ ।
ನಿಂದನು ಖಾನ ಖಾನರ ಪೌಜು ಲೆಕ್ಕಿಸ
ಲಿಂದು ಶೇಷರಗಳವಲ್ಲ ॥ ೧೧೪

ಆವ ದಿಕ್ಕಿನಲಿ ನೋಡಲು ವಾಜಿ ವಾರಣ
ತೀವಿದ ಕಾಲಾಳ ಮೊತ್ತ ।
ಭೂ ವಳಯವ ಮುಸುಕಿದೆ ಕಾರ್ಯವಿದೆನು
ದೇವರರಿವಿರೆಂದರವರು ॥ ೧೧೫

ಬಂದೊಡೇನಾಯ್ತು ನಿಮ್ಮಯ ದುರ್ಗಗಳನೆಚ್ಚ
ರಿಂದ ಕಾದಿರಿ ಯೆಂದವರ ।
ಅಂದು ಬೀಳ್ಕೊಟ್ಟು ತನ್ನೊಡೆಯನಿದ್ದೆಡೆಗೈ
ತಂದನು ದಳ ಪತಿ ಯಾಗ ॥ ೧೧೬

ದೊರೆ ರಾಯನರಮನೆಯೊಳ ಬಾಗಿಲ ಕಾವ
ಪಿರಿಯಳು ದಾದಿ ಯೊರ್ವಳನು ।
ಬರಿಸಿಕೊಂಡತಿ ಬೇಗದಲಿ ರಾಜ್ಯ ಕಾರಿಯ
ದಿರವ ಬಿನ್ನೈಸಿ ಕಳುಹಿದ ॥ ೧೧೭

ಮಿರುಪ ರತ್ನದ ಶಾರದಾ ಮಂಟಪದೊಳು
ವರ ಹಂಸ ತೂಳ ತಲ್ಪದಲಿ ।
ತರುಣಿ ರನ್ನೆಯರ ವಿದ್ಯಾ ವಿನೋದದೊಳಿಹ
ಧರಣೀಶನ ಕಂಡಳವಳು ॥ ೧೧೮

---

* ಪಿರಿದಾದ.

ಕಾಣುತ ಕರ ಕಮಲವ ಮುಗಿದವಳಾಗ
ಕ್ಷೋಣೀಶನ ಸಮ್ಮುಖದಲಿ ।
ಮಾಣದೆ ದಳವಾಯಿ ಬಿನ್ನೈಸಿ ಕಳುಹಿದ
ವಾಣಿಯ ನುಡಿದಳಿಂತೆಂದು ॥ ೧೦೯

ಚಿತ್ತೈಸು ರಿಪು ರಾಜ ತಿಮಿರ ಮಾರ್ತಂಡ ಭೂ
ಪೋತ್ತಮ ಕದನ ಪ್ರಚಂಡ ।
ಮೊತ್ತದ ಬಲ ಗೂಡಿ ರಣಧೂಳಿ ಖಾನ ದಂ
ಡೆತ್ತಿದ ನವ್ಮ ಮೇಲಂತೆ ॥ ೧೧೦

ಹರಿಯಹ್ಲನ ಕೂಡೆ ಕದನವ ಗಂಟಿಕ್ಕಿ
ಕರಿ ಕಲಭವು ಜೀವಿಪುದೆ ।
ದೊರೆ ರಾಯ ನಿನ್ನ ಪ್ರತಾಪದೇಳ್ಗೆ ಮಿಕ್ಕ
ಧರೆಯರಿ ನೃಪರಿದಿರಹರೆ ॥ ೧೧೧

ದಳ ಪತಿ ಯಿಂ ಕಾರ್ಯದಿರವ ನಿನ್ನಯ ಪಾದ
ನಳಿನಕ್ಕೆ ಬಿನ್ನೈಸೆಂದು ।
ಬಳಿಕೆನ್ನ ಕಳುಪಿಸಿ ಚಿತ್ತೈಸಿ ರಿಪು ಪಾಯ
ದಳವ ಭೂತಕೆ ಬಲಿ ಯಿಕ್ಕು ॥ ೧೧೨

ಬಳಿಕವಳಾಡಿದ ನುಡಿಯ ಕೇಳುತ ಕಂಬ
ದೊಳಗೆ ಪುಟ್ಟಿದ ನರ ಹರಿಯ ।
ಮುಳಿಸ ತಳೆದು ಮಿಸೆಗಳ ಮೇಲೆ ಬೆರಳಿಟ್ಟು
ಜಳಿಪಿಸಿದನು ಖಂಡೆಯವ ॥ ೧೧೩

ಒಡನೆ ಪ್ರತಾಪದೇಳಿಗೆಯ ಕೇಸರಿ ಯೆನೆ
ಕಡೆ ಗಣ್ಣು ಗಳು ಕೆಂಪು ಸೂಸೆ ।
ಕುಡಿ ಮಿಸೆ ಕುಣಿಯಲು ಕೋಪದೆ ನರಸೇಂದ್ರ
ತಡೆಯುದ್ಧತಂದನೇ ವೇಳ್ವ ॥ ೧೧೪

ಓಲಗದಬಲೆಯರನು ಬೀಳ್ಕೊಟ್ಟು ಚೆ
ಕ್ಕೊಳಗದವರೊಡಗೂಡಿ ।
ಲೀಲೆಯಿಂ ನರಸಿಂಹನಂತೈದಿದ ರತ್ನ
ಡಾಳಪ್ರೋಲಗದ ಚಾವಡಿಗೆ ॥ ೧೮೫

ನರಸ ರಾಜೇಂದ್ರನ ಕಲಿತನದಾಟೋಪ
ದಿರವನೀಕ್ಷಿಸಿ ಮನದೊಳಗೆ ।
ಹರುಷದೆ ದಳವಾಯಿ ಕರ ಕಮಲವ ಮುಗಿ
ದರಸನ ಕೆಲ ಸಾರ್ದನಾಗ ॥ ೧೮೬

ಒಡನಾಗ ಮನ್ನೆಯ ಮಂಡಲಿಕರುಗಳು
ಪೊಡವೀಶಗೆ ಕೈಯ ಮುಗಿದು ।
ಎಡ ಬಲವೆನು ಸಾರಿರಲಾ ಭೂಪತಿ
ನುಡಿದ ನಂಜೇಂದ್ರಗಿಂತೆಂದು ॥ ೧೮೭

ಬಂದನೆ ಖಾನ ತನ್ನೊಡೆಯ ಪಾತ್ಸಾ ಹ್ಯವುಗೆ
ಕುಂದಳಿ ಜಸ ಪಿರಿದಾಗಿ ।
ಮುಂದೈದುವ್ರದನರಿಯದೆ ನಮ್ಮ ಕೆಣಕಿದ
ನೆಂದವನೀಶ ಗರ್ಜಿಸಿದ ॥ ೧೮೮

ಪಟ್ಟಣ ಮೊದಲಾದ ಗಡಿಯ ದುರ್ಗಂಗಳ
ಗೊಟ್ಟಿಸಿ ಸಂವರಣೆಗಳ ।
ಕಟ್ಟಿಚ್ಛರೊಳಿರಿಸೆಂದು ನಂಜೇಂದ್ರಗೆ
ಸೃಷ್ಟೀಶ್ವರ ನೇಮಿಸಿದ ॥ ೧೮೯

ಒಡೆಯನಾಜ್ಞಾಪನೆಯನು ಸಿರದೊಳು ತಾಳಿ
ಪೊಡವಿಪ ನಂಜರಾಜೇಂದ್ರ ।
ಬಿಡದಾಗ ಗಡಿ ದುರ್ಗ ಪಟ್ಟಣಕಾ ಹ್ಷಣ
ಕಡು ಸಂವರಣೆಗೊಳಿಸಿದ ॥ ೧೯೦

ಮೊಗಿಲ ಮುಟ್ಟುವ ಕೋಟೆಯ ತೆನೆಯೆಡೆ ಯೆಡೆ
ಹೊಗರೆದ್ದ ದಸಿ ಮೊನೆ ಶೂಲ ।
ಝಗಝಗಿಸುವ ಹೇರಿಟ್ಟಿ ಮರುಳುಗೈಗ
ಳುಗುಳುತಿರ್ದುವು ಕೆಂಗಿಡಿಗಳ ॥ ೧೩೧

ಭೂರಿ ಭೀಕರ ವರಾಹನ ತಲೆ ಸಿಲುಕಿಟ್ಟಿ
ಪೂರೈಪ ವಿಷದ ಚೀಕ್ರೊಳವೆ ।
ಮಾರಿ ಮೊಗದ ಡೆಂಕಣಿ ಮೆಸೆದಲಗುಗ
ಳ್ತೋರಿದುವತಿ ಭಯಾಂಕುರವ ॥ ೧೩೨

ಕರಿಯ ಮದ್ದಿನ ಪೊಟ್ಟಣ ಕಟ್ಟಿದಂಬಿನ
ಹೊರೆ ಪುರಿ ಮೆರಳಿನ ರಾಶಿ ।
ಅರೆದ ಸಾಸವೆ ಗೊಡ ಕಾದಡವಿಯ ಬಹು
ಹರವಿಗಳೊಪ್ಪಿದುವಾಗ ॥ ೧೩೩

ಚೇಳು ಬಾಣಗಳ ರಾಟಳ ವುಪ್ಪಿನ ತಿತ್ತಿ
ಸಾಲು ವಿಡಿದ ಕವೆ ಗೋಲು ।
ಬೇಳುವೆಗಳ ಭಸ್ಮದ ಕೊಪ್ಪರಿಗೆಯು
ಸಾಲೊಪ್ಪಿದುವು ದುರ್ಗದೊಳಗೆ ॥ ೧೩೪

ಎತ್ತುಗಲ್ಲುಗಳೇರುಗಲ್ಲು ಕಣಿಣೆಗಲ್ಲು
ಬಿತ್ತರದರೆಗಲ್ಲುಗಳು ।
ಮೊತ್ತದಸಿಯು ಕಲ್ಲು ಕೊರಳಿಗೆ ಬೀರುವ
ಜೊತ್ತಿಗೆ ಮೆರೆದುವರ್ತಿಯಲಿ ॥ ೧೩೫

ಸಾಲು ವಿಡಿದ ಕೊತ್ತಳ ಕುಟ್ಟಿನುಗಳ
ಮೇಲೊಪ್ಪುವ ಶತಘ್ನಿಗಳು ।
ಕಾಲನ ದಂಡದಂದದ ಕೈ ಗುದಿಗೆಯು
ಪೇಳಲಳವೆ ದುರ್ಗದೊಳಗೆ ॥ ೧೩೬

ಚೋರ ಕಂಡಿಗಳಂಬು ಕಂಡಿಗಳೊಳು ಗುರಿ
ಯೇರಿಸಿ ಮೆರೆವ ಕೈಗೋಪಿ ।
ನೀರ ತುಂಬುವ ದಿಡ್ಡಿಯೊಳ ಸುರಂಗ ದ್ವಾರ
ತೋರಿತು ಕಣ್ಗೆ ಕೌತುಕವ ॥ ೧೫೬

ದುರವ ಜಯಿಸುವೊಡೆ ಬಳಿಕ ತನ್ನಯ ಪ್ರಭು
ಗರುವ ಮನ್ನೆಯ ಮಂಡಲಿಕರ ।
ಕರಿಸಿಯಲ್ಲಲ್ಲಿಗೆ ಕಾಹ ಬಲಿದು ಸಂ
ವರಣೆ ಗೈಸಿದನಧಿಕದೊಳು ॥ ೧೫೭

ಅಗಳಾಳ್ವೀರಿ ಕೊತ್ತಳ ಹುಲಿ ಮುಖದೊಳು
ಜಗಳಂಕೆಯ ಬಲ್ಲ ಭಟರ ।
ಮಿಗೆ ಬಲಿದಾಗ ದುರ್ಗದ ಸಂವರಣೆಯ
ಬಗೆಯ ಬಿನ್ನೈಸಿದ ನೃಪಗೆ ॥ ೧೫೮

ಪ್ರಳಯ ಕಾಲದ ರುದ್ರ ಮೂರ್ತಿಯ ಕೋಪದ
ಜ್ವಾಲನವೊ ಕಂಬದಿಂದೊಗೆದ ।
ಸುಲಲಿತ ನರಸಿಂಹನ ಶೌರ್ಯದೇಳಿಗೆ
ಯಳವೆನೆ ದುರ್ಗವೊಪ್ಪಿಪುದು ॥ ೧೫೯

ಹೊಡೆವ ಹೆಬ್ಬರೆ ಜಾವಗಹಳ ತಂಬಟೆಗಳ
ಕಡುರವ * ವೊಳರು ಗುದಿಗೆಯ ।
ಜಡಿವ ದನಿಗಳಿಂದ ತಳವಾರರುಗಳ
ಪಡೆ ತಿರುಗುವುದು ದುರ್ಗದಲಿ ॥ ೧೬೦

ಕರದಲ್ಲಿ ಪಿಡಿದ ಗುರಾಣಿ ಕೈಗತ್ತಿಯ
ಗರುವೆ ಮನ್ನೆಯರ ಸಂದಣಿಯ ।
ಪರಿವಿಡಿಯಿಂದಲಾ ದುರ್ಗ ನೋಳ್ಪರ ಕಣ್ಗೆ
ಪಿರಿದು † ಭೀತಿಯನು ಪುಟ್ಟಿಸಿತು ॥ ೧೬೧

* ವಲುರು. † ಭೀಕರವ.

ಹಗಲು ಪಂಜಿನ ಬಿರುದಿನ ಸುಭಟರು ನೆರೆ.
ಜಗಜಂಪಿನ ಸತ್ತಿಗೆಯ ।
ವಿಗಡ ವಿಗ್ರಹ ವೀರರುಗಳಾ ದುರ್ಗವ
ಮಿಗೆ ಕಾದಿಹರೇ ವೇಳ್ವ ॥ ೧೪೩

ಕರಡಿಯ ಮೈ ಜೋಡು ಕಾರ್ಪಾಸ ಕುಪ್ಪಸ
ಬಿರುದಿನ ತೋಳ ಪಾವಡೆಯ ।
ದುರ ಗಲಿಗಳು ದುರ್ಗದಾಳ್ವೀರಿಯ ಮೇಲೆ
ಪರಿ ಕೋಭಿಸಿದರುಬ್ಬಿನಲಿ ॥ ೧೪೪

ಚಿನ್ನದ ಹರಡೆ ಬೆಳ್ಳಿಯ ಕಟ್ಟು ಮುತ್ತುಗ
ಳುನ್ನತ ಕುಚ್ಚಿನಿಟ್ಟಗಳ ।
ಸನ್ನಾಹದ ಬಲು ಭಟರು ಕೋಟೆಯನ
ತ್ಯುನ್ನತದಲಿ ಕಾದಿಹರು ॥ ೧೪೫

ಜವೆ ದಾಡೆ ಜಲ್ಲಿಯ ಬಿಲ್ಲು ಕೈಗತ್ತಿಯ
ಬವರಿಗರತಿ ಹರುಷದಲಿ ।
ತವಕದೊಳಾ ದುರ್ಗದ ಕೋಟೆಯ ಸುತ್ತ
ಸು ವಿಲಾಸದೊಳೊಪ್ಪಿಹರು । ೧೪೬

ಬರೆಗಳನುಗಿದ ಖಂಡೆಯ ಕೈ ಸುರಗಿಯ
ಸೊರಟಿಯ ಕತ್ತಿ ಬಾಕುಗಳ ।
ಪರಿವಿಡಿಗಾರರು ಪುರದಾಳುವೇರಿಯೊ
ಳ್ಪರಿಸುತಿರ್ದರು ಮೊತ್ತದಿಂದ ॥ ೧೪೭

ಜಾಡಿಯ ಹರಿಗೆ ಸಿಂಗಾಡಿ ಕರಾಚೂರಿ
ನೀಡುವ ಬಾಳುಗತ್ತಿಗಳ ।
ಪಾಡು ಪಂಥದ ಸು ಭಟರು ಕೋಟೆಯನಾಗ
ರೂಢಿಯೊಳಗೆ ಕಾದಿಹರು ॥ ೧೪೮

ನರ ರೂಪ ತಾಳಿದ ನರ ಸಿಂಹ ಮೂರ್ತಿಯ
ಪುರವ ನಿಟ್ಟಿಸಿ ನೋಡುವೊಡೆ ।
ನೆರೆ ಮುಖಾಬ್ಜಗಳೊಳು ಪದಿನೈದು ಕಣ್ಣಳ್ಳೆ
ಗರಿದು ಮಿಕ್ಕವರ ಪಾಡೇನು ॥ ೧೪೯

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನುಬಂಧಿ ॥ ೧೫೦

೧೧ನೆಯ ಸಂಧಿ ಸಮಾಪ್ತಂ

ಹನ್ನೆರಡನೆಯ ಸಂಧಿ.

ಶ್ರೀರಂಗ ಪಟ್ಟಣದ ಮುತ್ತಿಗೆ

ಸೂಚನೆ ॥ ಧರೆಯೊಳಧಿಕ ಶ್ರೀ ರಂಗ ಪಟ್ಟಣವನು
ದುರಗಲ ಖಾನ ಮುತ್ತಿದನು ॥

ಪುಂಡರೀಕನ ತನುಜನ ತಾಯ ತಮ್ಮನ
ಮಂಡೆಯೊಳಾಂತ ಮಹಿಮನ ।
ಹೆಂಡತಿಯಾನುಜನ ಸನ್ಮಾನವ ಕೈ
ಕೊಂಡನೊಡೆಯ ಸಲಹೊಲಿದು ॥ ೧

ಇತ್ತಲಾ ರಣ ಧೂಳಿ ಖಾನ ತನ್ನಯ ಪ್ರೌಢ
ನೊತ್ತಾಯದಲಿ ಕೂಡಿಕೊಂಡು ।
ಮುತ್ತಿಗೆ ಯಿಕ್ಕುವ ಭರದಲಿ ಶ್ರೀರಂಗ
ಪತ್ತನಕ್ಕೈತಂದನಾಗ ॥ ೨

ತುರಗ ನಿಕರ ಸಾಲು ದೆರೆ ಮದ ಗಜಗಳು
ಗಿರಿ ಡಾಳಿಪ ಚಾಮರಾಳಿ ।
ಮೆರೆವ ಶಫರಿ ಜೆಳ್ಳೂಡೆ ನೊರೆ ಯೆನೆ ಬಲ
ಶರಧಿ ಯೈತಂದುದೇ ವೇಳ್ವ ॥ ೩

ಮೊರೆವ ವಾದ್ಯದ ರವೆ ಘನ ಗರ್ಜನೆ ಕೈಯ
ಸುರಗಿಯ ತೊಳಪು ಮಿಂಚಾಗೆ ।
* ಕರಿಗಳ ಕರಣದ ಜಲ ಸರಿ ಕಾರ್ಗಾಲ
ದಿರವೆನೆ ಸೇನೆ ನಡೆದುದು ॥ ೪

---

* ಕರಿಗಜ.

ತಾರಕಾಸುರನ ಪಡೆಯೊ ಮಹಿಷಾಸುರ
ನಾರುಭಟೆಯೊ ಮೊಬ್ಬಲವೊ ।
ವೀರ ಜಂಭನ ಸೈನ್ಯದಂತೆ ಖಾನನ ಬಲ
ಮೇರೆ ಯಿಲ್ಲದೆ ಬಂದುದಾಗ ॥ ೫

ಪಡೆಯ ಕಾಲ್ದುಳಿಗಾಗ ಗಿಡು ಬಳ್ಳಿ ಪೆಮ್ಮರ
ಪುಡಿಯಾಗೆ ಬಲು ವಾದ್ಯ ರವಕೆ ।
ಒಡೆಯಲು ಬ್ರಹ್ಮಾಂಡ ಚೆನ್ನಪಟ್ಟಣದ ಮುಂ
ಗಡೆ ಬೀಡಿಳಿದನೇ ವೇಳ್ವ ॥ ೬

ಗಜ ಗಳ ಬೃಂಹಿತ ತುರಗ ಹೇಷಾ ರವ
ನಿಜ ಪದಾತಿಯ ಬೊಬ್ಬಾಟ ।
ತ್ರಿ ಜಗವ ಬೆದರಿಪ ಪ್ರಳಯಾಂಬುಧಿರವ
ವ್ರಜಕಿದು ಗುರು ವಾದುದಾಗ ॥ ೭

ಒಕ್ಕಲುದೆಗೆದಿಹ ಪುರ ಪಳ್ಳಿ ಗ್ರಾಮವ
ಹೊಕ್ಕು ಸೂರೆಯನಾಡಿ ಕೊಳುತ ।
ಉಕ್ಕಂದದ ಬಲ ಸಹ ಬಂದು ಪಟ್ಟಣ
ಕಿಕ್ಕಿದನವ ಮುತ್ತಿಗೆಯ ॥ ೮

ದಾಳಿಯ ಕುದುರೆಯಬ್ಬರದ ಕಾಲ್ದುಳಿಯ ಕೆಂ
ದೂಳುಗಳಭ್ರಕುಪ್ಪರಿಸೆ ।
ಪೇಳಲಳವೆ ಬಲ ನಾಲ್ಕು ದೆಸೆಯೊಳಾಗ
ಪಾಳಯವಿಳಿದುದುಬ್ಬಿನಲಿ ॥ ೯

ದ್ವಾರಾವತಿಯನು ಸಾಲ್ವನ ಬಲ ಬಂದು
ಸೇರಿ ಮುತ್ತಿಗೆ ಯಿಕ್ಕಿದಂತೆ ।
ಶ್ರೀರಂಗ ಪಟ್ಟಣವನು ಖಾನ ಮುತ್ತಿಕೊಂ
ಡಾರುಭಟೆಯನೆ ವೇಳ್ವ ॥ ೧೦

ರವಿ ಮಂಡಲವನು ತವೋರಾಶಿ ದೀಪದ
ಸು ವಿಲಾಸವೆ ಪತಂಗಗಳು ।
ಕವಿವೋಲು ಖಾನನ ಬಲ ಪಟ್ಟಣವ ಮುತ್ತಿ
ದವಗಡವನು ಪೇಳ್ವನೇನ ॥ ೧೧

ಐವತ್ತು ಸಾವಿರ ಕುದುರೆ ಯೈನೂರಾನೆ
ತೀವಿದ ಬಲ ನಾಲ್ಕು ಲಕ್ಷ ।
ಭೂವಿಸೆ ಖಾನನ ಬಲ ಪಟ್ಟಣವ ಮುತ್ತಿ
ಹಾವಳಿಯನು ಮಾಡಿದುದು ॥ ೧೨

ಬಳಿಕೊಂದು ಲಕ್ಷ ಮೇರೆಯ ಕರ್ಣಾಟಕ
ಬಲ ಸಹ ಪೂವೆಲಪನುವೆ ।
ಫಳಿಲನೆ ಖಾನನ ನೇಮದೆ ತೆಂಕಣ
ಹೊಳೆಯ ತಡಿಯ ಬೀಡ ಬಿಟ್ಟ ॥ ೧೩

ಸೊಕ್ಕಿದ ವೊರಸರ ಬೇಲೂರವರ ಬಲ
ಲೆಕ್ಕವಿಲ್ಲದೆ ನಡೆತಂದು ।
ಗಕ್ಕನೆ ಖಾನನ ನೇಮದೆ ಪಾಳಯ
ವಿಕ್ಕಿತು ಬಡಗ ದಿಕ್ಕಿನಲಿ ॥ ೧೪

ಎಲ್ಲಿ ನೋಡಲು ಗುಡಿಗೂಡಾರ ಹಯ ಶಾಲೆ
ಯೆಲ್ಲಿ ನೋಡಲು ಗಜ ಗೇಹ ।
ಎಲ್ಲಿ ನೋಡಲು ನಾನಾ ವಾದ್ಯದ ಬಲು
ಘಲ್ಲಣೆ ಯಲ್ಲದೊಂದಿಲ್ಲ ॥ ೧೫

ತಳ ಮುಳು ವೇಲಿ ಮರದೆ ಪಿರಂಗಿಗಳಿಗಾ
ಗಳವಟ್ಟ ತವಗ ಸುರಂಗ ।
ಬಳಸಿ ಯೊಪ್ಪಿದುವಾ ಕೋಟೆಯಗಳ ಹೊರ
ವಳಯದೊಳತಿ ಚೋದ್ಯವಾಗಿ ॥ ೧೬

ಇಡುವ ಪೆಟ್ಟಲು ಮೇಲಕೇಳುವ ಬಾಣಗ
ಳೂಡನೆ ಸಿಂಗಾಡಿಯಂಬುಗಳು ।
ಕಡು ಭೀಕೃತಿ ಯೆಸೆದುವು ನೋಳ್ಪರಿಗಾಗ
ಬಿಡದಚ್ಚರಿ ಪುಟ್ಟುತಿರಲು ॥ ೧೭

ನಿಟಿಲಾಹ್ವನ ಕಣ್ಗಿಚ್ಚಿನ ಕಿಡಿಗಳಾ
ರ್ಭಟೆಯಂತೆ ಭೋರ್ಗರೆದಾಗ ।
ಘಟ ಶತಘ್ನಿಗಳ ಗುಂಡುಗಳುರಿ ಮೇಲಕೆ
ಪುಟವೆದ್ದು ನಡೆದುವೇ ವೇಳ್ವ ॥ ೧೮

ಕೋಟೆ ಕೊತ್ತಳಗಳ ತಾಗಿ ಕೆಂದೂಳ್ಪಹ
ದಾಟಿ ಪಾಯುವ ಶತಘ್ನಿಗಳ ।
ಮಿಂಟಿನ ಗುಂಡುಗಳೆಸೆದುವುಳ್ಕಾ ಪಾತ
ದಾಟವ ತೋರಿಸುತಾಗ ॥ ೧೯

ಇಡುವ ತುಪಾಕಿಯ ಗುಂಡುಗಳೆಲ್ಲಕೆಂ
ಪಿಡಿದೈದಿ ಬರುವ ಬಲಳ್ಳಿವೆ ।
ಬಡನಾಗ ಸಂಜೆ ದಾರಗೆ ಮೂಡಿ ಭೂಮಿಗೆ
ಸಿಡಿದೈತರುವೊಲೊಪ್ಪಿದುದು ॥ ೨೦

ಚೂಳಿಯ ಭಟರ ಕೈಯಿಂದ ಭೋರ್ಗರೆದೈದಿ
ಮೇಲಕ್ಕೈದುವ ಬಾಣಗಳ ।
ದಾಳಿಯೊಪ್ಪಿದುದಾ ಗಗನ ಮಂಡಲವನು
ಕೀಲಿಸಿಕೊಂಡದೇ ವೇಳ್ವ ॥ ೨೧

ಕಡುಹಿನ ಸಿಡಿಲ್ಕುಡುಹಿನ ಸಲಿಗೆಗಳಾಗ
ಳೂಡನಂಬರಕೇಳ್ವಂತೆ ।
ಬಿಡದೆ ಸುಭಟರೆಚ್ಚ ಸಿಂಗಾಡಿಯಂಬುಗಳ್
ನಿಡು ರಭಸದೊಳ್ಕೈದಿದುವು ॥ ೨೨

ಊರೊಳಗಣ ಪಟು ಭಟರ ಪೆಟಲ ಗುಂಡು
ಭೋರನೈತಹ ಬಾಣಗಳು ।
ಸೇರಿದ ಹೊರ ಪಾಳಯದ ಮಂದಿಯನಾಗ
ಗೋರುಗೊಳಿಸದುವದ್ಭುತದೆ ॥ ೬೩

ಚಲದಂಕ ರಿಪು ವಾರಿಧಿ ಬಡಬೋದಮ
ವಿಲಸಿತ ಕೀರ್ತಿ ಪ್ರತಾಪ ।
ಜಲಜ ಬಾಂಧವ ತೇಜ ಕಂಠೀರವೇಶ್ವರ
ಬಲವ ನೋಡುವೊಡೈತಂದ ॥ ೬೪

ಪುರವ ಮುತ್ತಿದ ಜರಾಸಂಧನ ಬಲವನು
ಮುರ ವೈರಿ ನಿಟ್ಟಿಸುವಂತೆ ।
ದೊರೆ ರಾಯ ನರಸ ರಾಜೇಂದ್ರ ಸಂತಸದಲಿ
ತುರುಕರ ನೋಡಲೈತಂದ ॥ ೬೫

ಮುತ್ತಿದ ರಿಪು ಹಿರಣ್ಯಕನ ಮೊರ್ಬಲವನು
ಮತ್ತಾಗ ನರ ಸಿಂಹ ಮೂರ್ತಿ ।
ಅರ್ತಿಯಿಂ ನೋಳ್ಪಂತೆ ನರಸ ರಾಜೇಂದ್ರಭೂ
ಪೋತ್ತಮ ನೋಡಲೈತಂದ ॥ ೬೬

ಬಿರುದಿನ ತಾಲು ಡಮಾಮಿ ನಾನಾ ವಾದ್ಯ
ದುರು ಘೋಷಕೆ ದೆಸೆ ದೆಸೆಯ ।
ನೆರೆ ತೀವೆ ಮಕರ ಟಿಕ್ಕೆಯದ ಸಾಲುಗಳಿಂದ
ಸಿರಿಧರನೊಲು ನಡೆತಂದ ॥ ೬೭

ಎಡ ಬಲದೊಳಗೆ ಸಿಂಗರದಂಗನೆಯರು
ಪಿಡಿದು ಚಾಮರವ ಢಾಳಿಸಲು ।
ಕುಡು ವಿಲ್ಲ ಸಮ ರೂಪ ಕಂಠೀರವೇಂದ್ರ ಬ
ಲ್ಗಡಗರದೊಳೈತಂದ ॥ ೬೮

ಹೊಳವ ಮುತ್ತಿನ ಸತ್ತಿಗೆ ಸಾಲುಗೊಂಡಿಹ
ತಳತಳಿಪಾಲವಟ್ಟಗಳ ।
ನೆಳಲೊಳು ವೀರುಪಾವಡೆಯ ಸಂಭ್ರಮದಿಂದ
ಲಿಳಯಾಣ್ಮ ನಗುತೈತಂದ ॥ ೮

ನವ ರತ್ನದ ಪಲ್ಲಕ್ಕಿಯ ದೀಧಿತಿ
ತವೆ ಮುಸುಕಲು ದಿಕ್ತಟವ ।
ಭುವನೇಶ ಚಿಂತಾಮಣಿ ನಗುತೀರಿಯು
ತ್ಸವದೊಳೈತಂದನೇ ವೇಳ್ವ ॥ ೯

ನೊಸಲ ಕತ್ತುರಿಯ ತಿಲಕದ ಮೆನ್ನೆಯರುಗ
ಳಸದಿರಲೆಡ ಬಲದೊಳಗೆ ।
ವಸುಧೀಶ ಕುಲ ಕಲಶಾಬ್ಧಿ ಚಂದ್ರಮ ರಂ
ಜಿಸುತೈತಂದನುಬ್ಬಿನಲಿ ॥ ೧೦

ಚಿನ್ನದ ಹರಡೆ ಬೆಳ್ಳಿಯ ಕಟ್ಟಿನ ಸಾಲಿ
ನುನ್ನತ ನೇಜಯದವರ !
ಸನ್ನಾಹದ ಸಂಭ್ರಮದಲ್ಲಿ ನಡೆತಂದ
ಚೆನ್ನಿಗ ನರಸ ರಾಜೇಂದ್ರ ॥ ೧೧

ಹರಿದಿಯರ್ಗರಿಪಿ ಕಳಿಕನ ಹೂವಿನ ಕುಚ್ಚಿ
ನುರುವೆ ಸಬಳದಾಳುಗಳ ।
ನೆರವಿಯೊಳತಿ ಸಂಭ್ರಮದೆ ಕಂಠೀರವ
ನರಸ ರಾಜೇಂದ್ರನೈತಂದ ॥ ೧೨

ಉಡಿಯ ಪಟ್ಟಿಯ ದಟ್ಟಿ ಬೆನ್ನ ಜಲ್ಲಿಯ ವೀರ
ರೆಡಬಲದೊಳಗೈತರಲು ।
ಪೊಡವಿಪ ನರಸ ರಾಜೇಂದ್ರ ಮುತ್ತಿದ ಖಳ
ಪಡೆಯ ನೋಡುವೊಡೈತಂದ ॥ ೧೩

---

* ಹರಿಬಿಯಗರಂಪ,

ಕವಿಯೊಳೊಪ್ಪುವ ನಾಗರ ಪಣಿ ಹೊಸಹೊನ್ನ
ಸವಡಿ ದಾರದ ಕೊರಳುಗಳ ।
ನವ ರತ್ನ ಭೂಷಣದಾಳ್ಗಳ ಮೇಳದೆ
ಭುವನೇಶ್ವರನೈತಂದ ॥ ೩೫

ಹಳದಿಯ ತೋಳ ಪಾವಡೆ ಹೀಲಿಯ ಜಲ್ಲಿ
ಬೆಳಗಿಡುವಾಭರಣಗಳ ।
ತುಳಲಾಳ್ಗಳ ಮೇಳದೊಳಗೆ ಭೂಭುಜ ಕುಲ
ತಿಲಕನೈತಂದನೇ ವೇಳ್ವ ॥ ೩೬

ಕರಗ ಕಾಳಾಂಜಿ ಹಡಪ ಗಿಂಡಿ ಚಮರವ
ಧರಿಸಿದೂಳಗದವರಾಗ ।
ಹರುಷದೊಳಿದಿರೊಳೊಪ್ಪಿರೆ ಪೂರ್ಣ ಶಶಿಯಂತೆ
ದೊರೆ ರಾಯ ನಗುತೈತಂದ ॥ ೩೭

ಮಂಗಳಾಷ್ಟಕ ಬಿರುದುಗಳ ಕೊಂಡಾಡುವ್ರು
ತ್ತುಂಗ ಪಾತಕರ ಮೇಳದಲಿ ।
ಕಂಗೊಳಿಸುವ ಬಾಗಿಲ ಸೆಜ್ಜೆಯ ಮೇ
ಲಂಗಜ ರೂಪ ರಂಜಿಸಿದ ॥ ೩೮

ಬಳಿಕ ಕಂಠೀರವ ರಾಜೇಂದ್ರ ಚೌ ದೆಸೆ
ಯೊಳಗೆ ರಾಜಿಪ ಖಡ್ಗ ಬಲವ
ತಳುವದೆ ದಿಟ್ಟಿಸಿ ತನ್ನಾಪ್ತ ಮಂತ್ರಿಯ
ಗಳಿಲನೆ ಬೆಸಗೊಂಡ ನಗುತ ॥ ೩೯

ತಾರಕಾಸುರನಂತೆ ಹಯ ಮೋಹರದೊಳಿಹ
ನಾರುಸಿರೆಲೆ ಮಂತ್ರೀಶ ।
ಕಾರುಣ್ಯ ಮೂರ್ತಿ ಚಿತ್ತೈಸಿವೆ ಸಂಗರ
ಶೂರನು ರಣಧೂಳಿ ಖಾನ ॥ ೪೦

ಧುರ ಧೀರ ರಣಧೂಳಿ ಖಾನನ ಪೌರುಷ
ದಿರುವಿಕೆಯನು ನೋಡಿ ನಗುತ ।
ಸರ ಲಸು ಕರತನವಿತ್ತಾಗ ಪಾತ್ಸ್ಯೈವು
ಪಿರಿದು ಮನ್ನಿಸಿ ಕಳುಹಿದನು ॥ ೪೧

ಆತನಿಗತಿ ಹಿತವೆನಿಸಿ ಸಕಲ ಬಲ
ವ್ರಾತಕೆ ದಳ ಪತಿಯಾಗಿ ।
ಪ್ರೀತಿಯಿಂದೈದಿದ ರಣಧೂಳಿ ಖಾನ ಪ್ರ
ಖ್ಯಾತನಿವನು ಚಿತ್ತೈಸು ॥ ೪೨

ಬಿರುದಿನ ಡಾಳ ಹಯದ ವೊತ್ತದಲಿ ತಮೊ
ಸುರನಂತೆ ಮೆರೆವವನಾರು ।
ನರಸಿಂಹ ಸ್ವಾಮಿ ಚಿತ್ತೈಸು ಖಾನನ ಪಿತ
ಗರುವೆ ಪರಾತನೆಂಬವನು ॥ ೪೩

ದುಸ್ತರ ಬಲ ವಾರಿಧಿಯ ಮಧ್ಯದಲಿ ಪ್ರ
ಹಸ್ತನಂದದೆ ಬಹನಾರು ।
ಹಸ್ತಿ ವರದ ಸುತ ಸಮ ರೂಪ ಚಿತ್ತೈಸು
ಮುಸ್ತಪ ಖಾನನೆನಿಪನು ॥ ೪೪

ಮಹಿಷಾಸುರನಂತೆ ಬಹು ವಾಜಿಗಳ ಸ
ನ್ನಹದೆ ಬರುವನಾರು ಮಂತ್ರಿ ।
ವಿಹರಿಪ ನರ ನಾರಾಯಣ ಚಿತ್ತೈಸು
ಸಹಜೆ ಯೆನಿಸಿಕೊಳ್ವನೀತ ॥ ೪೫

ಬಿಳಿಯ ಸತ್ತಿಗೆಯ ತೇಜಿಗಳ ವೋಹರದೊಳು
ಖಳ ಶುಂಭನಂತಿಹನಾರೊ ।
ಇಳಯಾಣ್ಮ ನರಸ ರಾಜೇಂದ್ರ ಚಿತ್ತೈಸಿವೆ
ಬಲವಂತ ಖಾನನೆನಿಪನು ॥ ೪೬

ಮುಕುರ ಕಟ್ಟಿದ ವದನದ ಸಾಲ ಕುದುರೆಯ
ನಿಕರದೊಳಗೆ ಬಹನಾರೊ ।
ಅಕಳಂಕ ರೂಪ ಕಂಠೀರವ ರಾಜೇಂದ್ರ
ಯಕಲಾಸ ಖಾನನೆಂಬವನು ॥ ೪೩

ಮುಂಕೊಂಬ ಹಯ ವೋಹರದೆ ಶಂಬರಾಸುರ
ನಂಕಿತದಲಿ ಬಹನಾರೊ ।
ಪಂಕಜ ಸಖ ತೇಜ ಚಿತ್ತೈಸಿವನೀಗ
ಳಂಕುಶ ಖಾನನೆಂಬವೆನು ॥ ೪೪

ಯುದ್ಧೋನ್ಮತ್ತ ರಕ್ಕಸನಂದದೆ ಬಲ
ಮಧ್ಯದೆ ಬಹನಾರು ಮಂತ್ರಿ ।
ಉದ್ಧತ ಶೂರ ಕಂಠೀರವ ರಾಜೇಂದ್ರ
ಸಿದ್ಧರಹಿಮೆನುವೆನಿಪನು ॥ ೪೫

ಮೂಕ ದಾನವನಂತೆ ಬಲ ಮಧ್ಯದೊಳಗಿಹ
ಭೀಕರನಾರೊ ಮಂತ್ರೀಶ ।
ಭೂ ಕಾಂತ ನರಸ ರಾಜೇಂದ್ರ ಚಂದ್ರಮ ಕೇಳ
ಯೇಕೋತಸಾರಥಿ ಯಿವನು ॥ ೪೬

ಬಿರುದಿನ ಸಾಲುಗುದುರೆಯ ವೋಹರದೊಳು
ಬರುವವ ನಾರು ಮಂತ್ರೀಶ ।
ನರ ರೂಪ ನರ ಸಿಂಹ ಮೂರ್ತಿ ಚಿತ್ತೈಸಿವ
ಧುರ ಧೀರನದ್ದಮೆ ಖಾನ ॥ ೪೭

ಕಲಹಕಂಜದೆ ಮುಂದುವರಿದ್ಹೈತಹ ಬಲು
ಚಲದಂಕನಾರೊ ಮಂತ್ರೀಶ ।
ಸುಲಲಿತ ಸೋಮ ವಂಶಾಬ್ಧಿ ಚಂದ್ರಮ ಕೇಳು
ಚಿಲಹರ ಖಾನನೆಂಬವನು ॥ ೪೮

ಉನ್ನತ ಹಯ ವೋಹರದಲಿ ಪೌಂಡ್ರಕನಂತೆ
ಸನ್ನಹದಲಿ ಬಹನಾರೊ ।
ಚನ್ನಿಗ ನರಸ ರಾಜೇಂದ್ರ ಚಿತ್ತೈಸಿವ
ನನ್ನೆಯಮುಲಕನೆನಿಪನು ॥ ೫೩

ತುಂಬಿದ ಶುಭ್ರ ವಾಜಿಗಳ ಮಧ್ಯದೆ ಖಳ
ಜಂಭನಂದದೆ ಬಹನಾರೊ ।
ಕುಂಭಿನೀ ಪತಿ ನರಸೇಂದ್ರ ಚಿತ್ತೈಸಿವ
ನಂಬರಖಾನನೆಂಬವನು ॥ ೫೪

ಕಾಲನೇಮಿಯ ತೆರದಲಿ ಶುಂಡಾಲದ
ಮೇಲಿಹನಿವನಾರೊ ಮಂತ್ರಿ ।
ಭೂಲೋಲ ವಂಶ ಚಿಂತಾಮಣಿ ಚಿತ್ತೈಸು
ಕಾಲೆಯಖಾನನೆಂಬವನು ॥ ೫೫

ಉಬ್ಬುಗುದುರೆಗಳ ಸಾಲ ವೋಹರದಲಿ
ಯಬ್ಬರಿಸುವನಿವನಾರೊ ।
ಕೊಬ್ಬಿದ ರಿಪು ಕೋಳಾಹಳ ಚಿತ್ತೈಸು
ಸಬ್ದುಲ್ಲಖಾನನೆನಿಪನು ॥ ೫೬

ಸಾಮಜವೇರಿ ಸತ್ತಿಗೆಯ ನೆರಳಿನಲ್ಲಿ
ಧೂಮೊಹ್ಷನಂತಿಹನಾರೊ ।
ಭೂಮಿಗೆ ಪ್ರತ್ಯಹ್ಷ ನರ ಸಿಂಹ ಚಿತ್ತೈಸು
ಮಾಮುದ್ದ ಖಾನನೆಂಬವನು ॥ ೫೭

ಜರಿ ಟೋಪಿ ದಗಲೆ ಜೋಡಿನ ರಾವುತರ ಮುಂ
ದುರವಣಿಸುವನಿವನಾರೊ ।
ಅರಿ ವಾರಿಧಿ ವಡಬಾನಲ ಚಿತ್ತೈಸು
ದುರಗಲಿ ಘಾಟಿಯಖಾನ ॥ ೫೮

ಸೂಳ್ಪಪ ನಾನಾ ಬಗೆಯ ವಾದ್ಯದ ಬಲು
ಮೇಳದೆ ಬಹನಾರೊ ಮಂತ್ರಿ ।
ಭೂಲೋಲ ನರಸ ರಾಜೇಂದ್ರ ಚಿತ್ತೈಸಿವ
ಗಾಲಿಯ ಖಾನನೆಂಬವೆನು ॥ ೫೯

ಆಗಸಕಡರುವ ಕುದುರೆಯ ವೊತ್ತದೆ
ಬೇಗದೆ ಬಹನಾರೊ ಮಂತ್ರಿ ।
ಭೋಗ ಸುರೇಂದ್ರ ಪರಾಕಿಲ್ಲದೆ ಕೇಳು
ರಾಘವ ಪಂಡಿತನಿವನು ॥ ೬೦

ಹಂಮಿನ ಕುದುರೆಯ ವೋಹರದೊಳಗತಿ
ಸುಮ್ಮಾನದಲಿ ಬಹನಾರೊ ।
ಕಮ್ಮಗಣೆಯನ ಸದೃಶ ರೂಪ ಚಿತ್ತೈಸು
ದುರ್ಮತಿಯೆನಿಪ ವೇದೋಜೆ ॥ ೬೧

ನೇಜಯ ಸಿಂಗಾಡಿ ವಿಡಿದ ರಾವ್ರುತರ ಸ
ಮಾಜದೆ ಬಹನಿವನಾರೊ ।
ರಾಜ ಶೇಖರ ಕಂಠೀರವ ಚಿತ್ತೈಸು
ಖಾಜಿಯನೆನಿಸಿಕೊಂಬವನು ॥ ೬೨

ಪಲ್ಲವ ಸತ್ತಿಗೆ ನೆಳಲೊಳಗೊಪ್ಪುವ
ಬಲ್ಲಿದನಿವನಾರೊ ಮಂತ್ರಿ ।
ಸಲ್ಲಲಿತಾಂಗದ ನರ ಸಿಂಹ ಚಿತ್ತೈಸು
ಮಲ್ಲಿಗೆ ಖಾನನೆಂಬವೆನು ॥ ೬೩

ಉರವಣಿಸುವ ಸಾಲ ತೇಜಿಯ ಬಲುವೊಳ
ಹರದ ಮೆಧ್ಯದೆ ಬಹನಾರೊ ।
ಗರುವ ಪ್ರತಾಪ ರಾಯನು ಚಿತ್ತೈಸಿವ
ದೊರೆಗಳ ನೊಸಲ ತಿಲಕವೆ ॥ ೬೪

ಕಟ್ಟಿದ ಡೊಣೆಯಂಬು ಕೈಯ ಸಿಂಗಾಡಿಯ
ಗಟ್ಟಿಯರಿವರಾರೊ ಮಂತ್ರಿ ।
ಸೃಷ್ಟೀಶ್ವರ ಕಂಠೀರವ ಚಿತ್ತೈಸು
ಪಟ್ಟಾಣಿಯತುಳ ರಾವುತರು ॥ ೬೫

ಕನ್ನೋಜಿಗಳು ಪಂಡಿತರು ಖುರಾಸಾನಿ
ಮನ್ನೆಯ ಗುಜ್ಜರಾತಿಗಳು ।
ಉನ್ನತ ವಡ್ಡಿಯ ರಾವುತರಿವರೀಗ
ಚೆನ್ನಿಗ ನವಸ ರಾಜೇಂದ್ರ ॥ ೬೬

ಹಳದಿಯ ಬಿಳಿಯ ಕುಂಕುಮ ವರ್ಣ ಪಚ್ಚೆಯ
ಸಲೆ ಡಾಳ ತುರಗಗಳಿಂದ ।
ತಳತಂತ್ರದೊಳಗೆ ರಾಜಿಸುತಿಹನಿವನೀಗ
ಳಿಳಯಾಣ್ಮ ಪೂವಲ ಹನುಮ ॥ ೬೭

ಸುರಗಿ ಸಬಳ ಖಂಡೆಯ ಹೇರಿಟ್ಟಿಯ
ಬಿರುದಿನ ಭಟರ ಮೇಳದಲಿ ।
ಭರದಲಿ ಮುಂಬರಿದೆಸೆವವರಿವರೀಗ
ವೊರಸು ಮನ್ನೆಯರು ಚಿತ್ತೈಸು ॥ ೬೮

ಐವತ್ತು ಸಾವಿರ ಕುದುರೆ ಯೈನೂರಾನೆ
ತೀವಿದ ಬಲ ನಾಲ್ಕು ಲಹ್ಷ ।
ಭಾವಿಸೆ ಚೌದೆಸೆಯಲಿ ಬೀಡ ಬಿಟ್ಟಿದೆ
ದೇವರವರು ಚಿತ್ತೈಸು ॥ ೬೯

ಕಡಲ ಜಲೌಘ ಮೇರೆಯ ಮಿಾರಿ ಮೆರೆದೊಡೆ
ಕೊಡನ ಮಗನಿಗದು ಘನವೆ ।
ಬಿಡದೆ ದೇವರ ಪರಾಕ್ರಮದವಾಗ್ನಿಗೆ ಬಲ
ವೊಡನೀಗ ಕಾನನವೈಸೆ ॥ ೭೦

ಸಲೆ ಸಾಳುವನ ವೈರದಲಿ ಬೆಳ್ಳಕ್ಕಿಯ
ಬಳಗ ಮೊಳ್ಪಜ್ಜುಗವೇನು ।
ಅಳವರಿಯದೆ ನಿನ್ನ ಕೆಣಕಿದವರು ಗಾಳಿ
ಯಲೆಗೊಡ್ಡಿದ ದೀಪವೈಸೆ ॥ ೭೧

ಕಂಠೀರವ ರಾಜನಿದಿರಲಿ ಕರಿಗಳ
ಬಂಟಂಗ ಮೆರೆವುದೆ ಸ್ವಾಮಿ ।
ಪಂಠಿಸಿ ನಿಮಗಿದಿರಹರು ದುಷ್ಕೀರ್ತಿಗ
ಳಂಟಿ ನಿರ್ನಾಮರಾಗುವರು ॥ ೭೦

ಎಂದು ಪೌರುಷವ ಬಣ್ಣಿಸಿದ ಮಂತ್ರಿಗಳಿಗಾ
ನಂದದಿಂದುಡುಗೊರೆಯಿತ್ತು ।
ಚಂದದೆ ತನ್ನಯ ದಳ ಪತಿ ವೊಗ ನೋಡಿ
ನಿಂದು ಕೈ ಮುಗಿಯುತಿಂತೆಂದ ॥ ೬೯

ದೇವರ ಪರಿಯಂತೇಕಿವರಿಗೆ ನಿಮ್ಮ
ಸೇವಕ ನಾನಿರುತಿರಲು ।
ತೀವಿ ಕೊಂಡಿಹ ಖಳ ಬಲವ ಸಂಹರಿಸುವ
ಭಾವವ ಚಿತ್ತೈಸೆಂದ ॥ ೬೮

ರಘು ನಾಥನ ಸೇವಕ ಸುಗ್ರೀವಸಂ
ಯುಗದೊಳು ರಾವಣ ಪಡೆಯ ।
ಚಿಗುಳಿದುಳಿದ ತೆರದಲಿ ಕೊಲ್ವೆ ವೀಳ್ಯವ
ಮಿಗೆ ಪಾಲಿಸೆಂದು ಕೈ ಮುಗಿದ ॥ ೬೭

ಎಂದು ನುಡಿದ ದಳ ಪತಿ ವಾಕ್ಯಕೆ ಮನ
ಬಂದು ಸಂತೋಷವ ತಾಳಿ ।
ಅಂದು ಮನ್ನೆಯರನೀಕ್ಷಿಸೆ ಕೈ ಮುಗಿಯುತಿಂ
ತೆಂದು ಪೌರುಷವ ನುಡಿದರು ॥ ೬೬

ಹರನ ಕುಮಾರ ತಾರಕನ ಬಲವ ಹೊ
ಕ್ಕು ರವೆಣಿಸುವ ತೆರದಿಂದ ।
ಮುರಿಯಲಿರಿವೆ ತುರುಕರನೆಂದು ನುಡಿದನು
ಹರದ ಪುರದ ಮನ್ನೆಯನು ॥ ೫೫

ಅನುವೆರಕ್ಕೈದಿದ ಖಾನರ ಪೌರುಷ
ದನುವೆ ಮುರಿದು ರಿಪು ಬಲವೆ ।
ಚಿನ ಕಡಿ ಗೈದೆಬ್ಬಿಸುವೆನೆಂದು ನುಡಿದನು
ಚನ ಪಟ್ಟಣದ ಮನ್ನೆಯನು ॥ ೫೬

ಮುತ್ತಿಗೆಯಿಕ್ಕಿದ ತುರುಕ ಬಲವಮುರಿ
ಯೊತ್ತಿ ಯೋಡಿಸುವೆನೆಂದಾಗ ।
ಸತ್ಯಾಗಾಲದ ಮನ್ನೆಯ ಕೈ ಮುಗಿ
ಯುತ್ತ ಬಿನ್ನೈಸಿದ ನೃಪಗೆ ॥ ೫೭

ಸುಮುಖದೆ ಭೀಮ ಕೌರವ ತಳತಂತ್ರವ
ಕ್ರಮದೊಳು ಸಂಹರಿಪಂತೆ ।
ನಿಮಿಷದೆ ಖಳರ [ಕೊಲ್ಲುವೆನೆಂದು] ಕೋಟೆಯ
ಸಮರ ವಿಕ್ರಮ ಕೈ ಮುಗಿದ ॥ ೫೮

ಕದಳಿಯ ವನವ ಕಾಡಾನೆ ಹೊಕ್ಕಂದದೆ
ಸದೆದೆಬ್ಬಿಸಿ ಖಳ ಬಲವ ।
ಮುದವ ಬೀರುವೆನೆಂದು ಚೆನ್ರಾಯ ಪಟ್ಟಣ
ದಧಟ ಮನ್ನೆಯ ಕೈ ಮುಗಿದ ॥ ೫೯

ನರಸಿಂಹ ಮೂರ್ತಿ ಚಿತ್ತೈಸು ಮುತ್ತಿಗೆ ಯಿಟ್ಟ
ತುರುಕರ ಬಲವ ಸಂಹರಿಸಿ ।
ಬಿರುದ ಮೆರೆವೆನೆಂದು ಬಿನ್ನೈಸಿದನಾಗ
ತುರುಗೆರೆ ಯಾಳ್ವ ಮನ್ನೆಯನು ॥ ೬೦

ಪುರವ ಮುತ್ತಿಗೆಯಿಟ್ಟ ತುರುಕರ ಬಲವನು
ತರಿದೊಟ್ಟ ಬಿರುದಿನಶ್ವಗಳ ।
ಭರದಲಿ ಪಿಡಿದು ದೇವರಿಗೊಪ್ಪಿಸುವೆನೆಂದ
ಪಿರಿಯ ಪಟ್ಟಣದ ಮನ್ನೆಯನು ॥ ೮೩

ಸೃಷ್ಟೀಶ್ವರ ಬಿನ್ನಹ ಬಂದು ಮುತ್ತಿಗೆ
ಯಿಟ್ಟ ತುರುಕರ ಮೊರ್ಬಲವ ।
ಕುಟ್ಟ ಕೋಳಾಹಳಿಸುವೆನೆಂದು ನುಡಿದನು
ಪಟ್ಟಣದಧಿಕಾರಿ ಯಾಗ ॥ ೮೪

ಕಂಗೊಳಿಸುವ ವೀರ ಭದ್ರ ದಕ್ಷನ ಬಲ
ಸಂಘವ ಸದೆವೆಂದದಲಿ ।
ಹಿಂಗದೆ ಖಳರ ಸೀಳುವೆನೆಂದು ಮಳವಳ್ಳಿ
ತುಂಗ ವಿಕ್ರಮ ಬಿನ್ನವಿಸಿದ ॥ ೮೫

ಭೋಗ ಸುರೇಂದ್ರ ಚಿತ್ತೈಸೀ ಖಳ ಬಲ
ಸಾಗರವನು ಕುಂಭಜನ ।
ಆಗಮದಂದದೆ ಬತ್ತಿಪೆ ಕಳುಹೆಂದ
ನಾಗ ಮಂಗಲದ ಮನ್ನೆಯನು ॥ ೮೬

ಘಾಸುರ ನೃಪ ಸಿಂಹ ಚಿತ್ತವಿಸು ಖಳ ತುಪ್ಪ
ರಾಶಿಯ ಪ್ರಳಯ ಮಾರುತನು ।
ಬೀಸಿ ಯೆಬ್ಬಿಸುವೋಲು ತೂರುವೆನೆಂದಾಗ
ಮೈಸೂರಧಿಕಾರಿ ನುಡಿದ ॥ ೮೭

ಹೇಳಲಳವೆ ಕಂಠೀರವ ನರಸೇಂದ್ರ
ನಾಳುವ ಸಕಲ ರಾಜ್ಯಗಳ ।
ಮೇಳದ ಮನ್ನೆಯರುಗಳು ನುಡಿವ ಶೌರ್ಯ
ದೇಳಿಗೆಗಳನೇನನೆಂಬೆ ॥ ೮೮

ಇಂತಪ್ಪ ದುರ ಗಲಿಗಳ ಮನ್ನಿಸುತ ಭೂ
ಕಾಂತ ಕಂಠೀರವೆನಿರಲು ।
ಮುಂತಾಗ ರಣಧೂಳಿ ಖಾನನಟ್ಟಿದ ಭಟ
ರಂತರಿಸದೆ ಬಂದರೊಲಿದು ॥ ೮೯

ಬಂದಾಗ ಖಡ್ಗಾಗ್ರ ಹಸ್ತದೆ ಭೂಪಗೆ
ನಿಂದು ಸಲಾಮನು ಮಾಡಿ ।
ಮುಂದೆ ಕೈವಾರಿಸಿ ಬಿರುದ ಕೊಂಡಾಡಿದ
ರಂದು ಕಂಠೀರವೇಶ್ವರನ ॥ ೯೦

ದೊರೆ ರಾಯ ಸಂಗರ ಶೂರ ಸದ್ಗುಣ ಸಾರ
ಸ್ಮರ ರೂಪ ಕೀರ್ತಿ ಕಲಾಪ ।
ನರಸ ರಾಜೇಂದ್ರ ಬಿನ್ನಪ ಖಾನ ನಮಗೀಗ
ಲೊರೆದ ಕಾರ್ಯವ ಚಿತ್ತೈಸು ॥ ೯೧

ಬಳಿಕ ತನ್ನೊಡೆಯ ಪಾತಾಪ್ಯವಿನಪ್ಪಣೆಯಿಂದ
ಮುಳಿದು ಕರ್ಣಾಟ ರಾಜ್ಯಗಳ ।
ಸೆಳೆದೆವು ನಿಮ್ಮ ಪೌರುಷದ ವಾರ್ತೆಯ ಕೇಳಿ
ತಳ್ದೆವು ಬಲು ಹರುಷವನು ॥ ೯೨

ಬಿಡದೆ ನಿಮ್ಮೊಳು ಸ್ನೇಹ ವೆರಸಿ ಕಪ್ಪವ ಕೊಂ
ಡೊಡನೆ ನಿಮ್ಮಯ ಬಲ ಸಹಿತ ।
ನಡೆವೆವು ದಿಗ್ವಿಜಯಕೆ ಮುಂದೀಗ ನ
ಮ್ಮೊಡೆಯನಾಡದನೀ ಮಾತ ॥ ೯೩

ಕೇಳಿದನಾ ಖಾನನ ಭಟರೆಂದ ವಾ
ಚಾಳಿಕ ಕಠಿಣ ವಾಕ್ಯಗಳ ।
ತಾಳಿ ಮುಗುಳ್ನಗೆಯನು ಬಲು ಪೌರುಷ
ದಾಳಾಪದೊಳಿಂತೆಂದ ॥ ೯೪

ಕಪ್ಪವ ಕೊಡೆವು ತವ್ಮೊಳು ಸ್ನೇಹಕೆ ನಾವು
ಬಪ್ಪವರಲ್ಲ ಮುಂದೆಮ್ಮ ।
ದರ್ಪವ ನೋಡಲು ಕದನಕೆ ಬರಹೇಳು
ತಪ್ಪದೆ ತಳತಂತ್ರ ಸಹಿತ ॥ ೫೫

ಸುತ್ತಣ ಬಡ ದೊರೆಗಳ ಕಂಡಂದದ
ಲೊತ್ತರಿಸುವೆವೆಮ್ಮನೆಂದು ।
ಮುತ್ತಿಗೆ ಯಿಕ್ಕಿದನೇ ತನ್ನ ಪೌರುಷ
ಬತ್ತಿತು ಹೋಗೆಂದ ಭೂಪ ॥ ೫೬

ಎಂದಾ ರಣಧೂಳಿ ಖಾನನ ಭಟರಿಗೆ
ತಂದು ಕೊಡಿಸಿ ಯುಡುಗೊರೆಯ ।
ಅಂದವರನು ಕಳುಹಿಸಿಯರಮನೆಗೈ
ತಂದ ಕಂಠೀರವ ರಾಜ ॥ ೫೭

ಒಡನಾಗ ಕಾವೆಲು ಕಟ್ಟಳೆ ಪುರದೊಳು
ಬಿಡದೆಚ್ಚರೊಳಗಿರಲೆಂದು ।
ಪೊಡವೀಶ್ವರ ದಳ ಪತಿಗೆ ನೇಮವನಿತ್ತು
ಕಡು ಹರುಷದೊಳೊಪ್ಪುತಿರ್ದ ॥ ೫೮

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪ್ರದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನುಬಂಧಿ ॥ ೫೯

೧೨ನೆಯ ಸಂಧಿ ಸಮಾಪ್ತಂ

ಹದಿಮೂರನೆಯ ಸಂಧಿ

ಪಟ್ಟಣದ ಲಗ್ಗೆಯ ಸನ್ನಾಹ

ಸೂಚನೆ ॥ ಬಿಡದೆ ಪಟ್ಟಣವ ಲಗ್ಗೆಗೆ ಬಿಡ ಬೇಕೆಂದು
ಕಡು ಸನ್ನಹದೆ ಖಾನನೆಸೆದ ॥

ಇತ್ತಲಾ ಭಟರುಗಳ್ ರಣಧೂಳಿ ಖಾನನಿ
ಗೆತ್ತಿ ಮುಗಿದು ಕರಾಂಬುಜವ ।
ಹತ್ತಿರೆ ಸಾರಲವರ ಮೊಗ ನೋಡುತ
ಮತ್ತಾಗ ಖಳನಿಂತೆಂದ ॥ ೧

ಏನಾ ದೊರೆಯಭಿಪ್ರಾಯ ನಮ್ಮೊಳು ಸಂ
ಧಾನವೊ ಸಮರದ ಬಗೆಯೊ ।
ಮಾನಸದಿರವೆನಾ ಪುರದ ಬಲುಹಿನ ಸಿ
ದಾನವೆ ನಮಗುಸಿರೆಂದ ॥ ೨

ದಳ ಪತಿ ಮನ್ನೆಯ ಸು ಭಟರು ಮನದೊಳ
ಗೆಳಸಿ ಕೊಂಡಿಹ ಕಾರ್ಯವೇನು ।
ಬಳ ಹೊಕ್ಕು ನಮ್ಮೊಳಗೊಂದಾಗಿರುವುದುಂಟೊ
ತಳುವದುಸಿರಿ ನೀವೆಂದ ॥ ೩

ಜೀಯ ಪಟ್ಟಣದಧಿಪತಿ ಕಂಠೀರವ
ರಾಯನ ಛಲ ಪರಾಕ್ರಮದ ।
ಆಯತವನು ಕೊಂಡಾಡಲು ಸಾವಿರ
ಬಾಯು ಶೇಷನಿಗಳವಲ್ಲ ॥ ೪

ಆತನ ಮುಖ ಪದ್ಮದಲಿ ಸಿರಿ ಭುಜದೆ ಪ್ರ
ಖ್ಯಾತ ಜಯಾಂಗನೆ ನೆಲಸಿ ।
ಪ್ರೀತಿಯಿಂ ಸ್ಥಿರವಾಗಿ ಮೆರೆದಿಹರವಗಿದಿ
ರಾಂತು ನಿಲ್ವರಿ ನೃಪರುಂಟೆ ॥ ೫

ಬಿಡದಾ ನೃಪನ ಭಾವವ ನೋಡೆ ಕಂಳದ
ಲೊಡೆದು ಮೂಡಿದ ನರ ಹರಿಯು ।
ಕಡು ಶೌರ್ಯ ಕಾಂತಿ ರಾಜಿಸುತಿದೆ ಕಚನವ
ತೊಡಕಿ ಜೀವಿಪರುಂಟೆ ಜಗದೆ ॥ ೬

ಪೊಡವಿಪ ಪಿಡಿದ ಖಂಡೆಯ ಕಾಲಾಗ್ನಿಯ
ಕುಡಿ ನಾಲಗೆಯಂತೆ ಕಿಡಿಯ ।
ಗಡಣಗಳನು ಸೂಸುತಲಿದೆಯವನೊಳು
ತೊಡಕು ಸಲ್ಲದು ನಿಮಗೆಂದ ॥ ೭

ವಸುಧೇಶನ ನೇಜಯದಲಗಿನೊಳಾಗ
ಪಸರಿಸಿ ಪ್ರಭೆ ಮೇಲಕ್ಕೇಳ ।
ಬಿಸಜ ಬಾಂಧವನೆಂದಂಜಿ ಕತ್ತಲೆ ದೆಸೆ
ದೆಸೆಗೋಡಿದುದೇ ವೇಳ್ವ ॥ ೮

ಇಳಯಧಿಪನ ಕೈಯ ಚಿಕ್ಕ ಕಠಾರಿಯ
ಬೆಳಗ ನಿಟ್ಟಿಸಿ ಭಯದಿಂದ ।
ಕುಲಿಶಾಯುಧವೆಂದು ಕುಳಿರು ಪೆಟ್ಟನ ಸುತ
ಜಲ ನಿಧಿಯೊಳು ಮುಳುಗಿಹನು ॥ ೯

ಧರಣಿಪ ಬಿಡದೆಚ್ಚ ಸಿಂಗಾಡಿಯ ಬಾಣ
ಗರಿ ಸಹ ನಭಕೇಳಲಾಗ ।
ಗರುಡನೆಂದಂಜಿ ಸುರೇಂದ್ರ ಸುಧೆಯ ದಿವ್ಯ
ಸರಸಿಗೆ ಕಾಹ ಬಲಿದನು ॥ ೧೦

ಇಂತಪ್ಪ ದೇವತಾ ಮೂರ್ತಿಯೊಡನೆ ನಮ್ಮ
ಪಂಥ ಪಾಡುಗಳು ಮೆರೆವುದೆ ।
ಸಂತವೆ ಮಾಡಿಕೊಂಡೊಂದಾಗಿಹುದ
ತ್ಯಂತ ಸಮ್ಮತ ಜಗಕರಸ ॥ ೧೧

ಎಂದುರೆ ನುಡಿದ ಭಟರ ಮೇಲೆ ಕೋಪಿಸು
ತಂದವರನು ಬೀಳ್ಕೊಟ್ಟು ।
ಕುಂದದೊಪ್ಪುವ ಮಿಸುನಿಯ ಗೂಡಾರಕೆ
ಬಂದನಾ ಖಾನನೇ ವೇಳ್ವ ॥ ೧೨

ಪರಿಮಿತಕಾಗ ತನ್ನಪ್ಪ ಖಾನರುಗಳ
ಕರಿಸಿಯಾಳೋಚನೆ ಗೈದು ।
ಪುರವನೊತ್ತರಿಸಿ ಮುತ್ತಿಗೆಯಿಕ್ಕಿ ಸೆಳವುದು
ಪಿರಿದಹ ಕಾರ್ಯವಿದೆಂದ ॥ ೧೩

ಎನುತಾಗ ಖಾನ ಖಾನರಿಗೆ ಕರ್ಪುರ ವೀಳ್ಯ
ಕನಕ ಭೂಷಣಗಳನಿತ್ತು ।
ಮನಕತಿ ಹರುಷವ ಮಾಡಿಯವರುಗಳ
ಘನ ಬೀಡಿಕೆಗೆ ಬೀಳ್ಕೊಟ್ಟ ॥ ೧೪

ಆ ಸಮಯದೆ ರವಿ ಮುಂಡಲವೆಪರಾಂಬು
ರಾಶಿಗೈದಲು ತಮೆವಾಗ ।
ಬಾಸಣಿಸಿತು ಜಗವನು ಶಶಿ ಪೂರ್ವಾದ್ರಿ
ಪಾಸರೆಯೊಳಗೆ ರಂಜಿಸಿದ ॥ ೧೫

ಮೆರೆದುವು ಖಾನ ಖಾನರುಗಳೋಲಗದಲಿ
ಸು ರುಚಿರ ದೀವಟಿಗೆಗಳು ।
ಮೆರೆವ ನಾನಾ ವಾದ್ಯದ ರವದೊಳಗಾಗ
ಪಿರಿದು ಪಾಳಯವ ಮಾಡಿದರು ॥ ೧೬

ಗುರು ತಲ್ಪ ಗಮನನೆನ ರಾಜ ತೇಜವೆನಾಗ
ಪರಿದಿಟ್ಟು ಪದ್ಮಾತ್ಮ ಬಂಧು ।
ದೊರೆಯಾಗಿ ಪೂರ್ವಾದ್ರಿ ಸಿಂಹಾಸನದಲಿ
ಮೆರೆದನು ಕಿರಣದಾಳ್ಗಡಿ ॥ ೧೬

ಆ ಸಮಯದೆ ಖಾನ ಬಳಿಗಾಗ ರೋಷಾ
ವೇಶಾನ್ವಿತ ತಾನಾಗಿ ।
ಸೂಸುತ ಕಣ್ಗಿಡಿಯನು ಖಾನರ ಕೈ
ವೀಸಿ ಕರೆಯುತಿಂತೆಂದ ॥ ೧೭

ಕೊಡದೆ ಸಂತವ ನಮ್ಮೊಡನೆ ಕಾದುವೆನೆಂದು
ಕಡುಗಲಿಯಾಗಿ ಮೈಸೂರ ।
ಪೊಡವಿಪನಿಹನುವೊತ್ತರಿಸಿ ಮುತ್ತಿಗೆಯಿಕ್ಕಿ
ತುಡುಕಿ ನೀವೆಂದು ನೇಮಿಸಿದ ॥ ೧೮

ಜೀಯ ಹಸಾದವೆನುತ ಖಾನ ವಜ್ಜೀರ
ರಾಯುತದಲಿ ಬಲ ಸಹಿತ ।
ಭೋಯೆನುತುರುಬಿ ನಾಲ್ದೆಸೆಯಲಿ ಬಲು ಪೊಜ
ವಾಯವೆರಿತು ಮೊಡಿದರು ॥ ೧೯

ಲಲಿತ ಜೀಮೂತ ಮಂಡಲ ಭೋರ್ಗರೆದಾಗ
ನಳಿನ ಸಖನ ಮುತ್ತುವಂತೆ ।
ಕಳಕಳ ಮೆಸಗೆ ಖಾನನ ಬಲ ಚಾದೆಸೆ
ಯೊಳಗೆ ಮುತ್ತಿದುದು ಪಟ್ಟಣವ ॥ ೨೦

ಸುರ ಗಿರಿಯನು ಸುತ್ತಾ ಮುತ್ತಿದ ಮೆಂಜೆನ
ನೆರವಿಯ ತೆರದಿಂದಲಾಗ ।
ಕರಿ ಕಾಲಾಳು ತುರಗದಳ ಭೋಯೆಂ
ದುರುಬಿ ಮುತ್ತಿದುದು ಪಟ್ಟಣವ ॥ ೨೧

ಬೊಬ್ಬೆಯಬ್ಬರ ವಾದ್ಯದ ಬಲು ಘಲ್ಲಣೆಗಳಿಂ
ದುಬ್ಬೀಳ್ವ ಪದ ರಜದಿಂದ ।
ಸಬ್ಬ ಸನ್ನಾಹದಲ್ಯೈತಂದು ಖಳ ಬಲ
ವುಬ್ಬಿ ಮುಸುಕಿತೇ ವೇಳ್ವ ॥ ೨೩

ಕೇಳಿದನಾ ಬಲು ಬಲವೊತ್ತರಿಸಿ ಬಂ
ದೇಳಗೆಯಾಳಾಪವೆನು ।
ಭೂ ಲೋಲ ಕಂಠೀರವ ರಾಜ ತಳತಂತ್ರ
ಮೇಳದೊಳಗೆ ನಡೆತಂದ ॥ ೨೪

ಎತ್ತಿದ ಸತ್ತಿಗೆ ವೊತ್ತದ ಬಿತ್ತರ
ವಿತ್ತರದೊಳಗೊಪ್ಪುತಿರಲು ।
ಮುತ್ತಿದ ಪತ್ತಿಯ ಕತ್ತಿಯ ಬೆಳಗುಗ
ಳೂತ್ತರಿಸಿದುವಿನ ಪ್ರಭೆಯ ॥ ೨೫

ಅಂಬರವಿಂಬಿಲ್ಲ ಮುಂಬಲಿ ತುಂಬಿದ
ಹೊಂಬೆಸೆಯಾಲವಟ್ಟಲಿಗೆ ।
ಜಂಭಾರಿಗಿಂಬಾದ ಕುಂಭಿಯಂದದ ಮೆದ
ಸ್ತಂಬೇರಮೆಗಳ್ಳಿದುವು ॥ ೨೬

ತುರುಗಗಳುದವಣೆ ಶರಧಿಯ ತೆರೆಗಳ
ಭರವಸದಂತೊಪ್ಪಿ ಮೆರೆಯೆ ।
ಬಿರುದಿನ ಸುರಗಿಯ ಕರದಲಿ ಧರಿಸಿದ
ಪರಿವಾರವೆರಸಿಯೈತಂದ ॥ ೨೭

ಹರಿಯ ಹಸ್ತಾಗ್ರ ಸುದರ್ಶನ ಖಳರ ಮೇ
ಲುರವಣಿಸುವ ತೆರದಂತೆ ।
ನರಸ ರಾಜೇಂದ್ರ ಚಂದ್ರನ ತಳತಂತ್ರ ಸಂ
ಗರಕೈತರುವುದೇ ವೇಳ್ವ ॥ ೨೮

ರಾಮ ಚಂದ್ರಮನ ದಿವ್ಯಾಸ್ತ್ರ ರಾವಣ ಬಲ
ಸ್ತೋಮವ ಪುಗುವಂದದಲಿ ।
ಭೂಮಿಪ ಕಂಠೀರವೇಂದ್ರನ ಬಲ ಸಂ
ಗ್ರಾಮಕ್ಕೈದಿದುದುಬ್ಬಿನಲಿ ॥ ೮

ಪಕು ಪತಿ ಮುಳಿದೆಚ್ಚ ಶರ ತ್ರಿ ಪುರವನಾಗ
ಮುಸುಕಿ ಮುಂಗೆಡಿಸುವಂದದಲಿ ।
ವಸುಧೇಶನ ಪಡೆ ನಡೆದುದು ಕಳಕಳ
ಮೆಸಗಲೆಣ್ದೆಸೆಯೊಳೀ ವೇಳ್ವ ॥ ೯

ಕರಿಗಳ ಟಿಕ್ಕೆಯ ಮೊರೆವೆ ವಾದ್ಯದ ರವ
ಪರಿವಾರದುರವಣೆಯಾಗ ।
ತರಣಿಗೆ ದೆಸೆಗೆ ಧಾರಿಣಿಗೆ ಬಲ್ಳಯಗಳ
ಪರಪಿದುದೇನ ಬಣ್ಣಿಸುವೆ ॥ ೧೦

ಕಾಲಾ ವೀಧಿಯೊಳಗೆ ಸಂದಣಿಪ ಕಾ
ಲಾಳುಗಳಾಯುಧವೆಳಗು ।
ಪೇಳಲಳವೆ ಹೊರ ಪಾಳಯದರ ಕಣ್ಣಿ
ಕೀಲಿಸಿ ಕದುಕದಿರಿದುವು ॥ ೧೦

ದುರ ಗಲಿಗಳ ಗರ್ಜನೆ ಹಯ ಹೇಷಿತ
ಕರಿಗಳ ಬೃಂಹಿತವಾಗ ।
ಹೊರ ಪಾಳಯದರ ಮನಕೆ ಭೀತಿಯನಿತ್ತು
ಕರಗಿಸಿದುವು ಧೈರ್ಯವನು ॥ ೧೧

ಕಂಡನು ದೊರೆ ರಾಯನ ರಿಪು ನೃಪ ವೀ
ತಂಡ ಕಂಠೀರವೇಶ್ವರನ ।
ಗಂಡುಗಲಿಗಳ ಮೊತ್ತವ ಹನುಮನ ಭೆಸ
ಗೊಂಡನಾ ಖಾನನಿಂತೆಂದು ॥ ೧೨

ಹೊಳೆವ ಕಟ್ಟಾಣಿಮುತ್ತಿನ ಭೂ ಚಕ್ರದ
ನೆಳಲೊಳೊಪ್ಪುವ ದೊರೆ ಯಾರು ।
ಎಲೆ ಖಾನ ಕೇಳು ಕರ್ಣಾಟ ಚಕ್ರೇಶ್ವರ
ಚಲದಂಕ ನರಸ ರಾಜೇಂದ್ರ ॥ ೫೫

ಗರುಡ ಹನುಮು ಮಕರದ ಟಿಕ್ಕೆಯ ಡಾಲ
ಬಿರುದಿನ ದೊರೆ ರಾಯನಾರೊ ।
ದುರಗಲಿ ಖಾನ ಪರಾಕಿಲ್ಲದೆ ಕೇಳು
ನರ ರೂಪ ನರಸಿಂಹ ಮೂರ್ತಿ ॥ ೫೬

ಅಂತೆಂಬರ ಗಂಡನೆಂದು ಕೊಂಡಾಡಿಸ
ಪಂತದ ದೊರೆ ಯಿವನಾರೊ ।
ಕಂತು ಸನ್ನಿಭ ರಿಪು ಭೂಮಿಶ್ವರರೆದೆ
ಗುಂತ ಕಂಠೀರವ ರಾಜ ॥ ೫೭

ಹಿರಿಯುಬ್ಬಣವ ಜಳಪಿಸಿ ಮಿಸೆಯು ಮೇಲೆ
ಬೆರಳಿಡುತತುಳ ಪೌರುಷದ ।
ಬಿರುದಿನಗ್ಗಳಿಕೆಗಳನು ಪೊಗಳಿಸಿಕೊಳ್ವ
ದೊರೆಯಾವನುಸಿರು ಕೆಂಗೇಂದ್ರ ॥ ೫೮

ಕೋಟೆ ಕೊಳ್ಳಾಹಳ ರಿಪು ರಾಜ ದುರ್ಗ ಕ
ವಾಟ ಬಂಧನ ಪಟು ಶೌರ್ಯ ।
ಮಿಟಿನ ಚಲದಂಕನಿವನೀಗ ವಿಜಯವೆ
ಧೂಟೀ ಧವ ನರಸೇಂದ್ರ ॥ ೫೯

ಮಿಸುನಿಯಲಪ್ಪಿಟ್ಟು ಕಟ್ಟಾಣಿ ಮುತ್ತ ತೆ
ತ್ತಿಸಿದ ಕಬಾಯಿ ಕಟಿಯೊಳು ।
ಪೊಸ ರತ್ನದೊರೆಯ ದಿವ್ಯಾಯುಧದಿಂದ ರಂ
ಜಿಸುವ ಭೂಮಿಶ್ವರನಾರೊ ॥ ೬೦

ಅಂದು ಕಂಬದೆ ಜನಿಸಿದ ವೀರ ನರಸಿಂಹ
ನಂದದೆ ಕಣ್ಗೆ ಕೌತುಕವ ।
ಬಂಧುರದಲಿ ಬೀರುವೆ ಶೌರ್ಯ ಸದ್ಗುಣ
ಸಿಂಧು ಕಂಠೀರವೆ ರಾಜ ॥ ೪೧

ಒರೆಯನುಗಿದ ಖಡ್ಗವಿಡಿದು ಹೆಬ್ಬಲದಲಿ
ಮೆರೆವೆ ಮನ್ನೆಯನಾರುಸಿರು ।
ದೊರೆ ರಾಯನ ದಳ ಪತಿ ನಂಜ ರಾಜೇಂದ್ರ
ದುರಗಲಿ ಖಾನ ಚಿತ್ತೈಸು ॥ ೪೨

ಕಾಲಾಳು ಮೇಲಾಳು ವೊಂಟಿರಿಗಾರರ
ಜಾಲ ಬಿರುದಿನ ನಾಯಕರ ।
ಸಾಲು ಸಾಲಿಸೆದಿದೆ ಸಂವರ್ತ ರುದ್ರಾ
ಭೀಳ ಪಂಚಾಸ್ಯಗಳಂತೆ ॥ ೪೩

ಇಂತಪ್ಪ ಪುರವೆ ಲಗ್ಗೆಗೆ ಬಿಡ ಬೇಕೆಂಬ
ಸಂತವೇತಕೆ ನಿನಗೀಗ ।
ಸಂತವೆ ಮಾಡಿಕೊಳ್ಳೆನೆ ಕೋಪವೆ ತಾಳಿ
ಮುಂತಾಗ ಖಾನ ಗರ್ಜಿಸಿದ ॥ ೪೪

ಇಡು ಕೋಟೆಯ ಪಿರಂಗಿಯುಲಿ ಯುಗಳ ಹೂಳು
ಬಿಡದೆಬ್ಬಿಸು ಮೇರುವೆಯ ।
ತುಡುಕಿ ಲಗ್ಗೆಯನೇರೆಂದು ವಜೀರರ್ಗೆ
ಕಡುಗಲಿ ಖಾನ ಬೆಸಸಿದ ॥ ೪೫

ಬಳಿಕ ಹಸಾದವೆನುತ ಖಾನ ಖಾನರು
ತಳುವದಾ ಹ್ಷಣ ಲಗ್ಗೆಯನು ।
ಗಳಿಲನೆ ಪಿಡಿಯಲು ಪುರದ ಸುಭಟರಂ
ದಿಳಿಯು ಗೆಡಹಿದರೇ ವೇಳ್ವ್ ॥ ೪೬

---

* ಫಳಿಲಾಗೆಬಿಡಲಾಗ.

ಗಣನೆ ಯಿಲ್ಲದ ಖಾನರು ಲಗ್ಗೆಯಲಿ ನೊಂದು
ರಣಧೂಳಿ ಖಾನಗೆ ದೂರೆ ।
ಎಣಿಕೆ ಯಿನ್ನೇಕೆ ಬಂಧಿಸಿ ಪಟ್ಟಣವನೆಂದು
ಕಣುಗಿಡಿಗೆದರಿ ಗರ್ಜಿಸಿದ ॥ ೪೩

ಒತ್ತರಿಸಿಯೆ ತಳಿ ಮೇರುವೆಗಳನಿಟ್ಟು
ಮುತ್ತಿಗೆಯಿಕ್ಕಿದ ಬಲವ ।
ಮೆತ್ತಿ ಕಂಠೀರವೇಶ್ವರ ಕಂಡು ದಳವಾಯ
ಹತ್ತಿರೆ ಕರೆದಿಂತೆಂದ ॥ ೪೪

ದಳವಾಯಿ ನಂಜರಾಜೇಂದ್ರ ಬಾ ನಮ್ಮೊಡಿ
ಯಿಳಯ ಮನ್ನೆಯರ ಮೊರ್ಬಲವ ।
ತಳುವದೆ ಬರಿಸಿ ಮಾರ್ಗವ ಕಟ್ಟಿ ತುರುಕರ
ಗಳಿಲನೆ ಮೂಗರಿಸೆಂದ ॥ ೪೫

ಅದರಿಂದ ಭಯ ಪಟ್ಟು ಪಾಳಯವೆಲ್ಲವು
ಗದಗಾಪುಗೊಂಡೊಡೆ ಬಳಿಕ ।
ಕದನವೆ ಗಂಟಿಕ್ಕಿ ಮುತ್ತಿದ ತುರುಕರ
ಸದೆದೆಬ್ಬಿಸಬೇಕೆಂದ ॥ ೪೬

ಬಳಿಕ ಹಸಾದವೆನುತ ನಂಜರಾಜೇಂದ್ರ
ಸಲೆ ಗಡಿಗಳ ಮನ್ನೆಯರ ।
ತಳುವದೆ ಮೊರ್ಬಲ ಸಹಿತ ಕರಿಸಿ ಕಾರ್ಯ
ದಳವಿಯ ಪೇಳ್ದನಿಂತೆಂದು ॥ ೪೭

ಒಡನೆ ಠಾಣೆಯದೆಗೆದೂರೂರುಗಳ ಹೊಕ್ಕ
ತುಡುಗುಣಿ ತುರುಕ ಮೊರ್ಬಲವ ।
ಕಡು ತವಕದೆ ಮುತ್ತಿಕೊಂಡು ಮೂಗರಿದಾಗ
ಬಿಡದೆ ಭಂಗಕೆ ಬರಿಸೆಂದ ॥ ೪೮

ಒಡೆಯನಾಜ್ಞಾಪನೆಯಲಿ ಗಡಿ ದುರ್ಗವ
ಕಡುಗಲಿ ಮನ್ನೆಯರಾಗ ।
ಪಡೆಗೂಡಿ ನಡೆದು ಮಾಡಿದ ರಾಜ ಕಾರ್ಯದ
ಕಡು ಸಾಹಸವನೇ ಪೇಳ್ವ ॥ ೫೩

ಆರಕೆರೆಯೊಳು ಬೀಡ ಬಿಟ್ಟುರ್ದ ತುರುಕರ
ನಿರುಳು ಕಗ್ಗೊಲೆಯೊಳು ಬಿದ್ದು ।
ಎರಡು ಸಾಸಿರ ಮೊಗರಿದು ತಂದಾಹ್ಷಣ
ಪಿರಿದು ಸಾಹಸವೆ ಮಾಡಿದರು ॥ ೫೪

ಹೊಳಲ ಬಳಿಯು ಪೊದ್ದಲ್ಲಿರ್ದ ತುರುಕರ
ತಳತಂತ್ರವನರೆಯಟ್ಟ ।
ಗಳಿಲನೆ ಸಾಸಿರ ಮೊಗರಿದಾಹ್ಷಣ
ದಳ ಪತಿಯಡಿಗೊಪ್ಪಿಸಿದರು ॥ ೫೫

ಚೆನ್ನ ಪಟ್ಟಣದ ಭಟರು ಬಹ ತುರುಕರ
ಮುನ್ನ ಮಾರ್ಗವನಡ್ಡಗಟ್ಟ ।
ಬೆನ್ನಟ್ಟಿ ಹೊಯ್ದು ಸಾವಿರ ಮೊಗರಿದಾಗ
ಬನ್ನಕ್ಕೆ ತಂದರೇನೆಂಬೆ ॥ ೫೬

ಮದ್ದೂರ ಸು ಭಟರು ಮಾರ್ಗವ ಕಟ್ಟಿಕೊಂ
ಡುದ್ಧತ ಖಳರ ಮಾರ್ಬಲವ ।
ಹೊದ್ದಿ ಯಿರಿದು ನಾನೂರು ಮೊಗಿರಿದಾಗ
ಸದ್ಯದೆ ಶೌರ್ಯವೆಡೆದರು ॥ ೫೭

ಯಾದವಾದ್ರಿಯ ಬಳಿಗೈದಿದ ತುರುಕರ
ಹಾದಿಗಳನು ಕಟ್ಟಿಕೊಂಡು ।
ಭೇದಿಸಿ ಹೊಯ್ದು ಸಾಸಿರ ಮೊಗರಿದಾಗ
ವೇದನೆಗಳ ಮಾಡಿದರು ॥ ೫೮

ನಾಗಮಂಗಲದ ಭಟರು ಸೋಬತಿಯ ಕಟ್ಟಿ
ಬೇಗದಿರಿದು ತುರುಕರನು ।
ಬೇಗದೆ ಮೂರು ಸಾಸಿರ ಮೊಗರಿದಾಗ
ರಾಗದೆ ಜಸವೆ ಬೀರಿದರು ॥ ೫೯

ಚನರಾಯ ಪಟ್ಟಣದ ಭಟರು ಬರುತಿಹ
ಘನವಾದ ತುರುಕರ ಬಲವ ।
ಮೊನೆ ಮುರಿದೆರಡು ಸಾಸಿರ ಮೊಗರಿದಾಗ
ಮನ ಹರುಷದೊಳ್ಪಿದರು ॥ ೬೦

ಕಿಕ್ಕೇರಿ ಬೂಕನ ಕೆರೆಯ ಸು ಭಟರೊಳ
ಹೊಕ್ಕು ಬರುವ ತುರುಕರನು ।
ಸೊಕ್ಕಿ ತಿವಿದು ಸಾಸಿರ ಮೊಗರಿದಾಗ
ಗಕ್ಕನೈತಂದರೇ ವೇಳ್ವ ॥ ೬೧

ಚಾಮುಂಡಿಯ ಬೆಟ್ಟಕ್ಕೈದಿದ ತುರುಕರ
ಸ್ತೋಮದ ಮೇಲೆ ಬಿದ್ದಿರಿದು ।
ಆ ಮಹಾ ಮೈಸೂರ ಭಟರು ಸಾವಿರ ಕೋಳ
ಭೂಮಿ ಪಾಲನಿಗೊಪ್ಪಿಸಿದರು ॥ ೬೨

ಇಂತು ಹನ್ನೆರಡು ಸಾವಿರ ಮೂಕೊರೆಯರು
ಮುಂತಾಗ ವಿಜಯಾ ಪುರಕೆ ।
ಚಿಂತೆ ಪಡುತಲ್ಲಿದಿ ಪಾತ್ಸ್ಯಾವಿನಡಿಯೊಳು
ನಿಂತಡ್ಡ ಬಿದ್ದೊರಳಿದರು ॥ ೬೩

ನೋಡಿ ವಿಸ್ಮಿತನಾಗಿ ಪಾತ್ಸ್ಯಾವು ತಲೆದೂಗಿ
ಕೂಡುಂಬಳಿಯಿತ್ತವರ್ಗೆ ।
ಮೂಡಿದುನ್ಮಳದೆ ಮೂಕೊರೆಯು ವೀದಿಯು ಕಡೆ
ಮಾಡಿಸಿ ಕೊಟ್ಟನಾ ಪುರದ ॥ ೬೪

ಇವರಿಗೆ ಹೋದ ಮೂಗಲ್ಲ ತನ್ನಯ ಮೂಗು
ತವೆ ಹೋದುದ್ಯೆಸಲೆ ಯೆನುತ ।
ತವಕದೆ ಮೂಲ ಬಲವೆ ಖಾನನಿದ್ದೆಡೆ
ಗವನಟ್ಟಿದ ಕೋಪದಿಂದ ॥ ೬೫

ಸಲೆ ದೆಸೆ ದೆಸೆಯ ಜನರು ವಿಜಯಾಪುರ
ದೊಳ ಹೊಕ್ಕು ನಡೆದು ಬಂದಾಗ ।
ಬಲು ಮೂಕೊರೆಯ ಬೀದಿಯ ನೋಡಿ ಚೋದ್ಯವೆ
ತಳದಿಂತೆಂದು ನುಡಿದರು ॥ ೬೬

ಹಿಂದಣ ಯುಗದಲಿ ದಶ ಮುಖನನುಜೆಯ
ಕುಂದದೆ ಕಿವಿ ಮೂಗನರಿದ ।
ಇಂದೀವರಾಹ್ವನಿಂ ವೆಗ್ಗಳವಹ ಶೌರ್ಯ
ಹೊಂದಿತು ಮೈಸೂರ ನೃಪಗೆ ॥ ೬೭

ಆತನೊಬ್ಬ ಸುರೆಯ ಮೂಗ ಖಂಡಿಸಿದ ಮೆ
ತ್ತೀತ ಹನ್ನೆರಡು ಸಾಸಿರದ ।
ಖ್ಯಾತಿಯ ನರರಕ್ಕಸರ ಮೂಗರಿದನೀ
ಭೂತಳೇಶನಿಗೆಣೆ ಯಾರು ॥ ೬೮

ಇಂತೆಂದು ಕಂಠೀರವ ನರಸೇಂದ್ರನ
ಪಂತ ಪೌರುಷವ ಪ್ರೊಗಳುತ ।
ಸಂತೋಷದೆ ದೆಸೆ ದೆಸೆಯ ಜನರು ಯಾತ್ರೆ
ಗಂತರಿಸದೆ ತೆರಳಿದರು ॥ ೬೯

ಅಲ್ಲಿದ್ದ ಕೂರ್ಮ ಪಾತಾತ್ಸ್ಯವಿನ ಹೇಜಿಬ
ರೆಲ್ಲವನರಿದು ಬೇಗದಲಿ ।
ನಿಲ್ಲದೆ ಕಾಗಜವನು ತಮ್ಮ ದಾತಾರ
ನಲ್ಲಿಗಟ್ಟಿದರೇ ವೇಳ್ವ ॥ ೭೦

ಕಾಗಜವನು ವೋದಿಸಿ ಕೂರ್ಮ ಪಾತ್ಸ್ಯೈವು
ಮೊಗಿನ ಮೇಲಿಟ್ಟು ಬೆರಳ ।
ತೂಗಿದ ತಲೆಯನಚ್ಚರಿವಟ್ಟು ಮೈಸೂರ
ಭೂಗಧಿಪತಿಯ ಪ್ರೊಗಳಿದ ॥ ೨೧

ಧರೆಯೊಳು ರಾಮು ರಾಜಗೆ ನೆರೆ ಮಣಿಯದ
ತುರುಕರ ಭಂಗಕೆ ತಂದ ।
ದುರ ಗಲಿ ಕಂಠೀರವೆ ರಾಜ ಲೋಕಕೆ
ನರ ನಾರಾಯಣನೆಂದ ॥ ೨೦

ಬಳಿಕ ತನ್ನಯ ಭಂಗದ ವಾರ್ತೆ ಕೂರ್ಮಗೆ
ಸಲೆ ಮುಟ್ಟಿದುದನು ಕೇಳಿ ।
ಮುಳಿದು ಪಾತ್ಸ್ಯೈವು ಖಾನಗೆ ದೂತರಟ್ಟಿದ
ಸೆಳಯ ಹೇಳಂದು ಪಟ್ಟಣವೆ ॥ ೨೩

ಬಂದು ಚಾರರು ಪಾತ್ಸ್ಯೈವು ಕೋಪಿಸಿ ನುಡಿ
ದಂದವೆ ಖಾನನಿಗುಸಿರೆ ।
ಅಂದಾಗ ರಣಧೂಳಿ ಖಾನ ರೌದ್ರಾವೇಶ
ದಿಂದೆದ್ದನಾಸ್ಥಾನದಿಂದ ॥ ೨೪

ಕುಡಿಮಿಾಸೆ ಕುಣಿಯಲು ತಾವ್ರಾಕ್ಷಿಯೊಳಂ
ದೊಡನೆ ಕಿಡಿಗಳು ಸೂಸಿದುವು ।
ಕಡಿದು ಮುಂಗೈಯು ಕೋಪಾಟೋಪದಲಿ ಖಳ
ಜಡಿದು ಖಂಡೆಯುವೆ ಚಿಮ್ಮಿದನು ॥ ೨೫

ಕೆರಳಿದ ಕಾಲ ನೇಮಿಯೊ ರೌದ್ರ ರೂಪಿನೊ
ಳಿರದೆದ್ದ ಮಹಿಷಾ ಸುರನೊ ।
ದುರ ಗಲಿ ಘೋರಾಂಧಕನೆನೆ * ಖಾನ ಮ
ತ್ತುರವಣಿಸಿದ ಲಗ್ಗೆಗಾಗ ॥ ೨೬

* ಭಾವ.

ಇಂತಪ್ಪ ಖಾನನ ಕೋಪಾಗ್ನಿಯ ಝಳ
ಮುಂ ತಾಳಲಾರದೆ ತರಣಿ ।
ಮುಂತೆ ನೀರೊಳು ಮುಳುಗಿದನೆನೆ ಪಡು ಗಡ
ಲಂ ತವೆ ಪೊಕ್ಕನೇ ವೇಳ್ವ ॥ ೬೬

ಮುಗಿಯೆ ತಾವರೆಗಳಭ್ರದಲಿ ತಾರಾಳಿಗ
ಳೂಗುಮಿಗೆ ರಾಗದೊಳಸೆಯೆ ।
ಮಿಗೆ ಹರುಷವ ತಾಳ ನೀಲಾಬ್ಜ ಕತ್ತಲೆ
ಜಗವ ಮುಸುಕಿತಾ ಕ್ಷಣದೆ ॥ ೬೮

ಪಿರಿದು ಲಗ್ಗೆಗೆ ಬಿಡಬೇಕೆಂದು ತನ್ನಯ
ತುರುಕ ವಜೀರ ಖಾನರನು ।
ಕರೆದಾಗ ಖಾನ ನೇಮಿಸೆ ಬಳಿಕಂದನ
ರುರವಣಿಸಿದರೀ ವೇಳ್ವ ॥ ೬೯

ಇದು ಸೋಮವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನುಬಂಧಿ ॥ ೭೦

೧೩ನೆಯ ಸಂಧಿ ಸಮಾಪ್ತಂ

ಹದಿನಾಲ್ಕನೆಯ ಸಂಧಿ.

ಶ್ರೀರಂಗಪಟ್ಟಣದ ಲಗ್ಗೆಗೆ ಬಿಟ್ಟುದು.

ಸೂಚನೆ ॥ ಪುರದ ಲಗ್ಗೆಗೆ ಬಿಟ್ಟ ತುರುಕರನಿರಿವು ಖ
ಲ್ಬಿರುದ ಮೆರೆದ ನರಸೇಂದ್ರ ॥

ಬಡಿದರು ಸನ್ನೆಯ ಭೇರಿ ಡಮಾಮಿಯ
ಕಡು ರಭಸಕೆ ಬ್ರಹ್ಮಾಂಡ ।
ಒಡೆಯಲು ಚತುರ್ದೆಸೆ ಜಡಿಯಲು ಭೂತಳ
ನಡುಗುವಂದದಲೇ ವೇಳ್ವ ॥ ೧

ಚಂಬಕ ಡವುಡೆ ನಪಿರಿ ಬುರುಗುಗಳುರೆ
ಕೊಂಬಿನ ಕಾಳ ಮೆವುರಿಯ ।
ಬೊಂಬುಳಿ ಡೋಳು ನಿಸ್ಸಾಳಗಳಬ್ಬರ
ತುಂಬಿತಾಕಾಶ ಮೆಂಡಲವ ॥ ೨

ಬಿಲ್ಲ ಜೀವೆಡೆ ಪಟುಭಟರ ಬೊಬ್ಬೆಯ ಬಲು
ಫಲ್ಲಣೆ ಹಯ ಹೇಷೆ ನಿನದ ।
ಕೊಲ್ಲಾರ ಬಂಡಿಯ ಚೀತ್ಕೃತಿ ತ್ರಿಜಗಕೆ
ತಲ್ಲಣವಿತ್ತುವಾ ಹ್ಲಣದೆ ॥ ೩

ಇಡು ಪಿರಂಗಿಯ ಬೇಗ ಪಿಡಿ ನಿಚ್ಚಣಿಗೆಯ
ತುಡುಕು ಗುರಾಣಿ ಖಂಡೆಯವ ।
ಹೊಡೆ ಬಲು ಜಬರು ಜಂಗಿಯಲಿ ಕೋಟೆಯನೆಂಬ
ಕಡು ರಭಸಗಳೊಪ್ಪಿದುವು ॥ ೪

ಹೂಳಿಬಿಡಗಳ ಸೊಪ್ಪಿನ ಹೊರೆಯಲಿ ಮೇಲ
ಕೇಳಿಸಾರ್ಭಟೆಯ ಬಾಣಗಳ ।
ತೂಳಿಸು ಪೆಟಲ ಗುಂಡುಗಳನೆಂಬಸುರರ
ಕೊಳಾಪಳವೊಪ್ಪಿತಾಗ ॥ ೫

ಕರಿಗಳ ಕೈಯಿಂದ ಕೆಡಹು ಕೋಟೆಯ ಮೇಲ
ಕುರವಣಿಸಿರು ಬೊಬ್ಬೆಯಲಿ ।
ತರಿ ಯಿರಿ ಹೊಡೆ ಕಾಹಿನವೆರನೆಂಬಬ್ಬರ
ಮೆರೆದುದು ಚತುರ್ದೆಸೆಯೊಳಗೆ ॥ ೬

ತುಂಬಿದ ಕರಿಯ ಮೆದ್ದಿನ ಪೊಟ್ಟಣಗಳ
ನಿಂಬುಗೊಳಿಸು ಶರಾಗ್ರದಲಿ ।
ತುಂಬಿಪ್ಪ ಬಲು ಸುರಂಗಗಳ ದ್ವಾರಗಳಿಗೆಂ
ದೆಂಬ ರಭಸವೊಪ್ಪಿತಾಗ ॥ ೭

ಅಗೆ ತಳ ಮುಟ್ಟಿ ಕೋಟೆಯ ದ್ವಾರಗಳ ನೂಡಿ
ಹೊಗುವೆಡ್ಡಲಾದರಿ ಭಟರ ।
ಮಿಗೆ ಬೀಳಲಿರಿಯೆಂಬ ಖಾನರಬ್ಬರವಾಗ
ಗಗನ ಮಂಡಲವೆ ಹೊಳ್ಗಿದುದು ॥ ೮

ಖಳರ ಕೋಪಾಗ್ನಿ ನಾನಾ ದೆಸೆಯೊಳಗಾಗ
ಪಲವು ರೂಪಾದಂದದಲಿ ।
ತಳಿತುವು ಲಕ್ಕ ಸಂಖೆಯಲಿ ಬೊಂಬಾಳದ
ಹೊಳವ ದೀವಟಿಗೆಗಳಾಗ ॥ ೯

ಶಶಿಯ ನೇಮದೆ ಕರ ಚರರು ಕೋಪವೆ ತಾಳ
ಬಿಸಿಯಾಗಿ ಖಳರ ಮಾರ್ಬಲಕೆ ।
ಮುಸುಕಿ ಕಗ್ಗೊಲೆಗೈದಿದೊಲು ಚಂದ್ರ ಜ್ಯೋತಿಗ
ಳಸೆದುವು ಪಾಳಯದೊಳಗೆ ॥ ೧೦

ಕರಿಗಳಿಗೆಂಟು ಕಾಲಾಳಿಗೆರಡು ಬಲು
ತುರಗಕೆ ನಾಲ್ಕು ಕೊಲ್ಲಾರ ।
ಹರಿವೆ ಬಂಡಿಗೆ ಹತ್ತು ದೀವಟಿಗೆಯು ಬಲು
ಪರಿ ಗಣನೆಗಳೊಪ್ಪಿದುವು ॥ ೧೧

ದೆಸೆ ದೆಸೆಗೆರಡು ಸಾಸಿರ ವೇತಿಗಳನಾಗ
ಮಸಗಿ ಖಾನನ ಬಲು ಭಟರು ।
ಮುಸುಕಿ ಚತುರ್ದಿಕ್ಕಿನ ಕೋಟೆಯ ತೆನೆಗೆ ಸಂ
ದಿಸಿ ಬೊಬ್ಬಿರಿದರೀ ವೇಳ್ವ ॥ ೧೨

ಆಗಸವನು ತುಡುಕುವ ಮೇರುವೆಗಳ
ಮೇಗೇರಿ ಖಾನನ ಭಟರು ।
ಬೇಗದಿ ಪೆಟಲ ಗುಂಡುಗಳ ಮಳೆಯನು ಸ
ರಾಗದೊಳುಬ್ಬಿ ಕರೆದರು ॥ ೧೩

ಅಂಬಿನ ತುದಿಗೇರಿಸಿದ ಪೊಟ್ಟಣದುಪ್ಪ
ಲಿಂಬಾದ ಕಿಚ ಕಾರಿಸುತ ।
ಕುಂಬಿನಿ ನಡುಗೆ ಬೊಬ್ಬಿರಿದೆಚ್ಚು ಶರಗಳ
ತುಂಬಿದರೂರೊಳಗಾಗ ॥ ೧೪

ಆನೆಯ ಮೇಲೆ ಜಬರು ಜಂಗಿಗಳ ತಂ
ದಾನಿಸಿ ಭೋಯೆಂದೆನುತ ।
ಖಾನ ಖಾನರು ಮುಂಬರಿದು ಗುಂಡಿನ ಬಲು
ಸೋನೆಯು ಕರೆದರದ್ಭುತದೆ ॥ ೧೫

ಸುರು ಸುರು ಸುರ್ರೆಂದು ಕೇಸುರಿಗರೆಯುತ
ವೊರೆದೇಳ್ವ ಬಾಣಗಳಾಗ ।
ತುರುಗಿ ಕೈಕಾಲಿಡೆಯೊಳು ಪೊಯ್ದು ಜನರಿಗೆ
ಪಿರಿದು ಭೀತಿಯ ಬೀರಿದುವು ॥ ೧೬

ಅಂಬರವೆಲ್ಲ ಬಾಣಗಳಿಂದ ಬಿಲ್ಲೆ ದೆಸೆ
ತುಂಬಿದ ಕೋವಿಯ ಗುಂಡು ।
ಕುಂಬಿನಿ ಸಿಂಗಾಣಿಯುಂಬಿನ ಮೆಯವಾಗ
ಯಿಂಬುಗೊಡದೆ ರಂಜಿಸಿದುವು ॥ ೧೫

ಕುದುರೆಯುನಿಳಿದು ಗುರಾಣಿಯ ಪರಿಗೆನು
ನೊದರಿಸಿ ತೊಡೆಯೊಳಗಾಗ ।
ಕದುಬಿ ಖಡ್ಗವ ಜಳಿಪಿಸಿ ಖಾನ ಖಾನರು
ಮದ ಮುಖದೊಳಗೇರಿದರು ॥ ೧೬

ಆನೆಗಳನು ಕೊಂಬುಗಾತ್ತಿ ಸಹಿತಲಾಗ
ನಾನಾ ದೆಸೆಯೊಳಗುರುಬಿ ।
ಏನೆಂಬೆನಪ್ಪಿನ ತಿವ್ವಿಗಳು ಹೊತ್ತಿಸಿ
ಯಾನಿಸುತುರಿಯ ಸೂಸಿದರು ॥ ೧೭

ಬಂದೊಂದೇಶಿಯೋಳ್ಕನೂರು ಖಾನರು
ಸಿಂದಾಗ ತಲೆವರಿಗಳ ।
ಸಂದಿಸಿ ಬೊಬ್ಬಿರಿದೇರಿದರವರುಗ್ರ
ದಂದವನೇನ ವರ್ಣಿಸುವೆ ॥ ೧೮

ಸಿಂಗಾಡಿಯುಂಬಿನ ಮಳೆ ಬಾಣದಾರ್ಭಟೆ
ಮುಂಗ್ಯೆವೆ ಬಲು ಪಿರಂಗಿಗಳ ।
ಪೊಂಗಿದ ಜಬರು ಜಂಗಿಯ ಗುಂಡಿನಬ್ಬರ
ಕಂಗೆಡಿಸಿದುವು ತ್ರಿ ಜಗವ ॥ ೧೯

ಜಾಡಿಸಿ ಬರುವ ಪಿಟಲ ಗುಂಡುಗಳ ಮೋ
ಲೀಡಿರಿದರಿ ಬಾಣಗಳ ।
ನೋಡದೆ ಹೆಣಗಳ ತುಳಿದು ಖಾನರು ಕೈಯ
ನೀಡಿದರ್ಕೋಟೆಯ ತೆನೆಗೆ ॥ ೨೦

---

* ದ್ವಾಸಿಸು.

ಹೊಳೆವ ಬದ್ಯೋತ ಮಂಡಪದ ಬಳಿಹಕ
ಬಳಗ ಮುತ್ತಿನ ತರದಿಂದ ।
ಕಳಕಳಿ ದಾಸಗೆ ಖಾನರು ಬೊಬ್ಬಿಡುತಾಗ
ತಳುವದೇರಿದರು ಲಗ್ಗೆಯನು ॥ ೬೩

ಕುಲ ಗಿರಿಯನು ಕೋಪದ ತಾಳಿ ಮೆಳೆಕದ
ಹುಳುಗಳು ಮುತ್ತುವಂದದಲಿ ।
ಇಳಗಗ್ಗಳಿಕೆಪಡೆದ ಪಟ್ಟಣದ ಲಗ್ಗೆ
ಯೊಳಗೇರಿದರು ತುರುಕರು ॥ ೬೪

ಯಕಲಾಸ ಖಾನ ಮುಸ್ತಫ ಖಾನರುಗಳು
ಸಕಲ ಬಲದೊಳೊಂದೆಸೆಯು ।
ಯುಕುತಿಯೊಳೀರಿ ಯೊಬ್ಬಿರದಾರ್ಭಟಿಸುತ
ಶಕುತಿಯನೇನ ಬಣ್ಣಿಸುವೆ ॥ ೬೫

ಪತ್ತಿ ನೋಡಿದೊಡಿನ್ನೆರದು ಸುತ್ತಿನ ಕೋಟೆ
ಯೊತ್ತಿನಲಗಳು ಕಂದುಕವ ।
ಮತ್ತೆ ರಾಟವಳ ಸೂತ್ರದ ಯಂತರಗಳ
ಬಿತ್ತರವನು ಕಂಡರಾಗ ॥ ೬೬

ಕರಿತಿ ಖಾನ ಸಹಜೆ ಯಬುದುಲ್ಲ ಖಾನರುಗ
ಳುದವಣಿಸುತಲೊಂದೆಸೆಯು ।
ಪಿರಿದು ಮಾರ್ಬಲಗೂಡಿ ಬೊಬ್ಬಿಡಿದೇರುವ
ಮುರಗಲಿತನವನೇನೆಂಬೆ ॥ ೬೭

ಅಂಕುಶ ಖಾನನಂಬರ ಖಾನರೊಂದೆಸೆ
ಮುಂಕೊಂಡು ಬಲು ಬಲ ಸಹಿತ ।
ಶಂಕೆಯಿಲ್ಲದೆ ಭೋಯೆಂದಾಲುತೇರುತ
ಬಿಂಕವ ಬೀರಿದರಾಗ ॥ ೬೮

ಅದ್ದನು ಖಾನ ವೇದೋಜಿ ಮುಲ್ಲಿಗೆ ಖಾನ
ಸಿದ್ದರಹಿಮನೆಂಬವನು ।
ಹೊದ್ದಿಯೊಂದೆಸೆಯಲ್ಲಿ ತಳತಂತ್ರದೊಡಗೂಡಿ
ಯುದ್ದರಿಸುತಲೇರಿದರು ॥ ೮೯

ಘಳಲನೆ ದಾವಾಗ್ನಿಯಂತೆ ಭೋರಿಡುತಾಗ
ಮುಳಿದುರೆ ರಣಧೂಳಿ ಖಾನ ।
ತಳತಂತ್ರ ಸಹ ಮೂಡ ದೆಸೆಯೊಳಗುರಿದೇರಿ
ದಳವ ನಾನೇನ ಬಣ್ಣಿಸುವೆ ॥ ೯೦

ಬಳಿಕ ದಕ್ಷಿಣ ದೆಸೆಯಲಿ ಬೀಡಿಳಿದಿ
ರ್ದಿಳಯಾಣ್ಮ ಪೂವಲಹನುಮ ।
ಖಳನ ನೇಮದಲಾ ದಿಕ್ಕಿನೊಳಗೆ ಲಗ್ಗೆ
ಗಳವಡಿಸಿಯೆ ಬಿಟ್ಟನಾಗ ॥ ೯೧

ಪಟಹ ಡಿಂಡಿಮ ಕೊಂಬಿನ ಕಾಳ ಬುರುಗಿನಾ
ರ್ಭಟಿ ವೀರರುಗಳ ಬೊಬ್ಬಾಟ ।
ಸುಟಿಯಾದ ಗಜದ ಘಂಟಾ ರವೆ ಬ್ರಹ್ಮಾಂಡ
ಘಟಕೆ ಭೀತಿಯನಿತ್ತುದಾಗ ॥ ೯೨

ಸುರಗಿ ಸಬಳ ಹೇರಿಟ್ಟ ಖಂಡೆಯ ಕೈಯೊ
ಳುರವಣಿಸುವ ಬಾಣ ಪೆಟಲ ।
ದುರಗಲಿ ಭಟರೆಪ್ಪತ್ತು ಸಾವಿರ ತಮ್ಮ
ದೊರೆಗಳು ಸಹಿತಲೇರಿದರು ॥ ೯೩

ಹರುಪನ ಹಳ್ಳಿಯ ಭೂಪ ಸುಂಡೂರವೆ
ನೆರೆ ಗುಡಿಗೋಟೆಯು ಜನಪ ।
ಪಿರಿದುಜ್ಜಿನಿಯ ನಾಯಕರು ಮಾರ್ಬಲಗೂಡಿ
ದುರಗಲಿತನದೊಳೇರಿದರು ॥ ೯೪

ರಾಯ ದುರ್ಗದ ವೀರರು ಹಟ್ಟಿಯಲ್ಲಪ್ಪ
ನಾಯಕರಧಟರೊಂದೆಸೆಯ ।
ಆಯತವಡೆದ ಕುಂದುರುಪಿಯ ಬಲ ಸಮು
ದಾಯವೇರಿತು ಭೋಯಿನುತ ॥ ೫೫

ಮತ್ತಿಘಡದ ಚಿಕ್ಕನಾಯಕ ಹಳ್ಳಿಯ
ಸುತ್ತಣ ಬಟರೊಂದೆಸೆಯ ।
ಒತ್ತರಿಸೆಯೈ ಪಾಲುಪರೆ ಬೇಲೂರವ
ರತ್ತಿತ್ತಲೊಲೆಯದೇರಿದರು ॥ ೫೬

ಬಡಗ ದೆಸೆಯ ಬೀಡಿಳಿದಿರ್ದ ವೊರಸರ
ಪಡೆ ಹನುಮನ ನೇಮದಲಿ ।
ತುಡುಕಿ ಸಾಸಿರ ಸಂಖೆಯೇಣಿಗಳನು ಚಾಚಿ
ಯೊಡನೆ ಬೊಬ್ಬಿರಿದೇರಿದರು ॥ ೫೭

ಹೊಳವನ ಹಳ್ಳಿ ಬಿಜ್ಜವರ ಕೋಳಾಲ
ಬಳಲಾಪುರ ಮಾಗಡಿಯ ।
ಇಳಿಯಾಣ್ಮರು ಬಹು ಬಲ ಸಹ ಲಗ್ಗೆಯ
ತಳುವದೇರಿದರುಬ್ಬಿನಲಿ ॥ ೫೮

ಮುರಗಲಿ ಚಿಕ್ಕ ಬಳ್ಳಾಪುರ ಬಾವಲೂ
ರೆರೆಯುರು ಹೊಸ ಕೋಟೆಯವರು ।
ನೆರೆ ಕಂಗೊಂದಿ ಮಾಸ್ತಿಯ ಸುಭಟರು ತಮ್ಮ
ದೊರೆಗಳು ಸಹಿತಲೇರಿದರು ॥ ೫೯

ಚಾರುತರದಲಿಕ್ಕೇರಿಯ ವರ ಬಲ
ವಾರಿಧಿ ಮುತ್ತಿ ಮೂದಲಿಸಿ ।
ಕಾರುಣ್ಯ ನಿಧಿ ನರಸೇಂದ್ರನ ದುರ್ಗವ
ನಾರುಭಟೆಯಲೇರಿದರು ॥ ೬೦

ಬಿಡದೆ ಸಾವಿರ ಸಂಖೆಯ ನಿಚ್ಚಣಿಗೆಯ
ತೊಡಿಸಿ ತೆಂಕಣ ಕೋಟೆದಿನೆಗೆ ।
ಕಡು ತವಕದೊಳೇರಿದರಬ್ಜ ಸಖನನು
ತುಡುಕುವ ಮೆಂದೇಪರಂತೆ ॥ ೪೧

ಕರೆವ ಪೆಟಿಲ ಗುಂಡಿನ ಮುಳ ಬಾಣದ
ವರುಷವೆಂಬಿನ ಬಲು ಸೂನೆ ।
ಅರಿ ಬಲ ಜೀವಮೂತದಿಂ ನರಸೇಂದ್ರನ
ವರ ದುಗ್ಗ ಗಿರಿಯೊಳೊಪ್ಪುವುದು ॥ ೪೨

ಸಿತಿಲ ಪ್ರೊಟ್ಟಣವ ಶಿಕ್ಷೈಸಿ ಮಿಂಚು ಬುಳುಗಳು
ಕಡು ತಳಕದೆ ಮುತ್ತು ಗತೆ ।
ಒಡನೆ ಕೆಂಗೇಂದ್ರನ ನೇಮದೆ ಕರ್ಣಾಟ
ಪಡೆ ಮುಂಕಿತ್ತು ಧೈರ್ಯದಿನುತ್ತೆ ॥ ೪೩

ಪಸಿದಿದ್ದ ಸಿಂಹದ ಗುಹೆಯನ್ನೆರಳಿಯು
ವಿಶು ಸಂಕುಳ ಮುತ್ತುವಂತೆ ।
ಸಾಳುಥೇಕ ನರಸೇಂದ್ರನ ಪುರವನು ರಿಪು
ವಿಸರು ಮುಸುಕಿತೀ ವೇಳ್ವ ॥ ೪೪

ಬಿರುದಿನ * ಸಾಳ್ವನ ನೀಡವನುಲೆ ಗಿಳಿ
ವಲಿಗಳು ತುಡುಕುವಂದದಲಿ ।
ಮುರಗಲಿ ಕಂಠೀರವೇಂದ್ರನ ವಂಗಾರ
ನಿರವೆ ಮುತ್ತಿತು ರಿಪು ವಿತತಿ ॥ ೪೫

ಸಲೆ ಸೇರಿಸಿದೇಣಿಗಳ ಮೇಲ ಸುಭಟರು
ತಲೆವರಿಗೆಯನೊಡ್ಡಿ ಕೊಳುತೆ !
ಅಲಗಿನ ಗಾಯವನೆಣಿಸದೆ ಹಣಗಳ
ತುಳಿ ತುಳಿದೆಗಡನೇರಿನರು ॥ ೪೬

---

* ಸಾಳುವೇ ದ್ರನದೀಹವಗಳಿ.

ನೇಜೆಯುಗಳ ಗಾಯು ಪಟಿಲ ಗುಂಡುಗಳ ಸ
ಮೂಹದಾರ್ಭಟೆಗೆ ಕಂಗೆಡದೆ ।
ಪೈಜು ಪೈಜಾಗಿ ಬೊಬ್ಬಿರಿಯೆಯಿರುವ ಭಟ
ರೋಜೆಯನೇನ ಬಣ್ಣಿಸುವೆ ॥ ೪೬

ಮುಸುಕಿದ ಬಾಣವುಪ್ಪಿನ ಪೊಟ್ಟಣಗಳ
ಮಸೆಯಂಬು ಪೆಟಿಲ ಗುಂಪುಗಳ ।
ಎಸೆನ ಪೆರ್ಮಳಗರೆಯುತ ಬೊಬ್ಬಿರಿದಾಗ
ಳಸಮೆ ಸಾಹಸಿಗಳೀರಿದರು ॥ ೪೪

ಕಂಡನು ರಿಪು ರಾಜ ಕರಭ ಭೇರುಂಡ ಭೂ
ಮಂಡಲೇಶ್ವರ ಕುಲ ಕಮಲ ।
ಚಂಡ ದಿವಾಕರ ತಾಂಬರಿವೇಂದ್ರ ಮಿಂ
ಗಂಡಿಯೊಳೀರಿದುಗಳ ॥ ೪೫

ಸಿಡಿಲ ಗರ್ಜನೆಗಬ್ಬರಿಸುತಾಗಸವೆನು
ತುಡುಕವ ಹರಿಯಹ್ಹಸಂತೆ ।
ಶಿಡುಗವನೊರೆಯಿಂದ ಸಳದು ಸಂಥೆದೊಳಾಗ
ನುಡಿದನು ನಂಜೇಂದ್ರನೊಡನೆ ॥ ೪೦

ಇವರಿಗಿನಿತು ನಮ್ಮಯ ಗಡ ನನ್ನೆದು
ನಿವಹವ ಕರೆದು ನೀ ಬಸನ ।
ತವಕದೆ ಲಗ್ಗೆಗೇರಿದ ರಿಪು ಬಲವನು
ಜವನ ನಗರಿಗೈದಿಸೆಂದ ॥ ೪೧

ಮೆದ ಕರಿಗಳ ಪೊತ್ತ ಕದಳಿಯ ವನಗಳ
ಪೊದರ ಕಿತ್ತೀಡಾಡುವಂತೆ ।
ಕದನಗಲಿಗಳಿಂದ ಮುತ್ತಿದ ತುರುಕರ
ಸದೆದೆಬ್ಬಿಸು ನೀನೆಂದ ॥ ೪೨

ಒಡೆಯನ ನುಡಿಗೆ ಹಸಾದವೆನುತಲಾಗ
ಕಡು ಗಲಿ ನಂಜ ರಾಜೇಂದ್ರ ।
ಗಡಿಯ ಮೆನ್ನೆಯರನಾಹ್ವಣ ಚಕೆ ದೆಸೆಗಟ್ಟ
ಬಿಡದೆ ಸಾಹಸವ ಮಾಡಿಸಿದ ॥ ೫೩

ಚೆನ್ನ ಪಟ್ಟಣ ಮದ್ದೂರು ಬೆಳ್ಳೂರಾಳ್ವ
ಮೆನ್ನೆಯರುಗಳೊಂದು ದೆಸೆಗೆ ।
ಉನ್ನತ ಬಲ ಗೂಡಿ ಬಂದಾಗ ತುರುಕರ
ಬನ್ನಕ್ಕೆ ತಂದುದೇನೆಂಬೆ ॥ ೫೪

ಸಲೆ ನಾಗ ಮಂಗಲ ಚೆನರಾಯ ಪಟ್ಟಣ
ತೊಳಗುವ ಹೊಸ ಹೊಳಲಾಳ್ವ ।
ಚಲದಂಕ ಮೆನ್ನೆಯರುಗಳು ಮಾಡಿದ ಶೌರ್ಯ
ದಳವಿಯನೇ ವಣ್ಣಿಸುವೆ ॥ ೫೫

ತಿಪ್ಪೂರು ಕನ್ನಂಬಾಡಿ ಮಳಲವಾಡಿ
ಯೊಪ್ಪುವ ಮೆನ್ನೆಯರುಗಳು ।
ತಪ್ಪದೆ ಲಗ್ಗೆಗೇರಿದ ಖಳರನು ಕೊಲ್ಲ್ವ
ದಪ್ಪವನೇನೆಂಬೆನದನು ॥ ೫೬

ಪಟ್ಟಣ ವೈಸೂರು ತೆರಕಣಾಂಬಿಯನಾಳ್ವ
ಕಟ್ಟುಗ್ರದಥಟ ಮೆನ್ನೆಯರು ।
ನೆಟ್ಟನೆ ಲಗ್ಗೆಗೇರಿದ ಖಳರನು ಸದೆ
ಗುಟ್ಟುವ ಪರಿಯನೇ ವೇಳ್ವ ॥ ೫೭

ಹರದನ ಹಳ್ಳಿ ಸತ್ಯಾಗಾಲ ಮೆಳನಳ್ಳಿ
ಯುರುತರ ತಳಕಾಡನಾಳ್ವ ।
ಪಿರಿದು ಮೆನ್ನೆಯನಾಯಕರು ಲಗ್ಗೆಗೇರಿದ
ತುರುಕರ ಸದೆವುದೇವೇಳ್ವ ॥ ೫೮

ಬಡನಾಗ ಕಂಠೀರವೇಶ್ವರನಾಳುವ
ಪೊಡವಿಯ ಬಲು ಮನ್ನೆಯರು।
ತಡೆಯದೆ ಲಗ್ಗೆಗೇರಿದ ಖಾನ ಖಾನರ
ಕಡಿದೋಡಿಸುವುದೇನೆಂಬೆ ॥ ೫೯

ಹಿಂಡು ಹಿಂಡಿನಲೇಣಿಯ ಮೇಲೇರಿ ಮುಂ
ಕೊಂಡುರುಬುವ ರಿಪು ಬಲವ।
ಖಂಡಿಸಿ ಸಿರಗಳ ಮರುಳ್ಗಳ ಕೊರಳಿಗೆ
ದಂಡೆಯ ಹಾಕಿದರಾಗ ॥ ೬೦

ಇರಿದು ಬಲ್ಲೆಹದಿಂದ ಖಾನರ ಕರುಳ್ಗಳ
ಸರ ಮಾಲೆಗಳ ಬೇಗ ತೆಗೆದು।
ದುರದೊಳೊಪ್ಪುವ ಭೂತಗಳ ಕೊರಳೊಳಗಿಕ್ಕಿ
ಪೆರೆದರುನ್ನತ ಸಾಹಸವ ॥ ೬೧

ಆರ ನೋಡಲು ಜವ ದಾಡೆಯ ತಿರಿಗೂಳ
ಪೂರೈಸಿದ ಗಾಯದನವರು।
ಆರ ನೋಡಲು ನೇಜೆಯದಂಗಲಿ ನೊಂದ
ಮಾರಣದಿಗಳೊಪ್ಪಿದರು ॥ ೬೨

ಕವಿದು ಕೋಟೆಯ ತೆನೆಗುರುಬುವ ಖಾನರ
ತಿವಿಯೆ ಕರಾಚೂರಿಯಿಂದ।
ತವೆ ಕಳಗಾಗೆ ಸುರುಳಿ ಬಿದ್ದ ಸುರರ
ಹವಣನೀಶ್ವರ ತಾನೆ ಬಲ್ಲ ॥ ೬೩

ಚಿಗಿದಾಳ್ವೀರಿಗಳಿವೆ ಖಾನ ಖಾನರ
ನಗುತ ಮುಂದಲೆಗಳ ಪಿಡಿದು।
ಉಗಿದಾಯುಧಗಳ ಶಿರಗಳ ಖಂಡಿಸಿ
ಯಗಳಿಗಿಟ್ಟರು ಬೊಬ್ಬಿಡುತ ॥ ೬೪

ನೇಜೆಯದಿರಿತಕೆ ಸರಿಗೆಯು ಮುರಿಗೊಂಡು
ಮೋಜದೇರುಂ ರಿಪುಭಟಂ ।
ಸೋಜಿಗವಡೆಯೆ ನೋಳ್ಪರು ಬಾಕಿರಿದು ಯುಮೆ
ರಾಜನ ಪುರಕ್ಕೈದಿಸಿದರು ॥ ೬೫

ವಸುಧೇಶ್ವರ ಕಂಠೀರವ ಸಾಕಿ
ದ್ದ ಸಹಾಯ ಶೂರ ಮನ್ನೆಯರು ।
ದೆಸೆ ದೆಸೆಯೊಳು ಕೋಟೆಗತಪ್ಪ ಖಾನರುಗಳ
ಕುಸುರಿದರಿದು ಕೆಡಹಿದರು ॥ ೬೬

ಬಳಿಕ ನಾಲ್ದಿಸೆಯಲಿ ಕಂಠೀರವೇಂದ್ರನ
ಪಳಯ ಪೈಕದ ಪಟು ಭಟನು ।
ತಲೆಗಳ ಚಂಡಾಡಿ ಪೈರಿ ಮೊರ್ಬಲನನು
ಬಲಿಯನಿತ್ತರು ಭೂತ ಗಣಕೆ ॥ ೬೭

ಕೋವಿಯ ಭಟರ ಗುಂಡಿನ ಹಾಳಿಯಲಿ
ಜೀವೆಗಳನು ತೊರೆದಾಗ ।
ಭಾವಿಸೆ ನಾಲ್ಕೆಂಟು ಸಾವಿರ ತುರುಪ್ಕ ಭ
ಟಾವಳಿ ಬಿದ್ದುದೇ ವೇಳ್ವ ॥ ೬೮

ಬಂದೇ ವೇಳೆಯೊಳಗೆ ಲಕ್ಷ್ಯ ಬಾಣವ
ಸಂಧಾನವೆ ಮಾಡಿ ಕರೆಯೆ ।
ಕೊಂದು ಕೆಡಹಿದುವು ತುರುಕ ಮೊರ್ಬಲಕಾಗ
ಬಂದ ಭಂಗವನೇ ವೇಳ್ವ ॥ ೬೯

ಏಣಿಗಳಿಗೆ ಕವೆಗೋಲುಗಳನು ಸಂ
ದಾನಿಸಿ ಕೆಡೆ ನೂಕಲಾಗ ।
ಗೋಣಡಿಯಲಿಬಿದ್ದು ತುರುಕರ ಮೊರ್ಬಲ
ಪ್ರಾಣವ ನೀಗಾಡಿದುದು ॥ ೭೦

ತೊಲೆಗಳೊಳಗೆ ದಸಿಗಳ ಪೆಟ್ಟ್ಯ ಲಂಘಿಪ
ಬಲುವೆಂ ಕಾರರ ಮೇಲೆ ನೂಕೆ ।
ತಲೆ ಮೈ ಕೈ ಕಾಲೊಳು ಗೂಟಗಳು ಮೂಡಿ
ಸಲೆ ತೊರೆದರು ಜೀವಗಳನು ॥ ೨೧

ಎತ್ತುಗಲ್ಲುಗಳಂಬ ಕಲ್ಲು ಹಪಣಿಗ
ಲೊಲ್ಲಿತ್ತಿದ ಗಾಯಗಳಿಂದ ।
ನೆತ್ತಿಗಳೂಡೆದು ಕೈ ಕಾಲುಡೆಗಳೊಳು
ಸತ್ತನೆರಿಗೆ ಲೆಕ್ಕವಿಲ್ಲ ॥ ೨೨

ಉರವಣಿಸುರೆ ಮೇಲಕ್ಕೈದುವ ಚಾನರ
ನಿರದೆ ಮುಂಡಲೆಗಳ ಪಿಡಿದು ।
ಕೊರಳನರಿದು ಭೋಯಿಸುತಿಗೆ ಪಾಳಯ
ಕಾದುಳಲಿಟ್ಟರು ತಲೆಗಳನು ॥ ೨೩

ಖಂಡೆಯುಗಳ ಪೆಟ್ಟನೊಳಗೆ ಗುರಾಣಿಗ
ಳ್ತುಂಡಿಸಿ ತಲೆ ಸೀಳಾಗಿ ।
ಖಂಡಿಸಿ ಸಿಂಗಾಡಿ ದೊಣೆಯಂಬು ಪುಡಿಯೆದ್ದು
ದಿಂಪುರುಳಿತು ಚಾನ ರಾಜೆ ॥ ೨೪

ಕರಿಯ ಮದ್ದಿನ ಸ್ಫೊಟ್ಕಣಗಳ ಪೊತ್ತಿಸಿ
ಭರದಿಂದ ಮೇಲಿಡುತಿರಲು ।
ನೆರೆ ಗಪ್ಪ ಮಂಡೆಮೇಲ್ಕ್ರೀಸೆ ಸೀಕರಿಯಾಗಿ
ಯುರುಳಿ ಬಿದ್ದರು ನೆಲದೊಳಗೆ ॥ ೨೫

ಕೊತ್ತಳಕೊತ್ತಳಗಳಲಿ ಪಿಡಂಗಿಯ
ನೊತ್ತಿ ಸಂದಾನಿಸಿ ಬಿಡಲು ।
ಪತ್ತು ಸಾವಿರ ಕುದುರೆಗಳು ಸೀಕರಿಯಾಗಿ
ಸತ್ತುವೇನೆಂಬೆನಬ್ಭುತವ ॥ ೨೬

ಉಪ್ಪಿನ ತಿತ್ತಿಗಳನು ಬೇಗ ಹೊತ್ತಿಸಿ
ತಪ್ಪದಾನೆಗಳ ಮೇಲಿಡಲು ।
ಕಪ್ಪಿನ ದೇಹಗಳ್ನೀದು ಮುನ್ನೂರಾನೆ
ಕುಪ್ಪಳಿಸಿದುವು ಭೂಮಿಯಲಿ ॥ ೨೨

ಮುರಿದರು ತಳಗಳ ಮೇರುವೆಗಳ ಸುಟ್ಟು
ನೆರೆ ಸುರಂಗಗಳ ದ್ವಾರದಲಿ ।
ಕರಿಯು ಮದ್ದನು ತುಂಬಿ ಹೊತ್ತಿಸಿ ಖಾನರ
ಕರಿಕು ಮಾಡಿದರೇನೆಂಬೆ ॥ ೨೪

ನೆಲ್ಲಿಯ ಕಾಯ್ಗಳ ಹೆಗ್ಗುದಿಗೆಯೊಳಿಡೆ
ಚಲ್ಲವರಿದು ಬೀಳುವಂತೆ ।
ಬಲ್ಲಿದ ಖಾನರು ಚಿಗಿದು ಬಿಟ್ಟುಹ್ಷಣ
ಹಲ್ಲ ಕಿರಿದರಗಳೊಳಗೆ ॥ ೨೫

ಲಗ್ಗೆಯನೇರುವೊಡೈದಿದ ಖಳ ಬಲ
ವೊಗ್ಗರ ಮುರಿದು ಹಿನ್ನೆಲೆಗೆ ।
ಜಗ್ಗನೆ ಜರಿದೋಡಿದರು ದೆಸೆ ದೆಸೆಗಾಗ
ದುರ್ಗದ ಭಟರುರುಬಿಂದ ॥ ೪೦

ಉರಗ ಬಲೌಘವ ಕಂಡಬ್ಬರಿಸಿ ಬಂ
ದೆರಗುವ ಬರ ಸಿಡಿಲಂತೆ ।
ಪಿರಿದು ಕರ್ನಾಟಕದರಿ ಬಲವೆನು ಬಂದು
ತರುಬಿದರೇ ವೇಳ್ವನದನು ॥ ೪೧

ಕಡಿ ಯಿರಿ ಹೊಯ್ ತರಿ ಬೀಳಗೆಡಹು ನೆರೆ
ಬಡ ಮನದರಿಗಳೆನುತ ।
ಪೊಡವಿಪ ಕಂಠೀರವನ ಮೈಗಾವಲ
ಕಡುಗಲಿ ಭಟರುರುಬಿದರು ॥ ೪೨

ಅಡಸಿ ಗಿರಿಯನು ನುಂಗುವ ವೀರನ ಬಾಯಿ
ಹಿಡಿಯದೆ ಪಣ್ಫಲಗಳನು ।
ಕಡುಗಲಿ ತುರುಕರನರೆಯಟ್ಟಿದರು ಮಿಕ್ಕ
ಬಡ ನೃಪರುಗಳ ಲೆಕ್ಕಿಪರೆ ॥ ೪೩

ಎನ್ನ ಬಿಡೆಲೆ ಸ್ವಾಮಿ ತನ್ನ ಬಿಡೀ ಹ್ಹಣ
ವೆನ್ನುತ ಬಲು ತೀವ್ರದಿಂದ ।
ಮನ್ನೆಯರುಗಳು ಮೂದಲಿಸಿ ಮುತ್ತಿದರಿಪು
ಗುನ್ನಿಗಳನು ತೂರಿದರು ॥ ೪೪

ಇರಿದರು ನೇಜೆಯದಲಿ ಮೇಲಕೇರುವ
ದುರಗಲಿಗಳ ಖಡ್ಗದಿಂದ ।
ತರಿದು ತುಂಡಿಸಿ ತೂರಿ ರಣ ಭೂತ ನಿಕರವೆ
ನೆರಹಿದರೇನ ಬಣ್ಣಿಸುವೆ ॥ ೪೫

ಇಟ್ಟರು ಬೇಗಿಟ್ಟಯಲಿ ಕೆಲರೇರುವ
ದಿಟ್ಟರ ಜವ ದಾಡೆಯಿಂದ ।
ಮೆಟ್ಟಿ ಕೊರಳ ಕೊಯ್ದು ಪ್ರಳಯದ ಕಾಲಗೆ
ಕಟ್ಟರವೆಯ ಮಾಡಿದರು ॥ ೪೬

ಕರುಳುಗಳೊಕ್ಕು ಕಾಳಿಜ ಹಾಯ್ದು ನಿಡು ನರ
ಹರಿದು ಚೆನ್ನೀರ್ಗಳು ಹರಿದು ।
ಬಿರಿದು ನೆಟ್ಟೆಲು ಮೈ ಮುರೆದಾಗ ರಿಪು ಬಲ
ಹೊರಳಿದುದೇನೆಂಬೆನದನು ॥ ೪೭

ತುಂಡಾಗಿ ಕೈ ಕಾಲು ಜೋಡು ಸೀಸಕಗಳು
ಖಂಡಿಸಿ ಸಿರದ ಚಿಪ್ಪರಳಿ ।
ಖಂಡ ದಿಡ್ಡಿಗಳದ್ದು ಕರ್ನಾಟಕ ಬಲ
ದಿಂಡುರುಳಿದುದಾ ಹ್ಹಣದೆ ॥ ೪೮

ಹರಿವೆ ಪ್ರವಾಹದುರುಬಿಯ ಸೈರಿಸದಾಗ
ಜರಿವೆ ಮಳಲ ಕಟ್ಟೆಯಂತೆ ।
ಉರುಳಿ ಬಿದ್ದುದು ಭೂಮಿಯೊಳಗೆ ಕರ್ಣಾಟಕ
ದರಿ ಬಲವೇನ ಬಣ್ಣಿಸುವೆ ॥ ೪೯

ಬಿದಿ ಗಾಳಿಯಲೆಗಣ್ಣೆ ಸೆಗೆದ್ದು ತೂರುವ
ತರಗೆಲೆಗಳ ವೊತ್ತವೆನಲು ।
ಸರಿದೋಡಿದುದು ಕಂಠೀರವೇಂದ್ರನ ಭಟ
ರುರುಬಿಗೆ ಪರ ಬಲವಾಗ ॥ ೫೦

ಒಬ್ಬರ ಕಣ್ಣಿಗೊಂದಾಳು ಸಾವಿರವಾಗಿ
ಮಬ್ಬುವಿಡಿದು ಕಾಣಿಸಲು ।
ಉಬ್ಬು ಮುರಿದು ಖಾನರು ಹಿನ್ನೆಲೆಗೈದಿ
ತಬ್ಬಿಬ್ಬಿಗೊಂಡರಾ ಕ್ಷಣದೆ ॥ ೫೧

ಪುರ ತಳ ಲಗ್ಗೆಗೇರಿದ ಖಾನ ಖಾನರ
ಮುರಿಯಲಿರಿದು ಬೀಳಗೆಡಹಿ ।
ದುರ ಗಲಿ ಕಂಠೀರವೇಂದ್ರ ಸು ಭಟರನು
ಹೊರ ಕಾಪ ಬಲಿದ ಪಟ್ಟಣಕೆ ॥ ೫೨

ಬಳಸಿದ ತಳಿಯ ಮುರಿದು ಮೇರುವೆಗಳ
ಬಲು ಶಿಖಿಗಾಹುತಿಯಿತ್ತು ।
ಸಲೆ ಸುರಂಗಗಳ ಘಾತವೆ ಹೂಳಿದರಾಗ
ತಳುವೆದೆ ಹೊರ ಕಾಹಿನವರು ॥ ೫೩

ನೋಡುವೊಡಳವಲ್ಲದಿದಿರಾದ ಖಳರ ವಿ
ಭಾಡಿಸಿ ತಲೆಗಳ ಹೊಯ್ದು ।
ಕೂಡೆ ಬೊಬ್ಬಿರಿದಾಗ ಹೊರ ಕಾಹಿನಭಟರು
ಪಾಡು ಪಂಥಗಳ ಮೆರೆದರು ॥ ೫೪

ಹೆಣಗಳನೆತ್ತುವರುರುಬಿ ಚತು ದೆಸೆಯಲಿ
ರಣಕಿದಿರಾದ ತುರುಕರ।
ಕ್ಷಣದೊಳಗಿರಿದಾಗ ಬೀಳಗೆಡಹಿ ಶೌರ್ಯ
ದಣಿಯ ವೆರೆದರೀ ವೇಳ್ಯೆ ॥ ೯೫

ತರಣಿ ಮಂಡಲವೆ ಮುಸುಕಿದ ಕತ್ತಲೆಯನು
ಕಿರಣದಾಳ್ಗಳು ಮುರಿಯೊತ್ತಿ ।
ಮೆರೆವೋಲು ಖಳರನೋಡಿಸಿ ಹೊರ ಕಾಹಿನ
ಚಕರರು ಚತು ದೆಸೆಯೊಳೊಪ್ಪಿದರು ॥ ೯೬

ನೆರೆ ಗುಹೆಯಿಂದೆದ್ದ ಸಿಂಹ ಗರ್ಜನೆಗಳ್ಕಿ
ಪರಿದೋಡಿ ಮದ ಗಜವಿಂಡು।
ನೆರೆದು ದೂರದಲಿ ನಿಟ್ಟಿಸುವಂತೆ ತುರುಕರ
ಪರಿವಾರವೆಸೆದುದಾಚೆಯಲಿ ॥ ೯೭

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೯೮

ಐನೆಯ ಸಂಧಿ ಸಮಾಪ್ತಂ

ಹದಿನೈದನೆಯ ಸಂಧಿ

ವಿಷಮ ಯುದ್ಧ

ಸೂಚನೆ ॥ ಒಡನೆ ಕಗ್ಗೊಲೆಯ ಕಾಳಗದಲ್ಲಿ ಖಾನರ
ಕಡಿದೋಡಿಸಿದ ನರಸೇಂದ್ರ ॥

ಪುರ ತಳ ಲಗ್ಗೆಗೇರಿದ ಖಾನ ಖಾನರು
ಮುರಿದೋಡಿ ದೆಸೆ ದೆಸೆಗಾಗ ।
ಪುರವ ಬಿಟ್ಟಾರೆ ಗಾವುದದಲಿ ಬೀಡಿಳ
ದಿರುವ ಭಂಗವನೇ ವೇಳ್ವ ॥ ೧

ಬಳಸಿ ಬಿದ್ದಿಹ ಹೆಣಗಳನೆತ್ತಲಮ್ಮದೆ
ಸಲೆ ನೊಂದು ಖಾನ ಮುಲುಕರು ।
ತಳತಂತ್ರಗೂಡಿ ಹಿನ್ನೆಲೆಗೈದಿ ಬೀಡಿಳ
ದಳವೆ ನಾನೇನ ಬಣ್ಣಿಸುವೆ ॥ ೨

ಆ ಸಮಯದಲಿ ಬೆಳಗು ಜಾವಗತ್ತಲೆ
ಬಾಸಣಿಸಲು ಭೂಮಿಯನು ।
ಗಾಸಿಯಾಗಿರಲೋಡಿದ ಖಳ ಬಲ ವಾ
ರಾಸಿ ಮೌನದೊಳೊಪ್ಪಿರಲು ॥ ೩

ದೊರೆ ರಾಯ ನರಸೇಂದ್ರನ ದಳ ಪತಿಯಾಗ
ಕರಿಸಿ ಬೇಹಿನ ಚರರುಗಳ ।
ತುರುಕರ ಪಾಳಯಕ್ಕೈದಿ ನೀವವರಿರು
ವಿರವನರುಪಿ ತಮಗೆಂದ ॥ ೪

ಎನಲು ಹಸಾದವೆಂದೆನ್ನುತಲಾ ದೂತ
ರನಿತರೊಳ್ ಬೇಗನೆ ನಡೆದು ।
ಘನವಾಗಿ ಲಗ್ಗೆಯೊಳಗೆ ನೊಂದ ವೈರಿಗ
ಳನುವ ನಿಟ್ಟಿಸಿ ತಿರುಗಿದರು ॥ ೫

ಬಂದು ಚರರು ದಳ ಪತಿಯಿದಿರೊಳಗಾಗ
ನಿಂದು ಕರಾಬ್ಜವ ಮುಗಿದು ।
ಇಂದೀಗ ತುರುಕರನಿರಿದೋಡಿಸುವ ವೇಳ
ಯೆಂದು ಬಿನ್ನಹ ಮಾಡಿದರು ॥ ೬

ನೆರೆ ಗಾಯ ಪಡೆದಿಹರ್ಕ್ಕಲರು ನೊಂದವರಿಗೆ
ಮರುಗಿ ಮುಂಗೆಟ್ಟಿಹರ್ಕ್ಕಲರು ।
ಸುರೆಯ ಸೊಕ್ಕೇರಿ ಮೈ ಮರೆದಿಹ ತುರುಕರ
ಪರಿವಾರವಿದೆ ಚಿತ್ತೈಸು ॥ ೭

ಬೆಳಗು ಜಾವದ ಬಲು ನಿದ್ರೆಗೆ ಮನವಿ
ತ್ತೆಳದು ಕೊಲುವರನರಿಯದೆ ।
ತಳತಂತ್ರವಿದೆ ತುರುಕರ ನಾವು ನೋಡಿ ಬಂ
ದಳವಿಂತೀಗೆಂದರಾಗ ॥ ೮

ಕೇಳಿ ನಗುತ ದಳ ಪತಿ ನರಸೇಂದ್ರ ಭೂ
ಪಾಲನಿದ್ದೆಡೆಗೈತಂದು ।
ಬಾಳಕೆ ಕರ ಪುಟಾಂಜಲಿಯಿತ್ತು ಬಲು ಕಾರ್ಯ
ದಾಳಾಪವ ಬಿನ್ನವಿಸಿದ ॥ ೯

ಇದು ವೇಳೆ ಜೀಯ ಕಗ್ಗೊಲೆಯು ಕಾಳಗದಲ್ಲಿ
ಮದ ಮುಖ ಖ್ಯಾನನ ಬಲವ ।
ಸದೆದೆಬ್ಬಿಸ ಬೇಕೆಂದಾಗ ದಳ ಪತಿ
ಮುದ ಮಿಗೆ ಬಿನ್ನವಿಸಿದನು ॥ ೧೦

ಆದೊಡೊಳ್ಳಿತು ನಮ್ಮ ಬಲ ಸರ್ವ ಸನ್ನಾಹ
ವೈದಿ ಬಂದಿರಲೆಂದಾಗ ।
ಮೇದಿನೀಶ್ವರ ದಳ ಪತಿಗೆ ನೇಮಿಸುತನು
ವಾದನಾಹವಕಾ ಹ್ವಣದೆ ॥ ೧೧

ಮುತ್ತಿನ ದಗಲೆ ವಜ್ರದ ಜೋಡು ಸಿರದಲಿ
ಬಿತ್ತರವಹ ಸೀಸಕದ ।
ಪುಸ್ತಂಗ ತೊಡರಾ ಗಾವೆಳಯಿಂದ ಭೂ
ಪೋತ್ತಮ ನಡೆದನುಬ್ಬಿನಲಿ ॥ ೧೨

ಮಿರುಗುವ ಮಿಸುನಿಯ ದಟ್ಟಿ ಕಟಿಯೊಳೊಪ್ಪಿ
ಮೆರೆವ ರತ್ನದ ಬಾಕಿನಿಂದ ।
ಒರೆಯನುಗಿದ ಖಡ್ಗ ವಿಡಿದು ಕಂಬದೆ ಬಂದ
ನರಸಿಂಹನಂತೆ ರಂಜಿಸಿದ ॥ ೧೩

ಬಿರುದಿನ ಪೊಂಬಾವಡೆ ಸೆಡಕಿನ ವಲ್ಲಿ
ಕೊರಳ ಮುತ್ತಿನ ಜೂಳಯದ ।
ಮಿರುಗುವ ರತ್ನ ಭೂಷಣಗಳಾಂತಿಹ ಹಯ
ಖುರವೆತ್ತಿ ಕುಣಿಯುತ್ತೈದಿದುವ್ರ ॥ ೧೪

ಒಡನಾಗ ಜಯ ಘೋಷದಿಂ ರಾಜ ತೇಜಿಯ
ನಡರಿ ಖಂಡೆಯವ ಚಿಮ್ಮಿಸುತ ।
ಕಡು ತವಕದಲಿ ಕಂಠೀರವ ರಾಜೇಂದ್ರ
ನಡೆದನು ಧುರ ಮಂಡಲಕೆ ॥ ೧೫

ಮೊಳಗುವ ಜಯ ಭೇರಿಯ ರವದಿಂದಾಗ
ತಳತಂತ್ರವ ಕೂಡಿ ಕೊಂಡು ।
ಗಳಲನೆ ಪುರವೆ ಹೊರಟು ಶುಭ ಶಕುನಗ
ಳುಲುಹನಾಲಿಸುತ್ತೈತಂದ ॥ ೧೬

ದಳ ಪತಿ ನಂಜರಾಜೇಂದ್ರ ಲಿಂಗೇಂದ್ರರ
ತಳುವೆದೆರಡು ಪೌಜ ಮಾಡಿ ।
ಇಳೆಯಾಣ್ಮ ತನ್ನೆಡ ಬಲದೊಳಿಂಬಿಟ್ಟಾಗ
ಲಳವೆಟ್ಟು ನಡೆದನು ರಣಕೆ ॥ ೧೭

ಕರೆ ಕರೆದಾಗ ಮನ್ನೆಯ ಮಂಡಲಿಕರ
ದುರಗಲಿ ನಾಯಕರುಗಳ ।
ನೆರೆ ಮುಂ ಚೂಳಿಯು ಜಗಳಕೆ ನೇಮಿಸಿ
ಪರಿವಾರದೊಡನೆ ಬೀಳ್ಕೊಟ್ಟ ॥ ೧೮

ಬಿರುದಿನ ಕುದುರೆಗಳಗಣಿತವೆಹ ಬಲ
ಕರಿ ಘಟಾವಳಿಗಳೂಗ್ಗಿನಲಿ ।
ದುರ ಗಲಿ ನರಸೇಂದ್ರ ರಾಯ ವೋಹರದೊಳು
ಪರಿ ಶೋಭಿಸಿದನುಬ್ಬಿನಲಿ ॥ ೧೯

ಗಜಗಳ ಬೃಂಹಿತ ಹಯದ ಹೇಷಾರವ
ನಿಜ ಪದಾತಿಯ ಬೊಬ್ಬಾಟ ।
ವಿಜಯ ವಾದ್ಯಗಳಬ್ಬರ ರಾಯ ಪೌಜಲಿ
ತ್ರಿ ಜಗಕ್ಕೆ ಭಯವ ಬೀರಿದುವು ॥ ೨೦

ಕುಂತ ತೋಮರ ಖಡ್ಗ ಸುರಗಿ ಭಲ್ಲೆಹಗಳ
ಕಾಂತಿ ಮುಸುಕೆ ಚೌದೆಸೆಯು ।
ಹೊಂತಕಾರಿಗಳಾಗ ರಾಯ ವೋಹರದಲಿ
ಪಂತದೊಳೆಸೆದರುಬ್ಬಿನಲಿ ॥ ೨೧

ಇದೆ ಬಂದೆವು ಕಗ್ಗೊಲೆಗೆಚ್ಚರಿನೊಳ
ಗಿದಿರಾಗೆಂದರಿಗಳ್ಗೆ ।
ಮೊದದಿಂದ ದೂತರನಟ್ಟಿಯಾ ಹ್ವಣದೊಳು
ಕದನಕ್ಕೈದಿದರು ಮನ್ನೆಯರು ॥ ೨೨

ಕೊಂಬು ಕಾಹಳೆ ರಾಯ ಭೇರಿ ಬುರುಗು ಬಲು
ಬೊಂಬುಳಿಯಬ್ಬರಗೂಡಿ ।
ಮುಂಬರಿದುರುಬುವ ಭಟರ ಕೋಲಾಹಲ
ತುಂಬಿತಾಕಾಶ ಮೆಂಡಲವ ॥ ೨೩

* ಇರಿ ಕಡಿ ತರಿ ಯರಿ ಯಿಂದು ವೈರಿಗಳನೆಂ
ದುರುಬೆ ಚೌ ದೆಸೆಯೊಳಗಂದು ।
ದುರ ಗಲಿ ಕಂಠೀರವೇಂದ್ರ ನಿಟ್ಟಿಸೆ ಭಟ
ರುರುಬಿ ಮುತ್ತಿದರರಿಗಳನು ॥ ೨೪

ಬರ ಸಿಡಿಲುಗಳ ಸಮೂಹವೆಬ್ಬರಿಸುತ
ಗಿರಿ ಶಿಖರಗಳ ಹೊಯ್ವಂತೆ ।
ಬಿರುದಿನ ಹೊಣಕೆಯ ಹೊಂತಕಾರಿಗಳಾಗ
ತರುಬಿದರರಿ ವಾಹಿನಿಯ ॥ ೨೫

ಕಂಡನು ಕಂಠೀರವೇಂದ್ರನ ಬಲ ಮುಂ
ಕೊಂಡು ನುಸುಳುತಿದಬ್ಬರವನು ।
ಚಂಡ ಪರಾಕ್ರಮಿ ರಣ ಧೂಳಿ ಖಾನನು
ದ್ದಂಡದೊಳೇರಿದ ಹಯವ ॥ ೨೬

ಮುಳಿದು ಕಣ್ಗಿಡಿ ಗೆದರುತ ಖಾನ ಹಿನ್ನೆಲೆ
ಗೆಳಸಿದೊಜ್ಜೀರ ಮುಲುಕರ ।
ಸಲೆ ಜರೆದದ್ದರಿಸುತ ಫೌಜನಲ್ಲಲ್ಲಿ
ಬಲಿದನು ಬಹುಳ ಸನ್ನಹದೆ ॥ ೨೭

ಕಿರಿದು ಬಲಕೆ ಹೆಬ್ಬಲ ಮುರಿದೋಡಲು
ಪಿರಿದಳಿ ಜಸ ವೆಣ್ಣು ನಮ್ಮ ।
ಸೆರಗ ಪಿಡಿವಳೆಂದು ನುಡಿದು ಖಾನರನಾಗ
ದುರಕನು ಗೈದನೇ ವೇಳ್ವ ॥ ೨೮

---

* ಇರಿ ಕಡಿ ತರಿ ಯಿರಿ ಯೆಂಬ ವೈರಿಗಳನೆಂದುರುಬಿದರರಿವಾಹಿನಿಯ ಬೌದೆಸೆಯೊಳಗಂದು ॥

ಕಲಿಯೋರಿ ರಣ ಧೂಳಿ ಖಾನ ಖಾನರು ಸಹ
ತಳತಂತ್ರವ ಕೂಡಿಕೊಂಡು ।
ಚಲದಂಕ ಕಂಠೀರವೇಂದ್ರನ ಬಲಕಾಗ
ಮಲೆತು ನಿಂದು ಕೋಪದಿಂದ ॥ ೮೯

ಕವಿ ಕವಿ ಕಗೊಳ್ಳಲಿಗೈದಿದ ವೈಸೂ
ರವನಿಪತಿಯು ಮಾರ್ಬಲವ ।
ತವೆ ಮುರಿ ಮುರಿ ಯೆಂದು ಖಾನ ಖಾನರು ಬಂ
ದವಗಡಿಸಿದರು ಬೊಬ್ಬಿಡುತ ॥ ೯೦

ಏರಿದು ಜೀವಮೊತ ಮಂಡಲ ಭೋಗ್ಗರೆದಾಗ
ಕರೆವೆ ಕಾರ್ಮೊಳಗಳಂದದಲಿ ।
ಬಿರುದಿನ ಖಾನರು ಸಿಂಗಾಡಿಯಂಬಿನ
ಸರಿಗರೆದರು ಭೋಯೆನುತ ॥ ೯೧

ಪಾಳೆಯದಂಗರಕ್ಷೆಗೆ ಸುತ್ತ ಬಳಸುವ
ದಾಳಿಯ ತುರಗ ರಾವುತರು ।
ಬಾಳ ಜಡಿದು ಮುಂದಕುರುಬುವ ಸುಭಟರ
* ತೋಳನೊಡನೆ ತರುಬಿದರು ॥ ೯೨

ಪುರದ †ಲಗ್ಗೆಗೆ ನೊಂದ ಬಲವೆಂದು ಹೊರಹೊರ
ಟರದೆ ನೀವೆಮ್ಮ ಮೇಲುರುಬೆ ।
ನೆರೆ ತಲೆ ಪರಿದೊಡಟ್ಟೈಯಲಿ ಕಾದುವ ಕಲಿ
ತುರುಕರೆಂದುರೆ ಗರ್ಜಿಸಿದರು ॥ ೯೩

ಗಾಯ ಗಾಣಿಸಿ ಹಲ್ಲ ಕಿರಿದು ಸಲಾಮೆಂದು
ಬಾಯ ಬಿಡುವ ಹಂದೆಗಳಿರ ।
ದಾಯದ ಪಂತವೆ ನಿಮಗೆಂದು ಸುಭಟ ನಿ
ಕಾಯ ಮುತ್ತಿತು ತುರುಕರನು ॥ ೯೪

---

* ತೋಳಗೊಡದೆ. † ಲಗ್ಗೆಯಲ್ಕೊಂದ.

ಮಂಡಲೇಶ್ವರ ನರಸೇಂದ್ರನ ಪಟ್ಟದ
ಶುಂಡಾಲಗಳ ಕೈ ಗುಣದ ।
ದಂಡಿಯ ನೋಡೆಂದು ಮನ್ನೆಯ ನಿಕರ ಮುಂ
ಕೊಂಡುರುಬಿದರರಿಗಳನು ॥ ೩೫

ಪಿಡಿದ ಬಲ್ಲಿಹದಿಂದಲಿರಿದಿರಿದಶ್ವದ
ಗಡಣವ ಬೀಳ ಗೆಡಹುತ ।
ತುಡುಕಿ ಮುಂದಲೆಯ ರಾವುತರ ಕೊರಳ ಬೇಗ
ಕಡಿದಿಟ್ಟರು ಖಡ್ಗದಿಂದ ॥ ೩೬

ಸುರಗಿಯ ಸುಭಟರು ಸೂಟಿಯೊಳ್ಕೃತಂ
ದುರವೆಣಿಸುವ ತುರುಕರನು ।
ಉರವನಿಬ್ಬಗೆ ಮಾಡಿ ಬಿಸಿ ರಕ್ತವ ಭೂತ
ಕಿರದೆ ಚೆಲ್ಲಿದರಾ ಹ್ಷಣದೆ ॥ ೩೭

ಚಿನ್ನದ ಹರಡೆ ಯಿಟ್ಟಗಳೂಳಿಗದವ
ರುನ್ನತದೊಳಗೈದಿ ಬರುವ ।
ಮನ್ನೆಯ ಖಾನ ವಜೀರರ ಬಲವನು
ಬೆನ್ನಟ್ಟಿ ಬೀಳಲಿರಿದರು ॥ ೩೮

* ಹರಿಗೆಯ ಗದೆಯ ನೇಜೆಯದೊಂಟರಿಗಾರ
ರುರವೆಣಿಸುವ ತುರುಕರನು ।
ಮುರಿಯಲಿರಿದು ಮೂಗರಿದು ತಂದಾಹ್ಷಣ
ಸರಗಟ್ಟಿ ಮೆರಿಸಿದರಾಗ ॥ ೩೯

ಬೆಳ್ಳಿಯ ಕಟ್ಟಿನ ಬಿಲ್ಲಿನ ವೀರರು
ಬಲ್ಲಿದ ಖಾನ ಖಾನರನು ।
ಚಲ್ಲಸರಿಯಲೆಚ್ಚು ಗಾಯಗಳನು ಮಾಡಿ
ತಲ್ಲಣಗೊಳಿಸಿದರಾಗ ॥ ೪೦

* ಹರಿಬಿಯುಗರೆಯೆಸಿಹೋಯದನೊಂಟರಿಗಾರ.

ಮೋಡಿಯು ಹರಿಗೆಯ ಭಟರು ನೇಜೆಯಗಳ
ನೀಡುತಿರುವ ಮುಲ್ಲುಕರ ।
ಪಾಡುಗೆಡಿಸಿ ಹೊಯ್ದುರೆಯಟ್ಟಿ ದೆಸೆ ದೆಸೆ
ಗೋಡಿಸಿದುದನೇ ವೇಳ್ವ ॥ ೪೧

ಪ್ರಳಯದ ದಾವಾಗ್ನಿಯ ದಳ್ಳುರಿ ಮುತ್ತಿ
ಮುಳಿದು ಬನವ ಸುಡುವಂತೆ ।
ಕಲಿಗಳು ಕರೆವ ಬಾಣದ ಶಿಖಿ ಖಳ ಬಲ
ದೊಳ ಹೊಕ್ಕ ಸದೆದುವಾ ಕ್ಷಣದೆ ॥ ೪೨

ಕಡು ಕೋಪ ವಿಡಿದ ರುದ್ರನ ಕಣ್ಣಿಡಿಗಳ
ಗಡಣಗಳನೆ ಪಟು ಭಟರು ।
ಇಡುವ ತುಪಾಕಿಯ ಗುಂಡುಗಳುರುಬಿ ಕಂ
ಗೆಡಿಸಿದುವರಿ ಮಾರ್ಬಲವ ॥ ೪೩

* ನೂಕಿ ಸಿಂಗಾಡಿಯುಂಬನು ರಿಪುದಲೆಗಳ
ನಾಕಕ್ಕೆ ಸಿಡಿಯುಲೆಸೆಯಲು ।
† ಸೋಕಿನಲುಗುತಿಹ ಕೆನ್ನೀರ್ಗಳ ರಣ
ಶಾಕಿನಿಯರುಗಳೀಂಟಿದರು ॥ ೪೪

ಇಟ್ಟರು ಕೈಯಿಟ್ಟಯಲಿ ಮುಂದಕ್ಕೈದುವ
ದಿಟ್ಟರ ಜವ ದಾಡೆಯಿಂದ ।
ಮೆಟ್ಟಿ ಯಿರಿದು ಯಮ ರಾಜನ ಕೈಲೆಡೆ
ಗೊಟ್ಟರೇನೆಂಬೆನದ್ಭುತವ ॥ ೪೫

ಹರಿಗೆಗಳನು ಖಂಡಿಸಿ ಬೆನ್ನೊಳಗಿಹ
ತರಕಸಗಳ ಹುಡಿ ಮಾಡಿ ।
ಸಿರದ ಮುಂಡಾಸವ ಸೀಳ್ದಿಕ್ಕಿ ದಗಲೆಯ
ಪರಿಪಾಟ ಮಾಡಿದರಾಗ ॥ ೪೬

---

* ತೊಟ್ಟಸಿಂಗಾಡಿಯುಂಬಿಲಿ. † ಮೋಕಿಸಲುಗುತಿಹ.

ಸಿಂಗಾಡಿಗಳ ತುಂಡಿಸಿ ನೇಜೆಯಗಳ
ಲಂಗಿಸಿ ಸೆಳಸೆಳದಿಡುತ ।
ಹಿಂಗದೆ ಗಾಯ ಗಾಣಿಸಿ ಖಾನ ಖಾನರ
ಭಂಗಕ್ಕೆ ತಂದರಾ ಹ್ಷಣದೆ ॥ ೪೬

ಸಾಯುದರಿಲ್ಲ ಖಂಡೆಯದ ಪೆಟ್ಟಲಿ ನೆರೆ
ನೋಯದರಿಲ್ಲ ಬಾಕಿನಲಿ ।
ಗಾಯ ಪಡೆಯದವರಿಲ್ಲದಾಖಳ ಬಲ
ದಾಯಾಸವನೇನೆಂಬೆ ॥ ೪೭

ಆರ ನೋಡಲು ಸುರುಟಿಯ ಕತ್ತಿಗಳ ಹುಯ್ಲು
ಧಾರೆಗಿಕ್ಕಡಿಯಾದವರು ।
ಆರ ನೋಡಲು ನೇಜೆಯದ ಗಾಯದೆ ನೊಂದ
ಮಾರಣದರಿಗಳೂಪ್ಪಿದರು ॥ ೪೮

ಉರುಳುವ ನರಳುವ ತೆರಳುವ ಹೊರಳುವ
ಬಿರಳ ಕಚ್ಚುವೆ ಬೇಡಿಕೊಳ್ವ ।
ಕರುಳು ಕಾಳಿಜಗಳು ಸುರಿವ ಖಾನರುಗಳ
ನೆರವಿ ಯೊಪ್ಪಿತು ರಣದೊಳಗೆ ॥ ೪೯

ಕರುಳ ಪೂಗೊಂಚಲು ಖಂಡದ ಕಳಿಕೆ ಬಂ
ಧುರದೆಲು ಶಾಖೆಗಳಾಗೆ ।
ಪಿರಿದು ಚೆಂದೊರಳದಳಿರ ಕಬಂಧದ್ರುಮ
ವೆರೆದುವು ಖಡ್ಗ ಚೈತ್ರದಲಿ ॥ ೫೦

ರಣದೊಳು ಕೆಡೆದ ಕರಿಗಳಟ್ಟೈ ಕಾಳ್ಮೀಫ
ಹ್ಷಣ ರುಚಿ ಶರಗಳ ಬೆಳಕು ।
ಅಣೆದೈದಿದರಿಗಳ ಕೊರಳ ಬನಗಳಲ್ಲಿ
ಕುಣಿದುವು ಭಟರಸಿ ಕೇಕಿ ॥ ೫೧

ತೊರಳೆ ತೊಂಗಳ ಮಜ್ಜೆ ಮಾಂಸಗಳನು ಸವಿ
ದುರು ಭೂತದೆಂಜಲು ಕೈಗೆ ।
ಎರೆವ ಘಟದ ವಾರಿಗಳನೆ ರಕ್ತವ
ಕರೆದುವು ಭಟರ ಖಡ್ಗಗಳು ॥ ೫೩

ಭಲರೆ ಭಾಪುರೆ ಕಲಿ ಕಂಠೀರವೇಂದ್ರನ
ಸಲೆ ಘಟ್ಟದಾನೆಗಳನುತ ।
ನಲಿದು ಎಂದಿಗಳು ಕೈವಾರಿಸೆ ರಕ್ತದ
ಬಲುಗಾಲುವೆಯ ಪರಿಸಿದರು ॥ ೫೪

ಕರಿಗಿರಿಯೊಳು ದಗದಗಿಸಿ ಹಯಾವಳಿ
ಯುರು ಗುಲ್ಮದೊಳು ಭುಗುಭುಗಿಸಿ ।
ಬಿರುದಿನ ಮನ್ನೆಯ ಭಟರ ಪ್ರತಾಪಾಗ್ನಿ
ಮೆರೆದುದು ರಿಪುಜನದೊಳಗೆ ॥ ೫೫

ಉಸಿರಲಳವೆ ನರ ಸಿಂಹನ ಕಾಲ್ದುಳಿ
ಯೆಸಕದೊಳಗೆ ಹಿರಣ್ಯಕನ ।
ಅಸಮ ಮಾರ್ಬಲನುಗ್ಗಾಣಂತೆ ತುರುಕರು
ದೆಸೆ ಗೆಟ್ಟುರುಳಿದರಾಗ ॥ ೫೬

ರಾಮಚಂದ್ರನ ಶರದಲಿ ಖರ ದೂಷಣ
ಸ್ತೋಮ ಪಡಿದ ತೆರದಂತೆ ।
ಭೂಮಿಪಾಲನ ಸುಭಟರ ಶೌರ್ಯದಲ್ಲಿ ನಿ
ರ್ನಾಮವೈದಿದರು ತುರುಕರು ॥ ೫೭

ಹನುಮನ ಕಾಲ್ದುಳಿಯಲಿ ಕೋಟಿ ರಕ್ಕಸ
* ರನುಗೆಟ್ಟಸು ಮೆರೆದಂತೆ ।
ಘನರಾದ ತುರುಕರು ಕಂಠೀರವೇಂದ್ರನ
ಮನೆಯಾಳ್ಗಳಿಂದ ಮಡಿದರು ॥ ೫೮

* ರನುಗೆಟ್ಟಸಿಯರದಂತೆ.

ವೀರಭದ್ರನ ಮುಸಕದಲಿ ದಕ್ಷನ ಬಲ
ಕಾರಗಲಸಿದಂದದಲಿ ।
ಪೂರೈಸಿ ತುರುಕರು ಕಂಠೀರವೇಂದ್ರನ
ಕೂರಸಿಯಲಿ ನುಗ್ಗಾಯ್ತು ॥ ೫೯

ತೊರೆಯುತ ಮೊರೆಯುತ ಸುರಿಯುತ ರಕ್ತವ
ಕರ ಚರಣಗಳಾಡಿಸುತ ।
ಅರಿ ಪೆಣಗಳು ಲೆಕ್ಕವಿಲ್ಲದೆ ನೋಟಕ
ಚ್ಚರಿಯ ಪುಟ್ಟಿಸುತೊಪ್ಪಿದುವು ॥ ೬೦

ಅರೆ ಗಚ್ಚಿದ ನಾಲಗೆ ಕಡೆ ವಾಯೊಳು
ಸುರಿ ಜೊಲ್ಲು ಬಿಟ್ಟ ಕಣ್ಣಗಳ ।
ನೆರೆ ಕೆತ್ತುವಂಗುಳ * ಜೀವ ಬಿಡುವ ಹೆಣ
ಧರಣಿಯೊಳ್ ಮೆರೆದುವದ್ಭುತದೆ ॥ ೬೧

ಒಡೆದ ತಲೆಗಳಿಂದ ಕಡಿದ ಕಾಲುಗಳಿಂದ
ಬಿಡದೆ ತುಂಡಾದ ಕೈಯಿಂದ ।
ಸಿಡಿದ ತೊಡೆಗಳಿಂದ ನಿರಿಗರುಳುಗಳಿಂದ
ಜಡಿದುದು ರಣ ಭೂಮಿ ಯಾಗ ॥ ೬೨

ಕುಣಿವ ಮುಂಡಗಳಿಂದ ಮಣಿವ ಭೂತಗಳಿಂದ
ಅಣೆದು ಚಿಮ್ಮುವ ರಕ್ತದಿಂದ ।
ಗಣನೆ ಯಿಲ್ಲದೆ ಮುಸುಕಿದ ಖಗ ಮೃಗದಿಂದ
ರಣ ಭೂಮಿ ಮೆರೆದುದೇ ವೇಳ್ವ ॥ ೬೩

ಕಡಿದ ಹರಿಗೆ ಸೀಳಾದ ಸಿಂಗಾಡಿಗ
ಳುಡಿದ ಹಕ್ಕರಿಗೆ ಯಂಚೆಗಳ ।
ಬಿಡದೆ ಪರಿದ ದಟ್ಟಿ ದಗಲೆ ಜೋಡುಗಳಿಂದ
ಜಡಿದುದು ರಣ ಭೂಮಿ ಯಾಗ ॥ ೬೪

---

* ಬಿದ್ದ.

ಮುರಿದ ಸತ್ತಿಗೆ ಡಾಳು ಪರಿದ ಟಿಕ್ಕೆಯಗಳಿಂ
ದಿರದಾಗ ಜೀವವ ತೊರೆದ ।
ಕರಿ ತುರಗಗಳ ಸಾಲಿಕ್ಕಿದ ಮೆದೆಯಿಂದ
ಮೆರೆದುದು ರಣ ಭೂಮಿ ಯಂದು ॥ ೬೫

ಖಂಡಿಸಿದುರು ಬಲ್ಲೆಹ ಸರ ನೇಜೆಯ
ತುಂಡಾದ ಖಡುಗ ಕುಂತಗಳ ।
ದಿಂಡುದರಿದು ಕೆಡಹಿದ ಸಾಲ ಕೊಲ್ಲಾರ
ಬಂಡಿಗಳೆಸೆದುವಾ ಧುರದೆ ॥ ೬೬

ಸೀಳಾದ ನಪಿರಿ ಬುರುಗು ಡೊಳು ಕೊಂಬಿನ
ಕಾಳೆಯೊಡೆದ ಡಮಾಮಿಗಳ ।
ಹೊಳಿನೊಟ್ಟಲ ಸಂದಣಿಗಳ ಧಾಳಾ
ಧೂಳಿ ಯೊಪ್ಪಿತು ರಣದೊಳಗೆ ॥ ೬೭

ಹೊಸ ಹೆಣದಾಲಿಗಳನು ಚಕಂಚು ಪ್ರುಟದಿಂದ
* ಮಿಸುಕಿ ಕುಟುಕು ಗೊಳುತಾಗ ।
ಎಸೆದುವು ಬಲಿ ಭುಕ್ಕುಗಳು ಮೊತ್ತ ಮೊತ್ತದಿಂ
ದೊಸೆದಾ ರಣ ಭೂಮಿಯೊಳಗೆ ॥ ೬೮

ಜೊಲುವ ಕೆಂಗರಳು ಗಳ ಕೊಕ್ಕಲಿ ಕಚ್ಚಿ
ಕೀಳುತ ಸವಿ ಸವಿದೊಡನೆ ।
ಮೇಲಾದ ರಣ ಭೂಮಿಯೊಳಗೆ ಕೌಶಿಕ ಕುಲ
ಜಾಲವೊಪ್ಪಿದುವೇ ವೇಳ್ವ ॥ ೬೯

ಬಲುಮೆಯಿಂ ನೆಣನೆಳೆದೆಳದು ಖಂಡವ ಕಚ್ಚಿ
ಕೊಳುತ ಮೇಲಕೆ ವೊಗ ನೆಗಹಿ ।
ಸಲೆ ಭೀಕರದೆ ಕೂಗುವ ಸೃಗಾಲಂಗಳ
ಬಳಗವೊಪ್ಪಿದುವಾ ಧುರದೆ ॥ ೭೦

* ಮುಸಕಿ.

ತಲೆಯೋಡುಗಳಲ್ಲಿ ರಕ್ತವ ತುಂಬಿ ಕೈ
ಯೊಳುರೆ ಸವಿದು ಚಪ್ಪರಿದು ।
ಸಲೆ ಮುದಿರಾವೇಶದಲಿ ಕುಣಿಕುಣಿದಾಗ
ನಲಿದಾಡಿದುವು ಮರುಳುಗಳು ॥ ೬೧

ಖಂಡದಿಂಡೆಗಳ ತೆಗೆದು ಬಾಯೊಳು ತುಂಬಿ
ಕೊಂಡು ಚಪ್ಪಳಯಿಕ್ಕಿ ನಲಿದು ।
ಕೊಂಡಾಡಿ ಭೂಪನ ಸುಭಟರ ಡಾಕಿನಿ
ತಂಡವೆಸೆದುವಾ ರಣದೆ ॥ ೬೦

ಕರುಳ ತೊಂಡಲು ಖಂಡದ ಬಣ್ಣ ಬಾಸಿಗ
ನರದ ಹಂಜರ ಚಪ್ಪರದಲಿ ।
ನೆರೆದು ಶಾಕಿನಿಯರು ಮೆದುವೆಯ ಮಾಡುತ
ಮೆರೆದರು ತವ್ಮೊಳಗಾಗ ॥ ೬೩

ದುರದಲಿ ಮಡಿದ ಖಾನರ ತವ್ಮ ಹೆಣಗಳ
ನುರೆ ಕಂಡು ಕರ್ಣಾಟದವರು ।
ಸರಿದರು ಹಿನ್ನೆಲೆಗಾಗಿ ಕಂಠೀರವ
ನುರು ಪರಾಕ್ರಮಕೆಣೆ ಯುಂಟೆ ॥ ೬೪

ಖಾನನ ಸುತರಳಿಯುಂದಿರು ಬಲವಂತ
ಖಾನನ ನಂದನರುಗಳು ।
ಏನೆಂಬೆ ಯೆಕಲಾಸ ಖಾನನಾತ್ಮಜರಂ
ದಾನದಳಿದರಾ ರಣದೆ ॥ ೬೫

ಬಳಿಕ ಮುಸ್ತಪ ಖಾನನ ಮೊಮ್ಮಕ್ಕಳು
ಚಲದಂಕ ಕರಿಯಾತಿ ಖಾನ ।
ಜಿಲಹರ ಸಹಜೆ ನುಲ್ಲಿಗೆ ಖಾನನಳಿಯಂದಿ
ರಳಿದರು ರಣ ಮಂಡಲದಲಿ ॥ ೬೬

ಬಳಿಕ ಪಾತ್ಸ್ಯಾಹಿನ ಪಚ್ಚಿ ಯೂಟದ ಬಲು
ಸಿಲುಖಾನರೈದು ಸಾವಿರಕೆ ।
ಸಲೆ ಯಮ ಪುರದಲಿ ಬೀಡಾರವಾದುದು
ಬಲುಹ ಬಣ್ಣಿಸರಾರು ಭಟರ ॥ ೭೫

ಖಾನನ ಮೈಗಾವಲಿನ ವಜೀರರ
ದೇನೆಂಬೆ ಕಗ್ಗೊಲೆಯಲ್ಲಿ ।
ಆನಲಾರದೆ ಹತ್ತು ಸಾವಿರ ಮಡಿದು ದು
ಮ್ಮಾನವನಿತ್ತರಾತನಿಗೆ ॥ ೭೪

ಅಂಬರಖಾನನ ಬಳಿಯ ಲಕ್ಕರಿಗಳ
ತುಂಬು ಲೆಕ್ಕಕ್ಕೆ ಸಂದಾಗ ।
ಒಂಭತ್ತು ಸಾವಿರ ಮಡಿದುದು ರಣದಲ್ಲಿ
ಕುಂಭಿನಿ ಹೆಣಮಯವಾಗೆ ॥ ೭೫

ಕರಿಯಾತಿ ಖಾನನದ್ದಮ ವೇದೋಜಿಯ
ಗುರುತಿನ ಖಾನ ರಾವುತರು ।
ನೆರೆ ಹತ್ತು ಸಾವಿರ ಮಡಿದರವಾರಣ
ದಿರವ ನಾನೇನ ಬಣ್ಣಿಸುವೆ ॥ ೭೦

ಉಳಿದಿಹ ಖಾನ ಖಾನರುಗಳ ಬಳಿಯಲಿ
ನೆಲಸಿಹ ಬಲುರಾವುತರು ।
ಅಳಿದರು ಲೆಕ್ಕವಿಲ್ಲದೆ ರಣದೊಳಗಾಗ
ಳಳಯೆಲ್ಲ ರಕ್ತಾಂಬುವಾಗೆ ॥ ೭೭

ಒಡನೈವತ್ತು ಪಲ್ಲಕ್ಕಿಯನೇರುವ
ಕಡುಗಲಿ ತುರುಕ ದೊರೆಗಳು ।
ಬಿಡದೈವತ್ತು ಸಾವಿರ ಖಾನರುಗೂಡಿ
ಮಡಿದರು ಕಗ್ಗೊಲೆಯೊಳಗೆ ॥ ೭೮

ಹರಪನ ಹಳ್ಳಿ ಸೊಂಡೂರು ದೊರೆಗಳೂಳ
ಗೆರಡು ಸಾವಿರ ಪಟು ಭಟರು ।
ತೊರೆದರು ಜೀವವೆ ಮಿಕ್ಕವರಿಗೆ ಬಂ
ದುರು ಭಂಗವನೇ ವೇಳ್ವ ॥ ೪೩

ಕುಂದುರುಪೆಯ ವೀರರು ರಾಯದುರ್ಗದ
ಸಂದ ಭಟರು ಮತ್ತಿವೀಡಾ ।
ಮಂದಿಗಳಳಿದುದ ಕಡೆ ಗಾಣೆನಾ ರಣ
ದಂದವನೇನ ಬಣ್ಣಿಸುವೆ ॥ ೪೪

ಹನುಮನ ವೈ ಗಾವಲಭಟರು ಬೀಲೂರ
ಜನಪನ ಸಮ್ಮುಖದವರು ।
ಘನ ಪಾಲುಪರೆಯರಸಿನ ಬಲು ಸು ಭಟರು
ಚಿನ ಕಡಿಯೂದರಾ ರಣದೆ ॥ ೪೫

ಹೊಳವನ ಹಳ್ಳಿ ಬಿಜ್ಜವರ ಕೊಳಾಲ
ಬಳಲಾಪ್ರರದರಸುಗಳ ।
ತಳತಂತ್ರ ಮೆಡಿದುದು ಲೆಕ್ಕವಿಲ್ಲದೆ ಯಾ
ಕೊಳುಗುಳದೊಳಗಾ ಹ್ಲಣದೆ ॥ ೪೬

ನೆರೆ ಗಲಿ ಚಿಕಬಳಲಾಪ್ರರ ಬಾವಲೂ
ರೆರೆಯರ ಹೊಸಕೋಟೆಯವರ ।
ವರ ಕಂಗೊಂದಿ ಮೊಸ್ತಿಯ ಬಲ ಜೀವವ
ತೊರೆದುದೇ ವೇಳ್ವನದ್ಭುತವೆ ॥ ೪೭

ಪಿರಿದು ಸೀರೆಯ ಬೆಂಗಳೂರಿಕ್ಕೇರಿಯ
ದೊರೆಗಳ ಬಲ ನುಗ್ಗಾಗಿ ।
ಸರಿದರು ಹಿನ್ನೆಲೆಗಾಗಿ ಕಂಠೀರವ
ನುರುಪರಾಕ್ರಮಕೆಣೆಯುಂಟೆ ॥ ೪೮

ನಡುವಗಲಿನ ಬೇಸಗೆಯ ಮಾರ್ತಂಡನ
ಕಡು ಝಳದುಬ್ಬರಕಾಗ ।
ಅಡಗುವ ಹಿಮದೊಲಿಪ್ಪತ್ತು ಸಾವಿರ ಬಲ
ಮಡಿದುದು ಕರ್ಣಾಟದವರ ॥ ೪೯

ಅದೆ ಬಂದರು ಕಂಠೀರವೇಂದ್ರನ ಭಟ
ರೊದಗಿದರೀ ಕಡೆಯೊಳಗೆ ।
ಸದೆದು ಮೂಗರಿದೈದುತಿಹರೆಂದು ಪಾಳಯ
ಗದಗಾಪ್ತುಗೊಂಡುದೇ ವೇಳ್ಕ ॥ ೫೦

ವಾರುವೆಗಳ ಡಾವಣೆ ನೇಣ್ಗಳ ಬಲು
ಬೀರುಗುಣಿಕೆಗಳ ಪರಿದು ।
ಕೇರಿ ಕೇರಿಯೊಳು ತಮ್ಮಿಚ್ಛೆಯೊಳಗೆ ಸಲೆ
ತಾರುಮಾರಾಗಿ ಯೋಡಿದುವು ॥ ೫೧

ಮದ ಕರಿಗಳು ಕಟ್ಟಿದ ಮಲ್ಲ ಗಂಭವ
ನೊದೆದು ಕೆಡಹಿಕೊಂಡಾಗ ।
ಬೆದರಿ ತಮ್ಮಿಚ್ಛೆಯೊಳಗೆ ದೆಸೆ ದೆಸೆಗೈದಿ
ಹದಗೆಟ್ಟೋಡಿಯಾಡಿದುವು ॥ ೫೨

ಬಾಲಕೆ ಕಡಿವಾಣವೆನಿಕ್ಕಿ ಕುದುರೆಯ
ಮೇಲು ವೊಗಕೆ ಹಲ್ಲಣವೆ ।
ಪೇಳಲಳವೆ ಕಟ್ಟಿ ಕಂಗೆಟ್ಟು ತುರುಕರ
ಜಾಲವೈದಿತು ದೆಸೆದೆಸೆಗೆ ॥ ೫೩

ಪಲ್ಲಿಯ ಹುಲ್ಲೊಳಡಗಿ ಭೀತಿಗೊಂಡಾಗ
ನಿಲ್ಲದೆ ದೆಸೆಯ ನಿಟ್ಟಿಸುತ ।
ಸೊಲ್ಲೀಯದೆಚ್ಚರಿಪರಿಗೆ ಕೈ ಮುಗಿಯುತ
ಪಲ್ಲ ಕಿರಿದರೇನೆಂಬೆ ॥ ೫೪

ವೀರ ಕಂಕಣಗಳ ಮುರಿದು ಶೃಂಗಾರದ
ಹಾರಗಳನು ತೆಗೆದಿಟ್ಟು ।
ಪೈರಣಿಗಳ ನೀಳಿ ತಲೆಯ ಕೆದರಿಕೊಂಡು
ತಾರು ತಟ್ಟುಗಿ ಯೋಡಿದರು ॥ ೯೫

ಜಲ್ಲಿಯ ಬಿಲ್ಲನೀಡಾಡಿ ನೇಜೆಯಗಳ
ನಿಲ್ಲೆಂದರಿಗೀಯುತಾಗ ।
ಸಲ್ಲಲಿತದ ಬಿರುದಗಳ ಬಿಟ್ಟು ಹೃಣ
ತಲ್ಲಣಿಸು ತಲೋಡಿದರು ॥ ೯೬

ಹುತ್ತವನೇರಿದವರು ಹುಲ್ಲುಗಳ ಕಚ್ಚಿ
ಬಿತ್ತಲೆ ನೀರ ಹೊಕ್ಕವರು ।
ಕತ್ತಿ ಕಠಾರಿಯ ಬಿಸುಟ ಕಾಲಾಳಿನ
ವೊತ್ತವನೇನ ಬಣ್ಣಿಸುವೆ ॥ ೯೭

ಇಂದು ಜೀವವ ಕಾಯ್ದೊಡೆ ನಿನ್ನ ಬಸಿರೊಳು
ಬಂದವರೈಸೆ ನಾವೆನುತ ।
ನಿಂದು ಕಲಿಗಳ ಕಾಲ್ಗರಗಿ ಬಿಡಿಸಿ ಕೊಂಡ
ಹಂದೆಗಳಿಗೆ ಲೆಕ್ಕವಿಲ್ಲ ॥ ೯೮

ಸಿರವನುಳುಹಿ ಮೂಗರಿಯ * ಬೇಡೀಟಿಯ
ಳಿರಿದು ಜೀವವ ಕೊಳ್ಳನುತ ।
ಚರಣಕೆ ಮಣಿದುಂಗುರಗಚ್ಚಿದ ರಿಪು
ಪರಿವಾರವೆಸೆದುದಾ ರಣದೆ ॥ ೯೯

ತುರಗವನುಳಿದು ಖಂಡೆಯವ ಬಿಸುಟು ನಮ್ಮ
ಕೊರಳ ಸಲಹಿಕೊಳ್ಳನುತ ।
ಕರವ ಮುಗಿದು ಕಲಿಗಳಿಗೆ ಬಿಡಿಸಿಕೊಂಡು
ತುರುಕ ರಾವುತರೋಡಿದರು ॥ ೧೦೦

* ಬೇಡೀಕ್ಷಣವಿರಿದು.

ಗುಳವನೀಡಾಡಿ ಗಜಗಳ ಮಸ್ತಕಗಳಿಂ
ದಿಳಿದೊಪ್ಪಿಸಿ ಕೊಟ್ಟ್ಯಾಗ ।
ಬಳಿಕ ನಂಬುಗೆಗೊಂಡು ಜೋದಾವಳಿ ಬೇಗ
ತಳುವದೋಡಿತು ದೆಸೆ ದೆಸೆಗೆ ॥ ೧೦೧

ಒಡೆಯನ ಬಿಟ್ಯಾಗ ಬಂಟನಣ್ಣ ನನುಳಿ
ದೊಡಹುಟ್ಟಿದನು ತಂದೆಯನು ।
ಕೆಡೆ ನೂಕಿ ಮಕ್ಕಳ ತಂಡವಾ ದುರದಲಿ
ಸಿಡಿದೋಡಿತು ದೆಸೆ ದೆಸೆಗೆ ॥ ೧೦೨

ಬಡಬನ ಬಲು ಜಳವನು ತಾಳಲಾರದೆ
ಕಡಲುರೆ ಬತ್ತುವೆಂದದಲಿ ।
ಪೊಡವಿಪ ಕಂಠೀರವನ ಪ್ರತಾಪಕೆ
ಸಿಡಿದೋಡಿದರು ತುರುಕರು ॥ ೧೦೩

ಗರುಡನ ಗರಿಯ ಗಾಳಿಗೆ ಫಣಿಗಳ ವೊತ್ತ
ಮುರಿಗೆಡೆದೋಡುವೆಂದದಲಿ ।
ನರಸ ರಾಜೇಂದ್ರನ ಸಾಹಸದುರುಬಿಗೆ
ತುರುಕರೋಡಿದರ್ದೆಸೆ ದೆಸೆಗೆ ॥ ೧೦೪

ನರ ಸಿಂಹನ ದಿವ್ಯ ನಾಮ ಸ್ಮರಣೆಗೆ
ದುರಿತಗಳ್ ಪರಿದೋಡುವಂತೆ ।
ದೊರೆ ರಾಯ ಕಂಠೀರವೇಂದ್ರನ ಶೌರ್ಯಕ್ಕೆ
ಮುರಿಗೆಡೆದೋಡಿದರ್ತುಳರು ॥ ೧೦೫

ಅರಗಿನೋಲೆಯ ಕಾರಲ್ಕೈದಿ ಕಾಲಾಗ್ನಿಯ
ಸೆರಗ ಹಿಡಿದು ಜೀವಿಪರೆ ।
ನರ ರೂಪ ನರ ಸಿಂಹನೊಡನೆ ಸೆಣಸಿ ಬಾಳು
ವರಿಗಳುಂಟೇ ಲೋಕದೊಳಗೆ ॥ ೧೦೬

ಗರುಡನ ಗೃಹದೆ ನಾಗರ ಮೆರಿ ಕನ್ನಪೆ
ಕೊರೆದುಳಿವುವೆ ಜಗದೊಳಗೆ ।
ನರಸೇಂದ್ರನ ದುರ್ಗವ ಮುತ್ತಿದರಿಗಳು
ಮರಳಿ ಪೋಪರೆ ಜೀವ ಸಹಿತ ॥ ೧೦೬

ಸಿಂಗನ ಕೂಡಣ ಕಲಹದೆ ಕರಿಗಳ
ಜಂಗುಳಿ ಜೀವಿಸಲಹುದೆ ।
ತುಂಗ ವಿಕ್ರಮನ ಕೆಣಕಿ ತುರುಕರ ಬಲ
ಭಂಗಕ್ಕೆ ಬಂದುದೇನೆಂಬೆ ॥ ೧೦೯

ಇಂತು ಕಗ್ಗೊಲೆಯೊಳಿದ ಖಾನರ ನೋಡಿ
ಸಂತೋಷದಲಿ ಪಾತಕರು ।
ಕಂತು ಸನ್ನಿಭ ಕಂಠೀರವೇಂದ್ರನ ನೋ
ರಂತೆ ಕೊಂಡಾಡಿದರಾಗ ॥ ೧೧೯

ಚಂಡ ವಿಕ್ರಮ ತ್ರೈಲೋಕ್ಯದ ವೀರರ
ಗಂಡ ಜಯಾಂಗನಾ ರಮಣ ।
ಪುಂಡರೀಕಾಹ್ವ ಸದೃಶ ಜಯತೆಂದಾಗ
ಕೊಂಡಾಡಿತು ಪಾತಕಾಳಿ ॥ ೧೧೦

ರಿಪು ರಾಜ ಮೇಘ ಜಂಝೂ ಮೊರುತ ಬಲು
ನಿಪುಣ ಸಾಹಸ ವಿಕ್ರಮಾರ್ಕ ।
ವಿಪುಲ ಕಂಠೀರವೇಶ್ವರ ಜಯವೆಂದಾಗ
ಚಪಲ ವಂದಿಗಳಂದುಲಿದರು ॥ ೧೧೧

ನಲಿದಾಗ ಜಯ ಲಕ್ಷ್ಮಿ ಕಂಠೀರವೇಂದ್ರನ
ವಿಲಸಿತ ಶೌರ್ಯಕ್ಕೆ ಮೆಚ್ಚಿ ।
ಬಲು ಬುಜದಲಿ ನೆರೆ ನೆಲಸಿ ಸಂತೋಷವ
ತಳದು ರಾಜಿಸಿದಳೀ ವೇಳ್ವ ॥ ೧೧೨

ಧುರವೆ ಜಯಿಸಿ ಲೆಕ್ಕವಿಲ್ಲದ ಕೊಳ್ಳೆಳ
ಸರಗಳ ಕಟ್ಟಿತಂದಾಗ ।
ಗರುವ ಮನ್ನೆಯ ಮಂಡಲಿಕ ನಾಯಕರ ಮೊತ್ತ
ಬೊರೆಗೊಪ್ಪಿಸಿದರುಬ್ಬಿನಲಿ ॥ ೧೧೩

ಮಡಿದ ಖಾನರ ಭೂಷಣವಾನೆ ಕುದುರೆಯ
ಪಿಡಿತಂದು ಸುಭಟ ಸಂದೋಹ ।
ಕಡುಗಲಿ ಕಂಠೀರವ ರಾಜ ಶೇಖರ
ನಡಿಗೊಪ್ಪಿಸಿದರರ್ತಿಯಲಿ ॥ ೧೧೪

ಸುರಗಿ ಸಬಳವೆಂಬುಗಳಿಹ ತುರಕಸ
ಸರ ನೇಜಯ ಸಿಂಗಾತಿ ।
ಬಿರುದಿನಾಯುಧಗಳ ಸೆಳೆತಂದು ಭೂಪನ
ಚರಣಾಬ್ಜಗಳಿಗೊಪ್ಪಿಸಿದರು ॥ ೧೧೫

ಉಪ್ಪಿನ ತಿತ್ತಿ ಕತಪ್ಪಿನ ಜಬರು ಜಂಗಿ
ಯೊಪ್ಪುವ ಬಿರುದಿನ ಡಾಳ ।
ದರ್ಪದೆ ಸೆಳೆತಂದು ಭೂಪಾಲನಿದಿರಲಿ
ತಪ್ಪದೆ ಮೆದೆಯನೊಟ್ಟಿದರು ॥ ೧೧೬

ಕಾಳಗವನು ಗೆದ್ದ ಮನ್ನೆಯ ಸುಭಟಗೆ
ಮೇಲಾದುವೊಡವೆ ವಸ್ತುಗಳ ।
ಪಾಲಿಸಿ ಜಯಲಕ್ಷ್ಮಿ ಸಹಿತ ಕಂಠೀರವ
ಭೂಲೋಲ ಪುರವನೈದಿದನು ॥ ೧೧೭

ದಳಪತಿ ಮೊದಲಾದ ಮನ್ನೆಯ ನಿಕರವ
ನಲಿದು ಕಳುಹಿ ಬೀಡಿಕೆಗೆ ।
ಚಲದಂಕ ಕಂಠೀರವ ರಾಜ ಹರುಷನೆ
ತಳದರಮನೆಗೈತಂದ ॥ ೧೧೮

ಅರ ಮನೆಯಂಗನಾ ಜನದಾರತಿಗಳ
ಹರಕೆಗಳನು ಕೈಕೊಳುತ ।
ದೊರೆ ರಾಯ ನರಸೇಂದ್ರ ಹರುಷದೊಳಂತಃ
ಪುರಕೈತಂದನರ್ತಿಯಲಿ ॥ ೧೧೯

ಇತ್ತಲಾ ರಣಧೂಳಿ ಖಾನ ಬಹುಳ ಚಿಂತೆ
ಗಿತ್ತಾಗ ತನ್ನಯ ಮನವ ।
ಸತ್ತವರಿಗೆ ಗೋರಿಯಿಕ್ಕದೆ ಮರಳಿದ
ಚಿತ್ತದೊಳಗೆ ಧ್ಯಾನಿಸುತ ॥ ೧೨೦

ಗೋವುಗಳನು ತಲೆಯೊಡೆಯಲಿಕ್ಕಿದ ಪಾಪ
ಜೀವಿಗಳ್ಪುಣ್ಯ ಭೂಮಿಯಲಿ ।
ಭಾವಿಸಿ ಪಟ್ಟಣದಧಟರಿಂ ಮಡಿದುರೆ
ತೀವಿದರ್ ಸ್ವರ್ಗ ಲೋಕದಲಿ ॥ ೧೨೧

ದಿಕ್ಕು ದೆಸೆಯು ಕಾಣದ ಬಲು ತುರುಕರ
ಲೆಕ್ಕವಿಲ್ಲದ ಹೆಣಗಳನು ।
ಗಕ್ಕನೆ ಶುನಕ ಸೃಗಾಲಗಳಳತಂ
ದೊಕ್ಕುವು ಹೊಳೆಯ ನೀರಿನಲಿ ॥ ೧೨೨

ಮುನ್ನೂರು ಗಜ ಹತ್ತು ಸಾವಿರ ತೇಜಿಯು
ತ್ಯುನ್ನತವಹ ಖಾನರುಗಳ ।
ಬನ್ನದೊಳ್ಳವತ್ತು ಸಾವಿರವನು ನೀಗಿ
ಖಿನ್ನನಾಗೈದಿದ ಖಾನ ॥ ೧೨೩

ಪಲ್ಲಕ್ಕಿಯೇರುವ ಖಾನ ವಜೀರರ
ನಿಲ್ಲದೈವತ್ತು ಮಂದಿಯನು ।
ಮೆಲ್ಲನೆ ರಣ * ಬಲಿಯಿತ್ತು ಚಿಂತಿಸಿ ಖಾನ
ತಲ್ಲಣಿಸುತಲೈದಿದನು ॥ ೧೨೪

* ದಲಿ.

ನಾದಿಪ ವಾದ್ಯವ ನಿಲಿಸಿ ತನ್ನಯ ಬಿರು
ದೋದುವ ಭಟ್ಟರ ಜಡಿದು ।
ಮೇದಿನಿಯೊಳು ಖಾನ ಮೌನ ದೀಕ್ಷೆಯ ಕೊಂಡು
ಹಾದಿದೆಗೆದ ತನ್ನ ಪುರಕೆ ॥ ೧೦೫

ಮಿಗೆ ಬಲಾಹಕ ಕಡೆಗೈದಲು ಕಾಂತಿಯಿಂ
ಸೊಗಸುವ ಮಾರ್ತಂಡನಂತೆ ।
ಝಗ ಝಗಿಸಿದುದು ಪಟ್ಟಣ ಬಲು ಮುತ್ತಿಗೆ
ದೆಗೆಯಲೇನೆಂಬೆನಚ್ಚರಿಯ ॥ ೧೦೬

ಪೀಡಾ ಪರಿಹರ ಸಂ ಪ್ರದಕ್ಷಿಣೆ ಶಾಂತಿ
ಕೂಡೆ ಬ್ರಾಹ್ಮಣ ಭೋಜನಗಳ ।
ಮಾಡಿಸಿ ಬಹು ಬಗೆ ಧರ್ಮವ ವಿಪ್ರರ್ಗೆ
ನೀಡಿ ಮನ್ನಿಸಿದನಾ ನೃಪತಿ ॥ ೧೦೭

ನೆರೆ ಶೌರ್ಯದೇಳಗೆಯಲಿ ಧರ್ಮ ಕೀರ್ತಿಯ
ಪರಿಪಿ ಸಮಸ್ತ ಭೂ ತಳಕೆ ।
ನರಸ ರಾಜೇಂದ್ರ ಚಂದ್ರಮನೊಪ್ಪಿದನಾಗ
ಪಿರಿದು ಸೌಭಾಗ್ಯದೇಳ್ಗೆಯಲಿ ॥ ೧೦೮

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೦೯

ಏಳನೆಯ ಸಂಧಿ ಸಮಾಪ್ತಂ

ಹದಿನಾರನೆಯ ಸಂಧಿ

ರಾಮಗಿರಿ ಪಟ್ಟಣವನ್ನು ತೆಗೆದುದು

ಸೂಚನೆ ॥ ರಾಮಗಿರಿಯು ತುರುಗೆರೆಯು ಬಾಗೂರ ಸಂ
ಗ್ರಾಮದೆ ನರಸೇಂದ್ರ ಸೆಳೆದ ॥

ಶಿವೆ ವಾಹನನಂದನನ ಮೊಪಗೆ ಮಬಿಡಿ
ದವನೊಳು ರಣಮಂಡಲದೆ ।
ತವಕದೆ ಸೆಣಸಿದವನಿಗನುಜೆಯನಿತ್ತ
ಭವಹರ ಕರುಣಿಸು ಮತಿಯ ॥ ೧

ಬಳಿಕಲಾ ರಣಧೂಳಿ ಖಾನನುಳಿದ ತನ್ನ
ತಳತಂತ್ರವೆ ಕೂಡಿಕೊಂಡು ।
ಗಳಿಲನೆ ವಿಜಯಾ ಪುರಕ್ಕೈದಿ ಪಾತ್ಸಾ್ಯವೆ
ತಳುವದೆ ಕಂಡನೇ ವೇಳ್ವ ॥ ೨

ನೋಡದವನನಡ್ಡ ಮೊಗವಿತ್ತು ಕದಪಲಿ
ನೀಡುತ ಹಸ್ತಾಂಬುಜವ ।
ಕೂಡೆ ಪಾತ್ಸಾ್ಯವು ತನ್ನಾಪ್ತ ಮಂತ್ರಿಯ ಕರೆ
ದಾಡಿದನೇನ ಬಣ್ಣಿಸುವೆ ॥ ೩

ಶ್ರೀರಂಗ ಪಟ್ಟಣವನು ಕೊಳ * ಕರ್ಣಾಟ
ಸೇರುವ್ರದತಿ ಬೇಗವೆಂದು ।
ಆರೈದಿವನ ಕಳುಹೆ ಯುಪ ಕೀರ್ತಿಯ
ಸೇರಿಸಿದನು ಖಾನನೆಮಗೆ ॥ ೪

---

* ಸೆಳೆ ಯೆಂದೊಡೆ

ಕುದುರೆಯೈವತ್ತು ಸಾವಿರ ನಾಲುಕುಲಹ್ಣ
ಪದಚರರನು ಕೂಡಿ ಕೊಂಡು ।
ಮುದದಿಂದ ಪಟ್ಟಣವನು ಸೆಳೆಯೆಂದೊಡೆ
ಸದೆಯಿಸಿದನು ನಮ್ಮ ಬಲವ ॥ ೫

ಗುರುತಿನ ಖಾನರದೆಲ್ಲಿ ಪಟ್ಟದ ಮದ
ಕರಿಗಳ ಕಾಣೆ ತೇಜಿಗಳ ।
ಬಿರುದಿನ ರಾವುತರೇನಾದರಿದು ನಮ್ಮ
ಸಿರಿಗೂಣೆಯವಾದುದೆಂದ ॥ ೬

ಪಲ್ಲಕ್ಕಿಗಳನೇರಿ ಬರುವ ವಜೀರರು
ನಿಲ್ಲದೆ ಪಜ್ಜೆಯೂಟವಲಿ ।
ಸಲ್ಲಲಿತದ ಸಂತೋಷದೆ ನಲಿವಂತ
ಮೆಲ್ಲರೇನಾದರೊ ಕಾಣೆ ॥ ೭

ಬಂದುರೆ ಸಭೆಯೊಳಗೆ ಕುಳಿತಿರೆ ನೋಡುವ
ರ್ಗರ್ವದವಾಗಿಹ ವಜೀರರನು ।
ಕೊಂದು ಕಳೆದು ಬಂದನಿವನ ವೊಗವೆ ನಾ
ನಿಂದೀಕ್ಷಿಪೆನೆಂತೆನುತ ॥ ೮

ಹತ್ತು ಸಾವಿರ ತುರುಕರು ಮೂಕೊರೆಯುರೆ
ವ್ಮೊತ್ತಿಗೆ ಬರಲಾಗಿ ನಮಗೆ ।
ಕತ್ತನೆತ್ತುವೊಡೆ ನಾಚಿಕೆಯಾಗಿ ಹೈನ್ಯವ
ಹೊತ್ತೆವೆಂದುರೆ ಕೋಪಿಸಿದನು ॥ ೯

ಹೇಳುವುದೇನಿನ್ನೀ ಖಾನ ಮಾಡಿದ
ಖೂಳ ತನದ ಕಾರ್ಯಗಳನು ।
ತಾಳಲದೇಕೆ ಚಿಂತೆಯನೆಂದು ಕೋಪದೊ
ಳಾಳಿದನಾ ಪಾತಾಸ್ಯವು ॥ ೧೦

ಮನನಡುಗುತ ಖಾನ ಪಾತ್ಸ್ಯವಿನಡಿಯೂಳು
ವಿನಮಿತನಾಗಿ ಕೈ ಮುಗಿದು ।
ಜನಪ ಕಂಠೀರವೆ ನರಸ ರಾಜೇಂದ್ರನ
ಘನ ಪೌರುಷವೆ ಬಣ್ಣಿಸಿದ ॥ ೧೧

ಜೀಯ ಚಿತ್ತೈಸು ಕಂಠೀರವೆ ರಾಜೇಂದ್ರ
ನೀ ಯವನಿಯ ಬಡ ನರನೆ ।
ಕಾಯಜ ಪಿತನರ ಸಿಂಹನ ಸಾದೃಶ್ಯ
ದಾಯತವಾನೃಪಗಿಹುದು ॥ ೧೨

ತುಡುಕಿ ಲಗ್ಗೆಯನೇರಿದ ಖಾನ ಖಾನರ
ಕಡಿದು ತಲೆಯ ಮಿದುಳುಗಳ ।
ಬಿಡದಾಗ ರಣ ಭೂತಗಳಿಗೆ ದಂಡೆಗಳನು
ಮುಡಿಸಿದರವನ ಮನ್ನೆಯರು ॥ ೧೩

ಆತನ ಸುಭಟರಿಗಳವೆಟ್ಟ ಕಾರ್ಯದ
ರೀತಿಯನೊಲಿದು ಬಣ್ಣಿಪೊಡೆ ।
ನೂತನ [ವಾ]ಫಣಿ ರಾಜನ ಜಿಹ್ವೆಗ
ಳೀತರವೆರಸ ಚಿತ್ತೈಸು ॥ ೧೪

ಬೆಟ್ಟದ ಚಾಮುಂಡಿ ಯಾತನ ಸುಭಟಗೆ
ಕೊಟ್ಟಾಗ ಬಲು ಶಕ್ತಿಯನು ।
ಪೆಟ್ಟನಿಕ್ಕಿಸಿದಳು ನವ್ಮೊಳು ನಾವಿನ್ನು
ಮುಟ್ಟ ಮಾಡುವ ಕಾರ್ಯವೇನು ॥ ೧೫

ಭಾವಿಸಿ ನೋಡಿದೊಡಲ್ಲಿಹ ಭಟನೊರ್ವ
ಸಾವಿರಾಳಾಗೆವ್ಮ್ಮ ಕಣ್ಗೆ ।
ತೀವಿ ಕಾಣಿಸುತಿಹ ನವಗೆ ಪಶಿ ಮರಂಗ
ದೇವನ ಕೃಪೆ * ಕೂಡಿಹುದು ॥ ೧೬

---

* ಪಡೆಗಿಹುದು.

* ನಾವು ಮಾಡಿದ ಸಾಹಸವನಿಂದು ಪೇಳಿದೊ
ಡಾವುದು ತೋರದು ನಿಮ್ಮ ।
ಭಾವದೊಳ್ ನಮ್ಮ ದೌರ್ಭಾಗ್ಯದಿನೆಂದು ಪಾ
ತ್ಸ್ಯಾವಿನಗ್ರದೆ ಮರುಗಿದನು ॥ ೧೬

ನಾನಾ ಸಾಹಸಗೈದೊಡೆ ನಮ್ಮಯ
ಸೇನೆಯ ಸುಪರಾಕ್ರಮಿಗಳು ।
ಕ್ಷೋಣೀಪ ಕಂಠೀರವನ ಕಲಿಗಳೊಳು
ಕಾಣದೆ ಹೋಯ್ತೆಂದನಾಗ ॥ ೧೭

ನಾ ಗೂಡಾರವನಿಟ್ಟ ಬಳಿಯಲೊಬ್ಬ
ಬೇಗದೆ ಗೂಡಾರವಿಟ್ಟು ।
ರಾಗದೊಳಗೆ ರಾಜ ಕಾರ್ಯವ ನೆರೆ ಕೊನೆ
ಸಾಗಿಸಲರಿದಪೆನೆಂದ ॥ ೧೮

ಕಡೆಯ ಮಾತೇನಾ ಕೂರ್ಮ ಸಹಿತ ನೀವು
ನಡೆಯಲು ನಿಮ್ಮ ಸಾಹಸಕೆ ।
ಸೆಡೆವನಲ್ಲ ನೃಪ ವರನಾ ಶೌರ್ಯದ
ಕಡುಹನದೇನ ಬಣ್ಣಿಸುವೆ ॥ ೧೯

---

* ನಾವು ಮಾಡಿದ ಸಾಹಸವನಿಪ್ಪೆಯೆಂದು
ಪೇಳಿದಡೀಗ ಚಿತ್ತಕ್ಕೆ ।
ತೋರದು ನಮ್ಮ ದೌರ್ಭಾಗ್ಯವನೆಂದಾ
ಖಾನಮರುಗಿದನಿದಿರೊಳು ॥

ನಾನಾ ಸಾಹಸ ಗೈದರು ನಮ್ಮಯ
ಭಾವಪರಾಕ್ರಮಿಗಳನು ।
ಭೂಭುಜ ಕಂಠೀರವನ ಕಲಿಗಳೊಳು
ಸಾಗದೆ ಹೋಯ್ತೆಂದನಾಗ ॥

ಎಂಬ ಮಾತನು ಕೇಳಿ ಪಾತಾಳ್ಯವು ಮನದೊಳ
ಗಿಂಬಾದ ಕೋಪವ ಬಿಟ್ಟು ।
ತುಂಬಿದಂತಿರಲಿತ್ತಲಾಗುವ ಕಾರ್ಯದಾ
ಡಂಬರವೆನು ಬಣ್ಣಿಸುವೆ ॥ ೧೧

ಇಕ್ಕೇರಿಯ ನೃಪ ಪೂವಲಹನುಮನ
ಸೊಕ್ಕಮುರಿಯ ಬೇಕೆಂದು ।
ರೊಕ್ಕದಾಸೆಯನಿತ್ತು ತುರುಕರ ದಂಡನು
ಗಕ್ಕನೆ ತಂದನೇ ವೇಳ್ವ ॥ ೧೨

ಇನ್ನಾದರು ಬಲು ಶೌರ್ಯವೆಸಗಿ ನೆರೆ
ಕನ್ನಡವನು ಸಾಧಿಸೆಂದು ।
ಮನ್ನಿಸಿ ಪಾತಾಳ್ಯವು ರಣಧೂಳಿ ಖಾನನ
ಸನ್ನಾಹದಲಿ ಕಳುಹಿದನು ॥ ೧೩

ಅಳುಕಗಣಿತ ತಳತಂತ್ರವ ಖಾನಗೆ
ತಳುವದಿತೊಡನೆ ಪಾತಾಳ್ಯವು ।
ಗಳಿಲನೆ ಬೀಳ್ಕೊಡೆ ಮತ್ತಪ ಹೆಬ್ಬೆಯ
ಹೊಳೆಯು ದಾಟುತಲೈತಂದ ॥ ೧೪

ಖಾನ ತನ್ನಯ ಮೇಲೆ ದಂಡೆತ್ತಿ * ಬರುವವಿ
ಧಾನವ ಕಂಡು ಕೆಂಗೇಂದ್ರ ।
ಏನೆಂಬೆ ಕಾದಬೇಕೆಂದು ಬಲವಮ
ತ್ತಾನಂದದಿಂದ ಕೂಡಿದನು ॥ ೧೫

ಬಸವ ಪಟ್ಟಣಕೆ ಮುಂ ಜಸದಿಂದ ನಡೆತಂದು
ಮಸೆವ ಮುತ್ತಿಗೆಯನೆ ಬಲಿದು ।
ಬಸವಾಡಿ ಕೊಂಡದಂ ಕೋಪದೆ ತಾನಾಗ
ಳಸೆವೆ ಸಂತಸವ ತಾಳಿದನು ॥ ೧೬

* ಬರುವರ್ತಮಾನವ.

ಬಳಿಕೊಂದು ದಿನ ಖಾನ ದಾಳಿ ಮಾಡಿದೊಡಲ್ಲಿ
ಯೊಳಗಾದನೆರು ಬಿಟ್ಟು ತೊಲಗೆ ।
ಗಳಿಲನೆ ಬಸವ ಪಟ್ಟಣದಿಂದಾ ರುದ್ರ
ಪೊಳಲಿಗೆ ಬಂದ ಮುಂಕೊಂಡು ॥ ೭೩

ಆ ಪಟ್ಟಣವನು ಜೈಸಾ ರಾಯನ ಸೆರೆ ಗೈ
ದಾ ಪುರಕಾ ಠಾಣವಿಕ್ಕಿ ।
[ಕಾಪಿಟ್ಟು ತನ್ನಯ ಸೇನೆಯೊಳ್ ಕೆಲವೆ ಪ್ರ
ತಾಪದೆ ಮುಂದಡಿಯಿಟ್ಟ] ॥ ೭೪

[ಹಿಂಗದೆ ಕಾದಿದ ಕೆಂಗ ಹನುಮನನು
ಭಂಗ ವಡಿಸಿ ಸೆರೆ ವಿಡಿದು] ।
ತುಂಗ ವಿಕ್ರಮ ಖಾನ ಮುಂದಕ್ಕೆ ನಡೆದದೊಂ
ದಂಗವನೇನ ಬಣ್ಣಿಸುವೆ ॥ ೭೫

ಕೇಳದೆ ಮತ್ತೈದಿ ಬರುತಿಹ ತುರುಕರ
ದಾಳಿಯ ಭರವನು ಕಂಡು ।
* ಲೋಲ ಕಂಠೀರವ ನರಸೇಂದ್ರ ದಳವಾಯೊ
ಳಾಲೋಚಿಸಿದ ಕಾರ್ಯವನು ॥ ೭೬

ಬರಲೊಲ್ಲೆವು ಕನ್ನಡಕೆಂದು ಭಾಷೆಯ
ನಿರದಿತ್ತು ಮರಳಿ ಬಂದೀಗ ।
ನೆರೆ ಭಾಷೆ ಹೀನರಾಗಿಹ ತುರುಕರ ಮೇಲೆ
ದುರವೆ ಗೆಯ್ಯಲು ಬೇಕೆಂದ ॥ ೭೭

ರಾಮ ಗಿರಿಯ ದುರ್ಗವೆಂಬುದು ಭೂಮಿಗೆ
ತಾ ಮನೋಹರಮಾಗಿಹುದು ।
ಪ್ರೇಮದಿಂ ನಾವದ ಸೆಳೆದೊಡೆ ಕೀರ್ತಿ ಸು
ತ್ರಾಮ ಮಂಡಲವ ಮುಟ್ಟುವುದು ॥ ೭೮

* ಧೀರ.

ತುರುಕರ ಬಸವಡೆದಾ ದುರ್ಗ ವಿಟ್ಟೊಡೆ
ಪಿರಿದಾಯಸ ಮುಂದಕಹುದು ।
ಭರದೆ ಮುತ್ತಿಗೆಯಿಕ್ಕಿ ಸೆಳೆ ಯೆಂದು ದಳವಾಯ
ನರಸ ರಾಜೇಂದ್ರ ಬೀಳ್ಕೊಟ್ಟ ॥ ೩೩

ಗಿರಿಯ ಚೌದೆಸೆಯಲಿ ಬಲು ಮನ್ನೆಯರನು
ನೆರೆ ಬಲ ಸಹ ಕಾಹ ಬಲಿದು ।
ಪಿರಿದಾದ ತಳಿ ಮೇರುವೆಗಳನಡಸಿಯೆ
* ಕಿರಿದಾಗಿಸಿದ ದುರ್ಗವನು ॥ ೩೪

ದುರ್ಗದೊಳಗೆ ಸಾವಿರ ಖಾನರು ಭಟ
ವರ್ಗ ಸಹಿತ ಕಾದುಕೊಂಡು ।
ಭರ್ಗನ ಭಾಳಾಗ್ನಿಯು ಕಿಡಿಗಳೊಳತಿ
ದೀರ್ಘ ವಿಕ್ರಮರೊಪ್ಪಿದರು ॥ ೩೫

ಇರದಾರ್ಭಟಿಸಿ ಹೊಡೆವ ಬಾಣ ಸುಭಟರ
ಹರಣಗೊಳುವ ಪೆಟಲುಗಳ ।
ಕರೆವ ಗುಂಡಿನ ಮಳೆ ಯೂರೊಳಗೆಸೆದುದು
ಹೊರ ಪಾಳಯದವರಿಂದ ॥ ೩೬

ಬಳಸಿ ಯಾ ಗಿರಿಯ ಚೌ ದೆಸೆಯ ಕೊಡುಗಳೊಳಗ
ಗಳವಡಿಸಿಯೆ ಪಿರಂಗಿಗಳ ।
ತಳುವದೆ ಸಂಧಾನಗೊಳಿಸಿ ದುರ್ಗವೆನಿಡು
ವಳವ ನಾನೇನ ಬಣ್ಣಿಸುವೆ ॥ ೩೭

ಮೇರುವೆಗಳ ಮೇಲೇರಿ ಕೋವಿಯ ಬಲು
ಧೀರರು ಸಂಧಾನದಿಂದ ।
ಊರೊಳು ಚರಿಪರನಿಟ್ಟು ಕೆಡಹುತಿಹ
ವೀರತ್ವವನೇ ವೇಳ್ವ ॥ ೩೮

* ಗಿರಿದಾನಿಸಿದ.

ಮುಂದಕೊತ್ತರಿಸಿ ತಳಿಯನೂರ ಹೊರಡುವೆ
ಮೆಂದಿಯನಿರಿದಿರಿದಾಗ ।
ಕುಂದದೆ ಕೆಡಹಿ ಭಯವೆ ಬೀರಿ ದುರ್ಗದ
ಮುಂದಕೊತ್ತರಿಸಿ ಮುತ್ತಿದರು ॥ ೬೯

ಬಳಿಕಾ ದುರ್ಗದ ಕೊತ್ತಳಗಳೊಳಾಗ
ಸಲೆ ಸಂದ ತುರುಕ ಸು ಭಟರು ।
ಮುಳಿದು ಪೆಟಲ ಗುಂಡುಗಳ ಕಾರ್ಮಳಗಳ
ತಳುವದೆ ಕರೆದರೀ ವೇಳ್ವ ॥ ೭೦

ಇತ್ತಲಾ ಬೆಂಗಳೂರೊಳಗಿಹ ಖಾನನು
ಮುತ್ತಿಹ ಬಲವರಿತಾಗ ।
ಮೆತ್ತೆ ಕೋಪದೆ ಬಲು ಬಲ ಸಹಿತಾಹ್ವಣ
ಮುತ್ತಿಗೆದೆಗಿಸಲೈತಂದ ॥ ೭೧

ಗಿರಿಗುತ್ತರದ ದೆಸೆಯಲಿ ತನ್ನಯ ಪೌಜ
ನಿರಿಸಿ ಕಾಣಿಸಿಕೊಳಲಾಗ ।
ಪರಿ ಪರಿಯಿಂದ ಬಲಕೆ ಸನ್ನೆಯನಾಗ
ಳುರವಣಿಸಿದನೇ ವೇಳ್ವ ॥ ೭೨

ಒಡನಾಗ ನೆರೆ ನಾಲ್ಕು ಪೌಜಾಗಿ ತುರುಕರ
ಪಡೆಯನಾಹ್ವಣ ಮುತ್ತಿಕೊಂಡು ।
ಕಡಿದು ಸಿರವ ಚಂಡಾಡಿದ ದಳವಾಯಿ
[ಕಡುಗಲಿ] ನಂಜೇಂದ್ರಬೇಗ ॥ ೭೩

ಇರಿಯುತ ತರಿಯುತ ಕೊರೆಯುತ ಮುರಿಯುತ
ಲಿರಿದು ಸಾವಿರ ತಲೆಗಳನು ।
[ತುರುಗಿದ ತುರುಕರ ಪಡೆಯನು ಸಡಿಲಿಸಿ
ಮೆರೆದನು ಕಡು ಸಾಹಸವೆ ॥] ೭೪

[ಸಾವಿಗೆ ಭಯಗೊಂಡು ಬೇಡಿಕೊಳ್ವವರನು
ಕಾವೆನು ಭಯ ಬೇಡೆಂದು] ।
ತೀವಿದ ಧರ್ಮಗಾಳಿಯು ಹಿಡಿಸಿದನಾ
ಭೂ ವರ ನಂಜ ರಾಜೇಂದ್ರ ॥ ೪೫

ಉರವಣಿಸುತಲೊಂದಿರುಳು ಲಗ್ಗೆಗೆ ಬಿಟ್ಟು
ಭರದಿಂದ ಸೆಳೆದು ದುರ್ಗವನು ।
ತುರುಕ ರಾವುತರ ಸಾವಿರವನಾ ಹ್ಷಣ ಕೈ
ಸೆರೆಯಾಗಿ ಪಿಡಿದನೇ ವೇಳ್ವ ॥ ೪೬

ಹೊಳೆವ ತೇಜಿಗಳೈನೂರನು ಪಿಡಿದಾಗ
ಸೆಳೆದು ಕೊಂಡಾಯುಧಗಳನು ।
ತಲೆಗಾಯ್ದವರ ಮೆನ್ನಿಸಿ ಬಿಟ್ಟೊಡೆಯಗೆ
ಬಲು ಕೀರ್ತಿಯು ತಂದನಾಗ ॥ ೪೭

ದುರದಲಿ ಪಿಡಿದ ಕುದುರೆ * ಗಳ ದುರ್ಗದ
ತುರುಕರಿಂ ಸೆಳೆದ ತೇಜಿಗಳ ।
ನರಸ ರಾಜೇಂದ್ರಗೆ ಕಾಣಿಕೆ ಗೆಯ್ಯಲು
ಹರುಷವ ತಾಳ್ದು ಮೆನ್ನಿಸಿದ ॥ ೪೮

ಈ ಸುದ್ದಿಯ ದೂತರು ಖಾನಗರುಹೆ ಶಾ
ಬಾಸೆಂದು ಕೊಂಡಾಡುತಾಗ ।
ಲೇಸು ಸಾಕ್ಷ್ಯಾತ ಕರ್ತಾರ ಮೈಸೂರ ನ
ಹೀಶನೆಂದವ ಪೊಗಳಿದನು ॥ ೪೯

ಗಣನೆ ಯಿಲ್ಲದ ಬಲ ಸಹಿತ ನಾವಿರೆ ನಮ್ಮ
ತೃಣಕೆ ಲೆಕ್ಕಿಸದೆ ಯಾ ಗಿರಿಯ ।
ಹ್ಷಣದಲ್ಲಿ ಸೆಳೆದ ಮಹಾತ್ಮನ ಪುಣ್ಯಕೆ
ನ್ನೆಣೆ ಯಾವುದೆಂದನಾ ಖಾನ ॥ ೫೦

* ಕೊಳ್ಳು.

ಒಡನಾತನ ದಳ ಪತಿ ಬಲು ಶೌರ್ಯದ
ಕಡುಹ ತೋರಿದ ನಮ್ಮ ಕೂಡೆ ।
ಬಿಡದಾತನ ರಕ್ಷಿಸಿ ಕೊಂಡು ಬರುತಿಹಾ
ವೊಡೆಯನ ಶೌರ್ಯವಿನ್ನೆಂತೊ ॥ ೫೧

* ಎಂದಿತ್ತಲೈದುವೊಡತಿ ಭೀತಿ ವಟ್ಟಾಗ
ಹಿಂದಕ್ಕೆ ನಡೆದು ಬೇಲೂರ ।
ನಿಂದು ಮುತ್ತಿಗೆಯಿಕ್ಕಿ ಸೆಳಕೊಂಡು ಖಾನನ
ಲ್ಲಿಂದೈತಂದನೇ ವೇಳ್ವ ॥ ೫೨

ಚಿಕ ನಾಯಕನ ಹಳ್ಳಿಯ ದಾಳಿಯಲಿ ಕೊಂಡು
ಸಕಲ ವಜೇರರು ಸಹಿತ ।
ಚಕಿತ ಪರಾಕ್ರಮಿ ರಣಧೂಳಿ ಖಾನ ಬ
ಲ್ಸಕದೊಳಗಿರ್ದನೇ ವೇಳ್ವ ॥ ೫೩

ಇನಿತರೊಳ್ ಚೆನಪಟ್ಟಣವ ನೋಡ ಬೇಕೆಂದು
ಜನನಾಥ ಕಂಠೀರವೇಂದ್ರ ।
ಘನ ತೀವ್ರದಲಿ ಬಲ ಸಹಿತೈತಂದಾಗ
ಮನ ಹರಿಸದೊಳೂಪ್ಪತಿರಲು ॥ ೫೪

ಬಳಿಕ ಖಾನನ ದಳ ಪತಿ ಯಬುದುಲನಾಗ
ತಳತಂತ್ರವ ಕೂಡಿ ಕೊಂಡು ।
ಹುಲಿಯೂರ ಬಳಿಯ ಬೀಡಿಳಿದಿರ್ದು ದಾಳಿಯ
ತಳುವದೆ ಮಾಡಿದನಾಗ ॥ ೫೫

ಒಡನೆ ದಾಳಿಯ ಮೊಡ ಯಬ್ದುಲ್ಲ ಖಾನನ
ಪಡೆಯನೆಲ್ಲವ ಮುರಿಯಿರಿದು ।
ಬಿಡದೋಡಿಸಿ ಕುದುರೆಗಳ ಸೆಳದು ಕೀರ್ತಿ
ವಡೆದನು ನರಸ ರಾಜೇಂದ್ರ ॥ ೫೬

* ಇರದಿತ್ತಲೈದುವರತಿ.

ಹೊಗ ದೆಸೆಯನು ಕಾಣದಬ್ದುಲ್ಲ ಖಾನ ಬಹು
ಬಗೆಯಲಿ ಕಂಗೆಟ್ಟ್ಯಾಗ ।
ಮಿಗೆ ಹುಲಿಯೂರ ಬಳಿಯು ಬಿಟ್ಟ್ಯ ಪಾಳೆಯ
ದೆಗೆದೋಡಿದನೇ ವೇಳ್ವ್ಯ ॥ ೪೬

ಪಿರಿದು ಜಯಾಂಗನೆ ವೆರಸಿ ಕಂಠೀರವ
ದೊರೆ ರಾಯ ಪಟ್ಟ್ಯಣಕ್ಕೈದಿ ।
ಹರುಷದೊಳಿರುತೊಂದು ದಿವಸ ನಂಜೇಂದ್ರನ
ಕರೆದು ನುಡಿದ ಕಾರ್ಯದಿರವೆ ॥ ೪೭

ಅಸಮ ಸಾಹಸಿ ಖಾನ ಸರಹದ್ದಲಿರುವಾಗ
ಮುಸುಕಿ ಬಾಗೂರ ಸೆಳೆದರೆ ।
ಪಸರಿಸುವುದು ಬಲು ಕೀರ್ತಿ ನಮಗೆ ಮುಂ
ದೆಸೆವುದು ಖಾನಗೆ ಭೀತಿ ॥ ೪೯

ಯೆಂದು ನುಡಿದ ತನ್ನೊಡೆಯನ ಚರಣಾರ
ವಿಂದಗಳಿಗೆ ತಲೆ ವಾಗಿ ।
ಮೆಂದಿ ಕುದುರೆ ಸಹ ದಳವಾಯಿ ನಂಜೇಂದ್ರ
ಬಂದು ಮುತ್ತಿದನಾ ಪುರವ ॥ ೫೦

ರಾಮ ಚಂದ್ರನ ನೇಮದಲಿ ಸಕಲ ಬಲ
ಸ್ತೋಮ ಸಹಿತ ರವಿ ಸುತನು ।
ಪ್ರೇಮದಿಂ ಲಂಕೆಯ ಮುಸುಕಿದಂದದಲಾಗ
ಭೂಮಿಪನಿಟ್ಟ ಮುತ್ತಿಗೆಯ ॥ ೫೧

ಹರನ ನೇಮದೆ ಬಲ ರಿಪು ತ್ರಿ ಪುರವನಾಗ
ಸುರರು ಸಹಿತ ಮುತ್ತಿದಂತೆ ।
ನರಸ ರಾಜೇಂದ್ರನಾಜ್ಞೆ ಯಲಿ ಬಾಗೂರ ಬಂ
ದಿರದೆ ಮುತ್ತಿದ ದಳವಾಯಿ ॥ ೫೨

ನುಳು ವೇಲಿ ವೀಳುವೆ ತಳಿ ಸುರಂಗಗಳಿಂದ
ಬಳಸಿ ಬಂಧಿಸಲಾ ಪುರವ ।
ಹೊಳಲೊಳಗೆಸೆವ ಜನವು ಭೀತಿ ಗೊಂಡಾಗ
ಕಳವಳಿಸಿದರೇನೆಂಬೆ ॥ ೬೩

ಬಾನಿತ್ತ ವೆಜ್ಜೀರಭೈತಂದು ಖಾನಗೆ
ಬಿಡದೆ ಸಲಾಮನು ಮಾಡಿ ।
ತಡೆಯದೆ ಬಾಗಿಲ ಮುತ್ತಿರ ರಿಸ್ಸಗಳು
ಕಡಿಯು ಬೇಕೆಂದುಸಿರಿದರು ॥ ೬೪

ಇನ್ನುಂಟೆ ಮೈಸೂರ ನ ಪನೊಳು ಸಂಗರ
ಬನ್ನ ಕೊಟ್ಟೋಡಿ ನಾವೀಗ ।
ಉನ್ನತ ಖಂಡೆಯುಂಡಿವು ಕಾಗನಕ್ಕೆದೆ
ತನ್ನಂತೆ ಭಟರಾರೆಂದ ॥ ೬೫

ರಣಧೂಳಿ ಖಾನನೆಂಬೆನೆಂಡೆ ಹೆಂಗಳ ಗರ್ಭ
ಮಣಿದು ಬೀಳ್ವುವ್ರ ಭೂ ನಳಕೆ ।
ತೃಣಕೆ ನಮ್ಮನು ಟಿಕ್ಕಿಸೆನ ನರಸೆಂನ್ರನಿ
ಗೆಣೆ ಯುಂಟೆ ತ್ರಿ ಜಗದೊಳಂದ ॥ ೬೬

ಎಂದು ಪೇದೋಜಿಯು ಗುರಿ ಮಾಡಿ ರಾಜ್ಯವ
ನಂದಿತ್ತು ಪಿರಿದು ಮನ್ನಿಸುತ ।
ಮುಂದಣ ರಾಜ ಕಾರ್ಯವ ನಿನ್ನಯ ಮನ
ಬಂದಂತೆ ನಾಡೆಂದ ಖಾನ ॥ ೬೭

ಕಗೊಳಿಯಲಿ ಬಾಗೂರು ಹೊಗುವೆನೆಂದು
ವೆಗಳ ಬಲದೆ ಪೇದೋಜಿ ।
ಬೊಗ್ಗನೈತಂದು ಭಂಗಿಕ ಬಂದು ಮನ ನೊಂದು
ಸಿಗ್ಗಾಗೆ ತೆರಳಿದನಾಗ ॥ ೬೮

ಇಳೆಯಾಣ್ಮ ಕಂಠೀರವೇಂದ್ರನ ದಳವಾಯಿ
ತಳುವದೊತ್ತರಿಸಿ ಯಾ ಪುರವ ।
ಗಳಿಲನೆ ಸೆಳದು ಠಾಣೆಯವಿಟ್ಟು ನಿಮಿಷದೆ
ಬಲು ಹರುಷದೊಳ್ಬಂದ ॥ ೮೯

ಒಡೆಯನ ಬಳಿಗಾಗ ಮೆನ್ನೆಯು ನಾಯಕ
ಪಡೆ ಸಹ ತಳುವದ್ದೈತಂದು ।
ಪೊಡವಿಪ ನರಸ ರಾಜೇಂದ್ರಗೆ ತಲೆ ವಾಗೆ
ಕಡು ಹರುಷದಲಿ ಮನ್ನಿಸಿದ ॥ ೯೦

ಧರಣಿಪ ಕುಲ ಕುಶೇಶಯ ಭಾನು ಸುರ ಧೇನು
ನರಸೇಂದ್ರ ಸತ್ಕೀರ್ತಿ ಸಂಪ್ರ ।
ಕರೆದು ಮನ್ನಿಸಿ ದಳ ಪತಿ ಸಂಜೇಂದ್ರನ
ತುದುಗೆರೆಯನು ಸೆಳೆ ಯೆಂದ ॥ ೯೧

ಲಂಕಾ ದುರ್ಗಕೆ ಸರಿಯೆಂದಾ ಪೂರ
ಬಿಂಕದೆ ಕೊಂಡಾಡುತಿಪರು ।
ಮುಂಕೊಂಡು ಬಲ ಸಹಿತೈದಿ ಯಾ ಪುರವನು
ಶಂಕೆ ಯಿಲ್ಲದೆ ಸೆಳೆ ಯೆಂದ ॥ ೯೨

ದೇವರವರ ಪುಣ್ಯ ಶೌರ್ಯದೇಳಿಗೆಯಿಂದ
ತೀವಿದ ಬಲ ಸಹಿತೈದಿ ।
ಭೂ ವಲಯಕೆ ಚಕ್ರೋದ್ಯವೆಡೆದ ದುರ್ಗವ ಕೊಳ್ಳ
ಭಾವವೆ ಚಿತ್ರೈಸೆಂದ ॥ ೯೩

ಎಂದಾಗ ಸಕಲ ಬಲವ ಕೂಡಿ ದಳ ಪತಿ
ನಿಂದಲ್ಲಿ ನಿಲ್ಲದ್ದೈತಂದು ।
ಮುಂದೊಪ್ಪುವ ತುರಂಗವು ಕರಿಯನು ಮೆಟ್ಟಿ
ದಂದವನೇನ ಬಣ್ಣಿಸುವೆ ॥ ೯೪

ಗಗನ ಮಾರ್ಗವ ತುಡುಕುವ ಮೀರುವೆಗಳ
ಮಿಗೆ ಚಾದೆಸೆಯಲಿ ಬಲಿದು ।
ಅಗಳ ಘಾತವ ಹೂಳಿ ಯಾ ಪುರವನು ಬೇಗ
ಜಗ ಮೆಚ್ಚುವಂತೆ ಬಂಧಿಸಿದ ॥ ೩೫

ಬಳಸಿ ಭೋಗರೆವ ಪಿಡಂಗಿಯ ಗುಂಡುಗ
ಳೂಳ ಹೊಕ್ಕು ಕೋಟೆಯ ಕೆಡಹಿ ।
ಕಳಕುಳಿಸಿನು ಮಾಡ ತೊಡಗಿದುವೇನೆಂಬೆ
ಯಿಳಗತಿ ಚಕ್ರೋದ್ಯಮ ಬೀರೆ ॥ ೩೬

ಬಾಣಗಳಾರ್ಭಟಿಸುತಲೈದಿ ಯೂರೊಳು
ಕೇಣ ಸರದೊಳಿಹ ಭಟರ ।
ಪ್ರಾಣಗಳನು ನೀಗಿ ಭಯವಿತ್ತು ಪುರ ಜನ
ಶ್ರೇಣಿಯ ಸುಡ ತೊಡಗಿದುವು ॥ ೩೭

ಮುತ್ತಿಗೆ ದೆಗಿಸುವೆವೆಂದು ಖಾನರುಗಳು
ಮೊತ್ತ ಮೊತ್ತದಲೈತಂದು ।
ಮತ್ತೆ ವಾರುವ ಬಲ ಸಹ ನೊಣಬನ ಕೆರೆ
ಯೊತ್ತಲಿ ಬೀಡನಿಳಿದರು ॥ ೩೮

ಕೇಳಿದನಾ ತುರುಕರ ವಾರುವಗಳ
ದಾಳಿಯ ದಳ ಪತಿ ಯಾಗ ।
ಮೇಳೈಸಿ ಬಲವ ಕಗ್ಗೊಲೆಯ ಕಾಳಗಕಂದು
ತೂಳಿದನೇನ ಬಣ್ಣಿಸುವೆ ॥ ೩೯

ರಘು ನಾಥನ ನೇಮದಲಿ ದಳ ಪತಿ ನೀಲ
ಮಿಗೆ ಪ್ರಹಸ್ತನ ಮಾರ್ಬಲವ ।
ಹೊಗುವಂತೆ ಕಂಠೀರವೇಂದ್ರನ ದಳವಾಯಿ
ಬಿಗುಳಿದುಳಿದ ತುರುಕರನು ॥ ೪೦

ಮುರಿಯಲಿರಿದು ಮುನ್ನೂರು ಬಲ್ತೋಜಿಯು
ಭರದೆ ಕೈಸೆರೆಯಾಗೆ ಪಿಡಿದು !
ತುರುಕರಾವುತರೈನೂರನೊಂದೇ ವೇಳೆ
ತರಿದೊಟ್ಟಿದ ರಣದೊಳಗೆ ॥ ೪೦

ಹುತ್ತವನೇರಿದವರು ಬಂದು ತೃಣಗಳ
ಮತ್ತೆ ಕಚ್ಚುತ ನೀರ ಸೊಕ್ಕು ।
ಕತ್ತಿ ಕಠಾರಿಸ ಬಿಸುಟು ಕೈ ಮುಗಿವರ
ವೊತ್ತವನೇನ ಬಣ್ಣಿಸುವೆ ॥ ೪೧

ಬದಿಗಳೊಳಗೆ ಬಿದ್ದು ಪೊರಳಿಡವರು ನರೆ
ಕೆದರಿದ ತಲೆಯಿಂದಲಾಗ ।
ಗದಗಾಪ್ರಗೊಳುತ ಹೋಗಲು ದೆಸೆ ಕಾಣದೆ
ಸದೆಯಿಸಿಕೊಂಡರೀನೆಂಬೆ ॥ ೪೨

ಹೇಳುವ್ರದೇನೊಂದು ಯೋಜನ ಪರಿಯಂತ
ಬೀಳಲಿರಿದು ತುರುಕರನು ।
ಕೋಳು ವಾರುವೆ ಸಹ ದಳವಾಯಿ ನಂಜೇಂದ್ರ
ಪಾಳೆಯಕ್ಕೈತಂದನಾಗ ॥ ೪೩

ಪುರವ ಕೊಡದೆ ದುರ್ಗಲಿ ಠಾನವು ಕಾದು
ತಿರಲಾಗ ಕೋಪವೆ ತಾಳಿ ।
ನರಸೇಂದ್ರನ ದಳಪತಿ ತನ್ನನುಜನ
ಕರೆದಿಂತೆಂದು ನೇಮಿಸಿದ ॥ ೪೪

ಚಲವೆ ಬಲಿದು ಗಡಿ ಮನ್ನೆಯರುಗಳಿ ।
ತಳುವದೇಕೆಗಳ ಸೀನಿತ್ತು ।
ಹೊಳಲ ಲಗ್ಗೆಗೆ ಬಿಡಿಸೆಂದು ಲಿಂಗೇಂದ್ರಗೆ
ದಳಪತಿ ನೇಮವನಿತ್ತ ॥ ೪೫

ಒಡನೆ ಹಸಾದವೆನ್ನುತ ಲಿಂಗ ರಾಜೇಂದ್ರ
ಗಡಿವೆನ್ನೆಯರ ಕರೆಕರೆದು ।
ಬಿಡದಾ ಪುರವನು ಲಗ್ಗೆಗೊರಿಸುತಿಹ
ಕಡುಗಲಿತನವನೇನೆಂಬೆ ॥ ೪೩

ದೆಸೆ ದೆಸೆಯಲಿ ಮೆನ್ನೆಯರು ಮಾರ್ಬಲ ಸಹ
ಮುಸುಕಿ ಪುರವ ಲಗ್ಗೆಗೊರಿ ।
ಒಸೆದಾ ಪುರವನೊಂದೇ ಕ್ಷಣದಲಿ ಕೊಂಡು
ಜಸವ ಬೀರಿದರೀ ವೇಳ್ವ ॥ ೪೪

ಊರೊಳಗಿಹ ಬಾನವುಗಳ ಪಿಡಿದಾಗ
ವಾರುವ ಮದ ಗಜಗಳನು ।
ಭೋರನೆ ಸೆಳದು ಲಿಂಗೇಂದ್ರನಣ್ಣನ ಪದ
ವಾರಿಜಗಳಿಗೊಪ್ಪಿಸಿದ ॥ ೪೫

ಪಿರಿದು ತನ್ನನುಜನ ಶೌರ್ಯದೊಳಗೆಗಾಗ
ಹರುಷವ ತಾಳಿ ನಂಜೇಂದ್ರ ।
ಪುರಕೆ ತಾಣೆಯವಿಟ್ಟು ಕರು ತುರುಗಗಳನು
ನರಸ ರಾಜೇಂದ್ರಗೊಪ್ಪಿಸಿದ ॥ ೪೬

ಒಡನೆ ಕಂಠೀರವ ರಾಜೇಂದ್ರ ಪರುಷದ
ಕಡಲೊಳಗೊಲಾಡುತಾಗ ।
ಬಿಡದೆ ನಂಜೇಂದ್ರ ಲಿಂಗೇಂದ್ರರ ಮನ್ನಿಸಿ
ಸಡಗರದೊಳಗೆ ರಾಜಿಸಿದ ॥ ೪೭

ನರ ರಕ್ಕಸರ ಸಂಹರಿಸಿ ಭೂ ಭಾರವ
ಪರಿ ಹರಿಸುವೊಡೆಯ ನೆಂದ ।
* ನರ ಭೂಪ ನರ ಸಿಂಹ ನರಸ ರಾಜೇಂದ್ರನೆಂ
ದುರೆ ಪೊಗಳಿತು ಸರ್ವ ಜನವು ॥ ೪೮

---

* ನರಭೂಪನ ಸಿಂಹ ನರಸ.

ಪಟ್ಟಣ ಪಳ ವಶ ವಾಗೆ ಕರ್ಣಾಟಕ
ಕೆಟ್ಟು ನವ್ಮಯ ರಾಜ್ಯ ಸಿರಿಗೆ ।
ಮುಟ್ಟಡಿಯಾಗುವೆಂದದ ನಿಲಿಸಿದನೆಂದು
ಸೃಷ್ಟೀಶರು ಪೊಗಳಿದರು ॥ ೯೩

ಶ್ರೀ ರಂಗ ಪುರವನು ತುರುಕರ್ಗೆ ಕೊಡದೆ ನ
ಮ್ಮೋರಂತೆ ಸಲಹಿದನೆಂದು ।
ಮೂರು ಮನೆಯ ದೊರೆಗಳು ಪೊಗಳಿದರಾ
ವೀರ ಕಂಠೀರವ ನೃಪನ ॥ ೯೪

ತೀವಿದ ಪುಣ್ಯ ಸ್ಥಳದ ರಾಜ್ಯವೆ ಶಾಪ
ಜೀವಿಗಳಿಗೆ ವಶ ಗೊಡದೆ ।
ದೇವ ಬ್ರಾಹ್ಮಣರ ಪರಿದು ರಕ್ಷಿಸಿದನೀ
ಭೂ ವರನೆಂದುದು ಲೋಕ ॥ ೯೫

ಎಲ್ಲಿ ನೋಡಿದೊಡನ್ನ ಸತ್ರ ದಾಸೋಹಗ
ಳಲ್ಲಿ ನೋಡಲು ದೇವ ಪೂಜೆ ।
ಪಲ್ಲೈಸಿದುದೀ ನರಸೇಂದ್ರನ ರಾಜ್ಯ
ದಲ್ಲಿ ನಾನೇನ ಬಣ್ಣಿಸುವೆ ॥ ೯೬

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೯೭

೧೬ನೆಯ ಸಂಧಿ ಸಮಾಪ್ತಂ

ಹದಿನೇಳನೆಯ ಸಂಧಿ

ಸಾಂಬಳ್ಳಿಯಂ ಕಟ್ಟಿಕೊಂಡುದು

ಸೂಚನೆ ॥ ಧರಣಿಗಗ್ಗಳ ಸಾಂಬಳ್ಳಿಯ ರಾಜ್ಯನ
ದುರದೆ ಸೆಳೆದ ನರಸೇಂದ್ರ ॥

ಕಮಲ ಧರನ ನಿಜ ವೈರಿಗೆ ಬಳಿಕ ಸಂ
ಭ್ರಮದೊಳಾಹಾರವಾದವನ ।
ಗಮನಕೋಡುವನೊಡೆಯನ ತನುಜನ ಕೊಂದ
ರವಿಯ ರಮಣ ಸಲಹೊಲಿದು ॥ ೧

ಇರುತಿರೆ ಸಾಂಬಳ್ಳಿಯ ಮೊದಲಾರಿಯ
ಹಿರಿಯ ತನುಜ ಪಟ್ಟದಯ್ಯ ।
ಪಿರಿದು ಗರ್ವಿಸಿ ಯೆಲ್ಲಿಗಟ್ಟಿಗೆ ವೈಸೂರ
ದೊರೆಯೊಳು ಧುರವನೆಸಗಿದ ॥ ೨

ಮೊಲ ವರಿ ಸಿಂಗದೊಡನೆ ಬಲು ಸಂಗರ
ಕೆಳಸಿ ಭೂಮಿಯೊಳು ಜೀವಿಪುವೆ ।
ಚಲದಂಕ ಕಂಠೀರವೇಂದ್ರನ ಕೆಣಕಿ ಮೆ
ತ್ತುಳಿವರೆ ರಿಪು ಮನ್ನೆಯರು ॥ ೩

ಸಾಳುವೇಂದ್ರನ ಕೂಡರಗಿಳಿ * ಗಳಿಗೆ ಸಂ
ವೀಳವೆ ಕಂಠೀರವನ ।
ಕಾಳಗದೊಳಗಿದಿರಾಗಿ ಜೀವಿಸುವೆ ನೃ
ಪಾಲರುಂಟೇ ಲೋಕದೊಳಗೆ ॥ ೪

---

* ಗೊಡನೆ ಸಂ.

ಧರೆಗೆ ದುರ್ಜನರಾದ ತುರುಕರ ಬಲವನು
ಹರಿ ಹಂಚ ಮಾಡಿಯೊರೆಸಿದ ।
ದೊರೆ ರಾಯ ನರಸ ರಾಜೇಂದ್ರನ ಕೊಂಡಿ ನು
ತ್ತರಿಗಳುಳಿವರೆ ಲೋಕದಲಿ ॥ ೫

ತನಗಿಂತ ಬಲ್ಲಿದನೊಳು ಶೌರ್ಯವಿಲ್ಲದೆ
ಯನುವರವನು ಕೊಂಡಿದನ ।
ಘನತರ ಮೂಢನೆಂದುಲಿವರಲ್ಲದೆ ನುತ್ತ
* ಘನ ಪ್ರಾಜ್ಞನೆಂಬರೆ ಬುಧರು ॥ ೬

ಬಳಿಕಾಗ ನರಸ ರಾಜೇಂದ್ರ ಚಂದ್ರನು ತನ್ನ
ದಳವಾಯ ಕರಿಸಿಯೋಲಗಕೆ ।
ಗಳಿಲನೆ ಮನ್ನಿಸಿ ನಗುತ ಮುಂದಣ ಕಾರ್ಯ
ದಳವಿಯ ನುಡಿದನಿಂತೆಂದು ॥ ೭

ಮಧುರೆಯವನ ಬಲುಹಿಂದ ನಮ್ಮಳಿಗುರೆ
ಕದನವ ಗಂಟಿಕ್ಕಿಕೊಂಪ ।
ಮೊದಲಾರಯ ಸುತನವನ ಗರ್ವ ಮುರಿ
ದೆದೆಗೆಡಿಸೈದಿ ನೀನೆಂದ ॥ ೮

ಮೂರಟ ಹಳ್ಳಿ ನಮ್ಮಯ ಹಳ್ಳಿ ಗಡಿಗಡು
ವೈರ ಬಂಧದೊಳಿರುತಿಪ್ಪುದು ।
ಓರಂತೆ ಮುತ್ತಿಗೆ ಯಿಕ್ಕಿ ಯಾ ದುರ್ಗವ
ಸೇರಿಸು ನಮಗೆ ಹೋಗೆಂದ ॥ ೯

ಎಂದಾಗ ದಳವಾಯಿ ನಂಜರಾಜೇಂದ್ರನ
ಮಂದಿ ಸಹಿತ ಬೀಳ್ಕೊಟ್ಟ ।
ಚಂದದೆ ನರ ಲೋಕ ಭೋಗ ಸುರೇಂದ್ರನಾ
ನಂದದೊಳಿಸೆದನೇ ವೇಳ್ವ ॥ ೧೦

---

* ಮನ.

ಇತ್ತಲಾ ದಳವಾಯಿ ನಂಜರಾಜೇಂದ್ರ ಭೂ
ಪೋತ್ತಮನೊಡೆಯನಾಜ್ಞೆಯಲಿ ।
ಮೊತ್ತದ ಬಲ ಸಹಿತೈದಿ ಯಾ ಪುರವನು
ಮುತ್ತಿಗೆಯಿಟ್ಟನೇ ವೇಳ್ಕ್ಯೆ ॥ ೧೧

ಹರಿಯು ನೇಮಿಸಲಿ ಸಾತ್ಯಕಿ ಸಾಲ್ವನ ಪುರ
ವರವ ಮುತ್ತಿಗೆಯಿಕ್ಕಿದಂತೆ ।
ನರಸರಾಜೇಂದ್ರನಾಜ್ಞೆಯಲಿ ಮೊಗಟಹಳ್ಳಿ
ಗಿರದೆ ಮುತ್ತಿಗೆಯಿಟ್ಟನಾಗ ॥ ೧೨

ಪುರದ ಬಹು ದೆಸೆಗಳಲಿ ತಳಿ ಮೇಚುವೆಗಳ
ಪಿರಿದಾಗಿಹ ಸುರಂಗಗಳ ।
ಭರದಲಿ ರಚಿಸಿಯೊತ್ತರಿಸಿ ಮುತ್ತಿಗೆಯಿಕ್ಕಿ
ನೆರೆ ಬಂಧಿಸಿದನೇ ವೇಳ್ಕ್ಯೆ ॥ ೧೩

ಕೇಳಿ ಬಳಿಕ ಪಟ್ಟ್ಯದಯ್ಯ ಮಧುರೆಯವ
ರಾಳು ಕುದುರೆಗಳು ಸಹಿತ ।
ಮೇಳದೊಳಗೆ ನಡೆತಂದಾಸ್ಥಳಕಾಗ
ದಾಳಿ ಮಾಡಿದನುಬ್ಬಿನಿಂದ ॥ ೧೪

ನಗುತೊಂದು ಲಕ್ಷ್ಯ ಕಾಲಾಳಾನೆ ಕುದುರೆಗ
ಳಗಣಿತವೆನು ಕೂಡಿಕೊಂಡು ।
ಮಿಗೆಯಾ ಪುರವ ಮುತ್ತಿದ ಪಾಯಿದಳದೊಳು
ಜಗಳವ ಬಲಿದನೇನೆಂಬೆ ॥ ೧೫

ಕಂಡನು ವೈರಿನೃಪಾಲನ ಬಲ ಮುಂ
ಕೊಂಡೈದಿ ಬರುವ ಬಗೆಯನು ।
ಚಂಡ ವಿಕ್ರಮ ರಿಪು ಗಜ ಕಂಠೀರವ
ಮಂಡಲೇಶನ ದಳವಾಯಿ ॥ ೧೬

ಗಣಿಸದ್ಯೆತರುವ ದಾವಾಗ್ನಿಯೊಳಗಾಗಿದ
ತೃಣದ ಬಣಬೆ ಯಡ್ಡವಹುವೆ ।
ರಣದೊಳು ನರಸ ರಾಜೇಂದ್ರನ ದಳವಾಯ
ಕೆಣಕಿ ಜೀವಿಪರುಂಟೆ ಜಗದೆ ॥ ೧೬

ಕಣಿವೆಯ ಬಾಗಿಲ ಕಟ್ಟಿಕೊಂಡಾ ಹ್ಷಣ
ಗುಣ ವಿಹೀನನ ಸರ್ವ ಬಲವ ।
ಹಣಿದವನಾಡಿ ನಂಜೇಂದ್ರ ಚಂದ್ರನಾಗ
ರಣ ಭೂತಗಳಿಗಿತ್ತ ಬಲಿಯ ॥ ೧೮

ಗಿರಿ ಗಹ್ವರವ ಹತ್ತಿಸಿ ವೈರಿ ಸು ಭಟರ
ಶಿರಗಳ ಸರ ಮಾಲೆಗಟ್ಟಿ ।
ಕರಿಗಳ ಪಿಡಿದು ದುರ್ಗವ ಕೊಂಡು ವಳ ಪತಿ
ನರಸ ರಾಜೇಂದ್ರನ ಕಂಡ ॥ ೧೯

ಚರಣಕ್ಕೆ ನಮಿಸಿ ಸಂತೋಷದೆ ಸೆಳೆ ತಂದ
ಕರಿತುರಗಗಳನೊಪ್ಪಿಸಲು ।
ಬಿರುದಿನ ಕಾಲ ಪೆಂಡೆಯ ಕಂಠ ಮಾಲೆಯ
ಕರೆದಿತ್ತು ಮಿಗೆ ಮನ್ನಿಸಿದ ॥ ೨೦

ಜಗಳದೊಳಿರಿದ ಮೆನ್ನೆಯ ಮಂಡಲಿಕರಿಗೆ
ಮಿಗೆ ಭೂಷಣಗಳುಡುಗೊರೆಯ ।
ನಗುತಾಗ ಕಂಠೀರವ ರಾಜ ಕರೆದಿತ್ತು
ಜಗಕತಿಶಯದೆ ಮನ್ನಿಸಿದ ॥ ೨೧

ಒಡನಂದು ಮೆರಿದ ಬಲವ ಕೂಡಿ ಕಲಿ ಮಾಡಿ
ಬಿಡದೆ ಸಾಂಬಳ್ಳಿಯ ಭೂಪ ।
ತುಡುಗುಣಿ ತನದಲಾಲಂಬೂಡಿಯ ಕೊಂಡ
ಕಡೆಗೆ ಠಾಣೆಯವಿಕ್ಕಿದನು ॥ ೨೨

ಆಲಂಬಾಡಿಯ ಸೆಳೆದನೆಂಬೀ ಸುದ್ದಿ
ಬೀಳಲು ಕರ್ಣದೊಳಾಗ ।
ಭೂ ಲೋಲ ನರಸೇಂದ್ರ ದಳವಾಯ ಕರೆದಾಗ
ಬಾಳ ಮಾಡೆಂದು ನೇಮಿಸಿದ ॥ ೨೩

ಪಸಿದಾರ್ಭಟಿಸುವ ಹುಲಿಯ ಮಿಸೆಯ ಮೆರಿ
ಶಕಕ ಬಂದಲುಗಿಸುವಂತೆ ।
ಹಸನರಿಯದೆ ಕೆಣಕಿದ ವೈರಿ ಬಲವನು
ದೆಸೆ ಬಲಿಗೊಡು ಹೋಗೆಂದ ॥ ೨೪

ಪ್ರಳಯ ಕಾಲಾಗ್ನಿಯ ತುಡುಕಿ ಪತಂಗದ
ಹುಳು ಜೀವ ಸಹಿತವ್ರಳಿವುದೆ ।
ಅಳವರಿಯದೆ ನಮ್ಮ ಕೆಣಕಿದನಾತನ
ಬಲುಹ ಭಂಗಿಸು ಹೋಗೆಂದ ॥ ೨೫

ಎಂದು ನುಡಿದ ತನ್ನೊಡೆಯನಾಜ್ಞಾ ಪನೆ
ಯಿಂದ ಬಲವ ಕೂಡಿ ಕೊಂಡು ।
ಸಂದಣಿಸುತ ದಳವಾಯಿ ನಂಜೇಂದ್ರನ್ಯೆ
ತಂದು ಮುತ್ತಿದ ರಿಪ್ರು ಬಲವ ॥ ೨೬

ಕವಿ ಕವಿ ಹೆಬ್ಬಲದೊಡನಿಂತು ಕಿರು ಬಲ
ಬವರಕಾನುವ್ರದೆಯೆಂದೆನುತ ।
ತವಕದಿನಾನೆ ಕುದುರೆ ಕಾಲಾಳು ಬ
ವಗಡಿಸಿದುದೇ ವೇಳ್ವ ॥ ೨೭

ಪಿರಿದಾದ ಚತುರಂಗದ ಪದ ಹತಿಯಲಿ
ಮುರಿದೇಳ್ವ ಕೆಂದೂಳ್ಗಳಾಗ ।
ತರಣಿ ಮಂಡಲವ ಮುಂ ಬಲಿದು ಮುಂ ಕೊಳುತಂದು
ಕಿರಣದೇಳಿಗೆಯ ತಗ್ಗಿಸಿತು ॥ ೨೮

ಎಸೆವಾಳು ಕುದುರೆ ಗಜಗಳ ಪೋಪರದಲಿ
ನುಸುಳಲಾರದೆ ಪವಮಾನ ।
ಹಸಗೆಟ್ಟು ಮುಂದ ಗತಿಯನ್ಯದಿದನಿ
ನ್ನು ಸಿರಲಳವೆ ಯಾ ಬಲವ ॥ ೮

ಬೊಬ್ಬೆ ಯಾರ್ಭಟೆ ಬಿಲ್ಲ ಜೇವೆಡೆ ಹಯಗಳ
ಕೊಬ್ಬಿನ ಬಲು ಹೇಷಿತದಾ ।
ಅಬ್ಬರ ಗಜದ ಘಂಟಾ ರವ ವೊಂದಾಗಿ
ಮಬ್ಬಿ ಮುಸುಕಿದುವೆಣ್ದೆಸೆಯ ॥ ೯

ಹಿಂದಕ್ಕೆ ಹಜ್ಜೆಯ ತೆಗೆದವರಿಗೆ ಸ್ವರ್ಗ
ವೆಂದೆಂದಿಗಿಲ್ಲವೆಂದೆನುತ ।
ಕುಂದಬೆ ಭಾಷೆಗಳನು ಮಾಡಿ ಪಟು ಭಟ
ಬೃಂದ ಮುಸುಕಿತೇ ವೇಳ್ಕೆ ॥ ೧೦

ಅಳ್ಳೆದೆಗಳ ಮನ್ನೆಯರೈದ ಬೇಡೆಂದು
ನಿಲ್ಲದೆ ಗಜರಿ ಗರ್ಜಿಸುತ ।
ಬಲ್ಲಿದ ಭಟರು ಭಾಷೆಯ ಮಾಡಿ ಮೂದಲೆ
ಸೊಲ್ಲುಗಳಿಂ ತರುಬಿದರು ॥ ೧೧

ಹಸಿದೊಡೆ ಬಾಯ ಬಸುರ ಬಡಿದಳುತಾಗ
ಳಸೆವಂಗುಳ ಹಂದೆಗಳು ।
ಜಸ ಪರಿಪೂರ್ಣ ಕಂಠೀರವೇಂದ್ರನ ಪೌ
ರುಷಕಿದಿರಾಗಿ ನಿಲ್ಲುವರೆ ॥ ೧೨

ಇರಿ ಕಡಿ ತರಿ ಹೊಯ್ ಗಂಜಿಗುಡುಕರಸಂ
ದುರುಬಿ ಮುಮ್ಮೊನೆಯ ನಾಯಕರು ।
ಕರದ ಖಂಡೆಯದಿಂದಲಿಟ್ಟ ಬಾಕಿನೊಳಾಗ
ತರಿದಿರಿದವುಕುತಟ್ಟಿದರು ॥ ೧೩

ಡೊಳ್ಳು ಹೊಟ್ಟೆಯನೆತ್ತಿಕೊಂಡೋಡಲಾರದೆ
ಹಳ್ಳ ಕೊಳ್ಳದಲಿ ಮುಗ್ಗರಿದು ।
ಮುಳ್ಳಲ್ಲಿ ಬಿದ್ದು ಮೂಗರಿಸಿಕೊಂಡರ ಲೆಕ್ಕ
ವೆಲ್ಲವನಾರು ಬಣ್ಣಿಪರು ॥ ೫೫

ಪೊನ್ನು ಮೊಲೆಯ ಗೌಡನು ಪ್ರಳಿಗೌಡನು
ಚಿನ್ನ ವೆಂಕಟ ರಾವೆಣೆಯ ।
ಉನ್ನತ ಸೀಸಿವಾಸನು ಮೊದಲಾಗಿಹ
ಮನ್ನೆಯರನು ಸೆರೆ ವಿಡಿದ ॥ ೫೬

ಆತನ ತಳತಂತ್ರವ ಸದೆಬಡಿದು ಮೆ
ತ್ತಾತನ ದಳವಾಯ ಪಿಡಿದು ।
ಆತ ಸೆಳೆದ ದುರ್ಗವ ಕೊಂಡು ನಂಜೇಂದ್ರ
ಖ್ಯಾತಿವಡೆದನೇ ವೇಳ್ವ ॥ ೫೭

ನಲ್ಲೂರು ವೊಂಟು ಹಳ್ಳಿಯ ಚಂಗಪಾಡಿಯ
ನುಲ್ಲಾಸದಲಿ ಸೆಳದಾಗ ।
ಪಲ್ಲೈಸುವ ಹರುಷದೊಳಾಗ ತೋಳಿಯ
ದಲ್ಲಿ ಬಿಟ್ಟನು ಪಾಳೆಯವ ॥ ೫೮

ಮೆನ ನೊಂದು ಸಾಂಬಳ್ಳಿಯ ಭೂಪ ಮಧುರೆಯ
ಜನ ನಾಥಗೆ ವೊರೆ ಯಿಟ್ಟು ।
ಘನವಾದ ತಳತಂತ್ರವ ಕೂಡಿಕೊಂಡಾಗ
ಮುನಿದೈತಂದನೀನೆಂಬೆ ॥ ೫೯

ಕುದುರೆ ನಾಲ್ಕೈದು ಸಾವಿರ ಪಾಯಿದಳ ಲಕ್ಷ
ಮದ ಗಜ ನೂರ್ಕಾರುವೆರಸಿ ।
ಮಧುರೆ ನೃಪನ ವೋಪರ ದಳಪತಿ ಗೂಡಿ
ಕದನಕೈತಂದನೇ ವೇಳ್ವ ॥ ೬೦

ಒಂದೊಂದು ಪೌಜಿನೊಳಗೆ ಹತ್ತು ಸಾವಿರ
ಮಂದಿ ಕುದುರೆ ಯೈನೂರು ।
ಕುಂದದೆ ಗಜ ಘಟೆ ಸಹಿತ ದೊರೆಗಳಾಗ
ನಿಂದರು ಧುರ ವೋಹರದೆ ॥ ೪೧

ಕೊರಳ ಯಜ್ಞೋಪವೀತದ ಮುಡಿ ಹೂಗಳ
ಪರಿಮಳಿಸುವ ಗಂಧದಿಂದ ।
ಕರದೊಳು * ಪಿಡಿಯನಾಂತರಸು ಮಕ್ಕಳುಗಳು
ಧುರಕನುವಾದರೈನೂರು ॥ ೪೨

ಎಲ್ಲಿ ನೋಡಲು ಕಾಲಾಳು ಕುದುರೆ ಯಾನೆ
ಯೆಲ್ಲಿ ನೋಡಲು ವಾದ್ಯಗಳ ।
ಘಲ್ಲಣೆ ತುಡುಮುಗಳಬ್ಬರ ವೊರೆದುವ
ಲ್ಲಲ್ಲಿ ಮೆರೆದುವೇ ವೇಳ್ವ ॥ ೪೩

ಅಂದು ಸಪ್ತವ್ಯೂಹದಲಿ ಕಲಿ ಪಾರ್ಥನ
ಬಂದು ಮುತ್ತಿದ ಕೌರವನ ।
ಮಂದಿ ಕುದುರೆ ಯೆನೆ ಮಘರೆಯ ಬಲವ್ಮೆ
ತಂದು ಮುತ್ತಿತು ದಳ ಪತಿಯ ॥ ೪೪

ಬಾಲಾರ್ಕ ಬಿಂಬವ ಮುಸುಕಿದ ಮಂಜಿನ
ದಾಳಿ ಯೆಂದೆನೆ ದಳ ಪತಿಯ ।
ತೂಳುವ ವಾದ್ಯ ರಭಸದಿಂದ ರಿಪು ಭಟ
ಜಾಲ ಮುತ್ತಿದುದೇ ವೇಳ್ವ ॥ ೪೫

ಬಡಬಾಗ್ನಿಯ ಮುನ್ನೀರ ತೆರೆಗಳ್ಕೈದಿ
ತುಡುಕಿ ತೂಳುವ ತೆರದಿಂದ ।
ಕಡು ತವೆಕದೆ ಕುದುರೆಯ ರಾವುತರೈದಿ.
ಬಿಡದೆ ಮುತ್ತಿದರುಬ್ಬಿನಲಿ ॥ ೪೬

---

* ಪಿಡಿಯುವಾಂತ.

ಕುಲ ಗಿರಿಗಳ ಬಳಗಗಳ್ಕೆದಿ ನಿಮಿಷದೆ
ಬಲ ರಿಪುಜನು ತಡೆದಂತೆ ।
ದಳವಾಯಿ ನಂಜರಾಜೇಂದ್ರನ ಕರಿ ಸಂ
ಕುಳವೈತಂದು ಮುತ್ತಿದುವು ॥ ೪೭

ಕಂಡನು ವೈರಿ ಮೊರ್ಬಲ ಕದನಕೆ ಮುಂ
ಕೊಂಡೈದಿ ಬರುವ ಭಾವವನು ।
ಚಂಡ ವಿಕ್ರಮ ದಳ ಪತಿ ನಡು ಹಗಲ ಮಾ
ರ್ತಂಡನಂತಿದಿರಾದ ಬಲಕೆ ॥ ೪೮

ಹೊಡೆವ ಡಮಾಮಿ ಕಹಳೆ ಡವುಡೆ ವಾದ್ಯದೆ
ಜಡಿವ ನಾನಾ ಯುಧಗಳಲಿ ।
ಬಿಡುವ ಪೆಟಲು ಸೂಸುವ ಭಾಣದುರಿಯಿಂದ
ತುಡುಕಿದ ರಿಪು ವೋಹರವ ॥ ೪೯

ಬೊಬ್ಬೆಯಬ್ಬರ ಗಜಗಳ ಘಂಟಾ ರವ
ದುಬ್ಬು ಕುದುರೆಗಳ ಖುರದ ।
ಮಬ್ಬಿನ ಕೆಂದೂಳು ಮೆಧುರೆಯವರ ಬಲ
ದೊಬ್ಬುಳಿಯನು ಬೆರಸಿದುದು ॥ ೫೦

ದಳವಾಯಿ ನಂಜರಾಜೇಂದ್ರನ ಡಾಳಿನ
ಹೊಳಹು ಡಮಾಮಿಯಬ್ಬರದ ।
ಸುಳಿವ ಕಂಡಾಹ್ಲಣ ಹತ್ತು ಪ್ರಾಜೊಂದಾಗಿ
ತಳಹೊಳಗೊಂಡುದೇ ವೇಳ್ವ ॥ ೫೧

ರಾಯ ರಾವುತರು ತೂಳಿಸಿ ಕುದುರೆಗಳನು
ಭೋಯೆಂದು ಬೊಬ್ಬಿರಿದೇರಿ ।
ಬಾಯ ಬಿಡಲು ರಿಪು ಬಲ ಪ್ರಾಜನೊಳ ಹೊಕ್ಕು
ಸಾಯಲಿರಿದರೇ ವೇಳ್ವ ॥ ೫೨

ರಾಮನೆಚ್ಚಂಬು ರಾವಣನ ಬಹುಳ ಬಲ
ಸ್ತೋಮವ ಜಯಿಸುವಂದದಲಿ ।
ಭೂಮಿಪ ನರಸೇಂದ್ರನ ದಳಪತಿ ಸಂ
ಗ್ರಾಮದೊಳಿರಿದ ವೈರಿಗಳ ॥ ೫೩

ಹರಿ ಯಿಟ್ಟ ಚಕ್ರ ರಕ್ಕಸರ ಮೊರ್ಬಲದೊಳ
ಗುರುವಣಿಸುವ ತೆರದಿಂದ ।
ನರಸ ರಾಜೇಂದ್ರನ ದಳವಾಯಿ ರಿಪುಗಳ
ನರೆಯಟ್ಟಿದ ರಣದೊಳಗೆ ॥ ೫೪

ಭೀಮ ಸೇನನ ಗದೆ ಕೌರವ ಬಲವನು
ಭೂಮಿಗೆ ಕೆಡಹುವಂದದಲಿ ।
ಸ್ವಾಮಿ ಕಂಠೀರವೇಂದ್ರನ ದಳಪತಿ ನಿ
ಸ್ಸೀಮ ಹೊಯ್ದನು ರಿಪು ಬಲವ ॥ ೫೫

ಓಡಿದವರು ಗಾಯವಡೆದಾಗ ಜೀವನ
ನೀಡಿದವರು ಯಮಪುರಕೆ ।
ಕೂಡಾಗ ಮಧುರೆಯ ಬಲ ಹರಿ ಹಂಚಾಗಿ
ಜೋಡಿಸಿದರು ಪಲಾಯನವ ॥ ೫೬

ಹಿಂದಕ್ಕೆ ಹಜ್ಜೆಯ ತೆಗೆದೊಡೆ ಪಾತಕ
ವೆಂದಾಗ ಮಧುರೆಯರಸನ ।
ಮಂದಿಯೊಳ್ನೂರರಸು ಮಕ್ಕಳು ಕಾದಿ
ಸಂದರು ಸಗ್ಗ ಹೆಂಗಳಿಗೆ ॥ ೫೭

* ಕಲುಗೋಟೆಯ ವೇಂಕಟಪ್ಪ † ನಾಯಕನೊಳು
ದಲೆಯನರಿದು ಸೆಂಡಾಡಿ ।
ದಳವಾಯಿ ನಂಜ ರಾಜೇಂದ್ರ ತಸ್ನೊಡೆಯಗೆ
ಬಲು ಕೀರ್ತಿಯ ತಂದನಂದು ॥ ೫೮

---

* ವೇಲುಗೋಟೆಯು. † ನಾಯಕನನುತಲೆ.

ಸಲೆ ಮೊರು ಗಾವುದ ಪರಿಯಂತ ರಿಪುಗಳ
ಬಲವ ಮುರಿದು ಬೆನ್ನಟ್ಟಿ ।
ತಳುವದೆ ನಾಲ್ಕು ಸಾವಿರ ಕೋಳು ಸಹಿತಾಗ
ದಳ ಪತಿ ಬಂದ ಪಾಳಯಕೆ ॥ ೫೯

ಪೊಡವಿಪ ಕಂಠೀರವನಪ್ಪಣೆಯಿಂದ
ಬಿಡದೆ ಸಾಂಬಳ್ಳಿಯ ಮುತ್ತಿ ।
ಕಡು ಬೇಗದಲಿ ಕೊಂಡು ಠಾಣೆಯವಿಕ್ಕಿ ತ
ನ್ನೊಡೆಯನಿದ್ದೆಡೆಗೈತಂದ ॥ ೬೦

ಸಂದಣಿಸುವ ಮನ್ನೆಯರಿಂದ ದಳ ಪತಿ
ಬಂದಾಗ ನರಸ ಭೂ ವಂನ ।
ಬಂಧುರವೆಹ ಪಾದಕ್ಕೆರಗಲಾನಂದ
ದಿಂದವರನು ಮನ್ನಿಸಿದ ॥ ೬೧

ಮುರಿದಿತ್ತ ತನ್ನಯ ಬಲ ಹರಿಹಂಚಾಗೆ
ದೊರೆ ಮಕ್ಕಳಳಿದ ವಾರ್ತೆಯನು ।
ಇರದಾಗ ಮಧುರೆಯರಸ ಕೇಳಿ ಮನ ನೊಂದು
ವರ ಮಂತ್ರಿಗಳೂಳಿಂತೆಂದ ॥ ೬೨

ನೆರೆ ಲಕ್ಷ ಬಲವ ಕಿರಿದು ಬಲದಿಂದಾಗ
ಮುರಿದೋಡಿಸಿದವನಿಪನ ।
ನರಸಿಂಹ ಮೂರ್ತಿ ಯೆಂದೆನ ಬೇಕಲ್ಲದೆ
ಪಿರಿದೊಂದನೆಣಿಸಲೇಕೆಂದ ॥ ೬೩

ಪೊಡವಿಯೊಳಾತನ ದಳವಾಯಿಗಿದಿರಾಗಿ
ಕಡುಗಿ ನಿಲ್ವರಿಗಳ ಕಾಣೆ ।
ಕಡೆಯ ಮಾತಿನ್ನೇನವನ ರಕ್ಷಿಸಿ ಬಹಾ
ವೊಡೆಯನ ಶೌರ್ಯವಿನ್ನೆಂತೊ ॥ ೬೪

ಗರುಡನ ಗರಿಯ * ಗಾಳಿಗೆ ದೆಸೆ ದೆಸೆಗಾಗ
ಪರಿವ ಪನ್ನಗ ಕುಲ ದಂತೆ ।
ಮುರಿದೋಡಿತು ನಮ್ಮ ಬಲವಾ ದಳವಾಯ
ಬುರುಗಿನ ದನಿಯ † ನಾಲಿಸುತ ॥ ೬೫

ಮುತ್ತಿಗೆ ಯಿಕ್ಕಿ ಸಾಂಬಳ್ಳಿಯ ಸೆಳದನ
ನೊತ್ತಿ ಬಂದೆಮ್ಮ ರಾಜ್ಯಗಳ ।
ಸುತ್ತಿಸುಳಿದು ಧೂಳಿ ಪಟ ಮಾಡಿ ನಮಗಿ
ನ್ನೆತ್ತಣ ದೊರೆ ತನ ವೆಂದ ॥ ೬೬

ನೆರೆ ಲಕ್ಷ ಪರಿ ಸಾಯ ದಳದ ಮನ್ನೆಯ ಸೋತು
ಹೆರ ಸಾರಿದನಲ್ಪ ಬಲಕೆ ।
ಧರೆಯೊಳಾತನ ಮಾತೇಕೆಂದು ನಮ್ಮನು
ಸರಿದೊರೆ ನಗುವಂತಾಯ್ತು ॥ ೬೭

ಕಡೆಯ ಮಾತೇಕಿನ್ನು ಸರ್ವ ಬಲವ ಕೂಡಿ
ನಡೆದು ಸಾಂಬಳ್ಳಿಯ ಮುತ್ತಿ ।
ಬಿಡದೆ ಸೆಳದು ಭಂಗಿಸಿದಲ್ಲದೆ ನಮ್ಮ
ಪೊಡವಿಗುಕ್ಕಳವಿಲ್ಲೆಂದ ॥ ೬೮

ಎಂದಾಗ ಮೂಲ ಬಲವ ಕೂಡಿ ಕೋಪದೆ
ನಿಂದಲ್ಲಿ ನಿಲ್ಲದೈತಂದು ।
ಕುಂದದೆ ಸಾಂಬಳ್ಳಿಯ ಮುತ್ತಿಗೆಯಿಟ್ಟ
ನಂದಾಗ ಮೆಧುರೆಯ ಭೂಪ ॥ ೬೯

ಬಡನಾಗ ಚರರೈತಂದೀ ಸುದ್ದಿಯ
ಕಡುಗಲಿ ಕಂಠೀರವಗೆ ।
ಬಿಡದೆ ಬಿನ್ನೈಸಲು ಕೇಳಿ ಕೋಪಾಗ್ನಿಯ
ಕಿಡಿಯು ಸೂಸಿದ ಕಂಗಳೊಳಗೆ ॥ ೭೦

---

* ಗಾಳಿಯು. † ಲಾಲಿಸುತ.

ಮೊಗರಿದೊಡೆ ಜಾಂಗು ಬಲರೆಂಬ ಭಂಡ * ನೀ
ನಾಗದೆ ಮಧುರೆಯ ನೃಪನ ।
ಬೇಗದೆ ಮುತ್ತಿಗೆ ದೆಗಿಸೆಂದು ದಳವಾಯ
ಭೂಗಧೀಶ್ವರ ಬೀಳ್ಕೊಟ್ಟ ॥ ೨೧

† ಬಲು ಪಯಣದ ಮೇಲೆ ಮನ್ನೆಯರ್ ದಳ ಸಹ
ನಿಲುಗಡೆ ಯಿಲ್ಲದೆ ನಿಲದೆ ।
ತಳುವದ್ಯೆತರಲು ಸಾಂಬಳ್ಳಿಯ ರಾಷ್ಟ್ರಕ್ಕೆ
ದಳವಾಯಿ ಸಹ ನಡೆತಂದ ॥ ೨೨

ಪ್ರಳಯ ಕಾಲದ ಮಾರುತ ಮೇಘದೊಡ್ಡನು
ತುಳಿದು ತೂರುವ ತೆರದಂತೆ ।
ತಳತಂತ್ರ ಸಹ ದಳ ಪತಿ ಬಂದು ರಿಪು ಬಲ
ಜಳಧಿಯ ಮೊಗೆದನೇನೆಂಬೆ ॥ ೨೩

ಹುಲಿಯಬ್ಬರಕೆ ಪಶು ಸಂಕುಳ ದೆಸೆ ದೆಸೆ
ಗಳವಳಿದೋಡುವಂದದಲಿ ।
ದಳವಾಯಿ ನಂಜರಾಜೇಂದ್ರನ ಕಾಣುತ
ನಿಲಲಾರದರಿಗಳೋಡಿದರು ॥ ೨೪

ಶಿವ ಪಂಚಾಕ್ಷರಿ ಮಂತ್ರಕೆ ಜೀವರ
ಭವ ಬಂಧ ಪರಿದೋಡುವಂತೆ ।
ತವೆ ನರಸೇಂದ್ರನ ದಳವಾಯ ಘಾತಿಗೆ
ಸು ವಿಲಾಸವಳಿದರರಿಗಳು ॥ ೨೫

---

* ನಿರಾಗದಿ ಮಧುರೆಯನೃಪನು.

† ಪಯಣ ಪಯದ ಮೇಲೆ ಬಂದಾಗ ದಳ ಸಹ
ನಿಲುಕದೆ ನಿಲ್ಲದೆ ನಿಲದೆ ।
ತಳುವದ್ಯೆತಂದು ಸಾಂಬಳ್ಳಿಯ ರಾಷ್ಟ್ರಕ್ಕೆ
ಪರಿವಾರಸಹ ನಡೆತಂದ ॥

ಹರಿ ನಾಮ ಸ್ಮರಣೆಗೆ ಪಾಪದ ಪುಂಜವು
ಮುರಿದೋಡುವೆಂದದೊಳಾಗ ।
ದೊರೆ ರಾಯ ಕಂಠೀರವೆನ ಪ್ರತಾಪ
ಕ್ಕರಿಗಳೋಡಿದರ್ದೆಸೆ ದೆಸೆಗೆ ॥ ೨೬

ಮದ ಕರಿ ಕದಳಿಯ ವನವ ಹೊಕ್ಕೊಡನಾಗ
ಹೊದರ ಕಿತ್ತೀಡಾಡುವಂತೆ ।
ಮಧುರೆಯ ನೃಪನ ಮಾರ್ಬಲವ ತತ್ತರಿದರಿ
ದೆದೆಗೆಡಿಸಿದ ದಳವಾಯಿ ॥ ೨೭

ಆನೆಯ ಬಲವೊಂದೆಸೆ ಕುದುರೆಯ ಪೌಜೆ
ನಾನಿಕೆ ಯೊಂದೆಸೆಗಾಗೆ ।
ಏನೆಂಬೆ ಕಾಲಾಳು ದಿಕ್ಕು ದಿಕ್ಕಿಗೆ ದು
ಮ್ಮಾನದೆ ತೆಗೆದೋಡಿದುದು ॥ ೨೮

ತಿರುಮಲೇಶ್ವರನ ಬಿರುದಿನ ಡವೊಾಮಿಯ
ನೆರೆ ಡಾಳುಗಳ ಸೆಳೆದಾಗ ।
ದುರ ಗಲಿ ದಳವಾಯಿ ನಂಜರಾಜೇಂದ್ರ ಮೆ
ತ್ತುರುವೆಣಿಸಿದನೇ ವೇಳ್ವ ॥ ೨೯

ಊರೊಳಗಣ ಭಟರೈತಂದು ಮಧುರೆಯ
ಧಾರಿಷೀಶ್ವರನ ಪಾಳಯವೆ ।
ಸೂರೆಯನಾಡಿ ಗೂಡಾರಗಳನು ಕಿತ್ತು
ಜಾರಿಸಿದರು ದೆಸೆ ದೆಸೆಗೆ ॥ ೩೦

ಕಡಿದು ಮುತ್ತಿಗೆಯನೆಬ್ಬಿಸಿ ಯೆಂದೆಂದಿಗೀ
ಕಡೆಯುಲಿ ಸುಳಿಯದಂತಾಗ ।
ಕಡು ಭೀತಿಯ ಪುಟ್ಟಿಸಿ ದಳವಾಯಿ ಮು
ತ್ತೊಡನೆ ಮುಂದಕೆ ದಾಳಿ ಗೈದ ॥ ೩೧

ತಿರುಣಾಮೆಲೆ ತಿರುಚಂಗೂಡು ವೊದಲಾಗೆ
ತಿರುಚನಪುರಿ ಪರಿಯಂತ ।
ತಿರುಗಿ ದಾಳಿಯನಾಡಿ ದಳವಾಯಿ ನಂಜೇಂದ್ರ
ತಿರುಗಿದನೊಡೆಯನಿದ್ದೆಡೆಗೆ ॥ ೮೦

ಬಂದಾಗ ಕಂಠೀರವೆಂದ್ರನ ಪಾದಾರ
ವಿಂದಕ್ಕೆ ಮನ್ನೆಯಕರ್ಘಾಡಿ ।
ವೆಂದಿಸಿ ದಳವಾಯಿ ನಿಟ್ಟಿಸಿ ನಗುತಾ
ನಂದವೈದಿದ ಭೂ ಪಾಲ ॥ ೮೧

ದಳ ಪತಿ ಮನ್ನೆಯರಿಗೆ ಸಂತೋಷದೆ
ಸು ಲಲಿತ ಭೂಷಣಾಂಬರವ ।
ನಲಿದಿತ್ತು ಕಂಠೀರವ ರಾಜ ಮನ್ನಿಸಿ
ಕಳುಹಿದನೇನ ಬಣ್ಣಿಸುವೆ ॥ ೮೨

ಇಂತೊಪ್ಪುತಿಹ ಜಯ ಸಿರಿ ಭಾಗ್ಯ ಲಕ್ಷ್ಮಿಗೆ
ಸಂತತ ನಾಯಕನಾಗಿ ।
ಕಂತು ಸನ್ನಿಭ ನರಸೇಂದ್ರ ಚಂದ್ರಮನ
ತ್ಯಂತ ಸೌಖ್ಯದೊಳೊಪ್ಪುತಿರ್ದ ॥ ೮೩

ಚಂಡಿ ಚಾಮುಂಡಿಯ ಕರುಣದೆ ಭೂಮಿಮಾ
ಮಂಡಲಪ ಕಂಠೀರವನು ।
ಚಂಡ ಸಾಹಸಿ ಯೆನಿಸಿದ ಗರ ಪುರಿ ನಂ
ಜುಂಡನ [ಕಡು] ದಯದಿಂದ ॥ ೮೪

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸು ಧರ್ಮಾನು ಬಂಧಿ ॥ ೮೫

೧೭ನೆಯ ಸಂಧಿ ಸಮಾಪ್ತಂ.

ಹದಿನೆಂಟನೆಯ ಸಂಧಿ

ಏರಿಯ ಪಟ್ಟಣದ ಲಗ್ಗೆ

ಸೂಚನೆ॥ ಏರಿಯ ಪಟ್ಟಣ ಪಾಲುಪರೆಯ ಸೆಳೆದು ಜಯ
ಸಿರಿಯ ತಾಳಿದ ನರಸೇಂದ್ರ ॥

ಇಂತೊಪ್ಪುತಿಹ ರಿಪು ಭೂಮಿಪಾಲರ
ಪಂತ ಪಾಡುಗಳನು ಮುರಿದು ।
ಕಂತು ಸನ್ನಿಭ ಕಂಠೀರವ ಧರಣೀ
ಕಾಂತ ರಾಜ್ಯವನಾಳುತಿರ್ದ ॥ ೧

ಇತ್ತಲಾ ನರಸಿಂಹ ಪುರವನಾಳುವ ಭೂ
ಪೋತ್ತಮ ಕಪ್ಪವ ಕೊಡದೆ ।
ಮತ್ತಾಗ ತುರುಕರ ಬಲುವೆವಿಡಿದು ಚಲ
ವೆತ್ತಿರ್ದನೇನ ಬಣ್ಣಿಸುವೆ ॥ ೨

ಕಪ್ಪವ ಕೇಳ ಬಂದಿಹ ಕಂಠೀರವ
ನೊಪ್ಪದೋಲೆಯ ದೂತರನು ।
ತಪ್ಪ ನುಡಿದು ಕೋಪದೆ ಕಳುಹಿಸಿ ಮೇರೆ
ದಪ್ಪಿದನೇನೆಂಬೆನದನು ॥ ೩

ಚರರೈದಿ ನರಸರಾಜೇಂದ್ರ ಚಂದ್ರನ ಪಾದ
ಸರಸಿಜಗಳಿಗೆ ಕೈ ಮುಗಿದು ।
ನರಸಿಂಹ ಪುರದವ ಗರ್ವಿಸಿದಂದವ
ಪರಿದಾಗೆ ಬಿನ್ನೈಸಿದರು ॥ ೪

ಬಳಿಕದ ಕೇಳಿ ಕರಿಸಿ ಕಂಠೀರವ
ದಳವಾಯಿ ನಂಜ ಭೂ ವರನ ।
ಚಲವೆ ಬಲಿದು ನರ ಸಿಂಹ ಪುರದ ಭೂಪ
ಮೆಲೆತ ಬಗೆಯು ಪೇಳ್ದನಾಗ ॥ ೫

ಬಡವನ ಕೋಪವೌಡಿಗೆ ಮೂರಿಯಾದಂತೆ
ಕಡು ನೊಂದು ನರ ಸಿಂಹ ಪುರದ ।
ಪೊಡವಿಪ ಕಪ್ಪವ ಕೊಡನೆ ರಾಜ್ಯವ ಕೊಂಡು
ಕಡೆಗೆ ತೀಲಿಸು ನೀನೆಂದ ॥ ೬

ಆದಿ ಗಾಲವು ನಮ್ಮ ನಂಬಿದ ದೊರೆ ಯೆಂದು
ಕಾದು ಬಂದೊಡೆ ತನಗೀಗ ।
ವಾದವೆ ನವೆ್ಮಳು ನರಸಿಂಹ ಪುರವನು
ಸಾಧಿಸು ಹೋಗು ನೀನೆಂದ ॥ ೭

ಜೀಯ ಹಸಾದವೆನುತ ಬಲು ಮನ್ನೆಯ
ನಾಯಕ ತಳತಂತ್ರ ಸಹಿತ ।
ಆಯತದೊಳಗಾ ಪುರವ ಮುತ್ತಿದ ದಳ
ವಾಯಿ ನಂಜೇಂದ್ರನೇ ವೇಳ್ವ ॥ ೮

ಮುತ್ತಿಗೆ ಯಿಕ್ಕಿದ ಬಲಕೆ ಚಾ ದೆಸೆಯೊಳ
ಗಿತ್ತಾಗ ಬಲು ಜಗಳವನು ।
ಚಿತ್ತದೊಳಿಣಿಕೆಗೊಳ್ಳದೆ ಶೌರ್ಯ ಗವ್ರೋ
ನ್ಮತ್ತನಾಗಿರ್ದನೇ ವೇಳ್ವ ॥ ೯

ಬಳಿಕಾಗ ಪುರದ ಚಾ ದೆಸೆಯಲಿ ತಳಿಗಳ
ನಳವಡಿಸಿಯೆ ಮೆನ್ನೆಯರು ।
ದಳವಾಯು ನೇಮದೆ ನೆರೆದಾನಿಸಿದೊಂ
ದಳವ ನಾನೇನ ಬಣ್ಣಿಸುವೆ ॥ ೧೦

ಸೇರಿ ಯೂ ಪುರದ ಚೌದೆಸೆಯ ಸುರಂಗ
ದ್ವಾರಗಳನು ಮೊಡಿಯೂಗ ।
ಪೂರೈಸಿ ಪೆಟಲುಪ್ಪಿನಿಂದ ಕೊತ್ತಳಗಳ
ಹಾರಿಸಿದುದನೇನೆಂಬೆ ॥ ೧೧

ಒಂದು ದಿನದೆ ಯೂ ಪುರಕೆ ಸಂವರಣಿಯ
ತಂದಾಗ ತುರುಕ ಮನ್ನೆಯರು ।
ಮುಂದು ವರಿದು ವೊಳ ಹೊಗ ಬೇಕೆಂದೈ
ತಂದಬ್ಬರವನೇನೆಂಬೆ ॥ ೧೦

ಕುದುರೆ ನಾಲ್ಕೈಂಟು ಸಾವಿರ ಸಹ ಖಾನರು
ಮದ ಮುಖದೊಳಗೈತಂದು ।
ಕದನವ ಗಂಟಿಕ್ಕಿ ಮುತ್ತಿದ ಬಲದೊಳು
ಹದಗೆಟ್ಟರೇನ ಬಣ್ಣಿಸುವೆ ॥ ೧೩

ದುರವನೆಸಗುತಿಹ ಖಾನ ಖಾನರುಗಳ
ಮುರಿಯಲಿರಿದು ದೆಸೆಗೆಡಿಸಿ ।
ನರಸೇಂದ್ರನ ದಳ ಪತಿ ನಂಜರಾಜೇಂದ್ರ
ಬಿರುದ ಮೆರೆದನುಬ್ಬಿನಲಿ ॥ ೧೪

ಸಿಡಿಲಿನುರುಬೆಯ ತಾಳಲೆಯೊಳು ಮೊಡಿದ
ಕೊಡೆ ತಾಳಲಾಪ್ಪದೇನಾಗ ।
ಕಡುಗಲಿ ಕಂಠೀರವೇಂದ್ರನ ಶೌರ್ಯಕಾ
ಬಡ ಮನ್ನೆಯರಿದಿರಹರೆ ॥ ೧೫

ಪಿರಿದು ಮುತ್ತಿಗೆಯುರುಬೆಯ ತಾಳಲಾರದೆ
ನರಸಿಂಹ ಪುರದ ಭೂಪಾಲ ।
ಕರೆದು ಕಪ್ಪವ ಕೊಟ್ಟು ಕಂಠೀರವೇಂದ್ರಗೆ
ಶರಣಾಗತನಾದನಾಗ ॥ ೧೬

ತಳುವದೆ ನರಸಿಂಹ ಪುರದ ಭೂಪನ ಕೈಯ
ಸೆಳದು ಸೀವೆಗಳ ಕಪ್ಪವನು ।
ದಳಪತಿ ನರಸ ರಾಜೇಂದ್ರ ಚಂದ್ರನ ಪಾದ
ನಳಿನವ ಕಂಡನರ್ತಿಯಲಿ ॥ ೧೫

ಮೇರೆಯಿಲ್ಲದ ಸಂತೋಷಾಂಬುಧಿಯಲಿ
ಧಾರಿಣೀಶ್ವರನೋಲಾಡಿ ।
ಪಾರುಖಾಣೆಯವಿತ್ತು ದಳವಾಯಿ ಮನ್ನೆಯ
ವೀರರುಗಳ ಮನ್ನಿಸಿದ ॥ ೧೮

ಬಳಿಕವರನು ಬೀಳ್ಕೊಟ್ಟು ಸಂತೋಷವ
ತಳದು ಭೂವರ ನರಸೇಂದ್ರ ।
ಸುಲಲಿತ ಬಹು ಧರ್ಮ ಮಾರ್ಗದೊಳಂದಾಗ
ಳಿಳಯ ಪಾಲಿಸುತಿರ್ದನೊಲಿದು ॥ ೧೯

ಪಿರಿಯ ಪಟ್ಟಣದ ರಾಜ್ಯವನಾಳುವ ದುಷ್ಟ
ದುರುದುಂಬಿ ನಜುಂಡ ರಾಜ ।
ಹಿರಿದು ಗರ್ವಿಸಿ ಯಿಕ್ಕೇರಿಯವರ ನೇಹ
ದಿರವಲಿ ಮಲೆತಿರ್ದನಾಗ ॥ ೨೦

ಕಪ್ಪವ ಕೊಡದೆ ಕೂಟವ ಮಾಡದೆ ಮೇರೆ
ದಪ್ಪಿ ಚಂಡಿಸಿ ಚಲವಿಡಿದು ।
ಇಪ್ಪುದ ಕಂಡು ಕಂಠೀರವ ರಾಜ ಕಂ
ದಪ್ಪ ಸನ್ನಿಭ ಕೋಪಿಸಿದ ॥ ೨೧

ಒಡನೆ ತನ್ನಯ ದಳಪತಿ ನಂಜ ರಾಜನ
ಕಡು ಬೇಗ ಕರಿಸಿಕೊಂಡಾಗ ।
ನುಡಿದನಾತನ ಕೂಡೆ ಮೇಲೆಸಗುವ ಕಾರ್ಯ
ದಡವ ನಾನೇನ ಬಣ್ಣಿಸುವೆ ॥ ೨೨

ದೆಸೆ ದೆಸೆಗಳ ದೊರೆಗಳು ಮನ್ನೆಯರೆಮ್ಮ
ವಶವರ್ತಿಗಳಾಗಿ ಬಂದು ।
ಮುಸುಕಿಕೊಂಡೋಲೈಸುತಿಹರೀಗಳವನಾಟ
ಹಸನಲ್ಲವೆಂದು ಕೊೀಪಿಸಿದ ॥ ೨೩

ತುರುಕರು ತಿರುಕರಾದರು ಕೊಂಗರ ಬಲ
ಸುರ ಚಾಪದ ಸಿರಿ ಯಾಯ್ತು ।
ನೆರೆ ನಮ್ಮ ಪೌರುಷಕಾಂಧ್ರರು ಜಗುಳಿದ
ರಿರದಿವನುಗ್ರವಿನ್ನೆಂತೊ ॥ ೨೪

ಬೇಡರ ರೂಢಿ ತಗ್ಗಿತು ಮೊಳಯಾಳರು
ಪಾಡಳಿದಿರದೋಡಿದರು ।
ಆಡುವುದೇನಾ ಕೊಡಗರು ನಮಗಳ್ಕಿ
ಜೋಡಿಯ ತೆರುತಿಹರೀಗ ॥ ೨೫

ಮೂರು ಮನೆಯ ಮನ್ನೆಯರಳ್ಕಿ ಗಜ ಹಯ
ಚಾರುತರದ ವಸ್ತುಗಳ ।
ಮೀರೆಯಿಲ್ಲದೆ ಕಾಣಿಕೆಯ ತಂದೀವರು
ಧೀರತ್ವವೇನೀ ನೃಪನ ॥ ೨೬

ಮೀಲನರಿಯದ ಮನ್ನೆಯನ ಬಾಳಿಕೆ ಬೀದಿ
ಗಾಳಿಗೆತ್ತಿದ ಸೊಡರೆಂದು ।
ಹೇಳಲಿಲ್ಲವೆ ಭಾರತದಲ್ಲಿ ಯಿವಗಿಷ್ಟು
ಖೂಳತನವೆ ನಮ್ಮೊಡನೆ ॥ ೨೭

ಪಿರಿದು ಬಲವೆ ಮನ್ನೆಯರ ಮಂಡಲಿಕರ
ಕರಿಸಿಕೊಂಡೆಲೆ ನಂಜೇಂದ್ರ ।
ಪಿರಿಯಪಟ್ಟಣ ಪಾಲುಪರೆಯ ಕೊಂಡಾ ಕ್ಷಣ
ಹೊರಡಿಸು ಮೆಲೆಯಾಳಕವನ ॥ ೨೮

ಇಕ್ಕೇರಿಯ ತುರುಕರ ಸ್ನೇಹದೊಳಗತಿ
ಸೊಕ್ಕಿ ಗರ್ವದೊಳಿರುವವನ ।
ಉಕ್ಕಂದವ ನೆರೆ ಮುರಿದು ರಾಜ್ಯವ ಸೆಳ
ದಿಕ್ಕು ಠಾಣೆಯವ ಹೋಗೆಂದ ॥ ೮೯

ಎನಲು ಹಸಾದವೆನ್ನುತ್ತಾಗ ದಳ ಪತಿ
ಜನ ನಾಥನಂಘ್ರಿಗೆ ನಮಿಸಿ ।
ಘನವಾದ ತಳತಂತ್ರ ಸಹ ಶುಭ ದಿನದೊಳು
ಮನ ಹರುಷದೆ ತೆರಳಿದನು ॥ ೯೦

ಹರಿ ಕೃಪೆವಡೆದ ಧರ್ಮಾತ್ಮ ನೆನೆದ ಕಾರ್ಯ
ಭರದೆ ಕೈಸಾರುವುದದಕೆ ।
ದೊರೆ ರಾಯ ನರಸ ರಾಜೇಂದ್ರನಲ್ಲದೆ ಪುಣ್ಯ
ಪುರುಷರುಂಟೇ ಲೋಕದೊಳಗೆ ॥ ೯೧

ಚಂಡಿಕಾ ದೇವಿಯಾ ಕಂಠೀರವೇಂದ್ರನ
ಖಂಡೆಯದಲಗಿನೊಳಾಗ ।
ಮಂಡಿಸಿ ಮೆರೆವಳಾತನ ಪ್ರತಾಪಕೆ ಮಿಕ್ಕ
ಮಂಡಲೇಶ್ವರರೆಣೆ ಬಹರೆ ॥ ೯೨

ಬೆಟ್ಟದ ಚಾಮುಂಡಿ ಯಾ ನೃಪಾಲಕ ಬೇಡಿ
ದಿಷ್ಟಾರ್ಥವನಿತ್ತಾಗ ।
ಕಟ್ಟಿರಕದೆ ಕಾದಿಹಳಾ ಭೂಪನ
ದಿಟ್ಟತನಕೆ ಸರಿಯುಂಟೆ ॥ ೯೩

ಒಡನೆ ನಿಟ್ಟಿಸಿ ನೋಡುವರಿಗಗೋಚರ
ವಿಡಿದಾಗ ಬಲು ಮಲೆಯೊಳಗೆ ।
ಅಡಗಿಕೊಂಡಿಹ ಪಾಲುಪರೆಯ ಸಾಧಿಸುವೊಡೆ
ಮೃಡನಿಗಸಾಧ್ಯವೇ ವೇಳ್ವ ॥ ೯೪

ಕಾರೆ ಮಗ್ಗಾರೆ ಗೂಳವು ಮುಳ್ಳು ಬೊಬ್ಬುಲಿ
ಕೂರುಗೆಂಜಿಗ ಮಂಡೆಸೀಗೆ ।
ಹೇರಿಜೆ ಯೆಲಚಿ ತಂಡಸಿ ಮುಳ್ಳು ಬೇಲಿಗಳ್
ಸೇರಿ ಮುಟ್ಟಿಹುವಾಗಸವನು ॥ ೫೫

ಹಾಲೆ ಹೊಂಗೇತಕಿ ವನ ಸಂಪಿಗೆ ಹಿಂ
ತಾಲ ಹೆಮ್ಮರ ಕಮ್ಮಾರಗಳು ।
ಆಲ ಮುಳ್ಳುತ್ತುಗ ಕೊಡಸಿಗೆ ಬನ್ನಿಗ
ಳ್ಕೀಲಕಡರಿ ಮುಸುಕಿಹುವು ॥ ೫೬

ತಾರೆ ತೇಗರುಟಾಳ ಚಿಲ್ಲ ನೆಲ್ಲಿಯು ಹೊಂಗೆ
ನೇರಿಲು ಹೆಬ್ಬಿದಿರುಗಳು ।
ಕಾರಾಚ ಕಗ್ಗಲಿ ಕಂಚಿವಾಳದ ಮರ
ಸೂರ ಮಾರ್ಗವ ತಡೆದಿಹುವು ॥ ೫೭

ಆವ ದಿಕ್ಕಿನಲಿ ದಿಟ್ಟಿಸಿ ನೋಡಲು ಕ
ಗ್ಗಾವಳ ಮುಸುಕಿಕೊಂಡಾಗ ।
ಭಾವಿಸೆ ದೆಸೆಗಳರಿಯ ಬಾರದೆ ಭಯ
ತೀವಿಕೊಂಡಿಹುದು ಕಣ್ಗಳಿಗೆ ॥ ೫೮

ಬಳ್ಳಿ ದುರುಚೆ ನೆರೆ ಮುಳ್ಳು ನೆಗ್ಗಿಲು ಕಾಡ
ಕಳ್ಳಿ ಕಬ್ಬಳಿ ನೊಸೆದಬ್ಬೆ ।
ಹುಲ್ಲುಗಳ್ ಬೆಳೆದಾಗ ದಾರಿ ಬಿಡದೆ ಜಾರು
ಗಲ್ಲ ಮೆರಿಸಿಕೊಂಡಿಹುವು ॥ ೫೯

ಜಿಗುಳೆ ಕೆಂಜಿಗ ಕಟ್ಟರುಹೆ ಯೋತಿಯು ಗೊದ್ದ
ನೆಗೆವ ಹಾವರಣೆ ಕೆಂಜೇಳು ।
ಮಿಗೆ ಭೋರ್ಗರೆದು ಬುಸ್ಸೆಂಬ ಪಾವ್ಗಳಾಗ
ವಿಗಡದೆ ಪರಿದಾಡುತಿಹುವು ॥ ೬೦

ಶರಭ ಶಾರ್ದೂಲ ಕಾಸರ ವ್ಯೆಕ ಸಂಘವು
ಮೆರಿ ಸಾರಗ ವೊಲ ಹುಲ್ಲೆ ।
ನರಿ ಕಾಡ ಬೆಕ್ಕು ಮುಂಗಿಲಿಗಳ ವೊತ್ತವಾ
ವರಿಸಿಕೊಂಡಿಹುವು ಹೆಮ್ಮಲೆಯ ॥ ೪೧

ಕಾಡಾನೆಗಳ ಮಾರ್ಗದಿನೊಂದಿ ಕೊಂಬಿನಿಂ
ದೀಡಿರಿದೆಡೆಯಾಡುತಿರ್ಪ ।
ಕ್ರೌಡನಬ್ಬರ ಘೂಕಭೀಕೃತಿಯಿರಿಕಿಪ
ಯೇಡಿಗಳಸೆದುವೇವೇಳ್ವ ॥ ೪೦

ಎಲ್ಲಿ ನೋಡಲು ಸರಿ ಜರಿ ಹಳ್ಳ ಬರೆಗಳು
ಕಲ್ಲ ಪಡೆಗಳು ಗುಹೆಗಳು ।
ಮುಳ್ಳು ಮರದ ಬೇರೆಡಹುಗಲ್ಲುಗಳಿಂದ
ನಿಲ್ಲದೊಪ್ಪಿದುದು ಕಾನ್ತಾರ ॥ ೪೩

ವೊನೆಗಲ್ಲು ಗುಂಡುಗಲ್ಲುಗಳರೆಗಲ್ಲುಗಳ್
ಘನವಾದ ಪರಳುಗಲ್ಲುಗಳು ।
ಇನ ಕಿರಣಕೆ ತಳತಳಿಪ ಭೃಂಗದ ಕಲ್ಲು
ವನ ಮಾರ್ಗವ ತುಂಬಿಹುವು ॥ ೪೪

ಕಿರು ಬಿದಿರುಗಳ ಕಂಟಕಿಗಳು ನೆಯ್ದುಕೊಂ
ಡಿರುಹೆಗೆ ದಾರಿಯ ಕೊಡದೆ ।
ಧರಣಿಯೊಳ್ಪಸರಿಸಿಕೊಂಡು ಪಚ್ಚೆ ಗಳಿಗೆ
ತೆರಹುಗೊಡದೆ ಮುಸುಕಿಪುವು ॥ ೪೫

ಕಾಡುಗಿಚ್ಚೆದ್ದು ಕಾದಿಹ ಬೂದಿ ತನಿಗೆಂಡ
ಜಾಡಿಪ ಕಿಡಿ ಹೊಗೆ ಮಸಗಿ ।
ನೀಡುವ ದಳ್ಳುರಿಗಳ ದಾವದಿಂ ವನ
ಕೂಡೆ * ಭೀ ಭರವೆ ಪುಟ್ಟಿಸಿತು ॥ ೪೬

---

* ಭೀಕರವ.

ತಲೆಯೆತ್ತೆ ಕೂದಲ ಸೆಳಕೊಳ್ವ ಮುಳ್ಳು ವೈ
ಯಲುಗೆ ಸೀಳುವ ಬಲು ಮುಳ್ಳು ।
ಸಲೆ ಪಜ್ಜೆ ಯನಿಡೆ ನಾಂಟುವ ಮೊನೆ ಮುಳ್ಳಿನಿಂ
ದೊಳುಗಾಡೆಸೆದುದೇನೆಂಬೆ ॥ ೪೬

ಇಂತಪ್ಪ ಕಾನನದುಡುವೆಯೊಳಡಗಿ ಯೋ
ರಂತಿಹ ಪಾಲುಪರೆಯನು ।
ಕಂತು ಸನ್ನಿಭ ನರಸೇಂದ್ರ ಸೆಳದ ಬಲು
ಪಂಥವನೇನ ಬಣ್ಣಿಪೆನು ॥ ೪೪

ಪಾತಾಳದ ಬರೆಗಳ ದಾಟಿ ಮಾರ್ಗದ
ರೀತಿಯನರಿದೊಳ ಹೊಕ್ಕು ।
ಚಾತುರ್ಬಲಗೂಡಿ ದಳ ಪತಿ ಯದ ಮುತ್ತಿ
ಭೀತಿಗೊಳಿಸಿದನೇ ವೇಳ್ವ ॥ ೪೯

ಬೊಬ್ಬೆಯಬ್ಬರದುಬ್ಬಿಗೆ ಭೀತಿಗೊಂಡಾಗ
ತಬ್ಬಿಬ್ಬಿಗೊಂಡುರೆ ಭಟರು ।
ಮಬ್ಬು ಕವಿದು ಕಂಗೆಟ್ಟೋಡೆ ದುರ್ಗವ
ನಬ್ಬರಿಸುತ ಕೊಂಡನಾಗ ॥ ೫೦

ಇದಿರಾದವರ ಕಡಿ ಖಂಡಗಳನು ಮಾಡು
ತೆದೆಗೆಟ್ಟು ಮರೆ ಹೊಕ್ಕರಿಗೆ ।
ಮುದದೊಳಭಯ ದಾನವನಿತ್ತು ನಂಜೇಂದ್ರ
ಪದುಳದೆ ಕೊಂಡನಾ ಪುರವ ॥ ೫೧

ಬಳಿಕಾಗ ಪಾಲುಪರೆಗೆ ಠಾಣೆಯವಿಕ್ಕಿ
ತಳತಂತ್ರವೆ ಕೂಡಿಕೊಂಡು ।
ಗಳಿಲನೆ ಪಿರಿಯಪಟ್ಟಣಕೆ ಮುತ್ತಿಗೆಯಿಡು
ವೊಲವಿಂದ ದಳ ಪತಿ ನಡೆದ ॥ ೫೨

ಊರೊಳು ಚಲವಿಡಿದೊಪ್ಪುವ ದೊರೆಯ ಕು
ಮಾರರ ಸುಭಟ ಮನ್ನೆಯರ ।
ಧೀರತ್ವವೆ ನೆರೆ ತೃಣಕೆ ಲೆಕ್ಕಿಸದಾಗ
ಸೇರಿ ಮುತ್ತಿಗೆಯನಿಕ್ಕಿದನು ॥ ೫೩

ಗಗನ ಮಾರ್ಗವ ತುಡುಕುವ ಮುಗಿಲಟ್ಟಣೆ
ಖಗ ಮಂಡಲವೆ ಸೋಕಿ ಪೆರೆಸೆ ।
ಜಗಜಗಿಸುವ ಕೋಟೆ ನೋಡುವರಕ್ಷಿಗೆ
ಮಿಗೆ ಭಯಾಂಕುರವೆ ಪುಟ್ಟಿಸಿತು ॥ ೫೪

ಪಾತಾಳ ಗಡಿಯಾದಗಳು ದಿಟ್ಟಿಗೆ ನೆರೆ
ಭೀತಿಗೊಳಿಸುವ ಕೊತ್ತಳವು ।
ನೂತನದಾಳ್ವೀರಿಯಿಂದಲಾ ಪಟ್ಟಣ
ಖ್ಯಾತಿವಡೆಯುದಿಳಯೊಳಗೆ ॥ ೫೫

ಬಿರುದಿನ ಸುಭಟ ಸಂದೋಹದೆ ಜೋಡಿಸಿ
ದುರು ದುರ್ಗ ಸಂವರಣೆಯಲಿ ।
ಆರಸು ಮಕ್ಕಳ ಕಾಹಿನ ಕಟ್ಟಳೆಯಿಂದ
ಪಿರಿಯ ಪಟ್ಟಣವೆನಿಸಿದುದು ॥ ೫೬

ದ್ವಾರಾವತಿ ನೀರೊಳಗದ್ದುದು ಸುರ ಪುರ
ಸೇರಿತು ಖಳರುಘಟಳಕೆ ।
ಧಾರಿಣಿಯೊಳು ದುರ್ಗ ತನಗೆಣೆ ಯಿಲ್ಲೆಂದು
ಚಾರುತರದೆ ಮೆರೆದಿಹುದು ॥ ೫೭

ಹಿಂದಣ ರಾಯರೊಳಾವನಾಗಲಿಯದ
ಬಂಧಿಸಿ ಮುತ್ತಿಗೆಯಿಕ್ಕ ।
ಮುಂದುವರಿದು ಕೊಂಡರ ಕಾಣೆಯಾದುರ್ಗ
ದಂದವನೇನ ಬಣ್ಣಿಸುವೆ ॥ ೫೮

ದೇವತ್ವವುಂಟಾದ ಪುರುಷಗಲ್ಲದೆ ಮತ್ತೆ
ಭೂ ವಳಯದಲಿ ರಾಜಿಸುವ ।
ದೈವ ವಿಹೀನರಿಗಳವಡದಾ ದುರ್ಗ
ದಾವಿವರವನೇನನೆಂಬೆ ॥ ೫೯

ಕದನದೆ ಕಾಲಾಳ ಮೇಲೆ ಕೈಯಿಕ್ಕದೆ
ಮದ ಕರಿಗಳನೊಡೆ ತಿವಿದು ।
ಹೆದರಿಪ ಕಡುಗಲಿ ನೇಜೆಯದಧಟರು
ಮುದದೊಳು ಪುರವ ಕಾದಿಹರು ॥ ೬೦

ಗಿರಿಗಳು ಮೇಲೆ ಕವಿಯೆ ಲೆಕ್ಕಿಸದಿಹ
ನೆರೆದೆಂಟು ದೆಸೆಗೆಬ್ಬಿಸುವ ।
ಹರಿಗೆಯ ಸುಭಟಸಮೂಹ ಸಂತಸದೊಳು
ಮೆರೆವುದೇನೆಂಬಿನದ್ಭುತವ ॥ ೬೧

ಕೋವಿಯನೆದೆಗೆತ್ತಿದ ಮೇಲೆ ರಿಪುಗಳ
ಜೀವಕೆ ಸಂಚಕಾರವನು ।
ಭಾವಿಸಿ ಕೊಡುತಿಹ ದುರಗಲಿ ಪೆಟಲ ಭ
ಟಾವಳಿ ಯೆಸೆವುದಾ ಪುರದೆ ॥ ೬೨

ಕಾಲ ಪೆಂಡೆಯ ತೋಳ ಭೂಪುರಿ ಕಟಿಯೊಳು
ಜೋಲುವ ಪೀತಾಂಬರದ ।
ಮೇಲು ದಟ್ಟಿಯೊಳೂಪ್ಪುವ ಸುರಗಿಯ ಬಿಲ್ಲ
ಕಾಲ ಪಾಯಕರೊಪ್ಪುತಿಹರು ॥ ೬೩

ಮಿಕ್ಕ ನಾನಾ ಬಗೆಯಾಯುಧಗಳ ಪಿಡಿ
ದುಕ್ಕಂದದ ಕಲಿತನದೆ ।
ಸೊಕ್ಕಿ ರಾಜಿಸುತಿಹ ಸುಭಟ ಸಮೂಹದ
ಲೆಕ್ಕವನಾರು ಬಣ್ಣಿಪರು ॥ ೬೪

ನೃಪ ಸೇನನ ಪೌರುಷವಭಿಮನ್ಯುವಿ
ನೆಸಕದ ಬಹುಳ ಧೀರತ್ವ ।
ಅಸಮ ಬಲಾನ್ವಿತ ಶಕ್ರಾರಿಯಧಟಾ
ವಸುಮತೀಶ್ವರನೊಳಗಿಹುದು ॥ ೬೫

ಇಂತಪ್ಪ ಸಕಲ ಸಾಮಗ್ರ ಸಂವರಣೆಯ
ನಾಂತಿಪ ಪಿರಿಯ ಪಟ್ಟಣವ ।
ಕಂತು ಸನ್ನಿಭ ಕಂಠೀರವ ನರಸ ಭೂ
ಕಾಂತ ಹೊಕ್ಕುದನೇ ವೇಳ್ವ ॥ ೬೬

ಅರಿ ನೃಪ ವಿಪಿನ ಕುಠಾರ ಸಂಗರ ಧೀರ
ಬಿರುದೆಂತೆಂಬರ ಗಂಡ ।
ದೊರೆ ರಾಯ ಮೈಸೂರ ನರಸ ರಾಜೇಂದ್ರನಾ
ಪಿರಿಯ ಪಟ್ಟಣವ ಮುತ್ತಿದನು ॥ ೬೭

ಇರುಹೆ ನುಸುಳಲಳವಲ್ಲದ ಮುಳು ವೇಲಿ
* ಗರುಡನಮೊಗ್ಗವನಡರ್ವ ।
ಪಿರಿದಪ್ಪ ಮೇರುವೆಗಳು ಲೆಕ್ಕವಿಲ್ಲದೆ
ಪುರವ ಬಂಧಿಸಿದುವೇ ವೇಳ್ವ ॥ ೬೮

† ಒಡನೀಶಾನ್ಯಭಾಗದೊಳಂಬರವನು
ತುಡುಕುತ ಸರ್ವ ಸನ್ನಹದೆ ।
ಕಡುಗಲಿ ದಳವಾಯ ಮೇರುವೆಯೊಪ್ಪಿತು
ಪಡಿಯಾಗಿ ಕೈಲಾಸಗಿರಿಗೆ ॥ ೬೯

ಬಳಿಕದುತ್ತರ ದೆಸೆಯಲಿ ಲಿಂಗ ರಾಜೇಂದ್ರ
ತಳುವದಂದೊಲಿದೆತ್ತಿಸಿದ ।
ಬಲವಾಂತ ಮೇರುವೆ ಗೋವರ್ಧನಾದ್ರಿಯೊಲ್
ಸಲೆ ರಂಜಿಸಿತುನ್ನತದೆ ॥ ೭೦

---

* ಕುರುಡನ. † ವದಗೀಶಾನ್ಯ.

ವರ ಚನ್ನರಾಯ ಪಟ್ಟಣದ ದೊಡ್ಡೀಂದ್ರನು
ತುರುಗೆರೆಯಾಳ್ವ ಹಂಬೇಂದ್ರ ।
ಪಿರಿದೆತ್ತಿಸಿದ ಬಲು ಮೇರುವೆ ಮೆರೆದುದು
ಸುರುಚಿರ ನೀಲಾದ್ರಿಯಂತೆ ॥ ೭೧

ಕೆರೆ ಮೂಡಲು ವಿಡಿವಾಗ್ನೆಯ ಪರಿಯಂತ
ಹರದ ಪ್ರದ ದೊಡ್ಡೀಂದ್ರ ।
ಗರುವ ಲಿಂಗೇಗೌಡ ತಿಮ್ಮ ರಾಜೇಂದ್ರರ
ಪಿರಿದು ಮೇರುವೆಗಳೊಪ್ಪಿಹುವು ॥ ೭೦

ಈ ಪರಿಯೊಳಗಾ ಪುರದ ಒಳ್ ದೆಸೆಯೊಳು
ಗೋಪ ಮಂಡಲವೆನಲೆಯುತ ।
ತಾ ಪಿರಿದಾಗಿ ಮೇರುವೆಗಳು ಗಗನವ
ವ್ಯಾಪಿಸಿ ಮೆರೆದುವದ್ಭುತದೆ ॥ ೬೯

ಬಿಡದೆ ಬಳಸಿದ ಕಾವಲ ಹೂಡೆಯು ಮೇ
ಲಿಡುವ ಪಿರಂಗಿಯು ತವಗ ।
ಒಡನೆ ಒಳ್ ದೆಸೆಯೊಳೊಪ್ಪುವ ಸುರಂಗ ದ್ವಾರ
ಕಡು ಭಯಾಂಕುರವ ಬೀರಿದುವು ॥ ೬೪

ಮೇರುವೆಗಳ ಮೇಲೊಡನೆ ತುಪಾಕಿಯ
ಸೇರಿಸುತೆದೆಯೊಳಗಾಗ ।
ಊರೊಳು ಸಂಚರಿಪರನಿಟ್ಟು ಕೆಡಹಲು
ಬೀರದಿಂ ಕಾಪಿನ ಭಟರು ॥ ೬೫

ಕೋಟೆಯ * ತೆನೆಯೆಡೆಗಂಡಿಯೊಳ್ ತಲೆಯಿಟ್ಟು
ನೀಟಲಿ ನೋಡುವರುಗಳ ।
ಸೂಟಿಯ ಬಾಣಗಳಿಂದಿಟ್ಟು ಜೀವವ
ದಾಟಿಸಿದರು ಯಮಪುರಿಗೆ ॥ ೬೬

* ತೆನೆಯೆಡೆಯೊಳಗಿರ್ದ ಕಂಡಿಯೊಳ್ ತಲೆಯಿಟ್ಟು.

ತಳಿಯು ಮೆರೆಯೊಳಿರ್ದು ನುಸುಳುಗಂಡಿಯೊಳಾಗ
ಮುಳಿದು ಕಗ್ಗೊಲೆಗೈದುವರ ।
ತಲೆಯನರಿದುಪುರಕಿಟ್ಟು ಬಲ್ಫೀತಿಯು
ಬಲಿದರೇ ನೇಳ್ವನದ್ಭುತವ ॥ ೨೫

ಹೊರ ಪಾಳಯದವರುಪಟಳಕಂಜದೆ
ಬಿರುದಿನ ಹೊಂತಕಾರಿಗಳು ।
ಸರಿ ಮಿಗಿಲಾಗಿ ಸಂಗರವನೆಸಗಿ ತಮ್ಮ
ದೊರೆಯ ಮೆಚ್ಚಿಸಿದರಾ ಕ್ಷಣದೆ ॥ ೨೮

ಉಕ್ಕಂದದ ಮುತ್ತಿಗೆದೆಗಿಸುವೆವೆಂ
ದಿಕ್ಕೇರಿಯ ಬಲಗೂಡಿ ।
ಗಕ್ಕನೆ ತುರುಕರ ಧೀರರಾ ಸ್ಥಳಕಾಗ
ಸೊಕ್ಕುತೈತಂದರುಬ್ಬಿನಲಿ ॥ ೨೯

ಭೂದಿವಿಗಳ ಕೆಚ್ಚಿಪಂದದ ಕೆಂದೂಳ
ಹಾದಿಯ ತೆರಪುಗಾಣಿಸದೆ ।
ವೇದೋಜಿಯು ಬಲುಗುದುರೆ ಸಹಿತ ನೆರೆ
ಕಾದುವೊಡೈತಂದನಾಗ ॥ ೪೦

ಕುಂಬಿನಿಯನು ಖುರ ಪ್ರುಟದೆ ಹೊಯ್ದಡಗಿಸಿ
ಮುಂಬರಿದಭ್ರಕಡರುವೆ ।
ಅಂಬರಖಾನನ ಕುದುರೆ ಸಾವಿರ ಬೇಗ
ಬೆಂಬಿಡದಿರದೈದಿದುವು ॥ ೪೧

* ಕಾಳೆ ಡವೊಮಿ ಟೆಕ್ಕೆಯ ಸಾಲ ಸತ್ತಿಗೆ
ಚೂಳಿ ಸೂರೇಪಾನ್ಗಳಿಂದ ।
ವೇಲಾದ ಸಾವಿರ ಕುದುರೆಯು ಸಹ ಬಂದ
ಗಾಲಿಯನೇನ ಬಣ್ಣಿಪೆನು ॥ ೪೨

* ಕಹಳೆ ಡವೂಮಿಟೆಕ್ಕೆಯ ಸಾಲಸತ್ತಿಗೆ । ಚೌರಿ ಸೂರಿಪಾನ್ಗಳಿಂದ ॥
ವೇಲಾದಸಾವಿರಕುದುರೆಯುಬಲಸಹ । ಬಂದಾಹಾಜಿಯನೇನಬಣ್ಣಿಪೆನು ॥

ತಲೆ ತವುಳಿ ಜೋಡು ದಗಲೆ ಬೆನ್ನೊಳಳವಟ್ಟ
ಬಿಲು ಬಾಣಗಳ ಬತ್ತಳಿಕೆಯ ।
ಸಿಲೆಯ ಸಂಜೋಗದ ಕುದುರೆಯ್ಯೆ ತಂದುವು
ಮುಲುಕರಹಿಮೆನೆಂಬವನ ॥ ೪೩

ಅಂಕೆಯಿಲ್ಲದ ನಾನಾ ಬಗೆ ಚಿತ್ರಗ
ಳಂಕಿತವಹ ಡಾಳುಗಳ ।
ಅಂಕುಶ ಖಾನನ ತೇಜಿ ಸಾವಿರವಾಗ
ಮುಂಕೊಂಡು ಬಂದುವೇ ವೇಳ್ವ ॥ ೪೪

ಪಿಡಿದ ಗುರಾಣಿ ಚಿಮ್ಮುವ ಖಂಡೆಯ ಮೇಲ
ಕೊಡನಿಟ್ಟುಂಪ ನೇಜೆಯದ ।
ಬಿಡದಾ ಕರ್ಣಾವಾಂತೆಸೆವ ಸಿಂಗಾಡಿಯ
ದಡಿಗ ರಾವುತರ್ಕೈದಿದರು ॥ ೪೫

ಆಗಸ ಬಿತ್ತಿಯ ಖುದೆ ಚಿತ್ರಿಪವೋಲು
ಬೇಗ ಮೊರ್ತಂಡ ಮಂಡಲವ ।
ರಾಗದೆ ನುಂಗುವೊಲ್ಕೊಗವೆತ್ತಿ ಕುದುರೆಯ
ಸಾಗರ ವೊರೆಯುತ್ಕೈದಿದುದು ॥ ೪೬

ಕರಿಗಳೂ ಕಲ್ಪಾಂತ ಮೇಘದೊಬ್ಬುಳಿಗಳ
ಸರಿಗಳೂ ಕಾಲಾಳ ಪವುಜೊ ।
ಪಿರಿದು ದಾವಾಗ್ನಿಯುಬ್ಬರದ ಕೆಂಗಿಡಿಯೆನೆ
ತುರುಕರ ಬಲವ್ಕೈದಿದುದು ॥ ೪೭

ಗಜಗಳ ಘಂಟಾ ರವ ಬಲ ವಾಜಿ
ವ್ರಜಗಳ ಹೇಷಿತ ರವವು ।
ನಿಜವಾದ ಕಾಲಾಳ ಬೊಬ್ಬೆ ತ್ರಿಜಗಕಾಗ
ಸೃಜಿಸಿತಂಜಿಕೆಯನೇ ವೇಳ್ವ ॥ ೪೮

ಕೊಂಬಿನ ಕಹಳೆ ಡಮಾಮಿ ಮೊರೆವ ಮುವ್ವುರಿ
ಚಂಬಲಕ ಹರೆ ಬುರುಸುಗಳ ।
ಮುಂಬರಿದೆಸೆವಬ್ಬರ ಚೌದೆಸೆಯೊಳು
ತುಂಬಿತೇನೆಂಬೆನದ್ಭುತವ ॥ ೮೯

ಒಡನೆಂಟು ಸಾವಿರ ಸಿಲೆಯ ಸಂಜೋಗದ
ಕಡು ಮನಸಿನ ತೇಜಿಗಳ ।
ಗಡಣದೆ ಹದಿನೈದು ಸಾವಿರ ಕಾಲಾಳ
ಪಡೆ ಸಹ ತುರುಕರೈದಿದರು ॥ ೯೦

ಬಂದು ಬೆಟ್ಟದ ಪುರದೆಲಿ ಬೀಡ ಬಿಟ್ಟಾಗ
ಳೊಂದು ದಿವಸ ಪಾಳಯಕೆ ।
ಮುಂದನರಿಯದ್ಯೆತಂದು ಕಾಳಗಗೊಟ್ಟು
ನೊಂದುದನೇನ ಬಣ್ಣಿಸುವೆ ॥ ೯೧

ಬಳಿಕ ಚೌದೆಸೆಯೊಳಗೈದಾರು ಮೋಹರ
ದಳದುಗ್ರ ಕೋಪವ ತಳೆದು ।
ಖಳ ಸೈನ್ಯ ಪುರವ ಮುತ್ತಿದ ಸೇನೆಯೊಳಗಾಗ
ಬಲಿದರು ಬಹುಳ ಸಂಗರವ ॥ ೯೨

ತುರದೊಳಗರೆಯುತ ಧರಣಿಯ ಹರಿ ಬಲ
ಕರಧಿಯ ತೆರೆ ಮಾಲೆಯಂತೆ ।
ಮುರಿಯುತ ಹರಿಯುತ ಬೆರೆಯುತ ಮುಂಗಡೆ
ಗುರುವೆಣಿಸಿದರೇ ವೇಳ್ವ ॥ ೯೩

ಅರೆ ಭಾಂಚೋದು ಗಂಡಿಯಳು ಕುಚ್ ನಹಿ ದೇವು
ಸಿರ ಮೂರು ಮೂರು ಮೂರೆನುತ ।
ತುರುಕ ಮಾತಿನಲಬ್ಬರಿಸಿ ಬೊಬ್ಬಿಡುತಾಗ
ಸರಿಗ ರಾವುತರೇರಿದರು ॥ ೯೪

ದಿಲ್ಕರನ ಸಾಹೇಬು ಅಬ್ ತುಮೆ ಜಾನಪರ್
[ಖಿಲ್ಕೀ]ಆಸಬಿ ಚೋಡ್ಕೆ ।
ಡಲ್ಕ ತಲವಾರಿವೇ ಮರಗಯೇತೋ ಹವೇ
ಹಲ್ಕ ಹೋಯೇಂಗೆ ರಾಜಾಕು ॥ ೯೫

ಕರಿಗಳ ಕುಂಭ ಸ್ಥಳ ಮೆಧ್ಯದಂಕುಶ
ವಿರದೊತ್ತಿ ಬಿರಿ ಬಿರಿ ಯೆನುತ ।
ದುರಗಲಿ ಜೋದರು ಬೀದಿ ವರಿಸುತಾಗ
ಳುರವಣಿಸಿದರಾ ಹ್ಷಣದೆ ॥ ೯೬

ಪಿಡಿದ ಬತ್ತೀಸಾಯುಧಗಳ ಸು ಭಟರು
ವೆಡ ಬಲದೊಳು ಮುಂದು ವರಿದು ।
ಬಿಡದೆ ಪುರವ ಮುತ್ತಿದರಿ ವಾಹಿನಿಯೊಳು
ತೊಡಗಿದರತುಳ ವಿಗ್ರಹವೆ ॥ ೯೭

ಕಂಡನು ರಿಪು ರಾಯ ನಿಕರ ಶರಭ ಭೇ
ರುಂಡ ಕಂಠೀರವೇಶ್ವರನ ।
ಚಂಡ ವಿಕ್ರಮ ದಳ ಪತಿ ಖಳ ಬಲವ ಮುಂ
ಕೊಂಡು ಮುತ್ತಿದನು ಮೋಹರಿಸಿ ॥ ೯೮

ದೊರೆ ರಾಯ ನರಸ ರಾಜೇಂದ್ರ ಸಾಕಿದ ಬಲು
ಗುರಿಕಾರ ಮೆನ್ನೆಯರುಗಳ ।
ಪಿರಿದು ವಿಂಗಡಿಸುತಾರೇಳು ಪ್ರಜ್ಞಗಳಿಂ
ದರಿ ಬಲಾಂಬುಧಿಯನು ವೊಗೆದ ॥ ೯೯

ಕುದುರೆಗೆ ಕುದುರೆ ಕಾಲಾಳಿಗೆ ಕಾಲಾಳು
ಮದ ಗಜಗಳಿಗೆ ಗಜಗಳು ।
ಕದುಬಿನ ಮೆನ್ನೆಯರಿಗೆ ಮೆನ್ನೆಯರುಗಳು
ಕದನದೊಳಿರಿದಾಡಿದರು ॥ ೧೦೦

ಬಲು ಬೊಬ್ಬೆ ಸಿಡಿಲು ಖಡ್ಗಗಳ ತೊಳಪು ಮಿಂಚು
ಸಲೆ ತುರಗದ ದನಿ ಗುಡುಗು ।
ಖಳರವೆಯವೆ ಕಾಲ ಮೇಘವೆಂಬಿನ ಬಲು
ಮೆಳೆಗಳ ಕರೆದುವೇ ವೇಳ್ವ ॥ ೧೦೧

ಘನ ಶೌರ್ಯದಲಿ ಮುಂದಮರಿವೆ ವೈರಿಗಳವಾ
ಹಿನಿಯ ಕಂಡರೆ ಕೋಪದಲಿ ।
ಜನ ನಾಥ ಕಂಠೀರವೇಂದ್ರನ ದಳ ಪತಿ
ವೊನೆಯಾಳು ಸಹಿತುರುಬಿದನು ॥ ೧೦೨

ತುರಗಗಳನು ಬೀಳಲಿರಿದು ರಾವುತರ ಬ
ಲ್ಸಿರಗಳ ಮೆಟ್ಟಿ ಮೊಗರಿದ ।
ದುರ ಗಲಿಗಳ ಕಂಡು ಭೂಪು ಶಾಬಾಸೆಂದು
ತುರುಕರು ಕೊಂಡಾಡಿದರು ॥ ೧೦೩

ಕಂಠೀರವೇಂದ್ರನ ಹಳೆಯ ಪೈಕದ ಬಲು
ವೊಂಟರಿಗಾರ ನಾಯಕರು ।
ಪಂಠಿಸಿ ರಿಪುಗಳ ಮುರಿಯಲಿರಿದು ಮನ
ಕಂಟಿಸಿದರು ಭೀತಿಯನು ॥ ೧೦೪

ಕುದುರೆಯ ರಾಯ ರಾವುತರುಬ್ಬಿ ಭೋಯೆಂದು
ಮದವೇರಿ ಬೊಬ್ಬಿರಿದಾಗ ।
ಕದುಬಿ ಕಾದುವ ರಿಪುಗಳ ನೆರೆ ಮುರಿಯಿರಿ
ದೆಡೆಗೆಡಿಸುತೊ್ತೀಡಿಸಿದರು ॥ ೧೦೫

ಆನೆಯ ಮೇಲಣ ಜೋದರು ಮುಂದೆ ಬಂ
ದಾನವ ತುರುಕರ ಕರಿಯ ।
ಏನೆಂಬೆ ಮುರಿದೆಚ್ಚು ಮುರಿದೋಡಿಸಿ ದು
ರ್ಮ್ಮಾನವಿತ್ತರು ರಿಪುಗಳಿಗೆ ॥ ೧೦೬

ಸಂದಿಸಿ ಕಾಲಾಳ ಬೀಳಲಿರಿದು ಬಲು
ಮುಂದಲೆಗಳ ಮೆಟ್ಟಿಕೊಂಡು ।
ಕುಂವದೆ ಭಟರು ಮೂಗರಿದು ಮಾಲೆಯ ಕಟ್ಟಿ
ತಂದೊಪ್ಪಿಸಿದರೊಡೆಯನಿಗೆ ॥ ೧೦೩

ತೂಳುವ ಪೆಟಲ ಗುಂಡುಗಳ ಬಾಣದ ಹೊಯ್ಲ
ದಾಳಿಗೆ ಬಲು ಗಾಯವಡೆದು ।
ಕಾಲಾಳು ತುರಗವನೊಪ್ಪಿಸಿ ತುರುಕರ
ಜಾಲವೈದಿತು ದೆಸೆ ದೆಸೆಗೆ ॥ ೧೦೪

ಮುಸುಕಿದೈದಾರು ಮೋಹರವನೇಕವ ಮಾಡಿ
ಕುಸುರಿದರಿದು ಕಾಲುಗೆಡಿಸಿ ।
ವಸುಧೇಶನ ಮನ್ನೆಯರು ತುರುಕರನು
ದೆಸೆ ಬಲಿಗೊಟ್ಟರೇನೆಂಬೆ ॥ ೧೦೫

ಕಾಲಾಳು ಮುರಿದೋಡಿ ಕುದುರೆಯ ಪವ್ರಜನ
ಮೇಲೆ ಬೀಳಲು ರಾವ್ರುತರು ।
* ಸೋಲ ಹಿಡಿದು ಗಜಗಳ ಮೆರೆ ಹೊಗೆ ಶುಂ
ಡಾಲವೈದಿತು ಕಂಡ ಕಡೆಗೆ ॥ ೧೦೦

ಅರೆ ಗಾವ್ರದ ಪರಿಯಂತರ ತುರುಕರ
ಮುರಿಯಲಿರಿದು ಬೆನ್ನಟ್ಟ ।
ಎರಡು ಸಾವಿರ ಕೋಳ ಹಿಡಿದಾಗ ದಳ ಪತಿ
ತಿರುಗಿದ ತನ್ನ ಪಾಳಯಕೆ ॥ ೧೦೧

ಇಕ್ಕೈರಿಯ ಬಲ ಹರಿ ಹಂಚಾಗಿ ಯಿಾ
ದಿಕ್ಕಿಗೆ ಬರಲವ್ಮ್ಮಿವೆನುತ ।
ಲೆಕ್ಕವಿಲ್ಲದ ಸಿರಗಳ ಕೊಟ್ಟೋಡಿತು
ಸೊಕ್ಕು ಮುರಿದು ತಮ್ಮ ಸ್ಥಳಕೆ ॥ ೧೦೨

* ತೇರಹಿಡಿದು.

ನರ ರೂಪ ನರಸಿಂಹನ ಶೌರ್ಯವರಿಯದೆ
ದುರವನೆಸಗಿ ಯಪಕೀರ್ತಿ ।
ತರುಣಿಗೊಡೆಯರಾದೆವೆಂದಾಗ ಸಹಜಿಯು
ಪರಿವಾರ ಮುರಿದೋಡಿದುದು ॥ ೧೧೩

ಮುಂದಿನ್ನೀ ಕಡೆಯಲಿ ಸುಳಿದೊಡೆ ಬಹು
ಕುಂದು ಬಹುದು ತಮಗೆನುತ ।
ಅಂದಂಕುಶಖಾನನ ಮೊರ್ಚಲವಗ
ನಿಂದಲ್ಲಿ ನಿಲ್ಲದೋಡಿದುದು ॥ ೧೧೪

ದೊರೆ ರಾಯು ಮೈಸೂರ ನರಸೇಂದ್ರನೊಡನೆ ಸಂ
ಗರವನೆಸಗಿ ತುರಗಗಳ ।
ದುರ ಬಲಿ ಯಿತ್ತೆವೆಂದಂಬರ ಖಾನನ
ಪರಿವಾರ ತೆಗೆದೊಡಿದುದು ॥ ೧೧೫

ಚಲದಂಕ ಕಂಠೀರವೇಂದ್ರನ ವೈರದೆ
ಬಲು ಭಂಗ ವಡದೆವೆಂದಾಗ ।
ಮುಲುಕ ರಹಿಮನಾ ತಳತಂತ್ರ ಭಯದಿಂದ
ತಳುವದೋಡಿತು ತಮ್ಮ ಸ್ಥಳಕೆ ॥ ೧೧೬

ಭೂ ಧವ ಕಂಠೀರವ ನರಸೇಂದ್ರನೊಳ್
ಕಾದಿ ಬಲವ ನೀಗಾಡಿ ।
ಆಧಾರಗೆಟ್ಟೆನೆನುತ ಚಿಂತಿಸುತಾಗ
ವೇದೋಜಿ ಸುತನೈದಿದನು ॥ ೧೧೭

ರಣವ ಸಾರಿಸಿ ಹೆಣಗಳನೆತ್ತುವೊಡೊಂದು
ಹ್ಹೆಣ ನಿಲಲಂಜಿ ಚೌ ದೆಸೆಗೆ ।
ಕುಣಪಗಳೇಡಾಡಿ ಬಿರುದ ಬಿಸುಟು ಹಿಂದ
ಕಣಿಗೆಟ್ಟು ಸರಿದರೇನೆಂಬೆ ॥ ೧೧೮

ಮುತ್ತಿಗೆದೆಗಿಸುವೊಡೈತಂದು ಖಳ ಕುಲ
ವೊತ್ತಲಾರದೆ ಮುರಿದೋಡೆ ।
ಮತ್ತಾಗ ದುರ್ಗದ ಭಟರು ಶೌರ್ಯಕೆ ಮನ
ವಿತ್ತರೇ ವೇಳ್ವನಚ್ಚರಿಯ ॥ ೧೧೯

ಳಿದ ಹಗಲ ತಾವರೆಯಂತೆ ಜೌವನ
ಗಳಿದ ಹೆಣ್ಣಿನ ನೇಹದಂತೆ ।
ಸುಳಿವಿಂದ್ರ ಚಾಪದ ಸಿರಿಯಂತೆ ಕಲಿತನ
ವೆಳಸಿತೂರೊಳಗಣ ಬಲಕೆ ॥ ೧೨೦

ಸಿತ ಪಕ್ಷದ ಚಂದ್ರಮನ ಕೌಮುದಿಯಂತೆ
ಘೃತದಾಹುತಿಗಿರದೇಳ್ವ ।
ಹುತವಹನೊಲು ಹೊರ ಪಾಳಯದವರಿಗಂ
ದತಿಶಯವಾಯ್ತು ಪ್ರತಾಪ ॥ ೧೨೧

ನೆರೆ ತನ್ನ ದುರ್ಗ ಮುತ್ತಿಗೆಗೊಳಗಾಗಿ ಯಾ
ನರಸ ಭೂಪನಿಗೆ ಸೇರುವುದ ।
ಅರಿತಾಗ ನಂಜುಂಡ ರಾಜ ಚಿಂತಿಸಿ ಬಲು
ವೆರಗು ವಟ್ಟರ್ದನೇ ವೇಳ್ವ ॥ ೧೨೨

ಸುತರು ಬಂಧುಗಳು ಮುತ್ತಿಗೆಯೊಳು ಸಿಕ್ಕಿ ಬ
ಲ್ಲಿತಿಲರಾದರು ತನಗಿನ್ನು ।
ಗತಿ ಯಾವುದೆಂದು ಚಿಂತಿಸುತ ಶಿರವ ತೂಗಿ
ಮತಿಗೆಟ್ಟರ್ದನಾ ಭೂಪ ॥ ೧೨೩

ಬಳಿಕಾತನ ಪಟ್ಟದಂಗನೆ ತನ್ನಯ
ಕೆಳದಿಯರುಗಳೊಂದುಗೂಡಿ ।
ಸಲೆ ತನ್ನ ಪತಿಯೆಡೆಗೈತಂದು ನೀತಿಯ
ತಳುವದೆ ಬಿನ್ನೈಸಿದಳು ॥ ೧೨೪

ಎಲೆ ಪ್ರಿಯ ಪೂರ್ವ ಮೊದಲು ನಿಮ್ಮ ವಂಶದ
ನೆಲದಾಣ್ಮರು ಮೈಸೂರ ।
ಸಲೆ ದೊರೆಗಳು ಸಂತತ ಸ್ನೇಹವೆರಸಿ ಬ
ಳ್ಬಲಯುತರಾಗಿ ರಂಜಿಪರು ॥ ೧೮೫

ಆಂದಿಂದ ಬಳೆದ ಸ್ನೇಹವ ನಿಮ್ಮ ದೊರೆತನ
ದಿಂದ ಪರಿದು ವೈರ ವೆರಸಿ ।
ಮುಂದು ಗಾಣದೆ ವಂಶಕೆ ಹಾನಿಯ ತಹು
ದಂದವೆ ಹೇಳಂವಳವಳು ॥ ೧೮೬

ದೀಪದ ಕಿಡಿಯೊಳುನ್ನತವಾದ ಪಂಜಿನಂ
ತಾ ಪುರುಷರ ಪುಣ್ಯದೇಳ್ಗ ।
ಭೂಪ ಕೇಳ್ದನ ದಿನಕಭಿವರ್ಧಿಸುತಿದೆ
ಶ್ರೀ ಪತಿಯೊಲುಮೆಯಿಂದವಗೆ ॥ ೧೮೭

ನೆರೆ ಮೈಸೂರವರೊಳು ವೈರ ವೆರಸಿದ
ತಿರುಮಲ ರಾಜನೇನಾದ ।
ದುರಗಲಿ ಕಾರಗ ಹಳ್ಳಿಯ ಭೂಪರ
ಪಿರಿದು ಸೌಭಾಗ್ಯವೇನಾಯ್ತು ॥ ೧೮೮

ಅಂದಿನ ಪ್ರಭುಗಳಾ ಭೂಪರೊಡನೆ ವೈರ
ಬಂಧದೆ ವಂಶಗಳಳಿದು ।
ಕುಂದ ಹೊತ್ತಾಗ ರಾಜ್ಯ ಭ್ರಷ್ಟರಾಗಿರು
ವಂದವ ನೀ ಕೇಳ್ದರಿಯ ॥ ೧೮೯

ತಳಕಾಡ ಮನ್ನೆಯನವರೊಳು ಗರ್ವಿಸಿ
ಸ್ಥಳ ಕುಳವೆಲ್ಲವ ನೀಗಿ ।
ತೆಲುಗರನೋಲ್ಮೆಸಿ ಪಡಿ ದಂಡಿ ತನದಲಿ
ನೆಲಸಿರುವುದ ನೀನರಿಯ ॥ ೧೯೦

ಸಲೆ ಹದಿನಾಡವ ಮೈಸೂರ ಭೂಪರೊಳ್
ಕಲಹವೆನಿತ್ತು ಗಂಟಿಕ್ಕಿ ।
ತಲೆಯು ನೀಗಾಡಿ ದೇಶವನೊಪ್ಪಿಸಿ ಕೊಟ್ಟು
ಚಲಗೆಟ್ಟುದ ಕೇಳ್ದರಿಯು ॥ ೧೩೧

ದುರ ಗಲಿ ಪರಮು ರಾವುತನಿವರೊಳು ವೈರ
ವೆರಸಿ ಪ್ರಾಣವ ನೀಗಿಕೊಂಡು ।
ಪಿರಿದಪಕೀರ್ತಿಯು ತನ್ನೊಡಯಗೆ ತಂದ
ಪರಿಯರಿಯದೆ ಯಿಾ ಲೋಕ ॥ ೧೩೨

ಸಾಕದಂದಿನ ಮಾತು ನರಸ ರಾಜೇಂದ್ರನೀ
ಲೋಕದ ಬಡ ಭೂಮಿಪನೆ ।
ಶ್ರೀ ಕಾಂತ ನರಸಿಂಹ ನರ ರೂಪ ತಾಳಿ ಬಂ
ದೀ ಕರ್ಣಾಟವ ಹೊರೆವ ॥ ೧೩೩

ಕರ್ಣಾಟವ ಕೆಡಿಸಲು ಬಂದ ತುರುಕರ
ನಿರ್ನಾಮವ ಮಾಡಿ ಜಗವ ।
ಪೂರ್ಣದೆ ಸಲಹಿದ ಕಂಠೀರವೇಂದ್ರ ಸು
ಪರ್ಣವಾಹನ ಮೂರ್ತಿ ಯೈಸೆ ॥ ೧೩೪

ಸುತ್ತಣ ದೊರೆಗಳು ತುರುಕಗೆ ಕಂಗೆಟ್ಟು
ಮತ್ತಾಗ ರಾಜ್ಯವ ಕೊಟ್ಟು ।
ಹತ್ತಿದಗಿರಿ ಗಹ್ವರವನೀ ಭೂಪನ
ಬಿತ್ತರದ ಶೌರ್ಯವ ನೋಡು ॥ ೧೩೫

ಆ ತುರುಕರ ರಾಮ ಗಿರಿ ದುರ್ಗ ಬಾಗೂರ
ನೂತನವೆಹ ತುರುಗೆರೆಯ ।
ಖ್ಯಾತಿವಡೆದು ರಣದಲಿ ಸೆಳೆದವರಿಗೆ
ಭೀತಿಯ ಭಿತ್ತಿದ ಭೂಪ ॥ ೧೩೬

ಸಲೆ ವೊದಲಾರಿಯ ಸುತ ಮೆಧುರೆಯ ನೃಪ
ನೊಲವಿಂದ ಚಲದೆ ಗರ್ವಿಸಲು ।
ಸೆಳದು ಸಾಂಬಳ್ಳಿ ಸಹಿತ ರಾಜ್ಯವನಾಗ
ಬಲುಹ ಮೆರಿದನಾ ನೃಪನ ॥ ೧೫೬

ಬಳಿಕಾಗ ಮೆಧುರೆಯ ತಿರುಮಲ ನಾಯಕ
ಮುಳಿದುರೆ ಕದನವೆನೆಸಗೆ ।
ಬಲವ ಮೆರಿದು * ಕಲು ಗೋಟೆಯ ನೃಪನ ಬಾ
ಳ್ದಲೆಯ ಖಂಡಿಸಿದುದನರಿಯ ॥ ೧೫೭

ಚೆಂಜಿ ತಂಜಾವೂರ ನೃಪರೀ ಭೂಪಗೆ
ರಂಜಿಪ ಶೌರ್ಯವ ಕೇಳಿ ।
ಸಂಜನಿಸುವ ಹರುಷದೆ ಕಪ್ಪವ ಕೊಟ್ಟು
ಮಂಜುಳೋತ್ಸವದೊಳೂಪ್ಪಿಹರು ॥ ೧೫೮

ದೊರೆ ರಾಯ ಕಂಠೀರವೇಂದ್ರನ ಮೆರೆ ಹೊಕ್ಕು
ನರಸಿಂಹ ಪುರದ ಭೂಪಾಲ ।
ಪಿರಿದು ಮನ್ನಣೆ ವಡೆದಿರುತಿಹನವನಂತೆ
ಸ್ಥಿರ ಬುದ್ಧಿ ಬೇಡವೆ ನಿನಗೆ ॥ ೧೫೯

ನೆರೆ ಸತ್ಯ ಮಂಗಲ ವಾಲಂಬಾಡಿಯ
ದುರಗಲಿ ನಾಯಕರುಗಳು ।
ನರಸ ರಾಜೇಂದ್ರಗೆ ಶರಣಾಗತರಾಗಿ
ಪರಮ ಸಂತೋಷದೊಳಿಹರು ॥ ೧೬೦

ಹಿಂದಣ ಯುಗದಲಿ ದಶ ಮುಖ ಮೂರ್ಖತೆ
ಯಿಂದ ಭಾಗ್ಯವ ಬರಿಕೈದು ।
ಅಂದವಳಿದ ಕಥೆಯನು ಕೇಳ್ದರಿದು ನೀ
ಮಂದತ್ವವೆತಳದಿಹುದೆ ॥ ೧೬೧

* ವೇಲುಗೋಟೆಯ.

ದಾರಿಣಿಯೊಳ್ವ ಲೋಲುಪ್ತಿಯಿಂ ಲುಬ್ಧತ್ವ
ದಾರ್ಢ್ಯಕೆಗೆ ಮನ ಸರಿದು ।
ಕೌರವೇಶ್ವರನೇನಾದನಂದದರ ವಿ
ಸ್ತಾರವು ನೀನರಿಯದುದೆ ॥ ೧೪೩

ಹಿತವ ನುಡಿವರು ನಿನ್ನಯ ಮುಂದೆ ಹಿಂದಪ
ಕೃತಿಗಳನೆನಿಸುತಲಿಹರು ।
ಕೃತಕವಲ್ಲರಸ ಚಿತ್ತೈಸಿದು ಕುಜನರ
ಮತ ನೀನವರ ನಂಬ ಬೇಡ ॥ ೧೪೪

ಸಾರಿ ಹೇಳಿದೆ ನಾ ನಿನಗೆ ಕಂಠೀರವ
ಧಾರಿಣೀಶನ ಮೆರೆ ಹೊಕ್ಕು ।
ವೈರ ಬುದ್ಧಿಯ ನೀನುಳಿದೊಡೆ ನಿನ್ನನು
ಮೇರೆಯುರಿದು ರಕ್ಷಿಪನು ॥ ೧೪೫

ಎಂದಾಗ ತನ್ನ ಪಟ್ಟದ ರಾಣಿ ಯಾಡಿದ
ಬಂಧುರ ನೀತಿ ವಾಕ್ಯಗಳ ।
ಹಿಂದುಗಳದು ತನ್ನ ಕ್ರೂರದಾಳಾಪವ
ನಂದೊರೆದನು ಮಾನಿನಿಗೆ ॥ ೧೪೬

ಬಿಡೆನು ಚಲವ ನಾನು ಕಂಠೀರವೇಂದ್ರಗೆ
ಕೊಡೆನು ಗೋಷ್ಪದದ ಭೂಮಿಯನು ।
ಮಡದಿ ನನ್ನಯ ಶೌರ್ಯವೆರಿಯೆಯು ಮರಳಿ ನೀ
ನುಡಿಯ ಬೇಡಿರದೆ ಹೋಗೆಂದ ॥ ೧೪೭

ಎಂದವಳನು ಬೀಳ್ಕೊಟ್ಟು ಚಿಂತಾ ಭಾರ
ದಿಂದಲಾ ನಂಜುಂಡ ರಾಜ ।
ಮುಂದರಿಯದೆ ಚಿಂತಿಸುತಿರಲಿತ್ತಲಾ
ದಂದವನೇನ ಬಣ್ಣಿಸುವೆ ॥ ೧೪೮

ಬಳಿಕಾಗ ದುರ್ಗವ ಕೊಡದೆ ಕಾದುತಲಿಹ
* ತುಳಿಯೂಳು ದೊರೆ ಕುಮಾರಕರ ।
ಚಲವನೆರಿತು ದಳ ಪತಿ ನಂಜರಾಜೇಂದ್ರ
ಸಲೆ ಮನ್ನೆಯರೊಳಿಂತೆಂದ ॥ ೧೪೯

ಇವರಿಗೇಕಿನಿತು ದುಡುಕು ಲಗ್ಗೆಗೆ ಬಿಟ್ಟು
ತವಕದೆ ಸೆರೆಯ ಕೊಂಡೀಗ ।
ಭುವನೈಕಚಕ್ರಿಯನು ಬೀರಿ ತನ್ನೊಡೆಯಗೆ
ಸುವಿಲಾಸವ ತೋರ್ಪೆನೆಂದ ॥ ೧೫೦

ಎಂದಾಗ ಸಕಲ ಮನ್ನೆಯ ಬಲು ನಾಯಕ
ವೃಂದವ ಕರಿಸಿಕೊಂಡಾಗ ।
ಚಂದದೆ ಮನ್ನಿಸಿ ಹಗಲು ಲಗ್ಗೆಯ ಬಿಡ
ಲೆಂದು ಮೇಳೈಸಿದ ಬಲವ ॥ ೧೫೧

ಬರ ಸಿಡಿಲುಗಳ ವೊತ್ತಗಳೈದಿ ಗಿರಿಗಳ
ಸಿರವನಪ್ಪಳಿಸುವೆಂದದಲಿ ।
ಉರವಣಿಸಿತು ದಳ ಪತಿಯ ನೇಮದೆ ಬಲ
ಪುರದ ನಾಲ್ಕೊಗದೊಳುಬ್ಬಿರಿದು ॥ ೧೫೨

ಅಗಳ ಘಾತವ ಸೊಪ್ಪಿನ ಹೊರೆಯಲಿ ಹೂಳಿ
ಮಿಗೆ ನೆಲ ಸರಿ ಸಮ ಮಾಡಿ ।
ಮುಗಿಲ ಮುಟ್ಟುವ ನಿಚ್ಚಣಿಗೆಗಳನು ತಂದು
ನಿಗುರಿಸಿದರು ಕೋಟೆ ತೆನೆಗೆ ॥ ೧೫೩

ಪೆಟಲಿನಂಬರ ಬಾಣದಾರ್ಭಟ ಮುಸುಕಿದ
ಪಟು ಭಟರುಗಳ ಬೊಬ್ಬಾಟ ।
ಪುಟವೇರಿ ದುರ್ಗದವರಿಗೆ ಭೀತಿಯ ನೆರೆ
† ಘಟಿಸಿದುದೇನ ಬಣ್ಣಿಸುವೆ ॥ ೧೫೪

---

* ಕಳಿಯೂಳು. † ಪುಟ್ಟಿಸಿದುದೇನ

ಪುರದ ಹತ್ತಿರ ಚೌದೆಸೆಯೊಳು ಬಲು ಘಾತ
ವೆರಿವೆ ಸುರಂಗಗಳೊಳಗೆ ।
ಕರಿಯು ಮದ್ದನು ತುಂಬಿ ಹತ್ತಿಸೆ ಬಲು ಗಿಚ್ಚು
ತರಣಿ ಮಂಡಲವ ಮುಟ್ಟಿದುದು ॥ ೧೫೫

ಲಂಕೆಯ ಸುಡುವಾಗ ಹನುಮನ ಬಾಲದೊ
ಳಂಕುರಿಸಿದ ಕಿಚ್ಚಿನಂತೆ ।
ಬೊಂಕನೆ ಕೊತ್ತಳಗಳ ಹಾರಿಸಿ ಶಿವಿ
ಸೊಂಕಿತು ಗಗನ ಮಂಡಲವ ॥ ೧೫೬

ಧಗ ಧಗಿಸುವ ಕಿಚ್ಚಿನೇಳಿಗೆ ನೆಗೆಯಲು
ನಗರದೊಳಿಹ ಪಟು ಭಟರು ।
ಜಗಳವ ಮಾಡುತ ಕೈಗೆಡದಂದಾಗ
ಮಿಗೆ ಕಲಿತನವ ಮೆರೆದರು ॥ ೧೫೭

ಉರವಣಿಸುತೊಳ ಹೊಕ್ಕರಾ ಸಮಯದೆ
ಜರಿದ ಕೊತ್ತಳದ ಮಾರ್ಗದಲಿ ।
ನರಸ ರಾಜೇಂದ್ರ ಸಾಕಿದ ಬಲ ಮನ್ನೆಯ
ಪರಿವಾರ ಸಹಸವೇ ವೇಳ್ವ ॥ ೧೫೮

ದುರವನೆಸಗುತೈತಹ ರಿಪು ಭಟರನು
ತರಿದರಿದೌಕುತಲಾಗ ।
ಮುರಿಯಲಿರಿದು ಹೊರ ಕೋಟೆಯ ಕೊಂಡು ಮ
ತ್ತುರುಬಿದರೊಳಗೋಟೆಗಂದು ॥ ೧೫೯

ಆನೆಗಳನು ಕೊಂಬುಗತ್ತಿ ಸಹಿತ ತಂ
ದಾನಿಸಿ ಕೆಡಹಿ ಬಾಗಿಲನು ।
ಭೂ ನಾಥನ ದಳ ಪತಿ ನಂಜರಾಜೇಂದ್ರ
ತಾನೊಳ ಹೊಕ್ಕನುಬ್ಬಿನಲಿ ॥ ೧೬೦

ಅನಿತರೊಳಗೆ ನಂಜುಂಡ ರಾಜನ ಸುತ
ಕನಲಿ ಖಡ್ಗವನುಗಿದಾಗ ।
ಘನವಾದ ಹೆಬ್ಬಲಕಿದಿರಾಗಿ ಪೌರುಷ
ದನುವೆ ಮೆರೆದನೇ ವೇಳ್ಕ್ಯ ॥ ೧೬೧

ಪುಟಿ ಚಂಡಿನಂತೆ ಲಂಘಿಸುತಾಗೊಳ ಹೊಕ್ಕು
ಪಟುವಾದ ಶೌರ್ಯದೇಳ್ಗಯಲಿ ।
ಲಟ ಲಟಿಸುತ ಕಾಲಾಳ ಖಂಡಿಸುತು
ತ್ಕಟದಲಿ ಕಲಿಯೀರಿ ಮೆರೆದ ॥ ೧೬೨

ಉರುಹಣಿಸುತ ಹಿಂದಕ್ಕೆ ಹಜ್ಜೆಯನಿಡ
ದುರುಬಿ ಮುವ್ಮೊನೆಯ ನಾಯಕರ ।
ತರಿದಿರಿಯುತ ವೃಷಸೇನನ ಪೌರುಷ
ದಿರವ ಮೆರೆದ ರಣದೊಳಗೆ ॥ ೧೬೩

ಎಡ ಬಲದೊಳು ಚಾರಿವರಿದರೆಯಟ್ಟುತ
ತುಡುಕಿ ಹಿಂಗಡೆ ಮನ್ನೆಯರ ।
ಕೆಡಹುತಲಿಂದ್ರಾರಿಯ ಸಾಹಸವನು
ಬಿಡದೆ ಮೆರೆದ ಸು ಕುಮಾರ ॥ ೧೬೪

ಅಬ್ಬರಿಸುತ ಬೊಬ್ಬಿಡುತ ಕಾಲಾಳುಗ
ಳೊಬ್ಬುಳಿಯೊಳು ಬೀದಿವರಿದು ।
ಹೆಬ್ಬಲವಿದು ತಾನೊಬ್ಬನೆಂದೆಣಿಸದೆ
ಯುಬ್ಬಿದನತುಳ ಶೌರ್ಯದಲಿ ॥ ೧೬೫

ಹಿಂದೆ ಮುಂದೈತಂದು ತಿವಿವೆ ಸುಭಟರನೇ
ನೆಂದು ಲೆಕ್ಕಿಸದೆ ಮೇಲ್ವಾಯ್ದು ।
ಮುಂದಿಯ ಗಾಯಗಾಣಿಸಿ ತಾನೊರಗಿದ
ನೊಂದಾಗ ರಣ ಮಂಡಲದೆ ॥ ೧೬೬

ಛಲರೆ ಭೂಪುರೆ ಜಗ ಜಟ್ಟಿ ನಿನ್ನಂದದ
ಕಲಿಗಳುಂಟೇ ಲೋಕದೊಳಗೆ ।
ಚಲದಂಕನಹುದೆಂದು ಸಕಲ ಮೂರ್ಬಲವಾಗ
ನಲಿದು ಕೊಂಡಾಡಿದುದವನ ॥ ೧೬೫

ಅರೆ ಮುಚ್ಚಿ ಮರಳುವೆ ಕಂಗಳ ಮೆಯ್ಯೊಳು
ತುರುಗಿದ ಬಲು ಗಾಯಗಳಲಿ ।
ಸುರಿವ ರಕ್ತಾಂಬುಧಾರೆಗಳಿಂದ ಸುಕುಮಾರ
ನೊರಗಿದ ರಣ ಭೂಮಿಯೊಳಗೆ ॥ ೧೬೬

ಧೀರತ್ವಕೆ ಮೆಚ್ಚಿ ದೇವಾಂಗನೆಯರು
ಸೇರಿಸಿ ಪುಷ್ಪಕದೊಳಗೆ ।
ಶೂರನ ಕೊಂಡೊಯ್ದು ಲಾಲಿಸಿದರು ತಮ್ಮ
ಚಾರು ಮಂದಿರದೊಳರ್ತಿಯಲಿ ॥ ೧೬೭

ಯುಗ ಯುಗದೊಳಗಾವ ರಾಯನಾಗಲಿ ಮತ್ತೆ
ಹಗಲು ಲಗ್ಗೆಯಲಿ ಕೋಟೆಗಳ ।
ತೆಗೆದು ಕೊಂಡವರುಂಟೆ ಯೆನುತಾಗ [ದಳವಾಯ]
ಜಗದ ಜನರು ಪೊಗಳಿದರು ॥ ೧೬೮

ಹಿಡಿದು ಕೈ ಸೆರೆಯನಾ ನಂಜುಂಡ ರಾಜನ
ನೊಡ ಹುಟ್ಟಿದರ ನಂದನರ ।
ಕಡುಗಲಿ ದಳವಾಯಿ ನಂಜ ರಾಜೇಂದ್ರ ಮೆ
ತ್ತೊಡನೆ ಸಾಹಸವೆನು ಮೆರೆದ ॥ ೧೬೯

ದೊರೆ ರಾಯ ಕಂಠೀರವೇಂದ್ರನ-ಸಾಹಸ
ದಿರವಿಗೆ ಮನ ಸೋತು ನಗುತ ।
ಪುರ ಲಕ್ಷ್ಮಿ ಕೈ ವಶವಾಗಿ ಸಂತೋಷವ
ನಿರದಿತ್ತಳೇನ ಬಣ್ಣಿಸುವೆ ॥ ೧೭೦

ಪುರ ಜನರುಗಳಿಗಭಯವಿತ್ತು ಹರುಷದಿ
ನರಮನೆಗಿಕ್ಕಿ ಕಾವಲನು ।
ದುರಗಲಿ ದಳವಾಯಿ ಯೊಡೆಯನ ಬಳಿಗಾಗ
ಬರಿಸಿದ ಬಿನ್ನವತ್ತಳೆಯ ॥ ೧೭೩

ಸ್ವಸ್ತಿ ಶ್ರೀ ವಿಜಯಾಂಗನೆಯ ವೀರ ರಿಪು ಗಜ
ಮಸ್ತಕಾಂಕುಶ ಸೋಮ ವಂಶ ।
ಪ್ರಸ್ತುತ ಕ್ಷೀರಾಬ್ಧಿ ಚಂದ್ರ ಲಾಲಿಪುದು ಸು
ವಿಸ್ತಾರ ಶುಭ ವಾರ್ತೆಗಳ ॥ ೧೭೪

ಭೂ ವಳಯದೊಳಸಾಧ್ಯದೊಳಾರಾರಿಗು
ಕೈ ವಶವಾಗದೊಪ್ಪಿರುವ ।
ಭಾವದ ಪಿರಿಯ ಪಟ್ಟಣವನು ಸೆಳೆದೆವು
ದೇವರ ಶೌರ್ಯದೇಳ್ಗೆಯಲಿ ॥ ೧೭೫

ಕೊಡಗು ಕೊಂಕಣ ಮಲೆಯಾಳದ ಸುತ್ತಣ
ಗಡಿಯ ಮನ್ನೆಯರು ನಾಯಕರು ।
ಬಿಡದೆ ನಿಮ್ಮಯ ಪಾದ ಪುಂಡರೀಕವೆ ಕಾಂಬ
ಕಡು ತವಕದೊಳೊಪ್ಪುತಿಹರೈ ॥ ೧೭೬

ತಾವರೆಗಳು ಸೂರ್ಯ ಕಿರಣವ ಜೊನ್ನವ
ಭಾವದೆ ವರ ಚಕೋರಿಗಳು ।
ಭೂ ವಳಯದೆ ಬಯಸುವೊಲು ನಿಮ್ಮಡಿಯ ಭ
ಟಾವಳಿ ಹಾರೈಸುತಿಹುದು ॥ ೧೭೭

ಎಂದೆಂಬ ಬಿನ್ನವತ್ತಳೆಯ ವಾಕ್ಯವ ಕೇಳು
ತೊಂದಾರು ಭುಜವಾಗೆ ಹಿಗ್ಗಿ ।
ಮಂದಿ ಕುದುರೆ ಸಹ ಕಂಠೀರವೇಂದ್ರನೈ
ತಂದನು ಸರ್ವ ಸಂಭ್ರಮದೆ ॥ ೧೭೮

ಒಡೆಯನಿಗಿದಿರಾಗಿ ತಳತಂತ್ರ ಸಹಿತಾಗ
ಪೊಡವಿಪ ನಂಜರಾಜೇಂದ್ರ ।
ಕಡು ಹರುಷದೊಳ್ಳೈತಂದು ಕಾಣಿಕೆ ಗೈದು
ಪೊಡೆಮಟ್ಟನಡಿದಾವರೆಗೆ ॥ ೧೭೯

ಕಾಣಿಸಿಕೊಂಡು ಕೈ ಮುಗಿದ ಮನ್ನೆಯರನು
ಕ್ಷೋಣೀಪನೊಲಿದು ಮನ್ನಿಸುತ ।
ವಿಷ್ಣಾಂಕ ವಂಶ ಜನೈತಂದು ಹೊಕ್ಕನು
ಮಾಣದೆ ಪಿರಿಯ ಪಟ್ಟಣವ ॥ ೧೮೦

ಪುರವನೀಕ್ಷಿಸಿ ಪ್ರಜಾಪಾಲಕನೊಬ್ಬನ
ನಿರದಿಟ್ಟು ಠಾಣೆಯಕಾಗ ।
ಗಿರಿಯ ಮಲ್ಲೀಶನ ದರುಶನವನು ಮಾಡಿ
ಹರುಷದೆ ಭೂಪನೈತಂದ ॥ ೧೮೧

ಬೆಟ್ಟದ ಪುರ ಮೊದಲಾದ ಕೋಟೆಗಳನು
ನೆಟ್ಟನೀಕ್ಷಿಸಿ ನಸು ನಗುತ ।
ಸೃಷ್ಟೀಶ ಕಂಠೀರವ ರಾಜ ಶ್ರೀರಂಗ
ಪಟ್ಟಣವನು ಹೊಕ್ಕನಂದು ॥ ೧೮೨

ಗುರಿಕಾರ ನಾಯಕ ಮನ್ನೆಯ ಭಟರಿಗೆ
ಕರೆ ಕರೆದುಡುಗೊರೆಯಿತ್ತು ।
ಹರುಷದೆ ಮನ್ನಿಸಿ ರಾಜೇಂದ್ರ ಕಂಠಾ
ಭರಣವೈದಿದನರ ಮನೆಗೆ ॥ ೧೮೩

ತರುಣಿಯರುಗಳ ಪೊಂದಟ್ಟೆಯಾರತಿಗಳ
ಹರುಷದೆ ಕೈಗೊಳುತಾಗ ।
ಧರಣೀಶ್ವರ ಕಂಠೀರವ ನರಸೇಂದ್ರ
ಹರುಷದೊಳಗೆ ರಂಜಿಸಿದ ॥ ೧೮೪

ಜಿತ ಶತ್ರು ಸಮುದಯನಾಗಿ ಭೂತಳವನಂ
ದತಿಶಯದೊಳಗೆ ಪಾಲಿಸುತ ।
ಕ್ಷಿತಿ ಪತಿ ವೈಸೂರ ನರಸ ರಾಜೇಂದ್ರನು
ನ್ನತಕೀರ್ತಿಯೊಳಗೆ ರಾಜಿಸಿದ ॥ ೧೪೫

ಚಾಮುಂಡಿ ದೇವಿಯ ಕೃಪೆ ಪಶ್ಚಿಮ ರಂಗ
ಧಾಮನ ದಯೆ ಪೂರ್ಣಮಾಗೆ ।
ಭೂಮಿಪ ಕಂಠೀರವ ನರಸೇಂದ್ರನಿ
ಸ್ಸೀಮ ರಾಜ್ಯವ ಪಾಲಿಸಿದನು ॥ ೧೪೬

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೪೭

೧೪೯ನೆಯ ಸಂಧಿ ಸಮಾಪ್ತಂ.

ಹತ್ತೊಂಬತ್ತನೆಯ ಸಂಧಿ

ನಂಜರಾಜಯ್ಯನ ಜಗಳ

ಸೂಚನೆ॥ ಕಡುಗಲಿ ನಂಜೇಂದ್ರ ಖಾನ ಖಾನರ ಹೊಯ್ದು
ಮೃಡನ ಸಾಯುಜ್ಯವಡೆದನು ॥

ಗೋಪತಿ ಸುತನ ತಮ್ಮನ ತಂದೆಯಣುಗನ
ಕೋಪದೊಳಗೆ ಮೆಡುಹಿದನ ।
ಚಾಪವ ಜರೆದನ ರಾಣಿಯ ಸಲಹಿದ
ಶ್ರೀಪತಿ ಸಲಹು ಸಜ್ಜನರ ॥

ಪಿರಿಯ ಪಟ್ಟಣವನು ಹಗಲು ಲಗ್ಗೆಗೆ ಬಿಟ್ಟು
ದುರಗಲಿ ನರಸ ರಾಜೇಂದ್ರ ।
ಭರದಲಿ ಸೆಳೆದ ವಾರ್ತೆಯ ವಿಜಯಾ ಪುರ
ದರಸ ಕೇಳಿದನೇ ವೇಳ್ವ ॥ ೧

ಬಡನೆ ವಿಸ್ಮಿತನಾಗಿ ಪಾತಾಳ್ಯವು ಮೈಸೂರ
ಪೊಡವಿಪ ಕಂಠೀರವನ ।
ಕಡುಗಲಿ ತನವ ವಜೀರ ಖಾನರ ಕೂಡೆ
ನುಡಿದನೇನೆಂಬೆನಚ್ಚರಿಯ ॥ ೨

ತುರುಕರ ಕುದುರೆಯ ಖುರ ಪುಟದಬ್ಬರ
ಕಿರದೆ ಚೌದೆಸೆಯ ಮನ್ನೆಯರು ।
ವರ ಮೃಗೇಂದ್ರನ ಗರ್ಜನೆಗಳ್ಕಿ ಜಾರುವ
ಕರಿ ವಿಂಡಿನಂತೋಡುತಿಹರು ॥ ೩

ಧರೆಯೊಳು ಕಂಠೀರವ ನರಸೇಂದ್ರನ
ಬಿರುದಿನ ಮನ್ನೆಯ ಭಟರು ।
ತುರುಕರ ಕದನವೆಂದೊಡೆ ಕೈಗುದಿಗ್ಯೊ
ಳರೆಯಟ್ಟಿ ಕೊಲುತಿಹರೆಮ್ಮ ॥ ೪

ಹ್ಷಣದೆ ಪಟ್ಟಣವ ಮುತ್ತಿದ ನಮ್ಮ ದಳ ಪತಿ
ರಣ ಧೂಳಿ ಖಾನನ ಬಲವ ।
ಹಣಿದವಾಡಿಯೆ ದೆಸೆಗಟ್ಟಿದ ನರಸೇಂದ್ರ
ಗೆಣೆಯುಂಟೆ ತ್ರೈಜಗದೊಳಗೆ ॥ ೫

ಪ್ರೇಮದೆ ನಾವಾಳುವ ರಾಮ ಗಿರಿ ದುರ್ಗ
ಭೂಮಿಗಧಿಕ ತುರುಗೆರೆಯ ।
ಗ್ರಾಮ ಬಾಗೂರನು ಸೆಳೆದ ಕಂಠೀರವ
ಭೂಮಿಪ ನರಸಿಂಹನಲ್ತೆ ॥ ೬

ಹಗಲು ಲಗ್ಗೆಯಲಿ ದುರ್ಗವ ಕೊಂಡವರು ಪೂರ್ವ
ಯುಗದೊಳಗಾರಾದರುಂಟೆ ।
ಜಗ ಮೆಚ್ಚಲು ತುಂಗ ಚಂಗಲ್ವ ರಾಯನ
ನಗರವ ಕೊಂಡನೀ ಭೂಪ ॥ ೭

ಮಧುರೆಯನಾಳುವ ತಿರುಮಲ ನಾಯಕ
ಕದನಕೆಳಸಲಂದವನ ।
ಪದಪಿನ ಬಲವನು ಮುರಿದರೆಯಟ್ಟಿಯೆ
ಸದೆದನು ನರಸ ರಾಜೇಂದ್ರ ॥ ೮

ಒಡನೆ ನಮ್ಮವರೊಳಗಾರಾದೊಡಾಗಲಾ
ಪೊಡವಿಪ ಕಂಠೀರವನ ।
ಗಡಿಯ ಭೂಮಿಯ ಮೆಟ್ಟಿ ಜಯವ ಪಡೆದು ಬರೆ
ಕೊಡುವೆ ಸಪ್ತಾಂಗವನೆಂದ ॥ ೯

ಎಂದೆಂಬ ಪಾತಾಸ್ಯವಿನುತ್ತರವನು ಕೇಳು
ತಂದಾಗ ಮುಸ್ತಪ ಖಾನ ।
ನಿಂದು ಸಲಾಮನು ಮಾಡಿ ತನ್ನಯ ಶೌರ್ಯ
ದಂದವೆ ಬಿನ್ನೈಸಿದನು ॥ ೧೦

ದೇವರವರ ಮನಸಿನ ಚಿಂತೆಯ ಬಲು
ಗಾವಳಿಯನು ಮಿಗೆ ಪರಿದು ।
ತೀವಿದ ಮುದವೆ ನಿಮಗೆ ಬೀರದಿದ್ದೊಡೆ
ನಾವಿದ್ದು ಫಲವೇನೆಂದ ॥ ೧೧

ತಳ ತಂತ್ರವಿದೆ ಲೆಕ್ಕವಿಲ್ಲದ ದ್ರವ್ಯದ
ಬಲುಹಿದೆ ಖಾನ ಮಲ್ಲುಕರ ।
ಚಲದೇಳಿಗೆ ಯಿದೆ ನಮಗಿದಿರಹ ರಿಪು
ಗಳು ಧರೆಯೊಳಗಿಲ್ಲೆಂದ ॥ ೧೨

ಹಲವು ಮಾತೇಕೆಲೆ ಜೀಯ ವೀಳ್ಯವ ಕೊಟ್ಟು
ಕಳುಹೆನ್ನ ಕರ್ಣಾಟಕವೆ ।
ಸೆಳೆದು ನಿಮ್ಮಯ ವಶ ಮಾಡದೊಡಾಸ್ಥಾನ
ದೊಳಗೆನ್ನ ನಿರಿಸ ಬೇಡೆಂದ ॥ ೧೩

ಇಂತೆಂಬ ಮುಸ್ತಪ ಖಾನನ ವಾಕ್ಯಕೆ
ಸಂತಸದಳೆದು ಪಾತಾಸ್ಯವು ।
ಮುಂತುಡುಗೊರೆ ವೀಳ್ಯವಿತ್ತು ಕರ್ಣಾಟವ
ಪಂತದಿಂದಲಿ ಸೆಳೆ ಯೆಂದ ॥ ೧೪

ಎನಲು ಹಸಾದವೆನುತ ತನ್ನೊಡೆಯನ
ಘನ ಹರುಷದೆ ಬೀಳ್ಕೊಂಡು ।
ವಿನುತ ಪ್ರಸ್ಥಾನ ಭೇರಿಯ ಮೊಳಗಿಸುತವೆ
ನನುವಾದನತುಳ ಸಂಗರಕೆ ॥ ೧೫

ಬಳಿಕ ತನ್ನಾಣತಿಗೊಳಗಾದ ಖಾನರ
ತಳತಂತ್ರವ ಕೂಡಿ ಕೊಂಡು ।
ಚಲದಿಂದ ಮುಸ್ತಪ ಖಾನ ಕರ್ಣಾಟದ
ನೆಲನ ಹೊಕ್ಕನು ತೀವ್ರದಿಂದ ॥ ೧೬

ಅಲ್ಲಲ್ಲಿ ಬೀಡ ಬಿಡುತ ಕಂಡ ಧರಣೀ
ವಲ್ಲಭರನು ಮನ್ನಿಸುತ ।
ನಿಲ್ಲದೆ ಸೆಣಸಿದವರ ಸದೆಯುತ ಸಮ
ರೋಲಾಸದೊಳಗೈತಂದ ॥ ೧೭

ಸಲೆ ತಮ್ಮ ಗಡಿಯು ಠಾಣೆಯುಗಳ ಖಾನರ
ಬಲ ಸಹ ಕರಿಸಿಕೊಂಡಾಗ ।
ತಳುವದೆ ತುರುಗೆರೆಗದ್ದಿಗಾವ್ರದದೆ ಕೆರೆ
ಯೊಳ ಗೆರೆಯಲಿ ಬೀಡ ಬಿಟ್ಟ ॥ ೧೮

ಆನೆ ಕುದುರೆ ಖಾನ ಮುಲುಕ ವಜೀರರ
ಸೇನೆಯ ಸಂಜೋಗಗಳ ।
ನ್ಯೂನವಿಲ್ಲದೆ ಬಣ್ಣಿಪರಾರಾಬಲ
ದಾನಂದವನೇ ವೇಳ್ವ ॥ ೧೯

ಗುಡಿ ಗೂಡಾರ ನೀಟಿನ ಸರವತಿಗೆಗ
ಳ್ಡೆ ವಿಡದಾ ದಂಡಿನೊಳಗೆ ।
ಕಡುಗಲಿ ಖಾನ ಖಾನರಿಗೆ ರಾಜಿಸಿದುವಾ
ಪಡೆಯ ಸನ್ನಹವನೇ ವೇಳ್ವ ॥ ೨೦

ಕರಿಗಳ ಶಾಲೆ ತುರಗ ಲಾಯ ಬಹು ವಸ್ತು
ಪರಿ ಕೋಭಿಸಂಗಡಿ ಗೇರಿ ।
ಮೆರೆದುವು ಮುಸ್ತಪ ಖಾನನ ದಂಡಿನ
ಬ್ಬರವನದೇನ ಬಣ್ಣಿಸುವೆ ॥ ೨೧

ಭಂಗಿಯ ಹೇರಪಿನಿಯ ವೊಟ್ಟೆ ಸಾರಾಯ
ದಂಗಡಿ ಸುರೆಯ ತಿತ್ತಿಗಳ ।
ಜಂಗುಳಿ ದಳ ಸಾಲ ಪಸರವಾ ದಂಡಲಿ
ಹಿಂಗದೊಪ್ಪಿದುವೆಡೆ ವಿಡದೆ ॥ ೦೦

ಡೋಳಿನ ಕುದುರೆ ಡಮಾನದ ಮೆದ ಕರಿ
ಸೂಳ್ಪಪ ಟುಮುಕುಗಳೊಂಟೆ ।
ಪಾಳಯದಂಗ ರಕ್ಷೆಯ ರಾವುತರ ಕೂಡೆ
ವೇಳದೊಳಗೆ ತಿರುಗುವುವು ॥ ೦೧

ಹೊಸ ಮನುಷ್ಯರ ಗವಲಿಗೆ ಗಳ್ಳಿಕ್ಕುತ
ಮುಸುಕಿ ಸುಂಬರಿವೆ ಶುನಿಗಳು ।
ಎಸೆದುವಾ ದಂಡಿನೆಚ್ಚರಿಕೆಯ ಕಾವಲೊಂ
ದೆಸಕವನೇನ ವೆಂಬಿಸುವೆ ॥ ೦೨

ಬಳಿಕೀ ಪರಿಯಲಿ ಮುಸ್ತಪ ಖಾನ ದಂ
ಡಿಳಿಯಲು ಗಡಿಯ ಮನ್ನೆಯರು ।
ದಳವಾಯಿ ನಂಜ ರಾಜೇಂದ್ರನ ಬಳಿಗಾಗ
ಗಳಿಲನೆ ಚರರನಟ್ಟಿದರು ॥ ೦೩

ಕಡು ಬೇಗದಲಿ ಚರರೈತಂದು ದಳ ಪತಿ
ಯಡಿಗೆ ಕೈಗಳ ಮುಗಿದಾಗ ।
ಕಡುಗಲಿ ಮುಸ್ತಪ ಖಾನ ದಂಡೆತ್ತಿ ಬಂ
ದಡವೆ ಬಿನ್ನೈಸಿದರಂದು ॥ ೦೪

ಎನಲೊಳ್ಳಿತು ನಿಮ್ಮ ಗಡಿ ದುರ್ಗದೊಳಗೆಚ್ಚ
ರನುವಿನೊಳಿರಿ ಯೆಂದು ಚರರ ।
ಘನ ತೀವ್ರದೊಳಗೆ ಬೀಳ್ಕೊಟ್ಟಾಗ ದಳ ಪತಿ
ಜನ ನಾಥನೆಡೆಗೈತಂದ ॥ ೦೫

ಚಂದದೆ ನರಸ ರಾಜೇಂದ್ರನ ಪಾದಾರ
ವಿಂದಗಳಿಗೆ ತಲೆವಾಗಿ ।
ನಿಂದು ಬಿನ್ನೈಸಿದ ಮುಸ್ತಪನ ದಂಡೈ
ತಂದು ಗಡಿಯೊಳಿಳಿದಿರವ ॥ ೮೪

ಅಡಸಿ ಗಿರಿಯನುಂಗುವ ವೀರನ ಬಾಯಿ
ತಡೆವುದೆ ಪಣ್ಗಳಗಳನು ।
ಪೊಡವಿಪ ನೀಮಿಸು ಮುಸ್ತಪನ ದಂಡನು
ಕಡಿದಿಕ್ಕುವೆ ರಣ ಬಲಿಯ ॥ ೮೫

ತಾರಕಾಸುರನ ಮೂರ್ಲೊವನು ಹರನ ಕು
ಮಾರ ಹೊಯ್ದಟ್ಟುವೆಂದದಲಿ ।
ಕಾರಗಲಿಸಿಕೊಂಡು ಖಾನರ ಕೀರ್ತಿಯ
ಸೇರಿಪೆ ದೇವರ ಪದಕೆ ॥ ೮೬

ತುರಗ ದಳವ ಬೀಳಲಿರಿದು ಖಾನರುಗಳ
ತರಿದೊಟ್ಟ ಶಿರವ ಚಂಡಾಡಿ ।
ಬಿರುದ ಮೆರೆವೆ ದೇವರ ಕೃಪೆಯಿಂದೆನ್ನ
ದುರಕೆ ಬೆಸಸು ಜೀಯ ಯೆನಲು ॥ ೮೭

ಎಂದೆಂಬ ನಂಜ ರಾಜೇಂದ್ರನ ಪೌರುಷ
ದಂದಕೆ ನೃಪ ಪರಿಣಮಿಸಿ ।
ಮುಂದಾಗುವ ರಾಜ ಕಾರ್ಯದಿರವನಿಂ
ತೆಂದನೀ ವೇಳ್ವನಚ್ಚರಿಯ ॥ ೮೮

ಹಂದಿ ಗುಲಾಮರಿಗೀತಕೆ ನೀ ನಿನ್ನ
ಮಂದಿ ಕುದುರೆ ಮನ್ನೆಯರ ।
ಸಂದೇಹವೇಕಟ್ಟ ಯವರಿಂದ ತುರುಕರ
ಕುಂದದೆ ಕಡಿದೆಬ್ಬಿಸೆಂದ ॥ ೮೯

ದೇವರ ಶೌರ್ಯದೇಳಿಗೆಯಿಂದ ನಮ್ಮಯ
ಭೂ ವಳಯದ ಮನ್ನೆಯರು ।
ತೀವಿದ ವೈರಿ ಭೂಮಿಪ ಸೈನ್ಯ ಕಾನನ
ದಾವಾನಳನಂತಿಹರು ॥ ೪೪

ವನವನಾಹುತಿಗೊಳ್ವ ಶಿಖಿಗನಿಲನ ಸಖ
ತನದೆ ಪೌರುಷ * ಹೆಚ್ಚುವಂತೆ ।
ಜನಪ ಬಿನ್ನಹ ನಾನ್ಯೆದಿ ಮನ್ನೆಯರಿಂದ
ಚೆನಕಡಿ ಗೈವೆ ರಕ್ಕಸರ ॥ ೪೫

ಈ ವೇಳಯಲಿ ನಾನ್ಯೆದಿ ಮುಸ್ತಾಪನ
ತೀವಿದ ಬಲ ಜಲಧಿಯನು ।
ದೇವ ರಾಮನ ಶರದಂತೆ ಬತ್ತಿಸಿ ನಿಮ್ಮ
ಸೇವೆಯ ಸಲಿಸುವೆನೆಂದ ॥ ೪೬

ಅಂದು ಗೋ ಗ್ರಹಣದೆ ವಿಜಯ ಕೌರವ ಬಲ
ವೈಂಗವ † ಸದೆದಟ್ಟಿದಂತೆ ।
ಮುಂದುಗೆಡಿಸಿ ತುರುಕರ ಬಲವನು ಕೊಂದು
ಕುಂದದೋಡಿಸುವೆ ತಾನೆಂದ ॥ ೪೭

ಎನಲು ನೀನರಿಯದ ಕಾರ್ಯದೆಣಿಕೆಗಳ
ಘನವಾಗಿ ಬಲ್ಲವೆರುಂಟೆ ।
ಅನುವರದೊಳಗೆಚ್ಚರಲಿ ಖಾನ ಮುಲುಕರ
ಮೊನೆ ಪಾಡ ಮೊರಿದೆಬ್ಬಿಸೆಂದ ॥ ೪೮

ಚಲವ ಬಲಿದು ಪಾತಾಸ್ಯವು ಮುಸ್ತಾಪಗೆ
ಬಲು ಬಲವನು ಕೂಡಿ ಕೊಟ್ಟು ।
ಕಳುಹಿದನಂತೆ ಮೇಲಾರೈಕೆಯಲಿ ಕಾರ್ಯ
ದಳವಿಯನೆಸಗು ಹೋಗೆಂದ ॥ ೪೯

---

* ಹೆಚ್ಚಿದಂತೆ. † ಸದೆದಟ್ಟುವಂತೆ.

ಎಂದು ನುಡಿದ ತನ್ನೊಡೆಯನ ಪಾದಾರ
ವಿಂದಗಳಿಗೆ ಕೈಯ ಮುಗಿದು ।
ಕಂದರ್ಪ ಸನ್ನಿಭ ನಂಜೇಂದ್ರ ತಳತಂತ್ರ
ಸಂದಣಿಯೊಳಗೈದಿದನು ॥ ೪೦

ತುರಗ ಹೇಷಾ ರವ ಕರಿಗಳ ಬೃಂಹಿತ
ಮೊರೆವ ವಾದ್ಯದ ರವದಿಂದ ।
ದುರ ಗಲಿ ದಳವಾಯಿ ನಂಜೇಂದ್ರನೈತಹ
ಪಿರಿದು ಸನ್ನಹವನೇ ವೇಳ್ವ ॥ ೪೧

ಕಾಲಾಳ ಬೊಬ್ಬೆ ಡಾಳಿಸುತಿಹ ಚಾಮರ
ದೇಳಿಗೆ ಪದ ಪತಿಗೇಳ್ವ ।
ದೂಳು * ದೆಸೆಗಳಂಬರವಿನ ಕಿರಣವ
ಮೇಳೈಸಿ ಮುಸುಕಿದುವಾಗ ॥ ೪೨

ಕಡುಗಲಿ ಸುಭಟರು ಜಡಿವ ಖಂಡೆಯುಗಳ
ಕಿಡಿಗಳಾಕಾಶ ಮಂಡಲವ ।
ತುಡುಕಲಾ ರುಳಕೆ ಚರಿಪ ಪಕ್ಷಿ ಗರಿ ಸೀದು
ಸಿಡಿದು ಬಿದ್ದುವು ಭೂ ತಳಕೆ ॥ ೪೩

ಆಲವೆಟ್ಟವು ಸತ್ತಿಗೆ ಮದ ಕರಿಗಳ
ಸಾಲ ಪಟಗಳಿನ ಪ್ರಭೆಯ ।
ತೂಳಗೊಡದೆ ಮುಸುಕಲು ರಾಹು ಪರ್ವದೊಲ್
ಮೇಳೈಸಿತು ತಮ ಜಗಕೆ ॥ ೪೪

ಕರಿಗಳ ಮೇಲೊದರುವ ಡಮೊನದ ರವ
ನೆರೆ ತೀವಲೆಂಟು ದೆಸೆಗಳ ।
ದುರಗಲಿ ದಳ ಪತಿ ಬಲ ಸಹ ನಡೆತಂದು
ತುರುಗೆರೆಯಲಿ ಬೀಡಿಳಿದ ॥ ೪೫

---

* ದೆಸೆಗಳಂಬರದಿನ.

ಬಿರುದಿನ ಮನ್ನೆಯ ಮಂಡಲಿಕರ ಮೊತ್ತ
ಧರಿಸಿದಾಭರಣದ ಕಾಂತಿ ।
ಪರಿದುದು ಮುಸುಕಿದ ಕತ್ತಲೆಯನು ದಂಡು
ತೆರಳಿದುದತಿ ತೀವ್ರದಿಂದ ॥ ೪೬

ಕದನಕೆ ಕಂಠೀರವೇಂದ್ರನ ದಳ ಪತಿ
ಯಿದಿರು ದಂಡಿಳಿದ ಬಗೆಯನು ।
ಮದ ಮುಖ ಮುಸ್ತಾಪ ಕೇಳಿ ತನ್ನವರೊಳು
ಹದಗೆಟ್ಟು ಚಿಂತಿಸಿ ನುಡಿದ ॥ ೪೭

ನೆರೆ ನಮ್ಮ ಬಲವು ಮುಂದಕೆ ದಾಳಿ ಮಾಡಲು
ತೆರಹುಗೊಡದೆ ಮೈಸೂರ ।
ನರಸ ರಾಜೇಂದ್ರನ ದಳ ಪತಿ ತಳತಂತ್ರ
ವೆರಸಿ ಬಂದಿಹ ನಮ್ಮ ಮೇಲೆ ॥ ೪೮

ಕಗ್ಗೊಲೆಗಳ ಕಾಳಗದೆ ಮೈಸೂರವ
ರಗ್ಗಳೆಯರು ಜಗದೊಳಗೆ ।
ಬಗ್ಗನಿಲ್ಲಿಂದೈದಿ ನಾವು ನಮ್ಮಯ ಗಡಿ
ದುರ್ಗದೊತ್ತಲಿ ನಿಲ್ವೆವೆಂದ ॥ ೪೯

ತುರುಕ ಮಾರ್ಬಲವನು ಸರಕು ಮಾಡದೆ ಕೊಲ್ವ
ನುರುತರ ನಂಜ ರಾಜೇಂದ್ರ ।
ಹರತರದೂದಿನಿಂ ನಮ್ಮಯ ದುರ್ಗದ
ಭರವಸದೊಳು ನಿಲ್ವೆವೆಂದ ॥ ೫೦

ಎಂದೆಂಬ ಮುಸ್ತಾಪ ಖಾನನ ಮಾತಿಗೆ
ನಿಂದು ಕೈ ಮುಗಿದು ಮಂತ್ರಿಗಳು ।
ಮುಂದಣ ಕಾರ್ಯದೆಣಿಕೆಯಾಳಾಪವ
ನಂಗೊರೆದರು ತೀವ್ರದಿಂದ ॥ ೫೧

ಇಳಿದಿರ್ದ ಬಳಿಯಿಂದ ಪಾಳಯದೆಗೆದೊಡೆ
ಕಲಿಯೇರಿದ ನಮ್ಮ ಭಟರು ।
ಸಲೆ ಭೀತಿಗೆ ಮನವಿಡುವರು ರಿಪುಗಳ್ಗೆ
ಬಲು ಶೌರ್ಯದೇಳಿಗೆಯರಸ ॥ ೫೦

ಅದರಿಂದ ನೀವು ಹಿನ್ನೆಲೆಗೈದದೆ ಮುಂದ
ಕೊದಗಿ ಪೌಜುಗಳನು ಬಲಿದು ।
ಕದನವನೆಸಗುವುದಿದು ರಾಜ ಕಾರ್ಯದ
ಹದನೆಂದು ಬಿನ್ನೈಸಿದರು ॥ ೫೧

ಇಂತೆಂದು ಬಿನ್ನೈಸಿದ ಮಂತ್ರಿಗಳನತಿ
ಸಂತೋಷದಲಿ ಮನ್ನಿಸುತ ।
ಮುಂತಾಗ ಖಾನ ಖಾನರ ಪೌಜನಲ್ಲಲ್ಲಿ
ಪಂತದೆ ಬಲಿದ ಮುಸ್ತಾಪ ॥ ೫೪

ಶಿಲೆಯ ಸಂಜೋಗದ ಕುದುರೆಗಳೇರಿದ
ಬಲು ಬಿರುದಿನ ರಾವುತರ ।
ಸಲೆ ನಾಲ್ಕು ಸಾವಿರ ಪೌಜನೊಂದೆಸೆಯಲ್ಲಿ
ಬಲಿದನಾ ಖಾನನೇ ವೇಳ್ವ ॥ ೫೫

ನವ ರತ್ನದ ಹಲ್ಲಣದ ತೇಜಿಗಳೇರಿ
ದವೆಗಡದತುಳ ರಾವುತರ ।
ತವಕದೆ ಬಡಗ ದಿಕ್ಕಿನೊಳೊಂದು ಪೌಜನು
ಬವೆರಕೆ ಬಲಿದನುಬ್ಬಿನಲಿ ॥ ೫೬

ಮಿಸುನಿಯ ಬಿರುದಿನ ಹಕ್ಕರಿಕೆಯ ಹಯ
ವಿಸರವ ನೆರೆ ಗರ್ಜಿಸುತ ।
ಅಸಮ ವಿಗ್ರಹ ವೀರರ ತೆಂಕ ದೆಸೆಯೊಳ
ಗೆಸಗಿದನೆರಡು ಸಾಸಿರವ ॥ ೫೭

ಬಿರುದಿನ ಡಾಳ ನೇಜೆಯದ ರಾವುತರ ನಾ
ಲ್ಕೆರಡು ಸಾವಿರ ತೇಜಿ ಸಹಿತ ।
ದುರ ಮೆಂಡಲದೆ ಪಶ್ಚಿಮೆದಿಕ್ಕಿನೊಳಾಗ
ಪರುತವಿಸಿದನಾ ಖಾನ ॥ ೫೪

ಬಳಿಕಿಂತು ಚೌದೆಸೆಯಲಿ ಕುದುರೆಯ ಪೌಜ
ನಳವೆಡಸಿಯೆ ಪಟು ಭಟರ ।
ಸಲೆ ನಾಲ್ಕೈದು ವೋಹರ ಗೈದು ಕದನಕೆ
ಕಲಿಯೇರಿ ನಿಂದನೇ ವೇಳ್ವ ॥ ೫೫

ಇತ್ತಲೀ ದಳ ಪತಿ ನಂಜೇಂದ್ರ ಬಲವನೊಂ
ಭತ್ತು ಪೌಜಿನೊಳಳವಡಿಸಿ ।
ಮತ್ತಾಗ ಜಯ ಭೇರೀ ರವದಿಂ ಬಂದು
ಮುತ್ತಿದನಾ ಖಳ ಬಲವ ॥ ೫೦

ಉಭಯ ಬಲದಲಿ ಚೂಣಿಯ ಪಟು ಭಟರಾಗ
ಕುಬಿಬಿರಿದಬ್ಬರ ಗೈದು ।
ತ್ರಿ ಭುವನ ನಡುಗಲು ರಣ ಮಂಡಲದೆ ಶೌರ್ಯ
ಪ್ರಬಲದೊಳಿರಿದಾಡಿದರು ॥ ೫೧

ಬಂದೊಂದೊಟ್ಟಲಿ ಸಾವಿರ ಕೋವಿಯ
ಮುಂದಣಿಗಿಡುತ ಬೊಬ್ಬಿರಿದು ।
ಸಂದಣಿಸುತ ಮನ್ನೆಯರ ಮೊರ್ಚಾಲ ನೆರೆ
ಕೊಂದು ಕೂಗಿಡಿಸಿತು ಖಳರ ॥ ೫೨

ಪ್ರಳಯದ ದಾವಾಗ್ನಿಯ ಕುಡಿ ನಾಲಗೆ
ಯಳವೆನೆ ಬೋರ್ಗರೆಯಿಸುತ ।
ಮುಳಿದು ಬಾಣದ ಸು ಭಟರು ಮುಂದು ವರಿದಾಗ
ಸಲೆ ತುರುಕರನಟ್ಟಿದರು ॥ ೫೩

ಬಿರುದಿನ ಸಬಳದ ಭಟರು ಹಿನ್ನೆಲೆಗಾಗ
ಹೆರದೆಗೆಯದೆ ಹೆಜ್ಜೆಗಳ ।
ಧುರ ಮಂಡಲದೊಳಿರಿದಾಡಿ ಪೌರುಷವೆನು
ಪರಪಿದರೇನ ಬಣ್ಣಿಸುವೆ ॥ ೬೪

ಹೂಡಿ ಮಂಡಿಯು ಕಿವಿ ವರೆಗೆ ಕರಾಂಗುಲಿ
ಗೂಡಿ ಬಾಣವ ತೂಗಿ ಬಿಡುತ ।
ಕೂಡೆ ವೈರಿಗಳ ಕೆಡಹಿ ಪತಿ ರುಣವ ನೀ
ಗಾಡಿದರಧಟ ಬಿಲ್ಲವರು ॥ ೬೫

ಕುದುರೆಯ ರಾಯ ರಾವುತರು ಖೋ ಯೆನುತಾಗ
ಮೆದವೇರಿ ಮುಂದುರವಣಿಸಿ ।
ಸದೆಯುತ ಖಾನ ಖಾನರ ವೊರ್ಬಲಗಳ
ನೆದೆಗೆಡಿಸಿದರುಬ್ಬಿನಲಿ ॥ ೬೬

ದುರಗಲಿ ದಳವಾಯಿ ನಂಜ ರಾಜೇಂದ್ರನ
ಬಿರುದಿನ ಭಟರುಪಟಳಕೆ ।
ಹೆರೆದೆಗೆದೋಡುವ ಖಾನರ ಕಂಡಾಗ
ಜರೆದು ಮುಸ್ತಾಪನೈದಿದನು ॥ ೬೭

ಒಂದುಬ್ಬಿನಲಿ ಹತ್ತು ಸಾವಿರ ಕುದುರೆಯ
ಸಂದಿಸಿ ತುರುಕ ರಾವುತರು ।
ಮುಂದುವರಿದು ಮೂದಲಿಸಿ ಮುತ್ತಿದರಿ
ವೈಂದವೆನೇನ ಬಣ್ಣಿಸುವೆ ॥ ೬೮

ಕಂಡನು ನಿಮಿಷದೆ ರಿಪು ರಾಜ ನಿಕರ ವೇ
ತಂಡ ಕಂಠೀರವೇಶ್ವರನ ।
ಚಂಡ ವಿಕ್ರಮ ದಳ ಪತಿ ನಂಜೇಂದ್ರ ಮುಂ
ಕೊಂಡುರುಬಿದ ಖಳ ಬಲವ ॥ ೬೯

ಒಡನೆ ಕಬ್ಬಕ್ಕಿವಿಂಡನು ಕಂಡೆರಗುವ
ಕಡುಗಲಿ ಸಾಳ್ವನೆಂದದಲಿ ।
ಬಿಡದಾಗ ಶೌರ್ಯ ವರ್ಧನ ನಂಜ ರಾಜೇಂದ್ರ
ತುಡುಕಿದ ತುರುಕರ ಬಲವ ॥ ೨೦

ತೆಗೆ ತೆಗೆ ನಮ್ಮಯ ಚೂಣಿಯ ಬಲವೆನು
ಹೊಗಗೊಡ ಬೇಡವೆಂದೆನುತ ।
ಮಿಗೆ ದಳ ಪತಿ ತುರುಕರ ಒಲ ವಾರ್ಧಿಯ
ವೊಗೆದನೇ ವೇಳ್ವನದ್ಭುತವ ॥ ೨೧

ವೊಳಗುವ ರಣ ವಾದ್ಯ ರಭಸ ಕಾಲಾಳ್ಗಳ
ಕಳಕಳ ಹಯ ನಿಕರಗಳ ।
ಬಲು ಶರ ಪುಟಿಗಳಬ್ಬರ ಖಳ ಬಲವೆನು
ಸಲೆ ಭೀತಿಗೊಳಿಸಿದುವೆಂದು ॥ ೨೨

ಸಿಡಿಲುರುಬೆಗೆ ಸೆಡೆಯದೆ ಸಿಂಹದ ಮೆರಿ
ತುಡುಕಿವೆಲ್ವಾಯ್ವುವೆಂದದಲಿ ।
ಕಡುಗಲಿ ನಂಜೇಂದ್ರ ಮುಸುಕಿದ ತುರುಕರ
ಪಡೆಯನಿರಿದನುಬ್ಬಿನಿಂದ ॥ ೨೩

ವಾರುವಗಳ ಬೀಳಲಿರಿದು ರಾವುತರನು
ಸೇರಲು ಯಮನ ಪಟ್ಟಣಕೆ ।
ಕೂರಸಿಯಲಿ ಸಿರಗಳ ಖಂಡಿಸುತಾಗ
ತೋರಿದ ಒಲು ಪರಾಕ್ರಮವ ॥ ೨೪

ಎಡದಲೊದಗಿ ಮುಸುಕಿದ ರಾವುತರ ವೆಂ
ಗಡವನು ಕಡಿದರೆಯಟ್ಟಿ ।
ತುಡುಕಿ ಮುಂಗಡೆಯೊಳುರುಬಿದರಿಗಳ ಕುಟ್ಟಿ
ಕೆಡಹಿದ ನಂಜ ರಾಜೇಂದ್ರ ॥ ೨೫

ಮುಳಿದು ದಕ್ಷಿಣದೆ ಮುಂಬರಿವೆ ಖಾನರುಗಳ
ತಲೆಯನರಿದು ಚಂಡಾಡಿ ।
ಸಲೆ ನಾಲ್ಕು ದೆಸೆಯು ವೋಹರವನೆಲ್ಲವ ಕಾರ
ಗಲಿಸಿ ಯೋಡಿಸಿದನೇ ವೇಳ್ವ ॥ ೩೬

ಛಲರೆ ಭೂಪುರೆ ಕಲಿಗಳ ನುಣ್ಣಿಸಲಿನ
ತಿಲಕ ಸಾಹಸ ವಿಕ್ರಮಾರ್ಕ ।
ವಿಲಸಿತ ಶೌರ್ಯ ವರ್ಧನನೆಂದು ಸುಮನಸ
ರೊಲಿದು ಕೊಂಡಾಡಿದರಾಗ ॥ ೩೭

ಕದಳಿಯ ವನಕೆ ಕಾಡಾನೆ ಪೊಕ್ಕಂದದೆ
* ಕದಡಿದನುರೆ ರಿಪು ಬಲವ ।
† ಮೆದಧೀರ ನಂಜೇಂದ್ರಗೆಣೆಯಿರುವರ ‡ ತ್ರಿಜ
ಗದಲಿ ನಾ ಕಾಣೆನೇ ವೇಳ್ವ ॥ ೩೮

ಕರುಳು ಪರಿದು ಕಾಳಿಜವೊಕ್ಕು ಬಿಸಿ ರಕ್ತ
ಸುರಿದು ಕೈ ಕಾಲುಗಳ್ಮುರಿದು ।
ಉರುಳಿತು ತುರುಕರ ಬಲ ರಣ ಮೆಂಡಲ
ದಿರವೆ ನಾನೇನ ಬಣ್ಣಿಸುವೆ ॥ ೩೯

ಅದಟಿಂದ ಕಾಲ ಭೈರವನ ಪರಾಕ್ರಮ
ದದುಭುತವೆನು ಮೆರೆವಾಗ ।
ಇದಿರು ಗಾಯದೆ ಪೂತ ಮುಳ್ಮತ್ತುಗದಂತೆ
ಕದನದೆ ನಂಜೇಂದ್ರ ಮೆರೆದ ॥ ೪೦

ವರ ವಿಮಾನದೆ ಪುರ ಹರ ನಂಜ ರಾಜನ
ದುರಗಲಿತನವ ಕಂಡಾಗ ।
ಗಿರಿಜೆಗೆ ತೋರಿ ನಾನೀತಗೆ ಸಾಯುಜ್ಯ
ಪರವೆ ಪದವನೀವೆನೆಂದ ॥ ೪೧

---

* ಕಲಕಿದನರಿಪ್ರು. † ಧುರಧೀರ. ‡ ತ್ರಿಜಗದೊಳಗೆ.

ಎನುತಾಗ ರಣ ಮಂಡಲಕ್ಕೈದಿ ಹರ ತನ್ನ
ಘನ ಮೂರ್ತಿಯ ತೋರುತವೆಗೆ ।
ನಿನಗೆ ಬೇಕಾದ ವರವನೀವೆನೆಂದೆನೆ
ಚಿನುಮಯ ರೂಪಗಿಂತೆಂದ ॥ ೮೦

ದೇವ ಪಾರ್ವತಿಯ ಪ್ರಾಣೇಶ ಪಾವನ ಮೂರ್ತಿ
ಭಾವಜ ಹರ ಭವ ದೂರ ।
ತೀವಿದ ಕರುಣಾರ್ಣವ ಭಕ್ತ ಜನ ಸಂ
ಜೀವ ಸರ್ವೇಶ್ವರ ಶರಣು ॥ ೮೧

* ನಿರಪಾಯ ನಿರ್ಲೇಪ ನಿಷ್ಕಳ ನಿಗಮಾಶ್ವ
ನೆರೆ ರೇವಂತ ನಿಶ್ಚಿಂತ ।
ಸರಸಿಜ ಸಖ ಕೋಟಿ ತೇಜ ಕೃಪಾಕರ
ಪರಿಪಾಲಿಸೆನ್ನ ಬಿನ್ನಪವ ॥ ೮೨

ವರವ ಪಾಲಿಪುದುಂಟಾದೊಡೆನ್ನೊಡೆಯಗೆ
ಸ್ಥಿರ ಸಾಮ್ರಾಜ್ಯ ಸಂಪದವ ।
ಪಿರಿದು ಸಂತಾನಾಭಿವೃದ್ಧಿ ಚಿರಾಯುವ
ಕರುಣಿಸಿ ಸಲಹು ನೀನೆಂದ ॥ ೮೩

ಒಡನೆ ನಿನ್ನಯ ಪಾದಾರವಿಂದದೊಳನ್ನ
ನಡಗಿಸಿ ಜನ್ಮ ಪಾಶಗಳ ।
ತೊಡಕ ಪರಿದು ಸಲಹೆಂದಾ ಪರ ಶಿವ
ನಡಿಗೆರಗಿದನೇ ವೇಳ್ವ ॥ ೮೪

ಸ್ವಾಮಿ ಕಾರ್ಯ ಧುರಂಧರನ ವಾಕ್ಯಕೆ ಮೆಚ್ಚಿ
ರಾಮಣೀಯಕ ಮೂರ್ತಿ ನಲಿದು ।
ಪ್ರೇಮದಿಂದಿಷ್ಟಾರ್ಥವಿತ್ತು ವಿಮಾನದೊ
ಳಾ ಮಹಿಮನ ಕೊಂಡೊಯ್ದ ॥ ೮೫

---

* ನಿರವಯ.

ಹರುಷದೆ ಕೈಲಾಸ ಪುರದೆ ನಂಜೇಂದ್ರನ
ಮೆರಿಸಿ ಮನ್ಮಥ ಹರ ನಗುತ ।
ಸುರರು ಪೂ ಮಳೆಗರೆಯಲು ಸಾಮ್ರಾಜ್ಯದ
ಸ್ಥಿರ ಪದವಿಯ ಕರುಣಿಸಿದ ॥ ೪೪

ಇತ್ತಲಾ ದುರಗಲಿ ನಂಜೇಂದ್ರ ಶಿವ ಲೋಕ
ದತ್ತೈದಿದ ವಾರ್ತೆಯನು ।
ಮತ್ತಾಗ ಚರರು ಕಂಠೀರವ ನರಸ ಭೂ
ಪೋತ್ತಮಗರುಹಿದರಾಗ ॥ ೪೫

* ಪೇಳಲಾ ನಂಜೇಂದ್ರ ದುರದೊಳಗೆಸಗಿದ
ಕೋಲಾಹಲದೇಳ್ಗೆಯನು ।
ಕೇಳಿ ಕೊಂಡಾಡಿ ಮಂತ್ರಿಗಳೊಳು ನರಸ ಭೂ
ಪಾಲನಿಂತೆಂದನೇ ವೇಳ್ವೆ ॥ ೪೬

ನೆರೆ ನಮ್ಮ ಕಾರ್ಯವ ಕುರಿತು † ತಾಂ ಹರಣವ
ನಿರದೆ ‡ ವೆಚ್ಚಿಸಿದನೀ ಶೂರ ।
ಧರೆಯೊಳು ನರರೊಳಗೀತಗೆ ಸರಿಯುಹ
ದುರಗಲಿಗಳ ಕಾಣೆನೆಂದ ॥ ೪೭

ಪಿರಿಯ ಪಟ್ಟಣ ಸಾಂಬಳ್ಳಿ ಮೊದಲಾಗಿಹ
ಗಿರಿ ದುರ್ಗ ಜಲ ದುರ್ಗಗಳು ।
ನೆರೆ ಯಿತನಿಂ ನಮ್ಮ ವಶವಾದುವಿವನಿಗೆ
ಸರಿಯಾರುಂಟು ಲೋಕದಲಿ ॥ ೪೮

ಇಳೆಗೆ ವೆಗ್ಗಳವಾದ ಮಧುರೆಯ ಭೂಪನ
ತಳತಂತ್ರವ ಮುರಿಯಿರಿದು ।
ಸಲೆ ಜಯ ವಧುವ ನಮಗೆ ಸೇರಿಸಿದನೀ
ದಳವಾಯಿ ನಂಜ ರಾಜೇಂದ್ರ ॥ ೪೯

---

* ಆಗಲಾನಂಜೇಂದ್ರ. † ತನ್ನ. ‡ ವೆಚ್ಚಿಸಿದಕೂರನನು.

ಅಸಹಾಯ ಶೂರ ಧೈರ್ಯದೆ ಪರಾಕ್ರಮೆ ಧೀರ
ನಸಮೆ ಕೀರ್ತಿಯ ವಿಸ್ತಾರ ।
* ಜಸದ ಕಾರ್ಯಕೆ ಧುರಂಧರ ನಂಜ ರಾಜೇಂದ್ರ
† ರಸೆಯ ತೊರೆದು ಪ್ರೋದನಿಂದು ॥ ೯೪

ಎಂದು ಬಣ್ಣಿಸಿ ಕಂಠೀರವ ನರಸೇಂದ್ರ
ನಂದು ಮಂತ್ರಿಗಳೊಳು ನುಡಿದು ।
ಮುಂದಣ ದಳ ಪತಿ ತನವೆ ಲಿಂಗೇಂದ್ರನಿ
ಗಂದು ಕೊಡುವೊಡಜ್ಜ ಗಿಸಿದ ॥ ೯೫

ವರ ಶುಭ ಲಗ್ನದೆ ದಳವಾಯಿ ಪಟ್ಟವ
ವಿರಚಿಸಿ ಲಿಂಗ ರಾಜನಿಗೆ ।
ಪರಿವಾರನನಿತ್ತು ಬೇಗ ಕಂಠೀರವ
ನರಸ ರಾಜೇಂದ್ರ ಮನ್ನಿಸಿದ ॥ ೯೬

ಒಡೆಯನೆಡೆಯೊಳತಿ ಭಯ ಭಕ್ತಿಯೊಳಂದು
ಕಡುಗಲಿ ಲಿಂಗ ರಾಜೇಂದ್ರ ।
ಪೊಡವಿಯ ಪ್ರಜೆ ಪರಿವಾರವ ಮನ್ನಿಸಿ
ನಡಿಸಿದನತುಳ ಧರ್ಮದಲಿ ॥ ೯೭

ಬಾಲೇಂದು ಕಲೆ ‡ ದಿನ ದಿನಕತಿಶಯವಾಗಿ
ಮೇಲೆ ವರ್ಧಿಪ ತೆರದಂತೆ ।
ಭೂ ಲೋಲ ಲಿಂಗೇಂದ್ರ ಶೌರ್ಯ ಸೌಭಾಗ್ಯ ಸಂ
ದೇಳಿಗೆಯೊಳಗೆ ರಂಜಿಸಿದ ॥ ೯೮

ಇಂತೊಪ್ಪುವ ದಳ ಪತಿ ಗೂಡಿ ನರಸ ಭೂ
ಕಾಂತನು ಸಂತಸದೊಳಗೆ ।
ಸಂತೋಷದಲಿ ಪಾಲಿಸುತಾಗ ವರ ಜಯ
ಕಾಂತಗೆ ಲೋಲನಾಗೆಸೆದ ॥ ೯೯

---

* ಪತಿಕಾರ್ಯಕೆ. † ಕ್ಷಿತಿಯ. ‡ ಪಾ. ಬರುಬರುತತಿಕಯ.

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೦೦

*

ಗ್ನೆಯ ಸಂಧಿ ಸಮಾಪ್ತಂ.

---

* ಪೊಡವಿಪ ದಳವಾಯಿ ನಂಜ ರಾಜೇಂದ್ರ ತ
ನ್ನೊಡೆಯನ ಶೌರ್ಯದೇಳಿಗೆಯ ।
ಗಡಣವ ಚರಿತೆಯಾಗೊಲಿದು ಪೇಳಿಸಿದನು
ಕಡುಗಲಿಗಳು ಲಾಲಿಪುದು ॥

ಇಪ್ಪತ್ತನೆಯ ಸಂಧಿ

ಮಹಾ ನವಮಿಯ ಪುರ ಶೃಂಗಾರ

ಸೂಚನೆ॥ ದೊರೆ ರಾಯ ನರಸೇಂದ್ರನ ಮಹಾ ನವಮಿಯ
ಪುರದುತ್ಸವವ ಬಣ್ಣಿಸುವ ॥

ಇಳೆಯಾಣ್ಮ ಕಂಠೀರವೇಂದ್ರ ಸುಧರ್ಮವ
ತಳೆದಾಳುತಿರೆ ಕನ್ನಡವ ।
ವಿಲಸಿತವೆಹ ಶರತ್ಸಮಯ ಸಂತೋಷವ
ಸಲೆ ಸೂಸುತೈತಂದುದಾಗ ॥ ೧

ಇಳೆಯೊಳೂಪ್ಪುನ ಹೊಳ ಕೆರೆ ತೊರೆಗಳೊಳಾ
ಸಲಿಲ ನಿರ್ಮಲವಾದುವಾಗ ।
ಬೆಳಗಿನಲಿನ ಶಶಿ ಕಿರಣಗಳ್ ಶುಭ್ರವ
ತಳೆದು ರಂಜಿಸಿದುವರ್ತಿಯಲಿ ॥ ೨

ದಿಟ್ಟವೆಧುಗಳ ಮೇಲುದು ಜಾರಿ ಪೋಗಲು
ಬಟ್ಟ ಕುಚಗಳು ಕಾಣ್ಬಂತೆ ।
ದಿಟ್ಟಗೆ ಕಡು ರಮ್ಯಮೊ ಭೂ ಧರಗಳು
ಕಟ್ಟೆಸಕದೊಳೂಪ್ಪಿದುವು ॥ ೩

ಧರಣಿ ಮೆಜ್ಜನ ಗೈದು ನರಸ ರಾಜೇಂದ್ರನ
ವರಿಸ ಬೇಕೆಂದು ಸಂತಸದೆ ।
ಆರಸಿನವನ್ನು ತಿಗುರಿದೊಲು ರಮ್ಯದೆ
ಮೆರೆದುವು ಶಾಲಿ ಕ್ಷೇತ್ರಗಳು ॥ ೪

ಶಶಿ ಕಿರಣಗಳ ಶುಭ್ರಕೆ ವನ ವಿಸರದೊ
ಳಸೆವ * ವೃಕ್ಷದ ನೆಳಲುಗಳ ।
ಪೊಸಕಗ್ಗಲ್ಲುಗಳೂಸರವು ಕಣ್ಣಿ ರಾ
ಜಿಸಿದುದನೇನ ವರ್ಣಿಸುವೆ ॥ ೫

ಇಂತೊಪ್ಪುತಿಹ ಶರದೃತು ಸಮಯದೆ ಭೂ
ಕಾಂತ ಕಂಠೀರವೇಶ್ವರಗೆ ।
ಸಂತೋಷವರಿಪುತ ಮಾನವಮಿ ವಿಭವವೆ
ತ್ಯಂತ ಸೌಖ್ಯದೆ ಬಂದುದಾಗ ॥ ೬

ಬಳಿಕ ಜೋಯಿಸರಂದು ಸುಮುಹೂರ್ತದೊಳು ಲಗ್ನ
ಗಳ ಪೇಳ ಹರುಷವೆ ತಳದು ।
ಇಳಯಾಣ್ಮ ಕಂಠೀರವ ರಾಜ ತನ್ನಯ
ದಳಪತಿಗೊಡನೆ ನೇಮಿಸಿದ ॥ ೭

ಬರಿಸು ನಾನಾ ದೇಶದ ಚಿತ್ರಗೆಲಸದ
ವರ ವಿಶ್ವಕರ್ಮ ಸಂತತಿಯ ।
ಹರುಷದೆ ಪಟ್ಟಣವನು ಸಿಂಗರಿಸೆಂ
ದರಸ ನೇಮಿಸಿದನರ್ತಿಯಲಿ ॥ ೮

ಕಾಣಿಕೆ ಯುಡುಗೊರೆ ಯುಲುಪೆ ಸಹಿತವೀ
ಹ್ಪೋಣಿಯೊಳಸೆವ ಭೂಮಿಪರು ।
ಮಾಣದೆ ಬರಲೆಂದು ಸಂತೋಷದಿಂದಾಗ
ಳೀಣಾಂಕ ಕುಲಜ ನೇಮಿಸಿದ ॥ ೯

ಬರಲಿ ನಾವಾಳುವ ರಾಜ್ಯದ ಮನ್ನೆಯ
ರರಸು ಮಕ್ಕಳು ನಾಯಕರು ।
ತರಲಿ ಜಾಳಿಗೆ ಪೂಜೆಗೆ ಪೊನ್ನ ಬಹು ವಸ್ತು
ವೆರಸಿ ರಾಜಿಸುವುಲುಪೆಗಳ ॥ ೧೦

---

* ವೃಕ್ಷಗಳ ।

ಎನಲು ಹಸಾದವೆನುತ ದಳಪತಿಯಾಗ
ಘನ ಹರುಷದಲಿ ಪಟ್ಟಣದ ।
ವಿನುತನೆನಿಪ ಲಿಂಗೆಯಗೌಡಗೆ ಪೇಳಿ
ದನುವೆ ನಾನೇನ ಬಣ್ಣಿಸುವೆ ॥ ೧೧

ಪೊಡವಿಯೊಳಿರುವ ಚಿತ್ರಿಕ ವಿಶ್ವಕರ್ಮರ
ಕಡು ಬೇಗದಲಿ ನೀ ಕರಿಸಿ ।
ಬಿಡದೆ ಪಟ್ಟಣವೆ ಸಿಂಗರಿಸೆಂದು ದಳಪತಿ
ಸಡಗರದಲಿ ನೇಮಿಸಿದ ॥ ೧೨

ಓಲಗಶಾಲೆಯಾಯುಧದ ಪೂಜಾ ಗೃಹ
ಮೇಲಾದ ಹಯಗಳ ಲಾಯ ।
ಲೀಲೆಯ ಮೆದ ಕರಿಗಳ ಮಂದಿರ ಚೆಲ್ವ
ದೋಳಿ ಸಿಂಗರವಾಗಲೆಂದು ॥ ೧೩

ಜೀಯ ನಿರೂವೆನುತ ಲಿಂಗೆಯಗೌಡ
* ನ್ಯಾಯೋಕ್ತಿಯಲಿ ಪಟ್ಟಣವ ।
ಆಯತದಲಿ ಸಿಂಗರಿಸಿದ ಬಹುಳೋ
ಪಾಯವನೇನ ಬಣ್ಣಿಸುವೆ ॥ ೧೪

ಬೀದಿ ಬೀದಿಯೊಳು ಪನ್ನೀರ ಚಳೆಯ ದಿವ್ಯ
ಸಾದು ಕಸ್ತೂರಿಯ ಸಾರಣೆಯ ।
ವೇದದಿಂಟಿನ ಸೌರಭ್ಯ ಪಾಂಥರಿಗಾ
ಹ್ಲಾದವನೊಲಿದು ಬೀರಿದುವು ॥ ೧೫

ಮನೆ ಮನೆಗಳ ಬಾಗಿಲ ಪೊನ್ನ ಕುರುಜುಗಳ್
ಘನ ಮಂಡಲವನಡರ್ದಾಗ ।
ದಿನ ಕರ ಕಿರಣದೊಡನೆ ತರ್ಕಿಸಿ ತಮ್ಮ
ವಿನುತ ಪ್ರಭೆಯ ಬೀರಿದುವು ॥ ೧೬

* ಪ್ರಿಯೋಕ್ತಿ

ಹಿಂಗದೆ ಸಾಲುಗೊಂಡಿಹ ಪ ರರ ಹೊಳ
ವೆಂಗಳಗಳ ಬಾಗಿಲೊಳಗೆ ।
ರಂಗುವೆಡೆದ ಪವಳದ ತೋರಣದ ಕಾಂತಿ
ಕಂಗೊಳಿಸಿದುವು ಬೀದಿಯಲಿ ॥ ೧೫

ಅಗಿಲು ಸಾಂಬ್ರಾಣಿಯ ಧೂಪ ವಾಸನೆ ನೆರೆ
ನಿಗುರಿತು ಗಗನ ಮಂಡಲಕೆ ।
* ನಗಗಳಂತಕ ಮುಖ್ಯ ಸುರರ ವಿಮಾನವೆ
ಮಿಗೆ ತಡೆದಡ್ಡಗಟ್ಟಿದುವು ॥ ೧೪

ಸಾಲುಗೊಂಡೆಸೆವ ಮಕರ ತೋರಣ ರತ್ನ
ಜಾಲದ ಕುರುಜುಗಳಿಂದ ।
ಓಲಗ ಶಾಲೆ ಸಂಭ್ರಮದೆ ಚರಿಸುತಿಹ
ರಾಲಿಗಚ್ಚರಿಯು ಬೀರಿದುದು ॥ ೧೯

ರಥ ಕುರುಜುಗಳೊಳಗೆಸೆವ ಪಟಗಳು ಮೊ
ರುತನಲೆಗೊಲೆದಾಡುತಿರಲು ।
ನುತಿಸಲೋಲಗ ಸಿರಿ ಕೈ ನೀಡಿ ನಿರ್ಜರ
ತತಿಯ ಕರೆವೊಲೊಪ್ಪಿದುವು ॥ ೨೦

ಕುರುಜು ಕುರುಜೆನಗ್ರದೊಳಗೆತ್ತಿ ರಾಜಿಪ
ಸುರಮಾಯಿ ಹಳದಿ ಕೆಂಪುಗಳ ।
ಬಿರುದಿನ ಪಲ್ಲವ ಸತ್ತಿಗೆ ಮೆರೆದುವು
ಪರಿಕಲಿಸುತ ದಿವ್ಯಪ್ರಭೆಯ ॥ ೨೧

ಅಲ್ಲಲ್ಲಿ ರಾಜಿಪ ಕುರುಜುಗಳಗ್ರದೆ
ಸಲ್ಲಲಿತದ ಹೊನ್ನ ಕಳಸ ।
ಉಲ್ಲಾಸದಲಿ ತಮ್ಮ ಪ್ರಭೆಗಳ ಚೌದೆಸೆ
ಯಲ್ಲಿ ಬೀರಿದುವೇ ವೇಳ್ವ ॥ ೨೨

---

* ನಗಕುಲಾಂತಕ.

ತಳತಳಿಸುವ ಕುರುಜುಗಳಗ್ರದಿಂದಿಳಿ
ದಿಳಯ ಸೋಂಕುವ ದುಂಡು ದೋಳು ।
ಬೆಳಗುತ ಪಾತಾಳದ ಫಣಿಪನ ಫಣಾ
ವಳಯ ರತ್ನವ ಪಳಚಿದುವು ॥ ೨೩

ನಳನಾರಿ ಕೋಟಿ ರೂಪನು ತಾಳಿ ಭೂ ತಳ
ಕಿಳಿದು ಕಂಠೀರವೇಶ್ವರನ ।
ಹೊಳಯುವೋಲಗ ಶಾಲೆಯ ನಿಟ್ಟಿಪಂದದೆ
ತಳಗೆ ತೋರಣಗಳೂಪ್ಪಿದುವು ॥ ೨೪

ದೊರೆ ರಾಯ ನರಸ ರಾಜೇಂದ್ರನೋಲಗದ ಬ
ಲ್ಸಿರಿಯ ಸಂಭ್ರಮವ ನೋಡುವೊಡೆ ।
ತರಣಿ ಪಲವು ರೂಪ ತಾಳಿಯೈತಂದೊಲು
ಮೆರೆದುವು ಕನ್ನಡಿ ಕಳಸ ॥ ೨೫

ಶ್ರೀ ಪತಿಗೊಪ್ಪುವ ತಾಣವಿಡಿದು ಪುಷ್ಪ
ಚಾಪನೋಲಗ ಶಾಲೆಯಂತೆ ।
ರೂಪುವಿಡಿದ ಹೊನ್ನ ಪುತ್ತಳಿಗಳ ಕಾಂತಿ
ವ್ಯಾಪಿಸಿದುವು ಚತುರ್ದೆಸೆಯ ॥ ೨೬

ಖವಿಖವಿಸುವ ಸೂರ್ಯ ಪುಟದ ಮೇಲ್ಕಟ್ಟಿದ
ನವ ರತ್ನಗಳ ಪೆರ್ಚಿಸಿದ ।
ಪವಳ ವರ್ಣ್ಣದ ಲೋವೆಗಳಿಂದೊಪ್ಪಿತು
ಭುವನೇಶನೋಲಗ ಶಾಲೆ ॥ ೨೭

ಮುತ್ತಿನ ಸೂಸಕ ವೈಡೂರ್ಯದ ಬಲು
ಭಿತ್ತಿ ಪಚ್ಚೆಯ ಸಾಲು ಗಂಭ ।
ಇತ್ತರದೊಳಗಾಸ್ಥಾನ ಮಂಟಪದೊಳು
ಬಿತ್ತರದೊಳಗೊಪ್ಪಿದುವು ॥ ೨೮

ಕೋಗಿಲೆ ಗಿಳಿ ರಥಾಂಗಗಳಂಚೆ ಪಾರಿವೆ
ಸೋಗೆ ನವಿಲ ಸೊಬಗಿಂದ ।
ಆಗಲಾಸ್ಥಾನ ಮಂಟಪ ರಾಜಿಸಿತು ಚೆ
ಲ್ವಾಗಿ ಚೈತ್ರನ ಶಾಲೆಯಂತೆ ॥ ೮

ಅಂತರಾಂತರದ ಮಂಟಪದೆ ಸುರೇಶನ
ಸಂತತ ಕ್ರೀಡಾ ವನದ ।
ಸಂತಾನದ ಫಲ ವಸ್ತು ರಾಜಿಸಿ ದಿವ್ಯ
ಕಾಂತಿ ಸೌರಭವ ಬೀರಿದುವು ॥ ೯

ಹೊಳವೆ ಪೊಂಬಾಳಯ ಕಂಬ ಚೌದೆಸೆಯೊಳು
ಕಳೆ ವಣ್ಣ ಸಹಿತೊಪ್ಪುತಿರಲು ।
ಗಳಿ ಕರ್ದುಂಕಿದೊಡನಿ ರಸ ಧಾರೆ ಭೂಮಿಗೆ
ಚಳಯವಾಗೊಪ್ಪಿದುವಾಗ ॥ ೧೦

ಮೆದನ ದಿಗ್ವಿಜಯಕ್ಕೈದುವೆನೆಂದು ಧನುಗಳ
ಮುದದೆ ಪೂಜಿಸೊಡಿಟ್ಟಂತೆ ।
ಒದಗಿದ ಧವಳೇಹ್ಷು ದಂಡವೋಲಗದ ಚೌ
* ಸದನದೆ ಪೂಗಳೊಪ್ಪಿದುವು ॥ ೧೦

ಮರುಗ ಮಲ್ಲಿಗೆ ಕೆಂಜಾಜಿ ಸಂಪಿಗೆಗಳ
ಪರಿಮಳ ಪುಷ್ಪದ ಮಾಲೆ ।
ಮೆರೆದುವು ನಾನಾ ಬಗೆಯ ಬಂಧದೊಳಾಗ
ಪಿರಿದೋಲಗ ಶಾಲೆಯೊಳಗೆ ॥ ೧೧

ಒಡನೆ ಚೌದೆಸೆಯಲಿ ಸೂಳಯರಾಡುವ
ಕಡು ಚೆಲ್ವ ರಾಟಾಳಗಳು ।
ಬಿಡದೆ ನೋಡುವರಕ್ಷಿಗಳಿಗೆ ಚೋದ್ಯನ ಬೀರಿ
ತುಡುಕಿದುವಾಗಸಗಳನು ॥ ೧೨

* ಸದನ ಪೂಗಳೊಳೊಪ್ಪಿದುವು.

ಸುರ ನಾರಿಯರೊಲಗಕ್ಕೆ ತರುವೊಡೆ
ಸುರ ವೈದ್ಯಕಿ ವಿರಚಿಸಿದ ।
ಸು ರುಚಿರ ದಿವ್ಯೆ ವಿಮಾನಗಳನಲಾಗ
ಮೆರೆದುವು ರಾಟಾಳಗಳು ॥ ೫೫

ಬಿಡುಗಣ್ಣ ಹೆಂಗಳ ಸೊಬಗ ನಿಟ್ಟಿಸುವೊಡೆ
ಯೊಡನೆ ರಾಜಿಸುವ ಭೂತಳದ ।
ಮಡದಿಯರಂಬರಕಡರ್ವ ಪುಷ್ಪಕಗಳ
ಬೆಡಗ ಬೀರಿದುವು ರಾಟಾಳ ॥ ೫೬

ಪಟ್ಟದ ರಾಣಿಯರೈದಿಯೊಲಗವನು
ನಿಟ್ಟಿಸುವೂಡೆ ಸಿಂಗರದ ।
ಕಟಕೋಟಿ ಮುತ್ತಿನ ನೆಲೆ ವಾಡ ಗಗನವ
ಮುಟ್ಟಿದುವೇನ ಬಣ್ಣಿಸುವೆ ॥ ೫೭

ಹೇಮಾದ್ರಿ ತಟವ ಬಳಸಿದ ಕೀಲಕ ಗಿರಿ
ಸ್ತೋಮ ರಂಜಿಸಿ ಮೆರೆವಂತೆ ।
ಪ್ರೇಮದೊಳಸೆದುವು ನಾಟಕ ಶಾಲೆಯ
ಕಾಮಿನಿಯರ ಸೆಜ್ಜೆಗಳು ॥ ೫೮

ಅವರಂತರದೆ ಭೋಗ ಯುವತಿಯರೈತಂ
ದವನೀಶ್ವರನೊಲಗವ ।
ತವಕದೊಳ್ನಿಟ್ಟಿಪ ಚಂದ್ರಶಾಲೆಯ ದಿವ್ಯೆ
ಭವನವೊಪ್ಪಿದುವರ್ತಿಯಲಿ ॥ ೫೯

ಗಜ ಶಾಲೆ ಹಯಗಳ ಲಾಯ ದಿವ್ಯಾಯುಧ
ವ್ರಜವ ಪೂಜಿಪ ಭದ್ರ ಭವನ ।
ರಜತ ಸುವರ್ಣ ರತ್ನದ ಕಾಂತಿಯಿಂ ನೆರೆ
ತ್ರಿ ಜಗಕಚ್ಚರಿಯ ಬೀರಿದುವು ॥ ೬೦

ದೆಸೆ ದೆಸೆಯಿಂದ ಕಾಣಿಕೆ ವೆಸ್ತು ಸಹ ಬಹ
ವಸುಮತೀಕರಿಗೆ ಬೀಡಾರ ।
ಮಿಸುನಿಯ ಮೇಲ್ಕಟ್ಟು ಚಪ್ಪರದಿಂದಲಾ
ಜಸವಡೆದುವು ಪುರದೊಳಗೆ ॥ ೪೧

ಉಲುಪೆಯ ಮನೆಯುಗ್ರಾಣದ ಸರಕುಗಳ್
* ಸಲೆ ದಧಿಘೃತ ತೈಲ ವಾಪಿ ।
ವಿಲಸಿತದುಡುಗೊರೆಗಳ ಬೊಕ್ಕಸದ ಗೃಹ
ನಲವುದೋರಿದುವಾ ಪುರದೆ ॥ ೪೨

ಬಳಿಕ ಚಪ್ಪನ್ನ ರಾಷ್ಟ್ರದ ಚೋದ್ಯ ವಿದ್ಯದ
ವಿಳಸಿತರಹ ಸೂರಿಗಳಿಗೆ ।
† ಇಳಿವ ಬೀಡಾರಗಳರ್ತಿಯೊಳ್ಪುರದೊಳ
ಗಳವಟ್ಟುಮೆರೆದುವೇ ವೇಳ್ವ ॥ ೪೩

ದಿನಚರಿಯಗಣಿತ ಭೂ ಸುರ ನಿಕರಕೆ
ಮನ ದಣಿವೆನ್ನ ಮೃಷ್ಟಾನ್ನ ।
ಕನುವಾದ ಭೋಜನ ಶಾಲೆ ಪಾಕದ ಗೃಹ
ಘನವಾದ ಸೊಬಗ ಬೀರಿದುವು ॥ ೪೪

ವೀರ ವೈಷ್ಣವರಿಗೆ ಬುಧರಿಗೆ ಬಯಸಿದ
ಚಾರು ರಾಮಾಂಜಿ ಕೂಟಗಳ ।
ಮೇರೆಯಿಲ್ಲವೆ ಭೋಜನ ಶಾಲೆ ಮೆರೆವ ವಿ
ಸ್ತಾರವನೇನ ಬಣ್ಣಿಸುವೆ ॥ ೪೫

ವರ ಮಹತ್ತಿನ ಹಿರಿಯರು ಮತ ಪತಿಗಳ್ಗ
ಪರಮ ವಿರತರ ನೆರವಿಗೆ ।
ಪರಿಪೂರ್ಣ ದಾಸೋಹದ ಗೃಹ ಮೆರೆದಿಹ
ಸಿರಿಯ ಸಂಭ್ರಮವನೇನೆಂಬೆ ॥ ೪೬

---

* ದಧಿಘೃತತೈಲದಕಣಜ. † ಎಸೆವಬೀಡಾರಗಳ್ಪುರದೊಳಗಳವಟ್ಟು ಮೆರೆದುವರ್ತಿಯೊಳೇನವೇಳ್ವೆ.

ಜೋಗಿ ಜಂಗಮ ದರವೇಸಿಗಳಿಗೆ ನೆರೆ
ಮೂಗ ಬದಿರರಂಧಕರಿಗೆ ।
ಬೇಗದೆ ಹೆಡಗೆ ಹೆಡಗೆಯೊಳನ್ನವನೀವ
ರಾಗದ ಭವನವೊಪ್ಪಿದುವು ॥ ೪೩

ಪೊಡವಿಯೊಳತಿ ಶೂರ ಸಾಧನೆಗಳ ಮೆಲ್ಲ
ರೆಡೆವಿಡದಿಹ ಪಾಠಕರ ।
ಗಡಣಕೆ ಬಹು ಬಗೆ ವಿದ್ವಾಂಸರಿಗೀವ
ಪಡಿಯ ಪಜಾರವೊಪ್ಪಿದುವು ॥ ೪೪

ಸೂಳೆಯರುಗಳು ಡೊಂಬರು ಬಹು ಬಗೆಯಿಂದ್ರ
ಜಾಲಿಗಳ್ಬೈರೂಪದವರು ।
ತಾಳಮದ್ದಳಿಗರಿಗಳವೆ ಪಡಿಯ ರತ್ನ
ಕೀಲಿತ ಗೃಹಗಳೊಪ್ಪಿದುವು ॥ ೪೫

ಒತನಿಂತು ಮಹ ನವಮಿಯುತ್ಸವಕೋಸುಗ
ಕಡು ಸೊಬಗಿನಲಿ ಪಟ್ಟಣವ ।
ಬಿಡದೆ ಸಿಂಗರಿಸಿ ಲಿಂಗೆಯ ಗೌಡ ದಳ ಪತಿ
ಯಡಿಗೆ ಬಿನ್ನೈಸಿದನಾಗ ॥ ೪೬

ಬಳಿಕ ಸಂಭ್ರಮದೆ ಪಟ್ಟಣವ ಸಿಂಗರಗೈದ
ಚಲುವಿಕೆಗಳ ಸಂತಸದೆ ।
ಇಳಯಣ್ಣ ಕಂಠೀರವಗೆ ಬಿನ್ನೈಸಿದ
ದಳ ಪತಿ ಲಿಂಗರಾಜೇಂದ್ರ ॥ ೪೭

ನರ ರೂಪ ನರಸಿಂಹ ದಳವಾಯ ಮೆನ್ನಿಸಿ
ವರ ಮಹಾ ನವಮಿಯುತ್ಸವದ ।
ಸಿರಿಯ ನೋಡುವೊಡೆ ಸುತ್ತಣ ಭೂಪಾಲಗೆ
ಬರಿಸುವುತ್ತರಗಳನೆಂದ ॥ ೪೮

ದೊರೆಯು ನಿರೂಪದೆ ಶುಭ ಮುಹೂರ್ತದೊಳಾಗ
ಕರಿಸಿ ರಾಯಸದ ಮಂತ್ರಿಗಳ ।
ಹರುಷದೆ ದಿಕ್ಕಿನ ದೊರೆಗಳಿಗೋಲೆಯ
ಬರಿಸಿದ ಲಿಂಗರಾಜೇಂದ್ರ ॥ ೫೩

ಶ್ರೀಮತ್ಪರಮ ಜಯಾಂಗನಾ ವಲ್ಲಭ
ಸೋಮ ವಂಶಾಬ್ಧಿ ಶಶಾಂಕ ।
ಸ್ವಾಮಿ ಕಂಠೀರವೇಂದ್ರನ ದಳ ಪತಿ ಹಿತ
ಭೂಮಿಪರಿಗೆ ವಿನಯಾರ್ಥ ॥ ೫೪

ಬಳಿಕ ನನ್ನಯ ಕರ್ತರು ಮಾಳ್ಪ ಮಹ ನವಮಿ
ಸುಲಲಿತೋತ್ಸವದ ಸಂಭ್ರಮಕೆ ।
ತಳುವದೆ ನೀವೈದಿ ನಿಟ್ಟಿಸಿ ಮನ್ನಣೆ
ದಳದೊಪ್ಪುವುದು ಪ್ರೀತಿಯಲಿ ॥ ೫೫

ಎಂದೀ ಪರಿಯುತ್ತರಗಳ ದೆಸೆ ದೆಸೆ
ಗಂದಟ್ಟಿ ಲಿಂಗರಾಜೇಂದ್ರ ।
ಬಂದು ತನ್ನೊಡೆಯನ ವಿಲಸಿತ ಪಾದಾರ
ವಿಂದಕ್ಕೆ ಬಿನ್ನೈಸಿದನು ॥ ೫೬

ಭುವನೇಶ ಕಂಠೀರವ ನರಸೇಂದ್ರನ
ತವೆ ಮಹ ನವಮಿಯುತ್ಸವಕೆ ।
ಅವನೀಶ್ವರರು ಕಾಣಿಕೆ ವಸ್ತು ಸಹ ಬಹ
ವಿವರವನೇನ ಬಣ್ಣಿಸುವೆ ॥ ೫೭

ಹರಿಗೆ ಹಲಗೆ ಖಂಡೆಯ ಸಾಲ ಸಬಳದ
ಸುರಗಿ ಕೈಯಿಟ್ಟ ಕೋವಿಗಳ ।
ಬಿರುದಿನ ಭಟರ ಮೇಳದೆ ನರಸಿಂಹಪುರ
ದರಸು ಸಂಭ್ರಮದೊಳ್ಬರ್ತಂದ ॥ ೫೮

ಕಾಲ ದಿಂಡಿಯ ಸರಪಣಿ ಪಟ್ಟಿಯ ದಟ್ಟಿ
ತೋಳ ಭಾಪುರಿ ಹೊನ್ನ ಕಡಗ ।
ಮೇಲೊಪ್ಪುವ ನಾಯಕರ ಸಂದಣಿಯೊಳು
ಬೇಲೂರ ನೃಪನೈತಂದ ॥ ೫೯

ಕವಿಯೊಳೊಪ್ಪುವ ಕಾಮೋಷ್ಣಿ ಕಡಕು ಗಂಟ
ತವೆ ಚಿನ್ನ ಸರ ವೈರಣಿಯ ।
* ಚವಿಯಿಂದ ತನ್ನಯ ಬಲಸಹ † ಕುಣಿಗಿಲ್ಲು
ರವನಾಳ್ವ ನೃಪನೈತಂದ ॥ ೬೦

ನಾಗರ ಫಣಿ ಪಟ್ಟಿಯ ದಟ್ಟಿ ಕೊರಳೊಳು
ರಾಗದೆ ಮೆರೆವ ಲುಳಗಳ ।
ತೂಗುವಾಯುಧಗಳ ಭಟರ ಸಂಮೇಳದೆ
ಮಾಗಡಿಯಧಿಪತಿ ಬಂದ ॥ ೬೧

ಪರಿ ಪರಿಯಾಯುಧವಿಡಿದು ಶೃಂಗಾರದ
ಪರಿಪೂರ್ಣ ಭೂಷಣವಾಂತ ।
ಬೊರೆ ಮಕ್ಕಳು ಸಹ ನಂಜರಾಯ ಪಟ್ಟಣ
ದರಸನೈತಂದನರ್ತಿಯಲಿ ॥ ೬೨

ಕೂಡೆ ಪಿಡಿದ ಬಿಲ್ಲಂಬು ಕೈಯೊಳಗಿಹ
ಜಾಡಿಯು ಹರಿಗೆಗಳಿಂದ ।
ಪಾಡು ಪಂತದ ನಾಯಕರ ಸಂದಣಿಗೂಡಿ
ಬೇಡ ಮನ್ನೆಯನೈತಂದ ॥ ೬೩

ಕರಿಯ ಕಂಬಳಿಯ ಕುಪ್ಪುಸ ಕುಲ್ಲಾಯಿಕ್ಕಿ
ವೊರೆಯುತ ತುಂಬಿಗಳಂತೆ ।
ಧರೆಗೆ ಜೋದ್ಯವೆ ಬೀರುತಲಾಗ ಕೊಡಗರ
ಪರಿವಾರ ಬಂದುದರ್ತಿಯಲಿ ॥ ೬೪

---

* ಅತಿಶೀವಿಯಿಂದ. † ಕುಣಿಗಿಲನಾಳ್ವ.

ಪೊಳವೆ ಬಚ್ಚಣೆಯ ಹರಿಗೆ ಬಿಚ್ಚುಗತ್ತಿಯ
ಹೊಳಪ ಕಟಿಯ ಮುಂಡುಗಳ ।
ಬಲಗಳ ಮೆಧ್ಯದೆ ಸರ್ವ ಸಂಭ್ರಮದೊಳು
ಮಿಳಯಾಳದವನೀಶ ಬಂದ ॥ ೬೫

ಒಡನೆ ಕಾಣಿಕೆಯಿಾವೆ ವೆಸ್ತು ವಾಹನಗಳ
ಗಡಣ ಸಹಿತ ಸಂಭ್ರಮದೆ ।
ಬಿಡದೊಪ್ಪುವ ರಾಯರ ಸಮ್ಮುಖದ ಮಂತ್ರಿ
ಕಡು ತವಕದೆ ಬಂದನಾಗ ॥ ೬೬

ಕಟ್ಟಿದ ಪೊನ್ನ ಜಾಳಿಗೆಯ ಕಾಣಿಕೆಗಳ
ಪೆಟ್ಟಿಗೆ ಸಹಿತ ಸಂಭ್ರಮದೆ ।
ದಿಟ್ಟನು ತಂಜಾವೂರು ಭೂವಿಾಶನ
ಪಟ್ಟದ ಮಂತ್ರೀಶ ಬಂದ ॥ ೬೭

ಆಣಿ ಮುತ್ತಿನ ಕಂಠ ಮಾಲೆ ಚೌಕುಳಿ ಪೊನ್ನ
ಕಾಣಿಕೆ ಪೊರೆಯಾಳು ಸಹಿತ ।
ಕ್ಷೋಣಿಪ ಮಧುರೆಯ ತಿರುಮಲೇಂದ್ರನ ಸುಪ್ರ
ವೀಣ ಮಂತ್ರೀಶನೈತಂದ ॥ ೬೮

ಬಳಿಕಾಗ ತೆಂಜೆ ಯಿಕ್ಕೇರಿ ನಾನಾದೇಶ
ದಿಳಯಾಣ್ಮರುಡುಗೊರೆ ಸಹಿತ ।
ಚಲದಂಕ ನರಸೇಂದ್ರನ ಮಹ ನವಮಿಯ
ಸುಲಲಿತೋತ್ಸವಕ್ಕೈದಿದರು ॥ ೬೯

ಬಳಸಿದ ಗಡಿಯ ಮನ್ನೆಯ ಪ್ರಭುಗಳು ಬಲು
ವುಲುಪೆ ಕಾಣಿಕೆ ಕಪ್ಪ ಸಹಿತ ।
ತಳುವದೆ ಶ್ರೀರಂಗ ಪಟ್ಟಣಕ್ಕೈತಂದು
ಸಲೆ ಸಂಭ್ರಮದೊಳೊಪ್ಪಿದರು ॥ ೭೦

ವಿದ್ವಾಂಸರು ವಿನಿಯೋಗಿಗಳಧಿಕ ಪ್ರ
ಸಿದ್ಧ ಪುರುಷರುತ್ತಮರು ।
ಸಿದ್ಧಾಂತಿಗಳು ಗಾಯಕರು ಪಾಠಕರಾಗ
ಹೊದ್ದಿದರತುಳ ಸಂಭ್ರಮದೆ ॥ ೭೧

ವಿಟ ವಿದೂಷಕ ನಾಗರಿಕ ಪೀಠಮರ್ದನ
ಪಟುವೆಹ ನಾಲ್ಕು ಜಾತಕದ ।
ಸುಟಿಯುಳ್ಳ ಶೃಂಗಾರ ಪುರುಷರು ಹರುಷೋ
ತ್ಕಟದೊಳಗ್ಗೈತಂದರಾಗ ॥ ೭೨

ಖೇಳಲಳವೆ ನಾನಾ ದೇಶದ ಜನ
ಜಾಲವೈತಂದು ಪಟ್ಟಣಕೆ ।
ಆಲಿಗಳಚರಿಯಾಗಿ ಕಿಕ್ಕಿರಿದಿಪ ಮುದ
ದಾಳಾಪವನೇ ವೇಳ್ಯ ॥ ೭೩

ಇಂತು ನಾನಾ ದೇಶದ ಭೂಪಾಲರ
ತಿಂತಿಣಿ ಸರ್ವ ಸಂಭ್ರಮದೆ ।
ಮುಂತೆ ಶ್ರೀರಂಗ ಪಟ್ಟಣಕ್ಕೈತಂದ
ತ್ಯಂತ ಸಂತಸದೊಳೂಪ್ಪಿದುದು ॥ ೭೪

ಇದು ಸೋಮ ವೆಂಕ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮೋನ್ನಬಂಧಿ ॥ ೭೫

ಇಂತೆಯ ಸಂಧಿ ಸಮಾಪ್ತಂ.

ಇಪ್ಪತ್ತೊಂದನೆಯ ಸಂಧಿ

ಮಹಾನವಮಿಯೊಡ್ಡೋಲಗದುತ್ಸವ.

ಸೂಚನೆ॥ ನರಸೇಂದ್ರನ ಮಹಾನವಮಿಯೋಲಗದ ಖ
ಲ್ಸಿರಿಯ ಸಂಭ್ರಮವ ಬಣ್ಣಿಸುವೆ ॥

ತೊಳಗುವಾಶ್ವೀಜ ಮಾಸದ ಶುಕ್ಲ ಪಕ್ಷದೊ
ಳಳವಟ್ಟ ಪ್ರಥಮ ದಿವಸದೆ ।
ಗಳಿಲನೋಲಗ ಶಾಲೆ ಪುಣ್ಯಾರ್ಚನೆ ಹೋಮ
ವೆಳಸಿತು ವಿಪ್ರರಿಂದಾಗ ॥ ೧

ಗಜ ಶಾಲೆ ಹಯಗಳ ಲಾಯ ದಿವ್ಯಾಯುಧ
ವ್ರಜಗಳ ಮೆಂಟಪಗಳಿಗೆ ।
ದ್ವಿಜರೈದಿ ಹೋಮ ಪುಣ್ಯಾರ್ಚನೆ ಪೂಜೆಯ
ತ್ರಿಜಗ ನಲಿಯೆ ರಚಿಸಿದರು ॥ ೨

ಮನೆಯ ದೇವತೆ ಬಿಟ್ಟ್ಟದ ಚಾಮುಂಡಿಯ
* ಮನಗೊಂಡು ಬಹು ಪೂಜೆಯಿಂದ ।
† ಘನ ಕುಂಕುಮಾರ್ಚನೆ ಪಣ್ಣಳ ನೈವೇದ್ಯ
‡ ವನು ನೆರೆ ಹರುಷದಿಂ ಮಾಡೆ ॥ ೩

ವರ ಪುಷ್ಪ ಗಂಧಾಕ್ಷತೆ ಧೂಪ ದೀಪ ಬಂ
ಧುರ ದಿವ್ಯ ನೈವೇದ್ಯದಿಂದ ।
¶ ಹರಚಂಡಿಕಾಂಬಿಕೆ [ಯರ] ನವ ರಾತ್ರಿಯ
ಪರಿಪೂರ್ಣ ಪೂಜೆಯೊಪ್ಪಿದುದು ॥ ೪

* ಬಲಗೊಂಡು. † ನೆರೆ. ‡ ಗಳಿಂದಹರುಷದಿಂ. ¶ ಘನಚಂಡಿ.

ಪುರದೊಳೊಪ್ಪುವ ಸರ್ವ ದೇವತಾ ಜಾಲಕೆ
ಪಿರಿದರ್ತಿಯೊಳು ಭೂವಿಭಾಕ ।
ವರ [ಪೂಜೆ] ನೈವೇದ್ಯ [ಗಳನು] ಸಂಭ್ರಮದಲಿ
ದೊರೆ ರಾಯನೊಲಿದು ಮೊಡಿಸಿದ ॥ ೩

ದಿನ ಚರಿಯದೊಳಗಣಿತ ಭೂ ಸುರರಿಗಾಗ
ಮನ ದಣಿವನ್ನ ಮೃಷ್ಟಾನ್ನ ।
ಅನು ಲೇಪನಾದಿ ಸು ಗಂಧ ಸತ್ಕಾರಗಳೆ
ಘನ ವಾಗ್ಮಿ ಮೆರೆದುವರ್ತಿಯಲಿ ॥ ೪

ವಿಲಸಿತವಡೆದು ರಾಜಿಸುವ ಮಹತ್ತಿಗೆ
ಪಲ ತೆರ ವಿದ್ವಾಂಸರಿಗೆ ।
ಸು ಲಲಿತ ದಾಸೋಹ ಮೃಷ್ಟಾನ್ನ ಭೋಜನ
ಬಲು ಸಂಖ್ಯದೊಳಗೊಪ್ಪಿದುವು ॥ ೫

ಮರೆ ಹೊಕ್ಕ ದೊರೆಗಳ್ಗ ಸ್ನೇಹ ನಿಮಿತ್ತದೆ
ಪರಮೋತ್ಸವಕೈತಂದ ।
ಅರಸುಗಳಿಗೆ ಮನ್ನೆಯರಿಗೆ ದಿನ ಚರಿ
ಪಿರಿದು ಮನ್ನಣೆಗಳೊಪ್ಪಿದುವು ॥ ೬

ದೇಶ ದೇಶದ ನೋಟಕ ಜನ ಬಹುಳ ವಿ
ಲಾಸದ ಯಾಚಕ ನಿಕರ ।
ಭೂಷಣದನ್ನ ಪಾನದೆ ಮನ ದಣಿದು ಸಂ
ತೋಷದೊಳಸೆದರೇ ವೇಳ್ಯ ॥ ೭

ಒಡನುತ್ಸವವ ನಿಟ್ಟಪೊಡೈದಿದ ಜೋಗಿ
ಕಡು ದರವೇಸಿ ಜಂಗಮರು ।
ಹೆಡಗೆಯೊಳಗೆ ಹೂತು ಕೊಡುವನ್ನ ದಾನದೆ
ಬಿಡದೆ ಸಂತುಷ್ಟಿವಡೆದರು ॥ ೮

ಇಂತಾಗ ಸರ್ವ ಜನರು ಹರುಷವ ತಾಳ
ಮುಂತೆ ಸಿಂಗರ ಗೈದೊಡನೆ ।
ಕಂತು ಸನ್ನಿಭ ನರಸೇಂದ್ರನೋಲಗವ ನೋ
ರಂತೆ ನಿಟ್ಟಿಸಲ್ಕೈದಿದರು ॥ ೧೧

ಪುರ ಜನ ಪರಿ ಜನ ನಾನಾ ದೇಶದ
ನೆರವಿಯ ಜನ ಸಿಂಗರಿಸಿ ।
ನರಸೇಂದ್ರನ ಮಹಾ ನವಮಿಯೋಲಗದ ಸೌಂ
ದರಿಯವ ನೋಡಲ್ಕೈದಿದರು ॥ ೧೨

[ಮಿಗುವ] ಹರ್ಷದೊಳಾಗ ಪೌರ ನಾರಿಯರೋ
ಲಗದ ಸಂಭ್ರಮವ ನಿಟ್ಟಿಪೊಡೆ ।
ಬಗೆ ಬಗೆಯಲಿ ಸಿಂಗರ ಗೈದು ಬರುತಿಹ
ಸೊಗಸ ನಾನೇನ ಬಣ್ಣಿಸುವೆ ॥ ೧೩

ಎಸೆವ ರತ್ನದ ಬೊಟ್ಟಿನ ಹರಳೋಲೆಯ
ತ್ರಿ ಸರ ಚೆಂತಾಕು ಮೂಗುತಿಯ ।
ಪೊಸ ಮುತ್ತಿನ ಕಂಠ ಮಾಲೆಯ ಸೊಬಗಿನ
ಬಿಸಜ ಗಂಧಿಯರೈದಿದರು ॥ ೧೪

ಕಡಗ ಕಂಕಣ ಮುದ್ರೆಯುಂಗುರ ವೋಹಿಪ
ಬಿಡು ಮುತ್ತುಗಳ ಚೌ ಸರದ ।
ಒಡನೊಪ್ಪುವ ದಿವ್ಯ ನೂಪುರಗಳನಾಂತ
ಮೆಡದಿ ರನ್ನೆಯರೈದಿದರು ॥ ೧೫

ಕಾಲುಂಗುರ ಪಿಲ್ಲಿ ಮುಂಟಿಗೆ ನವ ರತ್ನ
ಕೀಲಿತ ಕೊಪ್ಪು ವೆಂಟೆಯದ ।
ತೋಳೊಳೊಪ್ಪುವ ಸರ ತಾತಿ ಹೊಂಬಳಗಳ
ಬಾಲೆವೆಣ್ಣುಗಳೈದಿದರು ॥ ೧೬

ಜಡೆ ಬಂಗಾರವನಿಟ್ಟು ಫಾಲದೊಳಾಗ
ಲೊಡನೆ ಕಸ್ತೂರಿಯ ಬೊಟ್ಟು ।
ನಡೆವ ವೈಯಾರದೆ ಬೆಡಗು ದೋರುತ ಬೇಗ
ಮಡದಿಯರೈತಂದರಾಗ ॥ ೧೫

ಮಿಸುಪ ಸಂಪಗೆಗಾವಿ ಸಂಧ್ಯಾವಳಿ ಚೆಲ್ವ
ಪೊಸ ಶುಭ್ರ ವೆಸನವನುಟ್ಟು ।
ಎಸೆಯುವುದಯ ಸಂಜೆ ಯಿರುಳರಸನ ಬಲು
ಜಸವ ಬೀರುತಲೈದಿದರು ॥ ೧೬

ಮಲ್ಲಿಗೆ ಜಾಜಿ ಸಂಪಗೆ ಯರಳ್ಗಳ ಮಾಲೆ
ಸಲ್ಲಲಿತಾಂಗಿಯರುಗಳ ।
ಪಲ್ಲೈಸಿದ ಜಡೆ ಮುಟ್ಟಿಗಳೊಳಗೆ ಬಹು
ಳೋಲ್ಲಾಸದೊಳೂಪ್ಪಿದುವು ॥ ೧೭

ಚರಣ ಪಲ್ಲವವ ತಡೆವ ನಿರಿಗಳ ವಾಮ
ಕರಕಮಲದೆ ಪಿಡಿದೊಡನೆ ।
ನೆರೆ ತೀವ್ರ ಗಮನಕೆ ಕೆರು ಬೆಮರಿಡುತ ಪಂ
ಕರುಹ ಮುಖಿಯರೈದಿದರು ॥ ೧೮

ಕೌಂಕುಳ ಮಕ್ಕಳು ಕೈ ಪಿಡಿದೈತಹ
ಬಿಂಕದ ಮುದ್ದು ಬಾಲಕರು ।
ಶಂಕೆಯಿಲ್ಲದೆ ತೊಟ್ಟಿಲು ಮಕ್ಕಳು ಸಹ
ಮುಂಕೊಂಡು ಸತಿಯರೈದಿದರು ॥ ೧೯

ಬೆಂಗಡೆ ಬಹ ಕೆಳದಿಯರು ಕೈ ತಳ್ಕಿನ
ಸಂಗಾತಿಗಳು ಸಾಧ್ವಿಯರು ।
ಹಿಂಗದೆ ಯಕ್ಕ ತಂಗಿಯರ ವೇಳ್ದಲಿ ಪ್ರ
ರಾಂಗನಾ ಜನವೈದಿದುದು ॥ ೨೦

ನಿಡು ಮುಡಿಯಲರ ವಾಸನೆ ಕರ ಕಮಲದೆ
ಪಿಡಿದ ಕಪ್ಪುರದ ವೀಳ್ಯಗಳ ।
ಕಡು ಪರಿಮಳ ದಿವ್ಯಾಂಗದ ಸೌರಭ್ಯ
ಬಿಡದೆ ದೆಸೆಯ ತುಂಬಿದುದು ॥ ೨೩

ಓಲಗ ಶಾಲೆಯ ರನ್ನ ಕುರುಜುಗಳ
ಸಾಲುಗಂಬಗಳ ಮರೆಯಲಿ ।
ಮೇಲಾದ ಮಣಿಯ ಬಿತ್ತಿಗಳಡೆಯಲಿ ಮುದ್ದು
ಬಾಲಕಿಯರು ರಾಜಿಸಿದರು ॥ ೨೪

ಆ ಸಮಯದೆ ದೇವತಾ ಸಾರ್ವಭೌಮ ಸಂ
ತೋಷದೆ ಸುರ ಮುನಿ ಪ್ರೇಮ ।
ಭಾಸುರ ಶುಭ ಮುಹೂರ್ತದ ವೇಳೆಯಲಿ ರಂ
ಗೇಶನೈತಂದನೋಲಗಕೆ ॥ ೨೫

ಶರಣಾಗತ ರಕ್ಷಾ ಮಣಿ ಸರ್ವೇಶ
ಪರ ಮಂಗಳ ಪುಣ್ಯ ಕಾಯ ।
ವರ ಲಕ್ಷ್ಮೀ ನರ ಸಿಂಹನೋಲಗ ಶಾಲೆ
ಗುರು ಮುದದಿಂದಲೈತಂದ ॥ ೨೬

ನೆಗಹಿದ ಸಾಲ ಸತ್ತಿಗೆ ಚಿತ್ರ ಪಟಗಳ
ಬಗೆ ಬಗೆ ವಾದ್ಯ ಘೋಷದಲಿ ।
ಆಘ ಹರ ನರ ಸಿಂಹ ರಂಗೇಶರಿರ್ವರು
ಸೊಗಸಿಂದಲೈತಂದರಾಗ ॥ ೨೭

ಕೊಂಡಾಡುವ ವೈಷ್ಣವ ಸಮುದಾಯದ
ತಂಡದ ತಾಳ ಘೋಷದಲಿ ।
ಪುಂಡರೀಕಾಕ್ಷರಿರ್ವರು ರತ್ನ ಪೀಠದೆ
ಮಂಡಿಸಿದರು ಹರುಷದಲಿ ॥ ೨೮

ಇತ್ತಲಾ ದೊರೆ ರಾಯನೋಲಗಕ್ಕೈತರು
ವರ್ತಿಯು ಶುಭ ಮುಹೂರ್ತಗಳ ।
ಹೊತ್ತನರಿದು ದಳ ಪತಿಗವಸರದರು
ಮತ್ತೆ ಬಿನ್ನೈಸಿದರಾಗ ॥ ೧೦

ಜೀಯ ಬಿನ್ನಹ ನರ ರೂಪ ಶ್ರೀ ನರಸಿಂಹ
ರಾಯ ಸಿಂಗರಿಸಿಯೋಲಗಕೆ ।
ಪ್ರೀಯದೆ ಚಿತ್ತೈಸುವ ವೇಳ ಯೆಂದವ
ರಾಯುತದೊಳಗುಸಿರಿದರು ॥ ೧೦

ಒಡನೆ ಬಿನ್ನೈಪವಸರದರ ಮನ್ನಿಸು
ತುಡುಗೊರೆ ವೀಳಯಗಳಲಿ ।
ಕಡು ಹರುಷದಲಿ ಸಿಂಗರ ಗೈದು ದಳ ಪತಿ
ಯೊಡೆಯನೋಲಗಕ್ಕೈತಂದ ॥ ೧೧

ಡಾಳಪ ಸೀಗುರಿ ಶುಭ್ರ ಚಾಮರಗಳ
ವೇಳದೆ ಮಂತ್ರಿ ಮನ್ನೆಯರ ।
ಸಾಲ ಸಂದಣಿಯಲಿ ದಳ ಪತಿ ನರಸ ಭೂ
ಪಾಲನೋಲಗಕ್ಕೈತಂದ ॥ ೧೨

ರವಿ ರಶ್ಮಿಯು ಜರೆವಾಲವಟ್ಟಲುಗಳ
ಸು ವಿಲಾಸದ ನೆಳಲೊಳಗೆ ।
ತವೆ ವೊಳಗುವ ವಾದ್ಯದೆ ಲಿಂಗ ರಾಜೇಂದ್ರ
ಭುವನೇಶನೆಡೆಗೈತಂದ ॥ ೧೩

ಬಿರುದಿನ ರಾಯ ರಾವುತ ಮಂಡಲಿಕರು
ಕರಣಿಕರಾಪ್ತ ಮಂತ್ರಿಗಳು ।
ಪರಿ ಪರಿಯಾಭರಣದ ಬಲು ಸುಭಟರ
ನೆರವಿಯೈತಂದುದೇ ವೇಳ್ವ ॥ ೧೪

ಸಿಂಗರ ಗೈದ ವಾರಾಂಗನೆಯರು ದಿವ್ಯೆ
ಮಂಗಳಾಷ್ಟಕದ ಗಾಯಕರು ।
ತುಂಗ ವಿಕ್ರಮನರಮನೆಯ ಬಾಗಿಲ ಹ
ರ್ಷಾಂಗಣದೊಳಗೊಪ್ಪಿದರು ॥ ೩೫

ತರಣಿಯ ರಥದ ದಿವ್ಯಾಶ್ವಗಳನು ಜರೆ
ದುರು ವೇಗ ಗತಿಯ ತೋರಿಸುತ ।
ಬಿರುದಿನ ರಾಜ ವಾಜಿಗಳು ಸಿಂಗರ ಗೈದು
ನೆರೆ ಹರುಷದೆ ಬಂದುವಾಗ ॥ ೩೬

ಅನಿಮಿಷ ಪತಿಯೈರಾವತ ದಿಗ್ಗಜ
ದನುವೆ ಸೋಲಿಸಿ ನೆರೆ ಮೆರೆವ ।
ಘನ ಗಜ ನಿಕರ ಸಿಂಗರ ಗೈದು ಬಂದಾಗ
ಮನ ಹರುಷದೊಳೊಪ್ಪಿದುವು ॥ ೩೭

ಊಳಿಗದವರು ವೊಂಟಿರಿಗಾರರು ಬಲು
ಕಾಲಾಳ ಮೇಲಾಳ ವೊತ್ತ ।
ಮೇಳದೆ ಬಂದರಮನೆಯ ಬಾಗಿಲ ದಿವ್ಯ
ಸಾಲ ಮಂಟಪದೊಳೊಪ್ಪಿದುವು ॥ ೩೮

ಅನಿತರೊಳಗೆ ವರ ಭೂಷಣಾನ್ವಿತನಾಗಿ
ಘನತರ ಮಂಗಳೋತ್ಸವದೆ ।
ಜನ ನಾಥ ಚೂಡಾ ಮಣಿ ಯರಮನೆಯಿಂದ
ಮನ ಹರುಷದೊಳ್ಬಂದ ॥ ೩೯

ನಲಿದು ವೇಂಕಟಪತಿ ಜಟ್ಟಿ ಕೈಲಾಗೀಯೆ
ಹೊಳವ ಪಲ್ಲಕ್ಕಿಯನೇರಿ ।
ವೊಳಗುವೆ ಬಹು ವಾದ್ಯ ಘೋಷದೆ ಭೂಪಾಲ
ಕುಲ ಕಮಲಾರ್ಕನೈತಂದ ॥ ೪೦

ಡಾಳ ಡಮಾಮಿ ಡಾಳ್ಯಿಸುವ ಸೀಗುರಿ
ಯಾಲವಟ್ಟಲ ಸಂದಣಿಯ ।
ಸಾಲ ಮುತ್ತಿನ ಸತ್ತಿಗೆಯ ನೆಳಲಿನಲಿ ಭೂ
ಪಾಲನೈತಂದನೋಲಗಕೆ ॥ ೪೧

ಪೆರೆವ ಮಕರ ಟೆಕ್ಕೆಯ ಶಂಖ ಚಕ್ರದ
ಬಿರುದಿನ ಸಾಲ ಧ್ವಜಗಳ ।
ಸಿರಿಯ ಸಂಭ್ರಮದಲಿ ನರಸ ರಾಜೇಂದ್ರ ಭೂ
ವರನೈತಂದನೋಲಗಕೆ ॥ ೪೨

ಸಲೆ ಬಿರುದುಗಳ ಕೈವಾರಿಕ ಪಾಠಕ
ರುಲುಹಿಂದ ಮಂಗಳಾಷ್ಟಕದ ।
ವಿಲಸಿತ ಜಯ ರವದೊಳಗೆ ಭೂಮಿಪ ಕುಲ
ತಿಲಕನೈತಂದನರ್ತಿಯಲಿ ॥ ೪೩

ಸಂದಣಿಸುತಲೈತಹ ನೋಟಕ ಜನ
ವೃಂದವನೆಡ ಬಲದೊಳಗೆ ।
ಚೆಂದದೆ ನಡಿಸುತ ಬರುವವಸರದರ
ಬಂದುರದುಲುಹೊಪ್ಪಿದುದು ॥ ೪೪

ಈ ಪರಿಯೊಳು ಬಹು ಸಂಭ್ರಮದೊಳಗಾ
ಶ್ರೀ ಪತಿ ಯೈದುವೆಂದದಲಿ ।
ಭೂಪಾಲ ಕುಲ ಕಲಶಾಬ್ಧಿ ಚಂದ್ರನು ದಿವ್ಯ
ರೂಪನೈತಂದನೋಲಗಕೆ ॥ ೪೫

ದಳ ಪತಿ ಕೈಲಾಗುಗೊಡಲು ಪಲ್ಲಕ್ಕಿಯ
ನಿಳದೋಲಗ ಶಾಲೆಗೈದಿ ।
ಜಲಜಾಹ್ವ ರಂಗೇಶ ನರ ಸಿಂಹರ ಪಾದ
ನಳಿನಗಳಿಗೆ ನಮಿಸಿದನು ॥ ೪೬

ತವೆ ಜಯ ಘೋಷಗಳಿಂದ ಕಂಠೀರವ
ಭುವನೇಶ್ವರನರ್ತಿಯಲಿ ।
ನವ ರತ್ನದ ಗದ್ದುಗೆಯಲಿ ಮಂಡಿಸಿ
ಸು ವಿಲಾಸದೊಳಗೆ ರಂಜಿಸಿದ ॥ ೪೬

ಅರಸಿನ ಸಮ್ಮುಖದೊಳಗೆ ಸಂತೋಷದೊ
ಳಿರತಕ್ಕ ಮಂತ್ರಿ ಮನ್ನೆಯರ ।
ನೆರೆ ವಿದ್ವಾಂಸರನವಸರದರು ಕರೆ
ದಿರಿಸಿದರಂತರವರಿತು ॥ ೪೭

ಊಳಿಗದವರ ಮನ್ನೆಯ ಮೆಂಡಲಿಕರ
ಮೇಲಾದ ರಾಯರಾವುತರ ।
ಸೂಳೆಯರುಗಳ ಪಾತಕರ ತಂಡವ ಸಾಲು
ಸಾಲರಿತಿರಿಸಿದರಾಗ ॥ ೪೮

ಚಪ್ಪನ್ನ ದೇಶದ ಚೋದ್ಯ ವಿದ್ಯಾಧಿಕ
ರೊಪ್ಪುವ ನೋಟಕ ಜನರ ।
ತಪ್ಪದೆ ಸಾಲರಿದಂತರಾಂತರದೊಳ
ಗೊಪ್ಪವಿಟ್ಟರು ಮುದದಿಂದ ॥ ೪೯

ಬಡನುತ್ಸವದೋಲಗಕೆ ಸಂತೋಷದೆ
ನಡೆತಂದ ದೊರೆ ಮನ್ನೆಯರು ।
ಪೊಡವಿಪಾಲನಿಗೆ ಕಾಣಿಕೆಯಿಕ್ಕಿ ಕೈಮುಗಿ
ದೊಡನೊಪ್ಪಿದರು ಲೀಲೆಯಲಿ ॥ ೫೦

ಬಳಸಿದ ಗಡಿಯ ಮನ್ನೆಯರು ನಾಯಕರುಗ
ಳುಲುಪೆ ಪೊನ್ನಿನ ಜಾಳಿಗೆಯ ।
ಇಳೆಯಾಣ್ಮನಿಗೊಪ್ಪಿಸಿ ಕೈ ಮುಗಿದಾಗ
ಬಲು ಹರುಷದೊಳೊಪ್ಪಿದರು ॥ ೫೦

ಮೆಧುರೆ ತಂಜಾಪುರಿ ತೆಂಜಿ ರಾಯರ ಸಮ್ಮು
ಖದ ಮಂತ್ರಿ ನಿಕರವೈತಂದು ।
ಮದ ದಂತಿ ತೇಜಿ ಪೊನ್ನಾಭರಣವೆನಿತ್ತು
ಮುದದೊಳೊಪ್ಪಿದುದೇ ವೇಳ್ವ ॥ ೫೩

ಉಳಿದ ಕೊಡಗು ಕೊಂಕಣ ಮಲೆಯಾಳರು
ತುಳುವ ದೇಶದ ಮನ್ನೆಯರು ।
ಉಲುಪೆ ವಾಪನ ವಸ್ತುಗಳ ಕಾಣಿಕೆಯಿತ್ತು
ನಲಿದೊಪ್ಪಿದರೆಡ ಬಲದೆ ॥ ೫೪

ಕರಿಯ ಕುಂಭ ಸ್ಥಳಕಂಕುಳಗಳನೊತ್ತಿ
ಭರದಲಿ ನಡಿಸಿ ತಂದಾಗ ।
ನರಸೇಂದ್ರನಂಘ್ರಿಗೆ ನಮಿಸಿ ಜೋದರುಗಳು
ಹರುಷದೆ ಭಾರಿ ಮಾಡಿದರು ॥ ೫೫

ತುರಗಾರೋಹಕರೈತಂದು ಕುದುರೆಯ
ಬಿರುದಿನೇರಾಟವ ತೋರಿ ।
ದೊರೆ ರಾಯ ಕಂಠೀರವೆಗೆ ಕೈ ಮುಗಿದಾಗ
ಹರುಷದೆ ಭಾರಿ ಮಾಡಿದರು ॥ ೫೬

ಸೆಣಸಲಮ್ಮದೆ ಧನಗಳ ಕಾಣಿಕೆಯಿತ್ತ
ಬಣಗು ಭೂಪರ ಬಿಟ್ಟು ಬಂದು ।
ರಣಗಲಿಗಳು ಕಂಠೀರವೇಂದ್ರನ ಸೇರಿ
ಮಣಿದೋಲಗದೊಳೊಪ್ಪಿದರು ॥ ೫೭

ಆನೆಗಳನು ಕಾಣಿಕೆಗೊಟ್ಟು ಜಗಳವ
ನಾನಲಮ್ಮದೆ ಕಂಡ ನೃಪರ ।
ಏನೆಂಬೆ ವರ್ಜಿಸಿ ಸುಭಟರು ನರಸೇಂದ್ರ
ಭೂನಾಥನ ಸೇರಿದರು ॥ ೫೮

ಕುದುರೆಗಳನು ಕಾಣಿಕೆಗೊಟ್ಟು ಕರಣು ಹೊ
ಕ್ಕ ಧವು ಭೂಪರ ಬಿಟ್ಟು ಬಂದು ।
ಕದನ ವಿಕ್ರಮ ಕಂಠೀರವೇಂದ್ರನ ಸಿರಿ
ಪದವನೋಲೈಸಿದರ್ ಭಟರು ॥ ೩೯

ಪಂಠಿಸಲಮ್ಮದೆ ಧರೆಯನೊಪ್ಪಿಸಿ ಕೊಟ್ಟ
ಶುಂಠ ಭೂಪರ ಬಿಟ್ಟು ಬಂದು ।
ಬಂಟರಿಗಾರರು ರಿಪು ಭೂಮಿ ಪ ಗಜ
ಕಂಠೀರವನ ಸೇರಿದರು ॥ ೪೦

ದರುಶನ ಮಾತ್ರದೊಳಗೆ ಸಿರಿ ಪೌರುಷ
ವೆರಸುವುದೆಮಗೆಂದೆನ ತ ।
ದುರ ಗಲಿ ನಾಯಕ ನಿಕರವೋಲೈಸಿತು
ನರಸ ರಾಜೇಂದ್ರ ಚಂದ್ರಮನ ॥ ೪೧

ಕೊಳ್ಳ ತಂದೊಪ್ಪಿಸಿದವರಿಗೆ ಮನ ಮೆಚ್ಚಿ
ಮೇಲಾದ ದಗಲೆ ಭೂಷಣವ ।
ಲೀಲೆಯಿಂದೊಲಿದೀವ ನರಸ ರಾಜೇಂದ್ರನೆಂ
ದೊಲೈಸಿತು ಭಟ ನಿಕರ ॥ ೪೨

ಮತ್ತೆ ಮೂವತ್ತೆರಡಾಯುಧದ ಭಟರು
ಮೊತ್ತ ಮೊತ್ತದಲೈತಂದು ।
ಎತ್ತಿ ಕರಂಗಳ ಮುಗಿದು ಸಂಭ್ರಮದೊಳ
ಗಿತ್ತರದಲಿ ನಿಂದರಾಗ ॥ ೪೩

ದೊರೆ ರಾಯನ ಸಾರಿಯ ಮೇಳವೆಣ್ಣು ಗ
ಳುರೆ ನಾಲ್ಕು ದೆಸೆಯ ದೇಸಗಳ ।
ಬಿರುದಿನ ಗಣಿಕೆಯಪ್ಪರ ವರ ನಾರಿಯ
ರಿರದೆ ಸಿಂಗರಿಸಿಯೈದಿದರು ॥ ೪೪

ಬಟ್ಟ ಮೊಲೆಯ ಬಡ ನಡುವಿನ ನೊಸಲೊಳ
ಗಿಟ್ಟ ಕತ್ತುರಿಯ ತಿಲಕದ ।
ಸೃಷ್ಟಿಗೆ ನೂತನ ಪದ್ಮಿನಿಯೈದಿದ
ಳ್ಚಟ್ಟಣದಬಲೆ ಹೊನ್ನಾಜಿ ॥ ೪೪

ಹೊಮ್ಮಿದ ಮೊಲೆ ಹೊಗರೇರಿದ ಜೌವನ
ವೊಮ್ಮಾರು ಜಡೆಯ ಸೊಬಗಿನ ।
ಉಮ್ಮತ್ತೂರು ಗೌರಾಜಿ ಚಿತ್ತಿನಿ ಬಲು
ಸುಮ್ಮಾನದೊಳ್ಕದಿದಳು ॥ ೪೬

ಕನಕ ಲತೆಯುಕಾತಿಯ ಬೀರಿ ರಾಜಿಪ
ತನು ಸೊಬಗಿನ ಮುದ್ದು ಮೊಗದ ।
ಮನಸಿಜನಾನೆ ಹಸ್ತಿನಿ ನಡೆತಂದಳು
ಚೆನಪಟ್ಟಣದ ಕೆಂಪಾಜಿ ॥ ೪೭

ಸೆಳೆ ನಡುವಿನ ಸೊಂಪುವಿಡಿದ ದಿವ್ಯಾಂಗದ
ಕಳಸ ಕುಚದ ಪೊರವಾರ ।
ನಳಿನ ದಳಾಕ್ಷಿ ಶಂಖಿನಿ ನಡೆ ತಂದಳು
ತಳಕಾಡ ಮರಿ ಕೆಂಪಿಯಮ್ಮಾಗ ॥ ೪೮

ಸೋಗೆದುರುಬಿನ ಶೃಂಗಾರದಾಭರಣದ
ರಾಗವಿಡಿದ ತನುಲತೆಯ ।
ಪೂಗಣೆಯನ ಮಸೆದಲಗಿನಂತೆಸೆದಳು
ನಾಗ ಮಂಗಲದ ಚೆಲ್ವಾಜಿ ॥ ೪೯

ಒಡನುಟ್ಟ ಸಾಲಿಯ ನಿರಿಯೊಳಗಳವಟ್ಟ
ಕಡುಚೆಲ್ವ ಕಾಂಚಿಯ ದಾಮ ।
ಜಡೆ ತುಂಬಿದ ಪೂ ಸರದ ಪೂರ್ತಿಯ ಸಿದ್ದಿ
ಮಡದಿಯೈತಂದಳರ್ತಿಯಲಿ ॥ ೫೦

ವೆರ ಮೈಸೂರು ಬೆಟ್ಟದ ಪುರ ತ್ರಿಮು-ಕೂಟ
ತೆರಕಣಾಂಬಿಯು ಕಣ್ವ ಪುರದ ।
ಪಿರಿಯ ಪಟ್ಟಣ ಯಾದವಾದ್ರಿ ನಂಜನ ಗೂಡ
ತರುಣಿ ರನ್ನೆಯರೈದಿದರು ॥ ೨೧

ಸೋಗೆ ಮುಡಿಯು ನೇವರಿಸಿ ಮೊಲೆಯ ಮೇಲೆ
ಸಾಗಿಸುತೆಸೆವ ಮುಂಜೆರಗ ।
ರಾಗದ ಸನ್ನೆ ನೋಟದ ಸವಿ ನುಡಿಗಳಿಂ
ದಾಗರುವೆಯರೈದಿದರು ॥ ೨೦

ಕೆಳದಿಯರುಗಳು ನೀಡುವ ಕರ್ಪೂರ ವೀಳ್ಯ
ಗಳಿಗೆಗೆ ತಮ್ಮ ನುಣ್ಬೆರಳ ।
ಚಲುವಿಕೆ ಸಹ ರತ್ನದೂರ್ಮಿಕೆಗಳ ತೋರು
ತಳೆ ವೆಣ್ಗಳೈತಂದುವಾಗ ॥ ೨೩

ಸಣ್ಣ ನಿರಿಯನುಗುರ್ಗಳಿನೆ ನೇವರಿಸು
ತ್ತೆಣ್ಣೆ ಗಂಟುಗಳ ತಡಪುತ ।
ಬಣ ದುಟಿಯ ಭಾವವ ಬೀರುತ ಮುದ್ದು
ವೆಣ್ಣುಗಳೈತಂದರಾಗ ॥ ೨೪

ಕಡೆಗಣ್ಣು ಸವಿನುಡಿ ನಿಡು ಹುಬ್ಬಿನ ಬೇಟ
ಬಡ ನಡು ಕಡು ನಿತಂಬಗಳ ।
ಬಿಡದೆ ಬಳುಕೆ ಕುಣಿಸುವ ಚೆಲ್ವಿನ ಮುದ್ದು
ಮಡದಿ ರನ್ನೆಯರೈದಿದರು ॥ ೨೫

ಕೆಂದಾವರೆಗಳ ಮುಗಿಸುತ ಚಾಳಿಕ
ವೃಂದವ ನಲವೇರಿಸುತ ।
ಚಂದ್ರಕಾಂತವ ಕರಗಿಸುತಾಗ ಪರಿಪೂ
ರ್ಣೇಂದು ವದನೆಯರೈದಿದರು ॥ ೨೬

ಮುಂಗುರುಳುಗಳ ಜಾಲದೆ ವಿಟರಕ್ಷಿ ಸೈ
ಗಂಗಳ ಸೋವಿ ತಂದಾಗ ।
ತುಂಗ ಕುಚಗಳಿರುಬಿನಲಿ ಸಿಲುಕಿಪರ
ನಂಗನ ಬೇಟೆ ಕಾತಿಯರು ॥ ೩೩

ಅಸಿಯ ನಡುವಿನ ನಿವಿರ್ದ ಕುಚದ ಚೆಲ್ವ
ವಿಸಜದರಳ ಪರಿಮೆಳದ ।
ಎಸೆವ ದಿವ್ಯಾಂಗದ ಪದ್ಮಿನಿಯರು ರಂ
ಜಿಸುತೈತಂದರೇ ವೇಳ್ವ ॥ ೩೪

ಬಿಗಿದಡರಿದ ತೋರ ಕುಚ ಸಣ ನಡುವಿನ
ಸೊಗಸಲಿ ಮೆರೆವ ತೆಳ್ವಸಿರ ।
ಮುಗುಳು ನಗೆಯ ಬೀರುತ ಶಂಕಿನಿಯರು
ಮಿಗೆ ರಾಜಿಸಿದರೋಲಗದೆ ॥ ೩೫

ಎಳ ಲತೆಯೊಲ್ ಮಿಗೆ ಬಳುಕುವ ದಿವ್ಯಾಂಗ
ಪುಳಿನ ಜಘನ ಸುಳಿಗುರುಳ ।
ಜಲಜ ಕುಟ್ಮಲದಂತೆ ರಾಜಿಪ ಮೊಲೆಗಳ
ಚೆಲುವ ಹಸ್ತಿನಿಯರೊಪ್ಪಿದರು ॥ ೩೬

ತೋರ ಕುಚದ ತೋರ ದುಟಿ ತೋರ ದುರುಬಿನ
ತೋರಿದ ಮೆಲ್ನವಿರುಗಳ ।
ಮೂರ ಕೇಳಿಗೆ ಮನ ದಣಿಯದ ಚಿತ್ತಿನಿ
ನಾರಿಯರೆಸೆದರತಿರ್ಯಲಿ ॥ ೩೭

ಅಲಘು ನಿತಂಬದ ಚರಣ ಪಲ್ಲವೆಗಳ
ಕೆಳಗೊಂಡ ವೇಣಿ ವಲ್ಲರಿಯ ।
ನೆಲೆ ಮೊಲೆಗಳ ಬಿಗಿಪಿನ ಬಿಡಗಿನ ಚೆಲ್ವ
ತೆಲುಗು ನಾರಿಯರೊಪ್ಪಿದರು ॥ ೩೮

ಉರ ತುಂಬಿ ಮೆರೆವ ಕಂಚುಕ ಕಾಲ ಕುಪ್ಪಸ
ಮಿರುಸ * ದುವ್ವಟದ ನಿಲಿಗಳ ।
ಸು ರುಚಿರ ಶೃಂಗಾರವಾಭರಣದ ಚೆಲ್ವ
ತುರುಕ ನಾರಿಯರೊಪ್ಪಿದರು ॥ ೪೩

ಜಘನವನಲೆವ ನಿರಿಗಳ ಹಿಂಗೆಜ್ಜೆಯ
ಒಗಸೆಗಂಗಳ ತೋರ ಮೊಲೆಯ ।
ಸೊಗಸುವ ವಾರೆದುರುಬಿನ ಸುಂದರ್ಯದ
ತಿಗುಳ ನಾರಿಯರೊಪ್ಪಿದರು ॥ ೪೪

ಮಿಸುನಿಯ ಜೀವ ಪುತ್ತಳಿಗಳಂದದೆ ರಂ
ಜಿಸುವ ದಿವ್ಯಾಂಗ ಸುಂದರದ ।
ಹೊಸ ದುವ್ವಟ ಗಾಸೆಯ ಮೆಲೆಯೊಳದ
ಶಶಿ ಮುಖಿಯರು ರಾಜಿಸಿದರು ॥ ೪೫

ಒಡನೆ ಕಿವಿಯೊಳೊಪ್ಪುವ ತೊಂಬೆಗಡುಕಿನ
ಕಡು ಚೆಲ್ವ ಪೊರವಾರ ಗಿರಿಯ ।
ಬಡ ನಡುವಿನ ಬಟ್ಟ ಕುಚದ ಸೌಂದರಿಯದ
ಕೊಡಗಿತಿಯರು ರಾಜಿಸಿದರು ॥ ೪೬

ತುಳುವ ಕೊಂಕಣ ನಾನಾ ಬಗೆ ದೇಶದ
ನಳಿನಾಕ್ಷಿಯರು ಸಿಂಗರಿಸಿ ।
ಇಳಯಾಣ್ಮ ನರಸ ರಾಜೇಂದ್ರನೋಲಗದಲಿ
ಬಲು ಸಂಭ್ರಮದೊಳೊಪ್ಪಿದರು ॥ ೪೭

ಇಂತೊಪ್ಪುತಿಹ ವಾರಾಂಗನೆಯರ ಬಲು
ತಿಂತಿಣಿ ಸೂಳ್ವಿಡಿದಾಗ ।
ಕಂತು ಸನ್ನಿಭ ನರಸೇಂದ್ರನೋಲಗದೊಳು
ಸಂತೋಷದೊಳೊಪ್ಪಿದರು ॥ ೪೮

---

* ದುವ್ವಟದ.

ಆ ಸಮಯದೆ ಜಟ್ಟಿಗಳು ಜೋಡು ಜೋಡಲಿ
ರೋಷಾವೇಶದೊಳಾಗ ।
ಘೋಷಿಸಿ ನೆಗೆದು ಭುಜ ಸ್ಫೋಟನೆ ಗೈದು
ವಾಸಿ ಪಂಥದೆ ನಿಂದರೊಡನೆ ॥ ೪೯

ಕರ ಕಮಲದೆ ವಜ್ರ ಮುಷ್ಟಿ ಮಸ್ತಕದೊಳು
ಮೆರೆವ ಕುಂಕುಮ ರಜದಿಂದ ।
ಕೊರಳ ಪೂ ಮೊಲೆ ಕಸ್ತೂರಿ ಲೇಪನದ ಮೆಲ್ಲ
ರುರುವೆಣಿಸಿದರಾಹವಕೆ ॥ ೫೦

ಚರಣ ಹತಿಗೆ ಬಿರಿಯಲು ಭೂಮಿ ಭೋ ಯೆಂ
ದುರಗ ಬಂಧದಲಿ ತಕ್ಕೈಸಿ ।
ಪರಿ ಪರಿ ಕೌಶಲಗಳ ಮುಷ್ಟಿ ಗಾಯದ
ನೆರೆಗಲಿ ಮೆಲ್ಲರೊಪ್ಪಿದರು ॥ ೫೧

ಗಳ ಹತ್ತ ಡೊಕ್ಕರ ತಳ ಮೀಲು ಪೈಸರ
ಸುಳಿವು ವಂಚನೆ ಪತನದಲಿ ।
ಅಳವಟ್ಟ ಗಾಯ ಗಾಯಕೆ ಕೆನ್ನೀರ್ಗಳು
ತುಳುಕೆ ಹೋರಿದರೇನೆಂಬೆ ॥ ೫೨

ಬಿಗಿವ ಬಿಡಿಸಿಕೊಳ್ವ * ತಗೆವ ತವಕಿಸುವ
ನೆಗೆವ ನಿಗುರಿ ಯೊಳಸರಿವ ।
ಲಗಡಿನಂತೆರಗಿ ಲಾಗಿಸುವ ಹೋರಾಟದ
ವಿಗಡ ಮೆಲ್ಲರುಗಳೊಪ್ಪಿದರು ॥ ೫೩

ಶಿರವುರ ಕಂಠ ಕಪೋಲ ವಕ್ಷಸ್ಥಳ
ದುರವಣಿಸುವ ಗಾಯಗಳ ।
ಸುರಿವ ಕಣ್ಣಿಡಿಗಳ ಮೀಲು ನಿಶ್ಚಯಿಸದ
ಬಿರುದಿನ ಮೆಲ್ಲರೊಪ್ಪಿದರು ॥ ೫೪

---

* ತವಗ ತವಕಿಸುವ.

ಇಂತಪ್ಪ ಮೆಲ್ಲರು ನೂರಾರು ಜೋಡಲಿ
ಪಂತದೊಳಗೆ ಕಾದುತಿರಲು ।
ಕಂತು ಸನ್ನಿಭ ಕಂಠೀರವೇಶ್ವರ ಬಲು
ಸಂತೋಷವ ತಾಳಿದನು ॥ ೯೫

ಸೋಲು ಗೆಲವುಗಳನರಿತು ಮೆಲ್ಲರುಗಳ
ಕಾಳಗವನು ಬೀಗ ಬಿಡಿಸಿ ।
ವೀಳಯವುಡುಗೊರೆಗೊಡುತಿರೆ ಡೊಂಬರ
ಮೇಳದಾಟಗಳೂಪ್ಪಿದುವು ॥ ೯೬

ಲಘು ಲಾಗು ಲಂಘನೆಯೊಳು ಗಳ ಮಿಳಿಯಲಿ
ಯಗಣಿತರಹ ಡೊಂಬರುಗಳು ।
ಬಗೆ ಬಗೆಯಾಟವ ತೋರಿ ಯಾಸ್ಥಾನವ
ಮಿಗೆ ಮೆಚ್ಚಿಸಿದರೇ ವೇಳ್ವ ॥ ೯೭

ತಗರ ಕಾಳಗ ಮದ ಕರಿಗಳ ಹೋರಾಟ
ವಿಗಡದ ಪುಲಿ ಕರಡಿಗಳ ।
ಬಿಗಿ ನೇಣ ಪರಿದು ಕಾದುವ ವೀರರ ಮೊತ್ತ
ಸೊಗಸ ಬೀರಿದುದೋಲಗದೆ ॥ ೯೮

ಇಂತಪ್ಪ ವೇಳೆ ಪಶ್ಚಿಮ ಕಾಂತೆ ರವಿಯೊಳು
ಕಂತು ಕೇಳಿಯನೆಸಗುವೊಡೆ ।
ಸಂತತ ಸಂಜೆಯಾಳಿಯನಟ್ಟಿ ಕರಿಸಲು
ಮುಂತಾಗ ದಿನಪನೈದಿದನು ॥ ೯೯

ಕಿರಣಾಳಿ ರವಿಯೈದಿದೊಸಗೆಯ ಪಶ್ಚಿಮ
ತರುಣಿಗೆ ಬಿನ್ನೈಸಲಾಗ ।
ಹರುಷದೆ ಮುತ್ತಿನ ಸೇಸೆದಳಿದವೊಲು
ಮೆರೆದುವು ಸಂಜೆವಾರಿಗಳು ॥ ೧೦೦

ನಲಿದು ನೀಲಾಬ್ಜಿನಿ ತನ್ನಯ * ಸಖಿಯರ
ಸಲೆ ಬಹ ಶಶಿಗಿದಿರಾಗಿ ।
ಕಳುಹಲ್ಕೈದುವೆವೋಲು ಕತ್ತಲೆ ಭೂಮಿಯ
ಬಲು ತವಕದೆ ಪಸರಿಸಿತು ॥ ೧೦೧

ಶಶಿ ತನ್ನ ವಂಶದರಸು ಮಹ ನವಮಿಯೊ
ಳಸೆವುತ್ಸವವ ನೋಳ್ಪನೆಂದು ।
ಪೊಸ ಕೌಮುದಿಯಾಳ್ಗೂಡಿ ಬಂದೊಲು ಕಾಂತಿ
ವಿಸರದೊಳುದಿಸಿದನಾಗ ॥ ೧೦೨

ತನ್ನೊಳಗೆದ ಸಿರಿ ನರಸೇಂದ್ರಗೆ ಮೆಚ್ಚಿ
ಮನ್ನಣೆಯೊಳಗಿಹಳಂದು ।
ಮುನ್ನ ಪಾಲ್ಗಡಲು ನೋಡುವೊಡೈತಂದೊಲು
ಜೊನ್ನವೊಪ್ಪಿತು ಪೂರ್ಣ ಶಶಿಯು ॥ ೧೦೩

ಸರಸಿಜ ಸಖನ ದೀಧಿತಿ ಕೋಟಿ ರೂಪಲಿ
ನರಸ ರಾಜೇಂದ್ರನೋಲಗದ ।
ಸಿರಿಯು ಸಂಭ್ರಮವ ನೋಡುವೊಡೈತಂದೊಲು
ಮೆರೆದುವು ದೀಪ ಕಾಂತಿಗಳು ॥ ೧೦೪

ದೊರೆ ರಾಯನೋಲಗದೊಳಗೆ ರಾಜಿಸುತಿಹ
ಪರಿಪೂರ್ಣೇಂದು ಮುಖಿಯರ ।
ನೆರೆ ಬೆಳ್ನಗೆ ಜೊನ್ನದುರುಳಿಗಳಂದೆನೆ
ಮೆರೆದುವು ಚಂದ್ರ ಜ್ಯೋತಿಗಳು ॥ ೧೦೫

† ಅಳಿಗುರುಳಬಲೆಯರ್ಸುಳಿಯೆ ಭೇರೀ ತ್ರಯು
ಗಳ ನಿಘೋರ್ಷ ನಾದಗಳ ।
[ಬಳದ ಕೋಲಾಹಲ ದಶ ದಿಕ್ತಟಗಳ
ಬಳಸಿ ಕೊಂಡುದು ತೀವ್ರದಿಂದ] ॥ ೧೦೬

---

* ದೂತಿಯರ.

† ಅಳಿಗುರುಳಬಲೆಯರ್ಸುಳಿಯೆ ಭೇರೀ ತ್ರಯು । ಗಳ ನಿಘೋರ್ಷ ನಾದಗಳ॥
ಭಾಸುರ ರವವಾಕ್ಕಾಕವ ಬಲು ಪರಿ । ತೋಷದೆ ಮುಸುಕಿದುವಾಗ॥

[ಬೀಸುತೆ ಕೈಯನುದ್ದೊಲೀಷಿಸಿ ಎಂದಿಗ
ಳಾ ಸಮಯವನು ಸೂಚಿಸುವ] ।
ಭಾಸುರ ರವವಾಕಾಶವ ಬಲು ಪರಿ
ತೋಷದೆ ಮುಸುಕಿದುದಾಗ ॥ ೧೦೬

ಬಿಗಿದುಟ್ಟ ಸಾಲಿಯು ನಿರಿ ವೊಲೆ ಕಟ್ಟನ
ಝಗ ಝಗಿಸುವ ಭೂಷಣದ ।
ಬಗುಮಿಗೆ ಹರುಷದೆ ಸೊಗಸುಗಾತಿಯರಾಗ
ನಗುತ ಕೋಲಾಟಕ್ಕೈದಿದರು ॥ ೧೦೭

ತಾಳ ಮೆದ್ದಳ ವಾರ ನಾರಿಯರ ಸಂಗೀತ
ವೇಳದೊಳಗೆ ಜತೆಗೂಡಿ ।
ಸೋಲಿಸುತಚ್ಚರಿಯರ ವೋಹಿ ಪೆಣ್ಗಳು
ಕೋಲಾಟಕ್ಕೈತಂದರಾಗ ॥ ೧೦೮

* ವೆರೆಯಲೊಡ್ಯಾಣದ ಪೊಂಗೆಜ್ಜೆಗಳ ದನಿ
ವರ ರತ್ನವೆರೆದ ಕೋಲುಗಳ ।
ಕರದೊಳು ಪಿಡಿದು ಮುಂಭಾಗದೆ ಪಾಡುತ
ಪಿರಿದು ಸಂಭ್ರಮವ ಬೀರಿದರು ॥ ೧೦೯

† ಬಗಸೆಗಣ್ಗಳ ಡಾಳ ಬೀರುತ ಮುದದೆ ಕೋ
ಲುಗಳನು ಪೊಯ್ವುಬ್ಬರಕೆ ।
ಮಿಗೆ ಮೇಲುದು ಜಾರೆ ಪೊಂಗೊಡ ವೊಲೆಗಳು
ಸೊಗಸ ಬೀರಿದುವು ನೋಳ್ಪರಿಗೆ ॥ ೧೧೦

---

* ವೆರವ ವಡ್ಯಾಣದೆ ಪೊಂಗೆಜ್ಜೆಗಳ ದನಿ । ನವ ರತ್ನವೆರೆದ ಕೋಲುಗಳ ॥
ಅನುವಿನಿಂ ಪಿಡಿದು ದೊರೆಯ ಮುಂಬಾಗದೆ । ಪಾಡುತ ರಾಗವ ಪಿರಿದು
ಸಂಭ್ರಮವ ಬೀರಿದರು ॥

† ಬಗಸೆಗಣ್ಗಳ ಡಾಳ ಬೀರುತ ಮುದದೆ । ರನ್ನದ ಕೋಲ್ಗಳ್ಪೊಯ್ವ ಅಬ್ಬರಕೆ ॥
ಮೇಲೆ ಮೇಲುದು ಜಾರೆ ಪೊಂಗೊಡ ವೊಲೆಗಳು । ಸೊಗಸ ಬೀರಿದುವು
ನೋಳ್ಪರಿಗೆ ॥

ಪೊಳೆವ ಮುತ್ತಿನ ಮೊಲೆ ಕಟ್ಟು ಸುವರ್ಣದೋಲ್
ತಳತಳಪ ಪೀತಾಂಬರದ ।
ಉಲಿವೆ ಮೃದಂಗ ಪಾಠಕರ ಗಾಯನದಿಂದ
ಲಲನೆಯರನುವಾದರಾಗ ॥ ೧೧೨

ಬಿರುದಿನ ತಾಳ ಮದ್ದಳೆ ಸಂಗೀತದ
ಪರಿಪೂರ್ಣ ರವೆ ಮೋಹಿಸಲು ।
ಚಲುವೆ ನರ್ತನದ ಪೆಣ್ಗಳು ಸಭಾ ಸ್ಥಳವೆ ಮು
ರುಳುಗೊಳಿಸಿದರೇನೆಂಬೆ ॥ ೧೧೩

ಕಟಿಗೊಂದಿದ ಕರ ಕಮಲವೆಂಗುಷ್ಠದ
ನಟನೆಯು ಮೆಯ್ಯೊಲೆಪುಗಳ ।
ಸುಟಿಯೊಳಾವರ್ತ ತಿರುಪುಗೊಂಡು ನಾಟ್ಯವೆ
ಪಟುಗೊಳಿಸಿದರೇ ವೇಳ್ವ ॥ ೧೧೪

ತದ್ದಿತ್ತೈ ತದಿಗಿಣ ತದ್ಧಳಾಂಗುಗಳಂಬ
* ಶುದ್ಧ ಗಾಯಕ ವರ ಗತಿಗೆ ।
ಶುದ್ಧಾಂಗದ ಗೆಜ್ಜೆ ಮೆಟ್ಟಿನ ಗತಿಗಳಿಂ
ಮುದ್ದು ವೆಣ್ಣುಗಳಾಡಿದರು ॥ ೧೧೫

ಗಿಳಿಯ ಕಟ್ಟಳ ಸೋಗೆ ನವಿಲಾಟ ಹಂಸೆ ಯೆ
ರಳೆಗಳ ಗತಿ ಗಂಡು ವೇಷ ।
ಗಳ ಬಗೆ ಬಗೆಯಭಿನಯ ವಿಲಾಸಗಳಿಂದ
ತಲೆದೂಗಿಸಿದರು ಸಭೆಯ ॥ ೧೧೬

ಒಂದು ದೆಸೆಯೊಳಿಂದ್ರ ಜಾಲವ ತೋರುವ
ಮೆಂದಿ ಭೈರೂಪದಾಟಗಳ ।
ಸಂದಣಿ ಹಾಸ್ಯ ರಸಗಳಿಂದ ಮೆರೆದುದ
ದಂದಿನಸಭೆಯರ್ತಿಯಲಿ ॥ ೧೧೭

---

* ಗಾಯಕ ನಟುವರ ಗತಿಗೆ.

ಹರಿಯು ದಶಾವತಾರದ ನಾಟಕವ ತೋರಿ
ಮೆರೆವ ಬಾಗವತರ ಚೆಂದ ।
ನರಸ ರಾಜೇಂದ್ರ ಚಂದ್ರಮನೋಲಗದಲಿ
ಪರಿ ಶೋಭಿಸಿದುದೇ ವೇಳ್ವ ॥ ೧೦೪

ತುಂಬುರಾದಿಗಳಂತೆ ಗಾನವ ಪಾಡುವ
* ತುಂಬಿದ ವಿದ್ವಾಂಸರುಗಳು ।
ಇಂಬಾಗಿ ಘನ ಕೃತಿಗಳ ಪಾಡಿ ಸಭೆಗಾ
† ಡಂಬರಗೊಳಿಸಿದರಾಗ ॥ ೧೦೫

ವೀಣೆಯ ವಾದಿಪ ವಿದ್ವಾಂಸರುಗಳು
ಜಾಣತನದೆ ವೀಣೆವಿಡಿದು ।
ವಾಣಿಯು ಪ್ರತ್ಯೇಕದೆ ಪಾಡುವಂತಾಗ
ಕ್ಷೋಣಿಪನನು ಮೆಚ್ಚಿಸಿದರು ॥ ೧೦೦

ಸು ಲಲಿತ ಲಕ್ಷ್ಯ ಲಕ್ಷಣ ಕಾವ್ಯ ನಾಟಕ
ಸಲೆಯಲಂಕಾರಶೋಭಿತದೆ ।
ಬಲು ಪದ್ಯ ಪದ ಕೃತಿ ಬಂಧವ ನಡಿಸುತ
ಸಲೆ ಜಾಣ ಕವಿಗಳೊಪ್ಪಿದರು ॥ ೧೦೧

ಭಾರತ ರಾಮಾಯಣಗಳ ಸಂಗೀತ
ಸಾರದೊಳಗೆ ನಲಿದೋದಿ ।
ಭೂರಿ ವೈಭವದಿಂದ ಸಭೆಗತಿ ಮುದವೀವ
ಭಾರತಿಗಳು ರಂಜಿಸಿದರು ॥ ೧೦೨

ಧರಣೀಶ್ವರನೋಲಗವ ನೋಡಲು ಮಿಗೆ
ಸುರ ವೆಂಗಳಂಬರದಿಂದ ।
ಕರೆಸಿ ಸಂಪಿಗೆಯರಳ್ಮಳೆಯೆಂಬಂದದೆ
ಸುರಿವ ಪೂಗಳು ರಾಜಿಸಿದುವು ॥ ೧೦೩

---

* ಸಂಗೀತವಿದ್ವಾಂಸ. † ನಂದವಗೊಳಿಸಿದರಾಗ·

ನರ ರೂಪ ನರಸಿಂಹನೋಲಗವನು ನೋಳ್ಪ
ಡುರಗೇಂದ್ರ ಧರೆಯನುಚ್ಚಳಿಸಿ ।
ಬರುವ ಸಂಭ್ರಮದಂತೆ ಬಿರಿಸು ಬಾಣಗಳಾಗ
ಮೆರೆದ ಸಂಭ್ರಮವನೇ ವೇಳ್ವ ॥ ೧೦೪

ನೆರೆ ಕರ್ಣಾಟಕ ಚಕ್ರೇಶನೆಂಬುದ
ಧರೆಗೆ ಪ್ರತ್ಯಹ್ನ ತೋರ್ಪಂತೆ ।
ಮೊರೆದು ದೀಧಿತಿಗೂಡಿ ಚಕ್ರ ಬಾಣಗಳಂ
ದರಸನೋಲಗದೊಳೂಪ್ಪಿದವು ॥ ೧೦೫

ಧರಣೀಶ್ವರನ ಪ್ರತಾಪ ಚಾ ದೆಸೆಯಲಿ
ಮೆರೆವೊಡೆ ಕೋಟಿ ರೂಪಾಗಿ ।
ಪರಿ ಶೋಭಿಪೊಲು ಸೂತ್ರಗಂಭ ಬಾಣಗಳಾರೆ
ಪರಿವ ಸಂಭ್ರಮವನೇನೆಂಬೆ ॥ ೧೦೬

ಶಶಿ ಮುಖಿಯರು ಸಮ್ಮುಖದಲಿ ಪಿಡಿದಿಹ
ವಿಸುನಿಯ ದೀವಟಿಗೆಗಳ ।
ಪೊಸ ಕರ್ಪೂರದ ತೈಲದ ದಿವ್ಯ ವಾಸನೆ
ಮುಸುಕಿತಾಕಾಶ ಮಂಡಲವ ॥ ೧೦೭

ಪೊಡವಿಪ ಕಂಠೀರವೇಂದ್ರನೋಲಗದ ಬ
ಲ್ಸಡಗರಗಳನೆಂಟು ದೆಸೆಗೆ ।
ಬಿಡದೆ ಸಾರುವವೋಲು ಗಳಯಾರ ಜಾಗಟೆ
ನಡೆದ ಗಳಿಗೆಯ ಪೇಳಿದುವು ॥ ೧೦೮

ಆ ಸಮಯದೆ ಜ್ಯೌತಿಷಿಕರೈತಂದು ವಿ
ಲಾಸದೆ ನೃಪನ ಸಮ್ಮುಖದೆ ।
ಬಾಸುರ ಗಳಿಗೆಯೆಂಟಾದುದೆಂದುರೆ ಬಿ
ನ್ನೈಸಿದರೇನ ಬಣ್ಣಿಸುವೆ ॥ ೧೦೯

ಪಿರಿದು ಕರ್ಪೂರ ವೀಳೆಯವುಡುಗೊರೆಗಳ
ದೊರೆಯ ಸಮ್ಮುಖದ ಮಂತ್ರಿಗಳು ।
ಕರೆದಂತರವರಿದಿತ್ತೋಲಗವನು
ಹರುಷದೆ ಬೀಳ್ಕೊಟ್ಟರಾಗ ॥ ೧೩೦

ಹರಿಗೆ ವಂದಿಸಿ ತೀರ್ಥ ಪ್ರಸಾದವ ಕೊಂಡು
ಪರವೋತ್ಸವ ಮಿಗಲಂದು ।
ದೊರೆ ರಾಯ ಸರ್ವ ಸಂಭ್ರಮದೊಳಗಂತಃ
ಪುರಕೈದಿದನೇ ವೇಳ್ವ ॥ ೧೩೧

ಇಂತಪ್ಪೋಲಗವೆಂಟು ದಿವಸ ಪರಿ
ಯಂತರ ಸಕಲ ಸಂಭ್ರಮದೆ ।
ಸಂತೋಷವ ಸರ್ವ ಜನಕೆ ಬೀರುತಲ
ತ್ಯಂತ ಸೌಖ್ಯದೊಳೊಪ್ಪಿದುದು ॥ ೧೩೨

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೩೩

ಎಂಬತ್ತನೆಯ ಸಂಧಿ ಸಮಾಪ್ತಂ.

ಇಪ್ಪತ್ತೆರಡನೆಯ ಸಂಧಿ

ವಿಜಯ ದಶಮಿಯ ಜಂಬ ಸವಾರಿ.

ಸೂಚನೆ॥ ನೆರೆ ಮಹಾ ನವಮಿಯುತ್ಸವ ಪೂಜೆ ಭೂಪನ
ಏರಿದ ಸವಾರಿ ವರ್ಣಿಸುವೆ ॥

ಬಳಿಕೊಂಭತ್ತನೆಯಾದಿನದೆ ಚಂಡಿಕಾ
ಲಲನೆಯ ನವ ಲಕ್ಷ್ಮ್ಯಾಯರ ।
ವಿಲಸಿತೋತ್ಸವ ಪೂಜೆಗೆ ಶುಭ ಲಗ್ನವ
ಸಲೆ ಜೋಯಿಸಿಗರುಸಿರಿದರು ॥ ೧

ರಾಮಣೀಯಕವಾಗೆ ರಾಜಿಸುತಿಹ ಚೆಲ್ವ
ಭೂಮೀಶ್ವರನರ ಮನೆಯ ।
ಆ ಮಹಾ ಚಿತ್ರ ಸುಂದರ ಶಾಲೆಯ ಸು
ಪ್ರೇಮದೆ ಸಿಂಗರಿಸಿದರು ॥ ೨

ಪನ್ನೀರ ಚಳೆಯ ಕತ್ತುರಿಯ ಸಾರಣೆ ಮುತ್ತಿ
ನುನ್ನತ ರಂಗವಲ್ಲಿಗಳ ।
ಸನ್ನಹಗೊಳಿಸಿ ಕುಂಕುಮದ ಕಾಣೆಗಳ
ಚೆನ್ನಾಗಿ ಮಿಗೆ ರಚಿಸಿದರು ॥ ೩

ಪವಳದ ಕುಚ್ಚು ಮುತ್ತಿನ ಸಾಲು ಗೊಂಚಲು
ನವರತ್ನ ಖಚಿತವ ಲೋಪೆ ।
ಖಡ ಖವಿಸುವ ಮಿಸುನಿಯ ವೇಲು ಕಟ್ಟುಗ
ಳ್ಭವನದೊಳಗೆ ರಂಜಿಸಿದುವು ॥ ೪

ಮೆರೆವ ನಾನಾ ಬಗೆ ಫಲವಸ್ತ್ರ ಮಂದಾರ
ದರ್ಗಳ ದಿವ್ಯ ಮೂಲೆಗಳ ।
ಪರಿಶೋಭಿಸಿದುವಾಯುಧ ಪೂಜೆಯ ಚೆಲ್ವ
ಸುರುಚಿರಾಸ್ಥಾನ ಮಂಟಪವೆ ॥ ೩

ಕಜ್ಜಳವಿಡುವ ಕನ್ನಡಿಯ ನೋಡುವ ಮಿಗೆ
ಸಜ್ಜುಕ ಸರಗಳ ಮೆಂಡಿವೆ ।
ಪಜ್ಜಳಿಸುವ ಪುತ್ತಳಿಗಳಾ ಭವನದ
ವಜ್ರ ಭಿತ್ತಿಯೊಳೊಪ್ಪಿದುವು ॥ ೪

ಅನಿತರೊಳಗೆ ಮಂತ್ರಿ ಮನ್ನೆಯರೊಡಗೂಡಿ
ಜನಪತಿ ಕಂಠೀರವೇಂದ್ರ ।
ಘನವಾದ ದಿವ್ಯಾಯುಧಗಳ ಜಲ ಕೇಳಿ
ಗನುಗೊಳಿಸುವೊಡೈತಂದ ॥ ೫

ಕಂಗೊಳಿಸುವ ರನ್ನದ ಪಲ್ಲಕ್ಕಿಯೊ
ಳ್ಮಂಗಳ ವಾದ್ಯ ಘೋಷದಲಿ ।
ತುಂಗ ವಿಕ್ರಮನ ದಿವ್ಯಾಯುಧಗಳ ತಂದು
ಸಂಗಡಿಸಿದರರ್ತಿಯಲಿ ॥ ೬

ದುರದೊಳಗಿದಿರಾದ ವೈರಿ ರಾಯರ ಗರ್ವ
ಗಿರಿ ಶಿಖರವ ಕಂಡಿಸುವ ।
ವರ ವಜ್ರ ದಂಡದಂದದಲಿ ಭೂ ಪಾಲನ
ಸುರುಚಿರ ಖಡ್ಗವೊಪ್ಪಿದುದು ॥ ೭

ಆಜಿಗೊದಗಿದರಿ ಭಟರೆದೆ ಗರುಳ ಸ
ಮೂಜವ ತೆಗೆದು ಬೇಗದಲಿ ।
* ರಾಜಿಪ ಭೂತಕೆ ರಣ ಮಾಲೆಯಿಕ್ಕುವೊ
ಲ್ನೀಜೆಯವೊಪ್ಪಿತು ನೃಪನ ॥ ೮

* ರಾಜಿಪ ರಣ ಭೂತಕ್ಕನ ಮಾಲೆ.

ಉಕ್ಕಂದದೊಳಗೈದುವೆ ಧರಣೀಶರ
ಸೊಕ್ಕ ಮುರಿದು ಜಯ ಸಿರಿಗೆ ।
ಇಕ್ಕುವೆ ರನ್ನಗುಂಡಲದಂತೆ ಸಿಂಗಾಡಿ
ಯಕ್ಕರೊಳಸೆದುದೇನೆಂಬೆ ॥ ೧೧

ಬವರವ ಬಯಸಿ ಬಂದರಿ ರಾಯರುಗಳಂಬ
ನವ ಧವಳೇಹ್ಷು ದಂಡವೆನು ।
ತವಕದೆ ಹೀರಿ ಹಿಪ್ಪೆಯು ಮಾಡಿಯುಗುಳುವೊ
ಲ್ಜವದಾಡೆಯೊಪ್ಪಿತು ನೃಪನ ॥ ೧೨

ಪೊಡವಿಪ * ನೀನೆನ್ನನವರತವು ಕೈಯ
ಹಿಡಿದು ಸಲಹ ಬೇಕೆಂದು ।
ಕಡು ತವಕದೆ ಸೇರಿದಾಯುಧ ಸಿರಿಯೊಲು
ಬಿಡದೊಪ್ಪಿದುದು ದಿವ್ಯ ಸುರಗಿ ॥ ೧೩

ಸೊಕ್ಕಿದ ರಿಪು ಭೂಮಿಪರುದರವ ಬಗಿ
ದುಕ್ಕುವ ಬಿಸಿ ರಕ್ತ ಜಲವ ।
ಗಕ್ಕನೆ ಹೀರಿ ಮೆರೆದು ತಳ ತಳಿಸುವ
ಚಿಕ್ಕ ಕಠಾರಿಯೊಪ್ಪಿದುದು ॥ ೧೪

ಧಾರಿಣಿಯೊಳು ರಿಪು ಗಜ ಮಸ್ತಕಾಗ್ರಕೆ
ಪಾರಿ ಮಿದುಳ್ಗಳನುಗಿವ ।
ವೀರ ಪಂಚಾನನದುಗುರಂದದೆ ಕರಾ
ಚೂರಿಯೊಪ್ಪಿದುದವನಿಪನ ॥ ೧೫

ಸುರಗಿ ಸಬಳ ಕೈಯಿಟ್ಟ ಶೃಂಗಾರದ
ತರಕಸದುಂಬಿದಂಬುಗಳ ।
ಮೆರೆದುದು ಸಂಭ್ರಮ ಜಲ ಕೇಳಿಗೈದುವ
ಸಿರಿಯು ನಾನೇನ ಬಣ್ಣಿಸುವೆ ॥ ೧೬

---

* ನಿನ್ನನ್ನವರತವು.

ಬಳಿಕ ಚತುರಂಗಬಲ ನೃಪರ ಗರ್ವವ ನೆಗ್ಗಿ
ಸೆಳೆದು ತಂದಖಿಳಾಯುಧಗಳ ।
ತಳ ತಳಿಸುವ ದಂಡಿಗೆಗಳ ಮೇಲಿಟ್ಟು
ಜಲ ಕೇಳಿಗನುಗೊಳಿಸಿದರು ॥ ೧೬

ವಾಮ ಗರುಡನಂಬರ ಮಾರ್ಗದಿ ಬಂದು
ಭೂಮಿ ಪಗತಿ ಶುಭೋದಯವ ।
ರಾಮಣೀಯಕಮಾಗಿ ಸೂಚಿಸಿ ಚರಿಸುವ
ಪ್ರೇಮವನೇನ ಬಣ್ಣಿಪೆನು ॥ ೧೭

ಪಟ್ಟು ಬರಹ ಚೀನಾಂಬರಗಳ ಬೆನ್ನೊ
ಳಿಟ್ಟಾಗ ಗಜ ತುರಗಗಳು ।
ಕಟ್ಟಿಸಕದೊಳಗಣಿತ ಜಲ ಕೇಳಿಗೆ
ತೊಟ್ಟನೈತಂದುವರ್ತಿಯಲಿ ॥ ೧೮

ಗಣ ನಾಥ ಪೂಜೆ ಗಂಗಾ ಪೂಜೆ ಶಸ್ತ್ರ ವಾ
ರಣ ವಾಜಿಗಳ ಪೂಜೆಯನು ।
ಹ್ಲಣದಲಿ ರಚಿಸಿಯಾಯುಧಕಭಿಷೇಕವ
ನಣಿಯಾರದಲಿ ಮಾಡಿದರು ॥ ೧೯

ಪರಿಮಳ ಗಂಧಾಹ್ಲತೆ ನೂತನ ಪುಷ್ಪ
ವೆರಸಿ ಪಲ್ಲಕ್ಕಿಯ ಮೇಲೆ ।
ನರಸೇಂದ್ರನ ದಿವ್ಯಾಯುಧ ಮೆರೆದು ಬಂ
ದುರದೆ ಮಂಟಪಕ್ಕೈದಿದುವು ॥ ೨೦

ನೊಸಲ ಗಂಧಾಹ್ಲತೆ ಕಂದರದೊಳಗಿಹ
ಮಿಸುನಿ ಜಡೆಗಳು ಪೂ ಮಾಲೆ ।
ಪೊಸ ಬಗೆ ಶೃಂಗಾರದ ದಿವ್ಯ ವಾಜಿ
ಪ್ರಸರಗಳೈತಂದುವಾಗ ॥ ೨೧

ಕುಂಭ ಸ್ಥಳಕೆ ಪೂಸಿದ ಕುಂಕುಮೆ ಗಂಧ
ತುಂಬಿದ ಕೊರಳ ಪೂ ದಂಡೆ ।
ಇಂಬಿನ ಗಂಧಾಹ್ವತೆಯು ನೊಸಲ ಮದ
ಕುಂಭಿಗಳ್ಳೈತಂದುವಾಗ ॥ ೭೩

ಹರಿಯು ನೇಮದಲಿ ದಿವ್ಯಾಯುಧ ಪೂಜೆಯು
ನರನರ್ತಿಯಲಿ ಮೊಳ್ಪಂತೆ ।
ಸಿರಿಯರಸನ ಕೃಪೆಯಲಿ ಶಸ್ತ್ರ ಪೂಜೆಯು
ವಿರಚಿಸಿದನು ಭೂಪಾಲ ॥ ೭೪

ನವ ರತ್ನ ಖಚಿತ ಮೆಂಟಪದೊಳು ರಾಜಿಸು
ವವಿರಳ ದುಗುಲ ವಾಸಿನಲಿ ।
ತವಕದೆ ಕೈದುಗಳಿಂಬಿಟ್ಟು ದುರ್ಗಾಸ್ತ್ರ
ವವ ಜಪಿಸಿದನೇ ವೇಳ್ವ ॥ ೭೫

ಮೊಳಗುವ ಮಂಗಳ ವಾದ್ಯ ಘೋಷದೊಳಂದು
ಬಲಿ ಪುಷ್ಪ ಧೂಪ ದೀಪದಲಿ ।
ನಲಿದು ಭೂ ಸುರರಾಗ ಚಂಡಿಕಾ ದೇವಿಯ
ಸಲೆ ಪ್ರಸನ್ನತೆಯ ಮಾಡಿದರು ॥ ೭೬

ಕದಳಿಯ ಫಲ ನಾಳಿಕೇರ ಖರ್ಜೂರಗ
ಳ್ಮದವಿಡಿದಿಹ್ಪು ದಂಡಗಳ ।
ಮೆದೆ ಮೆದೆ ಯಾಗಿ ಸಾಲ್ಗೊಳಿಸಿ ನೈವೇದ್ಯವ
ಪದುಳದೊಳೂಲಿದು ಮಾಡಿದರು ॥ ೭೭

ಖಂಡ ಸಕ್ಕರೆ ಚೆಲುಪಾಲು ಗಾರಿಗೆ ವಡೆ
ಮಂಡಿಗೆ ಕಜ್ಜಾಯಗಳ ।
ತಂಡ ತಂಡದೆ ರಾಸಿ ಗೈದು ನೈವೇದ್ಯವ
ಚಂಡಿಕಾಂಬಿಕೆಗರ್ಪಿಸಿದರು ॥ ೭೮

ಹೆಸರ ಕಿಚ್ಚಡಿ ಶಾಲ್ಯಾನ್ನ ಸದ್ಯೋಘೃತ
ಹಸನಾದ ದೋಸೆ ಯುಂಡಲಿಗೆ ।
ಪೊಸ ತಾಳದ ಜಾನ ಸೀಕರಣೆ ಪನ್ನೀರ
ನೊಸೆದರ್ಪಿಸಿದರಂಬಿಕೆಗೆ ॥ ೮೯

ಗಜ ಲಕ್ಷ್ಮಿ ಹಯ ಲಕ್ಷ್ಮಿ ಯಾಯುಧ ಲಕ್ಷ್ಮಿಯರ್
ನಿಜವಾದ ದಾನ ಲಕ್ಷ್ಮಿಯರ ।
ಭುಜ ಲಕ್ಷ್ಮಿ ಸೌಭಾಗ್ಯ ಸಿರಿ ಕೀರ್ತಿ ಲಕ್ಷ್ಮಿಯ
ಭಜಿಸಿ ಪ್ರತ್ಯಕ್ಷ ಗೈಸಿದರು ॥ ೯೦

ಶಾರದ ಲಕ್ಷ್ಮಿ ಸಾಮ್ರಾಜ್ಯ ಲಕ್ಷ್ಮಿಯ ಭಕ್ತಿ
ಸಾರದೊಳಗ ಪೂಜೆ ಮಾಡೆ ।
ಧಾರಿಣೀಶ್ವರ ಕಂಠೀರವೇಂದ್ರನ ಮೆಚ್ಚಿ
ಸೇರಿದರ್ನವ ಲಕ್ಷ್ಮಿಯರು ॥ ೯೧

ಮಂಗಳಾರತಿಗಳು ಮುದ್ದು ಕೋಲಾಟಗಳ್
ಸಂಗೀತ ಸಕಲ ಭೋಗಗಳು ।
ಹಿಂಗದೊಪ್ಪಿದುವಾಯುಧ ಮಂಟಪದ ದಿ
ವ್ಯಾಂಗಣದೊಳಗೇನೆಂಬೆ ॥ ೯೨

ಒಡನೋಲಗದಲಿ ನೆರೆದಿಹ ಪರಿವಾರ
ಕಡುಗಲಿ ಸುಭಟ ಮನ್ನೆಯರು ।
ಬಿಡದೆ ಪಣ್ಣಿಲ ಕಜ್ಜಾಯ ರಾಶಿಯ ಪೊತ್ತು
ಸಡಗರದೊಳಗೈದಿದರು ॥ ೯೩

ತುರಗ ಗಜಾವಳಿ ಚಂಡಿಕಾ ದೇವಿಗೆ
ಹರುಷದೆ ಕಾಣಿಕೆ ಗೈದು ।
ವರವ ಪಡೆದು ಕಂಠೀರವೇಶ್ವರನಂ
ದರ ಮನೆಗೈತಂದನಾಗ ॥ ೯೪

ಬಳಿಕ ಭೋಜನ ಶಾಲೆಯಲಿ ಬಂಧುಗಳು ಕೂಡಿ
ನಲಿದಾರೋಗಣೆ ಮಾಡಿ ।
ಜಲಜಾಪ್ತನಂದದೆ ನರಸ ರಾಜೇಂದ್ರ ಭೂ
ಲಲನೇಶನೊಪ್ಪಿದನಾಗ ॥ ೫೫

ಬಳಿಕ ಕಂಠೀರವ ರಾಜ ಸಂತೋಷವ
ತಳದಂದಿನ ರಾತ್ರಿಯಲಿ ।
ನಳಿನ ನಾಭನ ದಿವ್ಯ ಮೂರ್ತಿಯ ಧ್ಯಾನದೆ
ನಲಿದೊಪ್ಪಿದನೇ ವೇಳ್ವ ॥ ೫೬

ತರಣಿ ಭೂಪಾಲ ತಮದ ಮೇಲೆ ದಾಳಿಯ
ಭರದೊಳಗೈದಬೇಕೆಂದು ।
ಕಿರಣ ಸೈನ್ಯದೆ ಸಾರ್ವ ಡಂಗುರ ರವವೆನೆ
ಚರಣಾಯುಧಗಳುಲಿದುವು ॥ ೫೭

ಹರುಷದೆ ಪೂರ್ವ ವನಿತೆ ರವಿಯೊಳು ಭೋಗ
ವೆರೆವೊಡೆ ಮಜ್ಜನ ಗೈದು ।
ಧರಿಸಿದ ಮಾಂಗಲ್ಯ ಕುಂಕುಮವೆನಲಾಗ
ಳರುಣೋದಯ ರಂಜಿಸಿತು ॥ ೫೮

ನೆರೆದರು ಬಳಿಕುಪ್ಪವಡಕೆ ಪಾಡುವೆ
ತರುಣಿಯರ್ತಾಳ ದಂಡಿಗೆಯ ।
ಕರದೊಳು ತಳದು ಕಂಠೀರವೇಂದ್ರನ ಚೆಲ್ವ
ನೆರೆ ರನ್ನ ಸೆಜ್ಜೆ ವಾಗಿಲೊಳು ॥ ೫೯

ಮಧುರ ಧನ್ಯಾಸಿ ಭೂಪಾಳಿ ಗುಂಡಕ್ರಿಯೆ
ಯೊದವಿದ ದೇಸಾಕ್ಷಿ ಯೆನಿಪ ।
ಉದಯ ರಾಗದಲಿ ಭೂ ವರನಂಕ ಮಾಲೆಯು
ಸುದತಿ ರನ್ನೆಯರು ಪಾಡಿದರು ॥ ೬೦

ಏಳರಿ ರಾಯ ಪರ್ವತ ಕುಲಿಶಾಯುಧ
ಶ್ರೀ ಲೋಲ ಚರಣಾಬ್ಜ ಭೃಂಗ ।
ಬಾಲೆಯರಕ್ಷಿ ಚಕೋರ ಚಂದ್ರಮ ಪೂರ್ವ
ಶೈಲಕ್ಕೆ ರವಿ ಬಂದನೇಳು ॥ ೪೧

ತುರಗಾರೋಹಣ ರೇವಂತ ಜಯ ಸಿರಿ
ಗರಸ ಸನ್ಮೋಹನ ಸರಸ ।
ಗುರು ಕುಚೆಯರಿಗೆ ನೂತನ ಮನಸಿಜ ರೂಪ
ದೊರೆ ರಾಯ ನಲಿದುಪ್ಪವಡಿಸ ॥ ೪೨

ಲೀಲೆಯಿಂ ಪಿಡಿದ ಮಂತ್ರಾಕ್ಷತೆ ಫಲ ವಸ್ತು
ಜಾಲ ಸಹಿತ ಭೂ ಸುರರು ।
ಓಲಗಕ್ಕೈದಿದರ್ಪರಕೆಯ ಕೈಗೊಳ್ವೋ
ಡೇಳು ಚನ್ನಿಗ ನರಸೇಂದ್ರ ॥ ೪೩

ಮೂಡಣ ದೆಸೆಯರಸುಗಳು ನಿನ್ನಯ ಶೌರ್ಯ
ರೂಢಿಗೆ ಕಂಗೆಟ್ಟ್ಯಾಗ ।
ಕೂಡೆ ಕಳುಹಿದ ಕಪ್ಪದ ಧನ ಬಂಡಿಯೊಳ್
ಹೂಡಿ ಬಂದಿದೆ ನೋಡೇಳು ॥ ೪೪

ತೆಂಕಣ ದೊರೆಗಳು ನಿನ್ನ ಪರಾಕ್ರಮ
ದಂಕೆಗೆ ಭಯ ಪಡುತಾಗ ।
ಮುಂಕೊಂಡು ಕಾಣಿಕೆಯಿತ್ತಾನೆಗಳು ಬಂದು
ಬಿಂಕದೊಳಿವೆ ನೋಡೇಳು ॥ ೪೫

ಪಶ್ಚಿಮದವನಿಪರಂಜಿ ಶರಣು ಹೊಕ್ಕು
ಮೆಚ್ಚರವನು ಬಿಟ್ಟ್ಯಾಗ ।
ಉಚ್ಚವದೊಳಗಿತ್ತ ನವ ರತ್ನ ಭೂಷಣ
ಪೆಚ್ಚಿ ಬಂದಿವೆ ನೋಡೇಳು ॥ ೪೬

ಉತ್ತರದವನಿ ಪಾಲಕರು ರಣದೆ ಸೋತು
ಮತ್ತಾಗ ಕಾಣಿಕೆಯಿತ್ತ ।
ವೊತ್ತದ ತೇಜಿಗಳ್ಕದಿವೆ ನೋಡೇಳು
ವುತ್ತಮಾಶ್ರಿತ ಕಲ್ಪ ಭೂಜ ॥ ೪೩

ತಳ ತಳಿಸುವ ಭೂಷಣದ ಮನ್ನೆಯರುಗ
ಳಳವಟ್ಟ ಸಂದಣಿಯೊಳಗೆ ।
ದಳ ಪತಿ ಹರುಷದಿಂದೋಲೈಸುವೆರೀಗ
ತಳುವದೈತಂದು ನೋಡೇಳು ॥ ೪೪

ಊಳಿಗದವರು ವೊಂಟಿರಿಗಾರರು ಬಲು
ವೇಳದ ರಾಯ ರಾವುತರು ।
ಓಲಗ ಶಾಲೆಗೈತಂದರು ಮನ್ನಿಪೊ
ಡೇಳು ಭೂಭುಜ ಕುಲ ಚಂದ್ರ ॥ ೪೫

ದಿಕ್ಕು ದಿಕ್ಕಿನ ರಾಯ ಭೂರಿಗಳೂಡನಾಗ
ಳಕ್ಕರು ಮಿಗೆ ಹರುಷದಲಿ ।
ಲೆಕ್ಕವಿಲ್ಲದ ಮಂತ್ರಿಗಳಿದೆ ನೋಡೇಳು
ಸಕ್ಕರೆ ಬಿಲ್ಲನ ರೂಪ ॥ ೪೬

ಆ ಗಾನದೊಡನುಲಿದುವು ನೆರೆ ದೀಹದ
ಕೋಗಿಲೆ ರಾಜ ಕೀರಗಳು ।
ರಾಗದೆ ಕಂಠೀರವೇಂದ್ರನ ಕಿವಿಗಿಂ
ಪಾಗಲದೇನ ಬಣ್ಣಿಸುವೆ ॥ ೪೭

ಉರಗ ತಲ್ಪದೆ ಶ್ರೀ ಹರಿ ಮೈ ಮುರಿದೇಳ್ವ
ತೆರದಿಂದ ನರಸ ರಾಜೇಂದ್ರ ।
ಭರದೊಳುಪ್ಪವಡಿಸಿದನು ಕರ ಪದ್ಮದ
ಸಿರಿ ರೇಖೆಯನೀಕ್ಷಿಸುತ ॥ ೪೮

ನವ ರತ್ನ ಖಚಿತದಾಯುಧವನು ಪಟ್ಟದ
ಯುವತಿಯ ಮುಖ ಸರಸಿಜವ ।
ತವೆ ಹರ್ಷದೊಳ್ನಿಟ್ಟಿಸುತಪ್ಪವಡಿಸಿದ
ಭುವನೇಶ ಕಂಠೀರವೇಂದ್ರ ॥ ೫೩

ಆ ಸಮಯದೆ ದರ್ಪಣ ಮಂಗಳಾರತಿ
ಭೂ ಸುರ ದ್ವಯ ಕಪಿಲೆಗಳು ।
ಲೇಸಿನೊಳಿದಿರೊಳೊಪ್ಪಿರೆ ನೋಡಿ ಮಣಿ ಮಂಚ
ವಾಸಿಂದವಿಳಿದನೇ ವೇಳ್ವ ॥ ೫೪

ನೆರೆ ರನ್ನದಂಬಿಗೆಯೊಳು ದಿವ್ಯ ಜಲವನು
ತರುಣಿಯೊರ್ವಳು ಸೂಸಲಾಗ ।
ಸಿರಿ ಪದ ಯುಗ ಕರ ಮುಖವೆ ಪ್ರಕ್ಷಾಳಿಸಿ
ಧರಣೀಶ ಮೆರೆದನರ್ತಿಯಲಿ ॥ ೫೫

ಪಜ್ಜಳಿಸುವ ನವ ರತ್ನದ ಬಿತ್ತಿಯ
ಬಜ್ಜರದಧಿಕ ಲೋವೆಗಳ ।
ಸಜ್ಜುಕ ಸರದ ಮೇಲ್ಕಟ್ಟಲಿ ರಾಜಿಪ
ಮಜ್ಜನ ಶಾಲೆಗೈತಂದ ॥ ೫೬

ಸರಸಿಜ ನೇತ್ರಗೆ ಸಿರಿ ಸತ್ಯ ಭಾಮೆಯರ್
ಪಿರಿದು ಮಜ್ಜನಕೆರೆದಂತೆ ।
ಧರಣೀಶನ ಸಿರಿ ಮುಡಿಗಾಗ ನಾರಿಯರಿ
ನೆರೆ ಪನಿ ನೀರ ಸೂಸಿದರು ॥ ೫೭

ಪೀತಾಂಬರ ವೈದಿಲ ಸೆರಗಿನೊಳೂರ್ವೆ
ಜಾತಿ ನಾಯಕಿ ಹರುಷದಲಿ ।
ಪ್ರೀತಿಯಿಂ ಸಿರಿ ಮುಡಿ ಭದ್ರ ಕಾಯವೆ ಬಲು
ರೀತಿಯೊಳೂಲಿದೊರಸಿದಳು ॥ ೫೮

ಕಂಗೊಳಿಸುವ ಪಟ್ಟಿಯ ದೋತ್ರ ನೆರೆ ದಿ
ವ್ಯಾಂಗದೊಳಗೆ ಬಹಿರ್ವಾ ಸ ।
ರಂಗು ಮಾಣಿಕದ ಕುಲಾಯಿ ಭೂ ಪಾಲಗೆ
ಮಂಗಳೋತ್ಸವದೊಳೂಪ್ಪಿದುವು ॥ ೫೯

ನವ ರತ್ನ ದ ಹಾವುಗೆಯೊರ್ವ ಭಾವಕಿ
ತವಕದೆ ಪದಕಳವಡಿಸೆ ।
ಭುವನೇಶ ಚಿಂತಾ ಮಣಿ ನಾಮ ತೀರ್ಥದ
ಭವನಕ್ಕೈತಂದನರ್ತಿಯಲಿ ॥ ೬೦

ಘನವಾದ ಮಣಿ ಮಯ ಪದ್ಮ ಪೀಠದೊಳಾಗ
ಜನ ನಾಥ ಚೂಡಾ ರತ್ನ ।
ಮನ ಹರುಷದಲಿ ಮಂಡಿಸಿ ಕಸ್ತೂರಿ ನಾಮ
ವೆನು ಪಣೆಗಳವಡಿಸಿದನು ॥ ೬೧

ಬಳಿಕ ಸಂಧ್ಯಾ ವಂದನೆ ಮೊದಲಾಗಿಹ
ಸುಲಲಿತ ನಿತ್ಯ ಕೃತ್ಯಗಳ ।
ಇಳಯಾಣ್ಮ ವಿರಚಿಸಿ ಘನ ಹರುಷದೊಳಾಗ
ನಳಿನ ನಾಭನ ಪೂಜಿಸಿದ ॥ ೬೨

ಶ್ರೀ ಪತಿ ಧರ ಗೋ ಪತಿ ಕಮಲಜ ನುತ
ತಾಪ ತ್ರಯ ಸಂಹಾರ ।
ಪಾಪ ವಿದೂರ ಪಾವನ ಮೂರ್ತಿ ಮಂಗಳ
ರೂಪನೆ ಸರ್ವೇಶ ಶರಣು ॥ ೬೩

ಕಮಲಾಹ್ವ ಕಾರುಣ್ಯ ನಿಧಿ ಯಾನತ ರಕ್ಷ
ದ್ಯು ಮಣಿ ಸಹಸ್ರ ಸಂಕಾಶ ।
ಸುಮನೋ ನಮಿತ ಪದಾಬ್ಜ ಪಂಕಜ ನಾಭ
ರಮೆಯರಸನೆ ಪಾಲಿಸೊಲಿದು ॥ ೬೪

ನರ ಸಿಂಹನೆಂಬ ನಾಲ್ಕಕ್ಷರವಾದನ
ಸು ರುಚಿರ ಜಿಹ್ವಾಗ್ರದೊಳಗೆ ।
ಹರುಷದೆ ನೆಲಸಿರಲವನೈಶ್ವರಿಯಕ್ಕ
ಸರಿಯುಂಟೆ ಮೂ ಲೋಕದಲಿ ॥ ೬೫

ದೇಸ ಬ್ರಾಹ್ಮಣರಿಗೀವೆಡೆಯಲಿ ಚಂಚಲ
ಧೀವೃತ್ತಿಯಾಗದಂದದಲಿ ।
ತೀವಿದ ಸ್ಥಿರ ಬುದ್ಧಿಯನೀಯಬೇಕೆಂದು
ಭಾವಜ ಪಿತನ ಧ್ಯಾನಿಸಿದ ॥ ೬೬

ಸಲೆ ನರ ಸಿಂಹನ ತೀರ್ಥ ಪ್ರಸಾದವ
ವಿಲಸಿತ ಭಕ್ತಿಯೊಳ್ವರಿಸಿ ।
ನಲಿದು ಭೂ ಸುರರಿಗೆ ನಿತ್ಯ ದಾನವ ಮಾಡಿ
ನಲವ್ರದಾಳಿದ ಭೂಮಿ ಪಾಲ ॥ ೬೭

ಪಿರಿದು ಮಂತ್ರಾಕ್ಷತೆ ಫಲ ವಸ್ತುಗಳ ಭೂ
ಸುರರಿತ್ತು ಪರಸೆ ಕೈಕೊಳುತ ।
ವರ ಶುಭ ಲಗ್ನದೆ ಚಂಡಿಕಾಂಬೆಯ ಪೂಜೆ
ಗರಸನೈತಂದನರ್ತಿಯಲಿ ॥ ೬೮

ಬಳಿಕಾಗ ಮರು ಪೂಜೆಯ ಚಂಡಿಕಾಂಬೆಗೆ
ನಲಿದು ಮಾಡಿಸಿ ನರಸೇಂದ್ರ ।
ಬಲವಿಂದ ಕೈದೆತ್ತಿ ಕೂಶ್ಮಾಂಡ ಫಲವನು
ಸಲೆ ಖಂಡಿಸಿದನರ್ತಿಯಲಿ ॥ ೬೯

ವರ ದಳ ಪತಿ ಮನ್ನೆಯ ಮಂಡಲಿಕರ
ಕರಣಿಕರಾಪ್ತಮಂತ್ರಿಗಳ ।
ಹರುಷದೆ ಮನ್ನಿಸಿ ಸಾರಿಗೆ ಬರವೇಳ್ದ
ತೆರಳಿದನರ ಮನೆಗಾಗ ॥ ೭೦

ಪುರದ ಬಹಿರ್ಭಾಗದ ಪೂರ್ವ ದೆಸೆಯಲಿ
ಪಿರಿದಪ್ಪ ಶಮಿಯ ಮಂಟಪವ ।
ಪರಿ ಪರಿಯಲಿ ಬಹು ಸಿಂಗರ ಗೈಸಿದ
ಧುರ ಧೀರ ಲಿಂಗೆಯ ಗೌಡ ॥ ೨೧

ಮೇಲು ವರಿವೆ ಜಲ್ಲಿ ಪಟ್ಟೆಯ ಮೇಲ್ಕಟ್ಟು
ಸಾಲುಗೊಂಡೆಸೆವ ಪೂ ಮಾಲೆ ।
ಲೀಲೆಯೊಳಳವಟ್ಟು ಶಮಿಯ ಮಂಟಪದೊಳು
ಡಾಳಿಸಿದುವು ಚೆಲ್ವಿನಿಂದ ॥ ೨೦

ನವ ರತ್ನದ ಗೋಡೆ ರದದ ಕುರಾಡಗ
ಳವಿರಳ ಫಲವಸ್ತುಗಳ ।
ಧವಳೇಹ್ಷು ದಂಡ ರಂಭಾ ಸ್ತಂಭವಾ ದಿವ್ಯ
ಭವನಗಂಭಗಳೂಳೊಪ್ಪಿದುವು ॥ ೨೩

ಧಾರಿಣೀಶ್ವರನರಮನೆ ಬಾಗಿಲಿಂ ಜಂಬಿ
ಸಾರಿ ಮಂಟಪ ಪರಿಯಂತ ।
ಮೇರೆ ಯಿಲ್ಲದ ರತ್ನ ತೋರಣ ಕುರುಜುಗಳ್
ಸೇರಿ ಕಟ್ಟಿದುವರ್ತಿಯಲಿ ॥ ೨೪

ಮೆರೆವ ಮುತ್ತಿನ ರಂಗವಲಿ ದಿವ್ಯ ಪರಿಮಳ
ವೆರದಿಹ ಪನ್ನೀರ ಚಳಯ ।
ಪುರ ವೀಥಿಯಿಂದೊಂದು ಯೋಜನ ಪರಿಯಂತ
ಪರಿ ಶೋಭಿಸಿದುವೇ ವೇಳ್ವ ॥ ೨೫

ಬಳಿಕ ಚೌ ದೆಸೆಯ ದೇಶದ ನೋಟಕ ಜನ
ಸುಲಲಿತ ಶೃಂಗಾರದಿಂದ ।
ಇಳಯಾಮ್ಮನ ಸಾರಿಯತುಲ ಸಂಭ್ರಮವ ನೋ
ಡಳವಟ್ಟು ಸಂದಣಿಸಿದರು ॥ ೨೬

ಅರ ಮನೆ ಬಾಗಿಲ ಬಳಯಿಂದ ಪುರ ವೀಧಿ
ಹೊರ ವಳಯದ ಜಂಬಿ ಸಾರಿ ।
ಸು ರುಚಿರ ಮಂಟಪ ಪರಿಯಂತ ಜನರು ಕಿ
ಕ್ಕಿರಿದೊಪ್ಪಿದರು ಸಂಭ್ರಮದೆ ॥ ೩೩

ವರ ಮಂಟಪದ ಸುತ್ತ ಯೋಜನದೊಳಗಾಗ
ಳಿರುಹೆ ನುಸುಳಲಿಂಬುಗೊಡದೆ ।
ಮೆರೆದುದು ನೋಟಕ ಜನವಾ ಸಾರಿಯ
ಪರವೋತ್ಸವವನೇನೆಂಬೆ ॥ ೩೪

ಬಡನಾಗ ಶುಭ ಲಗ್ನದೆ ಸರ್ವ ಸಂಭ್ರಮ
ವಿಡಿದಾ ಶಮಿಯ ಮಂಟಪಕೆ ।
ಕಡು ತವಕದೆ ರಂಗ ನಾಥ ಶ್ರೀ ನರಸಿಂಹ
ರೊಡನೈದಿದರರ್ತಿಯಲಿ ॥ ೩೫

ಬಳಿಕಿತ್ತಲಿಳಯಧಿಪನ ನೇಮದೊಳಾಗ
ದಳ ವಾಯಿ ಲಿಂಗ ರಾಜೇಂದ್ರ ।
ಪಲ ಬಗೆಯಲಿ ಸಿಂಗರಿಸಿ ಸಾರಿಗೆ ಬಹ
ಚೆಲುವನದೇನ ಬಣ್ಣಿಸುವೆ ॥ ೩೬

ಮುಂತೆ ಸಿಂಗರದ ಮನ್ನೆಯ ಮಂಡಲಿಕರ
ತಿಂತಿಣಿ ಸಹಿತ ಸಂಭ್ರಮದೆ ।
ಕಂತು ಸನ್ನಿಭನಡೆಗಂದಾಗ ದಳ ಪತಿ
ಸಂತೋಷದೊಳ್ಮತಂದ ॥ ೩೭

ನೊಸಲ ಕಸ್ತೂರಿಯ ತಿಲಕ ದಿವ್ಯ ಭೂಷಣ
ವೆಸೆಯೆ ದುವ್ವೆಟಗಳನಾಂತು ।
ವಸುಧೇಶ್ವರನೋಲಗಕಾಗ ಮನ್ನೆಯ
ವಿಸರವೈತಂದುದರ್ತಿಯಲಿ ॥ ೩೮

ಸಾರಿಯ ಸನ್ನೆಯ ರಾಯ ಭೇರಿಯು ರವ
ಪೂರೈಸಿ ತುಡುಕೆ ದಿಕ್ತಟವ ।
ಮೇರೆ ಯಿಲ್ಲದ ಚತುರಂಗ ಸಂನಾಹ ಶ್ಯಂ
ಗಾರದೊಳ್ಮತಂದುದಾಗ ॥ ೪೩

ಶರಧಿಯ ತೆರೆ ಮಾಲೆಯುರವಣಿಗೊರೆಯಾಗಿ
ತುರಗದ ನೆರವಿಯೈತರಲು ।
ಬಿರುದಿನ ಕರಿಗಳು ಸುರುಚಿರಾಭರಣದೆ
ಮೆರೆದೊಡನೈತಂದುವಾಗ ॥ ೪೪

ದೊರೆ ರಾಯ ನರಸರಾಜೇಂದ್ರ ಸಿಂಗರ ಗೈದು
ಪರಮೋತ್ಸವದೊಳಗಾಗ ।
ಹರುಷದೊಳಗೆ ಜಂಬಿ ಸಾರಿಗೈತರುತಿಹ
ಸಿರಿಯ ಸಂಭ್ರಮವನೇ ವೇಳ್ವ ॥ ೪೫

ಕೊಂಡಾಡುವ ಪಾಠಕಾಳಿಯ ರವ ಭೂ
ಮಂಡಲವನು ಪೂರೈಸೆ ।
ಚಂಡ ವಿಕ್ರಮನುತ್ತಮಾಶ್ವವ ನಗುತ ಮುಂ
ಕೊಂಡೇರಿದನತಿರ್ಯಯಲಿ ॥ ೪೬

ಮುತ್ತಿನ ಸತ್ತಿಗೆ ಮುಕರ ಠೆಕ್ಕೆಯ ಮುದ
ವೆತ್ತ ಮಿಸುನಿಯಾಲವಟಲ ।
ಬಿತ್ತರವಹ ಸಾಲ ನೆಳಲೊಳು ನಗುತ ಭೂ
ಪೋತ್ತಮ ನಡೆದನತಿರ್ಯಯಲಿ ॥ ೪೭

ಮಿಸುನಿಯ ಹಡಪ ಚಾಮರ ಕುಂಚ ಕಾಳಾಂಜಿ
ಪೊಸ ವಟ್ಟೆಯ ಪಾವಡೆಯ ।
ಜಸವೆಟ್ಟ್ಯಾಳಿಗದವರ ಮೇಳದೊಳಾಗ
ವಸುಧೇಶ ಸಾರಿಗೈದಿದನು ॥ ೪೮

ಮೊರೆವ ನಾನಾ ಬಗೆ ವಾದ್ಯ ಡವಳ ಶಂಖ
ಬಿರುದಿನ ವೆಟು ಪಾವಡೆಯ ।
ಸುರುಚಿರವಹ ಡಾಲುಗಳ ಸಂಭ್ರಮದಲಿ
ನರಸ ರಾಜೇಂದ್ರನೈತಂದ ॥ ೪೯

ಆನೆಯ ಮೇಲೆ ರಾಜಿಸುವೆ ಡಮಾಮಿಗ
ಳಾನಂದದ ರವಮೆಸೆಯೆ ।
ಭೂ ನಾಥ ಕಂಠೀರವ ನರಸೇಂದ್ರ ಸು
ಮ್ಮಾನದೆ ಸಾರಿಗೈದಿದನು ॥ ೫೦

ದಳವಾಯಿ ಚಂದ್ರಮ ಮನ್ನೆಯರುಗಳ ಸಂ
ಕುಳಗೂಡಿ ತೇಜಿಯನೇರಿ ।
ಇಳೆಯಾಣ್ಮ ನರಸ ರಾಜೇಂದ್ರನ ಪಿಂತಾಗ
ಲಳವಟ್ಟು ನಡೆದನರ್ತಿಯಲಿ ॥ ೫೧

ತೂಳುವ ಶುಂಡಾಲ ಕುಣಿವ ಕುದುರೆಗಳ
ಮೇಳದೊಳಗೆ ಪಾತಕರ ।
ಆಲಾಪಗಳಿಂದ ದೊರೆ ರಾಯ ನರಸ ಭೂ
ಪಾಲ ಸಾರಿಗೆ ನಡೆತಂದ ॥ ೫೨

ಥಳಥಳಿಸುವ ಶುಭ್ರ ಚಾಮರಗಳನಾಗ
ನಳಿನಾಕ್ಷಿಯರು ಡಾಳಿಸಲು ।
ಚಲದಂಕ ಕಂಠೀರವ ನರಸೇಂದ್ರನಂ
ದಳವಟ್ಟು ಸಾರಿಗೈತಂದ ॥ ೫೩

ನಲವಿಂದ ಮಾರ್ಬಲಗಳನಿಬ್ಬಗೆಯೊಳು
ನಿಲಿಸಲುತ್ತಮ ವಾಜಿಯನು ।
ತೊಲಗು ವೇಢೆಯ ರವೆಗಾಲು ಬಂಬೀರಿಯೊ
ಳ್ನಲಿದೇರಿ ಮೆರೆಯುತರ್ತಿಯಲಿ ॥ ೫೪

ಹರಿಯ ಲಂಘನೆ ಗರುತ್ಮನ ವೇಗ ದೃಢ ಗತಿ
ಬಿರುದಿನ ಚರಣ ತ್ರಯದ ।
ಮೆರೆವ ಚಮ್ಮಟಿಗೆಯ ಚಪಲ ಗತಿಯನಾಗ
ತುರಗದೊಳಗೆ ತೋರಿಸಿದ ॥ ೯೫

ಛಲರೆ ಭಾಪುರೆ ಧಣು ದಿವ್ಯಾಶ್ವ ರೇವಂತ
ಕಲಿಗಳ ನೊಸಲ ಸುತಿಲಕ ।
ಸಲೆ ಶೌರ್ಯ ವರ್ಧನ ಜಯತೆಂದು ನಗುತಾಗ
ಳುಲಿದುದು ವಂದಿ ಸಂದೋಹ ॥ ೯೬

ತುರಗವನಿಳಿದು ಪಟ್ಟದ ಮೆದದಾನೆಯ
ಸಿರಕೆ ಲಂಘಿಸಿ ತೂಳಿಸುತ ।
ಹರುಷದೆ ಬೀದಿವರಿಸಿ ಸಂತೋಷವ
ಪಿರಿದು ಪುಟ್ಟಿಸಿದ ನೋಳ್ಪರಿಗೆ ॥ ೯೭

ನಗುತಾಗ ಕಂಠೀರವೇಂದ್ರ ಸಿಂಗಾಡಿಯ
ತೆಗೆದಂಬುಗಳನಳವಡಿಸಿ ।
ಗಗನದೆ ಚರಿಪ ಪಕ್ಷಿಯನೆಚ್ಚು ಗುರಿಯು ಬ
ಲ್ಸೊಗಸ ಬೀರಿದ ನೋಳ್ಪರಿಗೆ ॥ ೯೮

ಕಾದಿಸಿ ತಗರ ಮಲ್ಲರ ಕಾಳಗದ ವಿ
ನೋದದೊಳಗೆ ಪೊತ್ತುಗಳದು ।
ಭೂ ಧವ ಶಮಿಯನರ್ಚಿಸಿ ವರ ವಿಡಿದು ವಿ
ನೋದದೆ ನಡೆತಂದನಾಗ ॥ ೯೯

ದೊರೆ ರಾಯ ಕಂಠೀರವೇಂದ್ರ ಸಾರಿಗೆ ಹೋಗಿ
ಬರುವ ವಿಲಾಸವನಾಗ ।
ಪುರ ವನಿತೆಯರು ನೋಳ್ಪಾಡೆ ಸೆಜ್ಜೆ ವಳಿಗೆ ಮಂ
ದಿರಗಳ ಮೆಚ್ಚನೇರಿದರು ॥ ೧೦೦

ಕಾಯಜಾಕೃತಿಯಲ್ಲಿತಹ ಕಂಠೀರವ
ರಾಯ ಲಾವಣ್ಯಾಂಬುವಲಿ ।
ಆಯತಾಕ್ಷಿಯರ ಕಣ್ಮರಿ ಮಿಾನು ಹೊಳವ ವಿ
ಡಾಯವನೇನ ಬಣ್ಣಿಸುವೆ ॥ ೧೦೧

ಕರದಾವರೆ ಮುಗಿದುವು ನಯನೋತ್ಪಲ
ವರಳಿದುವಾ ವನಿತೆಯರ ।
ದರ ಹಾಸ ಜೊನ್ನವೆಸೆದುದು ಕಂಠೀರವ
ಪರಿ ಪೂರ್ಣ ಚಂದ್ರನೈತರಲು ॥ ೧೦೨

ಲೆಕ್ಕವಿಲ್ಲದ ಚಂದ್ರ ಜ್ಯೋತಿ ದೀವಟಿಗೆಗ
ಳುಕ್ಕಂದದ ಪ್ರಭೆಯೊಳಗೆ ।
ಅಕ್ಕರೊಳಗೆ ಕಂಠೀರವ ನರಸೇಂದ್ರ
ಪೊಕ್ಕನು ಪುರವನತಿ೯ಯಲಿ ॥ ೧೦೩

ಅಲ್ಲಲ್ಲಿ ಬಾಣ ಬಿರಿಸು ಸುರಪೂಗಳು
ಪಲ್ಲೈಸಿ ತುಡುಕಲಂಬರವೆ ।
ಸಲ್ಲಲಿತಾಂಗ ಕಂಠೀರವ ನರಸ ಭೂ
ವೆಲ್ಲಭನೈತಂದನಾಗ ॥ ೧೦೪

ಎಡ ಬಲದೊಳಗೆ ಡಾಳಿಸುವ ಸೀಗುರಿಗಳ
ಬೆಡಗಿನೊಳಾನೆಯ ಮೇಲೆ ।
ಕಡು ಹರುಷದೆ ಬಂದು ರಾಜ ಮಂದಿರವನು
ಪೊಡವೀಶ್ವರ ಪೊಕ್ಕನಂದು ॥ ೧೦೫

ಬಳ ರಾಣುವೆಯ ನಾರಿಯರ ರತ್ನದಾರತಿ
ಹೊಳವ ಮುತ್ತಿನ ಸೇಸೆಗಳು ।
ಸುಳಿದುವು ನೃಪನಿದಿರಲಿ ಪಟ್ಟದಾನೆಯ
ನಿಳಿದಾತ್ಮಗೃಹಕ್ಕೈದಿದನು ॥ ೧೦೬

ಒಡೆಯನಪ್ಪಣೆಯಿಂದ ಸಂತೋಷದೊಳಾಗ
ಕಡು ಚೆಲ್ವ ದಳ ಪತಿ ನಗುತ ।
ಪಡೆಯ ಮನ್ನಿಸಿ ಬೀಳ್ಕೊಟ್ಟು ಸಂಭ್ರಮದಲ್ಲಿ
ನಡೆದನು ತನ್ನರ ಮನೆಗೆ ॥ ೧೦೩

ಬಳಿಕಾಗ ಮರುದಿವಸದೆ ಭೂಪ ನೇಮಿಸೆ
ದಳ ಪತಿ ಕರಣಿಕರುಗಳು ।
ಇಳೆಯ ಯಾಚಕರಿಗೆ ಪೊನ್ನುಡು ಗೊರೆಗಳ
ತಳುವದಿತ್ತುಪಚರಿಸಿದರು ॥ ೧೦೪

ಧರೆಯ ಮಲ್ಲರು ಗಾಯಕರು ವಿದ್ವಾಂಸರು
ಪರಿ ಹಾಸಕ ಪರಿಣತರು ।
ಪಿರಿದು ಪೊನ್ನುಡುಗೊರೆ ಭೂಷಣಾಳಿಗಳಿಂದೆ
ನೆರೆ ಮನದಣಿದೈದಿದರು ॥ ೧೦೫

ಧರಣಿ ಸುರರ ಮನ್ನಿಸಿ ಬಹು ಧರ್ಮವ
ಪಿರಿದು ರಚಿಸಿ ತೋಷದಲಿ ।
ದೊರೆ ರಾಯ ನರಸ ರಾಜೇಂದ್ರ ಚಂದ್ರಮನಾಗ
ಸ್ಥಿರ ಸಾಮ್ರಾಜ್ಯದೊಳಿದ್ದ ॥ ೧೦೬

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮೊದದ ಸು ಧರ್ಮಾನುಬಂಧಿ ॥ ೧೦೭

ಎಂಟನೆಯ ಸಂಧಿ ಸಮಾಪ್ತಂ.

ಇಪ್ಪತ್ತು ಮೂರನೆಯ ಸಂಧಿ.

ಗಜೇಂದ್ರನ ತಿರುನಾಳ ಉತ್ಸವದ ಮಂಟಪವನ್ನು ಕಟ್ಟಿಸಿದುದು.

ಸೂಚನೆ॥ ವರ ಗಜೇಂದ್ರನ ತಿರು ನಾಳ ರಂಗೇಶಗೆ
ನರಸರಾಜೇಂದ್ರ ಮಾಡಿಸಿದ ॥

ಕಮಲ ಸಖನ ವೈರಿಯ ಪೆಸರಸುರನ
ಕಮಲ ಚರನ ರೂಪ ತಾಳಿ ।
ಕಮಲದೊಳಗೆ ಪ್ರೊಕ್ಕು ಕೊಂದ ದೇವನ ಪಾದ
ಕಮಲಗಳಿಗೆ ನಮಿಸುವೆನು ॥ ೧

ಧರೆಗತಿ ಚೋದ್ಯವೆಡೆದ ಮಹಾ ನವಮಿಯ
ಪರವೋತ್ಸವವ ಪಟ್ಟಣದೆ ।
ದೊರೆ ರಾಯ ನರಸೇಂದ್ರ ಮಾಡಿಸಿ ಕೀರ್ತಿಯ
ಪರಿಪಿತಾ ಸುಖದೊಳಗಿರಲು ॥ ೨

ಧರೆಗೆ ಪುಣ್ಯವೆ ಬೀರುತೊಡನೆ ತುಲಾ ಮಾಸ
ಬರಲು ಕಾಶಿಯ ಗಂಗೆಯಾಗ ।
ನರಸೇಂದ್ರ ಹರಿಗೆ ಮಾಳ್ಪುತ್ಸವವನು ನೋಳ್ಪ
ಭರದೆ ಬಂದಿಹ ಸಮಯದಲಿ ॥ ೩

ನೆರೆ ಧರ್ಮ ಶೌರ್ಯದೇಳ್ಗೆಯಲಿ ಕರ್ಣಾಟವ
ಹೊರೆಯುತ ನರಸ ಭೂ ಪಾಲ ।
ಇರುತಿರೆ ರಂಗ ನಾಥನಿಗೆ ಗಜೇಂದ್ರನ
ತಿರುನಾಳ ಸಮಯವೈದಿದುದು ॥ ೪

ಆ ಮಹಿಮೆಯನುಸಿರುವೆ ಪೂರ್ವ ಯುಗದಲಿ
ಕಾಮೆ ಪಿತನ ಬಕುತಿಯಲಿ ।
ಪ್ರೇಮದೆ ಭಜಿಸುತಿಂದ್ರದ್ಯುಮ್ನ ರಾಯ ಸು
ತ್ರಾಮ ಭೋಗದೊಳೂಪ್ಪುತಿರ್ದ ॥ ೩

ಹರಿ ಭಕ್ತಿ ಯುತನಾತ ಸಕಲ ಸಾಮ್ರಾಜ್ಯದ
ಸಿರಿಗೆ ಸೇರದೆ ತ್ರಿ ಕೂಟದಲಿ ।
ಪಿರಿದು ತಪವ ಮಾಡುತಿರೆ ಕುಂಭ ಸಂಭವ
ನಿರದೆಯೈತಂದನಾ ಸ್ಥಳಕೆ ॥ ೪

ಸಿರಿಯರಸನ ಧ್ಯಾನದೆ ಮುನಿ ಪತಿಯ ಸ
ತ್ಕರಿಸದೆ ಯೋಗದೊಳಿರಲು ।
ವರ ಮುನಿ ಕೋಪಿಸಿ ಮದ ಗಜವಾಗೆಂ
ದೊರೆದು ಶಪಿಸಿದನಾ ನೃಪನ ॥ ೫

ಎಂದಿಗೀ ಶಾಪ ವಿಮೋಚನೆ ತನಗಹು
ದೆಂದು ಮುನಿಯ ನೃಪ ಕೇಳ ।
ಇಂದೀವರಾಕ್ಷನ ದರುಶನದಿಂ ನಿನ್ನ
ಮಂದತ್ವವಳಿದಪುದೆಂದ ॥ ೬

ಎನುತಾಗ ಕಲಶಜ ತನ್ನಾಶ್ರಮಕ್ಕೈದೆ
ಜನ ನಾಥ ಗಜ ರೂಪ ತಾಳಿ ।
ಘನವಾದ ಕರಿಗಳಗರಸಾಗಿ ಬಿಡದಾಗ
ವನ ವನದೊಳು ಚರಿಸಿದನು ॥ ೭

ಬಳಿಕಿತ್ತ ಹಾಹಾಹೂಹುವೆನಿಪ ಪೆಸ
ರಳವಟ್ಟ ಗಂಧರ್ವನಂದು ।
ಬಲು ಗರ್ವಿಸೆ ನೆಗಳಾಗೆಂದು ಸುರ ಪತಿ
ಮುಳಿದು ಶಾಪವನಿತ್ತನವಗೆ ॥ ೮

ತನಗೀ ಶಾಪ ಪರಿವುದೆಂದಿಗೆಂದವ
ನನಿಮಿಷ ಪತಿಯ ಪ್ರಾರ್ಥಿಸಲು ।
ಜನಜಾಹ್ವನ ಚಕ್ರ ಹತಿಯಿಂದ ಮುನ್ನಿನ
ಘನ ದಿವ್ಯ ರೂಪಹೆಯೆಂದ ॥ ೧೧

ಎಂದೆಂಬ ಸುರಪನ ಶಾಪದೆ ನೆಗಳಾಗಿ
ಬಂದೊಂದು ಕಾಸಾರದಲಿ ।
ಕುಂದದ ಜಲ ಮಧ್ಯದೊಳಗವನಿರುತಿರ
ಲಂದೊಂದು ಚೋದ್ಯವೆಸಗಿತು ॥ ೧೨

ಒಡನಂದು ಗಜ ರೂಪ ತಾಳಿದಿಂದ್ರದ್ಯುಮ್ನ
ಬಿಡದಾಗ ವನಗಳ ಚರಿಸಿ ।
ಕಡು ಬಳಲಿಕೆಯಿಂದ ನೀರೀಂಟೆ ನೆಗಳೆ
ರ್ದೆಡೆಯ ಪೊದಿದನೇ ವೇಳ್ವ ॥ ೧೩

ಸರಸಿಯ ಕೂಲವ ಮುಂದ ಗತಿಯಲಿಳಿ
ದುರುತರ ಪೂರ್ಣ ಜಲವೆನು ।
ಕರಿ ಬಂದು ಪೊಕ್ಕು ಕಲಕಿ ಕರದೊಳು ನೀರ
ನರೆ ತೀವಿ ಕುಡಿಯುತೊಪ್ಪಿರಲು ॥ ೧೪

ಬಳಿಕಲ್ಲಿ ವಾಸವಾಗಿರ್ದ ನೆಗಳು ನೀರ
ತುಳುಕಿ ಚೆಲ್ಲುವ ಗಜ ಪತಿಯ ।
ಚಲನವ ಪಿಡಿದು ಭೋರ್ಗರೆದಾಗ ಮಡುವಿಗೆ
ಸೆಳೆಯಲೆಳಸಿದುದೇ ವೇಳ್ವ ॥ ೧೫

ಕರಿ ರಾಜಗೆ ಮಕರಿಗೆ ಯುದ್ಧ ಸಾಸಿರ
ವರುಷವಾ ಸರಸಿಯೊಳಸಗೆ ।
ನೆರೆ ಸತ್ವಗುಂದಿ * ಯಾ ಗಜ ರಾಜ ವೈಕುಂಠ
ದೆರೆಯಗೆ ಮೊರೆಯಿಟ್ಟ ತಾಗ ॥ ೧೬

* ಯಾಗಾಗಜ.

ಆ ವೊರೆಯನು ಕೇಳುತ ಚಕ್ರವಿಡಿದಾಗ
ಸಾಮಜವಿದ್ದೆಡೆಗೈದಿ ।
ಕಾಮಿ ಜನಕ ಮಕರಿಯ ಶಿರವರಿದು ಸು
ಪ್ರೇಮದೆ ಗಜವ ರಕ್ಷಿಸಿದ ॥ ೧೫

ಜಂಭಾರಿ ವೊದಲಾದ ಸುರರಾಗ ಸಲೆ ಪೀ
ತಾಂಬರ ಧರನ ಕೊಂಡಾಡಿ ।
ಮುಂಬರಿದೊಡನೆ ಪೂ ಮಳಗರೆಯುತ ಬಲು
ಸಂಭ್ರಮೋನ್ವಿತರಾದರಾಗ ॥ ೧೬

ಹರಿ ರಾಜಗೆ ಮಕರಿಗೆ ಮುಕ್ತಿ ಮಾರ್ಗವ
ಕರುಣಿಸಿ ಸಿರಿ ದೇವಿ ಸಹಿತ ।
ಪರವೋತ್ಸವದಲಿ ವೈಕುಂಠ ನಗರಿಗೆ
ಹರಿ ಬಿಜಯಂಗೈದನೊಲಿದು ॥ ೧೭

ಅಂದಿನ ಪರವೋತ್ಸವವೀಕ್ಷಿಸಿ ಜನ
ವೃಂದ ಕೃತಾರ್ಥವಪ್ಪಂತೆ ।
ಚೆಂದದೆ ಕಂಠೀರವ ರಾಜ ರಂಗೇಶ
ನಿಂದ ತೋರಿಸಲುಜ್ಜಗಿಸಿದ ॥ ೧೮

ಬಳಿಕೋಲಗಗೊಟ್ಟು ಸಂತೋಷವನಾಗ
ತಳದು ಕಂಠೀರವ ರಾಜ ।
ದಳವಾಯಿ ಲಿಂಗರಾಜೇಂದ್ರನ ಕರೆದಂದು
ಗಳಲನೆ ನುಡಿದನಿಂತೆಂದು ॥ ೧೯

ಸಿರಿ ಧರ ರಂಗ ನಾಥನಿಗೆ ಗಜೇಂದ್ರನ
ತಿರುನಾಳ ಪರವೋತ್ಸವವ ।
ವಿರಚಿಸು ಶುಭ ದಿನದೊಳಗೆಂದು ಭೂ ಪಾಲ
ಹರುಷದೊಳಗೆ ನೇಮಿಸಲು ॥ ೨೦

ಅರಸನಾಜ್ಞಾಪನೆಯಲಿ ದಳಪತಿಯಾಗ
ಕರಿಸಿ ಲಿಂಗೆಯಗವುಡನನು ।
ಕರಿರಾಜ ತಿರುನಾಳಿನುತ್ಸವಗಳಿಗೀಗ
ಪುರವೆ ಸಿಂಗರಿಸು ನೀನೆಂದ ॥ ೨೩

ವರ ದಿವ್ಯ ಸರಸಿಯ ಶ್ರೀರಂಗಧಾಮನ
ಪರಮೋತ್ಸವ ಮಂಟಪವ ।
ಪಿರಿದು ಸಿಂಗರಿಸೆಂದು ಲಿಂಗೆಯಗವುಡಗಂ
ದೊರೆದನು ದಳಪತಿ ನಗುತ ॥ ೨೪

ಒಡೆಯನಾಜ್ಞಾಪನೆಯನು ಸಿರದಲಿ ತಾಳಿ
ಕಡು ಭಕ್ತಿಯೊಳಗವನಾಗ ।
ಬಿಡದೆ ಶ್ರೀರಂಗಪಟ್ಟಣವ ಸಿಂಗರಿಸಿದ
ಬೆಡಗನದೇನ ಬಣ್ಣಿಸುವೆ ॥ ೨೫

ಕೇರಿ ಕೇರಿಯಲಿ ಪನ್ನೀರ ಚಳಯ ರನ್ನ
ದೋರಣ ಪೊಂಗುರುಜುಗಳು ।
ಮೇರೆಯಿಲ್ಲದೆ ಕಾಂತಿವಿಡಿದುವು ಪುರದ ಶೃಂ
ಗಾರವ ಪೊಗಳ್ವೊಡಾರಳವು ॥ ೨೬

ಗುಡಿ ಗೋಪುರ ರಾಜಗೇಹ ಮಂಡಲಿಕರ
ಕಡು ಚೆಲ್ವ ಸಾಲ ಸೆಜ್ಜೆಗಳು ।
ಬಿಡದೆ ಸಿಂಗರನಾಂತು ದಿಕ್ಪಾಲರರಮನೆ
ಗೊಡನಿತ್ತುವು ನಾಚಿಕೆಯ ॥ ೨೭

ಪೊಸ ಮುತ್ತು ವಜ್ರ ವೈಡೂರ್ಯ ಗೋಮೇಧಿಕ
ವಿಸುಪ ನೀಲದ ಕುಚ್ಚಿನಿಂದ ।
ಜಸವೆಡೆದುದು ಕರಿರಾಜನ ತಿರು ನಾಳ
ಗೆಸೆಯುವುತ್ಸವ ಮಂಟಪವು ॥ ೨೮

ನವ ರತ್ನದ ತೋರಣ ಸಾಲುಗಂಭದೆ
ಖವ ಖವಿಸುವೆ ದರ್ಪಣಗಳು ।
ರವಿ ಕಿರಣವ ಜರೆಯುತ ತಮ್ಮ ಕಾಂತಿಯಿಂ
ಭುವನವ ಬೆಳಗಿದುವಾಗ ॥ ೮೯

ಪೂವಿನ ಮಾಲೆ ಹೊಂಬಾಳೆಯ ತೋರಣ
ತೀವಿದ ಫಲ ವಸ್ತುಗಳು ।
ಭಾವಜ ಪಿತ ರಂಗ ಧಾಮನಿಗುತ್ಸಾಹ
ವೀವ ಮಂಟಪದೊಳೊಪ್ಪಿದುವು ॥ ೯೦

ಶಶಿ ಕಾಂತದ ಸೋಪಾನ ಪೊಂಡಾವರೆ
ಪೊಸ ಪರಿಮಳದ ಕಲ್ಹಾರ ।
ಎಸೆವ ಕನ್ನೈದಿಲ ಕಾಂತಿಯು ತಳದಾಗ
ಬಿಸರುಹಾಕರವೊಪ್ಪಿದುದು ॥ ೯೧

ಮೆರಿ ದುಂಬಿಗಳು ಕಳ ಹಂಸೆ ರಥಾಂಗಗ
ಳುರುತರ ಸಾರಸವಕ್ಕಿ ।
ಮೆರೆವಾ ಕಮಲಾಕರದ ಸೌಂದರ್ಯದೊಂ
ದಿರವ ನಾನೇನ ಬಣ್ಣಿಸುವ ॥ ೯೨

ಪಿರಿದೆನಿಸುವ ಕಲ್ಪ ವೃಹ್ಷ ನಾನಾ ಬಗೆ
ಪರಿಮಳ ಪೂ ವಲ್ಲಿಗಳು ।
ವರ ದಿವ್ಯ ಸಂಸಿಯ ಬಳಸಿದುದ್ಯಾನದೆ
ಮೆರೆದುವೇನೆಂಬೆನಚ್ಚರಿಯ ॥ ೯೩

ಅರಗಿಳಿಗಳು ಕೋಗಿಲೆ ನವಿಲ್ಮಂತಾದ
ಮೆರೆವ ನಾನಾ ಪಕ್ಷಿಗಳು ।
ನೆರೆ ಮಧುರ ಸ್ವರ ಗೈಯುತುದ್ಯಾನದೆ
ಪರಿಶೋಭಿಸಿಹುವರ್ತಿಯಲಿ ॥ ೯೪

ಇಂತು ಪಟ್ಟಣವ ಸಿಂಗರಿಸಿ ಲಿಂಗೆಯಗೌಡ
ಸಂತಸದಲಿ ನಡೆತಂದು ।
ಮುಂತದ ದಳ ಪತಿಯಡಿಗೆ ಬಿನ್ನೈಸಿಯೋ
ರಂತೆ ಸಂಭ್ರಮವ ಬೀರಿದನು ॥ ೩೫

ಕರಿ ರಾಜ ತಿರು ನಾಳುತ್ಸವಗಳಿಗಾ
ಪುರ ಶೃಂಗರವಾದ ಬಗೆಯು ।
ಹರುಷದೆ ದಳ ಪತಿ ನರಸ ರಾಜೇಂದ್ರನ
ಚರಣಕೆ ಬಿನ್ನೈಸಿದನು ॥ ೩೬

ವರ ಗಜೇಂದ್ರನ ತಿರು ನಾಳ ರಂಗೇಶಗೆ
ನರಸ ರಾಜೇಂದ್ರ * ಮಾಡಿಸುವ ।
ಪರಮೋತ್ಸವಕಚ್ಚರಿವೆಟ್ಟು ಧರಣಿಯು
ನೆರೆ ಜನವೈತಂದುದಾಗ ॥ ೩೭

ಕೊಂಕಣ ಕೊಂಕಣ ಮಲೆಯಾಳ ಕರ್ನಾಟದ
ಪೊಡವಿಯ ಜನರು ಸಂತಸದೆ ।
ಮಡದಿ ಮಕ್ಕಳು ಸಹ ಕರಿ ರಾಜ ತಿರು ನಾಳ
ಬಿಡದೆ ನಿಟ್ಟಿಸ ಬಂದರೊಲಿದು ॥ ೩೮

ಬೇಹಾರಿಗಳು ಬಿಲೆಯರಿವೆ ಜಾಣರು ಬಲು
ಸಾಹಸಿಗಳು ಸಜ್ಜನರು ।
ಶ್ರೀ ಹರಿ ರಂಗ ಧಾಮನ ತಿರುನಾಳು
ತ್ಸಾಹಕ್ಕೆತಂದರರ್ತಿಯಲಿ ॥ ೩೯

ಚೋಳ ಚಪ್ಪರದ ಸಮಗಿಗಳು ಬಲು ವಾದ್ಯ
ತಾಳ ಜಾಗಟೆಯ ಮೇಳದಲಿ ।
ತೂಳುವ ಹರುಷದೆ ವರ ಗಜೇಂದ್ರನ ತಿರು
ನಾಳ ನಿಟ್ಟಿಸ ಬಂದರಾಗ ॥ ೪೦

---

* ರಾಜಿಸುವ.

ಕೌಂಕುಳಿ ಮೆಕ್ಕಳು ಕೈಯ ಕೂಸುಗಳುರೆ
ಬಿಂಕದೆ ತೊಟ್ಟಿಲ ಮಗುವ ।
ಶಂಕೆ ಯಿಲ್ಲದೆ ಪೊತ್ತು ರಂಗನ ಜಾತ್ರೆಗೆ
ಪಂಕಜಾಕ್ಷಿಯರೈದಿದರು ॥ ೪೧

ಎತ್ತಿನ ಮೇಲೆ ಬಾಜಿಸುವ ಡಮ್ಮಾನದ
ಮೊತ್ತದೆ ಹರಿ ದಾಸರುಗಳು ।
ಮತ್ತಾಗ ಸಂಪ್ರದಾಯಗಳ ಮೀಳದೆ ಬರು
ವರ್ತಿಯನೇನ ಬಣ್ಣಿಸುವ ॥ ೪೦

ಇಂತು ಚಪ್ಪನ್ನ ದೇಶದ ನಾನಾ ಜನ
ಸಂತೋಷವ ತಾಳಿ ನಗುತ ।
ಕಂತು ಪಿತನ ಜಾತ್ರೆಗೈದಿ ಪಟ್ಟಣದಲ್ಲಿ
ತಿಂತಿಣಿಸಿತು ದೆಸ ದೆಸೆಗೆ ॥ ೪೩

ಅಸಿತರೊಳಗೆ ಶುಭ ತಿಥಿ ವಾರ ಲಗ್ನದೆ
ಮನಸಿಜ ಪಿತಸಿಗರ್ತಿಯಲಿ ।
ಘನತರ ಮಂಗಳೋತ್ಸವಕಂಕುರಾರ್ಪಣ
ವನು ರಚಿಸಿದರಂದೊಲಿದು ॥ ೪೪

ನರಸ ರಾಜೇಂದ್ರ ಭಕ್ತಿಯಲಿ ರಂಗೇಶಗೆ
ವಿರಚಿಪ ಪರಮೋತ್ಸವಕೆ ।
ಸರಿ ಯಿಲ್ಲ ತ್ರಿ ಜಗದೊಳೆಂದು ಸಾರ್ವೊಲು ಭೇರಿ
ಯುರುತರ ತಾಡನವಾಯ್ತು ॥ ೪೫

ದರುಶನ ಗೈದ ಬಕುತರಘ ಕುಲವೆನು
ಪರಿದು ವರವ ಕರುಣಿಸುವ ।
ಬಿರುದಿದೀಗೆಂದು ತೋರ್ವೊಲು ರಂಗ ನಾಥನ
ವರ ಧ್ವಜ ಪಟವೇರಿದುದು ॥ ೪೬

ನೆರೆಯಾಕಾಶ ಮಾರ್ಗದೆ ಭಜಿಸುವ ಸುರ
ರೆರೆಯಗೆ ದರುಶನವಿತ್ತು ।
ಹೊರಿವೋಲು ರಂಗೇಶ ಪೊನ್ನ ಪುಷ್ಪಕದಲ್ಲಿ
ಮೆರೆದನು ಪ್ರಥಮ ದಿವಸದ ॥ ೪೬

ನೆರೆ ರಾಹುವಿನುಪಟಳಕಳುಕುತ ಬಂದು
ಮರೆ ಹೊಕ್ಕ ಶಶಿಯ ಮನ್ನಿಸುತ ।
ಹರುಷದಿಂದೆರಡನೆಯ ದಿವಸದುತ್ಸಾಹಕ
ಮೆರೆದನು ಚಂದ್ರ ಮಂಡಲದೆ ॥ ೪೭

ಗರುಡನ ಭಯಕಂಜಿದ ಫಣಿ ರಾಜಗೆ
ನಿರುತದಭಯವಿತ್ತು ನಗುತ ।
ಪಿರಿದು ಪದ್ಮಾಸನವನು ಮಾಡಿ ರಂಗೇಶ
ಮೆರೆದನು ಶೇಷನ ಮೇಲೆ ॥ ೪೮

ಗರಳವ ಪರಿಹರಿಸಿ ಸುರ ಲೋಕಕ್ಕೆ ಬೃದಿ
ಸುರಪತಿಯನು ಜೈಸಿರುವ ।
ವರ ಶೌರ್ಯಕ ಮೆಚ್ಚಿ ನರವಿತ್ತು ಮೆರೆದನು
ಗರುಡ ಗಮನನಾಗಿ ಹರಿಯು ॥ ೪೯

* ಬರಲಾರನೆಯ ದಿವಸ ಗಜ ರಾಜನ
ಮೊರೆಗೇಳಿ ನರ ಹರಿಯಾಗ ।
ಪಿರಿದು ಕೋಪವ ತಾಳಿ ಗರುಡನ ಮೇಲೇರಿ
ಸಿರಿ ಸಹ ನಡೆತಂದನಾಗ ॥ ೫೦

ಕಂಡನು ಸರಸಿಯೊಳ್ ಸೊಂಡಿಲ ತುದಿಯನು
ಪುಂಡರೀಕಾಹ್ವ ತಾನಾಗ ।
ಚಂಡ ಸಾಹಸ ಚಕ್ರವನು ತುಡುಕಿದನಾಗ
ಕೊಂಡಾಡೆ ದಿವಿಜ ಸಂತತಿಯು ॥ ೫೧

* ಬಳಿಕಾರನೆಯ.

ಖವ ಖವಿಸುವ ಪೊಂಬಣ್ಣದ ರಶ್ಮಿಯ
ತವೆ ಚಕ್ರವನು ಕೈಯೊಳಾಂತು ।
* ಜವದಿಂದೆಸೆಯು ಬೇಕೆನುತಲಿ ಮನದೊಳು
ತವಕಗೊಳುತ ಬರ ಬರುತ ॥ ೫೩

ಅನಿತರೊಳಗೆ ಶುಭ ಲಗ್ನದೆ ರಂಗೇಶ
ಕನಕ ಪಲ್ಲಕ್ಕಿಯನೇರಿ ।
ಘನವಾದ ದಿವ್ಯೋತ್ಸವ ಮಂಟಪಕಾಗ
ಮನ ಹರುಷದೊಳ್ಕೃತಂದ ॥ ೫೪

ನರಸ ರಾಜೇಂದ್ರನು ದಳ ಪತಿ ಪುರ ಜನ
ಪರಿವಾರ ಸಹಿತ್ಯೆತಂದು ।
ಕರಿ ರಾಜನ ಬಂಧನವ ಶ್ರೀ ರಂಗೇಶ
ಪರಿ ಹರಿಸುವುದನೀಕ್ಷಿಸಿದ ॥ ೫೫

ಸುರರು ಪೂ ಮಳೆಗರೆಯಲು ದೇವ ದುಂದುಭಿ
ವೊರೆಯಲು ರಂಗೇಶನಾಗ ।
ಹಿರಿದು ಸಂತೋಷದೆ ನೆಗಳ ಮಸ್ತಕವನು
ಪರಿದನು ಚಕ್ರದೊಳಂದು ॥ ೫೬

ಕರಿ ರಾಜನಿಗೆ ಮಕರಿಗೆ ಮೋಕ್ಷವನಿತ್ತು
ಪರಮ ಮಂಗಳ ಮೂರ್ತಿಯಾಗ ।
ಸಿರಿ ದೇವಿ ಸಹಿತ ಶ್ರೀ ರಂಗೇಶ ತನ್ನಂತ
ವುರವನು ಸಾರಿದನಾಗ ॥ ೫೭

ಧರಣಿಪ ನರಸ ರಾಜೇಂದ್ರ ಸಂತೋಷದೆ
ನೆರೆ ಮಂಡಲಿಕ ಮನ್ನೆಯರ ।
ಹರುಷದೆ ಬೀಳ್ಕೊಟ್ಟು ಪರಮೋತ್ಸವದೊಳ
ಗರಮನೆಗೈದಿದನಾಗ ॥ ೫೮

---

* ತವಕದಿಯೆಸೆಯುಬೇಕೆನುತಲಿ ಮನದೊಳು ಕಳವಳಗೊಳುತಿರಲಾಗ,

* ಆ ಸಮಯದೆ ರಂಗನುತ್ಸವವನು ನಳ
ನೀ ಸಖ ನೋಡಿ ಸಂತಸದೆ ।
ಸೂಸುವ ಹರುಷದೆ ಪಶ್ಚಿಮಾಂಗನೆಯು ನಿ
ವಾಸಕ್ಕೈದಿದನರ್ತಿಯಲಿ ॥ ೫೯

ವರ ಪಶ್ಚಿಮಾಂಗನೆ ರಮಣನೈತರುತಿರೆ
ಹರುಷದೆ ಮಜ್ಜನ ಮಾಡಿ ।
ಅರುಣ[ವರ್ಣದ] ಪೊಂಬಟ್ಟೆಯನುಟ್ಟಂತೆ
ಪರಿ ಶೋಭಿಸಿತು ನಿಜಗೆಂಪು ॥ ೬೦

† ಒದವಿದುತ್ಸವದೆ ರಂಗೇಶನಾ ಸಮಯದೆ
ಮೆದಕರಿಯೇರಿ ಸಂಭ್ರಮದೆ ।
ಮುದದಿಂದ ನೆರೆದ ಭಕ್ತರಿಗೆ ವರವನಿತ್ತು
ಸದನಕ್ಕೈದಿದನರ್ತಿಯಲಿ ॥ ೬೧

ನರಸರಾಜೇಂದ್ರ ಭಕ್ತಿಯಲಿ ವಿರಚಿಸಿದ
ವರ ಗಜೇಂದ್ರನ ತಿರು ನಾಳ ।
ಧರಣಿಯೊಳಗೆ ಸಾರಿ ಡಂಗುರಿಪಂದದೆ
ಚರಿತಾಯಭಗಳಲಿದುವು ॥ ೬೨

ತರಣಿ ಪೂರ್ವಾಂಗನೆಯೊಳು ರತಿ ಕೇಳಿಯ
ನೆರೆ ಬಯಸಿದ ತೆರನಾಗ ।
ವರ ಸೂಡಣದ್ರಿಯ ಶಿಖರದೆ ರಾಜಿಪೊ
ಲರುಣೋದಯ ರಂಜಿಸಿತು ॥ ೬೩

‡ ದಿವಸಾಧಿಪ ಶ್ರೀ ರಂಗ ಧಾಮನ ರಥೋ
¶ ತ್ಸವವನು ನಿಟ್ಟಿಸಲೆಂದು ।
ತವೆ ಹರುಷದೆ ಒಂದನೆನೆ ಪೂರ್ವ ಗಿರಿಯ § ಮೆಂ
ಡವದೆ ರಾಜಿಸಿದನೇ ವೇಳ್ವ ॥ ೬೪

---

* ಆ ಸಮಯದಿ ಶ್ರೀರಂಗನವೃತ್ಸಹವ ಕಮಲಾಪ್ತನು ನೋಡಿ.
† ಪರಮೋತ್ಸವದೆ. ‡ ಜಲಜಾಪ್ತನುಶ್ರೀ. ¶ ತ್ಸವನೆರೆ. § ಮುಸ್ತಕದೆ.

ಬಳಿಕಲಾ ಸಮಯದೆ ರಂಗ ಧಾಮನ ರಥೆ
ಸುಲಲಿತ ಶೃಂಗಾರವಾಗಿ।
ಬಲು ಸಂಭ್ರಮದಿ ಬರುವುದ ಬಣ್ಣಿಸುವೆನು
ನಲಿದಾಲಿಸುವುದು ಸಜ್ಜನರು ॥ ೬೫

ಪರಿ ಶೋಭಿಸುವ ತಮ್ಮ ವೃತ್ತಾಕಾರಕ್ಕೆ
ತರಣಿ ಶಶಿಗಳ ವೃತ್ತಗಳು।
ಸರಿಯಲ್ಲವೆಂದಾಗ ಜರೆದು ಸೊಬಗ ಬೀರಿ
ಮೆರೆದುವು ರಥದ ಗಾಲಿಗಳು ॥ ೬೬

ಪ್ರೊಸಮಿಸುನಿಗಳಾಯಗಾಲಂತರಾಂತರ
ಜಸವೆಡೆದಿಹ ರನ್ನ ಲೋವೆ।
ಬಿಸಜಾಹ್ಲ ರಂಗ ನಾಥನ ದಿವ್ಯ ರಥದೊಳ
ಗೆಸೆದುವೇಸಂಬಿನಚ್ಚರಿಯು ॥ ೬೭

ಮಿರುಗುವ ಪಂಚಾಂಗರಾಯ ಪಟ್ಟಾಳಿಯ
ಸರ ಗೊಂಡೆಯ ಝಲ್ಲಿಗಳು।
ಮೆರೆದುವು ರಥದಂತರಾಂತರದೊಳಗಿಪ
ಸು ರುಚಿರ ಲೋವೆಗಳೊಳಗೆ ॥ ೬೮

ಪವಳದ ಕುಚ್ಚು ಮುತ್ತಿನ ಗೊಂಚಲುಗಳು
ತವೆ ರನ್ನಗಳ ಸೂಸಕಗಳು।
ಧವಳ ವರ್ಣದ ಝಲ್ಲಿಗಳು ಸಾಲುವೆಡೆದಾಗ
ಪವಳವಿಸಿದುವರ್ತಿಯಲಿ ॥ ೬೯

ತಳಿಗೆದೋರಣ ಕನ್ನಡಿ ಕಳಸಗಳುರೆ
ಹೊಳವ ಹೊಳವೆ ನೆರೆ ಕುರುಜು।
ಥಳಥಳಿಸುವುದಂತರದೊಳಾಗಳತಿ ಚೆಲ್ವು
ದಳದು ರಾಜಿಸಿದುವರ್ತಿಯಲಿ ॥ ೭೦

ಬಳಸಿ ಚತುರ್ದೆಸೆಯ ಬಾಗಿಲ ಪ್ರತಿಮೆಗಳೊಳಾ
ಗಳವಟ್ಟ ಚಿಮ್ಮುವ ಚನುರ ।
ನೆಲನ ಸೋಂಕುವ ಪಾಟ ಪಾವಡೆ ರಥದೊಳು
ತೊಳಗಿದುವತಿ ಮುದದಿಂದ ॥ ೭೧

ಪಲ್ಲವ ಸತ್ತಿಗೆ ಪೊಸ ಮಿಸುನಿಯ ಪಟ
ಸಲ್ಲಲಿತದ ಹೊನ್ನ ಕಳಸ ।
ಪ್ರಫುಲ್ಲ ನಾಭನ ದಿವ್ಯ ರಥದೊಳು ರಾಜಿಸು
ವುಲ್ಲಾಸವನೇ ಪೇಳ್ವ ॥ ೭೮

ಹೊಳವ ಪೊಂಬಾಳೆಯ ಕಂಬ ನಾನಾ ಬಗೆ
ಫಲ ವಸ್ತು ಪೂವಿನ ಮಾಲೆ ।
ಅಳವಟ್ಟ ರಂಗ ಧಾಮನ ರಥದೊಳಗಿಪ
ಚಲುವನದೇನ ಬಣ್ಣಿಸುವೆ ॥ ೭೯

ಅನಿತರೊಳಗೆ ಶುಭ ಲಗ್ನದೆ ರಂಗೇಶ
ಕನಕ ವಿಮಾನವನೇರಿ ।
ಘನ ಹರುಷದೊಳ್ಕಿದಿ ದಿವ್ಯ ರಥದೊಳಾಗ
ಚಿನುಮಯ ಮೂರ್ತಿ ರಂಜಿಸಿದ ॥ ೮೦

ತೆಲುಗ ತಿಗುಳ ಕೊಂಕಣ ಮಲೆಯಾಳರು
ಸು ಲಲಿತ ಕರ್ಣಾಟ ಜನರು ।
ಫಲ ಬಗೆಯಲಿ ಸಿಂಗರ ಗೈದು ದೇವನ
ವಿಲಸಿತೋತ್ಸವಕೈದಿದರು ॥ ೮೧

ಪರಿಜನ ಪುರ ಜನ ನೋಟಕ ಜನರಾಗ
ಹರುಷದೊಳಗೆ ಸಿಂಗರಿಸಿ ।
ಸಿರಿ ಧರ ರಂಗ ಧಾಮನಿಗೆಸಗುವ ದಿವ್ಯ
ತಿರು ನಾಳ ನೋಡಲೈದಿದರು ॥ ೮೨

ಮಾರನ ಮಸೆದಲಗುಗಳಂದದೆ ಪೌರ
ನಾರಿಯರುಗಳು ಸಿಂಗರಿಸಿ ।
ಕಾರುಣ್ಯ ಮೂರ್ತಿಯುತ್ಸವವ ನಿಟ್ಟಿಸುವೊಡೆ
ಮೀರೆಯಿಲ್ಲದೆ ಬಂದರಾಗ ॥ ೫೫

ಬಳಿಕ ಭೂಪನ ನೇಮದೊಳಗೆ ಸಂತೋಷದೆ
ದಳವಾಯಿ ಲಿಂಗ ರಾಜೇಂದ್ರ ।
ಪಲ ಬಗೆಯುಲಿ ಸಿಂಗರಿಸಿಯೋಲಗಕಾಗ
ಳಿವಟ್ಟು ಬರುವುದೇ ವೇಳ್ವ ॥ ೫೪

ಥಳ ಥಳಿಸುವ ಬಾಹುಲಿ ವಜ್ರ ವೈಡೂರ್ಯ
ದಳದಿಹ ಹಮ್ಮಿರ ತಾತಿ ।
ತೊಳಗುವ ಮುತ್ತಿನ ಕಡಗ ಕಂಕಣದಿಂದ
ಬಲು ಸೊಬಗಾಂತನರ್ತಿಯುಲಿ ॥ ೫೯

ಮಿಸುನಿಯ ಜರತಾರ ರುಮ್ಮಾಲು ಪೈರಣೆ
ಪೊಸತಾದ ದುಪ್ಪಟದಿಂದ ।
ವಸುಧೆಗೆ ನೂತನ ಮನ್ಮಥನಂತೆ ರಂ
ಜಿಸಿದನೇನೆಂಬಿನಚ್ಚರಿಯು ॥ ೫೦

ಅಣಿ ಮುತ್ತಿನ ಕಂಠಮಾಲೆ ಚೌಕುಳಿ ಪೊಸ
ಮಾಣಿಕಗಳ ದಿವ್ಯ ಪದಕ ।
ಚಾಣ ಶೇಖರನ ಸರ್ವಾಂಗದೆ ಮೆರೆದುವು
ಕ್ಷೋಣಿಗಚ್ಚರಿಯು ಕಾಣಿಸುತ ॥ ೫೧

ಇಂತು ಸಿಂಗರಿಸಿ ಮನ್ನೆಯ ಮಂಡಲಿಕರ
ತಿಂತಿಣಿ ಸಹಿತ ಸಂಭ್ರಮದೆ ।
ಮುಂತೆ ಭೂ ಪಾಲನೋಲಗಕಾಗ ದಳ ಪತಿ
ಸಂತೋಷದೊಳ್ಬಿತಂದ ॥ ೫೨

ತಾಳಿ ಚೌಕುಳಿ ಹೊನ್ನ ಸರ ಹೊಸ ಮುತ್ತಿನ
ಜಾಳಿಯ ಕಡಗ ಕಂಕಣದ ।
ಮೇಲು ದುವ್ವಟಿ ಪೈರಣಿ ಮಂಡಲಿಕರ
ಜಾಲವೈತಂದುದುಬ್ಬಿನಲಿ ॥ ೪೩

ಮುಂಗೈಯ ಮುರಿ ಮುರಡಿಯ ಸರಪಳಿ ಹೊ
ನ್ನುಂಗುರ ತೋಳ ಬಾಪುರಿಯ ।
ಶೃಂಗಾರದ ನಾಯಕ ಜಾಲ ಬಹಳ ಬೆ
ಡಂಗಿನೊಳ್ಳತಂದುದಾಗ ॥ ೪೪

ಕಾಯದೊಳಗವಟ್ಟ ಹೊನ್ನ ದಗಲಿ ದಿ
ವ್ಯಾಯತದಾಭರಣಗಳ ।
ವೈಯಾರದ ಬಿರುದಿನ ಚಿಂದಿಗಳ ಚೆಲ್ವ
ರಾಯ ರಾವುತರೈದಿದರು ॥ ೪೫

ಬಿಡದುಟ್ಟ ಪಟ್ಟೆಯ ದಟ್ಟಿ ಕುಂಕುಮ ಗಾಸೆ
ತೊಡರಿದ ದಿವ್ಯ ಭೂಷಣದ ।
ಪಿಡಿದ ನಾನಾ ಬಗೆ ಕ್ಯೆದಿನ ಸು ಭಟರ
ಗಡಣವೈತಂದುದರ್ತಿಯಲಿ ॥ ೪೬

ಉತ್ತರಿಗೆಯ ಹೊನ್ನ ಸರ ಗಂಟೆ ಸರಪಳಿ
ಮುತ್ತಿನ ಕಡುಕು ಲುಳಿಗಳ ।
ಮತ್ತಾಗ ಧರಿಸಿರುವೊಂಟಿರಿಗಾರರ
ವೊತ್ತವೈತಂದುದರ್ತಿಯಲಿ ॥ ೪೭

ಚೆನ್ನದ ಹರಡೆ ಬಿರುದಿನ ಬೆಳ್ಳಿಯ ಕಟ್ಟಿ
ನುನ್ನತವಾದ ನೇಜೆಯದ ।
ಹೊನ್ನ ಭೂಷಣದ ಮೈ ಗಾವಲೊಳಿಗದರ
ಸನ್ನಾಹವೈತಂದುದಾಗ ॥ ೪೮

ಪಡಪ ಸೀಗುರಿ ಕುಂಚ ಕಾಳಾಂಜೆ ಪಾವುಗೆ
ವಿಡಿದು ಸಂತೋಷದೊಳಾಗ ।
ಕಡು ಸೊಬಗಾಂತು ಸಮ್ಮುಖದೂಳಿಗದದ
ಗಡಣವೈತಂದುದರ್ತಿಯಲಿ ॥ ೮೯

ನವರತ್ನಗಳ ಕಾಲುಗಗ್ಗರ ಪೊಂಗೆಜ್ಜೆ
ಕಿವಿಯ ಮುತ್ತಿನ ಕುಚ್ಚುಗಳ ।
ತವೆ ಸೆಡಕಿನ * ಝುಲ್ಲಿತೆರದ ಪಕ್ಕರಿಕೆಯು
ಭುವನೇಶನಶ್ವವೈದಿದುವು ॥ ೯೦

ಮಿಸುನಿಯು ನಿಗಳದ ವೊಗಗನ್ನಡಿ ಕಾಂತಿ
ವಿಸರದ ಚೆನ್ನ ಹಕ್ಕರಿಕ ।
ಪೊಸ ಸಮ ಕಟ್ಟಿನ ಝುಲ್ಲಿಗಳಿಂದ ರಾ
ಜಿಸುವ ದಿವ್ಯಾಶ್ವವೈದಿದುವು ॥ ೯೧

ಬಾಲ ಸೂರ್ಯನ ಪ್ರಭೆಯನು ಸೋಲಿಸುವ ರತ್ನ
ಜಾಲದುಭಯ ತರಕಸದ ।
ಮೇಲು ಪಚ್ಚಳದರಳೆಲೆಯ ತುರಂಗಮ
ಸಾಲುಗೊಂಡೈತಂದುವಾಗ ॥ ೯೨

ಕೊರಳು ತುಂಬಿದ ಮುತ್ತಿನ ಸರ ನೊಸಲೊಳು
ಮೆರೆವ ಮಾಣಿಕ್ಯಜಾಳಿಯದ ।
ಬಿರುದಿನ ಪೊಂಬಾವಡೆಗಳ ಸಿಂಗರ
ಮೆರೆದ ತೇಜಿಗಳೈದಿದುವು ॥ ೯೩

ಕಟ್ಟಾಣಿ ಮುತ್ತಿನ ಮೊಗರಂಬ ನೆರೆ ಪುಟ
ವಿಟ್ಟ ಮಿಸುನಿಯ ಗುಬ್ಬಿಗಳ ।
ಕಟ್ಟಿದ ಹೊಕ್ಕುಳ ಗಂಟೆಯ ತೇಜಿಗ
ಳಿಟ್ಟಣಿಸುತಲೈದಿದುವು ॥ ೯೪

---

* ಝುಲ್ಲಿತಂದವಕ್ಕರಿಕೆಯ.

ಸಂಗರ ಭೂಮಿಯೊಳಗೆ ರಿಪು ವಕ್ಷೋ
ರಂಗದೊಳಗೆ ನಾಟ್ಯಗೈದು ।
ಹಿಂಗದೆ ಧೈರ್ಯದ ಜೀವವೆಬ್ಬಿಸುವ ತು
ರಂಗಗಳ್ಯತಂದುವಾಗ ॥ ೯೫

ಬಿರುದಿನ ನೆರೆ ಪರ ಬಲ ಭಯಂಕರನೆಂಬ
ಕರಿ ರಾಜ ಸಿಂಗರವಾಗಿ ।
ವರ ಮದ ಗಜಗಳ ಖೇಳ ಮೇಳದೊಳಾಗ
ಬರುತಿರ್ದುದೇನ ಬಣ್ಣಿಸುವೆ ॥ ೯೬

ಉದಯಾದ್ರಿಯ ಮೇಲೆ ಬಾಲ ಸೂರ್ಯನ ಪ್ರಭೆ
ಮುದವೆದ್ದು ರಾಜಿಸುವಂತೆ ।
ಮದ ಗಜದಮ್ಯುದಲಿ ಪೊನ್ನ ರೆಂಜಿಗೆ
ಪದುಳದೆ ಹೊಳೆಯುತೊಪ್ಪಿದುದು ॥ ೯೭

ಮೇರು ಗಿರಿಯ ಕೊಡುಗಲ್ಲಿಂ ಗಂಗೆಯ
ಧಾರೆ ಭೂತಳಕಿಳಿದಂತೆ ।
ವಾರಣದುಭಯ ಕರ್ಣದೆ ರಾಜಿಸುವ ಝಲ್ಲಿ
ಬೀರಿತು ಧವಳ ದೀಧಿತಿಯ ॥ ೯೮

ಕರಿ ಕಪ್ಪೋಲದ ಮದ ಸೊಗಡೆಂದು ತುಂಬಿಯ
ನೆಂವಿಗೆ ಪರಿಮಳವೀವ ।
ಅರಳು ಮಲ್ಲಿಗೆ ಗೊಂಚಲೆನೆ ಗಜ ಕರ್ಣದೆ
ಮೆರೆದುವು ಮುತ್ತಿನ ಕುಚ್ಚು ॥ ೯೯

ಮಂದರಾದ್ರಿಯ ನೆರೆ ಬಿಗಿದುರಗೇಂದ್ರನ
ಬಂಧುರ ದೇಹದಂದದಲಿ ।
ಕುಂದದೆ ಮೆರೆದುದು ಮದ ಕರಿಯುರದೊಳ
ಗೊಂದಿಹ ಹೊರಜೆಯುರ್ತಿಯಲಿ ॥ ೧೦೦

ಮೇಲೆ ಕಾರ್ಗಾಲದ ಘನದೊಳು ಮೂಡಿದ
ಬಾಲ ಸೂರ್ಯನ ಬಿಂಬದಂತೆ ।
ಆಲೋಕಿಸಿ ರನ್ನ ಮಿಸುನಿಗನ್ನಡಿ ಶುಂ
ಡಾಲದ ನೊಸಲೊಳ್ಮೂಪ್ಪಿದುದು ॥ ೧೦೧

ಕೊರಳ ಹೊರಜಿ ಕುಂಭ ಸ್ಥಳ ಕೋಹಾಳ
ಸರ ಗಂಟೆ ಪಕ್ಕ ಗಂಟೆಗಳು ।
ಬಿರುದಿನ ಪಟ ಪಲ್ಲವ ಸತ್ತಿಗೆ ಮದ
ಕರಿಯ ಮೇಲೊಡನೆ ಮೆರೆದುವು ॥ ೧೦೨

ನೀಲಾದ್ರಿ ಶಿಖರದಿಂದಿಳಿವ ಕಾಳಿಂದಿಯ
ಕಾಲುವೆಯೆನೆ ಭದ್ರ ಗಜದ ।
ಮೇಲು ಕಪ್ಪೋಲದೆ ಸುರಿವ ಮದಕೆ ನೆರೆ
ರೋಲಂಬ ಕುಲವೆರಗುವ್ರುವು ॥ ೧೦೩

ಗಿರಿ ಶಿಖರದೆ ಪೂ ತುಂಬಿದ ಕಕ್ಕೆಯ
ಮರದಂತೆಯತಿ ಚೆಲುವಿಂದ ।
ಪರಿ ಪರಿ ಯಾಭರಣದ ಶೃಂಗಾರದೆ
ಮೆರೆದರು ಮಾವುತರಾಗ ॥ ೧೦೪

ಇಂತೊಪ್ಪುವ ಕರಿಗಳುಗೂಡಿ ಪಟ್ಟದ
ದಂತಿಯೈತಂದರಮನೆಯು ।
ಮುಂತೆ ರಾಜಿಪ ಬಾಗಿಲ ಹಜಾರದ ಮುಂದೆ
ಸಂತಸದೊಳಗೊಪ್ಪಿದುದು ॥ ೧೦೫

ಆನೆ ಕುದುರೆ ಮೆನ್ನೆಯ ಮುಂಡಲಿಕರು
ನಾನಾ ದೆಸೆಯರಸುಗಳು ।
ಭೂ ನಾಥನ ಹಜಾರದೆ ಮುಂದೆ ಬಹಳ ಸು
ಮ್ಮಾನದೆ ಮೆರೆದರರ್ತಿಯಲಿ ॥ ೧೦೬

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪ್ರದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೦೭

ಎಳೆನೆಯ ಸಂಧಿ ಸಮಾಪ್ತಂ.

ಇಪ್ಪತ್ತು ನಾಲ್ಕನೆಯ ಸಂಧಿ

ಅರಸಿನವರ ಶೃಂಗಾರ

ಸೂಚನೆ॥ ನರಸ ರಾಜೇಂದ್ರ ರಂಗನ ರಥೋತ್ಸವಕಾಗ
ಬರುವ ಸಂಭ್ರಮವ ಬಣ್ಣಿಸುವೆ ॥

ಬಳಿಕಲೀ ಪರಿಯೊಳೂಪ್ಪುವ ಸಂತೋಷದೊ
ಳಳಿಯ ಮೇಲಣ ಸರ್ವ ಜನರು ।
ನಳಿನಾಕ್ಷ ರಂಗ ಧಾಮನ ತೇರ ಬೀದಿಯೊ
ಳಳವಟ್ಟು ಮೆರೆದರರ್ತಿಯಲಿ ॥ ೧

ಆ ಸಮಯದೊಳರಸನ ನೇಮದೆ ರಾಣಿ
ವಾಸ ಭೋಗಾಂಗನಾ ನಿವಹ ।
ಭಾಸುರವಹ ತಿರು ನಾಳ ನಿಟ್ಟಿಸ್ಪೊಡೆ ವಿ
ಲಾಸದೆ ಸಿಂಗರಿಸಿದರು ॥ ೨

ಪತಿ ಭಕ್ತಿ ಸಚ್ಚರಿತಾನುರಂಜನೆ ನೆರೆ
ವ್ರತ ನಿಷ್ಠೆ ಬಹು ಧರ್ಮ ಶೀಲ ।
ಅತಿ ದಯೆ ಸುಗುಣತ್ವ ಭೂಪನ ಪಟ್ಟದ
ಸತಿಯರ ಕಳಗೊಂಡಿಹುವು ॥ ೩

ಪರಮ ಮಂಗಳಕೆ ಪಾರ್ವತಿ ಸೌಭಾಗ್ಯದ
ನೆರವಣಿಗೆಗೆ ಸಿರಿ ದೇವಿ ।
ವರ ವಿದ್ಯಾ ಕಲಾ ಪ್ರೌಢಿಗೆ ಕಾರದೆ
ಸರಿ ಮಿಗಿಲೆನಿಸಿ ರಾಜಿಪರು ॥ ೪

ಹೊಳವ ನಾಟಕ ಶಾಲೆಯು ಮುದ್ದು ಪಾತ್ರದ
ನಳನಾಕ್ಷಿಯರು ಗಾನದವರು ।
ಸಲೆ ಸರ್ವ ಶಾಸ್ತ್ರ ಕೋವಿದೆಯರು ಸೊಬಗಿಂದ
ಲಳವಟ್ಟ ಬಗೆಯ ಬಣ್ಣಿಸುವೆ ॥ ೫

ಕೆಂಜಾಜಿಯ ದಿವ್ಯ ಸೌರಭ್ಯವೆನಪ
ರಂಜಿಯೊಳಗೆ ಮಿಗೆ ಹುದುಗಿ ।
ಕಂಜಜ ಕೈಗೈದ ಜೀವ ಪುತ್ತಳಿಯೊಲು
ರಂಜಿಸಿದರು ಕೋವಿಲೆಯರು ॥ ೬

ವೋಹನ ಮಂತ್ರದೋಳಿಗಳೋ ಮನಸಿಜ
ನಾಹವದಲಿ ಮುಂದುವರಿವ ।
ಸಾಹಸವಿಡಿದ ಪಟ್ಟದ ಮದ ಕರಿಯು ಸ
ಮೂಹವೆನಲು ರಂಜಿಸಿದರು ॥ ೭

ಎಸಳುಗಂಗಳ ದಿಟ್ಟಿಯು ಕೂರಿಟ್ಟಿಯು
ಮಿಸುಪ ಸೆಳ್ಳುಗುರ ಸುರಗಿಯು ।
ಪ್ರೌಸ ದಿವ್ಯಾಂಗ ಖಂಡೆಯುಗಳಿಂದೆಸೆದರು
ಕುಸುಮ ಶರನ ಪಡೆಯಂತೆ ॥ ೮

ತಳಿರು ಪೊಂಬಾಳೆ ಕೆಂದಾವರೆ ದಂಟುಗ
ಳಳನೂಲು ಲಲಿತ ತಮಾಲ ।
ಬೆಳಗಾಯಿ ನೈದಿಲು ಹೆಂಗಳ ದಿವ್ಯಾಂಗ
ಲಲಿತ ನಂದನದೊಳೂಪ್ಪಿದುವು ॥ ೯

ನವಿಲು ಪಾರಿವೆ ಕೋಗಿಲೆ ಗಿಳಿಯರಸಂಚೆ
ತವೆ ತುಂಬಿಯು ಬಳಗಗಳು ।
ಸು ವಿಲಾಸವಡೆದ ಹೆಂಗಳ ಚೆಲುವಿಕೆಗೆ ಸೋ
ತವಯವಗಳಲಿ ಮೆರೆದುವು ॥ ೧೦

ಕರಿ ಹರಿ ತಾವರೆ ಚಂದ್ರಮನೆಳ ಮಿಾನು
ನೆರೆ ರಥಾಂಗಗಳು ತವೊಳಗೆ ।
ಪಿರಿದು ವೈರವ ಮುರೆದಂಗನೆಯರ ತನು
ವರ ವಲ್ಲರಿಯೊಳೊಪ್ಪಿದುವು ॥ ೧೧

ಸುಳಿದಾಡುವೆಜ್ಜೆ ನೇತ್ರೆಯರ ಪಾದಾಂಗುಳಿ
ಗಳವಟ್ಟು ನಖದಲತಗೆಯ ।
ಬಲುಗೆಂಪು ನೆಲದೊಳೊಪ್ಪಿತು ಭೂ ದೇವತೆ
ತಳೆದ ಕುಂಕುಮ ಗಂಧದಂತೆ ॥ ೧೦

ನಸು ನಗೆ ಯೆಸೆವ ಕೌಮುದಿ ಕಣ್ಗಳು ಮಿಗೆ
ಮಿಸುಪ ಕನ್ನೆ ೃದಿಲ್ಗಳಾಗೆ ।
ನೊಸಲ ಕತ್ತುರಿಯ ತಿಲಕದ ಲಾಂಛನದಿಂದ
ಶಶಿ ಮುಖಿಯರು ರಾಜಿಸಿದರು ॥ ೧೩

ರತಿ ದೇವಿಯರ ಸಮೂಹವೊ ಸೌಭಾಗ್ಯದ
ಸತಿ ನೆರೆ ಪಲವು ರೂಪಿನಲಿ ।
ಕ್ಷಿತಿಯೊಳುನ್ನತದ ಚೆಲ್ವಿನೊಳೊಪ್ಪಿದಳೆನ
ಲತಿಶಯಾಂಗನೆಯರೆಸೆದರು ॥ ೧೪

ಜಾಣಿನ ಜಂತ್ರ ದೇವತೆಗಳೂ ನೂತನ
ವಾಣಿಯರುಗಳಂತೆನಲು ।
ಕ್ಷೋಣಿಗೆ ನಾನಾ ಟಗೆಯ ವಿದ್ಯೆಗಳ ಪ್ರ
ವೀಣೆಯರೆಸೆದರೇ ವೇಳ್ವ ॥ ೧೫

ಸೋಗೆದುರುಬಿನ ಶೃಂಗಾರ ವೀಣೆಯ ಸೊಗ
ಸಾಗಿ ಮೆರೆವ ಪೆರೆ ನೊಸಲ ।
ರಾಗವಿಡಿದ ಕೈರವ ನೇತ್ರಗಳ ನೃಪ
ಭೋಗಾಂಗನೆಯರೊಪ್ಪಿದರು ॥ ೧೬

ವರ ತಿಲ ಕುಸುಮ ನಾಸಿಕ ದಿವ್ಯ ಪರಿಮಳ
ವೆರೆದ ಕರ್ಪೂರ ಭರಣಿಗಳ ।
ಸುರುಚಿರವಹ ಬಾಯ್ದೆರೆಗಳ ಸೊಬಗಿನ
ತರುಣಿಯರೆಸೆದರತಿಯಲಿ ॥ ೧೩

ನವ ರತ್ನಗಳ ಕರ್ಣ ಭೂಷಣ ಕಾಂತಿಯ
ತವಕದೆ ಕೆಳಗೊಂಡು ಮೆರೆವ ।
ಭವಭವಿಸುವ ಕದಪಿನ ಮುದ್ದು ಕಾಂತಾ
ನಿವಹವೊಪ್ಪಿದುದೇನೆಂಬೆ ॥ ೧೪

ಥಳ ಥಳಿಸುವ ಕಂಬು ಕಂಜ ಕುಟ್ಮಲ ಬಲು
ಸುಳಿ ಸೆಳ * ತೆರೆ ತಿಳಿ ನೀರ ।
ತಳದು ನೃಪಾಲನತಿಯ ಕ್ರೀಡೆಯು ದಿವ್ಯ
ವಿಲಸಿತ ಸರಸಿಯಂತಿಹರು ॥ ೧೫

ಲಾವಣ್ಯ ಜಲ ಪೂರ್ಣ ಕುಂಭ ರಂಭಾವಳಿ
ಕಾವನಂಬಿನ ಬತ್ತಳಿಕೆ ।
ತೀವಿದ ಕೆಂದಳಿರುಗಳ ಕೆನ್ನೀರ್ಮುತ್ತ
ಭಾವಕಿಯರು ತಳದಿಹರು ॥ ೧೬

ಮಿರುಗುವ ಸೌಂದರ್ಯ ಸಾರ ಸಂಭ್ರಮಗಳ
ಪರಮ ವಿಲಾಸವ ತಳದು ।
ಅರಸನ ಕಣ್ತುಂಬಿಗಾಸ್ಯಬ್ಜ ಬಂಧುರ
ದುರು ಪರಾಗವ ಬೀರುತಿಹರು ॥ ೧೭

ಕೆಂದಳಿರೆಸಳ ದೀಧಿತಿ ತಮ್ಮ ಚರಣಾರ
ವಿಂದದಂಗುಳಿಯ ಚೆಲ್ವಿಕೆಗೆ ।
ಮುಂದೆಣೆಯಿಲ್ಲೆಂದು ವೀರ ಮುದ್ರೆಯ ನಗು
ತೊಂದಿಸಿ ಮೆರೆದರಂಗುಟಕೆ ॥ ೧೮

* ಥಳಿ.

ಮೇಲೆ ನಿಮ್ಮಯ ಚೆಲುವಿಕೆ ನಮ್ಮ ಪದ ನಖ
ಜಾಲಕೆಣೆಯೆ ಯೆಂದು ಸುರರ ।
ಬಾಲೆಯರನು ಜರೆದುರೆ ಬಿರುದಿನ ಹೊನ್ನ
ಕಾಲುಂಗುರವನಿಕ್ಕಿದರು ॥ ೬೩

ಸೊಲ್ಲಿಸಲೆಮ್ಮ ಸೊಬಗು ನಾಗಸ್ತ್ರೀಯ
ರಲ್ಲಿ ಹೋಲಿಸದೊಡಿಲ್ಲೆನುತ ।
ಉಲ್ಲಾಸದೆ ಪರಿಹಾಸಕಗೈದಾಗ
ಪಿಲ್ಲಿ ಮಂಟಿಗೆಯನಿಕ್ಕಿದರು ॥ ೬೪

ಸುರ ಲೋಕದೊಳಗೆಮ್ಮಂದದ ಪತಿ ಭಕ್ತಿ
ವೆರೆದ ನಾರಿಯರಿಲ್ಲೆಂದು ।
ಕರ ಹೊಯ್ದು ನಗುತ ಪಾದಾಂಗುಲಿಗಳಿಗಾಗ
ಕಿರು ಪಿಲ್ಲಿಯನಿಕ್ಕಿದರು ॥ ೬೫

ನೆರೆ ತಮ್ಮ ನಾಟ್ಯಕ್ಕೆ ರಂಭೆಯೂರ್ವಶಿ ಮುಖ್ಯ
ತರುಣಿಯರೆಣೆಯಲ್ಲವೆಂದು ।
ಜರೆದುರೆ ನವರತ್ನದ ಬಿರುದಿನ ದಿವ್ಯ
ಚರಣ ಪೆಂಡೆಯವನಿಕ್ಕಿದರು ॥ ೬೬

ಪದ ಕಮಲಗಳ ಬಂಡುಣಿಸಿಗಳಸಿ ಬಂದ
ಮದ ಹಂಸ ಮಿಥುನದಂದದಲಿ ।
ಮುದವೆಡೆದಿಹ ಮೊತ್ತಿನ ಪಾಯವೆಟ್ಟಗಳ್
ಸುದತಿ ರನ್ನೆಯರಿಗೊಪ್ಪಿದುವು ॥ ೬೭

ಮಂಟಿಗೆ ಕಿರು ಪಿಲ್ಲಿ ಕಾಲುಂಗುರದ ದನಿ
ಗೆಂಟು ಮಡಿಯು ದಿವ್ಯ ಸ್ವರವೆ ।
ಉಂಟು ಮಾಡುವ ತೊಡರೆಂದು ಪಾದಕೆ ಹೊನ್ನ
ಗಂಟೆ ಸರವ ಕಟ್ಟಿದರು ॥ ೬೮

ವಿಲಸಿತ ಮುಖ ಚಂದ್ರನೆರಳಿಗೆ ತನು ಮಧ್ಯ
ದೊಳಗಿಹ ಹರಿ ಪಾರ್ವ್ಯ ದೆನುತ ।
ಅಲರಂಬನದ ಬಂಧಿಪ ಜಾಲವೆನೆ ರನ್ನ
ಬಲೆಯುಡಿದಾರವೊಪ್ಪಿದುವು ॥ ೮೯

ಕಠಿಣ ಪಯೋಧರ ಭಾರಕ್ಕೆ ಸೆಳೆ ನಡು
ಪಟು ತಗ್ಗಿ ಬಳುಕುವುದೆಂದು ।
ನಿಟಿಲಾಕ್ಷ ವೈರಿ ಕಟ್ಟಿಟ್ಟೊಲು * ಟೊಂಕವ
ಕಟಿ ಸೂತ್ರಗಳೊಪ್ಪಿದುವು ॥ ೯೦

ಸುರ ಗಿರಿ ತಟವ ಬಳಸಿ ಸಾಲುಗೊಂಡಿಹ
ವೆರ ನವ ರತ್ನ ಜಾಲಗಳ ।
ಸಿರಿಯೊಲು ದಿವ್ಯ ಕಾಂಚೀ ದಾಮ ರಂಜಿಸಿ
ಪರಿಪೂರ್ಣ ಪ್ರಭೆಯ ಬೀರಿದುದು ॥ ೯೧

ಮುಡಿಯ ಭಾರಗಳ ನಾರಿಯರ ಕಂಬು ಗ್ರೀವ
ಬಿಡದಾನಲಾರವೆಂದೆನುತ ।
ಕುಡು ವಿಲ್ಲ ರಕ್ಷೆಗಟ್ಟಿದ ಮಂತ್ರ ಲೇಖನ
ದಡಹೆನೆ ಪ್ರಸ್ತಿಯೊಪ್ಪಿದುವು ॥ ೯೨

ಒಡ ಹುಟ್ಟಿದರ ಕಂಡು ಬಿಗಿಯಪ್ಪಿ ಸ್ನೇಹವ
ಬಿಡದಿಹ ಸು ಜನರಂದದಲಿ ।
ಕಡು ತವಕದೆ ಕಂಬು ಕಂಠವ ಪೆತ್ತಿಕೊಂ
ಡೊಡನೊಪ್ಪಿದುವು ಮುಕ್ತಾಳಿ ॥ ೯೩

ಲೀಲೆಯೊಳಗೆ ಹೃದಯಾಬ್ಜ ವಿಸಲರಿಪ
ಬಾಲ ಸೂರ್ಯನ ಬಿಂಬದಂತೆ ।
ಮೇಲುರದೊಳಗೊಪ್ಪುವ ರತ್ನ ಪದಕದ
ಬಾಲಕಿಯರು ರಾಜಿಸಿದರು ॥ ೯೪

* ಟೊಂಕವು.

ಗುಣ ಮಣಿಯೆನಿಸಿ ರಾಜಿಪ ಕಾವ ಪಂಕಜೇ
ಕ್ಷಣೆಯರ ಹೃದಯಾಬ್ಜದೊಳಗೆ ।
ಕ್ಷಣ ಬಿಟ್ಟಿರನೆಂದು ನೊಳ್ಪೊಡೆತಂದೊಲು
ಗಿಣಿಯು ತಾಲಿಗಳೊಪ್ಪಿದುವು ॥ ೩೫

ಹೆಂಗಳ ಮೊಗದಾವರೆ ದಿವ್ಯ ನಯನೋತ್ಪ
ಲಂಗಳ ಮಿಗೆಯಲರ್ಚಿಸುವ ।
ಮಂಗಳ ರವಿ ಶಶಿ ಬಿಂಬದೋಲ್ಪರಳೋಲೆ
ಕಂಗೊಳಿಸಿದುವು ಕರ್ಣದಲಿ ॥ ೩೬

ಹೊಳವ ಮುಖಾಬ್ಜ ಮಂಡಲವನು ಸಾಲ್ಗೊಂಡು
ಬಳಸಿಹ ತಾರಾಳಿಯಂತೆ ।
ನಳಿನ ದಳಾಯತೇಕ್ಷಣೆಯರ ಕೊರಳೊಳ
ಗಳವಟ್ಟುವು ಕಂಠ ಮಾಲೆ ॥ ೩೭

ಥಳ ಥಳಿಸುವ ರತ್ನ ದೈರಗಡಗ ದಿವ್ಯ
ನುಲಿಗಡಗಗಳಾಮಲಕದ ।
ತೊಳಪ ಕಡಗ ಹಲಸಿನ ಕಾಯಿಗಡಗಗ
ಳಳವೆಣ್ಗಳೆಸೆದರರ್ತಿಯಲಿ ॥ ೩೮

ಕೀಲ ಕಡಗ ಹಸ್ತ ಕಡಗ ಹೀರಾವಳಿ
ಡಾಳಿಸುತಿಹ ಸಿಂಹ ಕಡಗ ।
ಗೌಳ ಸರದ ಪಣಿಗಡಗದ ಸೊಬಗಿನ
ನೀಲ ಕುಂತಳಯರೊಪ್ಪಿದರು ॥ ೩೯

ಮಿರುಗುವ ಕಾರ್ಮುಗಿಲೆಡೆಯೊಳು ರಾಜಿಪ
ವರ ಬಿದಿಗೆಯ ಶಶಿಯಂತೆ ।
ತರುಣಿ ರನ್ನೆಯರುತ್ತಮಾಂಗದ ಚಿಕುರದೆ
ಹೆರೆ ಚಂದ್ರಮನೊಪ್ಪಿದುವು ॥ ೪೦

ಮಿಸುಪ ರತ್ನದ ಕೊಪ್ಪು ವೆಂಟಿಯು ನೊಸಲೊಳ
ಗೆಸೆವೆ ಮುತ್ತಿನ ಬೊಟ್ಟುಗಳ ।
ಹೊಸ ಹರೆಯದ ಹೊಂಮಿನ ಬಾಲೆ ವೆಂಗಳು
ಜಸವಡೆದೆಸೆದರೇನೆಂಬೆ ॥ ೪೧

ಜಡೆ ಸರ ಸೂರಿಯ ಕಾಂತಿ ಮೌಕ್ತಿಕಗಳ
ಮುಡಿಪಲೆ ಮೆರೆವೆ ಬಾವುಲಿಯ ।
ನಿಡುಗುರುಳಿನ ಮುತ್ತಿನ ಕುಚ್ಚಿನಿಂದ ಬ
ಲ್ಬಿಡಗಾಗಿ ಮೆರೆದರರ್ತಿಯಲಿ ॥ ೪೨

ನವ ರತ್ನದುಂಗುರ ಹೊಸ ಮಿಸುನಿಯ ತಾತಿ
ಖವೆ ಖವಿಸುವೆ ತೋಳ ಬಳೆಯ ।
ಕುವಲಯ ನೇತ್ರೆಯರೆಸೆದರು ಸುಮನಸ
ಯುವತಿಯರೊಪ್ಪವ ಜರೆದು ॥ ೪೩

ಎಸೆವ ಬೊಂಬೆಯ ಬರಹದ ಪಟ್ಟೆ ಪೀತಾಂಬ್ರ
ಪೊಸ ಚಂದ್ರಗಾವಿ ಪೊಪ್ಪುಳಿಯ ।
ಮಿಸುಪ ಶುಭ್ರದ ದಿವ್ಯ ದುಗುಲದ ನಿರಿಗಳ
ಶಶಿ ಮುಖಿಯರು ರಂಜಿಸಿದರು ॥ ೪೪

ಮಿರುಪ ಯೌವನ ವನ ವಲ್ಲಿಯೊಳ್ ಪ್ರೂತೊಪ್ಪಿ
ಮೆರೆವರಳ್ಗಳ ವೊತ್ತದಂತೆ ।
ಸರಸಿಜಾಕ್ಷಿಯರ ಜಡೆಯೊಳೂಪ್ಪಿದುವಾಗ
ಪರಿಮಳಿಸುವೆ ಪೂ ಮಾಲೆ ॥ ೪೫

ನಿರಿಗುರುಳ್ಗಳ ನೇವರಿಸುತ ಸಾಲಿಯ
ಸೆರಗ ಮೇಲುದ ಸಂತವಿಡುತ ।
ಸಿರಿ ನೊಸಲೊಳು ಕಸ್ತೂರಿಯ ತಿದ್ದುತ ಹೆಂಗ
ಳರಸಿಯರೆಸೆದರರ್ತಿಯಲಿ ॥ ೪೬

ಅಂದುಗೆಗಳ ಝಣತ್ಕೃತಿ ಪಿಲ್ಲಿ ಮಂಟಿಗೆ
ಗೊಂದಿದ ಸ್ವರ ವೀಳೆಯಳಯ ।
ಚೆಂದದ ಕಿರು ಗಂಟೆಯ ದನಿ ದಶ ದಿಕ್ಕ
ಮುಂದುವರಿದು ಮುಸುಕಿದುದು ॥ ೪೭

ತರುಣಿಯರುಗಳಿಟ್ಟಣಿಸಿ ಮೈ ಮೈ ಸೋಂಕ
ಲುರು ಹೇಮದೊಡವುಗಳ್ಮಸೆದು ।
ವರ ರಜವಿಳಯೊಳೂಪ್ಪಿತು ಬಾಲ ಸೂರ್ಯನ
ಕಿರಣದ * ಡಾಕ್ ತೋರಿಸುತ ॥ ೪೮

ಇಂತಪ್ಪ ಚೆಲುವೆ ನಾರಿಯರು ಸಿಂಗರಿಸಿಯು
ತ್ಯಂತ ಸಂತೋಷವ ತಳದು ।
ಕಂತು ಸನ್ನಿಭ ನರಸೇಂದ್ರಗಲಂಕಾರ
ಮಂ ತವೆ ರಚಿಪುದೇ ವೇಳ್ವ ॥ ೪೯

ಧರಣಿಪ ಕೇಳೀ ಸೆನ ಲಕ್ಷ್ಮ್ಯಯಂತೊರ್ವೆ
ಹರುಷದೊಳಗೆ ನಡೆತಂದು ।
ಪರಿಮಳಿಸುವ ಪೂ ಮಾಲೆಯ ಭೂಪನ
ಸಿರಿ ಮುಡಿಗಳವಡಿಸಿದಳು ॥ ೫೦

ಮೊಡಿದ ಬಾಲ ಸೂರ್ಯ ಪ್ರಭೆ ಯಿದರ ಸ
ಘಾಡಿಕ್ಕೆಗೆಣೆಯೆ ಭೂ ಪಾಲ ।
ನೋಡೆಂದು ನಗುತೊರ್ವೆ ಮಿಸುನಿಬು ರುಮ್ಮಾಲ
ಜೋಡಿಸಿದಳು ವರ ಶಿಖಿಗೆ ॥ ೫೧

ಧರಣೀಶ್ವರ ಕುಲ ತಿಲಕ ನೀನಹುದೆಂದು
ಸರಸಿಜ ಮುಖಿ ಯೊರ್ವೆ ನಗುತ ।
ನರಸ ರಾಜೇಂದ್ರನ ಪೆರೆ ನೊಸಲಿಗೆ ಕ
ಸ್ತೂರಿ ತಿಲಕವ ರಚಿಸಿದಳು ॥ ೫೨

---

* ಧಾತ

ನೆರೆ ಜಸ ವೆಂಣ ಭೂ ವರನುತ್ತಮೊಂಗಕೆ
ಸಿರಿ ದೇವಿ ಸೇರಿಸುವಂತೆ ।
ಬಿರುದಿನ ಕೀರ್ತಿ ಮುಖದ ದಿವ್ಯ ವೆಜ್ರದ
ಮಿರುಪ ತುರಾಯ ಕಟ್ಟಿದಳು ॥ ೫೩

ಮುಖ ಚಂದ್ರನಿಗೆ ಮೋಹಿಸುತಿಹ ತಾರಾ
ನಿಕರವೆ ತಂದು ಕೂಡಿಸಿದ ।
ಸಖಿಯೆನೆ ಮುತ್ತಿನ ಚೌಕುಳಿಗಳನಿಟ್ಟ
ಳಕಳಂಕನಿಗೊರ್ವ ನೀರೆ ॥ ೫೪

ಇಳೆಯಾಣ್ಮನ ಮುಖಾಬ್ಜದ ಪರಿಮಳದೊಳು
ಬಳ ಯೆಂದು ತುಂಬಿಯ ನುರಿಗು ।
ತಳುವದೆ ತಂದು ಸೇರಿಪ್ಪೊಲಿಂದ್ರ ನೀಲದ
ಹೊಳವ ಬಾವ್ರಲಿಯ ಕಟ್ಟಿದಳು ॥ ೫೫

ವರ ಜಯ ಲಕ್ಷ್ಮಿ ಮೋಹಿಸಿ ನಗುತ್ಯೆತಂದು
ಧರಿಸಿದ ದುಂಡು ಮಲ್ಲಿಗೆಯ ।
ಸರವೆನೆ ತರುಣಿಯೊರ್ವಳು ಕಂಠ ನಾಲೆಯ
ಕೊರಳೊಳಿಟ್ಟಳು ಭೂ ಪತಿಯ ॥ ೫೬

ಧರಣೀಶ್ವರ ಧೈರ್ಯ ಲಕ್ಷ್ಮಿ ನಿನ್ನುರದೊಳು
ಸ್ಥಿರವಾಗಿ ನೆಲಸಿಹೆನೆಂದು ।
ಹರುಷದೆ ಬಂದಳೀಕೆಯ ಸಲಹೆಂದೊರ್ವೆ
ವರ ವಜ್ರ ಪದಕವಿಕ್ಕಿದಳು ॥ ೫೭

ನರ ರೂಪ ಮನ್ಮಥ ರತಿ ದೇವಿಯು ನಿ
ನ್ನುರದೊಳಿಂಬಿಟ್ಟುಕೊಳ್ಳಂದು ।
ಹರುಷದೆ ನುಡಿದೊರ್ವ ಪಚ್ಚೆಯ ಪದಕವ
* ಧರಿಸಿದಳವನೀಶ್ವರಗೆ ॥ ೫೮

---

* ಘಟಸೆಂದಳವನೀಶ್ವರಗ.

ಧರಣೀಪ ನಿನ್ನಯ ಹೃದಯಾಬ್ಜದೊಳಗಿಹ
ಹರಿಯ ದಿವ್ಯಾಂಗ ದೀಧಿತಿಯ ।
ಸಿರಿ ಯಿಂ ಪರಿಯೆ ಹೇಳಂದೊರ್ವೆ ನೀಲದ
ಮಿರುಪ ಪದಕವ ತೋರಿದಳು ॥ ೩೯

ಹರಿಯುರದೆಡೆಗೆ ಕಾಸ್ತುಭ ದಿವ್ಯ ರತ್ನವ
ವರ ಲಕ್ಷ್ಮಿ ಸೇರಿಸುವಂತೆ ।
ನೆರೆ ಪದ್ಮ ರಾಗದ ಪದಕವ ಭೂಪಗೆ
ಹರುಷದೆ ನೀಡಿದಳೊರ್ವೆ ॥ ೪೦

ಅರಿ ನೃಪ ಗಜ ಮಸ್ತಕವ ಸೀಳ್ದ ನೀ ನಿ
ನ್ನುರದೊಳಗೊಗೆದ ಮೌಕ್ತಿಕವ ।
* ಮೆರೆಸೆಂದು ಕಂಠೀರವೇಂದ್ರಗೆ ಮುತ್ತಿನ
ಸು ರುಚಿರ ಪದಕವಿಕ್ಕಿದಳು ॥ ೪೧

ತರುಣಿಯೊರ್ವಳು ತನ್ನ ದಿವ್ಯಾಂಗ ರುಚಿಯೆನು
ನರಸೇಂದ್ರನುರ ವನೆಯೊಳಗೆ ।
ಇರಿಸುವಂದದೆ ವೈಡೂರ್ಯದ ಪದಕವ
ಧರಿಸಿದಳೀನ ಬಣ್ಣಿಸುವೆ ॥ ೪೨

ಅಂದು ಶ್ರೀ ಹರಿ ನೀನೈತಂದು ಸಿಂಗರ
ದಿಂದೆನ್ನೊಳಿಹೆಯನವರತ ।
ಇಂದು ನಿನ್ನುರದೊಳಗಿಪೆನೆಂದು ಬಂದೊಲು
ಬೃಂದಾವನ ತಾಳಿ ಯಿಹುದು ॥ ೪೩

ಹೊಳವ ವಜ್ರದ ಕಂಠ ಮಾಲೆ ಮಾಣಿಕ್ಯದ
ಸು ಲಲಿತ ಕಂಠ ಮಾಲೆಗಳ ।
ನಳಿನಾಕ್ಷಿಯೊರ್ವಳು ದ್ವಯ ಕಂಠ ಮಾಲೆಯ
ಸಲೆ ಧರಿಸಿದಳು ಭೂ ಪತಿಗೆ ॥ ೪೪

---

* ಮೆರಸಿಂದ.

ನಿಚ್ಚ ಕೈಯೆತ್ತಿ ಕೊಡುವ ದಾನ ಧರ್ಮಕ್ಕೆ
ಸಚ್ಚರಿತಾನು ರಂಜನೆಗೆ ।
ಅಚ್ಚು ತನೊಲಿದಿತ್ತ ಬಿರುದ ಕೊಳ್ಳಂದೊರ್ವೆ
ಪಚ್ಚೆಯ ಕಡಗವಿಕ್ಕಿದಳು ॥ ೬೫

ಭೂ ತಳದೊಳು ಸೆಣಸುವ ರಿಪು ನೃಪ ಗಜ
ವ್ರಾತ ಪಂಚಾನನನೆಂದು ।
ಪ್ರೀತಿಯಿಂದೊಲಿದು ಭೂಪನ ಕೈಗೆ ಹಮ್ಮಿರ
ತಾತಿಯ ಕಟ್ಟಿದಳೊರ್ವೆ ॥ ೬೬

ಅರಿ ನೃಪರೆದೆ ಧೈರ್ಯ ಗಿರಿಯ ಸೀಳ್ವಾಡುವ
ನೆರೆ ಕುಲಿಶಾಯುಧವೆಂದು ।
ತರುಣಿಯೊರ್ವಳು ನವ ರತ್ನದ ಕೈಯುಂಬ
ಧರಿಸಿದಳವನೀಶ್ವರಗೆ ॥ ೬೭

ನವ ರತ್ನ ದುಂಗುರ ಮುತ್ತಿನ ಕಂಕಣ
ತವೆ ದಿವ್ಯ ಕಟಿ ಸೂತ್ರಗಳ ।
ಸು ವಿಲಾಸದೊಳಗೆ ನಾರಿಯರು ಭೂ ಪಾಲ
ನವಯವದೊಳು ಧರಿಸಿದರು ॥ ೬೮

ವರ ತೋಳ ಭಾಪುರಿ ನವ ರತ್ನ ಖಚಿತದ
ಸಿರಪೇಷ್ಕಿತುರಾಯಿ ಕಲ್ಲಿಯನು ।
ಸರಸಿಜ ಮುಖಿಯೊರ್ವೆ ಪಿಡಿದು ನಿಂದಿರ್ದಳು
ಸ್ಮರನರಸಿಯೊಲಂದದಲಿ ॥ ೬೯

ದುರವನೆಸಗಲಂಜಿ ಶರಣಾಗತರಾದ
ದೊರೆಗಳ ಮುಕುಟ ರತ್ನಗಳ ।
ಕಿರಣವ ಕೆಳಗೊಂಡು ನರಸ ರಾಜೇಂದ್ರನ
ಚರಣ ಪೆಂಡೆಯುಗಳೊಪ್ಪಿದುವು ॥ ೭೦

ಹೊಸ ಕೆಂದಾವರೆ ಯೆಸಳುಗಳಂತೆ ರಾ
ಜಿಸುವ ಪಾದಾಂಗುಳಿಗಳಿಗೆ ।
ಬಿಸಜಾಕ್ಷಿಯೊರ್ವಳು ನಗುತ ಸಂತೋಷದೆ
ಮಿಸುನಿಯು ಮಿಂಚನಿಕ್ಕಿದಳು ॥ ೨೧

ಕಟ್ಟಾಣಿ ಮುತ್ತು ತೆತ್ತಿಸಿದುಡಿಗೆಯೊಳಗ
ವಟ್ಟು ಮೆರೆದ ದುಪ್ಪಟದೆ ।
ಸೃಷ್ಟಿಗೆ ನರ ರೂಪ ನರ ಸಿಂಹನ ಪೋ
ಲ್ವಪ್ಪು ಮೆರೆದ ನರಸೇಂದ್ರ ॥ ೨೦

ಈ ಪರಿಯಲಿ ಸಿಂಗರ ಗೈದು ನೆರೆ ನರ
ರೂಪ ನೃ ಸಿಂಹನೆಂಬಂತೆ ।
ಭೂ ಪಾಲ ವಂಶಾಂಬುಧಿ ಚಂದ್ರ ಕೀರ್ತಿ ಕ
ಲಾಪನೊಪ್ಪಿದನರ್ತಿಯಲಿ ॥ ೨೩

ಅರಿ ಭೂಮಿಪರ ಮಣಿ ಮಕುಟ ಚ್ಛವಿಯೊಳು
ಪರಿಶೋಭಿಸುವುವಿವೆಂದು ।
* ವರ ರತ್ನದ ಹಾವುಗೆಯನೊರ್ವೆ ಭೂಪನ
ಚರಣಾಬ್ಜ ಕಳವಡಿಸಿದಳು ॥ ೨೪

ಹರಿಯಿಡ ಬಲದಲಿ ಸಿರಿ ಸತ್ಯ ಭಾಮೆಯ
ರಿರದೈದಿ ಬರುವಂದದಲಿ ।
ನರಸೇಂದ್ರನ ಪೈರಣಿಯ ಜೋಲ್ಪೆರಗಾಂತು
ಗರುವೆಯರಿರ್ವ ರೈದಿದರು ॥ ೨೫

ರಾಗದೆ ಮದನನ ಕೈಯ ನಂಬುಗೆಗೊಂಬ
ಭೋಗದ ರತಿ ದೇವಿಯಂತೆ ।
ಭೂಗಧೀಶ್ವರ ಕಂಠೀರವೇಂದ್ರಗೆ ಕೈ
ಲಾಗಿತ್ತಳೊರ್ವೆ ಬ್ಜ ನೇತ್ರೆ ॥ ೨೬

* ನವರತ್ನದ.

ಭೂ ಲೋಲ ನಿನ್ನ ಮುಖಾಬ್ಜವನಲರಿಪ
ಬಾಲ ಸೂರ್ಯನ ನಿಟ್ಟಿಸೆಂದು ।
ಲೀಲೆಯಿಂ ತೋರ್ಪೊಲು ರತ್ನ ದರ್ಪಣವಾಂತು
ಬಾಲಕಿಯೊರ್ವಳೊಪ್ಪಿದಳು ॥ ೭೭

ಪಂಚೇಷು ರೂಪನ ಮುಖ ಪದ್ಮಕೆರಗುವ
ಚಂಚರೀಕವನೆಬ್ಬಿ ಪಂತೆ ।
ಅಂಚೆ ಗಮನೆಯೊರ್ವಳು ನವ ರತ್ನದ
ಕುಂಚವ ಬೀಸಿದಳೊಲೆದು ॥ ೭೮

ನೆರೆ ನಮ್ಮರಸನ ಶೌರ್ಯವ ಸುರ ಲೋಕ
ಕರುಪೆಂದು ಕೀರ್ತ್ಯಂಗನೆಯ ।
ಸಿರಿ ಜಯ ವಧುಗಳಿಟ್ಟದರೆನೆ ಶುಭ್ರ ಚಾ
ಮರವ ಚಿಮ್ಮಿದರೆಡ ಬಲಕೆ ॥ ೭೯

ವದನ ಶಶಿಯ ತಣ್ಪುಗೂಡಿ ಸೌರಭ್ಯದೆ
ಪುದುಗಿದ ಮಂದ ಮಾರುತನ ।
ಮದನ ದಿವ್ಯಾಂಗ ಲತೆಗೆ ಸೂಸುವೋಲೊರ್ವ
ಚದುರೆ ಬೀಸಿದಳಾಲವಟವ ॥ ೮೦

ಸಲೆ ಮುಖ ಸಿರಿ ನಿನ್ನ ಬಿಟ್ಟಿರಳೆಂದಾಗ
ಳೊಲಿದು ಕೈಲೆಡೆಯಿತ್ತು ನಲಿವ ।
ಕೆಳದಿಯೆಂದೆನಲೊರ್ವೆ ಕರ್ಪುರ ವೀಳ್ಯದ
ಗಳಿಗೆಯನಿತ್ತಳರಸಗೆ ॥ ೮೧

ರೂಢೀಕ ನಿನ್ನಯ ಹೃದಯಾಬ್ಜ ರಾಗವ
ನೋಡ ಬೇಕಿಲ್ಲಿರಿಸೆಂದು ।
ಬೇಡಿ ಕೊಂಬೋಲೊರ್ವೆದ್ವಯ ಕರಾಬ್ಜ ದೊಳಾಗ
ನೀಡಿದಳ್ಕಳಾಂಜಿಯನು ॥ ೮೨

ಕಾರದೆ ನಮ್ಮರಸಿನ ಜಿಹ್ವಾಗ್ರದೆ
ಸೇರಿಹಳ್ಗಂಗೆ ನೋಡೆಂದು ।
ಓರಂತೆ ಕಳುಪುವೊಲ್ ರತ್ನ ಗಿಂಡಿಯ ಪ
ನ್ನೀರನೊರ್ವಳು ನೀಡಿದಳು ॥ ೮೩

ಅಕಳಂಕ ರೂಪನ ಮುಖ ಚಂದ್ರಮನ ಕೂಡಿ
ಸುಖದೊಳೂಲಾಡು ನೀನೆಂದು ।
ಸಖಿ ದರ ಹಸಿತ ಬೆಳ್ದಿಂಗಳೀವೊಲು ಶುಭ್ರ
ಮುಖ ಪಾವುಡೆಯ ನೀಡಿದಳು ॥ ೮೪

ಇಂತಾಗ ನಾರಿಯರುಗಳೂಲೈಸಲು
ಕಂತು ಸನ್ನಿಭ ನರಸೇಂದ್ರ ।
ಸಂತೋಷದೊಳಂತಃಪುರದಿಂದಲ
ತ್ಯಂತ ಸಂಭ್ರಮದೊಳ್ಬಂದ ॥ ೮೫

ಬಳರಾಣುವೆಯ ಗಜೇಂದ್ರನ ತಿರು ನಾಳ
ಬಲು ಸಂಭ್ರಮವ ನೋಡುವೊಡೆ ।
ನೆಲವಾಡವೇರಲಪ್ಪಣೆಗೊಟ್ಟು ಭೂಪಾಲ
ಬಲು ಹರುಷದೊಳ್ಬಂದ ॥ ೮೬

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನೆ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೮೭

ಎಳನೆಯ ಸಂಧಿ ಸಮಾಪ್ತಂ.

ಇಪ್ಪತ್ತೈದನೆಯ ಸಂಧಿ.

ರಂಗನಾಥ ರಥೋತ್ಸವಕ್ಕೆ ರಾಜರು ಬಂದುದು.

ಸೂಚನೆ॥ ಕಡುಚೆಲ್ವ ರಂಗನ ಗಜ ರಾಜ ತಿರು ನಾಳು
ಬಿತಗ ಬೀರಿತು ತ್ರೈಜಗಕೆ ॥

ಧ್ವನಿಗೈದುವನಿತರೊಳಗೆ ರಾಮು ಭೇರಿಗ
ಳನುವಾದ ಚೆನ್ನಗಾಳಿಗಳು ।
ಘನತರವಾದ ನಾನಾ ವಾದ್ಯದ ರವ
ವನಧಿ ಘೋಷವ * ಮೀರಿದುವು ॥ ೧

ಹೊರ ಬಾಗಿಲುಪ್ಪರಿಗೆಯ ಚಂದ್ರ ಶಾಲೆಗೆ
ಪಿರಿದು ಚಿಕ್ಕೂಳಿಗದವರ ।
ನೆರವಿಯೊಳರಸನೈತರುತಿರೆ ದಳ ಪತಿ
ಹರುಷದೆ ಕೈಲಾಗನಿತ್ತ ॥ ೨

ಹಡಪ ಸೀಗುರಿ ಕನ್ನಡಿ ಕುಂಚ ಕಾಳಾಂಜಿ
ಪಿಡಿದ ಬೀಸಣಿಗೆ ಪಾವುಗೆಯ ।
ಕಡು ಚೆಲುವಾಂತಿಹೂಳಿಗದವೆರೈತಂ
ದೆಡಬಲವನು ಸಾರಿದರು ॥ ೩

ರಾಯ ರಾವುತ ಮನ್ನೆಯ ಮಂಡಲಿಕ ಸಮು
ದಾಯ ಸುಭಟ ಸಂದೋಹ ।
ಆಯತದಲಿ ಕರಾಂಜುಳಿಯ ನೊಸಲಿಗಿಟ್ಟು
ಪ್ರೀಯದೆ ನಡೆದರೀ ವೇಳ್ವ ॥ ೪

---

* ಮಿಗಸಿವುವು.

ಕರಣಿಕರಾಪ್ತ ಮಂತ್ರಿಗಳು ವಿದ್ವಾಂಸರ
ನೆರವಿ ಭೂವರನ ಹಿಂಗಡೆಯೆ ।
ಪರಮ ಸಂತೋಷದೆ ನಡೆದು ಬರುವ ಬಲು
ಸಿರಿಯ ಸಂಭ್ರಮವನೇನೆಂಬೆ ॥ ೫

ಸಿಂಗರಿಸಿದ ರಾಜ ತೇಜಿಯ ಬಲವೆಂದು
ಹಿಂಗದೆ ಚರಣಕೆ ನಮಿಸಿ ।
ತುಂಗ ವಿಕ್ರಮ ಕಂದವೆ ತಟ್ಟಿ ಜಯ ಜಯ
ಮಂಗಳೋತ್ಸವದೊಳೇರಿದನು ॥ ೬

ಪಾದಾವಧಾನ ಹಸ್ತವಧಾನ ಜೀಯ ಶು
ಭೋದಯ ಚಿತ್ತೈಸೆಂದು ।
ಆದರದೊಳಗುಗ ಡಿಪವಸರದರ
ಸಾಧು ವಾದಗಳೊಪ್ಪಿದುವು ॥ ೭

ಮುತ್ತಿನ ಸತ್ತಿಗೆ ನವ ರತ್ನ ಖಚಿತದ
ಬಿತ್ತರದಾಲವಟ್ಟಗಳು ।
ಸುತ್ತ ಮೆರೆದುವಾ ನರಸೇಂದ್ರನೈತರು
ವರ್ತಿಯನೇನ ಬಣ್ಣಿ ಸುವೆ ॥ ೮

ಮರುತ ಪಥವ ಸೋಂಕುವ ಬಿರುದಿನ ಡಾಳು
ಗರುಡ ಪನುಮನ ಕುರುಹಿನ ।
ವರ ಶಂಖ ಚಕ್ರ ಮಕರ ಟಿಕ್ಕೆಯ ನೆರೆ
ಪರಿ ಕೋಭಿಸಿದುವರ್ತಿಯಲಿ ॥ ೯

ಎಡ ಬಲದೊಳಗೆ ಡಾಳಿಪ ವೆಟ್ಟು ಪಾವಡೆ
ತುಡುಕಲಾಕಾಶ ಮಂಡಲವ ।
ಪೊಡವಿಗೆ ನರ ರೂಪ ನರ ಸಿಂಹನೈತಹ
ಬಿಡಗನದೇನ ಬಣ್ಣಿ ಸುವೆ ॥ ೧೦

ಶಶಿಯ ಷೋಡಶ ಕಲೆ ದಿವ್ಯಾಂಗನೆಯರ
ಪ್ರೊಸ ಯೌವನ ರೂಪ ತಾಳಿ ।
ಜಸವ ಬೀರ್ವೋಲು ಪದಿನಾರು ಚಾಮರವ ಡಾ
ಳಿಸುತ ನಾರಿಯರೈದಿದರು ॥ ೧೧

ಆನಿತರೊಳಗೆ ದಿವ್ಯ ಶೃಂಗಾರವನಾಂತ
ವಿನುತ ಭಟ್ಟರುಗಳ್ಬೆತಂದು ।
ಜನ ನಾಥನ ಬಿರುದುಗಳ ಕೈವಾರಿಸು
ವನುವ ನಾನೇನ ಬಣ್ಣಿಸುವೆ ॥ ೧೨

ಕೈವಾರ॥— ಸ್ವಸ್ತಿ ; ಸಮಸ್ತ ಭುವನ ಪ್ರತಾಪ ಮಾರ್ತಂಡ, ಜಯ ಲಕ್ಷ್ಮೀ ಭಾಗ್ಯ ಲಕ್ಷ್ಮೀ ಕಟಾಕ್ಷ ನೀರಿಕ್ಷಣ ಶೋಭಾಯಮಾನ ದಿವ್ಯಾಂಗ, ಸಕಲ ವಿದ್ವಜ್ಜನಾಧಾರ, ಆಶ್ರಿತ ಜನ ಕಲ್ಪ ವೈಹ್ಲೆ, ತುರುಷ್ಕ ಬಲ ಪ್ರಾರಾವಾರ ಬಡಬಾನಲ, ಆರ್ಯಾಂಧ್ರ ನೃಪ ಗರ್ವ ಪರ್ವತ ಕುಲಿ ಶಾಯುಧ, ರಿಪು ಪ್ರಾಂಡ್ಯ ಭೂಮಿ ಪತಿ ತಿರುಮಲೆ ನಾಯಕ ಚತುರಂಗ ಬಲ ವೆಲ್ಲರೀ ಲವಿತ್ರ, ಆನತ ರಾಜಾಭಯ ದಾನ ಪರಿಪೂರ್ಣ ಕರುಣಾರ್ಣವ, ಸೌಂದರ್ಯ ಸಾಲಂಕಾರ, ನಾರೀ ಜನ ನಯನ ಚಕೋರ ಚಂದ್ರಮ, ಸು ಚರಿತ ಸು ಪ್ರಸನ್ನ ಸಮಸ್ತೋರ್ವೀಶ ಮಕುಟ ಮಣಿ ಗಣ ರಂಜಿತ ಪಾದ ಪದ್ಮ, ಚಾಮುಂಡೀ ವರ ಪ್ರಸಾದ, ಸಂಗೀತ ಸಾಹಿತ್ಯ ಶಾಸ್ತ್ರ ವಿಶಾರದ, ಬಿರುದಂತೆಂಬರ ಗಂಡ, ಸೋಮ ವಂಶಾಬ್ಧಿ ಸುಧಾ ಕರ, ಮೈಸೂರು ಪುರ ವರಾಧೀಶ್ವರ, ಕಂಠೀರವ ನರಸ ರಾಜೇಂದ್ರ ವಿಜಯೀಭವ ದಿಗ್ವಿಜಯೀಭವ ॥ ೧೩

ಇಂತೆಂದು ಕೈವಾರಿಸುವ ಪಾಠಕ ಜನ
ತಿಂತಿಣಿಸಿರಲೆಡ ಬಲಕೆ ।
ಮುಂತೆ ರಾಮ ಧ್ಯಾನ ಮಂಗಳಾಷ್ಟಕದರ
ಸಂತತ ಗಾನವೊಪ್ಪಿದುವು ॥ ೧೪

ಮೆತ್ತಾಗ ದಿವ್ಯಾಶ್ವವ ಕುಣಿಸುತ ಪುರು
ಷೋತ್ತಮನೊಲು ಬಹ ನೃಪನ ।
ಇತ್ತರದಲಿ ಶೋಭನ ಡವಳವ ಪೇಳ್ವ
ಮತ್ತ ಗಮನೆಯರೈದಿದರು ॥ ೧೫

ಸುರಪನೈರಾವತವನು ಧಿಕ್ಕರಿಸುತ
ಬಿರುದಿನ ಚಿತ್ರ ಪಟಗಳ ।
ಸು ರುಚಿರ ಶೃಂಗಾರದ ಮದ ಕರಿಗಳಂ
ದರಸನಿಕ್ಕೆಲದೆ ನಡೆದುವು ॥ ೧೬

ದ್ಯು ಮಣಿಯ ಚಾರು ವರೂಥದ ತುರಗದ
ಸಮ ರಂಗ * ಸೂಟಿಯ ಜರೆವ ।
ರಮಣೀಯ ಶೃಂಗಾರವಿಡಿದ ದಿವ್ಯಾಶ್ವ ಸಂ
ಭ್ರಮದೆ ನಡೆದುದನೇ ವೇಳ್ವ ॥ ೧೭

ದೊರೆ ರಾಯ ನರಸೇಂದ್ರ ರಚಿಸಿದ ತಿರು ನಾಳ
ಸಿರಿಯ ನೋಡುವೊಡೈತಂದ ।
ನೆರೆ ಸರ್ವ ಜನ ಭೂಪನೈತಹ ಠೀವಿಯ
ಪಿರಿದು ನಿಟ್ಟಿಸಿದರರ್ತಿಯಲಿ ॥ ೧೮

ಮಾಳಿಗೆ ಮನೆಯ ಮೇಲ್ಕಚ್ಚ ಚಪ್ಪರದಲಿ
ಸಾಲ ಸೆಜ್ಜೆಯ ಭಿತ್ತಿಗಳ ।
ಜಾಲಾಂದ್ರದಲಿ ಮುದ್ದು ವೆಣ್ಣುಗಳ್ನರಸ ಭೂ
ಪಾಲನ ನೋಡುತೊಪ್ಪಿದರು ॥ ೧೯

ಸಿರಿಯರಸನ ಲಾವಣ್ಯಮಿಂದ್ರನ ಭೋಗ
ಪರಿಪೂರ್ಣ ಚಂದ್ರನ ಕಾಂತಿ ।
ದೊರೆ ರಾಯನೊಳಸದಿದೆ ಯೆಂದು ನೋಟಕ
ರಿರದೀಕ್ಷಿಸಿದರರ್ತಿಯಲಿ ॥ ೨೦

* ಸೂರಿಯ.

ರಾಮ ಚಂದ್ರನ ಸು ಚಾರಿತ್ರ ಹರಿಶ್ಚಂದ್ರ
ಭೂಮಿ ಪಾಲನ ವರ ಸತ್ಯ ।
ಸ್ವಾಮಿ ಕಂಠೀರವೇಶ್ವರನೊಳೂಪ್ಪಿದೆ ಯೆಂದು
ಪ್ರೇಮದೆ ಜನರೀಕ್ಷಿಸಿದರು ॥ ೧೧

ಅತನು ಮನ್ಮಥ ನಳ ಕೂಬರ ಗುಹ್ಯಕ
ಶತ ಪತ್ರ ವೈರಿ ಕಳಂಕಿ ।
ಕ್ಷಿತಿಯೊಳೀ ನರಸೇಂದ್ರನ ಚಲುವಿಕೆಗಿನ್ನು
ಪ್ರತಿಯಿಲ್ಲವೆಂದು ನೋಡಿದರು ॥ ೧೨

ಬಳಿಕಲಾ ಭೂ ಪಾಲ ತಿರುನಾಳಿಗೆ * ಪೋಪ
ಸುಲಲಿತೋತ್ಸವವ ನೋಡುಪೊಡೆ ।
ಅಲರಂಬ ಮೋಹಿನಿ ಯೆನಿಪ ವಾರಾಂಗನೆ
ನೆಲೆವಾಡದುದಿಗೈದಿದಳು ॥ ೧೩

ಲೀಲೆಯೊಳಗೆ ತಿರು ನಾಳಿಗೈದುವ ಭೂ
ಪಾಲನ ಸಿರಿಯ ಸಂಭ್ರಮವ ।
ಲೋಲ ಲೋಚನೆ ಚಿತ್ರ ರೇಖೆ ಯೆನಿಪ ತನ್ನ
ಮೇಳದ ಸಖಿಯ ಕೇಳಿದಳು ॥ ೧೪

ಮೆರೆವ ತಾರಾ ಗಣ ಮಧ್ಯದೆ ರಾಜಿಪ
ಪರಿಪೂರ್ಣ ಚಂದ್ರನಂದದಲಿ ।
ಪರಿವಾರದೊಡನೆ ದಿವ್ಯಾಶ್ವವ ಕುಣಿಸುತ
ಹರುಷದೆ ಬಹ ದೊರೆ ಯಾರೆ ॥ ೧೫

ಮೇರೆಯ ಮೀರಿ ಯ್ದೈದಿದ ತುರುಕರ ಬಲ
ವಾರಿಧಿಯನು ಬತ್ತಿಸಿದ ।
ವೀರ ರಾಘವ ಸನ್ನಿಭ ನರಸೇಂದ್ರ ಕೇಳ್
ಚಾರು ಪಯೋಧರ ಯುಗಳ ॥ ೧೬

* ಪೊಸ.

ಹೊಳವ ಮುತ್ತಿನ ಚತ್ರದ ನೆಳಲೊಳು ಬರು
ವಿಳಯಾಣ್ಮನಾರಬ್ಜನೇತ್ರೆ ।
ಲಲಿತಾಂಗಿ ಕೇಳೀತ ವೈರಿ ಭೂಪಾಲಕ
ಕಲಭ ಕಂಠೀರವ ರಾಜ ॥ ೬೩

ನವ ರತ್ನದಾಲವಟ್ಟಲ ಸಾಲ ನೆಳಲೊಳು
ಸುವಿಲಾಸದೆ ಬಹನಾರೆ ।
ಕುವಲಯ ನೇತ್ರೆ ಕೇಳರಿ ನೃಪ ಬಲ ಘನ
ಪವಮಾನ ನರಸ ರಾಜೇಂದ್ರ ॥ ೬೪

ಎಡ ಬಲದೊಳಗೆ ರಾಜಿಪ ಬಿರುದಿನ ಡಾಳ
ಗಡಣದೆ ಬಹ ದೊರೆ ಯಾರೆ ।
ಮಡದಿ ಕೇಳವ ಮೆಧುರೆಯ ಭೂಪ ಬಲ ವಾರ್ಧಿ
ವಡಬೋಪಮ ನರಸೇಂದ್ರ ॥ ೬೫

ತೊಳಪ ಕೆಂದಳಿರೆಸಕದ ಪಾದಾಂಗುಳಿ
ದಳದ ಮೋಹನ ರೂಪನಾರೆ ।
ಖಳರ ಸಂಹರಿಸಿ ಕರ್ಣಾಟಕ ರಾಜ್ಯವ
ಸಲಹಿದ ಕಂಠೀರವೇಂದ್ರ ॥ ೬೬

ಸ್ಮರನ ಬಾಣದ ಬತ್ತಳಿಕೆಯಂದದೆ ನೆರೆ
ಮೆರೆವ ಜಂಘೆಯು ಜಾಣನಾರೆ ।
ತರುಣಿ ಕೇಳ್ನರ ರಾಹ್ಷಸರ ಕೊಂದು ವರ ರಾಮ
ಗಿರಿಯು ಸೆಳೆದ ನರಸೇಂದ್ರ ॥ ೬೭

ವರ ಲಾವಣ್ಯ ನಂದನದ ರಂಭಾ ಸ್ತಂಭ
ದಿರವಿನಂತೂರು ದ್ವಯದ ।
ದೊರೆ ರಾಯನಾರಿವ ತುರುಗೆರೆ ಬಾಗೂರ
ಧುರದೆ ಸೆಳೆದ ನರಸೇಂದ್ರ ॥ ೬೮

ರತಿ ದೇವಿ ನಲಿದಾಡುವ ಮೂಡುವೆಟ್ಟದುಂ
ನತ ಜಘನದ ನೀರನಾರೆ ।
ಶತ ಪತ್ರ ನೇತ್ರೆ ಕೇಳ್ ಕಲಿಯೂರು ಕಡಬುವ
ಕ್ಷಿತಿ ಮೆಚ್ಚಿ ಸೆಳದವನೀತ ॥ ೩೩

ಲಲನೆಯರಕ್ಷಿ ವಿಘ್ನಗಳು ಪೊಳೆದಾಡುವ
ಲಲಿತ ಕಾಸಾರದಂದದಲಿ ।
ಸುಳಿ ನಾಭಿಯವನಾರೆ ಮಾಯಸಮುದ್ರವ
ಸೆಳದ ಚೆನ್ನಿಗ ನರಸೇಂದ್ರ ॥ ೩೪

ಒಡನೆ ಧೈರ್ಯಾಂಗನೆ ನಟಿಸುವ ಶೃಂಗಾರ
ವಿಡಿದ ರಂಗಸ್ಥಳದಂತೆ ।
ಬಿಡದೊಪ್ಪುವೆದೆಯವನಾರೆ ಗ್ರಾಮವ ಕೊಂಡ
ಕಡುಗಲಿ ಕಂಠೀರವೇಂದ್ರ ॥ ೩೫

ವರ ಜಯಾಂಗನೆಯ ಬಂಧಿಪ ಪಾಶದಂದದೆ
ಮೆರೆವ ತೋಳ್ಗಳ ನೀರನಾರೆ ।
ಪಿರಿಯ ಪಟ್ಟಣವನು ಹಗಲ ಲಗ್ಗೆಯ ಬಿಟ್ಟು
ಧರೆ ಮೆಚ್ಚಿ ಸೆಳದವನೀತ ॥ ೩೬

ತುಂಬಿದ ನವ ರತ್ನ ಹಾರವ ಕೆಳಗೊಂಡ
ಕಂಬು ಕಂಠದ ಚೆಲ್ವನಾರೆ ।
ಬಿಂಬ ಫಲಾಧರೆ ಶರಣಾಗತ ಕರು
ಣಾಂಬುಧಿ ಕಂಠೀರವೇಂದ್ರ ॥ ೩೭

ನಿಟ್ಟಿಪ ವೈರಿ ವೆಂಗಳ ದಿಟ್ಟ ಕದಪಿಗೆ
ತೊಟ್ಟನೆ ತಾಕದಂದದಲಿ ।
ಇಟ್ಟ ಕಸ್ತೂರಿ ರೇಖೆಯೊಲೆಪನ್ನ ಒವರಿಯ
ಸೃಷ್ಟೀಶನಾರೆನಗುಸಿರೆ ॥ ೩೮

ಕೊಡಗು ಕೊಂಕಣ ಮೆಲೆಯಾಳಾದಿ ರಾಜ್ಯವೆ
ಬಡಿದು ಭಂಗಿಸಿ ವೈರಿ ನೃಪರ ।
ಅಡಿಗೆರಗಿಸಿಕೊಂಡು ಮೆರೆವವನಿವನೀಗ
ಕುಡುವಿಲ್ಲನು ಪಟ್ಟದರಸಿ ॥ ೩೯

ಕುಂದ ಬಂದುಗೆ ಚಂಪಕ ಪೊಂದಾವರೆ
ಕೆಂದಳಿರುಗಳೊಂದಿ ಮೆರೆದು ।
ಇಂದಿರೆ ನಲಿವ ಕೇಳೀವನದೊಲು ರಮ್ಯೆ
ದಿಂದಿಹ ಮುಖದವನಾರೆ ॥ ೪೦

ಈತನೀಗೆಸೆವ ಸಾಂಬಳ್ಳಿಯ ನೃಪನಗ
ರ್ವಾತಿರೇಕವ ನೆರೆ ಮುರಿದು ।
ಆತನಾಳುವ ರಾಜ್ಯ ಸೆಳೆದತುಳ ಪ್ರ
ಖ್ಯಾತ ಕಂಠೀರವ ರಾಜ ॥ ೪೧

ಪಿರಿದು ಕಾರ್ಮುಗಿಲ ವೊಗ್ಗರವ ಬಳಸಿಕೊಂಡು
ಪರಿಶೋಭಿಸ್ಪುಡುಗಣದಂತೆ ।
ಅರಳು ಮಲ್ಲಿಗೆ ನುಡಿ ಸರವನಾಂತಿಹನಾರೆ
ದುರಗಲಿ ನರಸ ರಾಜೇಂದ್ರ ॥ ೪೨

ಆತನೊತ್ತಲಿ ತೇಜಿಯನೇರಿ ಸುಭಟ
ವ್ರಾತ ಮಧ್ಯದೆ ಥಳಥಳಿಸಿ ।
ಭೂತಳ ರವಿಯಂತೆ ಬರುತಿನಿವೆನಾರೆ
ಶಾತಕುಂಭಾದ್ರಿ ಕುಚದಳ ॥ ೪೩

ಸ್ವಾಮಿ ಕಾರ್ಯ ಧುರಂಧರ ಸತ್ಯ ಸಂಧ ಸು
ತ್ರಾಮ ಭೋಗನು ರಣ ಭೀಮ ।
ಭೂಮಿ ಪಾಲನ ದಳ ಪತಿ ಲಿಂಗ ರಾಜೇಂದ್ರ
ಕಾಮನ ಕೈಯ್ಯ ಕನ್ನಡಿಯೆ ॥ ೪೪

ಬಿರುದಿನ ಭಟರಾನೆ ಕುದುರೆಯ ಮೇಳದೆ
ಬರುವವೆನಾರಬ್ಜ ನೇತ್ರೆ ।
ದೊರೆ ರಾಯ ನರಸೇಂದ್ರನ ಮೂವನಿವನೀಗ
ಪಿರಿಯಪಟ್ಟಣದ ಚಿಂದಯ್ಯ ॥ ೪೫

ಒಡನೆ ತೇಜಿಯ ಕುಣಿಸುತ ಬಲ ಮಧ್ಯದೆ
ಸಡಗರದಲಿ ಬಹನಾರೆ ।
ಪೊಡವಿಪ ನರಸ ರಾಜೇಂದ್ರನ ಮೈದುನ
ಕಡು ಚೆಲ್ವ ದಾಸರಾಜಯ್ಯ ॥ ೪೬

ಬಿರುದಿನ ಬೆನ್ನ ಝುಲ್ಲಿಯ ತುಳಿಲಾಳ್ಗಳ
ನೆರವಿ ಮಧ್ಯದೆ ಬಹನಾರೆ ।
ಹರದನ ಹಳ್ಳಿಯ ದೊಡ್ಡೇಂದ್ರನಿವನೀಗ
ಸರಸಿಜಾಯತ ಪತ್ರ ನೇತ್ರೆ ॥ ೪೭

ಮುತ್ತಿನೊರೆಯ ಸುರಗಿಯ ಸಾಲ ಸುಭಟರ
ಮೊತ್ತದೊಳಗೆ ಬಹನಾರೆ ।
ಸತ್ಯಾಗಾಲದ ಕೆಂಪೇಂದ್ರನಿವನೀಗ
ವೈತ್ತ ಪಯೋಧರ ಯುಗಳೆ ॥ ೪೮

ಮಿಂಟಿನ ಭಟರ ಮೇಳದೆ ತೇಜಿಯನಿರ
ದಾಟಿಸುತಲಿ ಬಹನಾರೆ ।
ಕೋಟೆಯ ತಿಮ್ಮೇಂದ್ರನಿವನೀಗ ವಿಜಯ ವ
ಧೂಟೀಶ್ವರ ರಣದೊಳಗೆ ॥ ೪೯

ಚೆನ್ನದ ಬಿರುದೆಯ ನೇಜೆಯದಭಟರ
ಸನ್ನಹದೆ ಬಹನಾರೆ ।
ಚೆನ್ನರಾಯನ ಪಟ್ಟಣದ ದೊಡ್ಡೇಂದ್ರನು
ಪನ್ನಗ ವೇಣಿ ಚಿತ್ತೈಸು ॥ ೫೦

ಸುರುಚಿರ ಮಿಸುನಿಯಾಭರಣವ ಧರಿಸಿದ
ಪರಿವಾರದೊಳು ಬಹನಾರೆ ।
ತುರುಗೆರೆಯನಾಳುವ ಹಂಪಯ್ಯನಿವನೀಗ
ಸರಸಿಜ ಗಂಧಿ ಚಿತ್ತೈಸು ॥ ೫೧

ಕನಕ ವರ್ಣದ ಸತ್ತಿಗೆಯ ನೆಳಲೊಳು ಬಹ
ವೊನಗಾರ ಮನ್ನೆಯನಾರೆ ।
ಚನಪಟ್ಟಣವನಾಳುವ ಚಾಮಯ್ಯನು
ವನಿತಾ ಸೀಮಂತ ಮಣಿಯೆ ॥ ೫೨

ಮಿರುಗುವ ಮಿಸುನಿಯ ಸಾಲ ಕುಪ್ಪಿಗೆಗಳ
ಹರಿಗೆಯ ಭಟರ ಮೇಳದಲಿ ।
ಬರುವ ಮನ್ನೆಯನಾರೆ ಮದ್ದೂರನಾಳುವ
ದುರಗಲಿ ಹಂಪಯ್ಯನಬಲೆ ॥ ೫೩

ತೂಗುವ ಹರಿಬಿಯ ಗರಿಯಿಟ್ಟ ಯಧಟರ
ಸಾಗರದೊಳು ಬಹನಾರೆ ।
ಭೂಗಧೀಶ್ವರ ನರಸೇಂದ್ರನ ಹಡಪದ
ನಾಗಮಂಗಲದ ಮುದ್ದಯ್ಯ ॥ ೫೪

ಥಳಥಳಿಸುವ ದಿವ್ಯಾಯುಧಗಳ ಪಾಯ
ದಳ ಮಧ್ಯದಲಿ ಬಹನಾರೆ ।
ಇಳೆಯಾಣ್ಮ ಕಂಠೀರವೇಂದ್ರನ ಸಂಚೆಯ
ಮಳವಳ್ಳಿಯ ನಂಜಣ್ಣ ॥ ೫೫

ಕಟ್ಟುಗ್ರದಲಿ ರಿಪು ಭಟ ಗೋಧೂಮ ಘ
ರಟ್ಟನೆನಿಸಿಕೊಂಬನಾರೆ ।
ಪಟ್ಟಣದಧಿಕಾರಿ ಲಿಂಗೆಯ ಗೌಡನು
ಸೃಷ್ಟಿಗೆ ನೂತನ ರಂಭೆ ॥ ೫೬

ಬಾಲ ಸೂರ್ಯನ ಕಿರಣದ ಧಾತನೇಳಿಸು
ವಾಲ ವೆಟ್ಟಲ ನೆಳಲಿನಲಿ ।
ಲೀಲೆಯೊಳ್ ಬಹನಾರೆ ತೆರಕಣಾಂಬಿಯನಾಳ್ವ
ಕಾಳಾಂಜಿಯ ರಾಜಯ್ಯ ॥ ೪೬

ತುಂಬಿದ ಬೆಳ್ಳಿಯ ಕಟ್ಟಿನಿಟ್ಟಿಯ ಭಟ
ರಿಂಬಲಿ ಬಹ ಧೀರನಾರೆ ।
ಕಂಬು ಕಂಧರಿ ಕನ್ನಂಬಾಡಿಯಾಳುವ
ಚಂಬಿನ ಗುರುವಣ್ಣ ನಿವನು ॥ ೪೭

ಉಟ್ಟ ಪಟ್ಟೆಯ ದಟ್ಟಿಯಾಳ್ಗಳ ಮೊತ್ತದೊ
ಳಿಟ್ಟಣಿಸುತ ಬಹನಾರೆ ।
ಸೃಷ್ಟಿಗಧಿಕ ಕಿಕ್ಕೇರಿಯ ಪಾವಡೆ
ಕೊಟ್ಟೂರಯ್ಯನಬ್ಜಹ್ಸಿ ॥ ೪೮

ಭಾಸುರ ಸುಭಟ ಸಂದೋಹದ ನಡುವೆ ವಿ
ಲಾಸದೆ ಬಹನಿನಾರೆ ।
ವೈಸೂರಧಿಕಾರಿಯಿವನೀಗ ಚಿತ್ತೈಸು
ಪೂಸರಳನ ಪಟ್ಟದಾನೆ ॥ ೪೯

ಕಾಳಗದೊಳು ಮುಂದುವರಿವಾಳು ಕುದುರೆಯ
ಮೇಳದೊಳಗೆ ಬಹನಾರೆ ।
ರೋಲಂಬ ಚಿಕುರೆ ಪರಾಕಿಲ್ಲದೆ ಕೇಳು
ಪಾಲುಪರೆಯ ಚಿಣ್ಣ ಗೌಡ ॥ ೫೦

ನಾನಾ ಬಗೆಯಾಯುಧದ ಭಟರುಗೂಡಿ
ಯಾನಂದದಲಿ ಬಹನಾರೆ ।
ಕಾನಕಾರನಹಳ್ಳಿಯ ಮುದ್ದಯ್ಯನು
ಮಾನಿನಿರನ್ನೆ ಚಿತ್ತೈಸು ॥ ೫೧

ಹೊಳೆಯ ತೇಜಿಯನೇರಿ ಕಾಲಾಳ ಮೊತ್ತದೆ
ಥಳಥಳಿಸುತ ಬಹನಾರೆ ।
ಎಳ ವೆಂಗಳರಸ ಪರಾಕಿಲ್ಲದೆ ಕೇಳು
ಮಳಲವಾಡಿಯ ಹೊನ್ನಣ್ಣ ॥ ೬೩

ಚಿಮ್ಮುವ ಸುರಗಿ ಸಬಳದ ಭಟರ ಕೊಡೆ
ಸುಮ್ಮಾನದೆ ಬಹನಾರೆ ।
ಉಮ್ಮತ್ತೂರಾಳುವ ಸಂಗಯ್ಯನು
ಕಮ್ಮವಿಲ್ಲನ ಪಟ್ಟದಾನೆ ॥ ೬೪

ಮಿಸುನಿಯ ಹಕ್ಕರಿಕೆಯ ತೇಜಿಯನೇರಿ
ನಸು ನಗುತೈತಹನಾರೆ ।
ಕುಸುಮೆ ಶರನ ಮುಂಗೈಯ ಗಿಣಿಯೆ ಕೇಳು
ಹೊಸ ಹೊಳಲಾಳ್ವ ಚೆನ್ನಯ್ಯ ॥ ೬೫

ಸಲ್ಲಲಿತದೆ ರಾಜಿಪ ಸನುಕಟ್ಟಿನ
ಝಲ್ಲಿಯ ತೇಜಿಯನೇರಿ ।
ಉಲ್ಲಾಸದೆ ಬಹನಿವನಾರೆ ಲಲಿತಾಂಗಿ
* ಬಲ್ಲೊಡೆಯರ ದಾಸಯ್ಯ ॥ ೬೬

ಹೊಳೆವ ಹೊನ್ನಂದಣವೇರಿ ಕಾಲಾಳ್ಗಳ
ದಳ ಮಧ್ಯದಲಿ ಬಹನಾರೆ ।
ಎಳವಂದೂರ ಮನ್ನೆಯ ಲಿಂಗ ರಾಜೇಂದ್ರ
ನಳಿನ ಪತ್ರಾಯತ ನೇತ್ರೆ ॥ ೬೭

ಝಲ್ಲಿಯ ಬಿಲ್ಲು ತೇಜಿಯದಭಟರ ಮೊತ್ತ
ದಲ್ಲಿ ಬರುವನಿವನಾರೆ ।
ಹುಲ್ಲನಹಳ್ಳಿಯ ಮನ್ನೆಯನಿವನೀಗ
ಸಲ್ಲಲಿತಾಂಗಿ ಚಿತ್ತೈಸು ॥ ೬೮

---

* ಬಲ್ಲಪ್ಪೊಡೆಯರ.

ಅಲರಂಬನಂದದೆ ತೇಜಿಯ ಕುಣಿಸುತ
ಸಲೆ ಸುಭಟರ ಗಡಣದಲಿ ।
ನಲವಿಂದ ಬರುವವನಿವನಾರೆ ಲಲಿತಾಂಗಿ
ನಿಲುಸೋಗೆಯ ಮನ್ನೆಯನು ॥ ೯

ಕುಲಗಾಣ ಕೋಟೆಯ ಕೆರೆ ಹೆಮ್ಮರಗಾಲು
ಬಿಳುಕೆರೆಯಾಳ್ವ ಮನ್ನೆಯರು ।
ಬಲು ಠೀವಿಯೋಳಗೈತಹುವ ಬಗೆಯ ನಾ
ಲಲನೆ ಪೇಳಿದಳಾತ್ಮ ಸಖಿಗೆ ॥ ೧೦

ಇವನಾರಿವ ತಳಕಾಡ ನುನ್ನೆಯ ಮ
ತ್ತಿವನಾರು ಸೋಸಲೆಯವನು ।
ಇವನಾರು ರಂಗಸಮುದ್ರವಾಳುವನೆಂ
ದವರೊಳಾದುದು ಸುಳುವಾತು ॥ ೧೧

ದೊರೆ ರಾಯ ನರಸರಾಜೇಂದ್ರ ಪಾಲಿಪ ರಾಜ್ಯ
ದುರು ಮಂಡಲಿಕ ನಾಯಕರ ।
ಸರಸಿಜ ಮುಖಿ ಮನ್ಮಥ ಮೋಹಿನಿಗಾಗ
ವರ ಚಿತ್ರರೇಖೆ ಪೇಳಿದಳು ॥ ೧೨

ಪಿರಿದು ಮುತ್ತಿನ ಚೌಕುಳಿ ಕಂಬು ಕಂಠದೆ
ಪರಿಶೋಭಿಸುವ ಚೆನ್ನ ಸರದ ।
ಮೆರೆವ ಪೈರಣಿಯು ಮಗುಲದೆ ರಾಜಿಸುತಿಪ
ಸ್ಮರ ರೂಪನಿವನಾರಬಲೆ ॥ ೧೩

ಥಳಥಳಿಸುವ ವಜ್ರ ವೈಡೂರ್ಯ ಹರಿನೀಲ
ಹೊಳವ ಮೌಕ್ತಿಕ ಮಾಣಿಕಗಳ ।
ತೊಳಗುವಾಭರಣವ ಜೋಕೆ ಮಾಡುವ ಜಾಣ
ಸಲೆ ಬೊಕ್ಕಸದ ಬಸವಯ್ಯ ॥ ೧೪

ಸುರಮಾಯಿ ಝುಲ್ಲಿಯ ಬಿರುದಿನ ಕುದುರೆಯ
ನೆರವಿಯೊಳಗೆ ಬಹನಾರೆ ।
ನರಸ ರಾಜೇಂದ್ರನ ಕತ್ತಿಯ ಪಿಡಿದಿಹ
ದುರ ಗಲಿ ಬಸವಯ್ಯನಿಹನು ॥ ೩೫

ಕಿವಿಯೊಳೊಪ್ಪುವ ಚೌಕುಳಿ ತುಂಬಿಯ ತಾಲಿ
ತವೆ ಗಂಟಿ ಸರಪಣಿಯಿಂದ ।
ಸುಖಿಲಾಸದೆ ಚಿತ್ತವಿಡಿದೈತಹನಾರೆ
ಯವಸರದಧಿಕ ವೀರಣ್ಣ ॥ ೩೬

ಸು ರುಚಿರ ದಿವ್ಯ ಭೂಷಣವಾಂತು ಭೂಪನೆ
ಚರಣಾಬ್ಜ ಪಿಡಿದಿಹನಾರೆ ।
ಸ್ಮರ ರೂಪ ವೆಂಕಟಪತಿ ಜಟ್ಟಿಯಿಹನೀಗ
ಸರಸ ಸನ್ಮೋಹನ ಮಂತ್ರ ॥ ೩೭

ಈತ ಕನ್ನಡಿಯವನೀತ ಪಾವುಡೆಯವ
ನೀತ ಕುಂಚವ ಡಾಳಿಸುವನು ।
ಈತ ಬೀಸಣಿಗೆಯೂಳಿಗದವನೆಂದಾಕೆ
ಗಾತಳೋದರಿ ಪೇಳಿದಳು ॥ ೩೮

ಪೆರೆ ನೊಸಲೊಳು ಪರಿಮಳ ಗಂಧದಹ್ನತೆ
ಸಿರದ ಪೈರಣಿಯ ಮುಂಡಾಸ ।
ಮಿರುಪ ದಿವ್ಯಾಂಗಿ ದುಪ್ಪಟವಾಂತು ಹರುಷದೆ
ಬರುವವನಾರಬ್ಜ ನೇತ್ರೆ ॥ ೩೯

ಶರಧಿ ರಾಮೆಗೆ ನವ ರತ್ನ ಭೂಷಣಗಳ
ಪಿರಿದು ಕಾಣಿಕೆಗೊಡುವಂತೆ ।
ನರಸ ರಾಜೇಂದ್ರಗಾಭರಣವ ತಂದೀವ
ಗರುವ ಧನ್ವೋಜಯ್ಯನಬಲೆ ॥ ೪೦

ಸ್ವಾಮಿ ಕಾರ್ಯವೆ ತನ್ನ ಸತ್ಯವೆ ದಿವ್ಯಾಂಗ
ಕಾ ಮಹಾ ಭೂಷಣವಾಗೆ ।
ಪ್ರೇಮದೊಳಗೆ ದಂಡಿಗೆಯೇರಿ ಬರುವೆ ಸ
ನಾಮ ಮಂತ್ರೀಶನಾರಬಲೆ ॥ ೪೧

ಒಪ್ಪುವ ಸಕಲ ರಾಜ್ಯಕೆ ಧರ್ಮದ ಮೇರೆ
ದಪ್ಪದೆ ಬಹಳ ಲೆಕ್ಕವನು ।
ಸುಪ್ಪಾಣಿ ಮುತ್ತಿನಂದದೆ ಬರೆದೋದುವ
ಲಪ್ಪವರಸರಬ್ಜ ನೇತ್ರೆ ॥ ೪೨

ಮೆರೆವ ಚೌಕುಳಿಯನು ಬಟ್ಟ ಮುಂಡಾಸವ
ಮಿರುಪ ದುಕೂಲವನಾಂತು ।
ಅರಸಿನೊಳೀಕಾಂತದ ಧರ್ಮ ನೀತಿಯ
ನೊರೆಯುತೈತಹ ಮಂತ್ರಿಯಾರೆ ॥ ೪೩

ವರ ಮಂತ್ರದೆ ಸುರ ಗುರು * ಲೇಖ್ಯಾಂಗದೆ
ಸರಸಿಜ ಭವ ಸುವಿದ್ಯದಲಿ ।
ನೆರೆ ಗಂಡು ಶಾರದೆ ಚೆಲುವಿಕೆಯಲಿ ಸೋಮ
ಗರುವ ತಿಮ್ಮರಸ ಮಂತ್ರೀಶ ॥ ೪೪

ಪಿರಿದು ಕಟ್ಟಾಣಿ ಮುತ್ತುಗಳ ಸೇರಿಸುವಂತೆ
ಬರೆದೋದಿ ಲೆಕ್ಕಣಿಗಳನು ।
ಮೆರೆವವನಿವನಾರೆ ರಾಯಸದೊಳು ಜಾಣ
ನರಸಿಂಹಸಾಧ್ವರಬ್ಜಾಕ್ಷಿ ॥ ೪೫

ಪಾಣಿ ಪಲ್ಲವದೆ ಪಿಡಿದು ವೆಲ್ಲಕಿಯ ಕ
ಟ್ಟಾಣಿ ಮುತ್ತಿನ ಚೌಕುಳಿಯ ।
ಮಾಣದೆ ಧರಿಸಿಹ ಬಯಕಾರನಿವನಾರೆ
ವೀಣೆಯ ಕೃಷ್ಣ ಯ್ಯನಬಲೆ ॥ ೪೬

* ಲೆಕ್ಕಾಂಗದೆ.

ಶೃಂಗಾರ ಕವಿ ಬಾಲ ಕವಿ ಸಂಗೀತದು
ತ್ತುಂಗನೆನಿಪ ಭಾರತಿಯು ।
ಹಿಂಗದೆ ಭೂಪಾಲನೆಡ ಬಲದಲಿ ಬಹ
ಮಂಗಳೋತ್ಸವರ ನೋಡಬಲೆ ॥ ೪೫

ಪೊಡವೀಶನ ಕಾಣಿಕೆಗೆ ತೇಜಿ ಬಹು ಬಗೆ
ಯುಡುಗೊರೆ ಸಹ ಬಹನಾರೆ ।
ಮುಡದಿರನ್ನಳ ರಾಯರ ಸಮ್ಮುಖದ ಮಂತ್ರಿ
ಕಡು ಜಾಣನಿವ ಧರೆಯೊಳಗೆ ॥ ೪೬

ದೊರೆಯ ಕಾಣಿಕೆಗೆ ಪೊನ್ನಿನ ಜಾಳಿಗೆಯ ಕಟ್ಟಿ
ಪೊರೆಯಾಳು ಸಹ ಬಹನಾರೆ ।
ತರುಣಿ ಕೇಳ್ತಂಜಾವೂರ ಭೂ ಪಾಲನ
ಬಿರುದಿನ ಮಂತ್ರಿಗಳಿವರು ॥ ೪೭

ಆಣಿ ಮುತ್ತಿನ ಕಂಠ ಮಾಲೆ ಚೌಕುಳಿಗಳ
ಕಾಣಿಕೆಗೊಡಲ್ಕೈತರುವ ।
ಜಾಣ ಲೇಖರರಾದೆ ಮಧುರೆಯನಾಳುವೆ
ಕ್ಷೋಣಿ ಪಾಲನ ಮಂತ್ರಿಗಳು ॥ ೪೮

ಕಾಲ ಪೆಂಡೆಯ ದಿವ್ಯ ಭೂಷಣ ಮದ ಶುಂ
ಡಾಲವೆ ಕಾಣಿಕೆಗೊಡುವ ।
ಲೋಲ ಸಚಿವನಾರೆ ಚೆಂಜೆಯನಾಳ್ವ ಭೂ
ಪಾಲನ ರಾಯ ಪ್ರಧಾನಿ ॥ ೪೯

ಹಿಂಗದೆ ಸರ್ವ ಜನರ ಪರಿ ಹಾಸಕ
ದಂಗದೆ ನಗಿಸುವನಾರೆ ।
ಅಂಗಜ ರೂಪ ಸನ್ಮೋಹನ ಹಾಸ್ಯದ
ಸಂಗಯ್ಯನಬಲೆ ಚಿತ್ತೈಸು ॥ ೫೦

ಸುರಪತಿಯಂತೆ ಸುಮ್ಮಾನದೆ ಕಾಲಾಳ
ನೆರವಿಯೊಳ್ ಬಹ ದೊರೆ ಯಾರೆ ।
ನರಸಿಂಹ ಪುರದ ರಂಗಪ್ಪ ನಾಯಕನಿವ
ನೆರೆ ಮೋಹನಾಂಗಿ ಚಿತ್ತೈಸು ॥ ೯೩

ಪೊಟ್ಟಣಿ ದೇಶದ ಕುದುರೆಯ ಕುಣಿಸುತ
ದಿಟ್ಟ ತನದೆ ಬಹನಾರೆ ।
ಸ್ಪಷ್ಟಗಚ್ಚರಿಯಾದ ಬೇಲೂರನಾಳುವ
ಕೃಷ್ಣಪ್ಪನಾಯಕನಬಲೆ ॥ ೯೪

ಬೆಡಗಿನ ತೇಜಿಯನೇರಿ ಚಾಮರಗಳ
ಬಿಡದೆ ಡಾಳಿಸಿಕೊಳ್ವನಾರೆ ।
ಮಡದಿ ರನ್ನಳ ಕೇಳು ಕುಣಿಗಿಲನಾಳುವ
ದೊಡ್ಡ ಕೆಂಪೆ ಗೌಡನೆ ಈತ ॥ ೯೫

ಮುತ್ತಿನ ಕುಚ್ಚಿನಂದಣವೇರಿ ಸುಭಟರ
ವೊತ್ತದೆ ಬಹ ದೊರೆಯಾರೆ ।
ಉತ್ತಮ ಮಾಗಡಿಯಧಿಪತಿ ಚಿಕ ಗೌಡ
ಚಿತ್ತಜ ರೂಪನಬ್ಬಾಹ್ಲಿ ॥ ೯೬

ರಂಜಿಸಿ ಹೊಳವ ಹೊನ್ನಂದಣದಲಿ ಬಹ
ಕಂಜಾಸ್ತ್ರರೂಪನಾರಬಲೆ ।
ನಂಜರಾಯನ ಪಟ್ಟಣದರಸನ ಸುತ
ಮಂಜುಳ ವಾಣಿ ಚಿತ್ತೈಸು ॥ ೯೭

ಮೇಲಾದ ಬತ್ತೀಸಾಯುಧದಧಟರ
ಸಾಲೊಳು ಬಹ ಧೀರನಾರೆ ।
ಆಲಂಬಾಡಿಯ ವಿರುಪಣ ನಾಯಕ
ಮೂಲೋಕ ಮೋಹನ ಮಂತ್ರಿ ॥ ೯೮

ಕುಸುಮಾಸ್ತ್ರನಂತೆ ತೇಜಿಯ ಕುಣಿಸುತ ಬಹ
ಹೊಸ ಹರಿಯದನಿವೆನಾರೆ ।
ವಸುಧೇಶ ಪೂವಲ ಹನುಮಪ್ಪ ನಾಯಕ
ಗೆಸವೆ ಪಟ್ಟದ ಸು ಕುಮಾರ ॥ ೯೯

ಉತ್ತಮವೆಹ ಭೂಷಣವೆ ಧರಿಸಿ ಮುದ
ವೆತ್ತು ದುಕೂಲವನಾಂತು ।
ಉತ್ತರ ದಿಕ್ಪತಿ ಪಲವ್ರು ರೂಪಾದಂ
ತರ್ತಿಯೊಳಗೆ ಬಹರಾರೆ ॥ ೧೦೦

ಕಟ್ಟಾಣಿ ಮುತ್ತು ಮಾಣಿಕ ವಜ್ರ ವೈಡೂರ್ಯ
ಪಟ್ಟಿ ಚೀನಾಂಬರಗಳನು ।
ಸೃಷ್ಟೀಶನ ಮೈ ಭೋಗಕೆ ತಂದೀವೆ
ಸೆಟ್ಟಿಗಳಬಲೆ ಚಿತ್ತೈಸು ॥ ೧೦೧

ಮಿರುಪೆ ಕಹ್ಲದ ಪಟ್ಟಿದು ಚೀಲ ನೊಸಲೊಳು
ಪರಿಮಳ ಗಂಧಾಹ್ವತೆಯು ।
ಸಿರಿವೆಂತರಿವರಾರೆ ನೆರೆ ಜಾಣ ವೈದ್ಯರು
ಸರಸಿಜಾಯತ ಪತ್ರ ನೇತ್ರೆ ॥ ೧೦೨

ಇವರಾರಿವರು ಮೆಲ್ಲರು ಗಾನದವರು ಮು
ತ್ತಿವರಾರಿಂದ್ರಜಾಲಿಗಳು ।
ಇವರು ನಾನಾ ದೇಶದ ವಿದ್ಯದವರೆಂ
ದವರೊಳಾದುದು ಸೂಳು ವಾತು ॥ ೧೦೩

ವಿಟ ವಿದೂಷಕ ನಾಗರಿಕ ಪೀಠ ಮರ್ದಕ
ಪಟುವೆಹ ನಾಲ್ಕು ಜಾತಕದ ।
ಸುಟಿಯುಳ್ಳ ಶೃಂಗಾರ ಪುರುಷರ ನಿಟ್ಟಿಸು
ಕುಟಿಲ ಕುಂತಲೆ ಕೋಮಲಾಂಗಿ ॥ ೧೦೪

ಹಸ್ತಿನಿ ಚಿತ್ತಿನಿ ಶಂಕಿನಿ ಪದ್ಮಿನಿ
ಮತ್ತಾಗ ನಾಲ್ಕು ಜಾತಕದ ।
ಉತ್ತಮ ನಾಯಕಿಯರು ಸಾಲುಗೊಂಡೈದು
ವರ್ತಿಯ ನೋಡಂಬುಜಾಕ್ಷಿ ॥ ೧೦೫

ಎನುತಲೀಪರಿ ದೊರೆ ಮನ್ನೆಯ ನಾಯಕ*
ಘನ ಮಂಡಲಿಕ ಮಂತ್ರಿಗಳನು ।
ವನಿತೆಗೆ ಸಖಿ ವಿವರಿಸುತಿರೆ ದೇವನ
ವಿನುತ * ಸುರಥವು ನಡೆದುದು ॥ ೧೦೬

ಗಗ್ಗರಿ ಘಲಿರೆಂಬ ಗಾಲಿಯ ಬಲು ರವ
ಹೆಗ್ಗನ ಮಿಾಂಟೆ ಝಂಕಿಸುವ ।
ಬಗ್ಗಿನ ವೀರ ಮಕ್ಕಳ ಪೂತ್ತದಲಿ ತೇರು
ಬೊಗ್ಗನೆ † ನಡೆದುದರ್ತಿಯಲಿ ॥ ೧೦೭

ಬಾಳಯ ಪಣ್ಣು ದವನಗಳ ನೆರೆ ಜನ
ಜಾಲ ದೇವನ ತೇರ ಮೇಲೆ ।
ಲೀಲೆಯೊಳಗೆ ಸೂಸಿ ಗೋವಿಂದಯೆಂದೆಂ
ಬಾಳಾಪಗಳೊಪ್ಪಿದುವು ॥ ೧೦೮

ತಂಡ ತಂಡದ ಸಂಪ್ರದಾಯ ಮೇಳಗಳಿಂದ
ಕೊಂಡಾಡಿ ಕುಣಿವ ಬಕುತರ ।
ಮಂಡಳಿಯಲಿ ರಂಗ ಧಾಮನ ರಥ ಮುಂ
ಕೊಂಡೈತಂದುದರ್ತಿಯಲಿ ॥ ೧೦೯

ಕಂಬಿ ಕಂಬಿಯಲಿ ಬಿಲ್ಲದ ಪಾನ ಪನಿ ನೀರ
ತುಂಬಿ ತಂದೆರೆವ ಧರ್ಮಿಗಳ ।
ಸಂಭ್ರಮದಲಿ ವಾದ್ಯ ರವದಿಂದಲಾ ತೇರು
ಮುಂಬರಿಗೊಡನೆ ‡ ನಡೆದುದು ॥ ೧೧೦

---

* ರಥಗಳು ನಡೆದುವು. † ನಡೆದುವರ್ತಿಯಲಿ. ‡ ನಡೆದುವು.

ಚಪ್ಪಾಳಗಳ ರವ ಕೊಂಬು ಕೊಳಲು ಹೊನ್ನ
ತಪ್ಪಟಿಗಳ ದನಿಯಿಂದ ।
ಸರ್ಪ ಶಯನ ರಂಗ ಧಾಮನ ತೇರು ಬಂ
ದೊಪ್ಪಿತು ಮುನ್ನಿನ ಸ್ಥಳದೆ ॥ ೧೦೧

ಹರುಷದೆ ರಥವ ಪ್ರದಕ್ಷಿಣೆ ಗೈದಾಗ
ಸರಸಿಜಾಕ್ಷಗೆ ಕೈಯ ಮುಗಿದು ।
ಪಿರಿದು ಸಂಭ್ರಮದಲಿ ಕಂಠೀರವೇಂದ್ರನಂ
ದರಮನೆಗೈತಂದನೊಲಿದು ॥ ೧೦೨

ನೆರೆದಿಪ್ಪ ದೊರೆ ಮನ್ನೆಯ ಮಂಡಲಿಕರ
ಕರೆದುಡುಗೊರೆಯನಿತ್ತಾಗ ।
ಪಿರಿದು ಮನ್ನಿಸಿ ಬೀಳ್ಕೊಟ್ಟು ಕಂಠೀರವ
ದೊರೆ ರಾಯ ನಲಿದೊಪ್ಪಿದನು ॥ ೧೦೩

ಆ ಮರು ದಿವಸದೆ ಶುಭ ಲಗ್ನದೆ ರಂಗ
ಧಾಮಗೆ ಮೃಗ ಯಾತ್ರೆಯಾಗೆ ।
ಪ್ರೇಮದೊಳಶ್ವಾರೋಹಕನಾಗಿ ಸು
ತ್ರಾಮ ವಂದಿತನೈತಂದ ॥ ೧೦೪

ಸಿರಿ ದೇವಿಯರೊಳು ಪ್ರಣಯ ಕಲಹವಾಗೆ
ಭರದೆ ಸಂಧಾನ ಗೈದಾಗ ।
ಸರಸಿಜ ನೇತ್ರ ಶ್ರೀ ರಂಗೇಶ ಜಲ ಕೇಳಿ
ಗುರು ಹರುಷದೊಳ್ಮಿದನು ॥ ೧೦೫

ಶಶಿ ಕಾಂತದ ಸೋಪಾನದೆ ರಂಜಿಪ
ಬಿಸರುಹಾಕರಕೈತಂದು ।
ಕುಸುಮ ಗಂಧಿಯರೊಳು ಕ್ರೀಡಾ ವಿನೋದವ
ನೆಸಗಿದನೇನ ಬಣ್ಣಿಸುವೆ ॥ ೧೦೬

ಮಗ ಮಿಗಿಸುವ ಕುಂಕುಮ ಕರ್ಪೂರ ದಿವ್ಯ
ಮೃಗ ಮೆದಗಳ ತಂದಾಗ ।
ಮಿಗೆ ಸರಸಿಯ ಪೂರ್ಣ ಜಲದೊಳಗೊಂದಿಸಿ
ಸೊಗಸಿಂದಲನುವಾದರಾಗ ॥ ೧೧೬

ಮೈದಿಲ ಸೆರಗಿನ ಮೊಲೆ ಕಟ್ಟು ದುಗುಲದೊ
ಳ್ಕೈದಿದ ನಿರಿ ಗಾಸೆಯಿಂದ ।
* ಐದಂಬಿನ ಮೆದವಾನೆಗಳಂದದೊ
ಳ್ಕೈದಿದರ್ಜಾಲ ಕೇಳಿಗಾಗ ॥ ೧೧೯

ನೇವ್ರುರಗಳ ಝಣತ್ಕೃತಿ ಕಂಕಣ ರವ
ಭಾವಿಸಿ ರತ್ನ ಮೇಖಲೆಯ ।
ತೀವಿದ ಕಿರು ಗಂಟೆಯ ದನಿ ಸರಸಿಯ
ನಾವರಿಸಿದುದೇನೆಂಬ ॥ ೧೧೯

ಪೊಳೆವಕ್ಷಿ ಕಲಶ ಕುಚದ ಕಾಂತಿ ಗತಿಗಳ
ಚಲುವಿಕೆ ನೀರೊಳಗೆಸೆಯೆ ।
ಎಳೆ ಮಿನಣೆವಕ್ಕಿ ಕಳ ಹಂಸಗಳು ನಾಚಿ
ಮುಳುಗಿದುವಿರದೆ ಪರಿದುವು ॥ ೧೨೦

ಕೆಂದಾವರೆಯ ಪೊಟ್ಟಣದೊಳು ತಿಳಿ ನೀರ
ತಂದು ರಂಗೇಶನ ಮೇಲೆ ।
ಮುಂದುನೆರಿದು ಮುತ್ತಿ ಮೊಲೆದುದಿಗಳೂಳೂತ್ತಿ
ಬಂಧುರದಿಂದ ಸೂಸಿದರು ॥ ೧೨೧

ವೊಚ್ಚೀರೆಗೈಯೊಳು ನೀರ ವೊಗೆದು ಮೋಹ
ವೆಚ್ಚಿರಂಗನ ಮೇಲಿಡಲು ।
ಬೆಚ್ಚಿ ಬಳಿಕ ದೆಸೆ ದೆಸೆಗೈದಿ ಹೆಂಗಳಿ
ಗಚ್ಚರಿಯನು ಬೀರಿದನು ॥ ೧೨೨

---

* ಐದಂಬಿನ.

ಬಗಸೆಗೈಗಳಲಿ ಸೀರ್ವಿಡಿದು ಶ್ರೀ ರಂಗೇಶ
ಸೊಗಸುಗಾತಿಯರ ಮೇಲಿಡಲು ।
ಒಗುವೆ ನೀರ್ಮೊಯ್ಲು ಸೈರಿಸದೆ ಶ್ರೀ ಹರಿಯನು
ಬಿಗಿ ಬಿಗಿದಪ್ಪಿದರಾಗ ॥ ೧೦೩

ಸ್ಮರನ ಕೂರಾಳ್ಗಳಂದದೆ ನಾರಿಯರಾಗ
ಲೆರಡು ಪೂಜಾಗೆ ವಿಂಗಡಿಸಿ ।
ಸರಸದೆ ಜಲ ಕೇಳಿಯನಾಡುವೆ ಸಿಂ
ಗರವೆನದೇನ ಬಣ್ಣಿಸುವೆ ॥ ೧೦೪

ಸರಸಿಜ ಪಾಣಿಯೊಳೂರ್ವೆಯುವಕದೀವಿ
ಪರಿ ಪೂರ್ಣೇಂದು ವದನೆಯ ।
ಸರಸ ಕೇಳಿಗೆ ಬಂದು ಸೋತಾಗ ಹಿಂದಕೆ
ತೆರಳಿದಳೇನ ಬಣ್ಣಿಸುವೆ ॥ ೧೦೫

ಮದ ಗಜ ಗಮನೆಯೊರ್ವಳು ಹರಿ ಮಧ್ಯೋಯೊ
ಳೂದಗಿ ಸರಸಕ್ಕೆತಂದು ।
ಬೆದರಿ ಹಿನ್ನೆಲೆಗೈದೆ ಬೆನ್ನಟ್ಟಿಯಾ ನೀರ
ಚದುರೆಯ ಕಂಗೆಡಿಸಿದಳು ॥ ೧೦೬

ಬಿಂಬ ಫಲಾಧರೆಯೊರ್ವೆ ಕೈಯಲಿ ನೀರ
ತುಂಬಿ ಸಂತಸದೊಳಂದಾಗ ।
ಮುಂಬರಿದೈತರೆ ಶುಕ ವಾಣಿ ಕಂಡಾಗ
ಬೆಂಬಿಡದವಳ ಪಿಡಿದಳು ॥ ೧೦೭

ಕಂಗೊಳಿಸುವೆ ವಾರಾಂಗನೆಯರ ಬಲು
ಜಂಗುಳಿ ವಿಟರ ಮೇಲಂದು ।
ಹಿಂಗದೆ ಪೊನ್ನ ಚೀರ್ಕೊಳವೆಯೊಳ್ನೀರಿಡು
ವಂಗವನೇನ ಬಣ್ಣಿಸುವೆ ॥ ೧೦೮

ಮದ ಹಂಸ ಗಮನೆಯರುಗಳು ಚೀಕ್ರೂಳವೆಯೊ
ಳುದಕವ ತೀವಿ ತಂದಾಗ ।
ಮುದದೊಳಸೆಯೆ ಸ್ಮರಗಲಹದ ಶರವೆಂದು
ಬೆದರಿದರೇನ ಬಣ್ಣಿಸುವೆ ॥ ೧೮೯

ಬೊಗರಿ ವೊಲೆಗಳಲ್ಲುಗಲು ಕಂಗಳ ಕಾಂತಿ
ವೊಗೆಯಲು ವಿಟರ ವೈ ಸೊಬಗ ।
ಮೃಗ ಮದ ಗಂಧಿಯರೊಲಿದು ಸಂತೋಷದೆ
ಮಿಗೆ ಜಲ ಕೇಳಿಯಾಡಿದರು ॥ ೧೯೦

ಬಡನಾಗ ಜಲ ಕೇಳಿಯೊಳಗೆ ವೈ ತಣ್ಣಿಸ
ವಿಡಿಯಲು ಭರದೊಳಗೈದಿ ।
ತಡಿ ವೆಟ್ಟಿ ಶಶಿ ಕಾಂತ ಕೂಲದೊಳಗೆ * ಸಾಲು
ವಿಡಿದೊಪ್ಪಿದರು ಚಲುವೆಯರು ॥ ೧೯೧

ನೀರೊಳು ನನೆದಾಗ ಬಿಗುಹೇರಿ ವೃತ್ತಾ
ಕಾರದೊಳುನ್ನತವೆಡೆದು ।
ಚಾರುತರದ ವೊಲೆ ವೆರೆದುವು ವೈಲಕ್ಕೆ
ಪಾರುವ ಕೋಕಗಳಂತೆ ॥ ೧೯೨

ಒಡನೆ ವನ್ನಥ ದಿಗ್ವಿಜಯಕೆ ತನ್ನಯ
ಖಡುಗಗಳನು ತೊಳದಾಗ ।
ಬಿಡದೊರೆಗೊಳಿಪಂತೆ ನಿಡುಗೇಶವಾರಿಪ
ಮಡದಿರನ್ನೆಯರೊಪ್ಪಿದರು ॥ ೧೯೩

ಸಲೆ ವೂಗಿಯ ತೊಲಗಿಸಿ ಸ್ಮರ ಚೈತ್ರಗೆ
ದಳ ಪತಿ ಪಟ್ಟವಿತ್ತಂತೆ ।
ಕಳದು ತಣ್ಣಿಸ ವಸ್ತ್ರಗಳ ಚೀನಾಂಬರ
ಗಳನುಟ್ಟು ಸತಿಯರೊಪ್ಪಿದರು ॥ ೧೯೪

* ಸೋಲು.

ನಲ್ಲರ ಶಿಖೆಗಾಗ ಪೂ ಮೊಲೆಗಳ ಸುತ್ತಿ
ಮೆಲ್ಲೆದೆಗನುಲೇಪನವ ।
ಸೆಳ್ಳುಗುರೊಳು ತೀಡಿ ಮಡಿವರ್ಗವ ನೀಡಿ
ಚಲ್ಲವಾಡುತಲೊಪ್ಪಿದರು ॥ ೧೩೫

ನಳಿನಾಹ್ವೆ ರಂಗೇಶ ಸಂತೋಷದೊಳಗಾಗ
ಳೆಳವೆಣ್ಣ್ಗಳೂಡಗೂಡಿ ।
ಗಳಿಲನೆ ಬಿಜಮೊಡಿ ದಿವ್ಯ ಮಂಟಪದಲಿ
ತೊಳಗಿದನತಿ ಲೀಲೆಯಿಂದ ॥ ೧೩೬

ವರ ಪುಷ್ಪಯಾಗ ಮುಂತಾದ ದಿವ್ಯೋತ್ಸವ
ಪರಮ ಮಂಗಳ ಮೂರ್ತಿಗಾಗಿ ।
ಸಿರಿ ಧರ ರಂಗೇಶ ಭಕ್ತರ ಪಾಲಿಸಿ
ಹೊರೆಯುತಿರ್ದನು ತ್ರೈಜಗವ ॥ ೧೩೭

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪುದಿದ ಪ್ರತಾಪ ಸಂಪದದೇಳನೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೧೩೮

ಏಳನೆಯ ಸಂಧಿ ಸಮಾಪ್ತಂ.

ಇಪ್ಪತ್ತಾರನೆಯ ಸಂಧಿ

ದೊರೆ ರಾಯ ನರಸೇಂದ್ರನ ವ್ರತ ಧರ್ಮ.

ಸೂಚನೆ॥ ದೊರೆ ರಾಯ ನರಸೇಂದ್ರನ ವ್ರತ ಧರ್ಮದ
ಸಿರಿಯ ಸಂಭ್ರಮವ ಬಣ್ಣಿಸುವೆ ॥

ಹರಿಣಾಂಕ ವಂಶ ವಾರಿಧಿ ಚಂದ್ರ ಸದ್ಗುಣ
ಪರಿಪೂರ್ಣ ಭೋಗಾಮರೇಂದ್ರ ।
ನರ ರೂಪ ನರ ಸಿಂಹ ಕಂಠೀರವ ರಾಜ
ಹೊರೆಯುತಿರ್ದನು ಕನ್ನಡವ ॥ ೧

ಉದಯಾಸ್ತಮಯಕೊಳಗಾದ ದಿವಾಕರ
ನುದಿತ ತೇಜಗಳೀ ನೃಪನ ।
ಪುದಿದ ಪ್ರತಾಪಕೆ ಸರಿಯಿಲ್ಲೆಂದಾಗ
ಮುದವಡೆದುದು ಸರ್ವ ಲೋಕ ॥ ೨

ಪಿತೃ ಶತ್ರು ಪ್ರಹ್ಲಾದನ ಹರಿ ಭಕ್ತಿ ಯಾ
ಕ್ಷಿತಿಪತಿ ನರಸ ಭೂವರನ ।
ಅತಿಶಯ ವಿಷ್ಣು ಭಕ್ತಿಗೆ ಸರಿಯಿಲ್ಲೆಂದು
ನುತಿಸುತಿಹರು ಸರ್ವ ಜನರು ॥ ೩

ಮಿಗೆ ಹರಿ ದಿನ ವ್ರತವೆಡೆದ ರುಕ್ಮಾಂಗದ
ಮಗನ ಕೊಲೆಗೆ ಮನದಂದ ।
ಜಗದೊಳೀ ಭೂವರ ನಡಿಸುವೇಕಾದಸಿ
ಸುಗುಣತ್ವಕವೆ ಸರಿಯಲ್ಲ ॥ ೪

ಚಂದದೆಯಿಾ ನೃಪ ಗೈವೇಕಾದಸಿ
ಯಂದಕ್ಕ ಮಿಗಿಲೆನುತಿರುವ ।
ಚಂದ್ರ ಹಾಸನು ಗೈವುದಕತಿಶಯವಾಗಿ
ಯಂದವಡೆದುದೇನ ಪೇಳ್ವ ॥ ೫

ಅಂಬರೀಷಗೆ ದ್ವಾದಶಿಯ ವ್ರತವೊಂದೆ ಹ್ಷೀ
ರಾಂಬುಧಿಯನು ಮಾಡಲಿಲ್ಲ ।
ಸಂಭ್ರಮದೊಳು ವೃಂದಾವನ ಸೇವೆ ಹ್ಷೀ
ರಾಂಬುಧಿಯನು ಮಾಳ್ಪನೀತ ॥ ೬

ದಶಮಿಯ ದಿನ ಗಂಗಾ ಸ್ನಾನ ಹರಿ ಪೂಜೆ
ಯೊಸೆದು ರಾಜಿಸುವೀಕ ಭುಕ್ತ ।
ಎಸೆವ ಜಿತೇಂದ್ರಿಯತ್ವದೆ ನರ ಸಿಂಹನ
ವಸುಧೇಶ ಭಜಿಸುತೊಪ್ಪಿದನು ॥ ೭

ಹರಿ ದಿನದೊಳು ಹರಿ ಪೂಜೆ ಹರಿ ಧ್ಯಾನ
ಹರಿ ನಾಮ ಕೀರ್ತನೆಯಿಂದ ।
ಪಿರಿದು ಜಾಗರವಿರ್ದು ವ್ರತವ ನಡಿಸುತಿಹ
ದೊರೆ ರಾಯ ಕಂಠೀರವೇಂದ್ರ ॥ ೮

ದ್ವಾದಶಿಯೊಳಗಗಣಿತ ಭೂ ಸುರರಿಗೆ
ಮೋದಿನಿ ನಲಿಯೆ ಸಂತಸದೆ ।
ಭೂ ಧವ ನರಸೇಂದ್ರ ಬಹು ದಾನಗಳ ಮಾಡಿ
ಮಾ ಧವಗರ್ಪಿಸುತಿಹನು ॥ ೯

ಧರಣೀ ಸುರರಿಗೆ ಸಕಲ ಮೃಷ್ಟಾನ್ನದೆ
ಹರುಷದಿಂದಲಿ ತೃಪ್ತಿ ಪಡಿಸಿ ।
ನೆರೆ ಬಂಧುಗಳುಕೂಡಿ ಪಾರಣೆ ಗೆಯ್ವನಾ
ಧರಣೀಶನೇನ ಬಣ್ಣಿ ಸುವೆ ॥ ೧೦

ಅಂತಃಪುರ ಮಹಿಷೀ ಜನ ಸ್ತ್ರೀ ಬಾಲ
ತಿಂತಿಣಿ ಭೋಗಾಂಗನೆಯರು ।
ಮುಂತೇಕಾದಶೀ ವ್ರತ ನಿಷ್ಠೆ ಯಲಿ ಶ್ರೀ
ಕಾಂತನ ಪೂಜೆಸುತಿಹರು ॥ ೧೧

ದಳ ಪತಿ ಮುಂತಾದ ಮನ್ನೆಯರೊಳಿಗ
ಕಳವಟ್ಟ ಜನ ಸಮ್ಮುಖದ ।
ಬಲು ಮಂತ್ರಿಗಳು ಭೂಪನಾಜ್ಞೆಯಿಂ ಹರಿ ದಿನ
ದೊಳು ನೆರೆ ನಿಷ್ಠೆಯಾಗಿಹರು ॥ ೧೨

ಪುರ ಜನ ಪರಿ ಜನ ಭೂ ವರನಾಳುವ
ಧರಣಿಯ ಜನರುಗಳಾಗ ।
ನರಸ ರಾಜೇಂದ್ರನಾಜ್ಞೆ ಯೊಳೇಕಾದಶೀ
ಪರಮ ವ್ರತವ ನಡಿಸುವರು ॥ ೧೩

ಇಂತೊಪ್ಪುತಿಹ ಭೂಪನ ಮೆಂದಿರದೆ ಶ್ರೀ
ಕಾಂತ ಭವಾಬ್ಧಿ ಬಹಿತ್ರ ।
ಸಂತತ ನರ ಸಿಂಹ ಬೇಡಿದಿಷ್ಟವ ನೃಪ
ಚಿಂತಾ ಮಣಿಗೀಯುತಿಹನು ॥ ೧೪

ಮಿತ ವಾಣಿ ಸತ್ಯ ಪ್ರತಾಚಾರ ಸಂಪನ್ನ
ಕ್ಷಿತಿ ಪತಿ ನಾಯಕ ರತ್ನ ।
ಜಿತ ಶತ್ರು ಸಮುದಯನೆಂದು ಶ್ರೀ ಲಕ್ಷ್ಮೀ
ಪತಿ ಪ್ರಸನ್ನತೆಯೊಳೊಪ್ಪಿಹನು ॥ ೧೫

ಸಲೆ ಭಕ್ತಿಗೊಲಿವರಮನೆಯೊಳು ನೆಲಸಿಹ
ಜಲಜಾಕ್ಷ ಶ್ರೀ ನರ ಹರಿಯು ।
ಲಲನೆ ತೊಳಸಿಯಂಬಿಕೆಗೆ ಕ್ಷೀರಾಬ್ಧಿಯ
ಬಲು ಸಂತಸದಲಿ ಮಾಡಿಸುವ ॥ ೧೬

ಮುತ್ತು ರತ್ನದ ಕುಚ್ಚುಗಳ ಝಲ್ಲಿ ಪಟ್ಟೆಯ
ವೊತ್ತಿದ ವೇಲ್ಕಟ್ಟುಗಳ ।
ಬಿತ್ತಿಯೊಳ್ಪರಿಮಳ ಪೂ ಮಾಲೆ ಫಲಗಳ
ಬಿತ್ತರವೆಸೆದುದೇ ವೇಳ್ವ ॥ ೧೫

ಪನೆಳದ ಕಂಭ ಪಚೆ ಯ ಬೊೀದಿಗೆಗಳ
ತವೆ ಹೊನ್ನ ಮರನ ಕೈಗಳಲಿ ।
ಸು ವಿಲಾಸದಿಂದಲಾ ದೇವತಾ ಗೃಹ ನೆರೆ
ಖವೆ ಖವಿಸಿದುದರ್ತಿಯುಲಿ ॥ ೧೬

ಪುಣಗು ಕಸ್ತೂರಿ ಪನ್ನೀರ ಚಳಯಕಾಗ
ಗಣನೆಯಿಲ್ಲದ ಭ್ರಮರಗಳು ।
ಮಣಿದೆರಗುತ ಪರಿಮಳ ವಾಸನೆಗೊಂಡು
ಕ್ಷಣದೆ ಝೇಂಕರಿಸುತೊಪ್ಪಿಹುವು ॥ ೧೭

ಕುಂದದೆ ಹರಿ ಭಕ್ತರ ದಿವ್ಯ ನಾಟ್ಯದ
ಚೆಂದ ನಾನಾ ವಾದ್ಯ ರವದ ।
ಬಂಧುರದಿಂದಲಾ ದೇವತಾ ಗೃಹವಾ
ನಂದವ ಬೀರುತೊಪ್ಪಿಹುದು ॥ ೧೮

ಮಂಗಳಾರತಿ ಷೋಡಶದುಪಚಾರ ದಿ
ವ್ಯಾಂಗನೆಯರ ಮುದ್ದು ಪಾತ್ರ ।
ಶೃಂಗಾರ ನಾಯಕಿಯರ ಕೋಲಾಟದ
ಸಂಗೀತ ರವವೊಪ್ಪಿದುದು ॥ ೧೯

ದಳ ಪತಿ ಕೈಲಾಗುಗೊಡೆ ನರ ಸಿಂಹನ
ನಿಳಯವೆ ಬಲವೆಂದು ನಗುತ ।
ನಳಿನಾಹ್ವನ ದಿವ್ಯ ತೀರ್ಥ ಪ್ರಸಾದವೆ
ಗಳಿಲನೆ ಕೊಂಡನತಿ ಯುಲಿ ॥ ೨೦

ವೃಂದಾವನಕೆ ಪ್ರದಕ್ಷಿಣೆ ಗೈದಾಗ
ವಂದಿಸಿ ಬಹುಳ ಭಕ್ತ್ಯಾಯಲಿ ।
ಕಂದರ್ಪ ರೂಪ ಹಂಸೆಯ ತೂಳ ತಲ್ಪದೊ
ಳಂದು ಮಂಡಿಸಿದನರ್ತಿಯಲಿ ॥ ೨೩

ವೀರ ವೈಷ್ಣವರು ಪುರೋಹಿತರುಗಳುರೆ
ಭಾರತಿಗಳು ಕವಿ ನಿಕರ ।
ಸೂರಿ ಜನರು ಪಣ್ಣಲಕಜ್ಜಾಯದಿ
ನೋರಂತೆ ದಣಿದರೇ ವೇಳ್ವ ॥ ೨೪

ಕರಣಿಕರಾಪ್ತ ಮಂತ್ರಿಗಳು ಜ್ಯೋತಿಷರುಗ
ಳುರುತರ ಭೂಸುರ ನಿಕರ ।
ಪರಿ ಪರಿ ಕಜ್ಜಾಯ ಪಣ್ಣಲ ಭಾರವ
ಹೊರಲಾರದ್ದೈದರಾಗ ॥ ೨೫

ಮನ್ನೆಯ ಮಂಡಲಿಕರು ರಾಯ ರಾವುತ
ರುನ್ನತದೂಳಿಗದವರು ।
ಹೊನ್ನ ಚಿಬ್ಬಲಲಿ ನೀಡಿದ ಪರಿ ಕರದಿಂದ
ಮನ್ನಣೆವಡೆದರಾ ಹ್ಷಣದೆ ॥ ೨೬

ತಾಳ ಧಾರಿಗ ನಟುವಿಗ ಗಾಯಕರು ನೆರೆ
ವೇಳವಡೆದ ವಾದ್ಯದವರು ।
ಸೂಳೆಯರುಗಳು ಸುಮ್ಮಾನಿಗಳ್ ಪಣ್ಣಲ
ಜಾಲದೆ ದಣಿದರಾ ಹ್ಷಣದೆ ॥ ೨೭

ಈ ಪರಿಯೊಳಗೊಪ್ಪುವ ಸಂಭ್ರಮದಲಿ
ಭೂ ಪಾಲ ಕುಲ ಕಮಲಾರ್ಕ ।
ಶ್ರೀ ಪತಿ ಚರಣಾಬ್ಜ ಮಧು ಕರ ನವೆ ಪುಷ್ಪ
ಚಾಪ ಸನ್ನಿಭನೊಪ್ಪುತಿರ್ದ ॥ ೨೮

ನಗುತೋಲಗವ ಬೀಳ್ಕೊಟ್ಟು ಸಂತೋಷದೊ
ಳೂಗುಮಿಗೆಯೊಳಗರಮನೆಯ ।
ಸು ಗುಣ ಶೇಖರ ಕಂಠೀರವ ನರಸೇಂದ್ರ
ಜಗದೇಕ ವೀರನೈದಿದನು ॥. ೮೯

ನರಸ ರಾಜೇಂದ್ರನ ಸದ್ವರ್ತನೆಗಾಗ
ನೆರೆ ಮೆಚ್ಚಿ ಸಂತೋಷದಲಿ ।
ಸಿರಿ ಧರೆ ಜಯ ಲಕ್ಷ್ಮಿ ಕೀರ್ತ್ಯಂಗನೆಯರು
ಸ್ಥಿರವಾಗಿ ನೆಲಸಿಹರೊಲಿದು ॥ ೯೦

ಧರೆಯೊಳಧಿಕವಾದ ಕಾಶಿಯ ಕ್ಷೇತ್ರದೆ
ಪಿರಿದು ಭೂ ಸುರರು ಸಾಸಿರಕೆ ।
ನೆರೆ ದಿನ ಚರಿ ವೈಷ್ಣವನ್ನ ದಾನವನಿತ್ತು
ಪರಸಿದ ಧರ್ಮ ಕೀರ್ತಿಯನು ॥ ೯೧

ಕಾಶಿಯ ವಾಸಿಗಳಗಣಿತರಿಗೆ ವರು
ಷಾಶನವಿತ್ತು ಭೂ ಪಾಲ ।
ದೇಶದೊಳಗೆ ಬಹು ಧರ್ಮವ ಸೂಸಿ ವಿ
ಲಾಸದೊಳಿರುವುದೇ ವೇಳ್ವ ॥ ೯೨

ಬಿಂದು ಮಾಧವ ವಿಶ್ವ ನಾಥಗೆ ಬಹು ವಿಧ
ದಿಂದದ ಪೂಜೆಯ ಕೊಳಿಸಿ ।
ಇಂದು ವಂಶಜ ಕಂಠೀರವ ರಾಜನಾ
ಕುಂದದೊಪ್ಪುವನನವರತ ॥ ೯೩

ಪ್ರೇಮದೆ ಶ್ರೀ ರಂಗದಲಿ ವೈಷ್ಣವರಿಗೆ
ರಾಮಾಂಜಿಕೂಟವ ನಡಿಸಿ ।
ಭೂಮಿಗೆ ನೂತನ ಧರ್ಮಿಷ್ಠನೆನಿಸಿದ
ಸ್ವಾಮಿ ಕಂಠೀರವ ರಾಜ ॥ ೯೪

ಬಲಿದು ತಾನಾಳುವ ರಾಜ್ಯದ ಪುಣ್ಯ
ಸಳದೊಳಗನ್ನ ಸತ್ರವನು ।
ಸಲೆ ಲೆಕ್ಕವಿಲ್ಲದೆ ವಿರಚಿಸಿ ವಿಪ್ರಸಂ
ಕುಳವ ರಕ್ಷಿಸುವನಾ ಭೂಪ ॥ ೫೫

ಮುದದೆ ಶ್ರೀ ರಂಗ ಪಟ್ಟಣದೊಳಗಗಣಿತ
ಬುಧ ಕುಲಕನ್ನ ಸತ್ರಗಳ ।
ಚದುರ ಶೇಖರ ಕಂಠೀರವ ಮೊಡಿಸಿ
ಪದುಳವ ಬೀರಿದ ಜಗಕೆ ॥ ೫೬

ಆರಾಮವಗ್ರಾರ ಧರ್ಮ ತಟಾಕಗಳ್
ಚಾರುತರದ ದೇವಾಲ್ಯ।
ಧಾರಿಣಿಯೊಳಗೆ ಕಂಠೀರವೇಶ್ವರನಿಂದ
ಪೂರೈಸಿ ಮೆರೆದುವರ್ತಿಯಲಿ ॥ ೫೭

ಪಿರಿದೆನಿಸುವ ನಾಲ್ಕು ವೇದ ಶಾಸ್ತ್ರಗಳಾರು
ಸುರುಚಿರ ನೀತಿ ಧರ್ಮಗಳು ।
ದೊರೆ ರಾಯನ ರಾಜ್ಯದೊಳಗೆ ಭೂ ಸುರರೊಳು
ಮೆರೆದುವು ಪರಿ ಪೂರ್ಣವಾಗಿ ॥ ೫೮

ಲೆಕ್ಕವಿಲ್ಲದೆ ಮುಂಜಿ ಮದುವೆಯ ದ್ವಿಜ ಕುಲ
ಕಕ್ಕರೊಳಗೆ ಮಿಗೆ ರಚಿಸಿ ।
ದಿಕ್ಕು ದಿಕ್ಕಲಿ ಕೀರ್ತಿ ವಡೆದ ಕಂಠೀರವ
ಸಕ್ಕರೆ ವಿಲ್ಲನ ರೂಪ ॥ ೫೯

ಬಿಡದೆ ಸು ಧರ್ಮ ದೇವತೆ ನಾಲ್ಕು ಚರಣದೊ
ಳಡಿಯಿಟ್ಟು ಭೂ ವರನಾಳ್ವ।
ಪೊಡವಿಯೊಳತಿ ಸಂತೋಷದೊಳಿರುತಿಹ
ಬೆಡಗನದೇನ ಬಣ್ಣಿಸುವೆ ॥ ೬೦

ಚಾಮುಂಡಿ ದೇವಿಯ ಕೃಪೆಯಿಂದ ಶೌರ್ಯೋ
ದ್ದಾಮನಾಗಿಯೆ ಕನ್ನಡವ ।
ಪ್ರೇಮದೆ ಸಲಹಿ ಕಂಠೀರವ ರಾಜ ಸು
ತ್ರಾಮ ಭೋಗದೊಳೂಪ್ಪುತಿರ್ದ ॥ ೪೧

ಪರ ಶಿವ ತ್ರಿಣಯನ ಕೃಪೆಯಿಂ ಧರೆಯೊಳು
ಪಿರಿದು ಸಂತಾನವ ಪಡೆದು ।
ನರಸ ರಾಜೇಂದ್ರ ಸು ಸ್ಥಿರ ಸಾಮ್ರಾಜ್ಯದ
ಸಿರಿಯ ಸಂಭ್ರಮದೊಳೂಪ್ಪಿದನು ॥ ೪೨

ರಂಗ ಧಾಮನ ಕರುಣದೆ ದಿನಚರಿ ದಿವ್ಯ
ಮಂಗಳೋತ್ಸವ ಪೂರ್ಣನಾಗಿ ।
ತುಂಗ ವಿಕ್ರಮ ಕಂಠೀರವ ನರಸೇಂದ್ರ
ಕಂಗೊಳಿಸಿದನರ್ತಿಯಲಿ ॥ ೪೩

ನರ ಸಿಂಹನ ಕಾರುಣ್ಯದೆ ಸೌಭಾಗ್ಯ
ಕರನಾಗಿ ಸಕಲ ರಾಜ್ಯವನು ।
ಪರಿ ಪಾಲಿಸುತ ಕಂಠೀರವ ನರಸೇಂದ್ರ
ದೊರೆ ರಾಯ ಪೆರೆದ ಠೀವಿಯಲಿ ॥ ೪೪

ಧರೆ ರವಿ ಶಶಿ ಯುಳ್ಳನ್ನ ಸಕಲ ಭಾಗ್ಯ
ಪಿರಿದಾಗಿ ಸಂತಾನ ಸಹಿತ ।
ನೆರೆ ಧರ್ಮ ಶೌರ್ಯದೆ ಕಂಠೀರವ ರಾಜ
ಸ್ಥಿರ ಸಾಮ್ರಾಜ್ಯದೊಳಿರಲಿ ॥ ೪೫

* ದೇವನ ನರ ಸಿಂಹ ರಾಯನ ಕೃಪೆಯಲಿ
† ಭೂ ವಲಯಕೆ ದೊರೆಯಾಗಿ ।
ತೀವಿದ ಸತ್ಕೀರ್ತಿ ಸಹ ಕಂಠೀರವ
ಭೂ ವರ ಸುಖದೊಳೂಪ್ಪಿರಲಿ ॥ ೪೬

---

* ಧರೆಯಲಿ. † ಸಕಲಪೃಥ್ವೀವಲಯಕ್ಕೆ

ದೊರೆ ರಾಯ ಕಂಠೀರವ ನರಸೇಂದ್ರನ
ಪರಮ ಮಂಗಳ ಪುಣ್ಯ ಚರಿತೆ ।
ವರ ಸೋಮಾರ್ಕರುಳ್ಳನ್ನ ಸುಸ್ಥಿರವಾಗಿ
ಧರೆಯೊಳು ಪರಿಶೋಭಿಸಿರಲಿ ॥ ೪೭

ಈ ಮಹಿಮನ ಚರಿತೆಯ ಲಾಲಿಸಿ ಕೇಳ್ವ
ಭೂಮಿಯೊಳ್ ಸುಜನ ಸಂತತಿಗೆ ।
ಸ್ವಾಮಿ ಶ್ರೀ ಲಕ್ಷ್ಮೀ ನರಸಿಂಹ ನರವಿತ್ತು
ಪ್ರೇಮದೆ ಸಲಹುವನೊಲಿದು ॥ ೪೮

ಅರಿ ನೃಪ ಗಜ ಕಂಠೀರವ ಮೈಸೂರ
ನರಸ ರಾಜೇಂದ್ರ ಚಂದ್ರಮನ ।
ಚರಿತೆಯ ಲಾಲಿಸಿದವರಿಗಿಷ್ಟಾರ್ಥವ
ಕರುಣಿಸುತಿಹನಾ ತ್ರಿಣೇತ್ರ ॥ ೪೯

ಇದು ಸೋಮ ವಂಶ ವಾರಿಧಿ ಪೂರ್ಣ ಚಂದ್ರನ
ಚದುರ ಕಂಠೀರವೇಶ್ವರನ ।
ಪ್ರದಿದ ಪ್ರತಾಪ ಸಂಪದದೇಳಿಗೆಯ ಸಂಧಿ
ಮುದದ ಸುಧರ್ಮಾನುಬಂಧಿ ॥ ೫೦

ಎಂಟನೆಯ ಸಂಧಿ ಸಮಾಪ್ತಂ.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿ ವಾಹನ ಶಕ ೧೫೫೦ ಸಂದ ಸರ್ವಧಾರಿ ಸಂವತ್ಸರದ ಜ್ಯೇಷ್ಠ ಶುದ್ಧ ೧೧ ಚಂದ್ರ ವಾರದಲ್ಲು ಶ್ರೀ ಮನ್ಮಹಾ ದೇವ ದೇವೋತ್ತಮನಾದ ಶ್ರೀ ಲಕ್ಷ್ಮೀ ನರ ಸಿಂಹನು ಕಂಠೀರವ ನರಸ ರಾಜೇಂದ್ರನಿಗೆ ಆಯುರಾರೋಗ್ಯೈಶ್ವರ್ಯಾಭಿ ವೃದ್ಧ್ಯರ್ಥ ಪುತ್ರ ಬಹುಧನವನು ಕೊಟ್ಟು ರಕ್ಷಿಸಲಿಯೆಂದು ರಂಗ ನಾಥ ಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರ ಮಗ ಗೋವಿಂದ ವೈದ್ಯನು ಕಂಠೀರವ ನರಸ ರಾಜ ವಿಜಯವನ್ನು ವಿರಚಿಸಿ ಆ ಚಂದ್ರಾ ರ್ಕವಾಗಿ ಭೂಮಿ ಯೊಳಿರಲಿಯೆಂದು ಭಾರತಿ ನಂಜನ ಮುಖದಿಂದ ವಾಚಿಸಿ ರಾಜ ಸ್ಥಾನದಲ್ಲಿ ವಿಸ್ತಾರ ಪಡಿಸಿದುದು.

* ಅಬ್ಧಿಗಡಿ ಮಿತಿಯುಂಟು ಬುದ್ಧಿಗಡಿ ಮಿತಿಯಿಲ್ಲ
ಬುದ್ಧಿವಂತರು ನೋಡಿ ತಿದ್ದಿಕೊಳ್ವುದು ಕೂಡಿ।
ವಿದ್ಯೈಕಲಿತಾ ಪೌಢ ವಿದ್ಯೈವಂತರ ರೂಢ
ಪಾದ ಪದ್ಮಗಳನ್ನು ವೋದದೆರಗುವೆನಿನ್ನು ॥

ಕಂಠೀರವ ನರಸ ರಾಜ ವಿಜಯಂ ಸಮಾಪ್ತಂ.

---

* ಅಬ್ಧಿಗಡಿಮಿತಿಯಿಲ್ಲ ಬುದ್ಧಿಗಡಿಮಿತಿಯುಂಟು
ಬುದ್ಧಿವಂತರು ನೋಡಿ ತಿದ್ದಿಕೊಳ್ವುದುಕೂಡಿ।
ವಿದ್ಯೈಕವಿತಾಪೌಢ ವಿದ್ವಾಂಸರುಗಳಪಾದ
ಪದ್ಮಗಳಿಗಭಿನವಿಸುವೆ ॥